UNIVERSAL
LIBRARY
OU_200254
UNIVERSAL
LIBRARY

ಕಾದಂಬರೀಸಂಗ್ರಹ.

ಸುಲಭ ಶೈಲಿಯುಂಟು ನೀತಿಗ್ರಂಥಗಳನ್ನು ಪ್ರಕಟಿಸುವ

ಕನ್ನಡ ಮಾಸಪತ್ರಿಕೆ.

ಚತುರ್ಥಸಂಪುಟ.

ಇದರಲ್ಲಿ ಬರುವ ಉತ್ತಮಗ್ರಂಥಗಳೆರುವುವು.

Edited by

C Venkataramana Sastry.

ರಾಯಲ್ ಪ್ರೆಸ್‌ನಲ್ಲಿ ಮುದ್ರಿಸಲ್ಪಟ್ಟಿತು.

1915—16

ಬೆಲೆ 1—8—0 *Price 1—8—0*

PRINTED BY B. V. Narasi nha Iyengar,
AT THE ROYAL PRESS,
MYSORE.

ಕಾದಂಬರೀಸಂಗ್ರಹ ಗ್ರಂಥಮಾಲಾ ನಂ. 25.

ನನ್ನ ಸಂಸಾರ.

ಸಿ. ವೆಂಕಟರಮಣಶಾಸ್ತ್ರಿ

ರಾಯಲ್ ಪ್ರಿಂಟಿಂಗ್ ಪ್ರೆಸ್,
ಮೈಸೂರು.

1915.

Price 5 Annas.] [ಬೆಲೆ 5 ಆಣೆ.

ಪೀಠಿಕೆ.

ಇದೊಂದು ಸಂಸಾರಚಿತ್ರವನ್ನು ಏಪರುಸುವ ಕಾದಂಬರಿ. ಹಿಂದೂ ಸಂಸಾರದಲ್ಲಿ ಸಂಭವಿಸುವ ಅನೇಕ ಗೃಹಚ್ಛಿದ್ರಗಳ ವಿಚಾರವು ಈ ಗ್ರಂಥದಲ್ಲಿ ವಿವರಿಸಲ್ಪಟ್ಟಿದೆ. ಮತ್ತು ಸಮಯಾನುಸಾರವಾಗಿ ಸ್ತ್ರೀಯರು ತಿಳಿದಿರಬೇಕಾದ ಅನೇಕ ಧರ್ಮ ನೀತಿಗಳೂ ಇದರಲ್ಲಿ ಅಡಕವಾಗಿವೆ. ಗ್ರಾಹಕ ಮಹಾಶಯರು ನನ್ನ ಇತರ ಗ್ರಂಥಗಳಂತೆ ಇದನ್ನೂ ಆದರಿಸಬೇಕಾಗಿ ಪ್ರಾರ್ಥನೆ.

ಸಜ್ಜನಸೇವಕ

ಸಿ. ವೆಂಕಟರಮಣಶಾಸ್ತ್ರಿ.

ನನ್ನ ಸಂಸಾರ

ನಾನು ರಂಗಪುರದಲ್ಲಿ ಹುಟ್ಟಿದೆನು. ನಮ್ಮ ಪೂರ್ವಿಕರು ಶ್ರೋತ್ರಿಯರೆಂದು ಕೇಳಿ ಬಲ್ಲೆನು. ಅದು ಬಹು ದಿನದ ಮಾತು. ಸುಮಾರು ನೂರಾರು ವರ್ಷ ಕಳೆದು ಹೋಗಿರ ಬಹುದು. ಈಗಿನ ಸ್ಥಿತಿಯಲ್ಲಿ ಅದನ್ನು ಕಥೆಯೆಂದು ಹೇಳಿದರೆ ಸಾಕಾಗಿದೆ. ನಾನು ಈಗಿನ ಹುಡುಗಿ, ನನಗೆ ಅಷ್ಟೆಲ್ಲಾ ತಿಳಿಯದು. ನನಗೆ ತಿಳಿದಿರುವಷ್ಟನ್ನು ಮಾತ್ರ ನಮ್ಮ ಸೋದರಿಯರಿಗೆ ವಂಜನೆಯಿಲ್ಲದೆ ಹೇಳಿಬಿಡುವೆನು. ನನ್ನ ಹೆಸರು ಮಹಾಲಕ್ಷ್ಮಿ. ನಮ್ಮ ತಂದೆಗೆ ಕೃಷ್ಣಮಿಶ್ರರೆಂದು ನಾಮಧೇಯವು. ನಮ್ಮ ಪಿತಾಮಹರು ಕೃಷ್ಣಮಿಶ್ರರೆಂದು ಪ್ರಸಿದ್ಧರಾದವರು. ನಮ್ಮ ಮುತ್ತಾತಂದರ ಕಾಲದಲ್ಲಿ ನಮ್ಮ ಮನೆಯಲ್ಲಿ ಸರ್ವದಾ ಐಶ್ವರ್ಯಲಕ್ಷ್ಮಿಯು ತಾಂಡವವಾಡುತ್ತಿದ್ದಳಂತೆ ? ಆ ಕಾಲದಲ್ಲಿ ಮನೆಯಲ್ಲಿ ಬಹುಮಂದಿ ಶಿಷ್ಯರು ಪಾಠಪ್ರವಚನ ಮಾಡುತ್ತಾ ನಮ್ಮ ಮನೆಯಲ್ಲೇ ವಾಸಮಾಡಿಕೊಂಡಿದ್ದರಂತೆ ? ಕೆರಾವುಗಳು ಬಯಲಾಗಿದ್ದವಂತೆ ? ಎಷ್ಟೇ ರಾತ್ರಿಯು ಯಾವಾಗ ನೋಡಿದರೂ ಮೂಲೆ ಮೂಲೆಯಲ್ಲಿ ಸುರಿದಿರುತ್ತ ಇದ್ದು ವಂತೆ? ಅತಿಥಿ ಅಭ್ಯಾಗತರ ಸೇವೆಯೂ ವೇದಾಧ್ಯಯನ ಘೋಷವೂ, ಅಗ್ನಿಹೋತ್ರಾ ಗಳ ಸಮಾರಂಭವೂ ನಮ್ಮ ಮನೆಯ ಕಾಂತಿಯನ್ನು ವಿಶೇಷತಃ ಅಭಿವೃದ್ಧಿ ಪಡಿಸು ತ್ತಿದ್ದವಂತೆ ! ಈಗಣ ಕಾಲದಲ್ಲಿ ನಾನೆಲ್ಲಿಯೂ ಇದನ್ನು ನೋಡಿದವಳೇ ಅಲ್ಲ. ಈ ರೀತಿಯ ಅಂತಹ ಪುಣ್ಯವಂತರು ಅಲ್ಲಲ್ಲಿಯೇ ಇರುವರೆಂದು ಕೇಳುತ್ತೇನೆ–ಅಂತಹ ಮಹಾತ್ಮರಿಗೆ ಸಸ್ಪ್ರಶ್ರ ನಮಸ್ಕಾರ ಮಾಡುತ್ತೇನೆ.

ಈಗ ನಮ್ಮ ಮನೆಯಲ್ಲಿ ಆ ಭಾಗ್ಯವು ಇಲ್ಲ. ಆ ಐಶ್ವರ್ಯಲಕ್ಷ್ಮಿಯು, ನಾನು ಜನ್ಮಿಸುವುದಕ್ಕಿಂತ ಐವತ್ತು ವರ್ಷಗಳ ಹಿಂದೆಯೇ ನಮ್ಮ ಮನೆಯನ್ನು ಬಿಟ್ಟುಪ್ರಯಾಣಮಾಡಿ ಬಿಟ್ಟಳಂತೆ ! ನಮ್ಮ ತಾತ ಕೃಷ್ಣಮಿಶ್ರರು ಬಡವರಾದಾಗ್ಲೂ ಅವರ ಪೂರ್ವಿಕರ ಸದ್ಗುಣಗಳು ರಾರಾಜಿಸುತ್ತಿದ್ದುವು. ನಾನು ಚಿಕ್ಕಮಗುವಾಗಿದ್ದಾಗ, ಅವರು ಸಾಯಂಕಾಲದಲ್ಲೊತ್ತು ನನ್ನನ್ನು ತಮ್ಮ ಬಳಿಯಲ್ಲಿ ಕುಳ್ಳಿರಿಸಿಕೊಂಡು ಶ್ಲೋಕಗಳನ್ನು ಹೇಳಿಕೊಡುತ್ತಿದ್ದರು. ಆಗಾಗ್ಗೆ ಅವರು ತಮ್ಮ ಪೂರ್ವಿಕರ ಮಹಿಮೆಯನ್ನೂ

ಆಗಣ ವೈಭವವನ್ನೂ ಆಟ್ಟಹಾಸವನ್ನೂ ನನ್ನೊಡನೆ ಕಥಾರೂಪವಾಗಿ ಹೇಳಿಕೊಡುತ್ತಾ ಕಣ್ಣಿನಲ್ಲಿ ನೀರು ತಂದುಕೊಳ್ಳುತ್ತಿದ್ದರು. ನಾನು ಆಗ, ಅಜ್ಜಯ್ಯ! ನೀನೇಕೆ ಅಳುತ್ತಿಯಪ್ಪಾ! ನಿನಗೇನಾದರೂ ತಿಂಡಿಕೊಡಲೇ? ಎಂದು ಹೇಳಿ ಕೊಡಲೇ ನಮ್ಮ ಅಜ್ಜಿಯ ಒಳಗೆಹೋಗಿ, ಅಜ್ಜಿ! ಅಜ್ಜಯ್ಯನು ಅಳುತಿದ್ದಾನೆ! ಪಾಪ! ಅವನಿಗೇನಾದರೂ ತಿಂಡಿಇದ್ದರೆ ಕೊಡೆ, ಎಂದು ಹೇಡಿಸಿ ಒಂದಿಷ್ಟು ಹುರಟ್ಟನ್ನೋ, ಅರಳನ್ನೋ, ಅವಲಕ್ಕಿಯನ್ನೋ ಈಸಿತಂದು ಅವನ ಮಡುಲಿಗೆ ಕಟ್ಟಿ, ಅಜ್ಜಯ್ಯ! ಅಳಬೇಡಪ್ಪ! ಇದನ್ನು ತಿನ್ನು. ಎಂದುಹೇಳಿಬರುತಿದ್ದೆನು. ನನ್ನ ಈ ವಿಚಿತ್ರವಾದ ಆಟವನ್ನು ನೋಡಿ ಮನೆಯವರೆಲ್ಲರೂ ನಗುತ್ತಿದ್ದರಲ್ಲದೆ ನನ್ನನ್ನು ವಿಶೇಷವಾಗಿ ಮುದ್ದಿಸುತ್ತಲೂ ಇದ್ದರು. ಅಜ್ಜಯ್ಯನಾದರೋ ಕಥೆಯನ್ನು ಅಷ್ಟಕ್ಕೆ ನಾಕುಮಾಡಿ ನನ್ನ ಆಟಕ್ಕಾಗಿ ಸಂತೋಷಿಸಿ, ನನ್ನನ್ನು ಮುದ್ದಿಸಿ ಪುನಃ ಬಾಯಿ ಪಾಠ ಹೇಳಿಕೊಡುವುದಕ್ಕೆ ಆರಂಭಿಸುತ್ತಿದ್ದನು. ನಾನೂಬೇಜಾರಾಗುವವರೆಗೆ ಹೇಳಿಸಿಕೊಳ್ಳುತ್ತಇದ್ದು ಬೇಜಾರಾದ ವೇಳೆಲೆ ಅಜ್ಜಯ್ಯನನ್ನು ಲಕ್ಷಿಸದೆ ಆಡಿಗೆ ಮನೆಯಕಡೆ ಓಡಿಹೋಗಿ ನನ್ನ ಅಮ್ಮನನ್ನು ಪಿಂಸೆ ಮಾಡಲಾರಂಭಿಸಿ ಏನಾದರೂ ಹಟದಿಂದ ಹಂಡಿಪಿಡಿದು ಅಳುತ್ತಿದ್ದೆನು.

ಆಗ ನಮ್ಮ ಮನೆಯಲ್ಲಿ ಮಗುವೆಂದರೆ ನಾನೇ. ನನ್ನನ್ನು ಎತ್ತಿಕೊಳ್ಳುವುದಕ್ಕೆ ಯಾರಾದೊಬ್ಬರು ಸಿದ್ಧವಾಗಿಯೇ ಇರುತ್ತಿದ್ದರು. ನಮ್ಮ ಅಪ್ಪನಂತೂ ನನ್ನನ್ನು ದಿನದಿನದಲ್ಲೂ ಬೆಳಿಗ್ಗೆ ಎಂಟುಗಂಟೆಗೆ ಎತ್ತಿಕೊಂಡುಹೋಗಿ ನಮ್ಮ ಊರಿನಲ್ಲಿನ ಪ್ರಸಿದ್ಧವಾದ ಅಪ್ಪಯ್ಯನ ಹೋಟಲಿನಲ್ಲಿ ಒಂದು ರವೆ ದೋಸೆಯನ್ನೂ ಅರ್ಧಲೋಟ ಕಾಫಿಯನ್ನೂ ಕೊಡಿಸುತ್ತಿದ್ದನು. ಇದಲ್ಲದೆ ನನ್ನನ್ನು ಯಾರು ಎತ್ತಿಕೊಂಡಾಗ್ಯೂ ಏನಾದರೂ ಒಂದಿಷ್ಟು ರುಚಿಯಾದ ತಿಂಡಿಯನ್ನು ತಿನ್ನಿಸುತ್ತಿದ್ದರು. ನಾನಂತೂ ತಂಗೂಳನ್ನು ತಿಂದವಳೇಅಲ್ಲ. ಈ ರೀತಿ ಮೇಲೆಮೇಲೆ ನಾನು ತಿಂಡಿ ತಿಂದುಬಿಡುತ್ತಿದ್ದುದರಿಂದ ಬೆಳಗೆದ್ದರೆ ನನಗೆ ಅಜೀರ್ಣವೂ, ಜ್ವರವೂ, ಆಮಶಂಕೆಯೂ, ಭೇದಿಯೂ ಪ್ರಾಪ್ತವಾಗಿ ಬದುಕುವುದೇ ಕಷ್ಟವಾಗಿ ಯೋಗುತ್ತಿತ್ತು. ಅಂತಹ ಸಮಯದಲ್ಲೆಲ್ಲಾ ನಮ್ಮ ತಾಯಿಯು ನನಗೆ ಚಿಟಿಕೆ ಪಾಕವೇಕೆಂದು ಮುಷ್ಠರಮಾಡಿ (ಎಕ್ಕಡದ ಬಾರನ್ನು ಬೆಂಕಿಯಲ್ಲಿ ಜನ್ನಾಗಿ ಕಾಯಿಸಿ ಹುಬ್ಬುಗಳ ನಡುವೆ, ತಲೆಗಳ ಎರಡುಪಕ್ಕ, ಇನ್ನೆಲ್ಲಾದರೂ ಒಂದೆರಡು ಕಡೆ ರಕ್ಷೆಯನ್ನು ಪಾಕುವುದಕ್ಕೆ ಚಿಟಿಕೆಎಂದು ಹೆಸರು.) ಈ ಚಿಟಿಕೆ ಚಿಕಿತ್ಸೆಯನ್ನು ತಪ್ಪದೆ ಮಾಡುತ್ತಿದ್ದರು, ಹೀಗೆ ಪದೇ ಪದೇ ಪ್ರಾಪ್ತವಾಗುತ್ತಿದ್ದುದರಿಂದ ನನಗೆ ಔಷಧಸೇವನ ಚಿಟಿಕೆಚಿಕಿತ್ಸೆ, ಇವುಗಳ ಪ್ರಯೋಗದಿಂದ ಕ್ರಮಕ್ರಮವಾಗಿ ನಿಶ್ಯಕ್ತಿಯಾಗುತ್ತ ಬಂದಿತಲ್ಲದೆ ನಾನು ನಿತ್ಯ ರೋಗಿಯಾಗಿ ನರಳು

ತ್ತಲೇ ಇದ್ದೆನು. ಹೀಗೆಯೇ ನನಗೆ ಏಂಟುವರ್ಷ ಕಳೆದು ಹೋಯಿತು. ಇಷ್ಟು ಹೊತ್ತಿಗೆ ನನಗೆ ಸ್ವಬುದ್ಧಿಯು ಸ್ವಲ್ಪಸ್ವಲ್ಪವಾಗಿ ತಿಳಿಯುತ್ತಬಂತು. ನನ್ನ ತಾತನು ನನ್ನನ್ನು ವಿದ್ಯಾಭ್ಯಾಸಕ್ಕಾಗಿ ಪಾಠಶಾಲೆಗೆ ಒಂದೆರಡು ವರ್ಷಕಾಲಕಳುಹಿಸುತ್ತಿದ್ದರು. ಹತ್ತು ವರ್ಷ ತುಂಬಿದೊಡನೆಯೇ ನನ್ನನ್ನು ಆ ಪಾಠಶಾಲೆಯಿಂದಲೂ ತಪ್ಪಿಸಿಬಿಟ್ಟರು. ಇಷ್ಟು ಹೊತ್ತಿಗೆಸರಿಯಾಗಿ ನಮ್ಮ ಗೃಹಕೃತ್ಯದಲ್ಲಿ ಅನೇಕ ಸಂಕಟಗಳು ಪ್ರಾಪ್ತವಾದುವು. ಮೊದಲು ನಮ್ಮ ಅಜ್ಜಿ ಹೋಗಿಬಿಟ್ಟಳು. ಆದಾದ ಎರಡು ತಿಂಗಳ ಮೇಲೆ ನಮ್ಮ ಸೋದರತ್ತೆಯೊಬ್ಬಳು ಗತಿಸಿಹೋದರು. ಇದು ಆದ ಆರುತಿಂಗಳಿಗೆ ನನ್ನ ಚಿಕ್ಕಪ್ಪನೂ ಆದು ಕಳೆದ ಎಂಟು ತಿಂಗಳಿಗೆ ನನ್ನ ದೊಡ್ಡಪ್ಪನೂ ಪರಲೋಕಕ್ಕೆ ಪ್ರಯಾಣ ಬೆಳಸಿಬಿಟ್ಟರು. ಈ ಸಮಯದಲ್ಲಿ ನಮ್ಮ ತಾತನಿಗೆ ಎಷ್ಟು ಮಟ್ಟಿನ ಮನಃಶ್ಯಾಂತಿ ಯಿರಬಹುದೋ ವಾಚಕಿಯರೇ ಭಾವಿಸಿ ನೋಡಬೇಕು. ಸತ್ತವರಿಗೆ ಕರ್ಮಾಂತರಗಳನ್ನು ಮಾಡಿ ನಮ್ಮತಾತನು ಜೇತರಿಸಿಕೊಳ್ಳುವ ಹೊತ್ತಿಗೆ ಒರಡುವರ್ಷಕಾಲ ಕಳೆದುಹೋಯಿತು. ಮನಸ್ಸಂತಾಪದಿಂದಲೂ, ದಾರಿದ್ರ್ಯದಿಂದಲೂ, ಅವಶ್ಯಕವಾಗಿ ಆಗಬೇಕಾಗಿದ್ದ ಕೆಲಸಗಳಿಗಾಗಿ ವಿಶೇಷ ಸಾಲಮಾಡಿದುದುಂದಲೂ ನಮ್ಮ ತಾತನು ಕೊರಗಿಕೊರಗಿ ಅರ್ಧವಾಗಿ ಹೋದನು.

ಈಗ ನಮ್ಮ ಮನೆಯಲ್ಲುಳಿದವರು, ನಾನು, ನಮ್ಮ ತಂದೆ, ನಮ್ಮ ತಾಯಿ, ನಮ್ಮ ತಾತ, ಈ ನಾಲ್ಕು ಮಂದಿ ಮಾತ್ರ. ಈ ಮಧ್ಯದಲ್ಲಿ ನಮ್ಮ ತಾಯಿಯು ನನ್ನ ಹಿಂದೆ ಎರಡು ಮೂರು ಮಕ್ಕಳನ್ನು ಪ್ರಸುವಿಸಿ, ಅವು ಒಂದೊಂದು ವರ್ಷಜೀವಿಸಿದ್ದು ಮೃತವಾಗಿ ಹೋಗಿದ್ದುವು. ಈ ಕಾರಣಗಳಿಂದ ನಮ್ಮ ತಂದೆಗೂ ತಾತನಿಗೂ ವಿಶೇಷ ದುಃಖಪ್ರಾಪ್ತಿಯಾದುದಲ್ಲದೆ ಕ್ರಮವಾಗಿ ವೈರಾಗ್ಯವು ತಲೆದೋರಲಾರಂಭಿಸಿತು. ಆ ಸಮಯದಲ್ಲಿ ನಮ್ಮ ತಾತನು ಕೋರ್ಟಿನಲ್ಲಿ ಹನ್ನೆರಡು ರೂಪಾಯಿ ತಲಬುಳ್ಳ ಒಂದು ನೌಕರಿಯಲ್ಲಿದ್ದನು. ನಮ್ಮ ತಂದೆಗೂ ಹದಿನೈದು ರೂಪಾಯಿ ತಲಬುಳ್ಳ ಒಂದು ಹುದ್ದೆಇದ್ದಿತು. ನಮ್ಮ ತಂದೆಗೆ ಬರುತ್ತಿದ್ದುದು ಹದಿನೈದೇ ರೂಪಾಯಿಗಳಾದರೂ ಅವರ ತಿಂಗಳುಗಟ್ಲೆ ವೆಚ್ಚವು ಮೂವತ್ತು ರೂಪಾಯಿಗಳಿಗೆ ಮೀರಿ ಹೋಗುತ್ತಿತ್ತು. ಇವುಗಳಲ್ಲಿ ಮುಕ್ಕಾಲು ಪಾಲು ಹಣವು ಅವರ ಉಡುಪಿಗೂ ತಿಂಡಿಗೂ ಖರ್ಚಾಗುತ್ತಿತ್ತು. ಉಳಿದ ಕಾಲುಪಾಲು ಹಣವನ್ನು ಅವರು ಮನೆಗೆ ಗೃಹಕೃತ್ಯಕ್ಕೆಂದು ನಾಲ್ಕು ತಿಂಗಳಿಗೊಮ್ಮೆ ಯಾವಾಗಲೋ ಒಂದು ಬಾರಿ ತಂದು ಕೊಡುತ್ತಿದ್ದರು.

ಈ ಕಾರಣದಿಂದ ಕುಟುಂಬರಕ್ಷಣಭಾರವು ನಮ್ಮ ತಾತನ ತಲೆಯ ಮೇಲೆಯೇ ವಿಶೇಷವಾಗಿ ಬೀಳುತ್ತಿತ್ತು. ನಮ್ಮ ತಂದೆಯು ಇಷ್ಟು ದುಂದುವೆಚ್ಚವನ್ನು ಮಾಡುತ್ತಿ

ದ್ದರೂ ನಮ್ಮ ತಾತನು ಒಂದುದಿನವಾದರೂ ಅವರನ್ನು ಗದರಿಸಿಕೊಳ್ಳುತಲಿರಲಿಲ್ಲ. ಏಕಂದರೆ ಅವರು ಸಂಸಾರದಲ್ಲಿ ಬಲು ನೊಂದುಹೋಗಿದ್ದರಲ್ಲದೆ ಈ ಒಬ್ಬ ಮಗನಿಗಾಗಿ ಪ್ರಾಣವನ್ನಿಟ್ಟುಕೊಂಡಿದ್ದರು. ಆದುದರಿಂದ, ಅವನು ಹೇಗೆ ಬೇಕಾದರೂ ಇದ್ದುಕೊಳ್ಳಲಿ ! ಜೀವನೊರಸೆ ಇದ್ದರೆ ಸಾಕೆಂದು ಹೇಳಿಬಿಡುತ್ತಿದ್ದರು. ನಮ್ಮ ತಾತನಿಗೆ ಪಿತ್ರಾರ್ಜಿತವಾದ ನಾಲ್ಕು ಎಕರೆ ತೋಟಮಾನಿನಲ್ಲಿ ನಾಲ್ಕತ್ತು ಖಂಡುಗ ಭತ್ತವು ಬರುತ್ತಿದ್ದುದರಿಂದ ನಮ್ಮ ಸಂಸಾರ ನಿರ್ವಹಣಕ್ಕಾಗಿ ಅಷ್ಟೇನೂ ಶ್ರಮಪಡಬೇಕಾದ ಅಗತ್ಯ ಏರಲಿಲ್ಲ. ನಮ್ಮ ತಾತನಿಗೆ ಸಾಲಗಾರರ ಬಾಧೆ ಹೆಚ್ಚಾದುದರಿಂದ ತಮ್ಮ ಪೂರ್ವಿತ್ರ್ಜಿಗಳಿಂದಾರ್ಜಿಸಲ್ಪಟ್ಟ ಭೂಧನದಲ್ಲಿ ಐದು ಎಕರೆಗಳನ್ನು ಮಾರಿ ಸಾಲವನ್ನು ತೀರಿಸಿಬಿಟ್ಟರು. ಸಾಲತೀರಿದ ಮೇಲೆ ನಮ್ಮ ತಾತನಿಗೆ ಮನಸ್ಸಿಗೆ ಒಂದು ಬಗೆಯಾದ ಶಾಂತಿಯುಂಟಾಯಿತು. ಇದು ನಡೆವ ಕಾಲದಲ್ಲಿ ನಮ್ಮ ತಾತನಿಗೆ ಐವತ್ತು ವರ್ಷವಯಸ್ಸು. ನಮ್ಮ ತಾತನಿಗೆ ದಿನೇದಿನೆ ವೈರಾಗ್ಯವು ಹೆಚ್ಚುತ್ತಬರಲು ತಮ್ಮ ಉಳ್ಳೋಗಕಾಲವನವ ಕಷ್ಟಸಮಯಗಳನ್ನೆಲ್ಲಾ ಸಾಧು ಸತ್ಪುರುಷ ಸಂಭಾಷಣಾದಿಗಳಿಂದಲೂ ಈಶ್ವರ ನಾಮಸ್ಮರಣದಿಂದಲೂ ಸೂಕುತ್ತಿದ್ದರು. ಕೇವಲರಸಿಕರಾದ ನಮ್ಮ ತಂದೆಯವರಿಗೆ ನಮ್ಮ ತಾತನ ಈಸನತೆಯು ಸುಲಭೋರಲಿಲ್ಲ. ನಿಷ್ಕಾರಣವಾಗಿ ನಮ್ಮ ತಾತನನ್ನು ಏನಾದರೊಂದು ನೆವದಿಂದ ಜಗಳಕ್ಕೆ ಕರೆಯುತ್ತಲೇ ಇದ್ದರು. ನಮ್ಮ ತಾತನು ಒಂದನ್ನೂ ಮನಸ್ಸಿಗೆ ಹಚ್ಚಿಕೊಳ್ಳದೆ ತಮಗೆ ಬಂದ ಸಂಬಳವನ್ನು ಮಗನವಶಕ್ಕೇ ಕೊಟ್ಟು ಬಿಟ್ಟು ತಾವು ಅಡಿಗೆಯಾಗುವ ಹೊತ್ತಿಗೆ ಸ್ನಾನಾಹ್ನಿಕ, ದೇವತಾರ್ಚನ ಪ್ರೈಶ್ವದೇವಗಳನ್ನು ಭಕ್ತಿಯಿಂದ ಆಚರಿಸಿ ಎಲ್ಲರೊಡನೆ ತಾವು ಭೋಜನಮಾಡಿ ಪುನಃ ತಮ್ಮ ಪಾಸಂಗದಲ್ಲಿ ನಿರತರಾಗುತ್ತಿದ್ದರು. ಈ ಮಧ್ಯದಲ್ಲಿ ನಮ್ಮ ತಾಯಿಯು ಗರ್ಭಿಣಿಯಾಗಿ, ಏಕಾದಶಮಾಸ ಪರಿಪೂರ್ಣವಾದ ಬಳಿಕ ಒಂದು ಗಂಡುಕೂಸನ್ನು ಪ್ರಸವಿಸಿದ್ದರು. ಆ ಮಗುವಿಗೆ ಈಗ ಒಂದುವರ್ಷ ತುಂಬುತ್ತಿದ್ದಾಗ್ಯೂ ನಮ್ಮ ತಾಯಿಗೆ ಜೀವಂತಿತನ ಮಾತ್ರ ಪರಿಪೂರ್ಣವಾಗಿರಲಿಲ್ಲ. ಮನೆಯಲ್ಲಿ ಮಾಡುವವರಾರೂದಿಕ್ಕಿಲ್ಲದ್ದರಿಂದ ಸಮಸ್ತ ಗೃಹಕೃತ್ಯವನ್ನೂ ನಾನೇ ನಡಿಸಿಕೊಂಡು ಹೋಗಬೇಕಾಗಿ ಬಂದಿತು. ಮನೆಯಲ್ಲಿ ಅನ್ನಕ್ಕೆ ಇಷ್ಟು ಕಷ್ಟವಾದುದನ್ನೂ ಗೃಹಕೃತ್ಯದ ತೊಂದರೆಯನ್ನೂ ನೋಡಿ ನಮ್ಮ ತಾತನು ಬೇರೆ ಒಂದು ಕಡೆಯಲ್ಲಿ ಊಟಮಾಡುತ್ತಿದ್ದರು. ನಮ್ಮ ತಂದೆಯಂತೂ ಮನೆಗೇಬರುತ್ತಿರಲಿಲ್ಲ. ನಮ್ಮ ತಾತನು ಆಗಾಗ್ಗೆ ಗೃಹಕೃತ್ಯಕ್ಕೆ ಬೇಕಾಗುವ ಸಾಮಾನುಗಳನ್ನು ತಂದು ಪಾಕುತ್ತ ಮನೆ ಯೋಗಕ್ಷೇಮವನ್ನು ವಿಚಾರಿಸಿಕೊಂಡು ಹೋಗುತ್ತಾ ಇದ್ದರು. ನಾನಾದರೋ ಗೊಣಗುಟ್ಟಿ ಕೊಂಡು, ಮೂಗಿಗೆ ಕವಡೆ

ಕಟ್ಟಿಕೊಂಡು ದುಡಿವ ಎತ್ತಿನಂತೆ ದುಡಿಯುತ್ತಿದ್ದೆನು. ನಮ್ಮ ತಾಯಿಗೆ ದೇಹಸ್ಥಿತಿಯೇ ಸರಿಯಾಗಿರಲಿಲ್ಲ. ಈ ಕಾರಣದಿಂದ ನನ್ನ ತಾಯಿಯನ್ನು ನನ್ನ ಮಾತಾಮಹನು ತಮ್ಮ ಊರಾದ ‘‘ಸರ್ವಂಸಹಾಗ್ರಾಮ’’ ಕ್ಕೆ ಕರೆದುಕೊಂಡು ಹೋದನು. ಅಲ್ಲಿಗೆ ಹೋದ 2–3 ತಿಂಗಳಲ್ಲೇ ನಮ್ಮ ತಾಯಿಗೆ ಸಂಪೂರ್ಣವಾಗಿ ಆರೋಗ್ಯವುಂಟಾಯಿತು. ಇಷ್ಟು ಹೊತ್ತಿಗೆ ಸರಿಯಾಗಿ ನಾನು ತಾಯಿಲೆ ಬಿದ್ದುಕೊಂಡೆನು. ನನಗೆ ವಾಸಿಯಾಗ ವ್ವದೂ ಆರುತಿಂಗಳು ಪಿಡಿಯಿತು. ಈ ಔಧನಾದ ಸೇವ್ಯೋಗದಿಂದ ನಾನು ದಿನೇದಿನೇ ಕಂಗೆಟ್ಟು ಕೃಶಳಾಗುತ್ತ ಬಂದೆನು.

ವಾಚಕಿಯರೆ! ಇನ್ನು ನಾನು ಈ ರಗಳೆಗಳನ್ನೇ ಮುಂದೆಯೂ ಬರೆಯುತ್ತ ಹೋದರೆ ನಿಮಗೆ ಬಹುವಾಗಿ ಬೇಸರವುಂಟಾಗಬಹುದು. ಆದುದರಿಂದ ಮುಂದೆ ನನ್ನ ವಿವಾಹಕ್ಕಾಗಿ ನಡೆದ ಪ್ರಯತ್ನಗಳನ್ನು ಸ್ವಲ್ಪ ಪ್ರಸ್ತಾಪಿಸುವೆನು.

ನನಗೆ ಈಗ ಹನ್ನೆರಡು ವರ್ಷತುಂಬಿ ಮೇಲೆ ಆರು ತಿಂಗಳು ಕಳೆದು ಹೋಗಿದ್ದಿತು. ನಮ್ಮ ಮನೆಯಲ್ಲಿ ಆದರೂ ನಮ್ಮಾಚಿದಲ್ಲಿ ಬ್ರಾಹ್ಮಣಸ್ತ್ರಿಯರಿದ್ದಲ್ಲಿ, ಹೆಣ್ಣು ಮಕ್ಕಳಿಗೆ ಒಂಬ ವರ್ಷಕ್ಕೆ ಸರಿಯಾಗಿ ವಿವಾಹಮಾಡಬೇಕಾದುದರಿಂದ ಅಂತಹ ಕನ್ಯಾವಿತನು ಕಂತವರ ಬಾಯಿಗೆ ಬೀಳಬೇಕಾಗುವುದೆಂಬ ವಿಷಯವು ನಮಗೆಲ್ಲಾ ತಿಳಿದೇ ಇದೆ. ಇದಿರಲಿ. ಈಗಣ ಕಾಲದಲ್ಲಿ ಪುರುಷ ಸಂಖ್ಯೆಗಿಂತಲೂ ಸ್ತ್ರೀಸಂಖ್ಯೆಯು ನಾಲ್ಕಾರಷ್ಟು ಹೆಚ್ಚಾಗುತ್ತಾ ಬಂದಿದೆ ಆದರಲ್ಲೂ, ನಮ್ಮ ಬ್ರಾಹ್ಮಣ ವರ್ಗದಲ್ಲಿ ವಿವಾಹಕ್ಕೆ ನೆರೆದಿರುವ ಕನ್ಯಾಸಂಖ್ಯೆ ಅತ್ಯಧಿಕ. ಈ ಕನ್ಯೆಯರಿಗೆಲ್ಲಾ ಅನುರೂಪರೂ, ಶ್ರೇಷ್ಠರೂ ಆದ, ಪತಿಗಳು ದೊರೆವುದು ತುಂಬಾ ಅಸಂಭವ. ಭಾಗ್ಯವಂತರ ಮನೆ ಹೆಣ್ಣುಮಕ್ಕಳ ಗತಿಯೇ ಹೀಗಾದಮೇಲೆ ದರ್ಭದರಿದ್ರರಾದವರ ಮನೆಯ ಹೆಣ್ಣುಗಳನ್ನು ಕೇಳುವರಾರು? ಅವರ ಮನೆಯ ಕಡೆ ಸುಳಿವುದೂ ಸಹ ಇಲ್ಲ. ಈ ಔಧವಾದ ವಿರಾಭಾವದಿಂದಲೇ ವೃದ್ಧ ವಿವಾಹವು ವಿಶೇಷತಃ ಜಾರಿಯಲ್ಲಿ ಬರಲು ಕಾರಣವಾಯಿತು. ಸರಿಯಾದ ವರನು ಸಿಕ್ಕಲಿಲ್ಲವಲ್ಲಾ, ಎಂಬ ಚಿಂತೆಯಿಂದಲೂ, ಮಗಳಿಗಿಯು ಎಲ್ಲಿ ಬೇಗ ದೊಡ್ಡ ಳಾಗಿಬಿಡುವಳೋ ಎಂಬ ಭಯದಿಂದಲೂ, ಯಾವನಾದರೂ ಒಬ್ಬ ಪುರುಷಮಾತ್ರನು ಸಿಕ್ಕಿದರೆ ಸಾಕೆಂದು ವಿನವರಸಿಗೋ ವೃದ್ಧವರಸಿಗೋ ಕನ್ಯೆಯರನ್ನು ಕೊಟ್ಟು ಮದುವೆ ಮಾಡುವುದು ಪ್ರಚಾರಕ್ಕೆ ಬರಬೇಕಾಯಿತು. ಉಪನ್ನರಾದವರ, ಯೋಗ್ಯರಾದವರ, ವಿದ್ವಾಂಸರ ಮನೆಗೆ ಕೊಡೋಣವೆಂದರೆ ಅವರ ಜಂಭವು ಆ ಸಮಯದಲ್ಲಿ ವಿವರಿಸಲಸದಳ. ಒಂದು ಸಾವಿರವೋ–ಐದು ಸಾವಿರವೋ ವರದಕ್ಷಿಣೆಯನ್ನು ಕೊಟ್ಟರೆ ತಾವು ತಮ್ಮ ಮಗುಗಳಿಗೆ ತಂದುಕೊಳ್ಳುವೆನೆಂದೂ ಇಲ್ಲವಾದರೆ ಆ ಮಾತೇ ಬೇಡ

ವೆಂದು ನಿಂತಿಸಾಗಿ ಹೇಳಬಹುದು. ಇಂತಹ ಹೊಟ್ಟೆತುಂಬಿದವರ ಮನೆಗೆ ಅಷ್ಟು ಹಣಕೊಟ್ಟು ಕನ್ಯಾದಾನ ಮಾಡುವಯೋಗ್ಯತೆ ಇದ್ದವರು ಮಾಡುತ್ತಾರೆ. ರಕ್ತರಾದವರು ಮರುಮಾತಾಡದೆ ಜೀತ ಕನ್ನ ಮಗಳಿಗೆ ವರನನ್ನು ಹುಡುಕಿ–ಪ್ರಾಪ್ತವಯಸ್ಕಳಾಗುವ ವರೆಗೂ–ಮಾಡುಕಿಹುಡುಕಿ–ಕೊನೆಗೆ ಬೇಸತ್ತು ಯಾವನಾದರೊಬ್ಬನು ಸಿಕ್ಕಿ ನನ್ನ ಮಗಳಿಗೆ ಮದುವೆಯಾದರೆ ಸಾಕೆಂದು ಎಂಥವನೋ ಒಬ್ಬನಿಗೆ ಕೊಟ್ಟು ಮದುವೆಮಾಡಿ ಬಿಡುವರು. ಇಂತಹ ತೊಂದರೆಗಳು ಯಾವಾಗ ಪರಿಹಾರವಾಗುವುವೋ ಬಡವರಾದ ಕನ್ಯಾಪಿತೃಗಳು ಆದೆಂದು ದುಃಖವಾಗರದಿಂದ ನಮುತ್ತೀರ್ಣರಾಗುವರೋ–ವರದಕ್ಷಿಣೆಯೆಂಬ ದುರಾಚಾರವಿಶಾಚವು ಆದೆಂದು ನಾಶವಾಗಿ ಹೋಗುವುದೋ–ಪ್ರಪಂಚದೆಲ್ಲವೂ ತಿರುಗುಪರಾದ ಭಾಯರ್ಯಾಧೀರ್ಪರಿಂದಲೊಡಿ ಯಾವಾಗ ಕಂಗೊಳಿಸುವುದೋ, ಊಹಿಸಿ ಹೇಳಬಲ್ಲವರಾರು ? ಆದು ನನ್ನ ಆಸಂಭವವೆಂದೇ ತೋರುವುದು.

ನನಗೆ ವರನನ್ನು ಹುಡುಕುವ ತೊಂದರೆಯನ್ನು ನಮ್ಮ ತಂದೆಯವರು ವಿಶೇಷವಾಗಿ ಮನಸ್ಸಿಗೆ ಹಚ್ಚಿಕೊಳ್ಳದಿದ್ದರೂ ನನ್ನ ತಾತನವರಂತೂ ನನಗೆ ಎಂಟು ವರ್ಷ ತುಂಬಿದಾಗಿನಿ ದಲೂ ಆದೇ ಧ್ಯಾಸ್ಥದಲ್ಲೇ ಇದ್ದರು. ಈ ವಿಚಾರವನ್ನು ನಮ್ಮ ತಂದೆಯಸಂಗಡಲೂ ಅಲ್ಲೊಂದಿನಿ ನನ್ನ ಬಂಧುಗಳಲ್ಲಿ ಯೋಗ್ಯವಾದ ವರಗಳಿಲ್ಲೆಲ್ಲಿರುವುವೆಂಬುದನ್ನೂ ಪತ್ತಾಲಿಸಿಬರಲಿಕ್ಕಾಗಿ ಅಲ್ಲಲ್ಲಿಗೆಲ್ಲಾ ಒಂದೊಂದು ಕಾಗದವನ್ನು ಬರದು ಹಾಕಿ ಜಾತಕವನ್ನು ತರಿಸಿಕೊಳ್ಳುತ್ತಿದ್ದರು. ಹೀಗೆ ತರಿಸಿಕೊಂಡ ಜಾತಕಗಳು ಮುನ್ನೂತ್ತೊಂಬತ್ತು ಈಗಲೂ ನನ್ನ ತಂದೆಯ ಬಳಿಯಲ್ಲಿವೆ. ಇವುಗಳಲ್ಲಿ ಹತ್ತುಜಾತಕಗಳಿಗೆ ನನ್ನೆತ್ತಾನುಕೊಂಡಾದರೂ ಬಹುಶಃ ಯಾವಾಗಿತ್ತಂತೆ ? ಅವರುಗಳಿಗೆ ಲಗ್ನವಿಚಾರದಲ್ಲಿ ಕಾಗದಬರೆಯಲು ಅವರು ಅನೌಗಿಕಾರ ಸೂಚಕವಾದ ಪತ್ರಗಳನ್ನೇ ಬರದು ಬಿಟ್ಟರು. ಇಷ್ಟೇ ಅಲ್ಲದೆ ಬೈಕೆಲವು ತೈತಿಲವು ಸಂಬಂಧದ 45–50–55 ವಯಸ್ಸಿನ ಕೆಲವು ವರಗಳು ತಾವಾಗಿಯೇ ನನ್ನ ಮನೆಗೆ ಬಂದು ತಮ್ಮ ಜಾತಕಗಳಲ್ಲಿ 10–5 ನೊಡಲುಗೊಂಡು 15 ರವರೆಗೂ ವರುಷವನ್ನು ಕಮ್ಮಿ ಮಾಡಿಕೊಂಡು ಜಾತಕಗಳನ್ನು ತಯಾರಿಸಿ, ತಮ್ಮದೇಹದಷ್ಟನ್ನೂ ನಮಯಮಾಪಕರೆಂದು ತಿಳಿಯುವಂತೆ ಮುಖಾದಿಗಳನ್ನೂ ಧೃಂಗರಿಸಿಕೊಂಡು ಬಂದು ಕನ್ಯೆಯನ್ನು ಕೊಡುವೆಂದು ಕೇಳುತ್ತಿದ್ದರು.

ನನ್ನ ತಾತನವರಿಗೆ ನನ್ನ ಭವಿಷ್ಯತ್ತಿನವಿಷಯದಲ್ಲಿ ತುಂಬಾ ಯೋಜನೆಯಿದ್ದುದುಂದ ಹೇಗಾದರೂ ಮಾಡಿ ನನ್ನನ್ನು ಉಪಸನ್ನರ ಮತ್ತು, ಕುಲೀನರ ವಂಶದಲ್ಲಿ ಹುಟ್ಟಿದ ಪೂರ್ವಪಶ್ಚಿಮಸೂ–ಸುಗುಣಿಯೂ–ಏಪ್ಯಾನಂತಸೂತಿದವರನ್ನಿಗೇಕೊಟ್ಟು ಮದುವೆ ಮಾಡಬೇಕೆಂದು ದೃಢಸಂಕಲ್ಪಮಾಡಿ ಬಿಟ್ಟಿದ್ದರು. ನಮ್ಮ ತಾತನವರ ಅಭಿಲಾಷೆಯು ನೆರವೇರಿದರು ಮುಕ್ಕಾಲುಭಾಲು ಅನುಮಾನವೇ ಆಗಿದ್ದರೂ ಅವರ ಮನೋ

ದಾರ್ಷ್ಟ್ಯವೇ ಅವರ ಸಂಕಲ್ಪವನ್ನು ಸಫಲವನ್ನಾಗಿ ಮಾಡಿತು. ಆದರೆ ಅದು ಸೆರೆಯೇರಲು ಬಹುಕಾಲ ವಿಳಂಬವಾಯಿತು.

ಈಗ ನನಗೆ ಹದಿನಾಲ್ಕು ವರ್ಷವು ತುಂಬಿತ್ತು ಬಂದಿದೆ. ಈಗ ನನ್ನನ್ನು ವಿಶೇಷವಾಗಿ ಮನೆಬಿಟ್ಟು ಹೊರಕ್ಕೆ ಕಳುಹಿಸಬೇಕಾಗಿರಲಿಲ್ಲ. ನನಗೂ ಮನೆಬಿಟ್ಟು ಹೊರಗೆ ಹೊರಡುವದಕ್ಕೆ ತುಂಬಾನಾಚಿಕೆ. ಅಕಸ್ಮಾತ್ತಾಗಿ ಬಂದಾದರೊಂದು ದಿನ ಯಾರಮನೆಗಾದರೂ ಆರ್ತಿಯಕ್ಕ್ಷತೆಗಳಿಗೆ ಹೋದರೆ ಊರ ಹೆಂಗಸರೆಲ್ಲರೂ ನನ್ನ ಮದುವೆಯ ಸುದ್ದಿಯನ್ನೇ ಆಡುವರು. ಇನ್ನು ಕೆಲವರು ನನ್ನನ್ನು ಬೆರಳಿಂದ ನಿರ್ದೇಶಿಸುತ್ತಾ ''ಈ ಹುಡುಗಿಗೆ ಇನ್ನೂ ಹದಿನಾಲ್ಕು ವರ್ಷತುಂಬುತ್ತಿದ್ದರೂ ಮದುವೆಮಾಡದೆ ಸಿಲ್ಲಿಸಿಕೊಂಡಿದ್ದಾರೆ. ಏನು ಧೈರ್ಯವಪ್ಪ.'' ಅಂದುಕೊಳ್ಳುವರು. ನನಗಂತೂ ನನ್ನ ಜತೆಯಹುಡುಗಿಯರನ್ನು ನೋಡಿದಾಗ ಎಷ್ಟು ಅವಮಾನವಾಗುತ್ತಿತ್ತೆಂದು ಬರಸನ್ನು ಹೇಳಲಾರೆ. ಆದನ್ನು ನನ್ನಂತೆ 14 ವರ್ಷವಾದರೂ ಮದುವೆಯಾಗದ ಹೆಂಗಸರು ಊಹಿಸಿಕೊಳ್ಳಬಹುದು.

II

ನಮ್ಮೂರಿಗೆ ನಾಲ್ಕುಗಾವುದ ದೂರದಲ್ಲಿ ಪರಪ್ಪನಹಳ್ಳಿ ಎಂಬ ಗ್ರಾಮವೊಂದಿದೆ. ಅಲ್ಲಿಯ ಸ್ಥಳನಿವಾಸಿಗಳಲ್ಲಿ ತುಂಬಾ ಹೊಟ್ಟೆಯನುಷ್ಯರೂ ಸೈಮೀಕರೂ ಆದ ನೀಲಕಂಠಶಾಸ್ತ್ರಿಗಳೆಂಬುವರಿಗೆ ಈಗ ಬಹಳತ್ತೈದು ವರ್ಷವಿರಬಹುದು. ಇವರಂಥ ಪ್ರಸಿದ್ಧಪಂಡಿತರು ಪ್ರಪಂಚದಲ್ಲೇ ಇಲ್ಲವೆಂದು ಹೆಸರಾಗಿತ್ತು. ಇವರ ಪ್ರಸಿದ್ಧಿಯನ್ನು ಕೇಳಿ ಶ್ರೀನಗರದ ಧೊರೆಯಾದ ಶ್ರೀಪತಿರಾಜನು ಇವರನ್ನು ತನ್ನ ಆಸ್ಥಾನಕ್ಕೆ ಬರಮಾಡಿಕೊಂಡು ತನ್ನ ಆಸ್ಥಾನದಲ್ಲಿ ಅವರಿಗೆ ಧರ್ಮಾಧಿಕಾರವನ್ನು ದಯಪಾಲಿಸಿದನು. ನೀಲಕಂಠಶಾಸ್ತ್ರಿಗಳು ಒಳ್ಳೆಯ ಉಪಪನ್ನರಾದಾಗ್ಗೂ ರಾಜಾಜ್ಞೆಯನ್ನು ಮೀರಲಾರದೆ ಶ್ರೀನಗರದಲ್ಲೇ ವಾಸಮಾಡಬೇಕಾಗಿಬಂತು. ಇವರಿಗೆ ಸಂಸಾರದಲ್ಲಿ ಬಹಳ ದಿನಗಳು ಪ್ರಾಪ್ತವಾಗಿದ್ದುವು. ಮೂವರು ಗಂಡುಮಕ್ಕಳು ೨೦-೨೫-೩೦ ವರ್ಷಗಳು ಬದುಕಿ ಮೃತರಾಗಿ ಹೋಗಿದ್ದರು. ಈಗ ಇವರ ಸಂಸಾರದಲ್ಲಿ ನಾಲ್ವತ್ತುವರ್ಷದ ಸೊಸೆಯೊಬ್ಬರೂ, ಇಬ್ಬರು ಪೌತ್ರರೂ (ಮಗನಮಕ್ಕಳೂ) ಇರುವರು. ಇನ್ನೂ ಇದಲ್ಲದೆ ಕೆಲವುಮಂದಿ ಹೆಣ್ಣು ಮಕ್ಕಳು ಪತಿಗೃಹದಲ್ಲಿ ಸುಖವಾಗಿರುವರು. ಇವರ ಬರತನೆಯ ಹೊಮ್ಮಕ್ಕಳು ಇಪ್ಪತ್ತೊಂದು ವರ್ಷ ವಯಸ್ಸುಳ್ಳ ವಾಸುದೇವಶಾಸ್ತ್ರಿಗಳೆಂಬುವರಿಗೆ ಇದೇ ಸಮಯದಲ್ಲಿಯೇ ದುರದೃಷ್ಟದಿಂದ ಪತ್ನೀ ವಿಯೋಗವಾದ ದೆಂದು ನಮ್ಮ ತಾತನವರಿಗೆ ತಿಳಿದು ಬಂದಿತು. ನಮ್ಮ ತಾತನವರ ತಂದೆಯೂ ನೀಲಕಂಠಶಾಸ್ತ್ರಿಗಳ ತಂದೆಯೂ ಬೇಗಬೇಗ ರಂತೆ ! ಈ ಪೂರ್ವಬಾಂಧವ್ಯವನ್ನು ಯೋಚಿಸಿ ನಮ್ಮ ತಾತನವರು ಅವರ ಮನೆಗೆ

ನನ್ನನ್ನು ಕೊಡಬೇಕೆಂದು ಒಂದು ಕಾಗದವನ್ನು ಬರದು ಹಾಕಿದರು. ಆದರೆ ಅವರು ತುಂಬಾ ಪ್ರಸಿದ್ಧಿಯುಳ್ಳ ದೊಡ್ಡ ಮನುಷ್ಯರಾಗಿದ್ದುದುಂದ ಈ ಕಾಗದವನ್ನು ಮೊದಲು ಲಕ್ಷ್ಯಮಾಡಲಿಲ್ಲ. ಹರಪುರದ ಜಮೀಂದಾರರಲ್ಲಿ ಪ್ರಸಿದ್ಧರಾದ ಏನಾಯಕಶಾಸ್ತ್ರಿಗಳೆಂಬುವರು ತಮ್ಮ ಏಕಮಾತ್ರ ಪುತ್ರಿಯಾದ ಲಕ್ಷ್ಮೀದೇವಿಯೆಂಬ ಕನ್ಯೆಯನ್ನು ನೀಲಕಂಠಶಾಸ್ತ್ರಿಗಳ ಮನೆಗೆ ಕೊಡಬೇಕೆಂದು ಸಂಕಲ್ಪಿಸಿ ಅದೇ ಸಮಯದಲ್ಲಿಯೇ ವಾಸುದೇವಶಾಸ್ತ್ರಿಗಳ ಜಾತಕವನ್ನು ತರಿಸಿನೋಡಿದರು. ದಾಂಪತ್ಯಾನುಕೂಲವು ಬಹಳ ಅನುಕೂಲವಾಗಿದ್ದಿತು. ಇಂತಹ ಅನುಕೂಲನಾದವರನ್ನು ಈಗ ಉದಾಸೀನ ಮಾಡಿಬಿಟ್ಟರೆ ಮುಂದೆ ತಮಗೆ ಇಷ್ಟು ಅನುಕೂಲವಾದ ಬಾಂಧವ್ಯವು ದೊರೆವುದೋ ಇಲ್ಲವೋ ಎಂದು ಅವರು ಈ ಲಗ್ನವನ್ನು ಆದಷ್ಟು ತ್ವರೆಯಿಂದ ನೆರವೇರಿಸಬೇಕೆಂದು ಬಲವಂತ ಮಾಡತೊಡಗಿದರು. ನೀಲಕಂಠಶಾಸ್ತ್ರಿಗಳೂಕೂಡ, ಇಂತಹ ಯೋಗ್ಯಮನೆತನದ ಕನ್ನಿಕೆಯು ಎರಡನೆಯ ಸಂಬಂಧಕ್ಕೆ ದೊರೆತುದು ಪುಣ್ಯೋದಯವೆಂದೂ, ನಾವು ಈಗ ಅವರು ಹೆಣ್ಣುಕೊಡುವೆನೆಂದು ಹೇಳುವಾಗಲೇ ಉದಾಸೀನನಾಡಿಬಿಟ್ಟರೆ ಮುಂದೆ ಅವರ ಮನಸ್ಸು ಹೇಗೆ ಬದಲಾಯಿಸುವುದೋ, ಆದುದುಂದ ಈ ಲಗ್ನವನ್ನು ಮಾಘಾದಿ ಪಂಜಕಕ್ಕೆ ಮುಂಚೆಯೇ ನೆರವೇರಿಸಿ ಬಿಡಬೇಕೆಂದೂ ಏನಾಯಕಶಾಸ್ತ್ರಿಗಳಿಗೆ ಹೇಳಿ ಕಳುಹಿಸಿದರು. '' ರೋಗಿ ಬಯಸಿದುದು ಹಾಲನ್ನ, ವೈದ್ಯ ಹೇಳಿದುದೂ ಹಾಲನ್ನ '' ಇಬ್ಬರ ಮನಸ್ಸು ಒಂದೇ ವಿಧ ಭಾವನೆಯಲ್ಲಿದ್ದಿತು.

ವಾಸುದೇವ ಶಾಸ್ತ್ರಿಗಳಿಗೆ ಪ್ರಥಮಪತ್ನೀವಿಯೋಗವಾದುದು ಸಾಮ್ಯ ಸಹಿತ ವೈಶಾದೃಶ್ಯ ಸದೃಶ ಸೋಮವಾರದದಿನ. ಏನಾಯಕ ಶಾಸ್ತ್ರಿಗಳ ಮಗಳನ್ನು ಕೊಟ್ಟು ಲಗ್ನಬೆಳೆಸಲೇರ್ಪಾಡಾದುದು ಶಾಪಾಣ ಶುದ್ಧ ದಶಮಿಯದಿನ. ಬೇಗಬುಬ್ಬರೂ ಒಳ್ಳೆಯ ಉಪಸನ್ನರಾದವರೇ. ಇಬ್ಬರಿಗೂ ಉತ್ಸಾಹವೂ ಇಮ್ಮಡಿಯಾಗಿಯೇ ಇದ್ದುದು. ಏನಾಯಕ ಶಾಸ್ತ್ರಿಗಳ ಮಗಳು ರೂಪದಲ್ಲಿ ಬಹುಜಲುವೆಯಾಗಿಯೂ ಇದ್ದಳು. ನೀಲಕಂಠಶಾಸ್ತ್ರಿಗಳ ಮನೆಯಲ್ಲಿ ಇದು ದ್ವಿತೀಯವಿವಾಹವೆಂದು ಹೇಳುವುದ ಕ್ಕಾಗುತ್ತಿರಲಿಲ್ಲ. ಒಬ್ಬೊಬ್ಬರು ಒಂದೊಂದು ಸಾಧಾರಣರೂಪಾಯಿಗಳಿಗೆ ಮೀರದವೆಚ್ಚ ವನ್ನೇ ಮಾಡಿದರು. ನೀಲಕಂಠಶಾಸ್ತ್ರಿಗಳು ತಮ್ಮ ಹೊಮ್ಮಗನ ಕೈಲಿ ವಿವಾಹಾಗ್ನಿ ಯನ್ನೇ ಧಾರ್ಯಾಗ್ನಿಯನ್ನಾಗಿ ಇಡಿಸಿ ಒಂದು ದರ್ಶಸ್ಥಾಲೀಪಾಕವನ್ನೂ ಒಂದು ಪೌರ್ಣಮಾಸೀಸ್ಥಾಲೀಪಾಕವನ್ನೂ ಮಾಡಿಸಿ ತನ್ಮಖೇನ ವೈಶ್ವದೇವವನ್ನು ಆರಂಭಮಾಡಿಸಿದರು. ಈ ವಿಚ್ಯುಂಭಣೆಗಳೆಲ್ಲಾ ಭಾದ್ರಪದ ಶುದ್ಧ ಪ್ರತಿಪತ್ತಿನವರೆಗೂ ನಡೆಯಿತು.

ಷ್ಟುತ್ತಿಗೆ ಹರಪುರದಲ್ಲಿ ಅಲ್ಲಲ್ಲಿಯೇ ಒಂದೊಂದು ಇಲಿಗಳು ಸಾಯುತ್ತಾ

ಹಾಗೆಯೇ ಪ್ಲೇಗಿನಿಂದ ಒಬ್ಬೊಬ್ಬರು ಸಾಯುವದಕ್ಕೂ ಆರಂಭವಾಗಿತ್ತು. ಏನಾಯಕಶಾಸ್ತ್ರಿಗಳು ಪ್ಲೇಗಿಗೆ ಹೆದರು ಭಾದ್ರಪದ ಶುದ್ಧ ಬಿದಿಗೆದಿನ ಸಾಯಂಕಾಲ ಪರವೂರಕ್ಕೆ ಆರುಮೈಲಿ ದೂರದಲ್ಲಿದ್ದ ತಮ್ಮ ಗ್ರಾಮವಾದ ಕ್ಷೀರಪುರಕ್ಕೆ ಪ್ರಯಾಣಮಾಡಿಕೊಂಡು ಹೊರಟುಹೊದರು. ಇವರು ಪ್ರಯಾಣಮಾಡುವುದಕ್ಕೆ ಮೂರುದಿನಮುಂಚೆಯೇ ಮದುವೆಯಾದ ಮನೆಯಲ್ಲಿ ಒರತು ಇಲಿಗಳು ಸತ್ತುಹೋಗಿದ್ದವು. ಆದುದರಿಂದಲೇ ಅವರು ಅಷ್ಟು ತ್ವರೆಯಾಗಿಯೇ ಊರುಬಿಟ್ಟು ಹೊದರು. ಭಾದ್ರಪದ ಶುದ್ಧ ತದಿಗೆ ಚೌತಿ ಇವೆರಡುದಿನವೂ ಊರಲ್ಲೆಲ್ಲರ ಮನೆಯಲ್ಲೂ ಗೌರಿ-ಗಣೇಶರ ಹಬ್ಬದ ಸಮಾರಂಭ. ಗಣಪತಿಯನ್ನು ಕೂರಿಸಿದ ನೇಲೆ ವಿಘ್ನೇಶ್ವರನಿಗೆ ಮಂಗಳಾರತಿ ಮಾಡಿಬಿಟ್ಟ ಹೊರತು ಮನೆಬಿಟ್ಟು ಹೋಗುವಹಾಗಿಲ್ಲ. ಊರಲ್ಲಾದರೋ ಪ್ಲೇಗು ದಿನೇದಿನೇ ಹೆಚ್ಚುತ್ತ ಬಂದು ಬ್ರಾಹ್ಮಣಕೇರಿಯಲ್ಲೇ ದಿನವೊಂದಕ್ಕೆ ಒರತು ಮೂರು ಹೆಣಗಳು ಹೋಗಲಾರಂಭವಾಯಿತು. ಜನಗಳಿಗೆ ಬಹು ಗಾಬರಿಯಾದ್ದರಿಂದ ಎಲ್ಲರೂ ಊರ ಹೊರಗೆ ಒರತು ಬೆಟ್ಟಲಿ ದೂರದಲ್ಲಿ ಮಟ್ಟೇ ಜೋಪಡಿಗಳನ್ನು ಕಟ್ಟಿಕೊಂಡು ಅಲ್ಲಿಗೆ ವಾಸಕ್ಕೆ ಹೊರಟುಹೋದರು. ಭಾದ್ರಪದ ಶುದ್ಧ ದಶಮಿಯೊತ್ತಿಗೆಊರೆಲ್ಲವೂ ಖಾಲಿಬಿದ್ದಾದುವು, ನೀಲಕಂಠಶಾಸ್ತ್ರಿಗಳ ಮನೆಯವರೂ ತಮ್ಮ ಮನೆಗೆ ಬೀಗ ಹಾಕಿಕೊಂಡು ಗಡಿಸಲಿಗೇ ವಾಸಕ್ಕೆ ಹೊರಟುಹೋದರು.

ಏನಾಯಕ ಶಾಸ್ತ್ರಿಗಳ ಮನೆಯವರು ಕ್ಷೀರಪುರಕ್ಕೆ ಪ್ರಯಾಣ ಮಾಡಿದ ವಿಷಯವನ್ನು ಹಿಂದೆಯೇ ಬರೆದಿದೆನಲ್ಲಾ? ಅವರು ಅಲ್ಲಿಗೆ ಹೋದನೇಲೆ ಒಂದು ತಿಂಗಳವರೆಗೆ ಕ್ಷೇಮವಾಗಿಯೇ ಇದ್ದರು. ಇಷ್ಟುಹೊತ್ತಿಗೆ ನವರಾತ್ರಿ ಹಬ್ಬಬಂದಿದ್ದಿತು. ನವರಾತ್ರಿ ಪಾಡ್ಯದದಿನ ರಾತ್ರಿಯೇ ಏನಾಯಕ ಶಾಸ್ತ್ರಿಗಳು ಒಕ್ಕಲಿದ್ದ ಮನೆಯಲ್ಲಿ ಒಂದು ಇಲಿ ಸತ್ತುಹೋಯಿತು. ಮನೆಯವರಿಗೆ ಇದನ್ನು ನೋಡಿ ಬಹುಗಾಬರಿಯಾಗಿ ಹೋಯಿತು. ಮಾರನೇದಿನನೇ ಬೇರೊಂದು ಮನೆಗೆ ವಾಸಕ್ಕೂ ಹೊರಟು ಹೋದರು. ಅದೇ ದಿನ ಸಾಯಂಕಾಲ ಐದು ಗಂಟೆ ಸಮಯದಲ್ಲಿ ಹೊಸ ಮದವಣಗಿತ್ತಿ ಲಕ್ಷ್ಮೀದೇವಮ್ಮನಿಗೆ ಜ್ವರವೂ ತಲೆನೋವೂ ಕಾಣಿಸಿಕೊಂಡಿತು. ಮನೆಯವರ ಹೆದರಿಕೆಯನ್ನು ಕೇಳಬೇಕೆ? ಏನಾಯಕ ಶಾಸ್ತ್ರಿಗಳು ಪೂರ್ವಭಾವಿಯಾಗಿಯೇ ಪ್ಲೇಗಿನ ಔಷಧಗಳನ್ನು ಬೇಕಾದಷ್ಟಾಗಿ ತರಿಸಿಟ್ಟುಕೊಂಡಿದ್ದರು. ಅದನ್ನೆಲ್ಲಾ ಜ್ವರ ಬಂದ ಹುಡುಗಿಗೆ ಕೊಟ್ಟಾಯಿತು. ಮಾರನೇದಿನ ಲಕ್ಷ್ಮೀದೇವಮ್ಮನಿಗೆ ಕಂಕುಳು ಸಂದಿಯಲ್ಲಿ ಎರಡು ಗೆಡ್ಡೆಗಳು ಕಾಣಿಸಿಕೊಂಡವು. ಆ ಗ್ರಾಮದವರು ಇದನ್ನು ತಿಳಿದು ಒಟ್ಟುಗೂಡಿ ಒಂದು ಕ್ಷಣವೂ ತಮ್ಮೂರಿನಲ್ಲಿರಲಾಗದೆಂದು ಏನಾಯಕ ಶಾಸ್ತ್ರಿಗಳ ಮನೆಯ

ವರನ್ನು ಫ್ಲೇಗು ತಗಲಿದ್ದ ಮನೆಗಿಯೊಪನೆ ಬಲವಂತವಾಗಿ ಊರು ಬಿಟ್ಟು ಹೊರ ಡಿಸಿ ಬಿಟ್ಟರು. ಅವರು ಧೈರ್ಯವನ್ನು ತಂದಿ ಕ್ಷೀರಪುರಕ್ಕೆ ಮೂರು ಮೈಲಿ ದೂರದಲ್ಲಿದ್ದ ನಾಗಪುರಕ್ಕೆ ತನ್ಮನೆಂಟರೊಬ್ಬರ ಮನೆಗೆಹೋಗೋಣವೆಂದುಹೊರಟರು. ನಾಗಪುರಕ್ಕೂ ಬಂದಾಯಿತು. ಇವರು ಅಲ್ಲಿಗೆ ಹೋದುದು ಮಹಾನವಮಿಯ ದಿನ ಮಧ್ಯಾಹ್ನ ನಾಲ್ಕು ಘಂಟೆ ಸಮಯ. ಇವರು ಬಂದ ವಿಷಯವನ್ನು ಎಷ್ಟೋ ಗುಟ್ಟಿನಲ್ಲಿಟ್ಟಿರಬೇಕೆಂದು ಮಾಡಿಕೊಂಡಿದ್ದಾಗ್ಯೂ ಸಾಯಂಕಾಲ ೮ ಘಂಟೆಯೊಳಗಾಗಿ ಊರಿಗೆಲ್ಲವೂ ಈ ಸುದ್ದಿ ತಿಳಿದು ಹೋಯಿತು. ಮೊದಲು ವೈನಾಯಕ ಶಾಸ್ತ್ರಿಗಳು ಇಳಿದು ಕೊಳ್ಳಲಕ್ಕೆ ತಕ್ಕ ಸ್ಥಳವೇ ದೊರೆಯಲಿಲ್ಲ, ಹೇಗೋ ಕಷ್ಟಪಟ್ಟು ಸಾಯಂಕಾಲ ವಳುಗಂಟೆ ಹೊತ್ತಿಗೆ ಬಂಧುವೊಬ್ಬನ ಮನೆಯ ಬೀದಿ ಬಾಗಲಲ್ಲಿ ರೋಗಿಯನ್ನು ಮಲಗಿ ಸಿಕೊಂಡು ತಾವೂ ಕೂತುಕೊಂಡರು. ೯ ಘಂಟೆ ಹೊತ್ತಿಗೆ ಇವರಿಳಿದಿದ್ದ ಮನೆ ಬಾಗ ಲಿಗೆ ದೊಣ್ಣೆಗಳನ್ನು ಹಿಡಿದುಕೊಂಡು ಬಂದು ಭಯಂಕರವಾದ ಮನುಷ್ಯರ ಗುಂಪು ಬಂದಿತು. ಅವರಲ್ಲಿ ಒಬ್ಬೊಬ್ಬರು ಒಂದೊಂದುರೀತಿ ಗಳಹುವುದಕ್ಕಾರಂಭಿಸಿದರು. ಹತ್ತು ಘಂಟೆಯೊಗಾಗಿ ಈ ಊರನ್ನು ಬಿಟ್ಟು ರೋಗಿಯನ್ನು ಹೊರಕ್ಕೆ ತೆಗೆದುಕೊಂಡು ಹೋದರೆ ಸರಿ. ಇಲ್ಲವಾದರೆ ಒಳಗೆ ಅನರ್ಥವಾಗುವುದೆಂದು ಗುಂಪಿಗೆ ಗುಂಪೇ ಕೂಗ ತೊಡಗಿತು. ವೈನಾಯಕ ಶಾಸ್ತ್ರಿಗಳ ಮನೆಯವರ ಮನಸ್ಸು ಈಗ ಹೇಗಿದೆಯೆಂಬುದು ಅನುಭವದವಿನಹ ಗೊತ್ತಾಗಲಾರದಾದ್ದರಿಂದ ಅದನ್ನು ಹೇಳುವುದಿಲ್ಲ. ಅಂತು ವೈನಾಯಕ ಶಾಸ್ತ್ರಿಗಳು ಆ ಊರನ್ನೂ ಬಿಟ್ಟು ಹೊರಡಲೇಬೇಕಾಯಿತು. ಅವರ ಕಷ್ಟ ಜಗದೀಶ್ವರನೊ ಬ್ಬನಲ್ಲ. ಅವರಿಗೆ ವೈನೂ ತೋರದೆ ಹಣೆಯಲ್ಲಿ ಒರದಂತಾಗಲೆಂದು ಯೋಚಿಸಿ ಸ್ವಸ್ಥ ಳವಾದ ಹರಪುರಕ್ಕೇ ಪ್ರಯಾಣ ಮಾಡಲು ನಿಶ್ಚಯಿಸಿದರು. ರಾತ್ರಿ ಹನ್ನೆರಡು ಗಂಟೆ ಹೊತ್ತಿಗೆ ವೈನಾಯಕ ಶಾಸ್ತ್ರಿಗಳು ಎರಡು ಬಂಡಿಗಳನ್ನು ಹೊಡಿಸಿಕೊಂಡು ಬಂದು ಅದ ರಲ್ಲೊಂದರಲ್ಲಿ ರೋಗಿಯನ್ನೂ ಸಮೂಹದಲ್ಲಿ ತಮ್ಮ ತಾಯಿಯನ್ನೂ ಕುಳ್ಳಿರಿಸಿ ಇನ್ನೊಂದರಲ್ಲಿ ಕಡೆಮೆಯವರೆಲ್ಲರೂ ಕುಳಿತು ಪ್ರಯಾಣ ಮಾಡಿದರು.

ಗಾಡಿಯು ಮೆಲ್ಲ ಮೆಲ್ಲನೆ ಹೋಗುತ್ತಿತ್ತು. ರೋಗಿಯ ಸಂಕಟವೂ ಆರ್ತ ನಾದವೂ ಕ್ಷಣಕ್ಷಣ ಹೆಚ್ಚುತ್ತಿತ್ತು, ಈ ಭಯಂಕರ ಘಟನೆಯನ್ನು ನೋಡಿದವರ ಎದೆಯು ಒಡೆದು ಹೋಗುವಂತಿತ್ತು. ನಾಗಪುರಕ್ಕೂ ಹರಪುರಕ್ಕೂ ಹತ್ತು ಮೈಲು ದೂರ. ವಿಜಯದಶಮಿಯದಿನ ಬೆಳಗಿನಜಾವ ನಾಲ್ಕುಗಂಟೆ ಸಮಯದಲ್ಲಿ ಈ ಪ್ರಯಾ ಣಿಕರ ಬಂಡಿಗಳು ನಾಗಪುರ ಹರಪುರಗಳ ಮಧ್ಯದಾರಿಯಲ್ಲಿರುವ ಒಂದು ಕೆರೆಯ ಏರಿಯ ಮೇಲೆ ಬರುತ್ತಿದ್ದಾಗ ಲಕ್ಷ್ಮೀ ದೇವಿಯು ಈ ಭೂಲೋಕವನ್ನು ಬಿಟ್ಟು

ಪ್ರಯಾಣಮಾಡಿದಳು. ವೈನಾಯಕ ಶಾಸ್ತ್ರಿಗಳು ಗಾಡಿಯ ಮೇಲೆಯೇ ಮೂರ್ಛಿತರಾಗಿ ಬಿಟ್ಟರು. ರೋಗಿಯು ಮೃತಳಾದಸ್ಥಳಕ್ಕೂ ಹರಪುರದ ಸ್ಮಶಾನ ಭೂಮಿಗೂ ಮೂರು ಮೈಲಿದೂರವಿತ್ತು. ಬೆಳಗ್ಗೆ ಆರುಗಂಟೆಗೆ ವಿನಾಯಕ ಶಾಸ್ತ್ರಿಗಳ ಮನೆಯವರೆಲ್ಲರೂ ಸ್ಮಶಾನದಲ್ಲಿ ಬಂದಿಳಿದು ನಡೆದ ವರ್ತಮಾನವನ್ನು ನೀಲಕಂಠಶಾಸ್ತ್ರಿಗಳ ಮನೆಗೆ ಹೇಳಿ ಕಳುಹಿಸಿದರು. ನೀಲಕಂಠ ಶಾಸ್ತ್ರಿಗಳು ಆಗ ಊರಲ್ಲಿರಲಿಲ್ಲ. ಅವಶ್ಯವಾಗಿ ಸ್ಮಶಾನಕ್ಕೆ ಹೋಗಬೇಕಾದವರು ಹೋಗಿದ್ದುದೂ ಆಯಿತು. ಅಲ್ಲಿ ಲಕ್ಷ್ಮೀದೇವಿಯ ದೇಹವನ್ನು ಸಂಸ್ಕಾರಮಾಡಿ ಎಲ್ಲರೂ ಹಿಂತಿರುಗಿ ಮನೆಗೆ ಬಂದುದೂ ಆಯಿತು. ಅಂತು ಎರಡು ತಿಂಗಳು ಕಳೆವುದರೊಳಗಾಗಿ ಇಷ್ಟು ಕಥೆ ಕವಿದುಹೋಯಿತು.

ನಾನೇನೋ ಮದುವೆ ವಿಷಯವನ್ನು ಬರೆಯ ತೊಡಗಿ ಮಧ್ಯದಲ್ಲಿ ಇಂತಹ ವಿಷಯಗಳನ್ನು ಬರೆದುದಕ್ಕಾಗಿ ಪಾಠಕಿಯರು ನನ್ನ ಮೇಲೆ ಆಗ್ರಹಪಡಬಹುದು. ಆದರೆ ನಡೆದವಿಷಯವೆಲ್ಲವನ್ನೂ ಬರೆದು ಮುಗಿಸೇಕಾಗಿರುವುದರಿಂದ ಎಲ್ಲರೂ ನನ್ನನ್ನು ಮನ್ನಿಸಬೇಕು. ಈ ಪ್ರಪಂಚದಲ್ಲಿ ಮಂಗಳಾಮಂಗಳಗಳು ಬರುವುದೂ ಗೊತ್ತಿಲ್ಲ. ಹೋಗುವುದೂ ಗೊತ್ತಿಲ್ಲ. ಇದೆಲ್ಲಾ ನಾಟಕವಾಡಿದ ಪಾಗೆ. ನಾವು ರಾತ್ರಿಯೊತ್ತು ಮಲಗಿಕೊಂಡು ಕನಸನ್ನು ಕಂಡಂತೆ ಯೇಗೋ ಅದರಂತೆಯೇ ಈ ಲೋಕದ ಸುಖ ದುಃಖಗಳು.

III

ನನಗೆ ಹದಿನಾಲ್ಕುವರ್ಷ ತುಂಬುವುದಕ್ಕೆ ಇನ್ನು ಆರೇತಿಂಗಳು ಉಳಿದಿತ್ತು. ನಮ್ಮ ತಾತನಂತೂ ನನಗೆ ಮದುವೆ ಮಾಡಿಸಿ ತಾನೆಲ್ಲಿ ಸತ್ತುಹೋಗುವೆನೋ ಎಂದು ಕೊರಗಿಕೊರಗಿ ಕೃಶನಾಗುತ್ತಿದ್ದನು. ಕೂನೆಗೆ ನೀಲಕಂಠಶಾಸ್ತ್ರಿಗಳಿಗೂ ನಮ್ಮ ತಾತನವರಿಗೂ ಪತ್ರವ್ಯವಹಾರ ಬೆಳೆದ ಮೇಲೆ ನೀಲಕಂಠಶಾಸ್ತ್ರಿಗಳು ದಯಮಾಡಿಸಿ ನಮ್ಮ ಮನೆ ಸಂಬಂಧಮಾಡುವುದಕ್ಕೆ ಒಪ್ಪಿಕೊಂಡರು. ನಮ್ಮ ತಾತನ ಸಂತೋಷವು ಎಷ್ಟು ಸಲಸದಳ.

ಮಾಘ ಬಹುಳ ಪಡಿಗೆ ದಿನ ನನಗೆ ಮದುವೆಯಾಯಿತು. ಮದುವೆಗಾಗಿ ಬಂದಿದ್ದ ಬೀಗರು ಹರಪುರಕ್ಕೆ ಪ್ರಯಾಣ ಬೆಳಸಿದರು. ಅವರು ಪ್ರಯಾಣಮಾಡುವಾಗ ನಮ್ಮ ತಾತನು ನೀಲಕಂಠಶಾಸ್ತ್ರಿಗಳನ್ನು ಕುರಿತು "ಸ್ವಾಮಿ! ತಾವು ದೊಡ್ಡ ಮನ ಸ್ಸುಮಾಡಿ ನನ್ನನ್ನು ಕನ್ಯಾದಾಯದಿಂದಉದ್ಧಾರಮಾಡಿದುದಕ್ಕಾಗಿ ನಾನು ತಮಗೆ ಜೀವಾವಧಿ ಕೃತಜ್ಞನಾಗಿದ್ದೇನೆ. ನನ್ನ ಮನಸ್ಸಿನಲ್ಲಿ ಪೂರ್ವಜಯಸ್ಸನ್ನೂ, ಸತ್ಕುಲ ಪ್ರಸೂತನೂ, ವಿದ್ಯಾವಂತನೂ ಆದ ವರನಿಗೆ ಮಡುಗಿಯನ್ನು ಕೊಡಬೇಕೆಂಬ ಆಶೆ

ಬಹಳವೆಂಗಿತ್ತು. ಅದನ್ನು ತಾವು ಸಾಫಲ್ಯಗೊಳಿಸಿದಿರಿ. ಇನ್ನು ನಾನು ಕೃತಾರ್ಥನಾದೆನು. ತಾವು ನಾಲ್ಕಾರುತಿಂಗಳು ಬಿಟ್ಟುಕೊಂಡು ಹುಡುಗಿಯನ್ನು ನಿಮ್ಮ ಮನೆಗೆ ಕರದುಕೊಂಡು ಹೋಗಿ ನಿಮ್ಮ ಮನೆ ಆಚಾರ ವ್ಯವಹಾರ, ಪದ್ಧತಿ, ಮಾನಮರ್ಯಾದೆಗಳನ್ನು ಕಲಿಸಿಕೊಡಿ, ಈ ಹುಡಿಗಿಯನ್ನು ಪ್ರೀತಿಯಿಂದ ಸಾಕಿರುವೆನು. ನನ್ನ ಮಗನು ಏಕೇಕಶಾಲಿಯಾಗಿ ಮಗಳಿಗೆ ಬುದ್ಧಿವಾದ ಹೇಳಿಕೊಡುವಷ್ಟು ಗುಣವಂತನಲ್ಲ. ನೀವು ನಮ್ಮನ್ನು ಮುಂದೆ ಯಾವ ಪದ್ಧತಿಯಲ್ಲಿಯೂ ಉಕ್ಷೇಪಣೆ ಮಾಡದಿರಬೇಕಾದರೆ ನಿಮ್ಮ ಮನೆಯಲ್ಲಿಟ್ಟುಕೊಂಡು ನಿಮ್ಮ ಮನೆಸಂಪ್ರದಾಯಗಳನ್ನು ಹೇಳಿಕೊಡಬೇಕು.'' ಎಂದು ಹೇಳಿ ಅವರನ್ನು ಪ್ರಯಾಣಮಾಡಿಸಿ ಕಳುಹಿಸಿಕೊಟ್ಟನು.

ನನಗೆ ಮದುವೆಯಾದ ಆರುತಿಂಗಳಿಗೆ ನಮ್ಮ ತಾತನು ಇಹಲೋಕವನ್ನು ತ್ಯಜಿಸಿ ಪರಲೋಕಕ್ಕೆ ಪ್ರಯಾಣಮಾಡಿದನು. ನಮ್ಮ ತಂದೆಯು ತಾತನ ಉತ್ತರಕ್ರಿಯೆಗಳನ್ನು ಮಾಡುವುದಕ್ಕಾಗಿ ಇನ್ನೂರು ರೂಪಾಯಿ ಸಾಲಮಾಡಬೇಕಾಯಿತು. ಎಲ್ಲಾ ಮುಗಿದಮೇಲೆ ನನ್ನನ್ನು ನಮ್ಮ ತಂದೆಯು ಕೆಲವು ದಿನಗಳ ಮಟ್ಟಿಗೆ ಪತಿಗೃಹಕ್ಕೆ ಕಳುಹಿಸಿಕೊಟ್ಟರು.

ನಾನಿನ್ನೂ ಅಯಿದ ಹುಡುಗಿ ಪರಗೃಹದಲ್ಲಿದ್ದವಳಲ್ಲ. ಮೊದಮೊದಲು ನನಗೆ ಪತಿಗೃಹಕ್ಕೆ ಬಂದಾಗ ಏನೋ ಒಂದು ವಿಧವಾಗಿ ಕಣ್ಣು ಕಟ್ಟಿದಂತಾಗಿತ್ತು. ತಂದೆ ತಾಯಿಗಳನ್ನು ನಾನೆಂದೂ ಬಿಟ್ಟಿದ್ದವಳಲ್ಲ, ಆದಲ್ಲದೆ ನಾನು ಪತಿಗೃಹಕ್ಕೆ ಬಂದಮೇಲೆ ಅಲ್ಲಿನ ನಡವಳಿಕೆ ಆಚಾರ, ಸಂಪ್ರದಾಯಗಳನ್ನು ನಮ್ಮ ಅತ್ತೆಯೂ ನನ್ನ ಅಕ್ಕನೂ(ಓರಗಿತ್ತಿ) ನನಗೆ ಬೋಧಿಸುತ್ತಿದ್ದರು.

ನಮ್ಮ ಬ್ರಾಹ್ಮಣವೃಂದದಲ್ಲಿ ಹೆಂಡತಿ ದೊಡ್ಡವಳಾಗಿ ಗಂಡನ ಮನೆಗೆ ಹೋಗುವ ಪರಿವಿಗೂ ಗಂಡುಹೆಂಡರು ಮಾತನಾಡುವುದೆಂದರೆ ಬಹು ಸಂಕೋಚವೂ-ಅಪಹಾಸ್ಯವೂ ಪಾಮಾನಿಕೆಯೂ ಆದ ಪದ್ಧತಿಯಂತೆ, ಈ ಪದ್ಧತಿಯು ಪೂರ್ವಕಾಲದಲ್ಲಿ ವಿಶೇಷವಾಗಿ ಆಚರಣೆಯಲ್ಲಿದ್ದಿತು. ಆಗಣಕಾಲದಲ್ಲಿ ಒಂದೆರಡು ಮಕ್ಕಳಾದಮೇಲೂ ಹೆಂಡತಿಯಾದವಳು, ಗಂಡನೊಡನೆ ಧೈರ್ಯದಿಂದ ಬಹಿರಂಗದಲ್ಲಿ ಮಾತನಾಡುವುದಕ್ಕೆ ಹೆದರುಕೊಳ್ಳುತ್ತಿದ್ದಳು. ಅದರಲ್ಲೂ ಅತ್ತೆ, ಮಾವ, ಭಾವ, ಅತ್ತಿಗೆ, ನಾದಿನಿಯದಿರಿಗೆ, ಗಂಡನ ಸಂಗಡ ಮಾತಾಡುವುದೆಂದರೆ ಬಹುಕಷ್ಟತರವಾದ ಸಂಗತಿಯೇ ಸರಿ. ಒಂದುವೇಳೆ ಪ್ರತ್ಯಕ್ಷವಾಗಿ ಮಾತನಾಡಿಬಿಟ್ಟಳೆಂದರೆ, ಆ ವಿಚಾರವು ಮಾರನೆಯದಿನವೇ ಊರಲ್ಲೆಲ್ಲಾ ಹರಡಿ ಹೋಗುತ್ತಿದ್ದುದಲ್ಲದೆ, ಅಂತಹವಳಿಗೆ ಗಂಡುಬೀರಿಯೆಂಬ ಬಿರಿದು ಸಹ ಬಂದು ಬಿಡುತ್ತಿದ್ದಿತು.

ನೀಲಕಂಠಶಾಸ್ತ್ರಿಗಳ ಕಿರೀಮೊಮ್ಮಕ್ಕಳಾದ ವಾಸುದೇವಶಾ.....
ಆಹಾ ! ಮರೆತುಬಿಟ್ಟೆನು. ಏನೋಜ್ಞಾನದಿಂದ ನನ್ನ ಸ್ವಾಮಿಯ ಹೆಸರನ್ನು ಬಾಯಿಂದ ಮರೆತು ಹೇಳುಬಿಡುತ್ತಿದ್ದೆನು. ವಾಚಕರೆಯರು ದಯವಿಟ್ಟು ಕ್ಷಮಿಸಬೇಕು. ಈಗ ಈ ಗ್ರಂಥದಲ್ಲಿ ಇನ್ನು ಮುಂದೆ ನನ್ನ ಜೀವಿತಸರ್ವಸ್ವರಾದ ಸ್ವಾಮಿಯವರ ಹೆಸರನ್ನು ಆಗಾಗ್ಗೆ ಉಚ್ಚರಿಸ ಬೇಕಾಗುತ್ತದೆ. ಆದುದರಿಂದ ಅವರಿಗೆ ಯಾವ ಹೆಸರಿಟ್ಟು ಕರೆಯ ಬೇಕೋ ತಿಳಿಯದು ನೀವಾದರೂ ಐದು ಮಂದಿ ಮುತ್ತೈದೆಯರು ಸೇರಿ ನನಗೆ ಈ ವಿಷ ಯದಲ್ಲಿ ಬುದ್ಧಿವಾದವನ್ನು ಹೇಳಿಕೊಡಬೇಕು, ನಾನು ನಿಮ್ಮ ಮಾತನ್ನು ಮೀರುವವ ಳಲ್ಲ. ಲೋಕನ್ಯಾಯದಂತೆ ನಾನು ವರ್ತಿಸುವವಳೇ ವಿನಹ ಅನ್ಯಥಾ ಇಲ್ಲ. "ನಮ್ಮ! ಮನೆಯವರೆಂದು ಕರೆಯಲೆ? ಅಥವಾ ಪ್ರಾಣನಾಯಕ ; ಪ್ರಾಣಪ್ರಿಯ! ಪ್ರಿಯನಾಥ ಪ್ರಾಣಕಾಂತ! ಮುಂತಾದ ಯಾವುದಾದರೊಂದು ಹೆಸರಿನಿಂದ ಕೂಗಲೆ? ಅಥವಾ My Dear Husband ಎಂದು ಕರೆಯುತ್ತಾ ಬರಲೇ? ಉಹು—ಇದಾವುದೂ ಸರಿಯಲ್ಲ. ಏನೆಂದು ಕರೆದರೂ ಆಕ್ಷೇಪಣೆ ಮಾಡುವವರು ಮಾಡಿಯೇಮಾಡುತ್ತಾರೆ. ಆದುದರಿಂದ ನಮ್ಮ ಸೋದರೀಮಣಿಯರು ಈಗ ವರ್ತಿಸುತ್ತಿರುವಂತೆ ನಾನೂಸಹ ನಮ್ಮ ಯಜಮಾನರೆಂದು ಸಂಬೋಧಿಸುತ್ತಾ ಬರುವೆನು. ಇದರಲ್ಲೇನೂ ದೋಷ ವಿರುವಂತೆ ತೋರದು.

ಒಂದುದಿನ ನನ್ನ ಯಜಮಾನರು ನನ್ನನ್ನು ತಮ್ಮ ಚಿಕ್ಕಮನೆಗೆ ಕರೆದು ನನ್ನೆರಡು ಕೈಗಳನ್ನೂ ಹಿಡಿದುಕೊಂಡು ನನ್ನ ಗಲ್ಲವನ್ನು ಮುದ್ದಿಟ್ಟು,ಪ್ರಿಯಳೆ! ಈಗ ನೀನು ನನ್ನಸಂಗಡ ಮಾತನಾಡಲು ನಾಚಿಕೆ ಪಡಬೇಡ; ನೀನು ಪುಸ್ತಕಗಳನ್ನೋದು ವುದನ್ನು ಬಲ್ಲೆಯಾ? ಎಂದುಕೇಳಿದರು. ನನ್ನನ್ನು ಅವರು ಮುಟ್ಟುತ್ತಲೇ ನನಗೆ ಮೈಯೆಲ್ಲಾ ನಡುಗಿಹೋಯಿತು. ಅವರು ಕೇಳಿದ ಪ್ರಶ್ನೆಗೆ ಉತ್ತರ ಕೊಡಬೇಕೆಂದು ಪ್ರಯತ್ನಪಟ್ಟೆನು. ಆದರೆಆ—ಹಾಳು ನಾಚಿಕೆಯೊಂದು ಅಡ್ಡವಾಗಿ ಬಂದು ನನ್ನನ್ನು ಮಾತನಾಡಗೊಡಿಸದೆ ಹೋಯಿತು. ಅರ್ಧ ಗಂಟೆವರಿಏಗೆ ನಮ್ಮ ಯಜಮಾನರು ನನ್ನನ್ನು ವಿವಿಧವಾಗಿ ಕೇಳಿದರೂ ನಾನು ಯಾವಮಾತನ್ನಾಡಲೂ ಶಕ್ತಳಾಗಲಿಲ್ಲ. ಕೊನೆಗೆ ಅವರಿಗೇ ಬೇಸರವಾಗಿ ನನ್ನನ್ನು ಬಿಟ್ಟುಬಿಟ್ಟು, ಇಂತಹ ಮೂಢತನವನ್ನು ನೀನು ಇನ್ನು ಮೇಲೆ ಬಿಟ್ಟು ನನ್ನೊಡನೆ ಸರಿಯಾಗಿ ಮಾತನಾಡದಿದ್ದರೆ ನನಗೆ ಬಹು ಕೋಪ ಬರುವುದೆಂದು ಹೇಳಿಬಿಟ್ಟರು. ಅವರು ನನ್ನ ಕೈಬಿಟ್ಟೊಡನೆಯೇ ನಾನು ಆ ಸ್ಥಳ ವನ್ನು ಬಿಟ್ಟು ಒಳಕ್ಕೆ ಹೊರಟು ಹೋದೆನು. ಒಳಕ್ಕೆ ಹೋದ ಮೇಲೆ ನನ್ನನ್ನು ನಾನೇ ನಿಂದಿಸಿಕೊಳ್ಳ ಬೇಕಾಯಿತು. ನನ್ನನ್ನು ಯಜಮಾನರು ಆದರದಿಂದ ಮಾತನಾಡಿಸಿದರೂ

ನಾನು ಮಾತನಾಡದೆ ಹೋದೆನಲ್ಲಾ ! ಎಂಬ ವ್ಯಥೆಯು ನನ್ನ ಮನಸ್ಸನ್ನು ವ್ಯಗ್ರ ಮಾಡಿಬಿಟ್ಟಿತು. ಇನ್ನೆಂದಾದರೂ ಮಾತಾಡಿಸಿದರೆ ಮಾತನಾಡಿಬಿಡುವೆನೆಂದು ನಿರ್ಧರಿಸಿ ಕೊಂಡೆನು. ಆದರೆ ಪುನಃ ನನ್ನ ಮುಗ್ಧವಯಸ್ಸಿನಲ್ಲಿ ಅಂತಹ ಸಂಭವವೇ ಉಂಟಾಗ ಲಿಲ್ಲ. ಇಷ್ಟರಲ್ಲೇ ನನ್ನ ತಂದೆಯು ಬಂದು ನನ್ನನ್ನು ರಂಗಪುರಕ್ಕೆ ಕರೆದು ಕೊಂಡು ಹೊರಟು ಹೋದರು.

ನಾನು ಮದುವೆಯಾದ ಮೇಲೆ ನಾಲ್ಕು ತಿಂಗಳು ಪತಿಗೃಹಕ್ಕೆ ಹೋಗಿದ್ದೆನು. ನನ್ನ ತಂದೆಯು ಪತಿಗೃಹದಿಂದ ನನ್ನನ್ನು ರಂಗಪುರಕ್ಕೆ ಕರೆದುಕೊಂಡು ಬಂದ ಆರುತಿಂ ಗಳಿಗೇ ನಾನು ದೊಡ್ಡವಳಾದೆನು. ಆಗ ನನಗೆ ಹದಿನೈದುವರ್ಷ ತುಂಬಿ ಮೇಲೆ ಆರು ತಿಂಗಳಾಗಿದ್ದಿತು. ನಾನು ದೊಡ್ಡವಳಾದ ಹದಿನಾರು ದಿನದೊಳಗಾಗಿ ಋತುಶಾಂತಿ ಯನ್ನು ಮಾಡಿಕೊಡಲು ನನ್ನ ತಂದೆಗೆ ಸಾಕಾದಷ್ಟು ಅನುಕೂಲವಿರಲಿಲ್ಲ. ಆದುದ ರಿಂದ ಹರಪುರಕ್ಕೆ ಬರದ ಕಾಗದದಲ್ಲಿ ಕಾಲಯಳಂಬನನ್ನು ಸೂಚಿಸುವ ಅಭಿಪ್ರಾಯ ವನ್ನು ತೋರಿಸಿ ಪತ್ರವನ್ನು ಬರದು ಪಾಠಿದರು.

ನಮ್ಮ ತಾತನವರಾದ ನೀಲಕಂಠಶಾಸ್ತ್ರಿಗಳು ನಮ್ಮ ತಂದೆಯ ಕಾಗದವ ನ್ನೋದಿ ಕೋಪಗೊಂಡರು. ಋತುಶಾಂತಿಯನ್ನು ಸಾವಕಾಶವಾಗಿಡಲು ಅವರಿಗೆ ಮನ ಸ್ಸಿರಲಿಲ್ಲ. ನಮ್ಮತಂದೆಯ ಪತ್ರಕ್ಕೆ ಬದುಲಾಗಿ ಅವರು. " ನಿಮ್ಮ ಕಾಗದವನ್ನು ನೋಡಿ ಸಂತೋಷವಾಯಿತು. ತಾವು ಈ ಕಾಗದ ಕಂಡೊಡನೆಯೇ ಸಕುಟುಂಬರಾಗಿ ಮುಹೂರ್ತಿಗಿಯನ್ನೂ ಕರದುಕೊಂಡು ಇಲ್ಲಿಗೇಬರಬೇಕು. ಲಗ್ನವನ್ನು ಹದಿನಾರು ದಿನ ದೊಳಗೇ ನಿಶ್ಚಯಿಸಿ ಮಾಡಿಸುತ್ತೇವೆ. " ಎಂದು ಬರದು ಕಳುಹಿಸಿದರು. ನಮ್ಮ ತಂದೆಗೆ ಆ ಕಾಗದವನ್ನು ನೋಡಿ ತುಂಬಾಯೋಚನೆಗೆ ಪ್ರಾರಂಭವಾಯಿತು, ಪುನಃ, " ನಾನು ಬಡವನಾದರೂ ಚಿಂತೆಯಿಲ್ಲ. ತಾವು ಸರ್ವರೊಡನೆ ರಂಗಪುರಕ್ಕೇ ದಯ ಮಾಡಿ ಲಗ್ನವನ್ನು ಬೆಳಸಿಕೊಂಡು ಹೋಗಬಹುದು " ಎಂದು ಪುನಃ ನಮ್ಮ ತಂದೆಯು ಹರಪುರಕ್ಕೆ ಪತ್ರವನ್ನು ಬರದು, ಸಾಹುಕಾರರಲ್ಲಿ ನೂರು ರೂಪಾಯಿ ಸಾಲಮಾಡಿ ನಿಶ್ಚೇಕಲಗ್ನಕ್ಕೆ ತಕ್ಕಸಾಮಿತ್ರಿಗಳನ್ನು ಅಣಿಮಾಡಿಕೊಂಡರು.

ನಿರ್ದಿಷ್ಟದಿನಕ್ಕೆ ಸರಿಯಾಗಿ ಎಲ್ಲರೂ ರಂಗಪುರಕ್ಕೆ ಬಂದರು. ನಿಶ್ಚೇಕದ ದಿವಸ ಹಗಲು ಹವನ ಹೋಮಾದಿಗಳೆಲ್ಲವೂ ಬೆಳೆದುವು, ಹಸೆಯ ಮೇಲೆ ಕುಳಿತು ಕೊಳ್ಳು ವಾಗ ನನಗೆ ಬಹುಕಡೆ ಎರವಲಾಗಿ ತಂದ ಅಸಂಖ್ಯಾತವಾದ ವಿಧ ವಿಧ ಆಭರಣಗಳನ್ನು ಅಲಂಕಾರ ಮಾಡಿದರು. ನನಗೆ ಒಡವೆಗಳ ಭಾರವನ್ನು ಹೊರುವುದು ಬಹು ಕಷ್ಟವಾಗಿ ಹೋಯಿತು. ಆದರೆ ಆ ಕಷ್ಟವೂ ಮೈಗಸುಗೆ ಒಂದೊಂದು ವಿಧವಾದ ಆನಂದವೇ ಸರಿ.

ಆದಿನ ಎರಡು ಬಾರಿ ಆರತಕ್ಷತೆಗಳಾದುವು. ರಾತ್ರಿ ಹನ್ನೆರಡು ಘಂಟೆಗೆ ನಾನು ನನ್ನ ಸ್ವಾಮಿಯೊಡನೆ ಶಯನಗೃಹಕ್ಕೆ ಪ್ರವೇಶ ಮಾಡಿದೆನು. ಅಲ್ಲಿಗೆ ಪ್ರವೇಶ ಮಾಡಿದ ಎರಡು ಗಳಿಗೆಯವರಿಗೂ ಫಲದಾನವೇ ಮುಂತಾದ ಶಾಸ್ತ್ರಗಳು ನಡೆಯುತ್ತಿದ್ದುವು. ಪುರೋಹಿತರು ಬಂದು ನಾಲ್ಕಾರು ವೇದಋಕ್ಕುಗಳನ್ನು ನಮ್ಮ ಯಜಮಾನರಿಂದ ಹೇಳಿಸಿ ಹೊರಟು ಹೋದರು. ಶಯನ ಗೃಹಕ್ಕೆ ಪ್ರವೇಶಿಸಿದ್ದ ಸುವಾಸಿನಿಯರು ಯಥಾಯಥವಾಗಿ ಹೊರಟು ಹೋದರು. ಈಗ ಶಯನ ಗೃಹದಲ್ಲಿ ನಾನೂ ನನ್ನ ಸ್ವಾಮಿಯೂ ವಿನಹ ಇತರರಾರೂ ಇರಲಿಲ್ಲ.

ನಮ್ಮ ಯಜಮಾನರು ನನ್ನನ್ನು ಆದಿನ ಆದರ ಪೂರ್ವಕವಾಗಿ ಕುಶಲಪ್ರಶ್ನೆಯನ್ನು ಮಾಡಿದರು. ನಾನೂ ಬಿಡುಸಂಕೋಚದಿಂದ ಅವರ ಪ್ರಶ್ನೆಗಳಿಗೆ ಉತ್ತರಕೊಟ್ಟೆನು. ನಮ್ಮ ಯಜಮಾನರು ಸತೀ ಧರ್ಮವನ್ನು ಕುರಿತು ಬಹುಹೊತ್ತಿನವರೆಗೆ ಉಪನ್ಯಾಸ ಮಾಡಿದರು. ಅವರ ನೀತಿಗಳನ್ನು ಕೇಳಿ ನನಗೂ ಬಹಳ ಸಂತೋಷವಾಯಿತು. ಅವರ ಉಪನ್ಯಾಸದಿಂದ ತಿಳಿದು ಬಂದುದೇನೆಂದರೆ;— ಗೃಹಿಣಿಯಾದವಳಿಗೆ, ಪತಿಯನಹ ಬೇರೆ ದೇವರಿಲ್ಲ. ಬೇರೇವ್ರತವಿಲ್ಲ. ಬೇರೆ ಉಪವಾಸಗಳಿಲ್ಲ. ಪ್ರತ್ಯೇಕವಾದ ತೀರ್ಥಯಾತ್ರೆಗಳಿಲ್ಲ. ಇತರವಾದ ಪುಣ್ಯಕ್ಷೇತ್ರಗಳೂ ಇಲ್ಲ. ಪತಿಗಿಂತಲೂ ಸ್ವರ್ಗ ಸುಖವಿಲ್ಲ; ಹೀಗೆಯೇ ಮಾತನಾಡುತ್ತಿದ್ದಾಗಲೇ ಬೆಳಗಿನಝಾವದ ಕೋಳಿಯು ಕೂಗಿಬಿಟ್ಟಿತು.

ಗೃಹಿಣಿಯರಾದ ಸೋದರಿಯರಿರಾ:—ಈ ದಿನ ನಾನು ಎಷ್ಟು ಆನಂದದಿಂದಿರುವೆನೆಂಬುದನ್ನು ಅನುಭವಿಗಳಾದ ನೀವೇ ಊಹಿಸಿಕೊಳ್ಳಬೇಕಲ್ಲದೆ ಅದನ್ನು ಮಾತಿನಿಂದ ಹೇಳಲಾಗುವುದಿಲ್ಲ. ಯಾವ ರಮಣಿಯು, ಪತಿಯ ಆದರಕ್ಕೆ ಪಾತ್ರಳಾಗಿ, ಪತಿಯೇ ಸರ್ವಸ್ವವೆಂದು ನಂಬಿ ಪತಿದೇವನನ್ನು ಅನವರತವೂ ಬಿಡದೆ ಪತಿಭಕ್ತಿಪರಾಯಣಳಾಗಿರುವಳೋ ಅಂತಹ ರಮಣಿಯಸುಖದ ಮುಂದೆ ಇತರ ವಿಧವಾದ ಪ್ರಾಪಂಚಿಕ ಸುಖಗಳನ್ನು ತೃಣದಂತೆ ಭಾವಿಸಬೇಕು.

IV

ಪ್ರಸ್ತವಾದಮೇಲೆ ಹದಿನೈದುದಿನ ನಾನು ತೌರುಮನೆಯಲ್ಲಿಯೇ ಇದ್ದೆನು. ಇನ್ನೆಷ್ಟುದಿನ ತಾನೇ ಹೆಣ್ಣು ಮಕ್ಕಳು ತೌರುಮನೆಯಲ್ಲಿರುವುದಕ್ಕಾದೀತು ? ಹೆಣ್ಣು ಮಕ್ಕಳು ಹುಟ್ಟುವುದು ಪರರ ಮನೆಯಲ್ಲಿರುವುದಕ್ಕಾಗಿಯೇ. ಗಂಡನ ಮನೆಗೆ ಹೋದಮೇಲೂ ಹೆಣ್ಣು ಮಕ್ಕಳಿಗೆ ತೌರುಮನೆಯು ಆಶೆಯಿಟ್ಟೇ ಇರುತ್ತದೆ. ಅದಕ್ಕಾಗಿಯೇ ಗಂಡನ ಮನೆಯಲ್ಲಿ ಸಂಸಾರಮಾಡುತ್ತಿರುವ ಹೆಣ್ಣುಮಕ್ಕಳನ್ನು ತಂದೆತಾಯಿ

ಗಳು ಆಗಾಗ್ಗೆ ಕರೆದುಕೊಂಡು ಹೋಗುತ್ತಲೇ ಇರುತ್ತಾರೆ. ಆದರೆ ಇನ್ನೊಂದು ವಿಶೇಷವುಂಟು;—ಯಾರಿಗಾದರೂ ಆಗಲಿ, ತನ್ನ ಮಗಳನ್ನು ಒಬ್ಬನಿಗೆ ಕೊಟ್ಟನೇಲೆ ಮಗಳೂ ಅಳಿಯನೂ ತಮ್ಮ ಮನೆಯಲ್ಲಿಯೇ ಇರಬೇಕೆಂಬ ಆಶೆ ಅವರಿಗೆ ಬಹಳವಾಗಿ ಇದ್ದೇ ಇರುತ್ತದೆ. ಮತ್ತು ಇದರಲ್ಲೂ ಧನಿಕರಾದವರಿಗಂತೂ ಈ ವಿಧವಾದ ಆಶೆಯು ಖಂಡಿತವಾಗಿ ಇದ್ದೇ ಇರುತ್ತದೆ. ಈ ಕಾರಣದಿಂದ ಮಗಳ ಮೇಲೆ ತಂದೆತಾಯಿಗಳ ಪ್ರೀತಿಯು ಎಷ್ಟಿರಬಹುದೆಂಬುದನ್ನು ನಮ್ಮ ವಾಚಕರು ತಮ್ಮತಮ್ಮ ಹೃದಯದಲ್ಲಿ ಭಾವಿಸಿಕೊಳ್ಳಲಿ? ಆದರೇನು? ಈಶ್ವರನಿಯಾಮಕವನ್ನು ತಪ್ಪಿಸುವದಕ್ಕೆ ಆರಕೈಲೂ ಸಾಗಲಾರದು. ತಂದೆತಾಯಿಗಳಿಗೆ ಮಕ್ಕಳ ಮೇಲೆ ಅದೆಷ್ಟು ಪ್ರೀತಿ ಇದ್ದಾಗ್ಯೂ ಗೃಹಿಣಿಯಾಗಲರ್ಹಳಾದ ಮಗಳನ್ನು ಎಂದಾದರೊಂದುದಿನ ಪತಿಗೃಹಕ್ಕೆ ಕಳುಹಿಸಿಯೇ ಬಿಡಬೇಕಲ್ಲವೆ? ಚಿಕ್ಕಂದಿನಿಂದ ಸಾಕಿದ ಮಗಳನ್ನು ತಮ್ಮ ಮನೆಯಿಂದ ಶಾಶ್ವತವಾಗಿ ಪತಿಗೃಹವಾಸಕ್ಕೆಂದು ಪ್ರಯಾಣಮಾಡಿ ಕಳುಹಿಸುವ ಸಮಯದಲ್ಲಿ ಮಾತಾಪಿತೃಗಳಿಗೆ ಎಷ್ಟು ವ್ಯಸನವಾಗಬಹುದು? ಆದರೆ ಅವರು ಅಗಣಸ್ಥಿತಿಯಲ್ಲಿ ವ್ಯಸನಪಡುವುದು ಸರಿಯಾದುದಲ್ಲ. ಮಗಳೂ ಅಳಿಯನೂ ಅನ್ಯೋನ್ಯವಾಗಿ ಸುಖದಿಂದಿರಲೆಂದೂ ಸತ್ಸಂತಿಯೂ ಅವರಿಗೆ ಪ್ರಾಪ್ತವಾಗಿ ಆಯುರಾರೋಗ್ಯೈಶ್ವರ್ಯಾದಿಗಳಿಂದ ಅವರು ಚಿರಕಾಲ ಜೀವಿಸಬೇಕೆಂದೂ ಹರಸಿ ಮಗಳಿಗೆ, ಸತೀಧರ್ಮಗಳನ್ನುಪದೇಶಿಸಿ ಕಳುಹಿಸಿಕೊಡುವುದು ಅವರ ಮುಖ್ಯಕರ್ತವ್ಯ. ಆದರೆ ಹೆಣ್ಣುಮಗಳು ಪ್ರಯಾಣಮಾಡಿಕೊಂಡು ಪತಿಗೃಹಕ್ಕೆ ಹೋಗುವಾಗ ತಂದೆತಾಯಿಗಳು ಪಡುವ ವ್ಯಸನವು ಎಂತಹ ವ್ಯಸನವೆಂಬುದನ್ನು ಅಲ್ಲೋಪಾಖ್ಯಾನ. ನನಗೆ ದುಃಖಕಾಲದಲ್ಲಾಗಲೀ ವಿಶೇಷ ಸಂತೋಷಕಾಲದಲ್ಲಾಗಲೀ ಸ್ವಭಾವವಾಗಿ ಕಣ್ಣೀರು ಸುರುವುದು ಸ್ವಭಾವವಷ್ಟೆ. ದುಃಖದಿಂದ ಸುರಿವ ಕಣ್ಣೀರಿಗೆ ಶೋಕಬಾಷ್ಪವೆಂದೂ ಆನಂದದಿಂದ ಸುರಿವ ಕಣ್ಣೀರಿಗೆ ಆನಂದಬಾಷ್ಪವೆಂದೂ ಹೆಸರು ಕೊಡಲ್ಪಟ್ಟಿರುವುದು. ಮಗಳನ್ನು ಕಳುಹಿಸುವಾಗ ಸುರಿವ ಕಣ್ಣೀರು ಎರಡು ವಿಧವಾದ ಬಾಷ್ಪಗಳಿಗೂ ಸಂಬಂಧಿಸಲ್ಪಟ್ಟದು. ಮಗಳನ್ನು ಕಳುಹಿಸಬೇಕಲ್ಲಾ, ಎಂಬ ವ್ಯಸನವೂ; ನನ್ನ ಮಗಳು ಇನ್ನು ಮುಂದೆ ಪತಿಯೊಡನೆ ಸಂಸಾರ ಮಾಡಿಕೊಂಡು ಸುಖಿಸುವಳಲ್ಲಾ ಎಂಬ ಸಂತೋಷವೂ ಮಿಳಿತವಾಗುವುದರಿಂದ ಆಗಣಕಾಲದ ಚಿಂತೆಯು ಅಪರಿಮಿತವಾದುದೇಸರು.

ನಮ್ಮ ತಂದೆತಾಯಿಗಳು ನನ್ನನ್ನು ಪರವೂರಕ್ಕೆ ಕರೆದುಕೊಂಡು ಬಂದು ಪತಿಗೃಹದಲ್ಲಿ ಬಿಟ್ಟು ವಿಹಿತವಾದ ನೀತಿಗಳನ್ನುಪದೇಶಿಸಿ ರಂಗಪುರಕ್ಕೆ ಪ್ರಯಾಣಮಾಡಿದರು. ಇಂದು ನನಗೆ ಬಹು ದುಃಖವಾಯಿತು. ನಮ್ಮ ತಾಯಿತಂದೆಗಳನ್ನು ನಾನೊಂದು

ದಿನವೂ ಬಡಲಾರದಿದ್ದವಳು ಇಂದು ಅವರನ್ನು ಅಗಲಿರಬೇಕಾಗಿ ಬಂದಿತು. ಆದರೆ ಆ ನನ್ನ ದುಃಖವು ಬಹು ಕ್ಷಣಿಕವಾದುದಾಗಿದ್ದಿತು. ನಮ್ಮ ಯಜಮಾನರು ನನಗೆ ಎಷ್ಟೋ ಸಮಾಧಾನಗಳನ್ನು ಹೇಳಿ ನನ್ನ ವ್ಯಸನವನ್ನು ಕಮ್ಮಿಮಾಡಿದರು. ನಾನು ಕ್ರಮವಾಗಿ ಮನೆಗೆಲಸಗಳನ್ನು ಮಾಡುತ್ತಾ, ಮನೆಯವರೆಲ್ಲರಿಂದಲೂ ಒಳ್ಳೆಯವಳೆಂದು ಹೇಳಿಸಿಕೊಳ್ಳುತ್ತಿದ್ದೆನು. ನನಗೆ ಪತಿಗೃಹದಲ್ಲಿ ವಾಸಮಾಡುವುದೂ ಅಲ್ಲಿ ಕಷ್ಟಪಟ್ಟು ಗೃಹಕಾರ್ಯಗಳನ್ನು ಜಟುವಟಿಕೆಯಿಂದ ಮಾಡುವುದೂ ಸ್ವರ್ಗಸುಖಕ್ಕೆ ಸಮಾನವಾದ ಸುಖವೇ ಸರಿ. ನಮ್ಮ ಮನೆಯಲ್ಲಿ ಈಗ ನಮ್ಮ ಅತ್ತಮ್ಮನವರೂ ನಮ್ಮ ಭಾವನವರೂ (ಯಜಮಾನರ ಅಣ್ಣಂದಿರು) ನಮ್ಮ ಅಕ್ಕ (ಭಾವನವರ ಕುಟುಂಬ) ಮತ್ತು ಅವರ ಮಕ್ಕಳು, ನಮ್ಮ ತಾತನವರು, (ಇನ್ನು ಮೇಲೆ ನಮ್ಮ ತಾತನವರೆಂದರೆ ನೀಲಕಂತಶಾಸ್ತ್ರಿಗಳು) ನಾವಿಬ್ಬರು, ಇಷ್ಟುಮಂದಿ ಇದೇವೆ. ನಾನೇ ನಮ್ಮ ಅತ್ತೆಗೆ ಕಿರೀಸೊಸೆಯಾದ್ದರಿಂದಲೂ ಕೆಲಸಗಳನ್ನು ಜೆನ್ನಾಗಿ ಮಾಡುತ್ತಿದ್ದುದರಿಂದಲೂ ನನ್ನನ್ನು ಕಂಡರೆ ಅವರಿಗೆ ದಿನೇದಿನೇ ಪ್ರೀತಿಯು ಹೆಚ್ಚುತ್ತಿತ್ತು. ಕಡಮೆಯವರೂ ನನ್ನ ವಿಷಯದಲ್ಲಿ ಎಷ್ಟೋ ಪ್ರೀತಿಯನ್ನಿಟ್ಟುಕೊಂಡಿದ್ದರು. ನಾನು ಪ್ರತಿದಿನವೂ ಬೆಳಗಿನ ಐದು ಘಂಟೆಗೇ ಎದ್ದು ಕಸ, ಮುಸರೆ, ಉಪಕರಣಗಳ ಕೆಲಸಗಳನ್ನು ಏಳು ಘಂಟೆಯೊಳಗಾಗಿ ಮಾಡಿಕೊಂಡು ಆ ಮೇಲೆ ಊಟದ ಎಲೆಯನ್ನು ಹಚ್ಚುತ್ತ ಕುಳಿತುಕೊಳ್ಳುವೆನು. ಮಧ್ಯಾಹ್ನ ಊಟವಾದ ನಂತರ ಎಲೆ ಎತ್ತಿ ಗೋಮಯವನ್ನು ಹಚ್ಚಿ ನಮ್ಮ ಅತ್ತೆಯವರೊಡನೆ ಕೊಳಕ್ಕೆ ಹೋಗಿ ನೀರನ್ನು ತುಂಬಿಕೊಂಡು ಮನೆಗೆ ಬರುವೆನು. ಬಳಿಕ ಒಂದೆರಡು ಘಳಿಗೆ ವಿಶ್ರಮಿಸಿಕೊಂಡ ಬಳಿಕ ನಮ್ಮ ಯಜಮಾನರು ನನಗೆ ಯಾವುದಾದರೂ ಪುಸ್ತಕವನ್ನು ತಂದುಕೊಟ್ಟು ಒಂದೆರಡು ಪಾತಗಳನ್ನು ಹೇಳಿಕೊಡುವರು. ಸಾಯಂಕಾಲವಾದ ನಂತರ ದೇವರ ಮನೆಗೆ ದೀಪವನ್ನು ಹತ್ತಿಸಿ ದೇವರ ಸ್ತೋತ್ರಗಳನ್ನು ಹೇಳುತ್ತಿದ್ದು ಮನೆಯವರಿಗೆಲ್ಲರಿಗೂ ಊಟವಾದ ನಂತರ ನಾನೂ ಊಟಮಾಡಿ ರಾತ್ರಿ ಹತ್ತು ಘಂಟೆಯಾದ ಬಳಿಕ ಮಲಗುತ್ತಿದ್ದೆನು. ರಾತ್ರಿ ಮಲಗುವುದಕ್ಕೆ ಮುಂಚೆ ನಮ್ಮ ಯಜಮಾನರು ಯಾವುದಾದರೂ ಅಪೂರ್ವವಾದ, ಸತೀಧರ್ಮ ಬೋಧಕವಾದ ಉಪಾಖ್ಯಾನಗಳನ್ನು ಓದಿ ಹೇಳುತ್ತಿದ್ದರು. ನಾವು ಬಳಿಕ ದೈವಭಕ್ತಿಯುತವಾದ ನಿರ್ಮಲ ಮನಸ್ಸಿನಿಂದ ನಿದ್ದೆಮಾಡುವೆವು.

ಈ ರೀತಿಯಾಗಿ ನಾವು ಸುಖದಿಂದ ಆರು ತಿಂಗಳುಕಾಲ ಅನ್ಯೋನ್ಯವಾಗಿ ಸಂಸಾರವನ್ನು ನಡೆಸಿಕೊಂಡು ಹೋಗುತ್ತಿದ್ದೆವು. ಇಷ್ಟು ಹೊತ್ತಿಗೆ ನಾನು ಅಂತರ್ವತ್ನಿಗರ್ಭಿಣಿಯಾಗಿರುವೆನೆಂಬ ವಿಷಯವು ನಮ್ಮ ತಾಯಿತಂದೆಗಳಿಗೆ ತಿಳಿದು ಅವರು ನನ್ನನ್ನು

ಕರೆವುದಕ್ಕೆ ಬಂದರು. ಲೋಕಾಚಾರಕ್ರಮವಾಗಿ ನಮ್ಮ ತಾತನವರೂ, ನನ್ನನ್ನು ತೌರುಮನೆಗೆ ಪ್ರಯಾಣಮಾಡಿಸಿ ಕಳುಹಿಸಿಕೊಟ್ಟರು. ನನಗೇನೋ ತೌರುಮನೆಗೆ ಹೋಗುವೆನೆಂಬ ಸಂತೋಷವು ಪೂರ್ಣವಾಗಿದ್ದಿತಾದರೂ ಪತಿದೇವನನ್ನು ಅಗಲಿ ಇರ ಬೇಕಾಗುವುದಲ್ಲಾ, ಎಂಬ ಚಿಂತೆಯೊಂದು ನನ್ನ ಮನಸ್ಸಿನಲ್ಲಿ ಸ್ಥಾನಮಾಡಿಕೊಂಡಿ ದ್ದಿತು. ಇದಕ್ಕಾಗಿ ನಾನು ನನ್ನ ಸ್ವಾಮಿಯನ್ನು ರಂಗಪುರಕ್ಕೆ ಬಂದಿರಬೇಕೆಂದು ಪ್ರಾರ್ಥಿಸಿಕೊಂಡೆನು. ಅವರು ಅದಕ್ಕೆ ಒಪ್ಪಲಿಲ್ಲ. ಆಗಿಂದಾಗ್ಗೆ ರಂಗಪುರಕ್ಕೆ ಬರು ತ್ತಿರುವೆನೆಂದು ಅವರು ಹೇಳಿದ ಮೇಲೆ ನನಗೆ ಮನಸ್ಸಮಾಧಾನವಾಯಿತು. ನಾನು ಸಂತೋಷದಿಂದ ತೌರುಮನೆಗೆ ಪ್ರಯಾಣಮಾಡಿದೆನು. ಅಲ್ಲಿ ನನ್ನ ತಾಯಿತಂದೆಗಳು ನನ್ನನ್ನು ಬಹು ಪ್ರೀತಿಯಿಂದ ಆದರಿಸುತ್ತಲೂ ನಾನು ಕೇಳಿದ್ದನ್ನು ತಂದುಕೊಡು ತ್ತಲೂ ಇದ್ದರು. ಬಳೆ ತೊಡಿಸುವುದು, ಅಕ್ಷತೆ, ಸೀಮಂತ ಮುಂತಾದ ಕಲಾಪಗಳು ವಿಹಿತವಾಗಿ ನೆರವೇರಿದುವು. ಒಂಬತ್ತು ತಿಂಗಳು ತುಂಬುತ್ತಿದ್ದ ಹಾಗೆಯೇ ನನಗೆ ಸುಂದರ ವಾದ ಒಂದು ಗಂಡು ಮಗುವು ಜನಿಸಿತು. ನಮ್ಮ ತಂದೆತಾಯಿಗಳ ಆನಂದಕ್ಕೆ ಪಾರವೇ ಇಲ್ಲ. ನನಗೋಸ್ಕರ–ನನ್ನ ಸುಖಕ್ಕೋಸ್ಕರ–ನನ್ನ ಆರೋಗ್ಯಕ್ಕೋಸ್ಕರ ನೂರಾರು ರೂಪಾಯಿಗಳನ್ನು ಖರ್ಚುಮಾಡಿದರು. ಈ ಶಿಶುಜನನಸಂಚಾರವನ್ನು ಪರ ಪುರಕ್ಕೆ ತಿಳಿಸಿದಮೇಲೆ ಅಲ್ಲಿ ನಮ್ಮ ಮನೆಯವರು ತುಂಬಾ ಸಂತೋಷಪಟ್ಟು ಕೊಂಡರು. ಮತ್ತು ಬಹು ದ್ರವ್ಯವ್ಯಯದಿಂದ, ಜಾತಕರ್ಮ ನಾಮಕರಣಾದಿಗಳು ನೆರವೇರಿಸಲ್ಪಟ್ಟುವು. ಆದರೆ ಮಗುವು ಎರಡು ಮೂರು ದಿನ ಹಾಲನ್ನೇ ಕುಡಿಯಲಿಲ್ಲ. ಮನೆಯವರು ಬಹು ಗಾಬರಿಪಟ್ಟು ಏನೇನೋ ಔಷಧಿಗಳನ್ನೂ, ಸುವಾಸಿನೀ ಪ್ರಾರ್ಥನೆ ಯನ್ನೂ ಮಾಡಿದ ಮೇಲೆ ಮಗುವು ಸ್ವಸ್ಥವಾಗಿ ಆಡಿಕೊಂಡಿದ್ದಿತು.

ನಾನು ಬಾಣಂತಿಯಾಗಿದ್ದಾಗ ನನ್ನ ತೌರುಮನೆಯಲ್ಲಿ ಅನೇಕ ಅನರ್ಥಗಳು ನಡೆದುಹೋದುವು. ಏನೆಂದರೆ ನಾನು ಎರಡು ತಿಂಗಳ ಬಾಣಂತಿಯಾಗಿದ್ದಾಗ ನನಗೆ ಜ್ವರಭಳೆಗಳು ಬರುವುದಕ್ಕೆ ಆರಂಭವಾಗಿ ಅನ್ನವೇ ಸೇರದೆ ಸುಸ್ತಾಗಿ ಮಲಗಿಬಿಡು ತ್ತಿದ್ದೆನು. ಮಗುವಿಗೂ ಆಗಿಂದಾಗ್ಗೆ ಆಲಸ್ಯವಾಗುತ್ತಲೇ ಇತ್ತು. ಮಗುವಿಗೆ ಆಲಸ್ಯ ವಾದಾಗಲೆಲ್ಲಾ ನಮ್ಮ ತಾಯಿಯು ಜಿಟಿಕಿಯನ್ನು ಹಾಕುತ್ತಿದ್ದರು. ನನಗೆ ಬಾಣಂತಿ ಯಲ್ಲಿ ಪ್ರಾಪ್ತವಾಗುತ್ತಿದ್ದ ಕಾಪಿಲೆಗಳನ್ನು ನೋಡಿ ಮೂಢರಾದ ನಮ್ಮ ತಂದೆ ತಾಯಿಗಳು ಇದು ದೈವದ ಕಾಟನೆಂದೂ ಸವತಿಯರು ಈ ರೀತಿ ಕಾಡುತ್ತಿದ್ದಾರೆಂದೂ ನಿರ್ಧರಿಸಿಬಿಟ್ಟರು. ಇವರ ಈ ಊಹೆಯು ನನಗೆ ಬಹು ಕಷ್ಟಕ್ಕೆ ಕಾರಣವಾಯಿತು. ಬೆಳಗೆದ್ದರೆ, ಆ ಮಂತ್ರವಾದಿ, ಈ ಮಂತ್ರವಾದಿ, ಈ ಔಷಧ, ಆ ವೈದ್ಯ, ಈ ದೇವರ

ಹರಿಕೆ, ಮುತ್ತೈದೆಯ ಪ್ರಾರ್ಥನೆ, ಇತ್ಯಾದಿ ಪಗರಣಗಳಿಂದ ನನಗೆ ದಿಕ್ಕೇ ತೋಚದೆ ಹೋಯಿತು. ನನಗೆ ದಿನೇದಿನೇ ನಿಶ್ಯಕ್ತಿಯೇ ಹೆಚ್ಚುತ್ತ ಬಂತು. ಮಗುವಿನ ವಿಷಯ ವಂತೂ ಹೇಳಲಶಕ್ಯ. ಈ ರೀತಿಯಾದ ಕಟಪಟೆಯಿಂದ ನನ್ನ ಪ್ರಾಣಂತನವು ಬೇಗ ಮುಗಿಯಲೇ ಇಲ್ಲ. ಮೂರನೇ ತಿಂಗಳಲ್ಲಿ, ಐದನೇ ತಿಂಗಳಲ್ಲಿ, ಏಳನೇ ತಿಂಗಳಲ್ಲಿ, ಕಳುಹಿಸಿಕೊಡಬೇಕೆಂದು ಹರಪುರದಿಂದ ಕಾಗದ ಬರುತ್ತಲೇ ಇತ್ತು. ಏಳು ತಿಂಗಳಾ ಗುವವರೆಗೂ ನನ್ನ ಪ್ರಾಣಂತನವೂ ಮುಗಿಯಲಿಲ್ಲ. ಹರಪುರಕ್ಕೂ ಹೋಗಲಿಲ್ಲ. ನನ್ನ ಔಷಧಪಥ್ಯಗಳಿಗಾಗಿ ನಮ್ಮ ತಂದೆಗೆ ಬಹಳ ದ್ರವ್ಯವು ವ್ಯಯವಾಯಿತು. ಸಾಲ ದುದಕ್ಕೆ ಇದೇ ಸಮಯದಲ್ಲಿ ನಮ್ಮ ತಂದೆಯು ನೋಡುತ್ತಿದ್ದ ಕೆಲಸವೂ ತಪ್ಪಿ ಹೋಯಿತು. ಈಗ ನಮ್ಮ ತಂದೆತಾಯಿಗಳಿಗೆ ಜೀವನಕ್ಕೆ ಬಹು ತೊಂದರೆಯೂ ಪ್ರಾಪ್ತವಾಯಿತು. ಅವರ ಕಷ್ಟವನ್ನು ನೋಡಲಾರದೆ ನನ್ನ ವಶಕ್ಕೆ ನಮ್ಮ ಮನೆಯ ವರು ಕೊಟ್ಟಿದ್ದ ಕೆಲವು ರೂಪಾಯಿಗಳನ್ನು ಕೊಟ್ಟು ಅವರ ತೊಂದರೆಯನ್ನು ತಪ್ಪಿಸ ಬೇಕಾಯಿತು. ಅಲ್ಲದೆ ನಮ್ಮ ತಂದೆಗೆ ಆಗ ಅನುಕೂಲವಿರಲಿಲ್ಲವಾದ್ದರಿಂದ ಮಗು ವಿಗೆ ನಾನೇ ಒಂದೆರಡು ಒಡವೆಗಳನ್ನು ನಮ್ಮ ಯಜಮಾನರ ಋಣದಿಂದಲೇ ಮಾಡಿಸಿ ಇಟ್ಟೆನು. ಇಂತಹ ಕಷ್ಟಕಾಲವು ನಮ್ಮ ತಂದೆಗೆ ಸಂಭವಿಸಿದ್ದಾಗ್ಯೂ ನಮ್ಮ ತಾಯಿಯು ಮಾತ್ರ ಕಷ್ಟದಲ್ಲಿ ಸಹಾಯವಾಗಲೆಂದು ಐವತ್ತೈದು ರೂಪಾಯಿಗಳನ್ನು ಯಾರಿಗೂ ಕಾಣದಂತೆ ಇಟ್ಟುಕೊಂಡಿದ್ದರು. ನನ್ನನ್ನು ಒಂಭತ್ತನೇ ತಿಂಗಳಲ್ಲಿ ನಮ್ಮ ಯಜಮಾ ನರೇ ಬಂದು ನಮ್ಮ ತಂದೆತಾಯಿಗಳನ್ನು ನನ್ನೊಡನೆ ಒಟ್ಟಿಗೆ ಹರಪುರಕ್ಕೆ ಕರೆದು ಕೊಂಡುಹೋದರು. ಹರಪುರಕ್ಕೆ ಬಂದಮೇಲೆ ನಮ್ಮ ತಾಯಿಯು ತಮ್ಮ ವಶದಲ್ಲಿದ್ದ ಐವತ್ತೈದು ರೂಪಾಯಿಗಳನ್ನು ,, ಯಾರಿಗೂ ತಿಳಿಯದಂತೆ ನಿನ್ನ ವಶದಲ್ಲಿಟ್ಟು ಕೊಂಡಿರು '' ಎಂದು ಹೇಳಿ ನನ್ನ ಕೈಗೆ ಕೊಟ್ಟರು. ನಾನೂ ಅದನ್ನು ಬಹು ಗೂಢವಾಗಿ ನನ್ನ ಪೆಟ್ಟಿಗೆಯಲ್ಲಿಟ್ಟುಕೊಂಡೆನು.

V

ಶ್ರೀನಗರವು ಸುಪ್ರಸಿದ್ಧವಾದ ಪಟ್ಟಣ. ಈ ಪಟ್ಟಣದ ಸೌಂದರ್ಯವು ಪ್ರೇಕ್ಷಕರ ಕಣ್ಮನಗಳನ್ನು ಮುಗ್ಧಮಾಡುತ್ತಿರುವುದು. ಈ ಊರಿನ ಸುತ್ತಳತೆಯು ಹತ್ತು ಮೈಲಿಯಾಗುವುದು. ಊರಿನ ಮಧ್ಯದಲ್ಲಿ ವಿಸ್ತಾರವಾದ ಧೂಮಶಕಟಮಂದಿರ (ರೈಲ್ವೆಸ್ಟೇಷನ್) ವೊಂದುಂಟು. ಹರಪುರದಲ್ಲಿ ಬೆಳಗಿನ ಏಳು ಘಂಟೆಗೆ ಧೂಮಶಕಟವ ನ್ನೇರಿದರೆ ಹತ್ತು ಘಂಟೆ ಹೊತ್ತಿಗೆ ಶ್ರೀನಗರಕ್ಕೆ ತಲಪಬಹುದು. ಶ್ರೀನಗರದಲ್ಲಿ ಇಳಿ ಯದೆ ಮುಂದಕ್ಕೆ ಪ್ರಯಾಣಮಾಡಿದರೆ ಹನ್ನೆರಡು ಘಂಟೆಗೆ ರಂಗಪುರಿಗೆ ಹೋಗ

ಬಹುದು. ಈ ವಿಧವಾದ ಪ್ರಯಾಣಸೌಕರ್ಯವನ್ನು ಕಲ್ಪಿಸಿರುವವರು ಚಿರಸ್ಮರಣೀಯರೇ ಸರಿ. ಈ ಧೂಮಶಕಟವು ನಮ್ಮ ದೇಶಕ್ಕೆ ಬರುವುದಕ್ಕೆ ಮುನ್ನ ನಮ್ಮ ದೇಶೀಯರ ಪ್ರಯಾಣಸ್ಥಿತಿಗಳು ಅತ್ಯಂತ ಕಷ್ಟಕರಗಳಾಗಿದ್ದುವು. ಒಂದೂರಿನಿಂದ ಇನ್ನೊಂದೂರಿಗೆ ಹೋಗಬೇಕಾದರೆ ಮಾರ್ಗಗಳೇ ಸರಿಯಾಗಿರಲಿಲ್ಲ. ಒಂದೊಂದು ಗಾಡಿಗೆ ಎಷ್ಟೋ ಬಾಡಿಗೆಯನ್ನು ಕೊಡಬೇಕಾಗುತ್ತಿದ್ದಿತು. ಇಷ್ಟು ಕಷ್ಟದಿಂದ ಪ್ರಯಾಣಮಾಡಿಕೊಂಡು ಹೋಗುವಾಗ ಮಧ್ಯಮಾರ್ಗದಲ್ಲಿ ಕಳ್ಳಕಾಕರ ಭೀತಿ ಬೇರೆ. ಮತ್ತು ವಿಶೇಷವಾದ ಪದಾರ್ಥಗಳನ್ನು ದೂರ ದೇಶಕ್ಕೆ ಸಾಗಿಸುವುದಕ್ಕೆ ಆಗುತ್ತಲೇ ಇರಲಿಲ್ಲ. ಈ ಕಾರಣದಿಂದ ಅಲ್ಲಲ್ಲಿ ಬೆಳೆದ ಧಾನ್ಯಾದಿಗಳು ಅಲ್ಲಲ್ಲಿಯೇ ಉಳಿದುಕೊಳ್ಳುತ್ತಿದ್ದುವಲ್ಲದೆ ನಮಗೆ ಆವಶ್ಯಕವಾಗಿ ಬೇಕಾಗುವ, ದೂರದೇಶದಲ್ಲಿ ದೊರೆವ ಪದಾರ್ಥಗಳು ನಮಗೆ ದೊರಿಯುವುದು ಕಷ್ಟವಾಗಿದ್ದಿತು. ಮತ್ತು ದೂರ ದೇಶದೊಡನೆ ಆಗ ವ್ಯಾಪಾರವೆಂಬುದು ಶಶವಿಷಾಣ ಪ್ರಾಯವಾಗಿದ್ದಿತು. ಕ್ಲಾಮಡಾವರಾದಿಗಳು ದೇಶದಲ್ಲಿ ಪ್ರಾಪ್ತವಾದ ಆಗ ಆಗಣಕಾಲದ ಕಷ್ಟವನ್ನು ವರ್ಣಿಸತೀರದು. ಜನರಿಗೆ ಯಾವ ವಿಧದಲ್ಲಿಯೂ ಸರಿಯಾದ ಅನುಕೂಲ್ಯಗಳಿರಲಿಲ್ಲ. ಆಂಚೆಮನೆ ಬಂದಮೇಲೂ ಗಾಡಿಯ ರಸ್ತೆ ಬಂದಮೇಲೆಯೂ ಮೇಲೆ ವಿವರಿಸಿದ ಕಷ್ಟಗಳು ಸ್ವಲ್ಪ ಮಟ್ಟಿಗೆ ಕಮ್ಮಿಯಾದುವು. ಸರ್ವತ್ರವಿಸ್ತೃತಗತಿಯುಳ್ಳ ಈ ಧೂಮಶಕಟವು ಬಂದ ಮೇಲಂತೂ ದೇಶಕ್ಕೆ ಎಷ್ಟೋ ಸುಖವುಂಟಾಯಿತು. ದೇಶದ ಮೇಲೆ ವ್ಯಾಪಾರಾದಿಗಳು ವಿಶೇಷವಾಗಿ ಅಭಿವೃದ್ಧಿಯಾದುವು. ವಾಚಕರೆ! ಪ್ರಪಂಚದ ಎಲ್ಲಾ ಕಡೆಯಲ್ಲೂ ದೊರೆಯಬಹುದಾದ ಸಮಸ್ತ ವಿಧವಾದ ಪದಾರ್ಥಗಳೂ ಒಂದೇ ಊರಿನಲ್ಲಿ ಯಾವಕಾಲದಲ್ಲಿಯೂ ಸಿಕ್ಕಬಹುದಾದ ಜಮತ್ಕಾರವು ಧೂಮಶಕಟದ ಮಹಿಮೆಯಲ್ಲವೆ! ಆಸೇತ ಹಿಮಾಚಲಪರ್ಯಂತವಾಗಿ ಪ್ರಸರಿಸಿರತಕ್ಕ ಹಳ್ಳಿ-ನಗರಗಳೆಲ್ಲೆಲ್ಲಿಯೂ ಒಂದೇ ವಿಧವಾಗಿ ಪದಾರ್ಥಗಳ ಧಾರಣೆಯು ಮಾರ್ಪಟ್ಟಿರುವುದು ಹೊಗೇ ಗಾಡಿಯ ಪ್ರಚಾರದಿಂದಲೇ ಅಲ್ಲವೆ? ಮೈಲಿಯೊಂದಕ್ಕೆ ಎರಡೇ ಕಾಸಿನಂತೆ ದೇಶದ ಯಾವ ಕಡೆಯಲ್ಲಿ ಸುತ್ತುವುದಕ್ಕೂ ಅನುಕೂಲವನ್ನುಂಟುಮಾಡಿರುವುದು ರೈಲ್ವೇ ಅಲ್ಲವೆ? ಯಾವನಾದರೂ ಪೂರ್ವಕಾಲದಲ್ಲಿ ಕಾಶೀ ಯಾತ್ರೆ ಮಾಡುವುದೆಂದರೆ ಅವನು ಪರಲೋಕಕ್ಕೆ ಹೋದಂತೆಯೇ ಸರಿ. ಏಕೆಂದರೆ ಯಾತ್ರಿಕರು ಕಾಲುನಡಗೆಯಲ್ಲಿ ವರ್ಷಾಂತರಕಾಲ ಕಷ್ಟಪಟ್ಟು ಕಾಶಿಗೆ ಸೇರಬೇಕಾಗಿದ್ದಿತು. ಮಾರ್ಗಮಧ್ಯದಲ್ಲಿ ಎಷ್ಟೋ ಭಯಂಕರವಾದ ದುಃಖಗಳಿದ್ದುವು. ಇಂತಹ ದುರ್ಗಮವಾದ ಕ್ಷೇತ್ರ ಪ್ರಯಾಣದಿಂದ ಹಿಂತಿರುಗುವುದು ಎಷ್ಟು ಹಿಂಸೆಯ ವಿಚಾರವಿರಬಹುದು. ಇಂಥಾ

ಅವರ್ಣನೀಯ ವ್ಯಥೆಗಳನ್ನು ತಪ್ಪಿಸಿ ಸ್ವಲ್ಪವೇ ವೆಚ್ಚದಿಂದ ಒಂದೇ ಒಂದು ತಿಂಗಳೊಳಗಾಗಿ ಮಹಾಯಾತ್ರೆಗಳನ್ನು ಮಾಡಿಸಿ ಜನರನ್ನು ಪ್ರತಿಕ್ಷಣವೂ ಮುಕ್ತ್ಯಂಗನಾಲಿಂಗನ ಸುಖಕ್ಕೆ ಭಾಗಿಗಳನ್ನಾಗಿ ಮಾಡುತ್ತಿರುವುದಾವುದು? ರೈಲುಗಾಡಿಯಲ್ಲವೋ? ಇಂತಹ ರೈಲುಗಾಡಿಯನ್ನು ಕಂಡುಹಿಡಿದು ಲೋಕೋಪಕಾರಮಾಡಿದಂತಹ ಮಹಾತ್ಮನ ಬುದ್ಧಿಶಕ್ತಿಯು ಎಷ್ಟಿರಬಹುದು? ಆರ್ಥಸಾಧನೆಗೆ ಮೂಲ ಮಂತ್ರದಂತಿರುವ ಧೂಮಶಕಟನಿರ್ಮಾಣ ಕ್ರಮವನ್ನು ಕುರಿತು ನಮ್ಮ ಸೋದರರು ವಿಮರ್ಶೆಮಾಡಲಿ! ಇದರಂತೆಯೇ ಜಲಪಾತಗಳ ಮೂಲಕ ವಿದ್ಯುಚ್ಛಕ್ತಿಯನ್ನಾಕರ್ಷಿಸಿ ಹೊಗೆ ಹೊರಡದಿರುವ, ಎಣ್ಣೆಯನ್ನು ತುಂಬುವ ಮತ್ತು ಬತ್ತಿಯನ್ನಿಡುವ ಶ್ರಮವನ್ನು ಹೊಂದದೆ, ಒಬ್ಬರು ಹತ್ತಿಸಬೇಕೆಂಬ ತೊಂದರೆಯನ್ನುಂಟುಮಾಡದಿರುವ ದೀಪಗಳನ್ನು ನೋಡಿದರೆ ಬುದ್ಧಿಗೆ ಎಂತಹ ಶಕ್ತಿ ಇದೆಯೆಂಬುದು ಎಲ್ಲರಿಗೂ ಗೊತ್ತಾಗುವುದಲ್ಲವೆ? ಇಂತಹ ಸರ್ವೋತ್ತಮವಾದ ಬುದ್ಧಿಯನ್ನು ಪರಮಾತ್ಮನು ಸಮಸ್ತ ಮನುಷ್ಯರಿಗೂ ದಯಪಾಲಿಸಿರುವಾಗ ಅಂತಹ ಬುದ್ಧಿಯಿಂದ ಎಷ್ಟು ಲೋಕೋಪಕಾರಮಾಡಬಹುದೆಂಬುದು ಸರ್ವರ ಗಮನಕ್ಕೂ ಬರಲಿ. ಅಸಂಖ್ಯ ಜನಸಂಖ್ಯೆಯುಳ್ಳ ಈ ಭೂಲೋಕದಲ್ಲಿ ಕೋಟಿಗೊಬ್ಬ ಮನುಷ್ಯನ ಬುದ್ಧಿಯಾದರೂ, ರೈಲ್ಸ್, ವಿದ್ಯುಚ್ಛಕ್ತಿ ಮುಂತಾದ ನಿರ್ಮಾಣಕ್ರಮವನ್ನು ಹೊಸಹೊಸ ರೀತಿಯಿಂದ ವಿಧವಿಧ ವಸ್ತುಜಾತದಿಂದ ಕಂಡುಹಿಡಿವ ಶಕ್ತಿಯನ್ನು ಹೊಂದಿದುದಾದರೆ ಲೋಕದ ಪುಣ್ಯಕ್ಕೆ ಎಣೆಯೇ ಇಲ್ಲ.

ಇಂತಹ ಸಮಸ್ತ ಕಲಾ ಕೌಶಲ್ಯದಿಂದಲೂ ಶ್ರೀನಗರವು ತುಂಬಲ್ಪಟ್ಟಿದ್ದಿತು. ಅಲ್ಲದೆ ಇದು ರಾಜಧಾನಿ. ಮನೋಹರವಾದೀ ಪಟ್ಟಣದ ಮಧ್ಯಭಾಗದಲ್ಲಿ ಇಂದ್ರನ ಅರಮನೆಯನ್ನು ಮೀರಿಸುವ ಅರಮನೆಯೊಂದಿರುವುದು. ಚಂದ್ರಕಾಂತ ಶಿಲಾನಿರ್ಮಿತವಾದೀ ಅರಮನೆಯ ಮಹಾದ್ವಾರದ ಮುಂದುಗಡೆ ಒಂದು ಕ್ಷಣ ಯಾವನಾದರೂ ನಿಂತು ನೋಡಿದರೆ ಆ ಮನುಷ್ಯನ ಮನಸ್ಸಿನಲ್ಲಿ ಎಷ್ಟು ಯೋಜನೆಗಳಿದ್ದರೂ ಅವೆಲ್ಲವೂ ಮಲಿನವಾಗಿ ಅರಮನೆಯ ಸೌಂದರ್ಯವನ್ನು ಕುರಿತು ಯೋಚಿಸಲಾರಂಭವಾಗುವುದು. ಚಂದ್ರಕಾಂತ ಶಿಲೆಯಲ್ಲಿ ಕೆತ್ತಲ್ಪಟ್ಟ ಸುಂದರವಾಗಿ ಬಿಡಿಸಿ ನಿರ್ಮಿಸಿರುವ ವಿಧ ವಿಧ ದೇವ ಮೂರ್ತಿಗಳು ಮನಸ್ಸನ್ನು ಅಪಹಾರ ಮಾಡುವುವು. ಅರಮನೆಯ ಹೊರ ಸೊಬಗೇ ಇಂತಿರುವಲ್ಲಿ ಒಳಗಣ ವೈಭವವನ್ನು ಏನು ಹೇಳೋಣ. ಸುವರ್ಣ ಮಯಸ್ತಂಭಗಳಿಂದಲೂ ರತ್ನಮಯಕುಟ್ಟಿಮಗಳಿಂದಲೂ ವಿವಿಧ ಚಿತ್ರಗಳನ್ನೊಳಗೊಂಡಿರುವ ಮಹಾರಜತಮಯ ಭಿತ್ತಿಗಳಿಂದಲೂ, ಎಲ್ಲೆಲ್ಲಿ ನೋಡಿದರೂ ರತ್ನವೈಡೂರ್ಯ ಮರಕತ ವಿಕಾರಗಳಾದ ವರ್ಣಾಂತಗಳೇ ಕಂಗೊಳಿಸುವ ಆಸ್ಥಾನವೂ, ಇದಕ್ಕಿಂತ ಶತಾಧಿಕ ಪ್ರಕಾಶಗ

ಳುಳ್ಳ ಅಂತಃಪುರಗಳಿಂದಲೂ, ಕಿರುಮನೆಗಳಿಂದಲೂ ಕೂಡಿದ ವಿಲಾಸ ಭವನಗಳೂ, ಶಿಲ್ಪಿಯ ಕಲಾನೈಪುಣ್ಯವನ್ನು ಜಿನ್ನಾಗಿ ವ್ಯಕ್ತಪಡಿಸುತ್ತಿದ್ದುವು. ಅರಮನೆಯ ಮುಂಗಡೆ ವಿವಿಧ ಫಲ ಪುಷ್ಪದ್ರುಮಗಳಿಂ ಕಂಗೊಳಿಸುವ ಉದ್ಯಾನವನವೊಂದುಂಟು. ಇಂತಹ ಅರಮನೆಯ ಸುತ್ತಲೂ ದುರ್ಭೇದ್ಯವಾದ ಕೋಟೆಯಿರುವುದು. ಕೋಟೆಯ ಸುತ್ತಲೂ ಇರುವ ಪ್ರಾಂತಗಳಲ್ಲಿ ಲ್ಲಾ ಅಂಗಡಿಬೀದಿಗಳು, ಬ್ರಾಹ್ಮಣರ ಅಗ್ರಹಾರಗಳೂ, ಅಗ್ರಹಾರಗಳಿಗೆ ದೂರವಾಗಿ ಇತರ ಜಾತಿಯವರ ಬೀದಿಗಳೂ ಇರುವುವು. ಅಲ್ಲದೆ ಧನಿಕರನೇಕರ ವಿಲಾಸ ಭವನಗಳೂ ಮಹೋನ್ನತ ಹರ್ಮ್ಯಗಳಿಂ ವಿರಾಜಿತವಾದ ಮಂದಿರಗಳೂ ಈ ಪಟ್ಟಣದಲ್ಲಿ ಅಸಂಖ್ಯಾಕವಾಗಿ ರಾರಾಜಿಸುತ್ತಿರುವುವು.

ಇಂತಹ ನಗರದಲ್ಲಿ ವಾಸಮಾಡಲು ಆರಿಗೆ ತಾನೆ ಇಷ್ಟವಿರದು? ಯಾರು ತಾನೇ ಈ ನಗರದ ಸೌಂದರ್ಯಕ್ಕೆ ಬೆರಗಾಗದಿದ್ದಾರು? ಯಾರಿಗೆತಾನೇ ವಿಲಾಸಗಳಲ್ಲಿ ಅಭಿಲಾಷೆಯಿಲ್ಲ? ಸರ್ವಸಂಗಪರಿತ್ಯಾಗ ಮಾಡಿದ ವಿರಾಗಿಯೇ ಈ ವಿಧವಾದ ವಿಲಾಸಗಳಿಗೆ ಸೋತುಬಿಡುವನೆಂದ ಮೇಲೆ ಅಜಿತೇಂದ್ರಿಯರಾದವರ ಪಾಡು ಹೇಗಿರಬಹುದು? ‘‘ ಏಕೋವಾಸಃ ಪತ್ತನೇವಾ ವನೇವಾ. ’’

ನಮ್ಮ ತಂದೆ ತಾಯಿಗಳು ನಮ್ಮೂರಿನಲ್ಲಿ (ಹರಪುರದಲ್ಲಿ) ಒಂದೆರಡು ತಿಂಗಳಿದ್ದು ರಂಗಪುರಕ್ಕೆ ಪ್ರಯಾಣ ಮಾಡಿದರು. ಅವರು ಹರಪುರದಲ್ಲಿದ್ದಾಗಲೇ ನಮ್ಮ ಮನೆಯಲ್ಲಿ ಕೊಂಚ ಕೊಂಚ ಗೃಹ ಕಲಹಗಳಿಗೆ ಅಂಕುರವಾಗಿದ್ದಿತು. ನನ್ನ ತಂದೆ ತಾಯಿಗಳು ಪ್ರಯಾಣ ಮಾಡಿದಮೇಲೆ ಆ ಅಂಕುರವು ಸಣ್ಣ ಸಸಿಯಾಗಿ ಪರಿಣಮಿಸಿತು. (ನನ್ನ ಓರಗಿತ್ತಿಯನ್ನು ಇನ್ನುಮೇಲೆ ಅಕ್ಕನೆಂದು ಸಂಬೋಧಿಸುತ್ತಾ ಬರುವೆನು.) ನನ್ನ ಅಕ್ಕನಿಗೆ ಎರಡು ಗಂಡುಮಕ್ಕಳುಗಳಿವೆ. ನನ್ನ ಮಗುವಿಗೂ ಈಗ ಹತ್ತು ತಿಂಗಳಾಗಿದೆಯೆಂಬುದು ನಮ್ಮ ಸೋದರಿಯರಿಗೆ ತಿಳಿದೇ ಇದೆ. ನಮ್ಮ ಅತ್ತಮ್ಮನವರು ನಮ್ಮ ತಾತನವರ ಸಹಾಯಕ್ಕಾಗಿ ಅವರ ಜತೆಯಲ್ಲೇ ಯಾವಾಗಲೂ ಇರಬೇಕಾಗಿದ್ದುದರಿಂದಲೂ, ತಾತನವರು ನಿಯತವಾಗಿ ಶ್ರೀ ನಗರದಲ್ಲೇ ವಾಸಮಾಡಬೇಕಾಗಿದ್ದುದರಿಂದಲೂ, ಇದುವರಿಗೆ ನಮ್ಮ ಅಕ್ಕನು ಒಬ್ಬಂಟಿಗರಾಗಿದ್ದುದರಿಂದಲೂ, ನಮ್ಮ ಅತ್ತಮ್ಮನವರು ಶ್ರೀ ನಗರದಲ್ಲೂ ನಮ್ಮ ಅಕ್ಕನು ಹರಪುರದಲ್ಲೂ, ವಸಿಸುತ್ತಾ ಆಗಿಂದಾಗ್ಗೆ ಇಬ್ಬರೂ ಒಂದೊಂದು ಕಾಲದಲ್ಲಿ ಒಂದೇ ಕಡೆಯಲ್ಲೇ ಇರುತ್ತಲೂ ಇದ್ದರು. ನಮ್ಮ ತಾತನವರು ಆಗಿಂದಾಗ್ಗೆ ಶ್ರೀ ನಗರದಿಂದ ಹರಪುರಕ್ಕೆ ಬರಬೇಕಾಗುತ್ತಿದ್ದುದರಿಂದ ಸಂಸಾರ ಸ್ಥಿತಿಯು ಹೀಗೆಯೇ ಇತ್ತು.

ನಮ್ಮ ತಾತನವರಿಗೆ ಶ್ರೀ ನಗರದಲ್ಲಿ ಈಗ ಐವತ್ತು ರೂಪಾಯಿ ತಲಬು ಬರುತ್ತಿತ್ತು. ನಮ್ಮ ಭಾವನವರಿಗೆ ಹರವುರದಲ್ಲಿ ಮೂವತ್ತು ರೂಪಾಯಿಗಳು ತಲಬುಳ್ಳ ಪ್ರಧಾನೋಪಾಧ್ಯಾಯರ ಕೆಲಸವಿದ್ದಿತು. ನಮ್ಮ ಯಜಮಾನರಿಗೆ ಹತ್ತು ರೂಪಾಯಿಗಳುಳ್ಳ ಸಣ್ಣ ನೌಕರಿಯೊಂದಿದ್ದಿತು. ನಾನೂ ನನ್ನ ಅಕ್ಕನೂ ಹರವುರದಲ್ಲಿ ಸಂಸಾರ ಮಾಡುತ್ತಿದ್ದಾಗ ಒಬ್ಬರಮರ್ಜಿ ಇನ್ನೊಬ್ಬಳಿಗೆ ಸರಿಬೀಳುತ್ತಿರಲಿಲ್ಲ. ಆಹಾರ ವ್ಯವಹಾರಗಳಲ್ಲೂ ಶಿಶು ಪೋಷಣಾದಿ ಕಾರ್ಯಗಳಲ್ಲೂ ನಮ್ಮ ಅಕ್ಕನು ವಿಶೇಷ ಪಕ್ಷಪಾತ ಮಾಡುತಿದ್ದರು. ನಾನು ಕಿರೀ ಸೊಸೆಯಾದ್ದರಿಂದಲೂ ಅಷ್ಟು ಸ್ವಾತಂತ್ರ್ಯವಿಲ್ಲದ್ದರಿಂದಲೂ ನನ್ನ ಅಕ್ಕನು ಹೇಳಿದಂತೆ ಕೇಳುತಿದ್ದೆನು. ಆದರೆ ಒಂದೆರಡು ವಿಚಾರಗಳು ತಿಳಿದಮೇಲೆ ನನಗೆ ನನ್ನ ಅಕ್ಕನಮೇಲೆ ವಿಶೇಷ ಸ್ಪರ್ಧೆಯುಂಟಾಯಿತು. ಕೆಲಸ ಬೊಗಸೆಗಳನ್ನು ನಾನೇ ಮಾಡಲೆಂಬ ಅಭಿಪ್ರಾಯದಿಂದ ನನ್ನ ಅಕ್ಕನು ಕೆಲವುದಿನ ಕೆಲಸಗಳನ್ನು ನನ್ನ ಪಾಲಿಗೆ ಬಿಟ್ಟು ತಾವು ಅಡಿಗೆ ಕೆಲಸವನ್ನು ಇಟ್ಟು ಕೊಂಡರು. ಅದರಂತೆ ನಾನೂ ನಡೆಯುತ್ತಿದ್ದೆನು. ಆದರೊಂದು ದಿನ ನಾನು ಉಪಕರಣವನ್ನು ತೊಳೆದು ಒಳಗಿಡುವುದಕ್ಕೆಂದು ಬಂದೆನು. ಆಗ ಅಕ್ಕನವರು ಮಕ್ಕಳಿಗೆ ಹಾಲು ಕಾಸಿ ಕೆಳಗಳಿಸುತ್ತಿದ್ದರು. ನಾನು ನನ್ನ ಮಗುವಿಗೆ ಹಾಲು ಹಾಕಬೇಕೆಂದು ಆಗಲೇ ಹಾಲನ್ನು ಕೇಳಿದೆನು. ಒಂದು ಪಂಜಪಾತ್ರೆಯಲ್ಲಿದ್ದ ಹಾಲನ್ನು ಅಕ್ಕನು ನನ್ನ ವಶಕ್ಕೆ ಕೊಟ್ಟರು. ಅದನ್ನು ತೆಗೆದು ಕೊಂಡು ನೋಡಲು ತುಂಬಾ ನೀರು ಬೆರಸಿದ್ದಂತೆ ತೋರಿತು. ಬಳಿಕ ನಾನು ಅದನ್ನು ಅವರಿಗೇ ಕೊಟ್ಟು ಬೇರೆ ಪಾತ್ರೆಯಲ್ಲಿದ್ದ ಹಾಲನ್ನು ಕೊಡಬೇಕೆಂದು ಕೇಳಿದೆನು. ಅವರಿಗೆ ಅಷ್ಟಕ್ಕೇ ಕೋಪ ಬಂದು ಹಾಲಿನ ಪಾತ್ರೆಯನ್ನು ಎಸೆದು ಬಿಟ್ಟರು. ಅದನ್ನು ನೋಡಿ ನನಗೆ ಬಹು ದುಃಖವಾಯಿತು. ಅಂದಿನಿಂದ ಅವರು ನಾನು ಮಾಡತಕ್ಕ ಕೆಲಸಗಳಲ್ಲಿ ಏನಾದರೊಂದು ತಪ್ಪನ್ನು ಕಂಡು ಹಿಡಿಯುತ್ತಲೇ ಬಂದರು. ನಾನು ಸಹಿಸುವ ವರೆಗೂ ಸಹಿಸುತ್ತಿದ್ದೆನು. ಕ್ರಮೇಣ ನನಗೆ ಸಹನೆಯು ಕಮ್ಮಿಯಾಗುತ್ತ ಬಂದಿತು. ನಮ್ಮ ಅಕ್ಕನವರ ಈ ವರ್ತನಗಳನ್ನು ನಾನು ನಮ್ಮ ಯಜಮಾನರೊಡನೆ ಏಕಾಂತದಲ್ಲೊಂದು ದಿನ ಹೇಳಿದೆನು. ಅವರು ಅದನ್ನು ಗಮನಿಸದೆ ನನ್ನನ್ನೇ ಬೈದು ಹಿರಿಯರು ಹೇಳಿದಂತೆ ಕೇಳಿಕೊಂಡು ಬಿದ್ದಿರಬೇಕೆಂದು ಅಂದುಬಿಟ್ಟರು. ನನಗೆ ಅದನ್ನು ಕೇಳಿ ಆಕಾಶವೇ ಬಿದ್ದು ಹೋದಂತಾಯಿತು. ಇದೇರೀತಿ ಇನ್ನುಮುಂದೆ ಪಕ್ಷಪಾತಗಳೂ ಅಂತಃ ಕಲಹಗಳೂ ಹೆಚ್ಚುತ್ತ ಹೋದುವು. ಇದು ನಮ್ಮ ಯಜಮಾನರಿಗೆ ತಿಳಿದು ಕೆಲವು ತಿಂಗಳು ರಜವನ್ನು ಪಡೆದು ಶ್ರೀ ನಗರಕ್ಕೆ ಹೊರಟು ಹೋದರು. ಅವರ ಮನಸ್ಸಿನಲ್ಲಿ ಹರವುರವನ್ನು ಬಿಟ್ಟು ಶ್ರೀ ನಗರದಲ್ಲೇ ಇದ್ದರೆ ಸಂಸಾರದಲ್ಲಿ

ಕಲಹಗಳು ಹುಟ್ಟಲಾರದೆಂದು ಅಭಿಪ್ರಾಯವಿದ್ದುದರಿಂದ ಅದಕ್ಕಾಗಿಯೇ ಶ್ರೀನಗರಕ್ಕೆ ಹೊರಟು ಹೋದರು.

ಈಗ ಹರಪುರದಲ್ಲಿ ನಾನು ನನ್ನ ಅಕ್ಕ ಅವರ ಸಂಸಾರ, ನಮ್ಮ ಭಾವನವರು ಇಷ್ಟು ಮಂದಿ ಉಳಿದುಕೊಂಡೆವು. ನಮ್ಮ ಭಾವನವರು ಒಳ್ಳೇ ಸರಳ ಹೃದಯರು. ಅಲ್ಲದೆ ತುಂಬಾ ಸಾಧುಗಳು. ಒಬ್ಬರನ್ನು ಒಂದು ದಿನ ಗದರಿಸಿ ಕೊಳ್ಳುವವರಲ್ಲ. ಇಂತಹ ಸುಗುಣಿಗಳಾದ ಭಾವನವರಿಗೆ ನನ್ನ ಮತ್ತು ಅಕ್ಕನ ಅಂತಃಕಲಹಗಳು ತಿಳಿಯದೆ ಹೋಗಲಿಲ್ಲ. ಚಾಡಿಕೋರರು ಹೇಳಿದ ಮಾತನ್ನು ಕೇಳಿ ಅದರಂತೆ ನಡಿಯುವ ಹುಚ್ಚು ನಮ್ಮ ಭಾವನವರಲ್ಲಿ ಇಲ್ಲದ್ದರಿಂದಲೇ ನನ್ನ ಮೇಲೆ ನನ್ನ ಅಕ್ಕನು ವಿಧ ವಿಧವಾಗಿ ಹೇಳಿದ ದೂರುಗಳನ್ನು ಅವರು ಮನಸ್ಸಿಗೆ ನಿಜವೆಂದು ತಿಳಿದುಕೊಳ್ಳಲಿಲ್ಲ. ನಮ್ಮ ಭಾವನವರಿಗೆ ನಮ್ಮ ಯಜಮಾನರನ್ನು ಕಂಡರೆ ತುಂಬಾ ಪ್ರೀತಿ ಇದ್ದಿತು. ಅಲ್ಲದೆ ಅವರಿಗೆ ಚಿಕ್ಕಂದಿನಲ್ಲೇ ಎರಡು ವಿವಾಹವಾಗಿ ಆದು ಕೈ ಸೇರದೆ ಹೋಗಿ ಇಂತಹ ಕಷ್ಟವುಂಟಾಯಿತಲ್ಲಾ ಎಂಬ ಯೋಚನೆಯು ನಮ್ಮ ಭಾವನವರ ಮನಸ್ಸಿಗೆ ಹೊಳೆದಾಗ ಎಷ್ಟೋ ಕನಿಕರವುಂಟಾಗುತ್ತಿತ್ತು. ಅದೇ ಕನಿಕರವೇ ನಾದಿನಿಯಾದ ನನ್ನ ಮೇಲೂ ಇದ್ದಿತೆಂದುಹೇಳಿದರೆ ಅತಿಶಯೋಕ್ತಿಯಾಗಲಾರದು. ನನ್ನ ಅಕ್ಕನು ಗೃಹಕೃತ್ಯದಲ್ಲಿ ತುಂಬಾ ಪಳಗಿದವರು. ಪತಿಸೇವೆಯಲ್ಲಿ ಬದ್ಧಾದರರು. ಒಂದು ದಿನವೂ ಭಾವನವರ ಮನಸ್ಸಿಗೆ ಆಯಾಸವಾಗದಂತೆ ನಡೆದು ಕೊಳ್ಳುತ್ತಿದ್ದರು. ಶಿಶುಪೋಷಣೆಯಲ್ಲಿ ಅಕ್ಕನವರಿಗಿರುವಷ್ಟು ಅನುಭವವು ನನಗೆ ಇರಲಿಲ್ಲ. ಅಲ್ಲದೆ ಅಕ್ಕನು ಒಳ್ಳೆಯ ನೀತಿಪರರಾಗಿದ್ದರು. ಇಂತಹ ಸುಗುಣಿಗಳಾದ ಅಕ್ಕನವರು ನನ್ನಮೇಲೆ ಅವಿಶ್ವಾಸಿಗಳಾದುದು ನನ್ನ ದುರ್ದೈವವೋ ಅಥವಾ ನಾನು ಈ ಮನೆಗೆ ಪ್ರವೇಶ ಮಾಡಿದ ವೇಳೆಯ ಫಲವೋ ಹೇಳುವುದಕ್ಕಾಗುವುದಿಲ್ಲ.

VI

ನಮ್ಮ ಯಜಮಾನರು ಶ್ರೀನಗರಕ್ಕೆ ಹೊರಟುಹೋಗಿ ಎರಡು ತಿಂಗಳಾದರೂ ಅವರಯೋಗಕ್ಷೇಮವೇ ತಿಳಿಯಲಿಲ್ಲ. ಎರಡು ತಿಂಗಳು ಕಳದ ಮೇಲೆ ಅವರೊಂದು ಕಾಗದವನ್ನು ಬರೆದರು. ಆ ಕಾಗದದಿಂದ ನಮ್ಮ ಯಜಮಾನರಿಗೆ ಶ್ರೀನಗರದಲ್ಲೇ 25 ರೂಪಾಯಿ ತಲಬುಳ್ಳ ಒಂದು ಶಾಲೋಪಾಧ್ಯಾಯರ ಕೆಲಸವಾಗಿದೆಯೆಂದು ತಿಳಿದು ಬಂದಿತು. ನಮ್ಮ ಯಜಮಾನರು ಶ್ರೀನಗರಕ್ಕೆ ಪ್ರಯಾಣ ಮಾಡಿದ ಮೇಲೆ ನಾನೂ ಅಕ್ಕನೂ ಸರಿ ಹೋಗಿಸಿಕೊಂಡು ಅನ್ಯೋನ್ಯವಾಗಿ ಗೃಹಕಾರ್ಯಗಳನ್ನು ನಡೆಸಿಕೊಂಡು ಹೋಗುತ್ತಿದ್ದೆವು. ನಮ್ಮ ಮನೆಗೆ ಕಾಗದಬಂದ ೪ ದಿನದೊಳಗಾಗಿ ನಮ್ಮ

ಯಜಮಾನರು ಹರಪುರಕ್ಕೆ ಬಂದು ನನ್ನನ್ನೂ ಜತೆಯಲ್ಲಿ ಕರೆದುಕೊಂಡು ಶ್ರೀನಗರಕ್ಕೆ ಪ್ರಯಾಣ ಮಾಡಿದರು.

ಶ್ರೀನಗರದಲ್ಲಿ ನಮಗೆ ಸ್ವಂತಮನೆಯಿರುವ ವಿಷಯವು ಪಾಠಕಿಯರಿಗೆ ತಿಳಿದೇ ಇದೆ. ನಾವು ನಮ್ಮ ಮನೆಯಲ್ಲೇ ಇದ್ದುಕೊಂಡಿದ್ದೆವು. ನಮ್ಮ ಯಜಮಾನರು ಶ್ರೀನಗರದಲ್ಲಿರುವ ವಿಷಯದಲ್ಲಿ 'ನಮ್ಮ ತಾತನವರಿಗೆ ಅಭಿಪ್ರಾಯವಿರಲಿಲ್ಲ. ಆದರೂ ಹಠವಾದಿಗಳಾದ ನಮ್ಮ ಯಜಮಾನರು ತಾತನವರ ಮಾತನ್ನು ಅನಾದರಿಸಿ ಶ್ರೀನಗರದಲ್ಲೇ ಇದ್ದುಬಿಟ್ಟರು. ನಮ್ಮ ಮನೆಯವರು ಈರೀತಿಮಾಡಿದುದು ಮುಂದೆ ಬಹು ಅನರ್ಥಕ್ಕೆ ಮೂಲವಾಯಿತು.

ನಾವು ಶ್ರೀನಗರದಲ್ಲಿ ಒಂದು ವರ್ಷ ಕಾಲವನ್ನು ನೂಕಿದೆವು. ಅಷ್ಟರಲ್ಲಿ ನಮ್ಮ ಭಾವನವರಿಗೆ ಹರಪುರದಿಂದ ಶ್ರೀನಗರಕ್ಕೆ ವರ್ಗವಾಗಿ ಎಪ್ಪತ್ತು ರೂಪಾಯಿ ತಲಬುಳ್ಳ ಶಾಲಾಪರೀಕ್ಷಕರ (Schools' Assistant Inspector) ಅಧಿಕಾರವು ಪ್ರಾಪ್ತವಾಯಿತು. ಈ ವರ್ತಮಾನವನ್ನು ಕೇಳಿ ನಮ್ಮ ಮನೆಯವರೆಲ್ಲರಿಗೂ ತುಂಬಾ ಸಂತೋಷವುಂಟಾಯಿತು. ನನಗೂ ಸಹ ಇನ್ನುಮೇಲೆ ಎಲ್ಲರೂ ಒಟ್ಟಿಗೆ ಇರಬಹುದೆಂಬ ಆನಂದವು ಮಿತಿಮೀರಿ ಹೋಯಿತು. ಆದರೆ ನಮ್ಮೀ ಆನಂದವು ಮುಂದೆ ಕ್ರಮವಾಗಿ ಶಿಥಿಲವಾಗುತ್ತ ಬಂದಿತು.

ಭಾವನವರೂ ಸಂಸಾರದೊಡನೆ ಶ್ರೀನಗರಕ್ಕೆ ಬಂದು ಕೆಲಸದ ಮೇಲೆ ದಾಖಲಾದರು. ಇದೇ ಸಮಯದಲ್ಲಿ ನಮ್ಮ ಅತ್ತಮ್ಮನವರೂ, ತಾತನವರೂ, ಕಾಶೀಯಾತ್ರಾದಿ ಮಹಾಯಾತ್ರೆಗೆ ಹೊರಡಬೇಕೆಂದು ಸಂಕಲ್ಪಿಸಿ ಅದರಂತೆ ಪ್ರಯಾಣಮಾಡಿದರು. ಈಗ ಮನೆಯಲ್ಲಿ ನಮ್ಮ ಮತ್ತು ಅಕ್ಕನ ಸಂಸಾರ ಮಾತ್ರವೇ ಇದೆ.

ಮಾತೃ ಭೂಮಿಯಾದ ಹರಪುರದಲ್ಲಿ ಈಗ ಯಾರೂ ಇಲ್ಲ. ತಾತನವರಂತೂ ನಮ್ಮ ಯಜಮಾನರನ್ನು ಹರಪುರಕ್ಕೆ ಹೋಗುವ ವಿಷಯದಲ್ಲಿ ಎಷ್ಟೋ ಪ್ರೋತ್ಸಾಹಿಸಿದರು. ಅವರು ಲಕ್ಷಿಸಲಿಲ್ಲ. ಭಾವನವರು, ತಮ್ಮನನ್ನು ಕುರಿತು, ಹರಪುರಕ್ಕೆ ಹೋಗಿ ಯಾರಾದರೊಬ್ಬರು ಅಲ್ಲಿ ವಾಸಿಸದಿದ್ದರೆ ಮನೆ, ಭೂಮಿಗಳು ನೋಡುವವರಿಲ್ಲದಂತಾಗುತ್ತದೆ ಯಾದುದರಿಂದ ಅಲ್ಲಿ ಹೋಗಿರುವದು ಒಳ್ಳೆಯದೆಂದೂ ನಾವುಗಳು ಎಲ್ಲರೂ ಇಲ್ಲಿಯೇ ಇದ್ದು ಬಿಟ್ಟರೆ ಸ್ಥಳದಲ್ಲಿ ತುಂಬಾ ನಷ್ಟವುಂಟೆಂದೂ ಮುಂತಾಗಿ ನಮ್ಮ ಯಜಮಾನರೊಡನೆ ನೀತಿಯನ್ನು ಹೇಳಿದರು. ಭಾವನವರು ಪೂರ್ವಾಪರವಿವೇಚನೆಯುಳ್ಳವರು. ಅಲ್ಲದೆ ದೇಶಭಾಷೆಯಲ್ಲಿ ಪದವೀಧರರಾಗಿ ಪಂಡಿತರೆನಿಸಿಕೊಂಡಿದ್ದರು. ಯುಕ್ತಾಯುಕ್ತ ವಿವೇಚನಾಜ್ಞಾನವು ಅವರಿಗೆ ಸಂಪೂರ್ಣವಾಗಿದ್ದಿತು.

ಇಂತಹ ಅಂಣಂದಿರು ಎಷ್ಟೋ ವಿಧದಲ್ಲಿ ನೀತಿ ಹೇಳಿದಾಗ್ಯೂ ನಮ್ಮ ಯಜಮಾನರು ತಮ್ಮ ಹಟವನ್ನು ಬಿಡಲೇ ಇಲ್ಲ. ಇಷ್ಟಾದಮೇಲೆ ಭಾವನವರು ಅವರವರು ಮನಸ್ಸು ಬಂದಂತೆ ಅವರವರು ಇದ್ದುಕೊಳ್ಳಲಿ; ಎಂದು ಹೇಳಿ ಸುಮ್ಮನಾಗಿಬಿಟ್ಟರು.

ಅಕ್ಕನವರು ಶ್ರೀ ನಗರಕ್ಕೆ ಬಂದಮೇಲೆ ಒಳ್ಳೊಳ್ಳೆಯ ಬಟ್ಟೆಗಳನ್ನು ಮಕ್ಕಳಿಗೆ ತೆಗೆಯುತ್ತಲೂ ತಾವುಒಳ್ಳೆಯ ಸೀರೆಗಳನ್ನುಟ್ಟುಕೊಳ್ಳುತ್ತಲೂ ಇದ್ದುದನ್ನು ನೋಡಿ ನಾನು ಅದರಂತೆ—ಅದಕ್ಕಿಂತಲೂ ಹೆಚ್ಚಾಗಿರಬೇಕೆಂದು ಯೋಚಿಸಿ ನಮ್ಮ ಯಜಮಾನರನ್ನು ಕೇಳಿಕೊಂಡೆನು. ನಾನು ಹೇಳಿದ ವೆಚ್ಚವು ನೂರು ರೂಪಾಯಿಗಳು ಮೀರುದ ವ್ಯಯವಾಗಿದ್ದುದರಿಂದ ಅವರು ಅದನ್ನು ಮೊದಲು ಲಕ್ಷಿಸಲಿಲ್ಲ. ನಾನಾದರೂ ಅಷ್ಟಕ್ಕೆ ಸುಮ್ಮನಾಗದೆ, ನಮ್ಮ ಯಜಮಾನರನ್ನು ವಿಶೇಷವಾಗಿ ತೊಂದರೆ ಪಡಿಸುವುದು ಸರಿಯಲ್ಲವೆಂಬ ಧರ್ಮವನ್ನೂ ಗಣನೆಗೆ ತಾರದೆ ಮತ್ತು ಮತ್ತು ಮನಸ್ಸಿಗೆ ಬೇಸರವಾಗುವಂತೆ ಎರಡು ಮೂರು ಬಾರಿ ಯಜಮಾನರನ್ನು ಕೇಳಿ ಬಿಟ್ಟೆನು. ಈ ನನ್ನ ವರ್ತನದಿಂದ ಯಜಮಾನರಿಗೆ ಕೋಪಬಂದಿರಬಹುದು. ಆದರೆ ಅವರ ಸ್ವಭಾವವು ನನಗೆ ತಿಳಿಯಲಿಲ್ಲ. ಆದರೂ ಬಹು ಸಹನೆಯಿಂದ ಸುಮ್ಮನೆ ಇರುತ್ತಿದ್ದರು. ಅಂತೂ ನನ್ನ ಅಭಿಲಾಷೆಯು ನೆರವೇರಲಿಲ್ಲ. ನನಗೆ ದಿನೇದಿನೇ ಕಂಡಕಂಡ ಶ್ರೀಮಂತರ ಮನೆ ಹೆಂಗಸರನ್ನು ನೋಡಿದಾಗಲೆಲ್ಲಾ ಅವರ ಉಡುಪು, ಆಭರಣಗಳ ವಿಚಾರದಲ್ಲಿ ಮರುಕು ಪತ್ತಿ ಅದಕ್ಕಿಂತಲೂ ಹೆಚ್ಚಾಗಿದ್ದು ಬಿಡಬೇಕೆಂಬ ಹುಚ್ಚು ಹೆಚ್ಚಾಗಿ ಹೋಯಿತು. ನನ್ನ ಮನಸ್ಸಮಾಧಾನ ಮಾಡಬೇಕಾಗಿದ್ದರೆ ಸುಮಾರು ಎರಡು ಸಾವಿರ ರೂಪಾಯಿ ಗಳನ್ನು ನಮ್ಮ ಯಜಮಾನರು ವೆಚ್ಚಮಾಡಬೇಕಾಗಿತ್ತು. ನನ್ನ ಮನಸ್ಸಿನಲ್ಲಾದರೋ, ಈ ಕೆಲಸವು ನಮ್ಮ ಯಜಮಾನರಿಂದ ಆಗುವುದೇ, ಇಲ್ಲವೇ ಎಂಬ ಭಾವನೆಯು ಸಕೈದಾವರ್ತಿಯಾದರೂ ಸ್ಫುರಿಸದೆ ಹೋದುದು. ನಮ್ಮ ಯಜಮಾನರು ನಾನು ಹುರುಡಿನಸೀರೆ, ಒಡವೆಗಳ ಪ್ರಸ್ತಾಪವನ್ನೆತ್ತಿದಾಗಲೆಲ್ಲಾ ಎಷ್ಟೋ ವಿಧವಾಗಿ ನೀತಿ ಯನ್ನು ಹೇಳುತ್ತಿದ್ದರು. ಈ ಸೀರೆ, ಒಡವೆ ಮುಂತಾದ ಪದಾರ್ಥಗಳೆಲ್ಲವೂ ಮನ ಸ್ಸನ್ನು ಹಾಳುಮಾಡುತಕ್ಕುದಾಗಿಯೂ ಬುದ್ಧಿಯನ್ನು ಕೆಡಿಸಿತಕ್ಕುದಾಗಿಯೂ, ನಾಶವಾಗತಕ್ಕ ಸ್ವಭಾವವುಳ್ಳುದಾಗಿಯೂ ಇರುವುದು. ಆದುದರಿಂದ ಸುಶೀಲೆಯಾದ ಹೆಂಗಸು ತುಚ್ಛವಾದ ಈ ಒಡವೆಗಳಿಗೆ ಆಶಿಸದೆ, ತನಗೆ ಅಮೂಲ್ಯಾಭರಣದಂತಿರುವ ಪತಿದೇವನ ಪ್ರಸಾದವನ್ನು ನಿರೀಕ್ಷಿಸುವುದೇ ಅವಳಿಗೆ ದೊಡ್ಡ ಒಡವೆಯೆಂದು ಎಷ್ಟೋ ನೀತಿಯನ್ನು ಹೇಳಿದರು. ನನಗೆ ಆಗ ಯಾವದೈವವು ಪಿಡಿದಿತ್ತೋ ತಿಳಿಯದು. ನಮ್ಮ ಯಜಮಾನರು ಹೇಳಿದ ನೀತಿಯೊಂದೂ ನನ್ನ ಮನಸ್ಸಿಗೆ ಪಿಡಿಯಲೇ ಇಲ್ಲ. ಹೇಳಿ

ಹೇಳಿ ಬೇಜಾರಾಗಿ ನಮ್ಮ ಯಜಮಾನರು ನನ್ನ ವಿಷಯದಲ್ಲಿ ಬಹಳ ಅಸಮಾಧಾನವನ್ನು ಪ್ರದರ್ಶಿಸುತ್ತಿ ಬಂದರು. ಆಗಲೂ ನಾನು ಅವರ ಮನಸ್ಸಿಗೆ ಬಹು ಕ್ಲೋಭೆಯನ್ನುಂಟುಮಾಡುವುದನ್ನು ಬಿಡಲಿಲ್ಲ. ನನಗೆ ಆಗ ಏನೋ ಅಜ್ಞಾನವು ಕವಿದುಕೊಂಡು ನನ್ನ ಪತಿಯು ನನ್ನನ್ನು ಎಷ್ಟು ತಿರಸ್ಕರಿಸಿದರೂ ಅದನ್ನು ಲಕ್ಷಿಸದೆ ಪ್ರತಿಭಟಿಸುವಂತಹ ಮೌರ್ಖ್ಯವು ಪ್ರಾಪ್ತವಾಗಿದ್ದಿತು.

ನನ್ನ ಹುಚ್ಚಾಟವನ್ನು ಕಂಡು ನನ್ನ ಅಕ್ಕ—ಭಾವ ಮುಂತಾದವರಿಗೆಲ್ಲಾ ಒಂದು ವಿಧವಾದ ಹಾಸ್ಯಕ್ಕೆ ಕಾರಣವಾಯಿತು. ನನ್ನ ಅಕ್ಕನು ಮನೆಯಲ್ಲಿ ಹೇಗೆಹೇಗೆ ವರ್ತಿಸುವರೋ ನಾನು ಹುರುಡಿನಂತೆ ಅವರ ಕೆಲಸಗಳನ್ನು ಅನುಕರಣಮಾಡತೊಡಗಿಸಿದೆನು. ಈ ನನ್ನ ಆಟವನ್ನು ನೋಡಿ ಅಕ್ಕನಿಗೆ ಕೋಪಬಂದಿತು. ಅವರು ನನಗೆಷ್ಟೋ ನೀತಿಯನ್ನು ಪದೇಶಿಸಿದರು. ನನಗೆ ಒಂದೂ ಪಿಡಿಯಲೇ ಇಲ್ಲ. ಕ್ರಮ ಕ್ರಮವಾಗಿ ನನ್ನ ಅಕ್ಕನು ನನಗೆ ನೀತಿ ಹೇಳುವುದನ್ನು ಬಿಟ್ಟು ಬಿಟ್ಟರು. ಮತ್ತು ನನ್ನನ್ನು ಲಕ್ಷಿಸದೆ ಸಮಸ್ತವಾದ ಮನೆಗೆಲಸಗಳನ್ನೂ ತಾವೇ ನಿರ್ವಹಿಸುತ್ತ ಬಂದರು. ತಮ್ಮ ಮಗುವಿಗೆ ನೀರು ಹಾಕಬೇಕಾಗಿರಲಿ ತಾವೇ ಎರದು ಕೊಳ್ಳಬೇಕಾಗಲೀ ಯಾವುದಕ್ಕೂ ನನ್ನನ್ನು ಲಕ್ಷಿಸದೆ ಇನ್ನಾರಾದರೂ ಹೆಂಗಸರನ್ನು ಕರೆದು ಅವರ ಕೈಲಿಮಾಡಿಸುತ್ತಾ ಬಂದರು. ನನಗೆ ವಿಶೇಷಕೋಪಬಂದು ಕೆಲಸ ಮಾಡುವುದನ್ನು ಬಿಟ್ಟೇಬಿಟ್ಟು ಕಸೂತಿ ಹಾಕುವುದಕ್ಕೆ ಆರಂಭಮಾಡಿದೆನು. ನಮ್ಮ ಯಜಮಾನರೂ ನನಗೆ ಹೀಗಿರುವುದು ಸರಿಯಲ್ಲವೆಂದು ವಿಧವಿಧವಾಗಿ ಬೋಧಿಸಿದರು. ನನಗೆ ಯಾವುದೂ ಮನಸ್ಸಿಗೆರುಚಿಸಲಿಲ್ಲ. ನಾನು ಈರೀತಿ ಮಂಕುಪಿಡಿದವಳಂತೆ ಆದುದನ್ನು ಕಂಡು ಮನೆಯವರೆಲ್ಲರೂ ನನ್ನ ವಿಷಯದಲ್ಲಿ ಬಹುವಾಗಿ ಅಸಮಾಧಾನಪಟ್ಟುಕೊಳ್ಳುತ್ತಿದ್ದರು. ಹೀಗೆಯೇ ಮೂರು ತಿಂಗಳಾಯಿತು.

ಅತ್ತಮ್ಮನವರೂ ತಾತನವರೂ ಯಾತ್ರೆಯನ್ನು ಮುಗಿಸಿಕೊಂಡು ಊರಿಗೆ ಬಂದರು. ಮನೆಗೆ ಬಂದಮೇಲೆ ನಾವು ಓರಗಿತ್ತಿಯರಿಬ್ಬರೂ ಇರುವ ಸ್ಥಿತಿಯನ್ನು ಕಣ್ಣಾರ ನೋಡಿ ಕ್ರಮವಾದ ಸ್ಥಿತಿಯಲ್ಲಿರಬೇಕೆಂದು ಆಕ್ಷೇಪಿಸಲಾರಂಭಿಸಿದರು. ನಮ್ಮಿಬ್ಬರಿಗೂ ಗಂಡಂದಿರ ಬಲವಿರುವಾಗ ನಾವು ಅತ್ತೆಯ ಮಾತನ್ನೇಕೆ ಗಣಿಸಬೇಕೆಂಬ ಭಾವನೆಯು ಉತ್ಪನ್ನವಾದುದು. ಈ ಭಾವನೆಯು ನನ್ನ ಅಕ್ಕನ ಮನಸ್ಸಿನಲ್ಲಿದ್ದಿತೋ ಇಲ್ಲವೋ ನನಗೆ ತಿಳಿಯದು. ಇತರರ ವಿಷಯದಲ್ಲಿ ಸ್ವತಂತ್ರವಾಗಿ ಮಾತನಾಡುವಷ್ಟು ಶಕ್ತಿಯು ನನಗಿಲ್ಲ. ನಮ್ಮ ಅತ್ತೆಯು ನಮ್ಮ ವರ್ತನಗಳನ್ನು ಒಂದೆರಡು ತಿಂಗಳು ಕಾಲ ನೋಡಿದರು. ಹತೋಟಿಗೆ ಬರುವಂತೆ ತೋರಲಿಲ್ಲ. ಇನ್ನು ಹೀಗೆಯೇ ಒಟ್ಟಿಗೆ

ಒಂದೇ ಸಂಸಾರದಲ್ಲಿ ಎಲ್ಲರೂ ಇದ್ದರೆ ಪರಸ್ಪರ ವೈಷಮ್ಯಕ್ಕೆ ಕಾರಣವಾದೀತೆಂದು ಎಲ್ಲರಿಗೂ ಗೊತ್ತಾಯಿತು. ನಮ್ಮ ಯಜಮಾನರು ಹಿರಿಯರ ಮಾತನ್ನು ಮೀರದೆ ಹರಪುರಕ್ಕೆ ಹೊರಟು ಹೋಗಿದ್ದರೆ ಈ ವಿಧವಾದ ಅವಾಂತರಗಳಾಗುತ್ತಿರಲಿಲ್ಲ. ಹಾಗೆ ಮಾಡದಿದ್ದುದು ಬಹು ಅನರ್ಥಕ್ಕೆ ಮೂಲವಾಯಿತು.

ಸಂಸಾರದಗುಟ್ಟು, ವ್ಯಾಧಿರಟ್ಟು, ಎಂಬ ಲೋಕೋಕ್ತಿಯಂತೆ ತಮ್ಮ ತಮ್ಮ ಸಂಸಾರ ಸ್ಥಿತಿಯನ್ನು ಇತರರಿಗೆ ಹೇಳುವುದು ಅವಿವೇಕವಾದ ಕೆಲಸವೆಂಬ ವಿಷಯವು ನನಗೆ ಗೊತ್ತಿದೆ. ಅದರೆ ನಾನು ನಮ್ಮ ಸಂಸಾರದ ರಹಸ್ಯವನ್ನು ಬಹಿರಂಗ ಪಡಿಸುವು ದಕ್ಕಾಗಿ ಈ ಕಥೆಯನ್ನು ಬರೆಯುತ್ತಿಲ್ಲ. ಕಿಂತು–ಲೋಕದಲ್ಲಿ ಇಂತಹ ಅಂತಃಕಲಹ ಗುಳುಳ್ಳ ಸಂಸಾರಗಳು ಅನೇಕವಾಗಿರುವುವೆಂಬುದನ್ನು ತೋರ್ಪಡಿಸುವುದಕ್ಕಾಗಿಯೂ ಭರತಖಂಡದಲ್ಲೆಲ್ಲೆಲ್ಲಿಯೂ ಸಮಸ್ತ ಸಂಸಾರವೂ ಶಾಂತಿಯಿಂದ ವರ್ತಿಸುವಂತೆ ಈ ಕಥೆಯಿಂದ ಸಾಧ್ಯವಾದೀತೇ ಎಂಬ ಮಾದರಿಯನ್ನು ತಿಳುವುದಕ್ಕಾಗಿಯೂ ವಿಷಯಗಳು ಪ್ರತಿಪಾದಿಸಲ್ಪಟ್ಟಿವೆ. ಮತ್ತು ನನ್ನಂತಹ ಹುರುಡುಮಾಡುವಂತಹ ತರುಣಿಯರು ಎಷ್ಟೋ ಮಂದಿ ಈ ಲೋಕದಲ್ಲಿ ಇರುವರೆಂಬುದನ್ನು ಅನೇಕ ತರುಣಿಯರು ತಮ್ಮ ತಮ್ಮ ಪತಿಗ ಳನ್ನು ತಮ್ಮ ಅಜ್ಞೆಗೆ ಅಧೀನರನ್ನಾಗಿ ಮಾಡಿ ಕೊಳ್ಳಲು ಪ್ರಯತ್ನಿಸುತ್ತಿರುವರೆಂಬುದ ನ್ನೂ, ಅದರಂತೆಯೇ ಪತ್ನಿಯರಿಗೆ ಸ್ವಾಧೀನರಾಗಿ ನಡೆಯುತ್ತಿರುವ ಅನೇಕ ಮನುಜರು ಈ ದೇಶದಲ್ಲಿ ವಿಶೇಷವಾಗಿರುವರೆಂಬುದನ್ನೂ ನಾನು ಕೇಳಿ, ನೋಡಿಬಲ್ಲೆನು. ಅಂದರೆ ಹೆಂಡತಿಯರ ಮಾತನ್ನು ಗಂಡಂದಿರು ಕೇಳಲೇ ಬಾರದೆಂಬುದು ನನ್ನ ತಾತ್ಪರ್ಯವಲ್ಲ. ನೀರಕ್ಷೀರ ನ್ಯಾಯದಂತೆ ಅನ್ಯೋನ್ಯವಾಗಿ ಯುಕ್ತಿ ಯುಕ್ತವಾದ ವಿಷಯಗಳನ್ನು ಒಬ್ಬರಿಗೊಬ್ಬರು ಹೇಳಿ ಕೊಡುತ್ತಾ ಪುಣ್ಯವಂತರೆನಿಸಿಕೊಂಡು ಲೋಕಕ್ಕೆ ಮಾದರಿ ಯಾದ ದಂಪತಿಗಳಾಗಿ ಎಲ್ಲರೂ ಪರಿಣಮಿಸಬೇಕೆಂಬುದೇ ನನ್ನ ಕುತೂಹಲ. ನನ್ನೀ ಅಭಿಸ್ರಾಯವನ್ನು ಅನುಮೋದಿಸುವವರು ಅನುಮೋದಿಸಲಿ. ಎಲ್ಲರಿಗೂ ಬುದ್ಧಿ ಹೇಳಿ ಕಲಿಸುವುದಕ್ಕೆ ನನ್ನಿಂದ ಸಾಧ್ಯವಿಲ್ಲ.

VII

ನಮ್ಮ ಸಂಸಾರವು ವಿಷಮವಾಗಿಯೇ ನಡೆಯುತ್ತಿತ್ತು. ಹೀಗೆಯೇ ಕೆಲವು ದಿನಗಳು ಕಳೆದು ಹೋದವು. ನಮ್ಮ ಯಜಮಾನರು ಹರಪುರಕ್ಕೆ ಹೊರಡುವ ಯೋಚ ನೆಯನ್ನುಮಾಡಲೇ ಇಲ್ಲ. ಅದೇನು ದೈವಮಾಯೆಯೋ; ನಮ್ಮ ಗೃಹಕೃತ್ಯದಲ್ಲಿ ಅನಿ ರ್ವಚನೀಯವಾದೊಂದು ವಿಷಲತೆಯು ಹಬ್ಬಿ ವ್ಯಾಪಿಸುತ್ತ ಬಂದಿತು. ಲತೆಯು ಇನ್ನೂ ಚೆನ್ನಾಗಿಬಲಿತು ಹಬ್ಬಿರಲಿಲ್ಲ. ಆಷ್ಟರಲ್ಲೇ ನಾವು ಆಲತೆಯನ್ನು ಕಿತ್ತು ನಿರ್ಮೂಲ

ಮಾಡಿಬಿಟ್ಟೆವು. ಆ ವಿಷಲತೆಯ ಜತೆಯಲ್ಲೇ ನನಗೆ ಪ್ರಾಪ್ತವಾಗಿದ್ದ ಹುರುಡು, ಅಜ್ಞಾನ, ಮೌರ್ಖ್ಯವೆಂಬ ಶತ್ರುತ್ರಯಗಳೂ ನಾಶವಾಗಿ ಹೋದುವು. ವಿಷಲತೆಯು ನಾಶವಾದ ಬಗೆಯನ್ನೂ, ಶತ್ರುತ್ರಯನಿರ್ಮೂಲನದ್ವಾರಾಶಾಂತಿಸಾಮ್ರಾಜ್ಯಸ್ಥಾಪನೆಯಾದ ವಿಷಯವನ್ನೂ, ಈಗ ವಿಸ್ತಾರವಾಗಿ ವರ್ಣಿಸುತ್ತೇನೆ. ಪಾಠಕಿಯರು ಪರಿಸಬೇಕು.

ನಮ್ಮ ಭಾವನವರಿಗೆ 75 ರೂ|| ತಲಬು ಬರುವುದೆಂಬುದನ್ನು ಹಿಂದೆಯೇ ತಿಳಿಸಿದೆಯಷ್ಟೆ? ಮನೆಯ ವೆಚ್ಚಕ್ಕೆ ಮೂವತ್ತು ರೂಪಾಯಿಗಳು ಖರ್ಚಾದರೂ ಕಡಮೆ 45 ರೂಪಾಯಿಗಳು ಪ್ರತಿತಿಂಗಳೂ ಮಿಗುತ್ತಿತ್ತು. ನಮ್ಮ ಭಾವನವರು ಹಣವನ್ನು ಸೇವಿಂಗ್ಸ್‌ಬ್ಯಾಂಕಿನಲ್ಲಾಗಲೀ ಇತರ ವಿಧವಾದ ಬಡ್ಡಿಗಾಗಲೀ ಕೊಡುತ್ತಿರಲಿಲ್ಲ. ಈ ಕಾರಣದಿಂದ ಸಿಲುಕಾಗಿ ಉಳಿವ ಮೊಬಲಗನ್ನು ಪೆಟ್ಟಿಗೆಯಲ್ಲಿಟ್ಟು ಬೀಗವನ್ನು ಹಾಕಿಕೊಂಡು ಆದರ ಬೀಗದಕಯ್ಯನ್ನು ಹೆಂಡತಿ (ನಮ್ಮ ಅಕ್ಕ)ಗೆ ಮಾತ್ರ ತಿಳಿಯುವಂತೆ ರಹಸ್ಯವಾದೊಂದು ಪ್ರದೇಶದಲ್ಲಿ ಇಡುತ್ತಿದ್ದರಂತೆ? ಮತ್ತು ವಿಶೇಷವಾಗಿ ಹಣವೇ ನಾದರೂ ಖರ್ಚಾಗಬೇಕಾಗಿದ್ದರೆ ನಮ್ಮ ಅಕ್ಕನಾಗಲೀ ಭಾವನವರಾಗಲೀ ಪೆಟ್ಟಿಗೆ ಬಾಗಿಲು ತೆರೆದು ಆವಶ್ಯಕವಾದಷ್ಟು ಹಣವನ್ನು ತೆಗೆದುಕೊಂಡು ಅದನ್ನು ಲೆಖ್ಖಕ್ಕೆ ಬರೆದುಕೊಂಡು ಬೀಗದಕಯ್ಯನ್ನು ನಿರ್ದಿಷ್ಟಸ್ಥಾನದಲ್ಲಿ ಇರಿಸುತ್ತಿದ್ದರಂತೆ? ಮತ್ತು ಆ ಪೆಟ್ಟಿಗೆಯನ್ನು ಇರಿಸಿರುವ ಚಿಕ್ಕಮನೆಯಲ್ಲಿ ಯಾವಾಗಲೂ ಯಾರಾದರೊಬ್ಬರು ನಮ್ಮ ಅಕ್ಕನ ಕಡೆಯವರಾಗಿ ಇರುತ್ತಲೇ ಇದ್ದರು. ಯಾರೂ ಇಲ್ಲದನೇಳೆಯಲ್ಲಿ ಚಿಕ್ಕಮನೆಗೆ ಬೀಗ ಹಾಕಿಕೊಂಡು ಹೋಗುವ ಪದ್ಧತಿಯನ್ನಿಟ್ಟು ಕೊಂಡಿದ್ದರು. ಈ ಕಾರಣದಿಂದ ನಮ್ಮ ಅಕ್ಕ, ಭಾವ, ಅವರಕಡೆ ಮಡುಗರು ಏನಾ ಇತರರು ಅವರ ಕೊರತೆಗೆ ಪ್ರವೇಶಮಾಡಲಸಾಧ್ಯವಾಗಿದ್ದುದುಂದ ಅವರ ಒಟ್ಟೆ, ಒಡವೆ, ಹಣಗಳು ಸುರಕ್ಷಿತವಾಗಿಯೇ ಇರುತ್ತಿದ್ದವು. ಇಂತಿರಲು ನಮ್ಮ ಅಕ್ಕನ ಮಗುವಿಗೆ ವರುಷ ದಮೆಚ್ಚಿನದಿನವು ಬಂದಿತು. ಆದಿನ 40–50 ಮಂದಿಗೆ ಊಟಕ್ಕೆ ಮೇಳಿ ದಿವ್ಯವಾದ ಸಂತರ್ಪಣೆಯನ್ನು ಮಾಡಿಸಿದರು. ಈ ಉತ್ಸವಕ್ಕಾಗಿ ಸುಮಾರು ಅವರು ಐವತ್ತುರೂ ಪಾಯಿಗಳ ಮೇಲೆಯೇ ಬೆಚ್ಚವನ್ನು ಮಾಡಿದರು. ಆದಿನವೆಲ್ಲಾ ನಾನೂ ಅಕ್ಕನೂ ಬಂದವರ ಯೋಗಕ್ಷೇಮವನ್ನು ತೆಗೆದುಕೊಂಡು ಅವರನ್ನು ಆದರಿಸುವ ಸಡಗರದಲ್ಲೇ ಇದ್ದುಬಿಟ್ಟೆವು. ಹಬ್ಬದ ದಿನ ರಾತ್ರಿ ಮಕ್ಕಳನ್ನು ಹಸೆಯ ಮೇಲೆ ಕೂರಿಸಿ ಆರತಿಯ ಕ್ಷತೆಯನ್ನು ಅಟ್ಟಹಾಸದಿಂದ ಮಾಡಿದರು.

ಆದಿನವೂ ಕಳೆಯಿತು. ಕಾಲಕ್ಕೆ ಮಾತ್ರ ಆಪಂಕಾರವಿಲ್ಲ. ಸೋಮಾರಿತನವಿಲ್ಲದೆ ತನ್ನ ಕೆಲಸವನ್ನು ಆಪಚ್ಛಿನ್ನವಾಗಿ ಮಾಡಿಕೊಂಡು ಹೋಗುತ್ತಿರುವುದು. ಕಾಲ

ವೆಂಬುದು ಕಣ್ಣಿಗೆ ಕಾಣುವ ಪದಾರ್ಥವಲ್ಲ. ಒಬ್ಬರ ಕೈಗೆ ಸಿಕ್ಕತಕ್ಕುದೂ ಅಲ್ಲ. ಆದರೆ ಒಂದುದಿನ ಕಳೆದುಹೋದರೂ ಆ ಕಾಲವು ಇನ್ನೆಂದಿಗೂ ಬರಲಾರದು. ಕಾಲದ ಯೋಗ್ಯತೆಯನ್ನೂ ಅದರ ಬೆಲೆಯನ್ನೂ ಕಂಡುಹಿಡಿಯಲಾರಿಗೂ ಸಾಧ್ಯವಿಲ್ಲ. ''ವ್ಯರ್ಥವಾಗಿ ಕಾಲಹರಣ ಮಾಡಬಾರದು.'' ಎಂದು ಪ್ರಸಿದ್ಧವಾದ ನೀತಿವಚನವು ಸರ್ವರಿಂದಲೂ ವಿಚಾರಿಸಲ್ಪಡಬೇಕು. ಮತ್ತು ಏನುಮಾಡಿದರೂ ಹೊತ್ತೇ ಹೋಗದು. ಎಂಬ ಜಡವಾಕ್ಯವು ಬಹು ಅನರ್ಥಕಾರಿಯಾದುದೆಂಬುದನ್ನು, ಉದ್ಯೋಗಶೀಲರೂ, ಬಳ್ಳೆಯ ವಿದ್ಯಾರ್ಥಿಗಳೂ, ಜಾಣರೂ, ಬಲ್ಲರು. ಅದರ ಅರ್ಥವನ್ನು ಈ ಮೂಲಕ ಎಲ್ಲರೂ ತಿಳಿದುಕೊಳ್ಳಲಿ. !

ಹುಟ್ಟಿದ ಹಬ್ಬವಾಗಿ ಈಗಲೇ ಎರಡುದಿನವಾಗಿ ಹೋಯಿತು. ಮೂರನೆಯ ದಿನ ಬೆಳಿಗ್ಗೆ ಹತ್ತುಗಂಟೆಯ ಸಮಯದಲ್ಲಿ ನಾನು ನಮ್ಮ ಯಜಮಾನರಿಗೆ ನೀರನ್ನು ಎರೆಯುತ್ತಿದ್ದೆನು. ಅತ್ತಮ್ಮನವರು ಅಡಿಗೆ ಮಾಡುತ್ತಿದ್ದರು. ತಾತನವರು ಬೀದಿಬಾಗಿಲಿನಲ್ಲಿ ಕುಳಿತು ಗ್ರಂಥವನ್ನು ಸೋಡುತ್ತಿದ್ದರು. ಅಕ್ಕನೂ ಭಾವನವರೂ ಅವರ ಚಿಕ್ಕಮನೆಯಲ್ಲಿ ಕುಳಿತು ತಮ್ಮ ಪೆಟ್ಟಿಗೆಯಲ್ಲಿದ್ದ ಹಣವನ್ನು ಲೆಖ್ಖಮಾಡಿ ಅದರ ಪರಿಶೀಲನೆಯಲ್ಲಿದ್ದರು. ಹೀಗೆ ಒಂದೆರಡು ಘಳಿಗೆ ಕಳೆದುಹೋಯಿತು. ಇದ್ದಕ್ಕಿದ್ದಹಾಗೆಯೇ ನಮ್ಮ ಮನೆಯಲ್ಲಿ ಬಹು ಗಲಭೆಗೆ ಕಾರಣವಾಯಿತು. ನಮ್ಮ ತಾತನವರೂ ಅಕ್ಕನವರೂ ಭಾವನವರೂ ಮಹತ್ತಾದ ಆಲೋಚನೆಯಲ್ಲಿ ಮುಳುಗಿ ಹೋಗಿದ್ದರು. ನಾನು ಬಚ್ಚಲಮನೆಯಲ್ಲಿ ನೀರನ್ನು ಕಾಯಿಸುತ್ತಿದ್ದೆನು. ಆಗ ನಮ್ಮ ಯಜಮಾನರು ನನ್ನ ಬಳಿಗೆ, ಅತಿವೇಗದಿಂದ ಬಂದು, ಈಗ ನಡೆದ ವಿಷಯವನ್ನು ಕೇಳಿದೆಯಾ ? ನಮ್ಮ ಅಣ್ಣನವರ ಪೆಟ್ಟಿಗೆಯಲ್ಲಿದ್ದ ಇನ್ನೂರು ರೂಪಾಯಿಗಳಲ್ಲಿ 50–60 ರೂಪಾಯಿಗಳು ಮಾಯವಾಗಿದೆಯಂತೆ ? ಎಲ್ಲರೂ ಬಹು ಯೋಚನಾಕ್ರಾಂತರಾಗಿದಾರೆ. ಇನ್ನು ಈ ಅಪವಾದವು ನನ್ನಮೇಲೆಲ್ಲಾದರೂ ಬರುವುದೋ ಎಂದು ಭಯಪಡುತ್ತಿದೇನೆ ಎಂದು ಹೇಳಿದರು. ನಾನು ಅದನ್ನು ಕೇಳಿ, ನೀವು ವ್ಯರ್ಥವಾಗಿ ಇಲ್ಲದ ಚಿಂತೆಯನ್ನು ಮನಸ್ಸಿಗೆ ಹತ್ತಿಸಿಕೊಳ್ಳಲೇಕೆ ? ಅವರಚಿಕ್ಕಮನೆಯಲ್ಲಿ—ಅದರಲ್ಲೂ ಅವರ ಪೆಟ್ಟಿಗೆಯಲ್ಲಿದ್ದ ಹಣವು ಹೋಗುವುದಾದರೂ ಹೇಗೆ ? ಅವರೇ ಎಲ್ಲೋ ಗಂಡ ಹೆಂಡರಪ್ಯೆಕಿ ಒಬ್ಬರು ಬಳಸಿಕೊಂಡು ಮರತಿರಬೇಕು. ಹೊರಗಿನವರು ಕದ್ದಿದ್ದರೆ 60 ರೂಪಾಯಿಗಳನ್ನು ತೆಗದುಕೊಂಡು ಕಡಮೆಯಾದನ್ನು ಬಿಟ್ಟು ಹೋಗುವುದೆಂದರೇನು ? ಇದೆಲ್ಲಪ್ಪಾ ವಿಸ್ಮೃತಿಯಿಂದುಂಟಾಗಿರಬಹುದೆಂದು ಹೇಳಿ ಅವರನ್ನು ಸಮಾಧಾನ ಪಡಿಸಿದೆನು. ಆದರೂ ಅವರಿಗೆ ಮನಶ್ಶಾಂತಿಯುಂಟಾಗಲಿಲ್ಲ. ಹಾಗೆಯೇ ಸ್ನಾನಾಹ್ನಿಕಗಳನ್ನು ಮಾಡಿಕೊ

ಳ್ಳುತ್ತ ಕುಳಿತಿದ್ದರು. ನಾನುಪಿತ್ತಲಿನಲ್ಲಿ ಬಟ್ಟೆಯನ್ನೊಗೆದು ಕೊಳ್ಳುತ್ತಿದ್ದೆನು. ನನಗಂತೂ ಅವರು ಹಣದ ವಿಷಯದಲ್ಲಿ ಚಿಂತಿಸುತ್ತಿರುವುದು ಸುಳ್ಳೆಂದು ತೋರಿತು. ನಾನು ಅದನ್ನು ಮನಸ್ಸಿಗೆ ಹತ್ತಿಸಿಕೊಳ್ಳಲೇ ಇಲ್ಲ. ಹೀಗೆಯೇ ಹನ್ನೆರಡು ಗಂಟೆಯೂ ಹೊಡೆಯಿತು.

ನಮ್ಮ ಅಕ್ಕ,ಭಾವ, ಏನಹ ಎಲ್ಲರೂ ಸ್ನಾನಮಾಡಿದ್ದರು. ನಮ್ಮ ಅಕ್ಕನವರು ನಮ್ಮ ಬೀದಿಯಲ್ಲಿದ್ದ ಜೋಯಿಸರೊಬ್ಬರ ಬಳಿಗೆ ಹೋಗಿ ಹಣಹೋದ ವಿಷಯದಲ್ಲಿ ಶಾಸ್ತ್ರವನ್ನು ಕೇಳಿದರಂತೆ ? ಆ ಜೋಯಿಸರೂ ಲೆಖ್ಖಹಾಕಿ, ಹಣವು ನಿಮ್ಮ ಮನೆಯಲ್ಲೇ ಇದೆ. ಇನ್ನು ಮೂರು ಗಂಟೆ ಕಾಲದೊಳಗಾಗಿ ಸಿಕ್ಕಿದರೆ ಸಿಕ್ಕಬಹುದು. ಇಲ್ಲವಾದರೆ ಅದು ಸ್ಥಳವನ್ನುಬಿಟ್ಟು ಕದಲಿ ಹೋದೀತು. ಎಂದು ಹೇಳಿದರಂತೆ ! ನಮ್ಮ ಅಕ್ಕನವರು ಕೂಡಲೆ ಬಂದು ಭಾವನವರೊಡನೆ, ಶಾಸ್ತ್ರದ ವಿಚಾರವನ್ನು ಹೇಳಿ ಈಗಲೇ ಮನೆಯವರೆಲ್ಲರ ಪೆಟ್ಟಿಗೆಯನ್ನು ಶೋಧಿಸಿದರೆ ಹಣವು ಸಿಕ್ಕಿಬಿಡುತ್ತದೆ. ಎಂದು ಉಲ್ಲಾಸದಿಂದ ಹೇಳಿದರು. ಸಾಧಾರಣವಾಗಿ ಎಲ್ಲರ ಪೆಟ್ಟಿಗೆಯಲ್ಲೂ ಅವರವರು ಹಣವನ್ನಿಟ್ಟುಕೊಂಡಿರಬಹುದೆಂದು ಅವರಿಗೆ ತಿಳಿದಿದ್ದರೂ ಮನೆಯವರೆಲ್ಲರ ಪೆಟ್ಟಿಗೆಯನ್ನು ಶೋಧಿಸಿಬಿಡಬೇಕೆಂದೂ ಯಾರ ಪೆಟ್ಟಿಗೆಯಲ್ಲಾದರೂ ಹಣವಿದ್ದರೆ ಅದು ತಮ್ಮದೇ ಎಂದೂ ಗಂಡಸೊಡನೆ ಖಂಡಿತವಾಗಿ ಹೇಳಿದರು. ಹೆಂಡತಿಯಮಾತನ್ನು ಮೀರದೆ, ನಮ್ಮ ಭಾವನವರು ತಮಗೆ ಇಷ್ಟವಿಲ್ಲದಿದ್ದರೂ ಎಲ್ಲರ ಪೆಟ್ಟಿಗೆಯನ್ನೂ ಶೋಧಿಸುವ ಕಾರ್ಯಕ್ಕೆ ಕೈಯಿಟ್ಟರು. ಎಲ್ಲರ ಪೆಟ್ಟಿಗೆಯೆಂದರೆ ಯಾರದು ? ನನ್ನದು, ತಾತನವರದು. ನಮ್ಮ ಯಜಮಾನರದು. ತಾತನವರ ಪೆಟ್ಟಿಗೆಯನ್ನು ಶೋಧಿಸುವ ಧೈರ್ಯವು ಆರಿಗೂ ಇಲ್ಲ ಅತ್ತಮ್ಮನವರಲ್ಲಿ ಪೆಟ್ಟಿಗೆಯೇ ಇರಲಿಲ್ಲ. ನಮ್ಮ ಯಜಮಾನರ ಪೆಟ್ಟಿಗೆಯಲ್ಲಿ ಎರಡಾಣೆ ಚಿಲ್ಲರೆ ಮಾತ್ರವೇ ಇದ್ದಿತು. ಉಳಿದುದು ನನ್ನ ಪೆಟ್ಟಿಗೆ, ನನ್ನ ಪೆಟ್ಟಿಗೆಯನ್ನು ಶೋಧನೆಗೆ ಕಳುಹಬೇಕಾಯಿತು. ನಮ್ಮ ತಾಯಿಯು ಗುಟ್ಟಾಗಿ ಕೊಟ್ಟಿದ್ದ 55 ರೂಪಾಯಿಗಳನ್ನೂ ನನ್ನಲ್ಲಿ ಚಿಲ್ಲರೆಯಾಗಿದ್ದ 5–6 ರೂಪಾಯಿಗಳ ನಾಣ್ಯವನ್ನೂ ನಮ್ಮ ಯಜಮಾನರಿಗೂ ಸಪಾ ತಿಳಿಸಿದಂತೆ ನಾನು ನನ್ನ ಪೆಟ್ಟಿಗೆಯ ಒಂದು ಭರಣಿಯಲ್ಲಿಟ್ಟಿದ್ದೆನು. ಪೆಜ್ಜಳಾದ ನಾನು ಆ ಭರಣಿಯು ಎಲ್ಲಿ ಬೈಲಿಗೆ ಬರುವುದೋ, ನಮ್ಮ ತಾಯಿಯು ನನ್ನಲ್ಲಿ ಗುಟ್ಟಾಗಿ ಹಣವನ್ನು ಕೊಟ್ಟಿರುವ ವಿಷಯವೂ ಎಲ್ಲರಿಗೂ ಎಲ್ಲಿ ತಿಳಿದು ಬಿಡುವುದೋ ಎಂಬ ಹೆದರಿಕೆಯಿಂದ, ನನ್ನಲ್ಲಿದ್ದ ಭರಣಿಯನ್ನು ಈಜೆಗೆ ತೆಗೆದಿಟ್ಟು ಕೊಂಡು ಬರೀಪೆಟ್ಟಿಗೆಯನ್ನು ಮಾತ್ರ ಕಳುಹಿಸಿಬಿಟ್ಟೆನು. ನಾನು ಪೆಟ್ಟಿಗೆಯ ಬೀಗ

ವನ್ನು ತೆರೆದು ಹಣದ ಭರಣಿಯನ್ನು ಬಚ್ಚಿಟ್ಟುದನ್ನು ನಮ್ಮ ಭಾವನವರು ನೋಡುತ್ತಲೇ ಇದ್ದರು. ಬರೀ ಪೆಟ್ಟಿಗೆಯಲ್ಲಿ ಹಣವಿದ್ದೀತೆ? ನಮ್ಮ ಭಾವನವರು ಬಲವಂತದಿಂದ ನಮ್ಮ ಚಿಕ್ಕ ಮನೆಗೆ ಪ್ರವೇಶಿಸಿ ಅನುಮಾನದಿಂದ ನನ್ನ ಭರಣಿಯನ್ನು ತೆಗೆದುಕೊಂಡು ಅದರ ಮುಚ್ಚಳವನ್ನು ತೆರೆದು ಅದರಲ್ಲಿ ಹಣವಿರುವುದನ್ನು ನೋಡಿ ಆ ಭರಣಿಯನ್ನು ಹಾಗೆಯೇ ತಂದು ಮನೆಯವರೆಲ್ಲರಿಗೂ ಸುರುಬುಬಿಟ್ಟರು.

ನನಗೆ ತಲೆ ತಿರುಗಿಹೋಯಿತು. ಮೈ ನಡಗಿಬಿಟ್ಟಿತು. ದಿಕ್ಕೇ ತೋಚದೆ ಹೋದುದು. ಮನೆಯವರೆಲ್ಲರೂ ನನ್ನ ವಿಷಯದಲ್ಲಿ ಬಹು ತಿರಸ್ಕಾರಭಾವವನ್ನು ಪ್ರದರ್ಶಿಸಲಾರಂಭಿಸಿದರು. ಆ ಹಣವನ್ನು ಸುರಿವುತ್ತಿದ್ದಾಗ ನಾನು ಅಳುತ್ತಾ ಬಂದು "ಇದು ನಮ್ಮ ತಾಯಿಯು ಗುಟ್ಟಾಗಿ ನನ್ನ ವಶಕ್ಕೆ ಕೊಟ್ಟಿದ್ದ ಹಣವು. ಇದನ್ನು ನಾನಾರಿಗೂ ತಿಳಿಸದಂತೆ ನನ್ನ ಬಳಿಯಲ್ಲಿಟ್ಟುಕೊಂಡಿದ್ದೆನು. ಅದನ್ನು ನನಗೇ ಕೊಡಿಸ ಬೇಕೆಂದು" ಬಹು ದೈನ್ಯದಿಂದ ಬೇಡಿಕೊಂಡೆನು. ಆದರೆ ನನ್ನ ಮಾತನ್ನು ಆಗ ಕೇಳುವವರಾರು? ನನ್ನಲ್ಲಿ ಹಣವಿದ್ದ ವಿಚಾರವು ಆರಿಗೂ ತಿಳಿದಿರಲಿಲ್ಲ. ನಾನು ಆರಿಗೂ ತಿಳಿಸಿಯೂ ಇರಲಿಲ್ಲ. ನಮ್ಮ ಯಜಮಾನರು ನನ್ನ ವಶಕ್ಕೆ ಹಣವಾವುದನ್ನೂ ಕೊಡುತ್ತಿರಲಿಲ್ಲವಾದುದರಿಂದಲೂ, ನಮ್ಮ ತಾಯಿತಂದೆಗಳು ಬಹಳ ದಕ್ಕದೆಶೆಯಲ್ಲಿರುವರೆಂಬುದು ಎಲ್ಲರಿಗೂ ತಿಳಿದಿದ್ದುದರಿಂದಲೂ ನನ್ನಲ್ಲಿದ್ದ ೫೫ ರೂಪಾಯಿಗಳೂ ಮತ್ತು ಚಿಲ್ಲರೆ ದುಡ್ಡುಗಳೂ ಕಳುವಿನ ಮಾಲೆಂದೂ, ನಮ್ಮ ಭಾವನವರ ಪೆಟ್ಟಿಗೆಯಲ್ಲಿ ಇಲ್ಲದೆಹೋದ ಹಣವು ಇದೇ ಸರಿಯೆಂದೂ, ನಾನೇ ಅವರ ಪೆಟ್ಟಿಗೆ ಬೀಗವನ್ನು ಕಳ್ಳ ತನದಿಂದ ತೆರೆದು ಈ ಹಣವನ್ನು ಕದ್ದವಳೆಂದೂ ಮನೆಯವರೆಲ್ಲರೂ ನಿರ್ಧರಿಸಿದರು. ಹೀಗೆ ನಿರ್ಧರಿಸುವುದಕ್ಕೆ ಯಾರಿಗಾದರೂ ಸ್ವಲ್ಪವಾದರೂ ಸಂದೇಹವಿರಲಿಲ್ಲ. ನಾನು, ನಮ್ಮ ತಾಯಿಯ ಹಣವೆಂದು ಹೇಳುವುದು ಅನೃತವೂ, ಅಪಲಾಪವೂ, ಆದ ಸಂಗತಿಯೆಂದು ಎಲ್ಲರೂ ತಿಳಿದು ಕೊಂಡರು.

ನಮ್ಮ ತಾಯಿಯು ನನ್ನಲ್ಲಿ ಇಷ್ಟು ಹಣವನ್ನು ಕೊಟ್ಟಿರುವ ವಿಷಯವನ್ನು ನಾನು ನಮ್ಮ ಯಜಮಾನರಿಗೆ ಯಾವಾಗಲೂ ತಿಳಿಸಿರಲಿಲ್ಲ. ಮತ್ತು ಅವರು ಹಿಂದೆ ಒಂದೆರಡುವೇಳೆ ಯಾವುದೋ ಒಂದೆರಡು ಸಮಯಗಳಲ್ಲಿ, "ನಿನ್ನಲ್ಲಿ ಹಣವೇನಾದರೂ ಇದ್ದರೆ ಹದಿನೈದು ರೂಪಾಯಿಗಳನ್ನು ಕೊಟ್ಟಿರು" ಎಂದು ಕೇಳಿದ್ದರು. ಹೀಗೆ ಅವರು ಕೇಳಲು, ಹೆಣ್ಣುಮಕ್ಕಳಿಗೆ ತಾಯಿತಂದೆಗಳು ಏನಾದರೂ ಕೊಂಚ ದುಡ್ಡನ್ನು ಕೊಡುವ ಪದ್ಧತಿ ಲೋಕರೂಢಿಯಾದುದರಿಂದಲೂ ಮದುವೆ, ಆರತಿ, ಓದಿಸುವುದು, ಮುಂತಾದ ಸಮಯಗಳಲ್ಲಿ ಹೆಣ್ಣು ಮಕ್ಕಳಿಗೆ ಬಂದ ರೂಪಾಯಿ

ಗಳನ್ನು ಗಂಡನ ಮನೆಗೆ ಹೋಗುವಾಗ ಅವರ ವಶಕ್ಕೆ ಕೊಡುವ ರೂಢಿ ಇರುವುದ ರಿಂದಲೂ ಈ ಊಹೆಯಿಂದ ನನ್ನನ್ನು ಯಜಮಾನರು ಹಣವನ್ನು ಕೇಳಿದರು. ಆ ಸಮಯಗಳಲ್ಲಿ ನಾನು ನನ್ನಲ್ಲಿ ಹಣವೆಲ್ಲಿಂದ ಬರಬೇಕು ? ಎಂದು ಉತ್ತರವನ್ನು ಹೇಳಿಬಿಟ್ಟೆನು. ಅವರು ಸುಮ್ಮನಾಗಿ ಬಿಟ್ಟಿದ್ದರು. ಹೀಗಿರುವಲ್ಲಿ ನನ್ನ ಪೆಟ್ಟಿಗೆಯಲ್ಲಿ ಈಗ 56 ರೂಪಾಯಿಗಳಿರುವುದೂ ಮತ್ತು ಭಾವನವರ ಪೆಟ್ಟಿಗೆಯಲ್ಲಿ 60 ರೂಪಾಯಿ ಗಳು ಮಾಯವಾಗಿರುವುದೂ ಪೆಟ್ಟಿಗೆಯನ್ನು ಶೋಧಿಸಬೇಕೆಂದು ಹೇಳಿದಾಗ ನಾನು ಹಣದ ಭರಣಿಯನ್ನು ಮುಚ್ಚಟ್ಟುಕೊಂಡು ಬರೀಪೆಟ್ಟಿಗೆಯನ್ನು ಕಳುಹಿಸಿದುದೂ, ತದುತ್ತರಕ್ಷಣದಲ್ಲಿಯೇ ನನ್ನ ಹಣದ ಭರಣಿಯು ಈಚಿಗೆಬಂದು ಎಲ್ಲರಿದಿರಿಗೂ ಹಣವು ಸುರಿಯಲ್ಪಟ್ಟುದೂ, ಇತ್ಯಾದಿ ವಿಷಯಗಳು ನಾನು ಕದ್ದವಳೆಂದು ತೋರ್ಪಡಿಸಲು ಸಾಕ್ಷೀಭೂತವಾಗಿದ್ದುವು. ಇಂತಹ ಮಹದಪರಾಧವು ನನ್ನಿಂದ ಮಾಡಲ್ಪಟ್ಟಿತೆಂದು ತಿಳಿದಮೇಲೆ ನಮ್ಮ ಯಜಮಾನರ ಮನಸ್ಸಿನಲ್ಲಿ ಇಂತಹ ಭಾವವು ಉತ್ಪನ್ನವಾಗಿರ ಬಹುದು ? ಅಲ್ಲದೆ ನಾನು ಅವರನ್ನು ಆಗಿಂದಾಗ್ಗೆ, ಒಡವೆ, ಸೀರೆಗಳಿಗಾಗಿ ಬಹುವಾಗಿ ಪೀಡಿಸುತ್ತಿದ್ದುದನ್ನು ಅವರು ಸ್ಮರಿಸಿಕೊಂಡು, ಬಹು ತೆರನಾಗಿ ನಾನು ಹಣವನ್ನು ನಾಶ್ಚರ್ಯದಿಂದ ಕದ್ದಿರಬಹುದೆಂದೇ ನಿರ್ಧರಿಸಿ, ಇಂತಹ ಕುಲಗೇಡಿಯಾದ ಹೆಂಡತಿ ಇದ್ದರೇನು ? ಸತ್ತರೇನು ? ಎಂದು ಮನಸಾ ಚಿಂತಿಸಿ,ಸಿಂಹವು ಘರ್ಜಿಸುವಂತೆ, ತಪ್ಪಿ ಕಮಾಡುತ್ತಿದ್ದ ಸ್ಥಳದಿಂದೆದ್ದು ನನ್ನ ಬಳಿಗೆ ಬಂದು, ಥು ! ದುಷ್ಟಳೆ ; ನಮ್ಮ ಕುಲಕ್ಕೂ ನಮ್ಮ ಮರ್ಯಾದೆಗೂ ನನಗೂ ಕಳಂಕವನ್ನು ತಂದೆಯಾ ! ನೀನು ಈ ಕ್ಷಣ ನಾಶವಾಗಿ ಹೋಗು, ಎಂದು ಆರ್ಭಟಿಸಿ ತಮ್ಮ ವಾಮಪಾದದಿಂದ ನನ್ನನ್ನು ಬಲವಾಗಿ ತಾಡನಮಾಡಿಬಿಟ್ಟರು. ನಾನು ಆಕ್ಷಣವೇಅಚೇತನಳಾಗಿ ಬಿದ್ದುಬಿಟ್ಟೆನು.

ನಾನು ಬಿದ್ದುದನ್ನು ನೋಡಿ ಮನೆಯವರೆಲ್ಲರೂ ಗಾಬರಿಯಾಗಿ ನನ್ನ ಹತ್ತಿರ ಬಂದು ನನ್ನ ಸ್ಥಿತಿಯನ್ನು ನೋಡಿ ನನ್ನನ್ನುಪಚರಿಸ ತೊಡಗಿದರು. ಮತ್ತು ನಮ್ಮ ಯಜಮಾನರು ನನ್ನಬಳಿಗೆಬಂದು ಎಲ್ಲರನ್ನೂ ತಡೆದು ಪುನಃ ನನ್ನನ್ನು ಹೊಡೆದು ಇಹ ಲೋಕಜ್ಯೋತಳನ್ನಾಗಿ ಮಾಡಿಬಿಡಬೇಕೆಂದು ನಿರ್ಧರಿಸಿದರು. ಆದರೆ ಅವರಾಲೋಚನೆ ಯನ್ನು ನಮ್ಮ ಮನೆಯವರು ಸಾಗಗೊಡಲಿಲ್ಲ. ''ಕೋಪದಲ್ಲ ಕುಯ್ದ ಮೂಗುಶಾಂತಿ ಯಲ್ಲಿ ಹತ್ತೀತೇ ?'' ಆದುದರಿಂದ ಈ ಹಣವನ್ನು ಅವಳ ತಾಯಿಯು ಇವಳ ವಶಕ್ಕೆ ಕೊಟ್ಟಿದ್ದುದು ನಿಜವೇ ಎಂಬುದನ್ನು ತಿಳಿದಬಳಿಕ ನೀನು ಮುಂದಿನಕೆಲಸವನ್ನು ಮಾಡ ಬಹುದೆಂದು ನಮ್ಮ ಯಜಮಾನರೊಡನೆ ಎಲ್ಲರೂ ಹೇಳಿದರು. ಇಷ್ಟಾದಮೇಲೆ ಅವರು

ತಮ್ಮ ಕೆಲಸಕ್ಕೆ ಹೊರಟುಹೋದರು. ಆಗಲೇ ರಂಗಪುರಕ್ಕೆ ಪ್ರಯಾಣ ಮಾಡಿ ಈ ಹಣದ ವಿಷಯವನ್ನು ನಿರ್ಧರಿಸಬೇಕೆಂದು ಅವರು ಆಲೋಚಿಸಿದರು. ಆಗ ಮಧ್ಯಾಹ್ನ ಒಂದು ಗಂಟೆಯ ಹೊತ್ತಾಗಿದ್ದುದರಿಂದ ರಂಗಪುರಕ್ಕೆ ರೈಲು ಹೊರಟುಹೋಗಿದ್ದಿತು. ಇನ್ನು ಸಾಯಂಕಾಲದ ರೈಲನ್ನೇ ಕಾಯಬೇಕಾಯಿತು. ನಮ್ಮ ಯಜಮಾನರು ಅದಿನ ಮಧ್ಯಾಹ್ನ ಊಟವನ್ನು ಸರಿಯಾಗಿ ಮಾಡಲಿಲ್ಲ. ಅವರು ಏನೋಚಿಂತಿಸುತ್ತಾ ನಮ್ಮ ಕಿರುಮನೆಯಲ್ಲಿ ಮೆಲಗಿಕೊಂಡಿದ್ದರು. ನಾನೂ ನನ್ನ ಕೆಲಸಕಾರ್ಯಗಳನ್ನು ಮಾಡಿ ಕೊಂಡು ಸಹನೆಯಿಂದ ನನ್ನ ಸ್ವಾಮಿಯು ಮಲಗಿದ್ದ ಸ್ಥಳಕ್ಕೆ ಹೋಗಿ ಕುಳಿತೆನು. ಅಲ್ಲಿ ಕುಳಿತೊಡನೆಯೇ ನನಗೆ ಬಹು ದುಃಖಬಂದಿತು. ತಡೆಯಲಾರದೆ ಘಟ್ಟಿಯಾಗಿ ಅತ್ತುಬಿ ಟ್ಟೆನು. ನಮ್ಮ ಯಜಮಾನರು ಎದ್ದು "ಏಕೆ! ಹೊಡೆದುಕೊಳ್ಳುತ್ತಿರುವೆ? ಇನ್ನೂ ಸಾಯಲಿಲ್ಲವೆಂದು ಬಡಿದುಕೊಳ್ಳುವಿಯಾ?" ಎಂದುಕೇಳಿದರು. ನನಗಿನ್ನೂ ಹೆಚ್ಚಾಗಿ ದುಃಖ ಬಂದಿತು. ತಡೆದುಕೊಂಡು ಸ್ವಾಮಿಯ ಪಾದಗಳಮೇಲೆ ಬಿದ್ದು ಇಂತು ಪ್ರಾರ್ಥಿ ಸಿಕೊಂಡೆನು.

ಜೀವನಸರ್ವಸ್ವ!

ನಾನಿಂದು ಪಾದಸನ್ನಿಧಿಯಲ್ಲಿ ಮಹದಪರಾಧಮಾಡಿದವಳೆಂದು ನಿರ್ಧರ ವಾಗಿರುವುದು ಸಮಯಸ್ಫೈ? ನಾನು ತಮ್ಮ ವಿಷಯದಲ್ಲಿ ಮಹತ್ತರವಾದೆರಡು ಅಪ ರಾಧಗಳನ್ನು ಮಾಡಿರುವುದರಿಂದಲೇ ಈ ದಿನ ಇಂತಹ ಭಯಂಕರ ಚಿಂತೆಗೆ ಗುರಿಯಾಗ ಬೇಕಾಗಿ ಬಂದಿತು. ನಮ್ಮ ತಾಯಿಯು ನನ್ನ ವಶಕ್ಕೆ, ನನ್ನನ್ನು ಇಲ್ಲಿ ಬಿಟ್ಟು ಹೋಗುವ ಸಂದರ್ಭದಲ್ಲಿ ಐವತ್ತೈದು ರೂಪಾಯಿಗಳನ್ನು ಕೊಟ್ಟಿದ್ದರು. ಗೌರೀಹಬ್ಬದ ಆರತಿನ ಕುಂಕುಮಕ್ಕಾಗಿ ಕಳುಹಿಸಿದ್ದ ಎರಡು ರೂಪಾಯಿ, ನನ್ನ ಮದುವೆಯಲ್ಲಿ ಆರತಿಗೆ ಹಾಕಿದ್ದ ರೂಪಾಯಿಗಳಲ್ಲಿ ನಾಲ್ಕು, ಅಲ್ಲಿ, ಇಲ್ಲಿ ಆರತಿಗಳಲ್ಲಿ ಲಭ್ಯವಾದ ಕೆಲವು ಚಿಲ್ಲರೆಗಳು, ಇಷ್ಟೂಸೇರಿ ಐವತ್ತಾರೂ ಚಿಲ್ಲರೆ ರೂಪಾಯಿಗಳನ್ನು ನಾನು ನನ್ನ ವಶದಲ್ಲಿಟ್ಟುಕೊಂಡಿದ್ದೆನು. ನಮ್ಮ ತಾಯಿಯು ನನ್ನಲ್ಲಿ ಹಣವನ್ನು ಕೊಡು ವಾಗ, ಈ ವಿಷಯವನ್ನು ನಿನ್ನ ಗಂಡನಿಗೂ ಸಹ ತಿಳಿಸಬೇಡ. ತಿಳಿಸಿಬಿಟ್ಟರೆ ನಿನ್ನ ಬಳಿಯಿಂದ ತೆಗೆದುಕೊಂಡು ಏನಾದರೂ ಖರ್ಚುಮಾಡಿಬಿಡಬಹುದು. ಗಂಡಸರು ಬಹು ತಾಪತ್ರಯದವರು ಎಂದು ಹೇಳಿ ರಹಸ್ಯವಾಗಿ ಕೊಟ್ಟರು. ನನಗೆ ಆಗ ಬಹು ಸಂತೋಷವಾಗಿತ್ತು. ಹಣವನ್ನು ಇಟ್ಟುಕೊಂಡಿರುವವರು ಬಹು ದೊಡ್ಡ ಮನುಷ್ಯ ರೆಂದು ನನಗೆ ನಂಬಿಕೆಯಿದ್ದಿತು. ಆದುದರಿಂದ ಆ ಹಣವನ್ನು ನನ್ನಲ್ಲಿಟ್ಟುಕೊಂಡೆನು. ನಮ್ಮ ತಾಯಿಯ ಪ್ರತಿಜ್ಞಾಪಾಲನಕ್ಕಾಗಿ ನಾನು ಈ ವಿಚಾರವನ್ನು ನಿಮ್ಮೊಡನೆ

ಯಾವಾಗಲೂ ಹೇಳಲಿಲ್ಲ. ಹಾಗೆ ಹೇಳಿದ್ದರೆ ಈದಿನ ನನಗೆ ಇಂತಹ ಅವಸ್ಥೆಯೂ ಉಂಟಾಗುತ್ತಿರಲಿಲ್ಲ. ಮತ್ತು ಮುಂದೆ ಇಂತಹ ಅನರ್ಥವುಂಟಾಗುವುದೆಂದು ನನಗೆ ತಿಳಿದೂ ಇರಲಿಲ್ಲ. ಈ ಕಾರಣದಿಂದ ನಾನು ತಮ್ಮಲ್ಲಿ ದೊಡ್ಡ ಅಪರಾಧಮಾಡಿದಂತಾ ಯಿತು. ಯಾವ ಹೆಂಗಸು ಪತಿಗೆ ವಂಚನೆಮಾಡಿ ಅವನ ಅಪ್ಪಣೆಯಿಲ್ಲದೆ, ಅವನಿಗೆ ತಿಳಿಯದಂತೆ, ಇಂತಹ ಸ್ವಾತಂತ್ರ್ಯವನ್ನು ವಹಿಸುವಳೋ ಅವಳಿಗೆ ಇದೇ ವಿಧವಾದ ಗತಿಯಾಗುವುದೆಂಬುದಕ್ಕೆ ನಾನೇ ದೃಷ್ಟಾಂತಸ್ವರೂಪಳಾಗಿ ಪರಿಣಮಿಸಿದೆನು. ಮತ್ತು ತಾಯಿತಂದೆಗಳು ಹೆಣ್ಣು ಮಕ್ಕಳಿಗೆ, ಪತಿಗೆ ಪರತಂತ್ರಳಾಗಿ ಅವನ ಆಜ್ಞಾಧೀನಳಾಗಿ ಅನುವರ್ತಿಸಬೇಕೆಂದೂ ಅವನಿಗೆ ತಿಳಿಸದಂತೆ ಯಾವ ಕೆಲಸವನ್ನೂ ಮಾಡಬಾರದೆಂದೂ ಆತನ ಮನಸ್ಸಿಗೆ ಅಹಿತವಾಗುವ ಕೆಲಸವನ್ನು ಮಾಡಬಾರದೆಂದೂ ವಸ್ತ್ರಾಭರಣಗಳ ವಿಷಯದಲ್ಲಿ ಆತನನ್ನು ಬಲಾತ್ಕರಿಸಿ ಆತನ ಮನಸ್ಸಿಗೆ ಆಯಾಸವನ್ನುಂಟುಮಾಡಬಾರ ದೆಂದೂ ಮುಂತಾದ ಅಹಿತವಾದ ಸ್ತ್ರೀಧರ್ಮಗಳನ್ನು ಕಲಿಸುವುದನ್ನು ಬಿಟ್ಟು ತದ್ವಿಪ ರೀತವಾದ ಧರ್ಮಗಳನ್ನು ಬೋಧಿಸಿದರೆ ಅಂತಹ ಮಾತಾಪಿತೃಗಳು, ಕುಲನಾಶಕ ರೆಂದೂ, ಮಕ್ಕಳನ್ನು ಹಾಳುಮಾಡಿದವರೆಂದೂ, ಲೋಕಾಪವಾದ ಪಾತ್ರರೆಂದೂ, ಹೇಳಿಕೊಳ್ಳುವರು. ನಮ್ಮ ತಾಯಿತಂದೆಗಳು ನನಗೆ ಸರಿಯಾದ ವಿವೇಕವನ್ನು ಹೇಳದೆ ಇದ್ದುದೇ ನನ್ನ ದುರವಸ್ಥೆಗೆ ಕಾರಣ. ಮತ್ತು ನಾನು ಅವರ ಬೋಧನಾರಹಿತಳಾಗಿ– ನಿಮ್ಮ ಬೋಧನೆಯನ್ನು ಗೌರವಿಸದೆ, ನಿಮ್ಮನ್ನು ಆಯಾಸಪಡಿಸುತ್ತಾ ಬಂದುದು, ನಮ್ಮ ತಂದೆತಾಯಿಗಳ ತಪ್ಪಲ್ಲದೆ ನನ್ನ ತಪ್ಪಲ್ಲ. ನಾನಿಂದು ಪತಿದ್ರೋಹಿಯೆಂದೂ, ವಂಚಕಳೆಂದೂ, ದುಷ್ಟಳೆಂದೂ, ತಸ್ಕರಿಯೆಂದೂ ಅಪವಾದವನ್ನು ಹೊರಬೇಕಾಗಿ ಬಂದಿದೆ. ನಾನು ಇಂತಹ ಅಪವಾದವನ್ನು ಧರಿಸಿ ಜೀವಿಸಿದ್ದರೂ ಒಂದೇ, ಮೃತ ಳಾದರೂ ಒಂದೇ. ಆದರೆ ನಾನು ಮರಣಕ್ಕೆ ಹೆದರುವವಳಲ್ಲ. ಅಪವಾದಕ್ಕೆ ಹೆದರು ವವಳು. ನಾನು ನಿರಪರಾಧಿನಿಯೆಂಬುದನ್ನು ಈಗ ನಾನು ಮಾತ್ರಬಲ್ಲೆ. ಆ ವಿಧ ವಾದ ನಿರಪರಾಧಿತ್ವವು ನನಗೊಬ್ಬಳಿಗೆ ತಿಳಿದರೆ ಸಾಲದು. ನಾನು ನಿರಪರಾಧಿನಿ ಯೆಂದು ಲೋಕಕ್ಕೇವಿದಿತವಾದರೆ ಆಗ ನಾನು ಜೀವಿಸಿದ್ದರೂ, ಅಥವಾ ಮೃತಳಾದರೂ ಸಾರ್ಥಕ. ಆದುದರಿಂದ ನೀವು ಈ ವಿಷಯವನ್ನು ಪರ್ಯಾಲೋಚಿಸಬೇಕು. ಹೆಂಡತಿ ಯೊಬ್ಬಳು ಅಪವಾದಗ್ರಸ್ತಳಾದರೆ ಅದು ಗಂಡನಿಗೂ ಖಂಡಿತವಾಗಿ ಸಂಬಂಧಿಸಿಯೇ ಸಂಬಂಧಿಸುವುದು. ಅಂತಹ ಹೆಂಡತಿಯ ಮೂಲಕ ಗಂಡನಾದವನಿಗೆ ಇಹಲೋಕ ದಲ್ಲಾಗಲೀ ಪರಲೋಕದಲ್ಲಾಗಲೀ ಶಾಂತಿಯಿಲ್ಲವು. ನಿಮ್ಮಿಂದ ನಾನು ಹತಳಾದರೆ ನಾನು ಪುಣ್ಯವತಿಯೇ ಸರಿ. ಆದರೆ ಸದ್ಯಃ ನಾನು ಮರಣವನ್ನು ಬಯಸುತ್ತಿಲ್ಲ.

ನನ್ನ ತಾಯಿಯ ಹಣವು ಹೋದರೂ ಚಿಂತೆಯಿಲ್ಲ. ನೀವು ಒಮ್ಮೆ ರಂಗಪುರಕ್ಕೆ ಹೋಗಿ ಈ ವಿಷಯವನ್ನು ನಮ್ಮ ತಾಯಿಯ ಸಂಗಡ ವಿಚಾರಿಸಿರಿ. ನಮ್ಮ ತಾಯಿಯು ಇದರೊಡನೆ ಒಂದು ಕಂಠಾಭರಣವನ್ನು ಗುಪ್ತವಾಗಿ ಕೊಟ್ಟರು. ಬಳಿಕ ಅವರು "ನಾನು ಹಣವನ್ನಾಗಲೀ ಒಡವೆಯನ್ನಾಗಲೀ ಕೊಟ್ಟವಳಲ್ಲವೆಂದು" ಹೇಳಿದರೆ ನನ್ನನ್ನು ತಾವು ಬೇಕಾದಹಾಗೆ ಶಿಕ್ಷಿಸಬಹುದು. ನೀವು ರಂಗಪುರಕ್ಕೆ ಹೋಗಿ ನಮ್ಮ ತಾಯಿಯವರನ್ನು ಕುರಿತು ಈ ವಿಷಯವನ್ನು ಹೇಗೆ ಕೇಳಬೇಕೋ ಹಾಗೆ ಪ್ರಶ್ನೆ ಮಾಡಿ ನಿಮ್ಮ ನಂಬಿಕೆಯನ್ನು ಸ್ಥಿರಮಾಡಿಕೊಳ್ಳಿರಿ. ಇದರಲ್ಲಿ 55 ರೂಪಾಯಿಗಳು ಮಾತ್ರ ನಮ್ಮ ತಾಯಿಯದು. ಮುಖ್ಯವಾಗಿ ನಾನು ಇದುವರೆಗೂ ಪಾದಸನ್ನಿಧಿಯಲ್ಲಿ ಮಾಡಿದ ಪಾಪಕ್ಕೆ ತಕ್ಕ ಪ್ರಾಯಶ್ಚಿತ್ತವನ್ನು ನಿಮ್ಮ ಉತ್ತರ ಬಂದಮೇಲೆ ಮಾಡಿ ಕೊಳ್ಳುವೆನು ಎಂದು ವಿಧವಿಧವಾಗಿ ಪ್ರಾರ್ಥಿಸಿಕೊಂಡೆನು.

ನಾನೆಷ್ಟುವಿಧವಾಗಿ ಬೇಡಿಕೊಳ್ಳುತ್ತಿದ್ದರೂ ಯಜಮಾನರಿಗೆ ಆದಿನವೆಲ್ಲಾ ಸ್ವಲ್ಪವೂ ಮನಶ್ಶಾಂತಿಯಿಲ್ಲದೆ ಹೋಯಿತು. ನನ್ನನ್ನು ಆದಿನ ಅವರು ಪದೇಪದೇ ಬೆತ್ತಗಳಿಂದ ಹೊಡೆಯುತ್ತಲೂ ತಿರಸ್ಕಾರ ಪೂರ್ವಕವಾದ ಬೈಗಳನ್ನು ಬೈಯುತ್ತಲೂ ನನ್ನ ಮುಖವನ್ನು ನೋಡಿ ಹಣೆಹಣೆ ಜಚ್ಚಿಕೊಳ್ಳುತ್ತಲೂ ಇದ್ದರು. ರಾತ್ರಿ ಒಂಭತ್ತುಗಂಟೆಯಾಯಿತು. ಎಲೆಯ ಮುಂದೆ ಕುಳಿತು ಯಜಮಾನರು ತುತ್ತನ್ನೆತ್ತಿದರು. ಒಂದೆರಡು ತುತ್ತನ್ನು ತಿನ್ನುವುದರೊಳಗಾಗಿ ನಾನು ಅವರ ಮುಂದೆ ಹೋದೆನು. ಅಯ್ಯೋ! ತಿಳಿಗೇಡಿಯೇ, ನನ್ನನ್ನು ಹಾಳುಮಾಡಿದೆಯಾ, ನನ್ನ ಸುಖಕ್ಕೆ ಮುಳ್ಳನ್ನೇ ತಂದೊಡ್ಡಿದೆಯಾ! ಎಂದು ಹೇಳಿ ಎಲೆಯನ್ನು ಬಿಟ್ಟೆದ್ದು ಕೈತೊಳೆದುಕೊಂಡು ಮನೆಯವರಾರಿಗೂ ಹೇಳದೆ ಮನೆಯನ್ನು ಬಿಟ್ಟು ಎಲ್ಲಿಗೋ ಹೊರಟುಹೋದರು.

ನನಗೂ ಆದಿನ ಅನ್ನವೇ ಸೇರಲಿಲ್ಲ. ರಾತ್ರಿ ನಿದ್ದೆಯೂ ಬರಲಿಲ್ಲ. ಪತಿಗೆ ವಂಚನೆಮಾಡಿ ಅವರಿಗೆ ತಿಳಿಸದೆ ಹಣವನ್ನಿಟ್ಟುಕೊಂಡಿದ್ದುದು ಇಷ್ಟು ಅನರ್ಥಕ್ಕೆ ಗುರಿಯಾಯಿತೆ! ಈ ಹಾಳುಹಣದಿಂದ ಇಂತಹ ಭಯಂಕರ ಸಂಘಟನೆಯು ಸಂಭವಿಸಿತೇ ಎಂದು ಹೇಳುತ್ತಾ ಹಣವನ್ನು ಕುರಿತು ಇಂತು ವಿವರಿಸತೊಡಗಿದೆನು. ಎಲೈ ಹಣವೆ! ನೀನೇ ಮನುಷ್ಯನ ಜೀವಿತಸಾರವೆಂದು ಹೇಳುವ ಪಕ್ಷದಲ್ಲಿ ನಿನಗೆ ಇಹಪರ ಸೌಖ್ಯವನ್ನುಂಟುಮಾಡುವ ಶಕ್ತಿ ಇರಬೇಕು. ನಿನ್ನ ಅನುಗ್ರಹವಿಲ್ಲದಿದ್ದರೆ ಮನುಷ್ಯನ ಜನ್ಮವೇವ್ಯರ್ಥ. ಇಹಲೋಕದಲ್ಲಿ ಸುಖವನ್ನು ಪಡೆಯಬೇಕಾದರೆ ನೀನೇ ಸಹಾಯ ಮಾಡಬೇಕು. ಪರೋಪಕಾರ, ದಾನ, ಧರ್ಮಗಳ ಮೂಲಕ ಪರಲೋಕವನ್ನು ಹೊಂದುವುದಕ್ಕೂ ನಿನ್ನ ಸಾನ್ನಿಧ್ಯವು ಇರಬೇಕು. ಆದರೆ ನಿನ್ನಿಂದ ಎಷ್ಟುಪ್ರಯೋಜ

ನಗಳಿರುವೆವೋ ಅಷ್ಟು ಕೆಡಕುಗಳೂ ಇರುವವು. ಇದು ದೈವೇಚ್ಛೆಗೆ ಅಧೀನವಾದುದು. ಹೇಗೆಂದರೆ ಪ್ರಜೆಗಳನ್ನು ಪರಿಪಾಲಿಸುವ ಸರಕಾರವು ಲೋಕಕ್ಕೆ ಎಷ್ಟು ಹಿತವನ್ನಾಚರಿಸುವುದೋ ದುಷ್ಟರ ವಿಷಯದಲ್ಲೂ ಅದು ಅಷ್ಟು ಕಾಠಿನ್ಯವನ್ನು ತೋರಿಸಲೇಬೇಕಲ್ಲವೆ? ಜಗತ್ತಿಗೆಲ್ಲಾ ಪರಮ ಪ್ರಯೋಜನವಾಗುವಂತೆ ವರ್ಷಿಸುವ ಮಳೆಯಲ್ಲಿ, ಸಿಡಿಲು, ಮಿಂಚು, ಗುಡುಗು, ಮುಂತಾದುವುಗಳು ಭಯಂಕರಗಳಾಗಿವೆ. ಆರೋಗ್ಯದಾಯಕನಾದ ಸೂರ್ಯನೇ ತನ್ನ ತಾಪದಿಂದ ಲೋಕವನ್ನೆಲ್ಲಾ ಪರಿತಪಿಸುವಂತೆ ಮಾಡುವನು. ಇದರಂತೆ ಹಣವು ನಮ್ಮ ಅನೇಕ ಕಾರ್ಯಗಳಿಗೆ ಫಲಕಾರಿಯಾಗಿ ಪರಿಣಮಿಸಿದರೂ ಮನುಷ್ಯನನ್ನು ನಾನಾವಿಧಗಳಾದ ಕಷ್ಟಗಳಿಗೆ ಗುರಿಮಾಡುವುದರಲ್ಲಿ ಆವ ಸಂದೇಹವೂ ಇಲ್ಲವೆಂಬುದನ್ನು ಯಾವಾಗಲೂ ಮರೆಯಲಾಗದು. ಪದಾರ್ಥಗಳಿರುಚಿಗಿಂತಲೂ ಧನರುಚಿಯು ಮಾನವರಿಗೆ ಬಲು ಇಂಪಾಗಿರುವುದು. ಒಬ್ಬನಲ್ಲಿ 8–10 ರೂಪಾಯಿಗಳಿದ್ದರೆ ಅದು ಮುಗಿವ ವರೆಗೂ ಅವನು ಎಷ್ಟೊ ರಾಜಭೋಗಗಳನ್ನಪೇಕ್ಷಿಸ ಬಹುದು. ತನ್ನ ಸೇವೆಗೆ ಒಬ್ಬನನ್ನು ನೇಮಿಸ ಬಹುದು. ಒಬ್ಬ ಉಪಾಧ್ಯಾಯನನ್ನು ಪಾಠಹೇಳುವುದಕ್ಕೆ ಇಟ್ಟುಕೊಳ್ಳಬಹುದು. ರುಚಿರುಚಿಯಾದ ಆಹಾರವನ್ನು ಬಯಸಬಹುದು. ಅಲ್ಪಧನದಿಂದಲೇ ಇಂತಹ ರಾಜಸುಖವನ್ನು ಪ್ರೇರಿಸುವ ಧನವು ಹೆಚ್ಚು ಹೆಚ್ಚಾಗಿ ಬೆಳೆದಷ್ಟೂ ಎಷ್ಟೋ ಭಾವನೆಗಳನ್ನೂ ದುರಾಶೆಗಳನ್ನೂ ಮನಸ್ಸಿನಲ್ಲಿ ಉತ್ಪತ್ತಿಮಾಡಬಹುದಲ್ಲವೆ! ಹಣದೊಡನೆ ಗುಣವೂ ಬೆಳೆದರೆ ಅದರಿಂದ ನಮಗೆ ಸುಖವುಂಟಾಗುವುದು. ಈಗ ವಿಚಾರಮಾಡಿದರೆ ಐಶ್ವರ್ಯವಂತರು ಬಹಳ ಕಡಮೆಯಾಗಿಯೂ ಬಡವರು ಹೆಚ್ಚಾಗಿಯೂ ಇರುವಂತೆ ತೋರುವದು. ಅನೇಕ ಧನಿಕರು ಬಡವರನ್ನು ತಿರಸ್ಕರಿಸುತ್ತಾ, ಮರಳಿಮರಳಿ ದ್ರವ್ಯ ಸಂಗ್ರಹದಲ್ಲೇ ಅಭಿಲಾಷೆಯುಳ್ಳವರಾಗಿ, ತುಂಬಾ ಅನ್ಯಾಯವನ್ನು ಮಾಡುತ್ತಿರುವರು. ಬಡವರು ಜೀವನಕ್ಕೆ ಯತ್ನವಿಲ್ಲದೆ ಧನಸಂಪಾದನೆಗಾಗಿ ನ್ಯಾಯವನ್ನುಲ್ಲಂಘಿಸಬೇಕಾಗಿದೆ. ಅಂತೂ ಇಂತೂ ಈ ಹಣದ ಮಹಿಮೆಯಿಂದ ಪ್ರಪಂಚದಲ್ಲಿ ನ್ಯಾಯ ಪ್ರಚಾರಕ್ಕೆ ಅವಕಾಶವು ಕಮ್ಮಿಯಾಗುತ್ತ ಬಂದಿದೆ.

ದ್ರವ್ಯದೇವಿಯ ಅನುಗ್ರಹವನ್ನು ಸಂಪಾದಿಸುವುದಕ್ಕಾಗಿ ಬಹು ಜನರು ಮಹಾಲಕ್ಷ್ಮೀವ್ರತವನ್ನು ಕಯ್ಗೊಂಡು ಆಕೆಯನ್ನು ವಿಧ ವಿಧವಾಗಿ ಅರ್ಚಿಸಿ ಅನೇಕ ವಿಧವಾಗಿ ಸ್ತೋತ್ರ ಮಾಡುವರು. ಅಂತಹ ಸ್ತೋತ್ರಜಾಲದಮೂಲಕ ಧನದೇವತೆಯನ್ನು ಪ್ರಸನ್ನಗೊಳಿಸುವ ಕವಿತಾ ಪ್ರೌಢಿಮೆಯು ನನ್ನಲ್ಲಿಲ್ಲ. ಆದುದರಿಂದ ನಮಗೆ ಹೊಗಳುವ ಭಟರೆಂಬ ಹೆಸರು ಬರಲಾರದು. ಆದರೆ ಆ ಧನಲಕ್ಷ್ಮಿಯು ನಮ್ಮನ್ನು ಅನುಗ್ರಹ

ಮಾಡದಿದ್ದರೂ ನಮ್ಮಮೇಲೆ ಕೋಪಿಸಿಕೊಳ್ಳದಿರಲೆಂದು ಭಾವಿಸಿ ಸ್ತೋತ್ರ ಪಾಠಾ ಭ್ಯಾಸ ಮಾಡಲುಪಕ್ರಮಿಸಿರುವೆವು.

" ಎಲೌ, ಮಾನುಷ ಫಲವರ್ಧಿನಿ ! ನಿನಗೆ ಬೇಗ ಬೇಗ ನಮಸ್ಕರಿಸುವೆವು. ಅದ ರಿಂದಲೇ ನೀನು ತಡೆಯಿಲ್ಲದೆ ನಮ್ಮ ಬೊಕ್ಕಸದಲ್ಲಿ ಕುಣಿದಾಡು. ದಡ್ಡನಿಗೂ ದೊಡ್ಡ ದಾದ ಫಲವನ್ನು ಕೊಡುವ ದುಡ್ಡು ದೇವರೇ! ನಿನಗಿಂತಲೂ ದೊಡ್ಡದಾದ ದೇವರಿಲ್ಲವೇ ಇಲ್ಲ ! ಹೇ ಸರ್ವತೋಮುಖಿ ! ಸರಕಾರದ ಕೆಲಸಕ್ಕೆ ಸೇರಿದರೂ ಭೂಮಿಯ ವ್ಯವ ಸಾಯವನ್ನು ಮಾಡುತ್ತಿದ್ದರೂ ಕೈಗಾರಿಕೆಯನ್ನು ಕೈಗೊಂಡರೂ ವ್ಯಾಪಾರ ಮಾಡ ಲಾರಂಭಿಸಿದರೂ ಎಲ್ಲಾ ಕಡೆಯಲ್ಲೂ ನೀನು ಮುಖವನ್ನು ತೋರಿಸಿದ ಹೊರತು ನಿರ್ವಾ ಹವೇ ಇಲ್ಲ. ಏಲೌ ಧನದೇವತೆಯೇ ! ನಿನ್ನನ್ನು ಅಂಧಕಾರಾವೃತರಾಗಿಯೇ ಪೂಜಿಸು ವೆವು. ಏಕೆಂದರೆ ಎಚ್ಚರದಿಂದ ನಮ್ಮ ಹಣವು ಸದ್ವಿನಿಯೋಗದಲ್ಲಿ ನಿಂತರೆ ನಾವು ರಿಕ್ತ ಹಸ್ತರಾಗಿ ಜನರ ಅಪಹೇಳನಕ್ಕೆ ಗುರಿಯಾಗುವೆವು. ಹೇ ತಿರಸ್ಕಾರ ವಿಮುಖಿ ! ನಿನ್ನನ್ನು ತಿರಸ್ಕರಿಸಿದುದರಿಂದಲೇ ಬಲಿ–ಹರಿಶ್ಚಂದ್ರ–ಕರ್ಣ–ಧರ್ಮಾದಿಗಳು ತಾವೇ ನಷ್ಟಪಟ್ಟರು. ಹೇ ! ಉಲ್ಲಾಸಿನೀ, " ಷರಟಿನ " ಜೇಬಿನಲ್ಲಿ ಎರಡು ರೂಪಾಯಿಗಳು ಇದ್ದಮಾತ್ರ ದಿಂದಲೇ ಉಲ್ಲಾಡಿಸುವ ಉಲ್ಲಾಸವನ್ನು ಕೊಡುವ ಶಕ್ತಿಯು ನಿನ್ನದೇ ಆಗಿರುವುದು. ಹೇ ! ಮಂದಗಾಮಿನಿ ! ಅತ್ಯಾಶೆಯಿಂದ ನಿನ್ನನ್ನಾಶಿಸುವವರ ಬಳಿಗೆ ಬರಲು ನೀನೇಕೆ ಮಂದಳಾದೆ? ಹೇ ಶೀಘ್ರಗಾಮಿನಿ !! ಒಬ್ಬರ ಬಳಿಯಿಂದ ಮತ್ತೊಬ್ಬರ ಬಳಿಗೆ ಅನ್ಯಾಯದಿಂದ, ವಿವೇಚನೆಯಿಲ್ಲದೆ ಹೋಗಿ ಸೇರಲು ನಿನ್ನ ನಡಿಗೆಯು ಎಷ್ಟು ಚುರು ಕಾಗಿರುವುದು. ಎಲೌ ಸರ್ವವ್ಯಾಪಿನಿಯೇ ! ಭೂಮಿಯಮೇಲೆ ಧನಾದಿರೂಪದಿಂದಲೂ ಒಳಗಡೆ ಲೋಹಾದಿರೂಪದಿಂದಲೂ ಪರಡಿರುವ ನಿನ್ನ ವ್ಯಾಪಕತೆಯು ಸರ್ವೋತ್ಕೃಷ್ಟ ವಾಗಿರುವುದು. ಹೇ ಅಜ್ಞಾನತಿಮಿರಬಹುಳಪಕ್ಷೆಯೆ ! ಅವಿವೇಕಿಯಾದ ಧನಿಕನಲ್ಲಿ ಎಂತಹ ಅಂಧಕಾರವನ್ನು ಅನುಗ್ರಹಿಸುವೆ? ಹೇ ಸರ್ವಸಮದೃಷ್ಟಿಯುಳ್ಳವಳೆ ! ಹಾಲುಮಾರುವವಳಲ್ಲಿಯೂ ಹೆಂಡಮಾರುವವನಲ್ಲಿಯೂ ನೀನು ಎಂತಹ ಸರ್ವಸಮತ್ವ ವನ್ನು ವ್ಯಕ್ತಗೊಳಿಸುತ್ತಿರುವೆಯೆಂಬುದು ಪರಮಾಶ್ಚರ್ಯಕರವಾಗಿರುವುದು. ಹೇ! ದಾರಿ ದ್ರ್ಯಾಂಬುಧಿತರಣೆ ! ಭವರೋಗಭಿಷಜೆ ! ಪ್ರಾಣದಾಯಿನಿ !! ಪ್ರಾಣಾಪಹಾರಿಣಿ !! ಪ್ರತಿಷ್ಠಾಪ್ರದಾಯಿನಿ !! ಮಹಾಪರಾಧಗೋಪನೆ!! ಪೌರುಷಪ್ರಕಾಶೆ !! ಜನ ವಶೀಕರೆ!! ಮಿಥ್ಯಾಸ್ತುತಿ ಫಲಪ್ರದಾಯಿನಿ !! ಅಜ್ಞಾನಾಂಧಕಾರ ಕೂಪಪತನ ಸಾಹಾಯ್ಯೆ !! ಸ್ವೇತರ ದೈವಜ್ಞಾನವಿನಾಶಿನೀ !! ಅನ್ಯಾಯಾರ್ಜಿತಜನಪಕ್ಷಪಾತೆ !! ಜಯ! ವಿಜಯ!! ನಿನ್ನ ಅದ್ಭುತ ಮಹಿಮೆಯನ್ನಾರು ವರ್ಣಿಸಲಾಪರು. ಹೇ ನ್ಯಾಯೋಲ್ಲಂಘನ ಶಿಕ್ಷಣ

ವಿಚಕ್ಷಣ ಚತುರೆ!! ವಿವೇಚನಾವಿರಹಿತಜನ ಗೌರವಪ್ರದಾಯಿನಿ!! ಕೊಲೆಗಾರರು ನಿಷ್ಕಲ್ಮಷರಾಗುವುದು ನಿನ್ನಿಂದಲೇ! ಬಡವರು ಹಣವನ್ನು ಇಟ್ಟುಕೊಂಡಿದ್ದರೆ ಕಳ್ಳರೆಂದು ಸಮರ್ಥಮಾಡುವ ವಿವೇಕವು ನಿನ್ನ ಮಹಿಮೆಯೇ! ರಾಜಚರಿತೆಗಳು ಮಿಥ್ಯಾಸ್ತುತಿಯಿಂದ ತುಂಬುವುದು ನಿನ್ನಿಂದಲೇ! ಒಬ್ಬನು ಮತ್ತೊಬ್ಬನಿಗೆ ಪರಲೋಕಯಾತ್ರೆಯನ್ನು ಮಾಡಿಸುವುದು ನಿನ್ನಿಂದಲೇ! ಸುಳ್ಳಾದ ಸಾಕ್ಷ್ಯಗಳಿಗೆ ನಿಜ ಸ್ಥಾಪನೆಯಾಗುವುದೂ ನಿನ್ನಿಂದಲೇ! ಅಣ್ಣತಮ್ಮಂದಿರನ್ನೂ ಹೆಂಡತಿಮಕ್ಕಳನ್ನೂ ಮಾತಾಪಿತೃಗಳನ್ನೂ ತೊರೆಸಿಬಿಡುವ ಮಹಿಮೆಯೂ ನಿನ್ನದೇ! ಓರಗಿತ್ತಿಯರನ್ನು ಓಡಿಸಿಬಿಡುವವನೂ ನೀನೇ! ಲಂಚ ಮುಂತಾದವುಗಳ ರೂಪದಿಂದ ಎಷ್ಟೋ ಜನರ ಮನೆಯನ್ನು ಹಾಳುಮಾಡಿದಾಗ್ಯೂ ಕೆಲವರಿಗಾದರೂ ಉಪಕಾರಮಾಡುತ್ತಿರುವ ನಿನ್ನ ಕಾರುಣ್ಯವು ಅನ್ಯಾದೃಶವಾದುದು. ದಿಟವನ್ನು ಸಟೆಯನ್ನಾಗಿಯೂ ಸಟೆಯನ್ನು ದಿಟವನ್ನಾಗಿಯೂ ಕನಿಷ್ಠನನ್ನು ಜ್ಯೇಷ್ಠನನ್ನಾಗಿಯೂ, ಜ್ಯೇಷ್ಠನನ್ನು ಕನಿಷ್ಠನನ್ನಾಗಿಯೂ ಉತ್ತಮ ಜಾತಿಯನ್ನು ನೀಚಜಾತಿಯನ್ನಾಗಿಯೂ ನೀಚಜಾತಿಯನ್ನು ಉತ್ತಮಜಾತಿಯನ್ನಾಗಿಯೂ ಮಾಡುವ ನಿನ್ನ ಶಕ್ತಿಯು ಅನ್ಯಾದೃಶವಾದುದು. ಹೇ ಅಮೃತಕವಚ ಶೋಭಿತನಾಶಯೆ! ಮಲಿನೀಕೃತ ಮಹಾಶಯೆ! ಜಡೀಕೃತದೃಢಾಶಯೆ! ಅಧರೀಕೃತ ಬುಧಾಶಯೆ! ನಿಷ್ಪಂದೀಕೃತ ಭಾವಾಶಯೆ! ತೃಣೀಕೃತ ಗುಣಾಶಯೆ! ಯಾವ ಉತ್ತಮ ಗುಣವಂತನನ್ನು ನೀನು ಮಲಿನನನ್ನಾಗಿ ಮಾಡಲಿಲ್ಲ? ಯಾವ ಸತಿಯ ಸತೀತ್ವವನ್ನು ಅವಮಾನಗೊಳಿಸಲಿಲ್ಲ? ನಿಶ್ಚಯಮನಸ್ಕಳಾದ ಯಾವ ಸತ್ಯವತಿಯನ್ನು ಕಳ್ಳಳನ್ನಾಗಿ ಮಾಡಲು ಪ್ರಯತ್ನಿಸಲಿಲ್ಲ? ಯಾವ ಯಾವ ಅನ್ಯಾಯಗಳು ಬೇಕಾದರೂ ಎಲ್ಲವುಗಳಿಗೂ ಸಹಾಯಮಾಡಲು ಬದ್ಧಕಂಕಣಳಾದ ನಿನ್ನ ವಿಶುದ್ಧಮಂತ್ರಿತ್ವವನ್ನು ಎಷ್ಟೆಂದು ಹೊಗಳಲಾಗುವುದು. ಅಲ್ಪಜ್ಞಳಾದ ನನಗೆ ನಿನ್ನನ್ನೆಂತು ಹೊಗಳಬೇಕೋ ಅದು ತಿಳಿಯದು. ಇಷ್ಟವಿದ್ದರೆ ಮೇಲಣ ಸ್ತುತಿಯನ್ನು ಸ್ವೀಕರಿಸು. ಇಲ್ಲವಾದರೆ ಪಾತಕರ ಪಥನಕ್ಕೇ ಬಿಟ್ಟುಬಿಡು. ನಿನ್ನಿಂದಲೇ ಎಲ್ಲವೂ ಜಗಬಹುದೆಂಬ ಭಾವನೆಯಿದ್ದರೂ ಇತರ ಸಹಾಯವಿಲ್ಲದ ನಿನ್ನನುಗ್ರಹವು ಪ್ರಯೋಜನವಿಲ್ಲವೆಂಬ ಭಾವನೆಯಿಂದ ನಿನ್ನ ಸ್ತುತಿಯನ್ನು ಇಷ್ಟಕ್ಕೇ ಸಾಕುಮಾಡಿರುವೆನು

(ವಿವೇಕಮಂಜರಿ.)

ಹೀಗೆ ಹಣವನ್ನು ಹೊಗಳುತ್ತಿರುವಾಗಲೇ ನನಗೆ ನಿದ್ದೆ ಬಂದುಬಿಟ್ಟಿತು. ನಿದ್ದೆಯೂ ಜೆನ್ನಾಗಿ ಬಂದಿತು. ಲೋಕದಲ್ಲಿ, ಹೊಸದಾಗಿ ಏನಾದರೊಂದು ಕೆಟ್ಟಕೆಲಸ ಮಾಡಿದವರಿಗೂ, ಅವಮಾನವಾದವನಿಗೂ, ದುಃಖವಾಪ್ತಿಯಾದವನಿಗೂ, ಪ್ರಯತ್ನ

ವಿಲ್ಲದೆ ಅತ್ಯಂತ ಸಂತೋಷವೊದಗಿದವನಿಗೂ, ವಾಂಛಿತಫಲವು ಕೈಗೂಡುವದು ಸ್ವಲ್ಪ ದಿವಸವಿದೆ ಎಂದು ಯೋಚಿಸುವವನಿಗೂ, ಮದುವೆ, ನಿಷೇಕ, ಪರೀಕ್ಷಾಫಲಿತಾಂಶ, ಸೆರೆಮನೆಯ ಬಿಡುಗಡೆ, ಮುಂತಾದವು ಹತ್ತಿರದಲ್ಲಿದ್ದವನಿಗೂ, ರೋಗಿಗೂ, ನಿದ್ದೆಯು ಹತ್ತುವುದಿಲ್ಲ. ನನಗೆ ಯಾವ ಯೋಜನೆಯೂ ಇಲ್ಲದ್ದರಿಂದ ನಿದ್ದೆಯು ಜೆನ್ನಾಗಿ ಹತ್ತಿತು. ನಿದ್ದೆಹತ್ತಿದಾಗ್ಯೂ ನಿದ್ದೆಯ ಮಧ್ಯದಲ್ಲಿ ಹಗಲು ನಡದ ಹಣದ ವಿಚಾರ ಗಳು ಕನಸಿನರೂಪವಾಗಿ ಭಾಸಿಸುತ್ತಿದ್ದುವು.

VIII

ಬೆಳಗಾಯಿತು. ಉದ್ಯೋಗಿಗಳು ತಮ್ಮತಮ್ಮ ಕಾರ್ಯಗಳಲ್ಲಿ ನಿರತರಾದರು. ನಮ್ಮ ಅತ್ತಮ್ಮನವರೂ, ನಮ್ಮ ತಾತನೂ ಅದೇದಿನ ಆವಶ್ಯಕವಾದ ಕೆಲವು ಗೃಹಕೃ ತ್ಯಗಳಿಗಾಗಿ ಹರಪುರಕ್ಕೆ ಪ್ರಯಾಣಮಾಡಿದರು. ಆದಿನ ಮನೆಯಲ್ಲಿ ನಾನೂ, ಅಕ್ಕ, ಭಾವ ಇಷ್ಟುಮಂದಿಮಾತ್ರವೇ ಇದ್ದೆವು. ನನ್ನನ್ನು ಆದಿನ ಯಾರೂ ಮಾತನಾಡಿಸ ಲಿಲ್ಲ. ಮಧ್ಯಾಹ್ನವಾಯಿತು, ಎಲ್ಲರಿಗೂ ಊಟವಾಯಿತು. ನಾನೂ ಹೇಗೋ ಊಟ ಮಾಡಿದೆನು. ಮದ್ಯಾಹ್ನ ಮೂರುಗಂಟೆಯ ಸಮಯದಲ್ಲಿ ಅಂಚೆಯ ಜವಾನನು ಬಂದು ನನ್ನ ಹೆಸರಿಗೊಂದು, ನಮ್ಮ ಭಾವನವರ ಹೆಸರಿಗೊಂದು ಈ ರೀತಿ ಎರಡು ಕವರುಗಳನ್ನು ಕೊಟ್ಟು ಹೊರಟುಹೋದನು. ಅವೆರಡು ತಂತಿಯ ಮೂಲಕ ಬಂದ ಕವರುಗಳಾಗಿದ್ದುವು. ಟಪಾಲಿನ ಮುದ್ರೆಯು ಇರಲಿಲ್ಲ. ಒಡೆದು ನೋಡಲು ರಂಗ ಪುರದಿಂದ ನಮ್ಮ ಯಜಮಾನರಕಡೆಯಿಂದ ಬಂದ ತಂತೀವರ್ತಮಾನವೆಂದು ತಿಳಿದು ಬಂದಿತು. ಅವೆರಡಲ್ಲೂ ಏನು ವಿಚಾರವಿರುವುದೆಂಬುದನ್ನು ತಿಳಿಯಲು ನಮ್ಮ ಪಾಠ ಕರು ಕುತೂಹಲಿಗಳಾಗಿರುವುದರಿಂದ ಅದನ್ನು ಒಂದೊಂದನ್ನಾಗಿ ಈ ಕೆಳಗೆ ಬರೆ ಯುವೆನು.

ನಮ್ಮ ಭಾವನವರಿಗೆ ಬಂದವರ್ತಮಾನ.

ನಾನು ನಿನ್ನೆರಾತ್ರಿ ಇಲ್ಲಿಗೆಬಂದು ಸ್ನೇಹಿತರೊಬ್ಬರ ಮನೆಯಲ್ಲಿ ಮಲಗಿದ್ದೆನು. ಬೆಳಗಾದಮೇಲೂ ನಮ್ಮ ಮಾವನವರ ಮನೆಗೆ ಹೋಗಲಿಲ್ಲ. ಅವರ ಮನೆಗೆ ಊಟಕ್ಕೆ ಹೋಗಲು ನನಗೆ ಇಷ್ಟವಿಲ್ಲದೆ ಸರ್ಕಾರದ ಛತ್ರದಲ್ಲಿ ಊಟಮಾಡಿಕೊಂಡು ಬಳಿಕ ನಮ್ಮ ಮಾವನವರ ಮನೆಗೆ ಹೋಗಿ ಒಂದೆರಡುಗಳಿಗೆ ಯಾವ ಯಾವುದೋ ಮಾತನ್ನಾ ಡುತ್ತ ಕುಳಿತಿದ್ದೆನು. ಆಗ ಅತ್ತಮ್ಮನವರು ನಡುಮನೆಯಲ್ಲಿ ಊಟದೆಲೆಯನ್ನು ಹಚ್ಚುತ ಕುಳಿತಿದ್ದರು. ಎಷ್ಟುಹೊತ್ತಾದರೂ ಈಚಿಗೆಬರಲಿಲ್ಲ. ಒಂದೆರಡು ಗಳಿಗೆಯಾದನಂತರ ನಾನೇ ನಡುಮನೆಗೆ ಹೋಗಿ, ಅತ್ತಮ್ಮನವರನ್ನು ನಿರ್ದೇಶಿಸಿ " ನೀವು ನಿಮ್ಮ ಮಗಳಿಗೆ

ಪ್ರತ್ಯಕ್ಷವಾಗಿಯಾಗಲೀ ಪರೋಕ್ಷವಾಗಿಯಾಗಲೀ ಯಾವುದಾದರೂ ಪದಾರ್ಥಗಳನ್ನು ಕೊಟ್ಟಿರುವಿರಾ ? ಹಾಗೆಕೊಟ್ಟಿದ್ದರೆ ಅವುಗಳ ತಪಶೀಲನ್ನು ತಿಳಿಸಿರಿ '' ಎಂದು ಕೇಳಿದೆನು. ನನ್ನ ಮಾತನ್ನು ಕೇಳಿ ಅವರು ಸಂಕೋಚವನ್ನೂ ಗಾಬರಿಯನ್ನೂ ಹೊಂದಿದರೆಂದು ತಿಳಿದು ಬಂದಿತು. ಪುನಃ ನಾನು, ಸಂಕೋಚಕ್ಕೂ ಗಾಬರಿಗೂ ಇದು ಸಮಯವಲ್ಲ. ಈ ವಿಚಾರವನ್ನು ನೀವು ಹೇಳಲೇಬೇಕು. ಅಥವಾ ಏನೂ ಕೊಡದಿದ್ದರೆ, ಏನೂ ಕೊಟ್ಟಿಲ್ಲವೆಂದು ಹೇಳಿಬಿಡಿರಿ. ಅಂತೂ ನಿಶ್ಚಯವಾದ ಮಾತನ್ನು ಈಗ ಹೇಳಬೇಕು. ಇಲ್ಲವಾದರೆ ಅಭಾಸವಾದೀತು. ಎಂದುಹೇಳಿದೆನು. ಇಷ್ಟಾದನೇಲೆ ಅವರು ಅಂಜುತ್ತ ಅಂಜುತ್ತ ನಾನು ಯಾರಿಗೂ ತಿಳಿಸದಿರುವಂತೆ ಹೇಳಿ ಒಂದು ಅಡುವಿನ ಅಡ್ಡಿಕೆಯನ್ನೂ ಐವತ್ತು ರೂಪಾಯಿಗಳನ್ನೂ ನಮ್ಮ ಹಡುಗಿಯವಶಕ್ಕೆ ಕೊಟ್ಟಿರುವೆನೇ ವಿನಾ ಇನ್ನಾವ ಪದಾರ್ಥಗಳನ್ನೂ ಕೊಟ್ಟಿಲ್ಲವೆಂದು ಹೇಳಿದರು. ಈ ಸ್ಥಿತಿಯನ್ನು ಯೋಚಿಸಿ ನೋಡಿದರೆ ನಿನ್ನೆ ನಿಮ್ಮ ಪೆಟ್ಟಿಗೆಯಲ್ಲಿ ಹೋಯಿತೆಂಬ ಹಣವು ಸೌಭಾಗ್ಯವತಿಯ ಪೆಟ್ಟಿಗೆಯಲ್ಲಿ ದೊರೆತ ಹಣವಲ್ಲವಾದ್ದರಿಂದ ಆ ಹಣವನ್ನು ಅವಳಿಗೇ ಹಿಂತಿರುಗಿ ಕೊಟ್ಟುಬಿಡಬೇಕು. ನಿನ್ನೆಯದಿವಸ ಸರ್ವರ ಸಮಕ್ಷಮದಲ್ಲಿ ನಮ್ಮ ತಾಯಿಯ ಹಣವೆಂದು ಸೌಭಾಗ್ಯವತಿಯು ಹೇಳಿದ ಮಾತು ನಿಜವಾಗಿರುತ್ತದೆ. ಆದ್ದರಿಂದ ನಿಮ್ಮ ಹಣ ಹೋದುದಕ್ಕೆ ನಾವು ಉತ್ತರವಾದಿಗಳಲ್ಲ. ಹಣವನ್ನು ಕೊಡದಿದ್ದರೆ ಮನಸ್ತಾಪಕ್ಕೆ ಕಾರಣವಾಗಬಹುದು.

ರಂಗಪುರೀ, ಇತಿ ವಿಜ್ಞಾಪನಾ.

16-1-17. H. V. SASTRY.

ನನ್ನ ಹೆಸರಿಗೆ ಕೆಳುತಿಸಿದ ವರ್ತಮಾನ.

ನಿನ್ನೆ ನಡೆದ ವಿಷಯದಲ್ಲಿ ನಾನು ನಿನ್ನನ್ನು ಅಪರಾಧಿಯೆಂದು ನಿಶ್ಚಯಿಸಿದ್ದೆನು. ಆದರೆ ನಮ್ಮ ಮನೆಯವರ ಮತ್ತು ನಿನ್ನ ಕೋರಿಕೆಯಂತೆ ನಾನು ನಿನ್ನ ಮಾತಿನ ನಿಶ್ಚಯಾಂಶವನ್ನು ತಿಳಿಯುವದಕ್ಕಾಗಿ ನಿಮ್ಮ ತಾಯಿಯವರನ್ನು ಏನೋ ಒಂದು ವಿಧವಾಗಿ ಪ್ರಶ್ನೆಮಾಡಲು, ನಿನ್ನ ವಶಕ್ಕೆ 50 ರೂಪಾಯನ್ನೂ ಒಂದು ಅಡ್ಡಿಕೆಯನ್ನೂ ಕೊಟ್ಟಿರುವೆನೆಂದು ಹೇಳಿದರು. ಇದೇ ವಿಷಯವನ್ನು ನಮ್ಮ ಅಣ್ಣನವರ ಪರಾಂಬರಿಕೆಗಾಗಿ ತಿಳಿಸಿರುತ್ತೇನೆ. ಅವರು ಸಂತೋಷದಿಂದ ಹಣವನ್ನು ಕೊಟ್ಟರಿಕೊಡಲಿ. ಇಲ್ಲವಾದರೆ ಅದನ್ನು ನೀನು ಕೇಳಬೇಡ. ನೀನು ನನ್ನ ಸಂಗಡ ಈ ವಿಷಯವನ್ನು ಹೇಳದೆ ಗೋಪ್ಯಮಾಡಿಕೊಂಡಿದ್ದ ಅಪರಾಧಕ್ಕೆ ಆ ಹಣವನ್ನು ಭಾಪ

ನವರಿಗೆ ಜುಲ್ಮಾನೆಯಾಗಿ ಕೊಟ್ಟಂತೆ ಭಾವಿಸಿಕೊ. ಇನ್ನುಮೇಲಾದರೂ ಹಠಮಾರಿ ತನವನ್ನೂ, ಹುರುಡನ್ನೂ, ಮೌಗ್ಧ್ಯವನ್ನೂ, ಪರಿತ್ಯಜಿಸು. ನಾನು ನಾಳೆಯದಿನ ಸಾಯಂಕಾಲ ಅಲ್ಲಿಗೆ ಬರುತ್ತೇನೆ.

ರಂಗಪುರೀ, ಇತ್ಯಾಶಿಷಃ
16-1-17. H. V. Sastry.

ಕಾಗದವನ್ನು ನೋಡಿ ನನಗೆ ಒಳು ಸಂತೋಷವಾಯಿತು. ಮತ್ತು ನಾನು ವೃಥಾಪವಾದ ಗ್ರಸ್ತಳಾಗಿ ನನ್ನ ಯಜಮಾನರ ಅಪಿತಕ್ಕೆ ಪಾತ್ರಳಾಗಿದ್ದುದಕ್ಕೆ ತಕ್ಕ ಪ್ರಾಯಶ್ಚಿತ್ತಕ್ಕಾಗಿ "ಉಗ್ಯಂಧನಂವಾ ವಿಷಭಕ್ಷಣಂವಾ ಕೃತ್ವಾಮರಿಷ್ಯೆ." ಎಂದು ನಿಶ್ಚಯಮಾಡಿಕೊಂಡೆನು. ಯಾವ ಸ್ತ್ರೀಯು ತನ್ನ ಪತಿಯ ವಿಷಯದಲ್ಲಿ ದ್ರೋಹಮಾಡುವಳೋ ಅಂಥವಳು ಜನ್ಮಿಸಿದ್ದರೂ ವ್ಯರ್ಥ, ನಾನು ನನ್ನಲ್ಲಿದ್ದ ಹಣದ ವಿಷಯವನ್ನು ನನ್ನ ಯಜಮಾನರಿಗೆ ತಿಳಿಸದಿದುದು ಮಹಾ ಪಾಪಕರವಾದ ಕಾರ್ಯವಾಗಿದ್ದು, ನನ್ನ ನೈಜಗುಣವೂ, ಭೀರುಭಾವವೂ, ನಿರಪರಾಧಿತ್ವವೂ ಸ್ಥಾಪಿತವಾದ ಮೇಲೆ ನಾನು ಪರಾರ್ಧಾಂತಳೇನೋ ಆದೆನು. ಆದರೆ ಕೆಂಚಿತ್ತಾಲ ನನ್ನ ಯಜಮಾನರ ಮನಸ್ಸಿನಲ್ಲಿ ಮಹಾ ಸಂಕಟವನ್ನು ತಂದಿಟ್ಟಿದ್ದ ನಾನು ಇನ್ನು ಬದುಕಿ ಏನು ಪ್ರಯೋಜನ. ಆದುದುಂದ ಹೇಗಾದರೂ ಈ ಪ್ರಾರ್ಥನ ದೇಹವನ್ನು ಪಂಚಭೂತಗಳಲ್ಲಿ ಐಕ್ಯ ಮಾಡುವುದೇ ಸರಿಯೆಂದು ನಿರ್ಧರಿಸಿದೆನು. ಆದರೂ ಈವರ್ತಮಾನವನ್ನು ಅವರ ಪಾದತಲದಲ್ಲಿ ಸಮರ್ಪಿಸಿ, ಬಲಪತನ ಮಾಡಬೇಕೆಂದು ನಿಶ್ಚಯಿಸಿಕೊಂಡೆನು. ನಮ್ಮ ಭಾವನವರಾದರೂ ನಮ್ಮ ಯಜಮಾನರ ಕಾಗದವನ್ನು ನೋಡಿ ಹೆಂಚತಿಯೊಡನೆ ಏನೋ ಗುಸುಗುಸು ಮಾತನಾಡಿಕೊಳ್ಳುತ್ತಿದ್ದರು. ಆದೇನೆಂದು ನನಗೆ ಅರ್ಥವಾಗಲಿಲ್ಲ. ಆದರೂ ಕಷ್ಟದಿಂದಲೂಪಿಸಿನೋಡಲು, ಅಪರಾಧಿಯಾದ ಹೆಂಚತಿಯ ಗುಣವನ್ನು ಮುಚ್ಚಿಪಡುವುದಕ್ಕಾಗಿ ಈ ಆಟವನ್ನು ಹೂಡಿದ್ದಾನೆಂದು ನಮ್ಮ ಭಾವನವರು ತಮ್ಮನ ವಿಷಯದಲ್ಲಿ ನಿಷ್ಕರ್ಷಿಸಿರುವರೆಂದು ತಿಳಿದು ಬಂದಿತು. ಏನಾದರೂ ಆಗಲಿ. ಹೇಗಾದರೂ ಹೋಗಲಿ. ಇತರರು ಏನು ಬೇಕಾದರೂ ಊಹಿಸಿಕೊಳ್ಳಲಿ. ನನ್ನ ಯಜಮಾನರು ನನ್ನ ವಿಷಯದಲ್ಲಿ ನಿಷ್ಕಳಂಕರಾಗಿರುವುದೊಂದೇ ನನಗೆ ಮುಖ್ಯವಾಗಿಬೇಕಾದುದು.

ಮಾರನೆಯದಿನ ಪ್ರಾತಃಕಾಲ ನಮ್ಮ ಯಜಮಾನರೂ ಬಂದರು. ನನ್ನನ್ನು ವಿಶೇಷವಾಗಿ ತಿರಸ್ಕರಿಸಿದುದಕ್ಕಾಗಿ ಕ್ಷಮೆಬೇಡಲು ನನ್ನ ಬಳಿಗೆ ಬಂದರು. ನನಗೆ ಆಗ ಮನ

ಸ್ಸಿನಲ್ಲಿ ಹರ್ಷಾಶ್ಚರ್ಯ ವ್ಯಸನಗಳು ಸಂಮಿಳಿತವಾಗಿದ್ದುವು. ನಾನು ನಮ್ಮ ಯಜಮಾನರನ್ನು ಬಹು ವಿಧವಾಗಿ ಪ್ರಾರ್ಥಿಸಿದೆನು. ಪತಿಗೆ ವಂಚನೆಮಾಡಿ ಆತನ ಮನಸ್ಸಿಗೆ ಬೇಸರ ಪಡಿಸಿದವಳು ಬದುಕಿರುವುದಕ್ಕಿಂತಲೂ ಸಾಯುವುದುಮೇಲೆಂದು ಅವರೊಡನೆ ಹೇಳಿ ಮಗುವನ್ನು ಎರಡುಬಾರಿ ಮುದ್ದಿಸಿ ನಮ್ಮ ಸ್ವಾಮಿಯ ಪಾದಗಳಿಗೆ ನಮಸ್ಕರಿಸಿ ನಾನು ಮನಸ್ಸಿನಲ್ಲಿ ಮಾಡಿಕೊಂಡಿದ್ದ ವಿಷಯವನ್ನು ಅವರೊಡನೆ ವಿಜ್ಞಾಪಿಸಿಕೊಂಡೆನು. ಆಗ ಯಜಮಾನರು ಜಕಿತರಾಗಿ ನನ್ನನ್ನೇ ದಿಟ್ಟಿಸಿನೋಡುತ್ತಾ ನನ್ನೆರಡು ಕೈಗಳನ್ನೂ ಪಿಡಿದೆಳೆದು ತಮ್ಮ ಹತ್ತಿರದಲ್ಲಿ ಕುಳ್ಳಿರಿಸಿಕೊಂಡು ಇಂತು ಉಪದೇಶಿಸಲಾರಂಭಿಸಿದರು.

ಮುಗ್ಧೆ !

ನಿನಗಿನ್ನೂ ಪ್ರಾಪಂಚಿಕ ವ್ಯವಹಾರಜ್ಞಾನವೂ ಗೃಹಿಣಿಯ ವೃತ್ತವೂ ಚೆನ್ನಾಗಿ ತಿಳಿದಿಲ್ಲ. ಈಗ ನಮ್ಮ ಮನೆಯಲ್ಲಿ ಸಂಘಟಿಸಿರುವ ಹಣದ ವಿಷಯವು ನಿನ್ನನ್ನು ಒಳ್ಳೆಯ ಗೃಹಿಣಿಯನ್ನಾಗಿ ಮಾಡಲು ನಡೆದಂತೆಯೇ ಭಾವಿಸುತ್ತೇನೆ. ನಿನ್ನ ಮನಸ್ಸಿನಲ್ಲಿ, ನನ್ನ ಹಣವೂ ಹೋಗಿ ನಿಷ್ಕಾರಣಾಪವಾದಕ್ಕೂ ಪಾತ್ರಳಾಗಬೇಕಾಗಿ ಬಂದಿತಲ್ಲಾ ಎಂಬ ಯೋಚನೆಯು ಪ್ರಬಲವಾಗಿರಬಹುದು. ಹಣ ಹೋದರೆ ಹೋಗಲಿ. ಅದಕ್ಕಾಗಿ ನೀನು ಚಿಂತಿಸಬೇಡ, ನಿಮ್ಮ ತಾಯಿಯನ್ನು ಕೇಳಿದಾಗಲೇ ನೀನು ನಿರಪರಾಧಿನಿಯೆಂದು ನನಗೆ ಗೊತ್ತಾದುದು. ಇಷ್ಟು ಅನರ್ಥಗಳಿಗೂ ಮೂಲಕಾರಣರು ನಿಮ್ಮ ತಾಯಿ ತಂದೆಗಳೆಂದು ಭಾವಿಸಿಕೊ. ನಿಮ್ಮ ತಾಯಿಯು ನಿನ್ನಲ್ಲಿ ಹಣವನ್ನು ಕೊಡುವಾಗ ನಿಮ್ಮ ಯಜಮಾನರಿಗೆ ಈ ವಿಷಯವನ್ನು ತಿಳಿಸಬೇಕೆಂಬ ಹೇಳಿದ್ದು ಅವರ ಮುಖ್ಯತಪ್ಪು. ನಿನಗಾದರೂ ಮಾರ್ಗದರ್ಶಿಯಾಗಿ ಆ ವಿಚಾರವನ್ನು ನನ್ನೊಡನೆ ತಿಳಿಸದಿದ್ದುದು ನಿನ್ನತಂಪು ನಮ್ಮ ಮನೆಯಲ್ಲಿ ಹಣ ಹೋಯಿತೆಂದು ಜರ್ಜರಿಪಾಗಲಾಗಲೀ ಪೆಟ್ಟಿಗೆಗಳನ್ನು ಶೋಧಿಸಬೇಕೆಂಬ ವಿಚಾರ ಬಂದಾಗಲಾಗಲೀ ನೀನು ಈ ವಿಷಯವನ್ನು ಯಾರೊಡನೆಯೂ ಹೇಳದೇಹೋದೆ. ಹೀಗೆ ಹೇಳದಿರುವುದರ ಕಾರಣವನ್ನು ನಾನುಬಲ್ಲೆ. ನಿನ್ನ ಭೀರುಸ್ವಭಾವವೂ, ಮಾತೃರಹಸ್ಯೋಪದೇಶಮಂತ್ರವೂ, ಅದೇ ಕವೂ ನಿನಗೆ ಆಗ ಅಜ್ಞಾನವನ್ನು ತಂದಿಟ್ಟಿತು. ಲೋಕದಲ್ಲಿ ತಂದೆ ತಾಯಿಗಳು ಹೆಣ್ಣುಮಕ್ಕಳಿಗೆ, ಪತಿಸೇವಾ ಧರ್ಮವನ್ನು ತಿಳಿಯಿಸಿ, ಆತನ ಮನಸ್ಸನ್ನು ಪ್ರಸನ್ನವಾಗಿರುವಂತೆ ಇಡಲು ತಕ್ಕಂತೆ ಉಪದೇಶಿಸಿ ನಿನ್ನ ತಂದೆತಾಯಿಗಳಂತೆ ಇಂತಹ ಮನೆಹಾಳು ರಹಸ್ಯಗಳನ್ನೂ ಮಕ್ಕಳುಗಳಿಗೆ ಪತಮಾರಿತನವನ್ನೂ ಒಡವೆಗಾಗಿ ಗಂಡನನ್ನು ಸೀಡಿಸಬೇಕೆಂಬುದನ್ನು, ಇನ್ನೊಬ್ಬರನ್ನು ನೋಡಿ ಹುರುಡು ಪತ್ತಬೇಕೆಂಬುದನ್ನು ಉಪದೇಶಿಸಿದರೆ ಲೋಕದಲ್ಲಿ ಯಾವ ಸಂಸಾರವೂ ನೆಟ್ಟಗಾಗಲಾರದು. ತನ್ನ ಮನೆಗೆ ತಾನೇ

ಬೆಂಕಿ ಹಚ್ಚಿಕೊಂಡು ಜ್ವಾಲೆಯು ಸರ್ವತ್ರವ್ಯಾಪಿಸಿದಾಗ ಪಶ್ಚಾತ್ತಾಪ ಪಡುವರಂತೆ ನಿನ್ನ ತಾಯಿಯ ಸ್ಥಿತಿಯಾಯಿತು. ನೀನು ಇದನ್ನೆಲ್ಲಾ ಮನಸ್ಸಿನಲ್ಲಿ ಚೆನ್ನಾಗಿ ಆಲೋಚಿಸು. ಇನ್ನು ಮುಂದಾದರೂ ನಿನ್ನ ಎಚ್ಚರಿಕೆಯಲ್ಲಿ ನೀನಿರು. ನೀನು ಈಗ ಕಳೆದುಕೊಂಡ ಹಣವು ನೀತಿಬೋಧೆಗಾಗಿ ಗುರುಗಳಿಗೆ ಕೊಟ್ಟದಕ್ಷಿಣೆಯೆಂದು ತಿಳಿದುಕೊ. ಈಗ ಹಣ ಹೋದ ವಿಚಾರವು ನಡೆಯದಿದ್ದರೆ ಇಷ್ಟು ಸಂಘಟನೆಗಳು ಉಂಟಾಗುತ್ತಿರಲಿಲ್ಲ. ನಿನಗೆ ಚೆನ್ನಾಗಿ ಬುದ್ಧಿಯೂ ಬರುತ್ತಿರಲಿಲ್ಲ. ನಿನ್ನ ತಂದೆ ತಾಯಿಗಳ ಹಿತೋಪದೇಶವು ಹೀಗೆಯೇ ಬೆಳೆದು ನಮ್ಮಿಬ್ಬರನ್ನೂ ಬಹುಕಷ್ಟಕ್ಕೆ ಗುರಿಮಾಡುತ್ತಿದ್ದಿತು. ಈಗ ನಾನು ಮಾಡಿದ ಉಪದೇಶವೂ ನಿನಗೆ ಲಭಿಸುತ್ತಿರಲಿಲ್ಲ. ಪ್ರಿಯೆ! ಭಾವಿಸು! ಚೆನ್ನಾಗಿ ಯೋಚಿಸು.! ಈಗ ನಿನಗೆ ಅಕಸ್ಮಾತ್ತಾಗಿ ಪ್ರಾಪ್ತವಾದ ಅಪಮಾನವು ನಿನ್ನ ಭವಿಷ್ಯತ್ಸುಖಾಭಿವೃದ್ಧಿಗೆ ಹೌದೋ ಅಲ್ಲವೋ ಹೇಳು. ಇನ್ನೂ ಕೇಳು, ಲೋಕದಲ್ಲಿ ಕೆಲವು ಮಂದಿ ಮೂರ್ಖಸ್ತ್ರೀಯರು ತಮ್ಮ ಗಂಡಂದಿರನ್ನು ಸ್ವಾಧೀನಪಡಿಸಿಕೊಳ್ಳುವುದಕ್ಕೆ ಉಪಾಯವನ್ನು ಹುಡುಕುತ್ತಾರೆ. ಇಂತಹ ಸ್ತ್ರೀಯರಿಗೆ ತಕ್ಕ ಉಪದೇಶಕರೂ ಸಿಕ್ಕುತ್ತಾರೆ. ಪಂಚಾಕ್ಷರೀಪುರಶ್ಚರಣೆ, ತಾಯತೀ, ಭಸ್ಮವೇ, ಮುಂತಾದ ಔಷಧಪ್ರಯೋಗ, ಹಸುರು ಹಾಕುವುದು, ಇಂತಹ ಕಪಟಮಾಯಾ ವಿದ್ಯೆಯನ್ನು ಆ ಉಪದೇಶಕರಾದ–ಮೋಸಗಾರರಾದ–ನೀಚಸ್ತ್ರೀಯರು ಮುಗ್ಧೆಯರಾದ ಹೆಣ್ಣುಮಕ್ಕಳಿಗೆ ಕಲಿಸಿಬಿಡುತ್ತಾರೆ. ಇದರಿಂದ ಶ್ರಮಪಟ್ಟುಸಂಪಾದಿಸಿದ ದ್ರವ್ಯವು ವ್ಯಯವಾಗಿ ಆ ದುಷ್ಟ ಹೆಂಗಸರ ದುರ್ಬೋಧನೆಯಿಂದ ಆ ಸ್ತ್ರೀಯರ ಮರ್ಯಾದೆಯೂ ಉಳಿಯುವುದಿಲ್ಲ. ಸ್ತ್ರೀಯರು ಇವರ ಹೇಳಿಕೆಯಂತೆ ಅನೇಕ ಅಧರ್ಮದ ಕೆಲಸಗಳನ್ನು ಮಾಡಿ ಜನರಲ್ಲಿ ಅಪವಾದಕ್ಕೆ ಗುರಿಯಾಗಬೇಕಾಗುತ್ತದೆ. ಇದರ ಫಲಿತಾರ್ಥವು ಇಷ್ಟರಿಂದಲೇ ಕೊನೆಗಾಣುವುದಿಲ್ಲ. ಈ ಮೋಸಗಾರರು ತಮ್ಮ ಮಾತು, ನಿಜವೆಂದು ತೋರ್ಪಡಿಸಿಕೊಳ್ಳಲಿಕ್ಕಾಗಿ, ಈ ಔಷಧವನ್ನು ಇಂತಹ ವೇಳೆಯಲ್ಲಿ ಈ ವಿಧದಲ್ಲಿ ನಿನ್ನ ಗಂಡನಿಗೆ ಏನಾದರೂ ರುಚಿಯಾದ ತಿಂಡಿಯಲ್ಲಿ ಬೆರಸಿಕೊಡು, ಇದರಿಂದ ನೀನು ಹೇಳಿದಂತೆ ಅವನು ನಡೆಯುತ್ತಾನೆಂದು ಹೇಳಿ, ಏನೋ ಒಂದು, ಕಲ್ಲೋ, ಮಣ್ಣೋ, ಬೂದಿಯೋ, ಹಸರು ಸಪ್ಪೋ—ಏನಾದರೊಂದನ್ನು ಕೊಟ್ಟುಬಿಡುತ್ತಾರೆ. ಬುದ್ಧಿಹೀನರಾದ ಹೆಂಗಸರು ಆ ಉಪದೇಶಕ್ಕೆ ಮರುಳಾಗಿ ಆ ಔಷಧಗಳನ್ನು ತಮ್ಮ ಗಂಡಂದಿರಿಗೆ ಯಾವಾಗಲಾದರೂತಿನ್ನಿಸಿಬಿಡುತ್ತಾರೆ. ಆ ಔಷಧಗಳ ಸ್ವಭಾವವನ್ನು ಪರೀಕ್ಷಿಸುವಷ್ಟು ಬುದ್ಧಿ ಇವರಿಗಿರುವುದಿಲ್ಲ. ಇವುಗಳಲ್ಲಿ, ತಾಮ್ರ, ಪಾದರಸ, ಪಾಷಾಣ, ಮುಂತಾದ ಅಪಕ್ವ ಭಸ್ಮಗಳೂ ಅಪಾಯಕರಗಳಾದ—ಬುದ್ಧಿಯನ್ನು ಕೆಡಿಸಿಬಿಡುವ—ದೀರ್ಘರೋಗಿಗಳ

ನ್ನಾಗಿ ಮಾಡುವ ಹಸುರು ರಸಗಳೂ ಸೇರಿರುತ್ತವೆ. ಈ ಔಷಧಗಳು ಹೊಟ್ಟೆಗೆ ಹೋದ ಸ್ವಲ್ಪಕಾಲದಲ್ಲಿ ಪ್ರಾಣವನ್ನು ಸಹ ಹಾಳುಮಾಡಿಬಿಡುತ್ತವೆ. ಬುದ್ಧಿಯಿಲ್ಲದ ಹೆಂಗಸರು ಆಮೋಸಗಾರರ ಸುಳ್ಳುಮಾತುಗಳನ್ನು ನಂಬಿ ಗಂಡಂದಿರನ್ನು ವಶಮಾಡಿಕೊಳ್ಳಬೇಕೆಂದು ಇಂತಹ ಅಪಾಯಕರಗಳಾದ ಪದಾರ್ಥಗಳನ್ನು ಅವರ ಹೊಟ್ಟೆಗೆ ಹಾಕಿ ಪ್ರಾಣಭಯವನ್ನುಂಟು ಮಾಡುತ್ತಾರೆ. ಇದಕ್ಕಾಗಿ—ಗಂಡನ ಸ್ವಾಧೀನಕ್ಕಾಗಿ—ಯಾವ ಮಂತ್ರತಂತ್ರಗಳೂ ಇಲ್ಲ. ಇಂತಹ ನಡತೆಗಳು ಎಂದಾದರೊಂದುದಿನ ಗಂಡಂದಿರಿಗೆ ತಿಳಿಯದೆ ಹೋಗದು. ಆಗ ಹೆಂಡತಿಯರ ಮೇಲಿನ ಅಭಿಮಾನವು ಅವರಿಗೆ ಸುತರಾಂ ತಪ್ಪಿಯೂ ಹೋಗುತ್ತದೆ.

ಗಂಡನನ್ನು ಉಪಾಯದಿಂದ ಸ್ವಾಧೀನಪಡಿಸಿಕೊಳ್ಳುವುದಕ್ಕೆ ಕೆಲವು ಜಮತ್ಕಾರಗಳಿವೆ. ಅದನ್ನು ಹೇಳುವೆನು ಕೇಳು. ಹೆಂಡತಿಯ ನಡತೆ ಗಂಡನ ಮನಸ್ಸಿಗೆ ಒಪ್ಪುವಂತಿರಬೇಕು. ಗಂಡನಿಗೆ ಅಪಿತವಾದುದನ್ನೆಂದಿಗೂ ಮಾಡಬಾರದು. ಅವನೆದುರಿಗೆ ಗಟ್ಟಿಯಾಗಿ ಮಾತನಾಡಬಾರದು. ಅವರ ಮನಸ್ಸಿಗೆ ಆಯಾಸವನ್ನುಂಟುಮಾಡಬಾರದು. ಅವರನ್ನು ಎಂದಿಗೂ ನಿರಾಕರಿಸಬಾರದು. ಎಷ್ಟು ಕಷ್ಟಬಂದರೂ ಧರ್ಮಮಾರ್ಗವನ್ನತಿಕ್ರಮಿಸಬಾರದು. ಗಂಡನು ಯಾವ ಸಮಯದಲ್ಲಿ ಏನು ಕೆಲಸವನ್ನು ಹೇಳುತ್ತಾನೋ ಅದನ್ನು ತಕ್ಷಣವೇ ಅತನಿಗೆ ತೃಪ್ತಿಕರವಾಗುವಂತೆ ಮಾಡಬೇಕು. ಈ ಕೆಲಸವನ್ನು ನಾನು ಮಾಡೆನೆಂದಾಗಲೀ ನನಗೆ ಬೇಜಾರಾಗುವುದಾಗಲೀ ಹೇಳಬಾರದು. ಆಕೆಲಸವು ತಮ್ಮಿಂದಾಗದ ಪಕ್ಷದಲ್ಲಿ ನಮ್ರತೆಯಿಂದ ಅದರ ಕಾರಣವನ್ನು ಅವರಿಗೆ ತಿಳಿಯಪಡಿಸಬೇಕು. ಅವರೊಡನೆ ಯಾವ ವಿಧವಾದ ಸುಳ್ಳನ್ನು ಹೇಳಬಾರದು. ಅವರೆದುರಿಗೆ ಇತರರ ನಿಂದೆಯನ್ನು ಇತರರೆದುರಿಗೆ ಅವರ ನಿಂದೆಯನ್ನು ಸರ್ವಥಾಮಾಡಬಾರದು. ನಿಷ್ಕಾರಣವಾಗಿ ಕೋಪಿಸಿಕೊಂಡು ಅವರೆದುರಿಗೆ ಬಾಯಿಗೆ ಬಂದಂತೆ ಮಾತಾಡಬಾರದು. ಅವರನ್ನು ಎಂದಿಗೂ ಮೋಸಗೊಳಿಸಬಾರದು. ಅವರು ಮಾಡುವ ಒಳ್ಳೇ ಕೆಲಸಕ್ಕೆ ಅಡ್ಡಿ ಮಾಡಬಾರದು. ಯಾವ ಕೆಲಸದಲ್ಲಾಗಲೀ ತಮ್ಮದು ತಪ್ಪಾಗಿದ್ದರೆ ಒಪ್ಪಿಕೊಂಡು ಕ್ಷಮೆಯನ್ನು ಕೇಳಬೇಕು. ಅವರಲ್ಲಿ ತಪ್ಪಿದ್ದರೆ ಅದಕ್ಕೆ ಕೋಪಿಸಿಕೊಳ್ಳದೆ ಸಮಾಧಾನದಿಂದ ಅದನ್ನು ಅವರಿಗೆ ತಿಳಿಸಬೇಕು. ತಮ್ಮಿಂದ ಆದಷ್ಟು ಪ್ರೀತಿಯಿಂದ ಅವರ ಸೇವೆಮಾಡಬೇಕು.

ಒಳ್ಳೇ ಸೀರೆಗಳನ್ನುಟ್ಟುಕೊಂಡು ಒಡವೆಗಳನ್ನಿಟ್ಟುಕೊಂಡು ಪತಿಗಳನ್ನು ಮೋಹಗೊಳಿಸುವ ಪ್ರಯತ್ನವನ್ನೆಂದಿಗೂ ಮಾಡಬಾರದು. ನಿಮ್ಮ ಮನಸ್ಸು ಒಳ್ಳೆಯದಾಗಿದ್ದರೆ ಅದುಂದಲೇ ಅವರ ಮನಸ್ಸು ನಿಮ್ಮ ಕಡೆಗೆ ತಿರುಗುತ್ತದೆ. ನಿಮ್ಮ ಸದ್ಗು

ಣಗಳಿಂದ ನೀವು ಪತಿಯನ್ನು ಮೋಹಗೊಳಿಸಬೇಕು. ಅವರಿಗೆ ಯಾವ ವಿಷಯದ ಲ್ಲಿಯೂ ನೀವು ವಂಚನೆಯನ್ನು ಮಾಡಬಾರದು. ಪತಿಗೆ ಸಮನಾದ ಸ್ನೇಹಿತನು ಈ ಜಗತ್ತಿನಲ್ಲಿ ಯಾರೂ ಇಲ್ಲ. ಆತನು ಗುರುವಿನಂತೆ ಸನ್ಮಾರ್ಗವನ್ನು ತೋರಿಸುತ್ತಾನೆ. ತಂದೆಯಂತೆ ಹಿತವನ್ನುಂಟುಮಾಡುತ್ತಾನೆ. ತಾಯಿಯಂತೆ ಪ್ರೀತಿಸುತ್ತಾನೆ. ದೇವ ರಂತೆ ಪೂಜ್ಯನಾಗಿ ನಿಮ್ಮ ಪ್ರಾಣಕ್ಕಿಂತಲೂ ಪ್ರಿಯನಾಗಿರುತ್ತಾನೆ. ಇಂತಹ ಅದ್ವಿ ತೀಯನಾದ ಸ್ನೇಹಿತನನ್ನೇ ನೀವು ವಂಚಿಸಿದ ಪಕ್ಷದಲ್ಲಿ ನಿಮಗೆ ಇನ್ನೇತರಿಂದ ಸುಖ ವುಂಟಾದೀತು ? ಪತಿಯನ್ನು ವಂಚಿಸುವ ಹೆಂಗಸು ಎಂತಹ ಅಕೃತ್ಯಮಾಡಲಿಕ್ಕೂ ಹಿಂತೆಗೆಯಳು. ಆದ್ದರಿಂದ ಗೃಹಿಣಿಯಾದವಳು ಪತಿಯ ಸಂಗಡ ನಿರ್ವಂಚನೆಯಿಂದ ನಡೆದುಕೊಳ್ಳಬೇಕು. ನಿಮ್ಮ ಪತಿಗಳಿಗೆ ಅಹಿತವಾದ ಕೆಲಸದಿಂದ ನಿಮಗೆಷ್ಟೇಲಾಭವಿ ದ್ದಾಗ್ಯೂ ನೀವು ಅದನ್ನು ಮಾಡಬಾರದು. ನಿಮ್ಮ ಪತಿಯು ನಿಮ್ಮಲ್ಲಿ ಹೇಳಿರುವ ಗುಟ್ಟಿನ ಮಾತುಗಳನ್ನು ಇತರರ ಸಂಗಡ ಹೇಳಬಾರದು. ಏಕಾಂತದಲ್ಲಿ ಪತಿಯು ನಿಮ್ಮ ವಿಷಯದಲ್ಲಿ ಸಣ್ಣ ಮಾತನ್ನಾಡಿದ್ದರೆ ಅದನ್ನು ಹೊರಪಡಿಸಬಾರದು. ಈ ಪ್ರಕಾರ ಯಾವ ಹೆಂಗಸು ಆಚರಣೆಯಲ್ಲಿಟ್ಟಿರುವಳೋ ಆವಳಿಗೆ ಯಾರಲ್ಲಿಯೂ ವಿರೋಧವುಂಟಾಗುವುದಿಲ್ಲ. ಚಾಡಿಮಾತನ್ನು ಹೆಂಗಸು ಕಲಿಯಬಾರದು. ಕ್ಷುದ್ರ ಹೇಳುವವರನ್ನಾರೂ ನಂಬುವುದಿಲ್ಲ. ನಿಮ್ಮ ವಿಷಯದಲ್ಲಿ ನಿಷ್ಕಾರಣವಾಗಿ ಯಾರಾ ದರೂ ಅಪವಾದವನ್ನು ಹೊರಿಸಿದರೆ ಅದನ್ನು ಕೇಳಿಕೊಂಡು ಸುಮ್ಮನಿದ್ದು ನಿಮ್ಮ ಆಚರಣೆಯನ್ನು ನಿರ್ಮಲವನ್ನಾಗಿ ಮಾಡಿಕೊಂಡು ಸಮಾಧಾನದಿಂದಿರಬೇಕು. ಈ ಅಪವಾದವು ಸುಳ್ಳೆಂಬುದು ಕಾಲಕ್ರಮೇಣ ಎಲ್ಲರಿಗೂ ತಿಳಿದು ಆ ಅಪವಾದವನ್ನು ಹೊರಿಸಿದವರ ಮುಖಭಂಗವಾಗದೆ ಇರುವುದಿಲ್ಲ. ನಿಮ್ಮ ಗಂಡಂದಿರನ್ನು ಯಾರಾ ದರೂ ದೂಷಣೆ ಮಾಡಿದರೆ ಅದಕ್ಕಾಗಿ ಅವರಸಂಗಡ ವಿವಾದಮಾಡಬಾರದು. ಆ ಅಪ ವಾದವು ನಿಜವಾಗಿದ್ದಪಕ್ಷದಲ್ಲಿ ಅವನ್ನು ನಿವಾರಿಸುವ ಪ್ರಯತ್ನಮಾಡಬೇಕು. ನಿಮ್ಮ ಗಂಡಂದಿರಿಗೆ ನೀವು ಎಲ್ಲ ಕೆಲಸದಲ್ಲಿಯೂ ಅದಷ್ಟು ಸಹಾಯ ಮಾಡಬೇಕು. ಮನೆಯಕೆಲಸಗಳನ್ನು ಪಾಲುಮಾರಿಕೆ ಇಲ್ಲದೆ ಕಾಲಕಾಲಕ್ಕೆ ಸರಿಯಾಗಿ ಮಾಡುತ್ತಾ ನಿಮ್ಮ ಗಂಡಂದಿರನ್ನು ಸಂತೋಷಗೊಳಿಸಬೇಕು. ಯಜಮಾನರು ಹೊರ ಗಿನಿಂದ ಮನೆಗೆ ಬಂದಾಗ ಅವರೊಡನೆ ಕೆಲಸಕ್ಕೆಬಾರದ ಮಾತುಗಳನ್ನಾಡಿ ಕಾಲಕಳೆ ಯಬಾರದು. ನಿಮ್ಮ ಗಂಡಂದಿರ ಸಂಗಡ ಮಾತನಾಡುವಾಗ ಹೆಚ್ಚು ಹರಟೆಯನ್ನು ಬಿಟ್ಟು, ನೀತಿ, ಜ್ಞಾನ, ಧರ್ಮವಿಚಾರವಾಗಿ ಚರ್ಚೆಮಾಡಬೇಕು. ಸಂಸಾರಕ್ಕೆ ಬೇಕಾ ದವಿಷಯಗಳನ್ನು ಕಾಲವರಿತು ತಿಳಿಸಬೇಕು. ಗಂಡನಮನಸ್ಸು ಏನ್ನವಾಗಿದ್ದರೆ ಬಳ್ಳಿ

ಯಮಾತನ್ನಾಡಿ ಸಮಾಧಾನಪಡಿಸಬೇಕು. ವಿಪತ್ತು ಬಂದಾಗ ನಿಮ್ಮ ಪತಿಯು ಯಾವ ಸ್ಥಿತಿಯಲ್ಲಿರುವನೋ ನೀವೂ ಅದೇ ಸ್ಥಿತಿಯಲ್ಲಿರಬೇಕು. ಯಾವಾಗಲೂ ಅಸಮಾಧಾನಪಡಬಾರದು. ಅತ್ತೆ, ನಾದಿನಿಯರು ಕ್ರೂರವಾಗಿ ಮಾತನಾಡಿದರೆ ಸಹಿಸಿಕೊಂಡಿರಬೇಕು. ಅವರು ಇನ್ನು ಮುಂದೆ ಅಂತಹಕ್ರೌರ್ಯವನ್ನು ತಾವಾಗಿಯೇ ಬಿಡುವಂತೆ ನಿಮ್ಮ ಸಮಾಧಾನಸದ್ಗುಣಗಳಿಂದ ಏರ್ಪಡಿಸಿಕೊಳ್ಳಬೇಕು. ಗಂಡನಸ್ಥಿತಿಯು ಒಳ್ಳೆಯದಾಗಲೀ ಕೆಟ್ಟದ್ದಾಗಲೀ ಗಂಡನಿಗೆ ಐಶ್ವರ್ಯವಿರಲಿ ಬಡತನವಿರಲಿ ಅದನ್ನು ಹೆಂಡತಿಯೂ ಅನುಭವಿಸಬೇಕು. ತಂದೆಯಾದವನು ಧೂರೆಯಾಗಿದ್ದಾಗ್ಯೂ ಆತನ ಪದವಿಗೆ ಸ್ತ್ರೀಯು ಎಂದೂ ಅಧಿಕಾರಿಯಾಗಲಾರಳು. ತನ್ನ ಗಂಡನ ಮಾನವನ್ನು ಕಾಪಾಡಿ ಆತನಿರುವ ಸ್ಥಿತಿಯಲ್ಲೇ ತಾನೂ ಇರಬೇಕು. ಮೇಲೆಕಂಡ ಸುಗುಣಗಳಿಂದ ಕೂಡಿದ ಸ್ತ್ರೀಯೇ ಈ ಲೋಕದಲ್ಲಿ ಮಾನ್ಯಳಾಗಿಯೂ, ಪೂಜ್ಯಳಾಗಿಯೂ, ಪ್ರಾತಃಸ್ಮರಣೀಯಳಾಗಿಯೂ, ಇರುತ್ತಾಳೆ. ಇದೇ ಗುಣದಿಂದ ಕೂಡಿದ್ದುದರಿಂದಲೇ ಅಲ್ಲವೆ, ಸೀತೆ, ಸಾವಿತ್ರಿ, ದಮಯಂತಿ, ಸತ್ಯವತಿ, ಲೋಪಾಮುದ್ರೆ, ಮುಂತಾದ ಕುಲಸ್ತ್ರೀಯರ ಹೆಸರು ಈ ಭರತಖಂಡದ ಎಲ್ಲಾ ಕಡೆಯಲ್ಲೂ ಸುವರ್ಣಾಕ್ಷರಗಳಿಂದ ಕೆತ್ತಲ್ಪಟ್ಟು ರಾರಾಜಿಸುತಲಿವೆ–ಇವರು ಪರಮ ಪತಿವ್ರತೆಯರಾಗಿ ಪತಿಭಕ್ತರಾಗಿ ಅವರಲ್ಲಿ ಅತ್ಯಂತ ಪ್ರೇಮವನ್ನಿಟ್ಟುಕೊಂಡಿದ್ದುದರಿಂದಲೇ ಅಲ್ಲವೆ, ಅವರ ಕೀರ್ತಿಗಳು ದಶದಿಕ್ಕುಗಳಲ್ಲಿಯೂ ಹರಡಿಕೊಂಡಿವೆ. ಇತರ ವಿಷಯಗಳಲ್ಲಿ ನಮ್ಮೀ ಭರತಖಂಡವು ಉಳಿದ ದೇಶಗಳಿಗಿಂತ ಹಿಂದೆ ಬಿದ್ದಿದ್ದಾಗ್ಯೂ ಸೀತೆ, ಸಾವಿತ್ರಿಯೇ ಮುಂತಾದ ಮಹಾಮಹಾ ಪತಿವ್ರತೆಯರ ಸತ್ಕೀರ್ತಿ ವಿಷಯದಲ್ಲಿ ಇದಕ್ಕೆ ಸಮಾನವಾದ ದೇಶ ಮತ್ತೊಂದಿಲ್ಲ, ತಮ್ಮ ಸ್ತ್ರೀಜನರ ಯೋಗ್ಯತೆಯನ್ನು ಅಭಿವೃದ್ಧಿಪಡಿಸಲಪೇಕ್ಷೆಯುಳ್ಳ ಸ್ತ್ರೀಯರು ಮೇಲೆ ಹೇಳಿದ ಪವಿತ್ರನಡತೆಗಳು ಮರಳಿ ಉಜ್ಜೀವಿತವಾಗುವಂತೆ ನಡೆದುಕೊಳ್ಳಬೇಕು. ಇದನ್ನು ಕೇಳಿದ ಪ್ರತಿಯೊಬ್ಬರೆಂಗಸೂ ಇದೇ ವಿಧದಲ್ಲಿ ನಡೆವುದಾದರೆ ಈ ಗ್ರಂಥಲೇಖನವು ಸಾರ್ಥಕವಾಗುವುದು.

ಸೋದರಿಯರೇ! ಇಷ್ಟು ಉಪದೇಶವನ್ನು ಮಾಡಿ ನಮ್ಮ ಯಜಮಾನರು, ಇನ್ನು ಮುಂದೆ ನಿನ್ನಿಷ್ಟದಂತೆ ಮಾಡೆಂದು ಹೇಳಿ ನನ್ನ ಕೈಬಿಟ್ಟುಬಿಟ್ಟು ಸುಮ್ಮನಾದರು. ಅವರ ಉಪದೇಶವನ್ನು ಕೇಳಿದ ಮೇಲೆ ನನ್ನ ಮನಸ್ಸಿನಲ್ಲಿ ಬಹುವಾಗಿ ಸಂತೋಷವಾಯಿತು. ಹರ್ಷಾಶ್ರುಗಳು ಕಣ್ಣಿನಿಂದುದುರುವುವು. ಕೂಡಲೆ ಪತಿಚರಣಗಳಲ್ಲಿ ನನ್ನ ಶಿರಸ್ಸನ್ನಿಟ್ಟು, ದೇವ! ಕ್ಷಮಿಸು. ಇದುವರಿಗೆ ನಾನು ಮೂಢತನದಿಂದ ಮಾಡಿದ ತಪ್ಪುಗಳೆನ್ನೆಲ್ಲಾ ಮನ್ನಿಸು. ಇಂದು ನಿಮ್ಮ ಉಪದೇಶದಿಂದ ನಾನು ಪುನರು

ಜ್ಞೀವಿತಳಾದೆನು. ಹಣದ ಆಶೆಯೆನ್ನೂ, ಹುರುಡನ್ನೂ, ಹಟಮಾರಿತನವನ್ನೂ ಸತ್ಯ ವಾಗಿಬಿಟ್ಟೆನು. ಇನ್ನು ಮುಂದೆ ಇದೇ ಏಧವಾಗಿ ನನ್ನನ್ನು ಎಚ್ಚರಗೊಳಿಸುತ್ತಾ ನನ್ನನ್ನು ಕಾಪಾಡಬೇಕು. ನನ್ನ ಜನ್ಮಾಂತರ ಸುಕೃತಪರಿಪಾಕದಿಂದ ತಮಗೆ ನಾನು ಪತ್ನಿಯೊಗಿರುವೆನು. ನನ್ನ ಜೀವನವು ಧನ್ಯ ! ನಾನು ಸುಖಿ ! ನಿಮ್ಮ ಉಪದೇಶವನ್ನು ನಾನು ಮರೆವುದಿಲ್ಲ. ನಾನೂ ಆಚರಿಸುತ್ತಾ ನನ್ನ ಸೋದರಿಯರಲ್ಲೂ ಈ ಉಪದೇ ಶವನ್ನು ಹರಡುವೆನೆಂದು ಹೇಳಿ ನನ್ನ ಸ್ವಾಮಿಗೆ ನಮಸ್ಕರಿಸಿದೆನು. ಆಷ್ಟರಲ್ಲೇ ನಮ್ಮ ಯಜಮಾನರನ್ನು ಯಾರೋ ಹೊರಗೆ ಕೂಗಿದದರಿಂದ ಅವರು ಹೊರಟುಹೋದರು. ಪದೇಪದೇ ಅವರ ಉಪದೇಶವನ್ನು ಧ್ಯಾನಿಸುತ್ತಾ ನಾನು ನನ್ನ ಹಿಂದಿನ ಯೋಚನೆಗ ಳನ್ನು ಬಿಟ್ಟು ಮನೆಗೆಲಸಕ್ಕೆ ಹೊರಟುಹೋದೆನು.

ಪಾತಕಿಯರೆ ! ಈ ಅಧ್ಯಾಯದಲ್ಲಿ ವಿಷವು ಪರೀಕ್ಷಿಸಲ್ಪಟ್ಟಿರುವುದು. ವಿಷಕ್ಕೂ, ಅಮೃತಕ್ಕೂ ಭೇದವು ತೋರಿಸಲ್ಪಟ್ಟಿರುವುದು. ನೀವು ಪುನಃಪುನಃ ಈ ಅಧ್ಯಾಯವನ್ನು ಮಥನಮಾಡಿರಿ. ಭರತಭೂಮಾತೆಯು ಪತಿವ್ರತೆಯರಿಂದ ತುಂಬ ಲ್ಪಟ್ಟು ಪರಿಶುದ್ಧಳಾಗಿ ಬೆಳಗಲಿ !

IX

ನಮ್ಮ ಯಜಮಾನರು ನನಗೆ ಸ್ತ್ರೀಧರ್ಮಗಳನ್ನು ಉಪದೇಶ ಮಾಡಿದ ದಿನ ಮಧ್ಯಾಹ್ನ ನಾಲ್ಕುವರೆ ಗಂಟೆ ಸಮಯದಲ್ಲಿ ನಮ್ಮ ಭಾವನವರಿಗೂ ನಮ್ಮ ಮನೆಯವ ರಿಗೂ (ಅಣ್ಣತಮ್ಮಂದಿರಿಗೆ) ಈ ಕೆಳಗೆ ಕಂಡಂತೆ ಸಂಭಾಷಣೆ ನಡೆಯಿತು.

ಅಣ್ಣ—ವಾಸುದೇವ ! ನೀನು ನಿನ್ನೆಯದಿನ ರಂಗಪುರದಿಂದ ಕಳುಹಿಸಿದ ತಂತಿಯು ತಲಪಿತು. ನೀನು ನಿಮ್ಮ ಅತ್ತೆಯನ್ನು ಸೋಡಿದ್ದೆಯೋ ?

ತಮ್ಮ—ಹೌದು, ಸೋಡಿದ್ದೆನು. ಹಣದ ವಿಚಾರವನ್ನು ಕೇಳಿದೆನು !

ಅಣ್ಣ—ಏನೆಂದು ಕೇಳಿದೆ ! ಅವರೇನು ಹೇಳಿದರು ?

ತಮ್ಮ—ನಿಮ್ಮ ಮಗಳಲ್ಲಿ ಏನು ಪದಾರ್ಥವನ್ನು ಕೊಟ್ಟಿರುವಿರಿ ಎಂದು ಕೇಳಿದುದಕ್ಕೆ ಒಂದು ಅಡ್ಡಿಕೆ, ಐವತ್ತು ರೂಪಾಯಿಗಳನ್ನು ಕೊಟ್ಟಿರುವೆನೆಂದು ಹೇಳಿದರು.

ಅಣ್ಣ—ಈ ಮಾತು ನಿಜವೋ ? ನಿಜವಾಗಿಯೂ ಅವರು ಹಾಗೆ ಹೇಳಿದರೋ ?

ತಮ್ಮ—ನಿಜವಾಗಿಯೂ ಹೀಗೆಯೇ ಹೇಳಿದರು. ಇದರಲ್ಲಿ ಸಂದೇಹ ಪಡಲು ಕಾರಣವೇನಿರುವುದು ?

ಅಣ್ಣ—ಆದಿನ ನಡೆದ ಹಣದ ವಿಚಾರದಲ್ಲಿ ಏನೆಂದು ಇತ್ಯರ್ಥವಾಯಿತು. ದೋಷಿಗ ಳಾರೆಂಬುದನ್ನು ಬಲ್ಲೆಯೋ ?

ತಮ್ಮ—ಅಹುದು. ಚೆನ್ನಾಗಿಬಲ್ಲೆನು. ಸೌಭಾಗ್ಯವತಿಯೇ ಹಣವನ್ನು ತೆಗೆದುಕೊಂಡಿರುವಳೆಂಬುದಕ್ಕೆ ಸಾಕಾದಷ್ಟು ಪ್ರಮಾಣಗಳೂ ತೋರಿಬಂದುವು. (ಪ್ರತ್ಯಕ್ಷವಾದರೂ ಪ್ರಮಾಣಿಸಿ ತೋರಿಸಬೇಕಲ್ಲವೆ?)

ಅಣ್ಣ—ಕೈಹುಣ್ಣಿಗೆ ಕನ್ನಡಿ ಏಕೆ? ಎಂಬಂತೆ ನಮ್ಮ ಮನೆಯಲ್ಲಿ ಸಾಕಾದಷ್ಟು ಪ್ರಮೇಯಗಳಿಂದ ನಿನ್ನ ಹೆಂಡತಿಯು ದ್ರವ್ಯಾಪಹಾರ ಮಾಡಿದುದು ಬಹಿರಂಗವಾಗಿ ತೋರಿದರೂ ನೀನು ಈ ವಿಧವಾದ ಸುಳ್ಳುಪೇಳಿ ದೋಷಿಯಾದ ಹೆಂಡತಿಯನ್ನು ನಿರ್ದೋಷಿಯೆಂದು ಹೇಗೆ ಹೇಳಿಕೊಳ್ಳುವೆ?

ತಮ್ಮ—(ಕ್ರೋಧಕಂಪಿತ ಸ್ವರದಿಂದ) ಏನೇನು? ನನ್ನ ಹೆಂಡತಿ–ಹಣವನ್ನು ಕದ್ದಳೆಂದು ಪುನಃ ಹೇಳುವಿರಾ? ನನ್ನ ಹೆಂಡತಿಯು, ಈ ಹಣವು ನಮ್ಮ ತಾಯಿಯಿಂದ ನನಗೆ ಕೊಡಲ್ಪಟ್ಟಿತು. ಬಂದು ಹೇಳಿದ ಮಾತಿನ ನಿಶ್ಚಯಾಂಶವನ್ನು ತಿಳಿಯಲು ನಾನು ರಂಗಪುರಕ್ಕೆ ಹೋಗಿದ್ದುದೂ ಅಲ್ಲಿ ನಡೆದ ವರ್ತಮಾನವನ್ನು ನಿನ್ನೆಯದಿನವೇ ತಂತಿಯಮೂಲಕ ತಿಳಿಸಿದುದನ್ನೂ ನೀವು ಈಗಲೇ ಮರೆತಂತೆ ತೋರುತ್ತದೆ.

ಅಣ್ಣ—ಏಕಾದೀತು? ಇದೆಲ್ಲಾ ಸುಳ್ಳು! ಇಂದ್ರಜಾಲ! ನಿನ್ನ ಹೆಂಡತಿಯ ತಪ್ಪನ್ನು ಮುಚ್ಚಬೇಕೆಂದು ನೀವೆಲ್ಲಾ ಗುಂಪುಕೂಡಿ ಆಲೋಚನೆಮಾಡಿ ಈ ಆಟವನ್ನು ಹೂಡಿರುವಂತೆ ತೋರುತ್ತದೆ. ನಾನೇನು ನಿಮ್ಮ ಮಾತನ್ನು ನಂಬುವಷ್ಟು ಹೇಡಿಯಲ್ಲ. ನಿನಗೇಕೆ ಹೀಗೆ ಬುದ್ಧಿ ಬದಲಾಗಿ ಹೋಯಿತು. ಹೇಳು.

ತಮ್ಮ—(ಅನಿರ್ವಾಹವಾಗಿ ಬಂದ ಕೋಪವನ್ನು ಕಷ್ಟದಿಂದ ತಡೆದು) ಅಣ್ಣನವರೇ! ತಡೆದು ಮಾತನಾಡಿರಿ. ನಿದಾನವಾಗಿ ಆಲೋಚಿಸಿರಿ. ನಾನು ನಿಮ್ಮ ಮಾತಿಗೆ ಮೀರಿ ಮರ್ಯಾದೋಲ್ಲಂಘನವನ್ನು ಮಾಡಬೇಕಾದ ಸಮಯವು ಪ್ರಾಪ್ತವಾದಂತಿದೆ. ದೋಷಿಯಾಗಿದ್ದಾಗ್ಯೂ ಹೆಂತಿಯನ್ನು ನಿರ್ದೋಷಿಯೆನ್ನುವುದಕ್ಕೆ ನಾನೇನೂ ಷಂಡನಲ್ಲ. ನಿಮ್ಮೊಡನೆ ಸುಳ್ಳುಪೇಳಿ ನಾನೇನೂ ದ್ರವ್ಯಾಪಹಾರ ಮಾಡುವುದಕ್ಕೆ ಬಂದಿಲ್ಲ. ಸಾಪರ ಮಾತಿನಿಂದೇನು? ಲೋಕವನ್ನು ಮೆಚ್ಚಿಸಿ ನನಗಾಗಬೇಕಾದುದು ತಾನೇ ಏನಿರುವುದು? ಪ್ರಾಮಾಣಿಕತನವೂ ಧರ್ಮವೂ ನಮ್ಮಲ್ಲಿರುವುದಾದರೆ ಸರ್ವತ್ರವ್ಯಾಪಿಯಾದ ಪರಮಾತ್ಮನು ಮೆಚ್ಚಿಯೇ ಮೆಚ್ಚುವನು, ಅಧರ್ಮದಿಂದ ಲೋಕವೆಲ್ಲಾ ಮೆಚ್ಚಬೇಕೆಂಬ ಆಶೆನನಗಿಲ್ಲ. ನನ್ನ ಹೆಂಡತಿಯಿಂದ ನೀವು ಪೂರ್ವಾಪರ ವಿವೇಚನೆ ಇಲ್ಲದೆ ಸ್ವೀಕರಿಸಿರುವ ಹಣವನ್ನು ತಾವು ಹಿಂದಕ್ಕೆ ಕೊಡಬೇಕಾದುದಿಲ್ಲ. ಅವಳು ನನ್ನೊಡನೆ

ದ್ರವ್ಯದ ವಿಚಾರವನ್ನು ಹೇಳದೆ ಗುಟ್ಟನಿಂದಿದ್ದುದಕ್ಕೆ ಇದೇ ದಂಡ ದ್ರವ್ಯ ವೆಂದು ಭಾವಿಸಿದೇನೆ. ಆದರೆ ನಮ್ಮ ಅತ್ತೆಯ ಮಾತು ಸುಳ್ಳಿಂದೂ, ನಾನು ವ್ಯಾಜದಿಂದ ಹೆಂಡತಿಯ ದೋಷವನ್ನು ಮುಚ್ಚುವವನೆಂದೂ ಇರುವ ನಿಮ್ಮ ಭಾವವನ್ನು ಹೃದಯದಿಂದ ಈಚಿಗೆ ಕಿತ್ತುಬಿಸುಡಿರಿ. ಧರ್ಮವು ಜಯಿಸುವುದೆಂ ಬುದನ್ನೂ ತಾವು ಆಲೋಚಿಸಿರಿ. ಅನ್ಯಾಯದಿಂದ ಐಶ್ವರ್ಯದ ಮೇಲೆ ಐಶ್ವ ರ್ಯವನ್ನು ಕೂಡಿಸಿ ನಿಜವನ್ನೂ ಪರೋಪಕಾರವನ್ನೂ ಮರೆಮಾಡುವ ಸ್ಥಿತಿಗೆ ಧಿಕ್ಕಾರವಿರಲಿ! ಪರಹಿಂಸಾರೂಪದಿಂದಗಳಿಸಿದ ಹಣದಿಂದ ಅಪಾಯವು ಎಂದೆಂದಿಗೂ ತಪ್ಪದಿರುವುದರಿಂದ ಅದಕ್ಕೆ ಧಿಕ್ಕಾರವಿರಲಿ! ಅನ್ಯಾಯೋರ್ಜನೆ ಯನ್ನು ಧಿಕ್ ! ಧಿಕ್ !!! ನ್ಯಾಯಮಾರ್ಗದಿಂದ ಸಂತೋಷವಾಗಿ ಎಷ್ಟು ಅನುಭವಿಸಿದರೆ ಅಷ್ಟೇ ಸಾಕಾಗಿರುವುದು.

ಅಣ್ಣ—ನಿನ್ನ ನೀತಿ ಧರ್ಮಗಳನ್ನೆಲ್ಲಾ ದೂರದಲ್ಲಿ ಕಟ್ಟಿಡು. ನೀನು ಏನು ಹೇಳಿದರೂ ನನಗೆ ಈವಿಷಯದಲ್ಲಿ ಸಂಶಯವು ದೂರವಾಗದು.

ತಮ್ಮ—(ನಿಟ್ಟುಸಿರುಬಿಟ್ಟು) ಪೂಜ್ಯಭ್ರಾತೃಗಳೆ! ಇಂದಿನವರೆಗೂ ನಾವಿಬ್ಬರೂ ಕ್ಷೀರೋದಕನ್ಯಾಯದಂತೆ ಒಟ್ಟು ಗೂಡಿದ್ದೆವು. ನಿರ್ಮಲವಾದ ಆಕಾಶಕ್ಕೆ ಮೋಡಮುಸುಕಿ ಮಸಕಾದಂತೆ ನಮ್ಮ ನಿಮ್ಮ ಬುದ್ಧಿಗಳು ಪತ್ನಿಯರಪಾರ ಮಾರ್ಥಿಕಬೋಧೆಗಳಿಂದ ಇಂತು ಪರಿಣಮಿಸಿದುವು. ಲೋಕದಲ್ಲಿ ಅಣ್ಣ ತಮ್ಮಂದಿರಾಗಿ ಹುಟ್ಟಿದಮೇಲೆ ರಾಮಲಕ್ಷ್ಮಣರಂತೆ ಪೂಜ್ಯಪೂಜಕ ಭಾವದಿಂದ ಅನುವರ್ತಿಸುವ ಸೋದರರು ಈಕಾಲದಲ್ಲಿ ಅತಿವಿರಳ! ನಿಮ್ಮ ವಿಷಯದಲ್ಲಿ ನನಗಿರುವ ಪೂಜ್ಯಭಾವವು ನನ್ನ ಮರಣಾವಧಿ ತಪ್ಪು ವುದಲ್ಲವೆಂದು ತಾವು ನಿಜವಾಗಿ ಭಾವಿಸಬೇಕು. ಪ್ರಕೃತಿಸಂಸರ್ಗದಿಂದ ಶುದ್ಧವಾದ ಪರಮಾತ್ಮವಸ್ತುವಿಗೆ ಸಂಸಾರಾದಿವ್ಯವಹಾರಜ್ಞಾನವು ಉತ್ಪನ್ನ ವಾಗುವಂತೆ ನಿಷ್ಕಲ್ಮಷಹೃದಯರಾದ ತಾವು ಇಂದು ಪ್ರಕೃತ್ಯಧೀನ ರಾಗಿ ಇಂತು ನನ್ನ ವಿಷಯದಲ್ಲೂ ನನ್ನ ಹೆಂಡತಿಯ ವಿಷಯದಲ್ಲೂ ಸಂಶಯಪಡುತ್ತಿರುವಿರಿ. ಚಿಂತೆಯಿಲ್ಲ. ನಿಮ್ಮೀಸಂದೇಹವು ಎಂದಾದರೊಂದು ದಿನ ಪರಿಹಾರವಾಗದೆ ಇರುವುದಿಲ್ಲ. ಇದುವರಿಗೂ ನಾವಿಬ್ಬರೂ ಒಂದು ಗೂಡಿದ್ದಂತೆ ಇನ್ನುಮೇಲೂ ಇರಬೇಕಾದರೆ—ಪ್ರೀತಿಭಕ್ತಿಗಳೂ ಪೂರ್ವ ದಂತೆಯೇ ರಾರಾಜಿಸಬೇಕಾಗಿದ್ದರೆ— ನಾವು ಏಕ ಗೃಹಕೃತ್ಯದಲ್ಲಿ ರುವುದು ಸರಿಬಾರದು. ಈ ವಿಧವಾಗಿ ಸಂಸಾರದಲ್ಲಿ ವಿಷಾಂಕುರವು ಉತ್ಪನ್ನ

ವಾಗಿರುವುದಕ್ಕೆ ಓರಗಿತ್ತಿಯರಿಬ್ಬರ ಅನ್ಯೋನ್ಯಾಸಹನಗಳೇ ಏನಾ ಬೇರೆ ಕಾರಣವಿರದು. ಇದನ್ನು ಹೀಗೆಯೇ ಸರಿಮಾಡಿಕೊಂಡು ನಾವು ಒಂದೇ ಸಂಸಾರದಲ್ಲಿದ್ದುಬಿಟ್ಟರೆ ಇತೋಽಧಿಕವಾದ ದ್ವೇಷಾಸೂಯೆಗಳು ನಮ್ಮಿಬ್ಬರಿಗೂ ಉಂಟಾಗಿ ಅನರ್ಥವುಂಟಾಗಲು ಕಾರಣವಾಗಬಹುದಾದುದರಿಂದ, ನಾನು ಈ ದಿನ ಈ ಸಂಸಾರದಲ್ಲಿ ಹುಟ್ಟಿದ ಈ ವಿಷಬೀಜನ್ನು ನಾಶಮಾಡುವುದಕ್ಕಾಗಿ ಬೇರೆ ಕಡೆಗೆ ಹೊರಟುಹೋಗುತ್ತೇನೆ. ನಮ್ಮಿಬ್ಬರ ಪ್ರೀತಿಗಳು ಪೂರ್ವದಂತೆಯೇ ಇರಲಿ. ನಮ್ಮ ಸಂಸಾರದಲ್ಲಿ ಶಾಂತಿಯುನೆಲಸಲಿ.

ಅಣ್ಣ—(ಎಲ್ಲವನ್ನೂ ನಿದಾನವಾಗಿ ಕೇಳಿ ತಲೆದೂಗುತ್ತಾ) ನಿನ್ನ ಮನಸ್ಸುಬಂದಂತೆ ಮಾಡುವುದರಲ್ಲಿ ಆರ ಆತಂಕವೂ ಇಲ್ಲ.

ಈ ರೀತಿ ಸಂಭಾಷಣೆಗಳು ನಡದಬಳಿಕ ನಮ್ಮ ಭಾವನವರು ತಮ್ಮ ಚಿಕ್ಕಮನೆಗೆ ಹೊರಟು ಹೋದರು. ನಮ್ಮ ಯಜಮಾನರೂ ಕೂಡಲೆ ತಾವೂ ಹೊರಕ್ಕೆಹೋಗಿ ಒಂದು ಗಾಡಿಯನ್ನು ಮಾಡಿಕೊಂಡು ಸ್ವಲ್ಪಹೊತ್ತಿನಲ್ಲೇ ನಮ್ಮ ಮನೆಯ ತಲೆಬಾಗಿಲಿನಲ್ಲಿ ತಂದು ನಿಲ್ಲಿಸಿದರು. ಮಿತವಾಗಿ ಗೃಹಕೃತ್ಯಕ್ಕೆ ಬೇಕಾಗುವ ಪಾತ್ರೆಪದಾರ್ಥಗಳನ್ನು ಗಾಡಿಯಲ್ಲಿರಿಸಿ ನನ್ನನ್ನು ಬಂದು ಕುಳಿತುಕೊಳ್ಳುವಂತೆ ಹೇಳಿದರು. ಮೇಲಿನ ಸಂಭಾಷಣೆಗಳನ್ನೂ ಈ ವಿಧವಾದ ಪರಿವರ್ತನವನ್ನೂನೋಡಿ ನಾನು ವಿಸ್ಮಯದಿಂದ ತಲೆದೂಗುತ್ತ, ಭಾವನವರಿಗೂ, ಅಕ್ಕನವರಿಗೂ ನಮಸ್ಕರಿಸಿ ಗಾಡಿಯಮೇಲೆ ಹೋಗಿ ಕುಳಿತುಕೊಂಡೆನು. ನಮ್ಮ ಯಜಮಾನರೂ ಅಂತೆಯೇ ಅಣ್ಣ ಅತ್ತಿಗೆಯರುಗಳಿಗೆ ನಮಸ್ಕರಿಸಿ ಗಾಡಿಯಮೇಲೆ ಕುಳಿತು ಬಂಡಿಯನ್ನು ರಂಗಪುರಕ್ಕೆ ಹೊಡೆಯುವಂತೆ ಹೇಳಿದರು. ರಂಗಪುರಕ್ಕೆ, ಎಂಬ ಮಾತನ್ನು ಕೇಳಿ ನನಗೆ ಬಹು ಆಶ್ಚರ್ಯಗಳುಂಟಾಗಿ ಇದೇನು? ಈಗ ರಂಗಪುರಕ್ಕೆ ಏಕೆ ಹೋಗಬೇಕೆಂದು ಕೇಳಿದೆನು. ಅದಕ್ಕೆ ಅವರು, ನಿಮ್ಮ ತಾಯಿಯವರನ್ನು ಮೊನ್ನೆ ನೋಡಲಿಕ್ಕೆ ಹೋಗಿದ್ದಾಗ ಅವರು ನವಮಾಸಗರ್ಭವತಿಯರೆಂದೂ ಅನನ್ಯಸಹಾಯರಾಗಿರುವರೆಂದೂ ತಿಳಿದು ನಾನು ನನ್ನಿಂದ ಸಹಾಯವೇನಾಗಬೇಕೆಂದು ಕೇಳಲು ನಮ್ಮ ಸೌ || ಮಹಾಲಕ್ಷ್ಮಮ್ಮಯನ್ನು ಮೂರುತಿಂಗಳುಮಟ್ಟಿಗೆ ಕಳುಹಿಸಿಕೊಟ್ಟಿದ್ದರೆ ಬಹಳ ಉಪಕಾರವಾಗುವುದೆಂದು ಹೇಳಿದ್ದರು. ನಾನು ಅದಕ್ಕೆ, ನೋಡೋಣ– ಎಂದು ಹೇಳಿ ಬಂದಿದ್ದೆನು. ಅವರ ಸಹಾಯಾರ್ಥವಾಗಿಯೂ ನಿನ್ನ ಮನಸ್ಸಮಾಧಾನಕ್ಕಾಗಿಯೂ ನಿನ್ನನ್ನು ಈಗ ರಂಗಪುರಕ್ಕೆ ಕರೆದುಕೊಂಡು ಹೋಗುತ್ತಿದೇನೆ. ಎಂದು ಹೇಳಲು ನನಗೆ ಆಗ ಪರಮಾವಧಿಸಂತೋಷವುಂಟಾಯಿತು. ನನ್ನ ತಾಯಿಯನ್ನು ನೋಡಿ ನಾನು ವರ್ಷವಾಗಿ ಹೋಗಿದ್ದಿತು. ಇಂದು ನಾನು ತಂದೆತಾಯಿಗಳನ್ನು ನೋಡುವ

ವಿಷಯವನ್ನು ತಿಳಿದುಕೊಂಡಮೇಲೆ ನನ್ನ ಮನಸ್ಸಿನಲ್ಲಿ ಆದ ಆನಂದವು ಇಷ್ಟೇ ಎಂದು ಹೇಳಲಾರೆನು. ತೌರುಮನೆಗೆ ಹೋಗಲಾಶೆಯುಳ್ಳ ಹೆಣ್ಣುಮಕ್ಕಳೇ ಈ ಆನಂದವನ್ನು ಮನನ ಮಾಡಬಹುದು.

ಮೂರುಗಂಟೆ ಕಾಲಸೊಳಗಾಗಿ ಅಂದರೆ ರಾತ್ರಿಒಂಬಗಂಟೆ ಸಮಯದಲ್ಲಿ ಬಂಡಿಯು ರಂಗಪುರದಲ್ಲಿ ನಮ್ಮ ತೌರುಮನೆಯ ಹತ್ತಿರ ಬಂದುನಿಂತಿತು. ನಾನೂ ಗಾಡಿಯಿಂದಿಳಿದು ಒಳಕ್ಕೆಹೋದೆನು. ನನ್ನ ತಾಯಿಯು ನನ್ನನ್ನು ತಬ್ಬಿಕೊಂಡು ಗಟ್ಟಿಯಾಗಿ ಅತ್ತುಬಿಟ್ಟರು. ವೃಥಾಪವಾದಕ್ಕೆ ಪಾತ್ರಳಾಗಿ ನಮ್ಮತಾಯಿಯು ಕೊಟ್ಟ ಹಣವನ್ನೂ ಪಾಳುಮಾಡಿಕೊಂಡುದಕ್ಕಾಗಿ ನಾನು ನನ್ನ ತಾಯಿಯನ್ನೇ ಸ್ವಲ್ಪನಿಂದೆ ಮಾಡಿದೆನು. ತಾಯಿಯೂ ಬಹು ಪಶ್ಚಾತ್ತಾಪ ಪಟ್ಟು ತಮ್ಮ ಅವಿವೇಕಕ್ಕಾಗಿ ವಿಷಾದ ಗೊಂಡರು. ನಮ್ಮಯಜಮಾನರು ನನ್ನನ್ನು ಅಲ್ಲಿಬಿಟ್ಟು ಮೂರನೆಯದಿನ ಬೆಳಿಗ್ಗೆರೈಲಿನಲ್ಲಿ ಶ್ರೀ ನಗರಕ್ಕೆ ಪ್ರಯಾಣ ಮಾಡಿದರು.

ನಾನು ತೌರುಮನೆಗೆ ಬಂದು ಈಗಾಗಲೇ 8–10ದಿನಗಳು ಕಳೆದು ಹೋದುವು. ಈ 8–10 ದಿವಸಗಳವರೆಗೆ ನನ್ನ ಸ್ವಾಮಿಯ ವೃತ್ತಾಂತವೇ ತಿಳಿಯದೆ ನನಗೆ ಬಹುಚಿಂತೆಯುಂಟಾಗಿದ್ದಿತು. ಅಷ್ಟರಲ್ಲೇ ಅಂಚೆಯವನು ಬಂದು 1 ಪುಸ್ತಕಭಾಂಗಿಯನ್ನೂ 1 ಕಪರನ್ನೂ ನನಗೆ ಕೊಟ್ಟು ಹೊರಟು ಹೋದನು. ಅಂಚೆಯು ಮುಖ್ಯವು ಹರಪುರದಾಗಿದ್ದಿತು. ನಾನು ಆತುರದಿಂ ಪತ್ರವನ್ನು ಬಿಚ್ಚಿ ಓದಿಕೋಡಿದೆನು.

ಕುಶಲಂ, ಹರಪುರ.

ಆಶೀರ್ವಾದಗಳು. ಮಕರಸಂಕ್ರಮಣ.

ನಾನು ಇಲ್ಲಿಗೆ ಬಂದು ನಾಲ್ಕುದಿನವಾಯಿತು. ಶ್ರೀನಗರದಲ್ಲಿ ನಾನೊಬ್ಬನೇ ಇರಲು ಬಹು ತೊಂದರೆಯಾದುದರಿಂದಲೂ, ಹೊಟೇಲಿನಲ್ಲಿ ಊಟಮಾಡಬೇಕಾಗಿ ಬಂದುದರಿಂದಲೂ ವಾಸಕ್ಕೆಸರಿಯಾದ ಮನೆಯು ದೊರೆಯದೆಹೋದುದರಿಂದೆಯೂ ಮೂರು ತಿಂಗಳಕಾಲ ಶಾಲೆಗೆ ರಜವನ್ನು ತೆಗೆದುಕೊಂಡುಇಲ್ಲಿಗೆ ಬಂದೆನು. ಇಲ್ಲಿ ನಾನೂ ಮಾತೋಶ್ರೀಯವರೂ ಸುಖವಾಗಿದೇವೆ. ಇನ್ನೆರಡು ತಿಂಗಳು ಬಿಟ್ಟುಕೊಂಡು ಶ್ರೀನಗರಕ್ಕೆ ಹೋಗಿ ಅನುಕೂಲವಾದ ಮನೆಯೊಂದನ್ನು ಗೊತ್ತುಮಾಡಿ ಬಳಿಕ ನಿನ್ನನ್ನು ಕರೆಯಿಸಿಕೊಳ್ಳುವೆನು. ಇದೇ ದಿನವೇ ನಿನ್ನ ಹೆಸರಿಗೆ "ಸತೀಹಿತಬೋಧಿನಿ" "ಪಾತಿವ್ರತ್ಯ" "ಸ್ತ್ರೀಧರ್ಮನೀತಿ" "ಸಾಧ್ವೀಹಿತಸೂಚಿನಿ" ಎಂಬ ನಾಲ್ಕು ಪುಸ್ತಕಗಳನ್ನು ಭಾಂಗಿಮಾಡಿ ಕಳುಹಿಸಿರುವೆನು. ಪುಸ್ತಕಗಳನ್ನು ಜೆನ್ನಾಗಿ ಓದುವದಲ್ಲದೆ ನಿನ್ನ ಸಮಯವನ್ನು ಒಳ್ಳೆಯ ರೀತಿಯಲ್ಲಿ ವಿನಿಯೋಗಿಸುತ್ತಿರಬೇಕು.

ನಿಮ್ಮ ತಾಯಿಯು ಪೂರ್ವಕಾಲದ ಪರಿಸ್ಥಿತಿಯುಳ್ಳವರು. ಅವರಿಗೆ ಸಮಯ ದಲ್ಲಿ ತಕ್ಕ ಸಲಹೆಗಳನ್ನು ಹೇಳಿಕೊಡುತ್ತಾ ಗೃಹಕೃತ್ಯದಲ್ಲಿ ಪರತಂತ್ರಯಿಗಳಾಗಿ ರುವಂತೆ ಹೇಳುವುದು. ಹಿಂದಿನ ಸ್ಮರಣೆಗಳನ್ನು ನೆನೆದು ಜಾಗರೂಕಳಾಗಿರು. ಚಿ|| ಮಗುವಿನ ಆರೋಗ್ಯವಿಷಯದಲ್ಲಿ ಬಹು ಎಚ್ಚರವನ್ನು ವಹಿಸು. ನಿನ್ನಕ್ಷೇಮ ಲಾಭಕ್ಕೆ ಪತ್ರಬರಿ. ಇತ್ಯಾಶಿಷಃ

ಕಾಗದವನ್ನು ಓದಿಮುಗಿದಮೇಲೆ ಪುಸ್ತಕಗಳನ್ನು ಒಂದೊಂದನ್ನಾಗಿ ಓದಿ ನೋಡಿದೆನು. ಈ ನಾಲ್ಕು ಗ್ರಂಥಗಳೂ ಗೃಹಿಣಿಯಾದವಳ ನಿತ್ಯಪಠನಕ್ಕೆ ಯೋಗ್ಯ ವಾದುದೆಂದು ತಿಳಿದು ಬಂದುದರಿಂದ ನಾನು ಅದನ್ನು ಪುನಃಪುನಃ ಓದುತ್ತಾ ತದುಕ್ತ ಧರ್ಮಗಳನ್ನು ಮನನಮಾಡುತ್ತಾ ನನ್ನ ಸ್ವಾಮಿಪಿತವನ್ನೇ ಮನಸ್ಸಿನಲ್ಲಿ ಸದಾ ಚಿಂತಿ ಸುತ್ತಾ ಸಮಯದೊರೆತಾಗ ನನ್ನ ಒಡನಾಡಿಯರುಗೂ ತಕ್ಕ ಧರ್ಮನೀತಿಗಳನ್ನು ಹೇಳುತ್ತಾ ಕಾಲಗಳೆಯುತ್ತಿದ್ದೆನು. ನನ್ನ ತಾಯಿಯೂ ನಾನು ಬಂದ ಇಪ್ಪತ್ತುದಿನ ಗಳಿಗೆ ಗಂಡುಮಗುವನ್ನು ಪೆತ್ತರು. ಈ ಸಮಾಚಾರವನ್ನು ಕುರಿತು ಪರಪುರಕ್ಕೆ ಕಾಗದ ವನ್ನು ಬರೆದುದೂ ಆಯಿತು.

X

ನಾನು ರಂಗಪುರದಲ್ಲಿ ಒಂದುತಿಂಗಳುಕಾಲವನ್ನು ಕಳೆದೆನು. ಪರಪುರದಿಂದ ನಮ್ಮಯಜಮಾನರು ಈ ಅವಧಿಯಲ್ಲಿ ರಂಗಪುರಕ್ಕೆ ಬಂದಾರೆಂದು ನಿರೀಕ್ಷಿಸಿದೆನು. ಬರಲಿಲ್ಲ. ಒಂದು ತಿಂಗಳು ಕಳೆದಮೇಲೆ ಶ್ರೀನಗರದಲ್ಲಿ ನಡೆದ ವಿಚಿತ್ರವೃತ್ತಾಂತವೊಂ ದನ್ನು ನಮ್ಮಯಜಮಾನರು ಪತ್ರಮುಖೇನ ವಿಸ್ತಾರವಾಗಿ ನನಗೆ ತಿಳಿಸಿದರು. ಆ ಪತ್ರದ ಮುಖ್ಯಸಾರಾಂಶವು ಈ ಕೆಳಗೆ ಬರೆಯಲ್ಪಡುತ್ತದೆ.

ಶ್ರೀನಗರದ ನಮ್ಮಮನೆಯಲ್ಲಿ ಹತ್ತುವರ್ಷಕಾಲದಿಂದ ಒಬ್ಬಳು ಕಸಟಿಯಾದ ಮುದುಕಿಯುದ್ದಳು. ಇವಳು ನಮ್ಮ ಬಂಧುಗಳಲ್ಲೊಬ್ಬರ ಮನೆಯವಳಾಗಿದ್ದುದರಿಂ ದಲೂ ಅವಳಿಗೆ ಯಾರೂ ದಿಕ್ಕಿಲ್ಲದ್ದರಿಂದಲೂ ನಮ್ಮ ಮನೆಯಲ್ಲೇಬಂದು ಸೇರಿಕೊಂ ಡಿದ್ದಳು. ಇವಳಿಂದ ಒಂದೊಂದು ಕಾಲದಲ್ಲಿ ನಮಗೆ ಅನೇಕ ಸಹಾಯವಿದ್ದುದರಿಂದ ನಮ್ಮ ತಾತನವರು ಅವಳನ್ನು ಮನೆಯಲ್ಲಿರಲು ಸ್ವಾತಂತ್ರ್ಯವನ್ನು ಕೊಟ್ಟಿದ್ದರು. ಆ ಮುದುಕಿಯ ನಡತ ವಿಚಿತ್ರವಾದುದು. ಅವಳಿಗೆ ಒಬ್ಬರಮೇಲೆ ಇನ್ನೊಬ್ಬರ ಚಾಡಿ ಯನ್ನು ಹೇಳಿ ಪರಮೂಷಣೆಯನ್ನು ಮಾಡಿ ಅವರುಗಳಿಗೆ ತಂದಿಕ್ಕಿತಮಾಷೆ ನೋಡುವು ದರಲ್ಲಿ ಬಹು ಕುತೂಹಲ. ಇಲ್ಲದೆ ಪ್ರಪಂಚದ ಎಲ್ಲಾವೃತ್ತಾಂತವೂ ಇವಳಿಗೆ ಬಲು ಬೇಗ ತಿಳಿಯುತ್ತಿದ್ದುದರಿಂದ ಇವಳು ಒಂದು ದೈನಂದಿನ ಪತ್ರಿಕೆಯಂತೆ ಪ್ರಸಿದ್ಧಳಾಗಿ

ದ್ದಳು. ಆದರೆ ನಮ್ಮ ಮನೆಯಲ್ಲಿ ಮಾತ್ರ ನಿಸ್ಪೃಹಳಂತೆ ತೋರ್ಪಡಿಸಿ ಕೊಳ್ಳುತಿದ್ದಳು. ಇವಳನ್ನು ಕಂಡರೆ ನಮ್ಮ ಅಕ್ಕನವರಿಗೆ ಬಹುಪ್ರೀತಿ. ಗುಟ್ಟಾಗಿ ಅವಳ ಕೈಲಿ ದುಡ್ಡು ಕೊಟ್ಟು ಆಗಾಗ್ಗೆ ತಮಗೆ ಬೇಕಾದ ತಿಂಡಿಯನ್ನು ಮಾಡಿಸಿಕೊಳ್ಳುತ್ತಿದ್ದರು. ಆ ಮುದುಕಿಯ ಅಣ್ಣನ ಭಾವನೈದುನ ಮಗ 10 ವರ್ಷ ವಯಸ್ಸುಳ್ಳ ಚಂಡಕೇಶವನೆಂಬ ಒಬ್ಬ ಹುಡುಗನು ಅನಾಥನಾಗಿ ಬಂದು ಈ ಮುದುಕಿಯ ಮನೆಯಲ್ಲಿ ಸೇರಿಕೊಂಡಿದ್ದನು. ಅವನ ವಿದ್ಯಾಭ್ಯಾಸದ ವಿಚಾರವನ್ನು ಈ ಮುದುಕಿಯು ವಹಿಸಿಕೊಂಡಿದ್ದಳು. ಈ ಹುಡುಗನು ನಮ್ಮ ಮನೆ ಮಕ್ಕಳೊಡನೆ ಸೇರಿಕೊಂಡು ಆಟವನ್ನು ಆಡುತಿದ್ದನು. ಅಲ್ಲದೆ ನಮ್ಮ ಅಕ್ಕನು ತಮ್ಮ ಚಿಕ್ಕಮನೆಯ ಕಾವಲಿಗೆ ತಾವು ಮನೆಯಲ್ಲಿಲ್ಲದಾಗ ಈ ಹುಡುಗನನ್ನು ನೇಮಿಸುತ್ತಿದ್ದರು. ಹುಡುಗನೂ ನಂಬಿಕೆಯಾಗಿಯೇ ಇದ್ದನು. ಮುದುಕಿಯು ಆ ಹುಡುಗನನ್ನು ಒಳ್ಳೆಯ ಶಿಕ್ಷೆಯಲ್ಲಿಟ್ಟುಕೊಂಡಿದ್ದಳು. ನಮ್ಮ ಮನೆಯಲ್ಲಿ ಹಣ ಹೋಗಿ ನನ್ನಮೇಲೆ ಕಳ್ಳತನವು ಆರೋಪಿತವಾದಾಗ ಆ ಮುದುಕಿಯೂ ಆ ಹುಡುಗನೂ ಅಲ್ಲಿಯೇ ಇದ್ದರು. ನಮ್ಮ ಮನೆಯಲ್ಲಿ ಆಗ ನಡೆದ ವೃತ್ತಾಂತವೆಲ್ಲಾ ಆ ಮುದುಕಿಗೆ ಚೆನ್ನಾಗಿ ಗೊತ್ತಾಗಿ ಅವಳು ಅವೇ ಸಮಯವೆಂದು ನನ್ನಮೇಲೆ ಅನೇಕಕ್ಷುದ್ರ ಗಳನ್ನು ಹೇಳಿಬಿಟ್ಟಿದ್ದಳು. ಇದೇಕಾರಣದಿಂದಲೇ ನಮ್ಮ ಭಾವನವರು ನಮ್ಮ ಯಜಮಾನರ ಮಾತನ್ನು ನಂಬದೆ ತಿರಸ್ಕರಿಸಿ ಮಾತನಾಡಿದ್ದರು. ನಾವು ಆ ಮನೆಯನ್ನು ಬಿಟ್ಟು ಹೊರಟುಬಂದಮೇಲೆ ಇಪ್ಪತ್ತುದಿನಗಳು ಕಳೆದಿದ್ದಿತು. ಆಗೊಂದು ದಿನ ನಮ್ಮ ಭಾವನವರ ಆಂಗಿಜೇಬಿನಲ್ಲಿ ಮಧ್ಯಾಹ್ನ ನಾಲ್ಕುಗಂಟೆಯಲ್ಲಿಟ್ಟಿದ್ದ ಹತ್ತುಪಾವಲಿಗಳಲ್ಲಿ ನಾಲ್ಕುಪಾವಲಿಗಳು ಕಮ್ಮಿಯಾಗಿದ್ದುವಂತೆ? ಅವರು ಸಾಯಂಕಾಲ ಎಂಟುಗಂಟೆಗೆ ಮನೆಗೆ ಬಂದು ಏನೋ ಖರ್ಚಿಗಾಗಿ ಜೇಬಿನಲ್ಲಿದ್ದ ದುಡ್ಡನ್ನು ನೋಡಲು ನಾಲ್ಕುಪಾವಲಿಗಳು ಇರಲಿಲ್ಲವಂತೆ! ಮನೆಯಲ್ಲಿ ಯಾರನ್ನು ಕೇಳಿದರೂ ನನಗೆ ಗೊತ್ತಿಲ್ಲ, ತನಗೆ ಗೊತ್ತಿಲ್ಲವೆಂದು ಹೇಳಿಬಿಟ್ಟರು. ನಮ್ಮ ಭಾವನವರಿಗೆ ಯಾರಮೇಲೆ ಸಂದೇಹ ಪಡಲಿಕ್ಕೂ ಕಾರಣವಿಲ್ಲದ್ದರಿಂದಲೂ ಮನೆಯಲ್ಲೆಲ್ಲರೂ ನಂಬಿಕೆಗೆ ಅರ್ಹರೆಂದು ತಿಳಿದಿದ್ದುದರಿಂದಲೂ ಸುಮ್ಮನಾಗಿಬಿಟ್ಟು ಕೈಕಾಲು ತೊಳೆದುಕೊಂಡು ಸಂಧ್ಯಾವಂದನೆಗಾಗಿ ಬೀದಿಜಗಲಿಯ ಮೇಲೆ ಹೋಗಿ ಕುಳಿತು ಕೊಂಡರು. ಆಗ ನಡುಬೀದಿಯಲ್ಲಿ ಆಡಿಕೊಂಡು ಬರುತ್ತಿದ್ದ ನಮ್ಮ ಮನೆಯ ಚಂಡಕೇಶವನೂ ಮಗ್ಗುಲುಮನೆ ನಾರಾಯಣನೆಂಬ 11 ವರ್ಷದ ಹುಡುಗನೂ ಈ ಕೆಳಗೆ ಕಂಡಂತೆ ಸಂಭಾಷಿಸುತ್ತಿದ್ದರು.

ನಾರಾಯಣ—ಎಲೋ! ಕೇಶವ. ನೀನು ಈ ದಿನ ಹೋಟಲಿನಲ್ಲಿ ಕೊಡಿಸಿದ ತಿಂಡಿ ಬಹುರುಚಿಯಾಗಿತ್ತು ಕಣೊ, ಅದರಲ್ಲೂ ಬಾಳೆಕಾಯಿಫಕೋಡವಂತೂ ತುಂಬಾ ಚೆನ್ನಾಗಿತ್ತು.

ಜಂಡಕೇಶವ—ಲೋ, ನಾರಾಯಣ, ನಾಳೆಯ ದಿನವೂ ನನ್ನ ಜತೇಲಿ ಬರುತ್ತೀಯೇನೋ, ಶ್ಯಾಮಮೂರ್ತಿ, ಕೋದಂಡರಾಮ ಇವರನ್ನೂ ಕರೆದುಕೊಂಡು ಬಾ. ನನ್ನ ಹತ್ತಿರ ಮೂರು ಪಾವಲಿಇದೆ. ನಿಮಗೆಲ್ಲಾ ನಾಳೆಯೂ ತುಂಬಾ ತಿಂಡಿ ಕೊಡಿಸುತ್ತೇನೆ.

ನಾರಾಯಣ—ಲೋ, ನಿನಗೆ ದುಡ್ಡೆಲ್ಲಿತ್ತೋ, ನಿಮ್ಮಜ್ಜಿಕಂಡರೆ ಬಯ್ಯುವದಿಲ್ಲ ವೇನೋ! ನಾನು ಬರುವುದಿಲ್ಲವಪ್ಪಾ, ನಮ್ಮ ಮನೆಯವರು ಬಯ್ಯುತ್ತಾರೆ.

ಜಂಡ—ದುಡ್ಡೆ! ದುಡ್ಡಿಗೇನೊ, ನನ್ನ ಹತ್ತಿರ ಎಷ್ಟೋ ರೂಪಾಯಿ ಇದೆ. ಅದನ್ನೆಲ್ಲಾ ಒಂದು ಕಡೆ ಗುಟ್ಟಾಗಿಟ್ಟಿದೇನೆ. ಇನ್ನು ನಾಲ್ಕೈದು ದಿನ ಕಳೆದ ಮೇಲೆ ಅದರಲ್ಲಿ ಒಂದೊಂದಾಗಿ ತೆಗೆದುಕೊಂಡು ತಿಂಡಿಯನ್ನು ತಿನ್ನುತ್ತೇನೆ. ನಿನಗೇಕೆ ಹೆದರಿಕೆಯೋ, ನನ್ನ ಜತೇಲಿಸುಮ್ಮನೆಬಾರೋ!

ನಾರಾಯಣ—ಹಾಗೇನೋ! ಹಾಗಾದರೆ ನೀನು ಜಾಣ. ಆಗಲಪ್ಪಾ, ಶ್ಯಾಮೂ, ಕೋದಂಡ ಇವರನ್ನು ನಾಳೆ ಕರತರುತ್ತೇನೆ.

ಜಂಡ—ನಾನು ಮನೆಗೆ ಹೋಗುತ್ತೇನಪ್ಪಾ. ನಮ್ಮ ಅಜ್ಜಿ ಬಯ್ಯುತ್ತಾಳೆ. ನನ್ನ ಹತ್ತಿರ ಒಂಭತ್ತುಕಾಸಿದೆ. ಇದನ್ನು ತೆಗೆದುಕೊಂಡು ನಿನ್ನ ಹತ್ತಿರ ಇಟ್ಟಿರು. ನಾಳೆ ತಿಂಡಿತಿನ್ನುವಾಗ ಕೊಡುವಿಯಂತೆ.

ಈರೀತಿ ಆ ಹುಡುಗರು ಮಾತನಾಡಿಕೊಂಡು ತಮ್ಮತಮ್ಮ ಮನೆಗಳಿಗೆ ಬಂದು ಬಿಟ್ಟರು. ನಮ್ಮ ಭಾವನವರು ಆ ಹುಡುಗರ ಮಾತನ್ನುಕೇಳುತ್ತಾ ಆಶ್ಚರ್ಯಪಟ್ಟು ತಮ್ಮ ಜೇಬಿನಲ್ಲಿದ್ದ 4 ಪಾವಲಿಗಳನ್ನು ಈ ಜಂಡಕೇಶವನೇ ತೆಗೆದುಕೊಂಡಿರಬಹುದೆಂದು ಊಹಿಸಿದರು. ಹಾಗೆಯೇ ಅವನು ತನ್ನಲ್ಲಿ ತುಂಬಾ ರೂಪಾಯಿಗಳಿವೆ–ಎಂದು ಹೇಳಿದಾಗ ಅವರಿಗೆ ದಿಗ್ಭ್ರಮೆಯುಂಟಾಯಿತು. ಇದರ ನಿಜಸ್ಥಿತಿಯನ್ನು ಪರೀಕ್ಷಿಸ ಬೇಕೆಂದು ಅವರು ಸಂಧ್ಯಾವಂದನೆಯಾದ ಬಳಿಕ ಗುಟ್ಟಾಗಿ ಜಂಡಕೇಶವನನ್ನು ಕರೆದು ಉಪಾಯದಿಂದ ಮಗು! ನಿನ್ನಹತ್ತರ ದುಡ್ಡೇನಾದರೂ ಇದ್ದರೆಕೊಡು. ನಾಳೆ ಕೊಡುತ್ತೇನೆಂದು ಕೇಳಿದರು. ಅವನು ಇಲ್ಲ, ನನ್ನಲ್ಲಿ ದುಡ್ಡೆಲ್ಲಿರುತ್ತದೆ. ಎಂದನು. ಎಲೋ? ನೀನು ನಾರಾಯಣನ ಸಂಗಡ ಹೇಳುತ್ತಿರಲಿಲ್ಲವೇನೋ: ಆ ಮೂರು ಪಾವಲಿಯನ್ನು ನೀನು ನನಗೆ ತಂದುಕೊಟ್ಟರೆ ನಿನಗೆ 1ಪಾವಲಿಯನ್ನು ಇನಾಮಾಗಿ ಕೊಡುತ್ತೇನೆಂದು ಹೇಳಿದರು. ಅದಕ್ಕೆ ಅವನು, ನನ್ನ ಜೇಬಿನಲ್ಲಿ ನೋಡುತ್ತೇನೆ ಇದ್ದರೆ ಕೊಡುತ್ತೇನೆಂದು ದಿಗಿಲಿನಿಂದ ಹೇಳಿದನು. ಅವನ ಭಯವನ್ನು ನೋಡಿ ನಮ್ಮ ಭಾವನವರಿಗೆ ನಿಸ್ಸಂದೇಹವಾಗಿ ಅವನನ್ನು ಬಿಟ್ಟುಬಿಟ್ಟರು. ಆ ಹುಡುಗನು

ಒಳಕ್ಕೆ ಹೋಗಿ ಪೆಚ್ಚಾಗಿ ನಿಂತುಕೊಂಡನು. ಅವರಜ್ಜಿಯು ಇವನ ಸ್ಥಿತಿಯನ್ನು ನೋಡಿ ಇದೇಕೆ! ಪೀಗಿರುವೆಯೆಂದು ಕೇಳಿದರು. ಉತ್ತರಕೊರಡಲಿಲ್ಲ. ಅಷ್ಟರಲ್ಲೆ ನಮ್ಮ ಭಾವನವರು ಹೋಗಿ ಮುದುಕಿಯೊಡನೆ, ನಡೆದವೃತ್ತಾಂತವನ್ನೂ ಹುಡುಗರಬ್ಬರ ಸಂಭಾಷಣೆಯನ್ನೂ ತಿಳಿಸಿದರು. ಅದರ ಮೇಲೆ ಜಂಡಕೇಶವನ ಬೇಬನ್ನು ಶೋಧಿಸಲು ಮೂರುಪಾವಲಿಗಳು ಸಿಕ್ಕಿದುವು. ಅದನ್ನು ನೋಡಿ ಮುದುಕಿಯು ಆಹುಡುಗನನ್ನು ಹೊಡೆದು ಬಡೆದು ಏಪುರೇತವಾಗಿ ಶಿಕ್ಷಿಸಿಬಿಟ್ಟರು. ತುಂಬಾ ರೂಪಾಯಿಗಳಿವೆಯೆ ಂದು ನಾರಾಯಣನಸಂಗಡ ಹೇಳಿದೆಯಲ್ಲಾ, ಎಲ್ಲಿಕೊಡು ಅದನ್ನು ಕೊಟ್ಟರೆ ನಿನಗೆ ಐರುಪಾಯಿ ಇನಾಮು ಕೊಡುವೆನೆಂದು ನಮ್ಮ ಭಾವನವರು ಹೇಳಲು ಆಹುಡುಗನು ಅಳುತ್ತಾ, ಇಲ್ಲ! ನನ್ನಲ್ಲಿಲ್ಲ! ಎಂದು ಹೇಳಿದನು. ಅವನನ್ನು ಎಲ್ಲರೂ ತುಂಬಾಪೆದರಿಸಿ, ನೀನು ಹೇಳದಿದ್ದರೆ ನಿನ್ನನ್ನು ಪೋಲೀಸಿಗೆ ಕೊಟ್ಟುಬಿಡುತ್ತೇನೆಂದು ಹೇಳಿದರು. ಆಹುಡುಗನು ಬಹು ಕಷ್ಟದಿಂದ ಪಿತ್ತಲಿಗೆ ಹೋಗಿ ಗೋಡೆಯಪಕ್ಕದಲ್ಲಿ ಒಂದು ಸ್ಥಳದಲ್ಲಿ ಬಗೆದು ಅಳುತ್ತಾನಿಂತುಕೊಂಡನು. ಎಲ್ಲರೂ ಹೋಗಿ ಆ ಸ್ಥಳದಲ್ಲಿ ನೋಡಲು ಮಣ್ಣುಪಿಡಿಯಲಾರಂಭವಾಗಿದ್ದ ಬೆಳ್ಳಿಯ ರೂಪಾಯಿಗಳು ಕಾಣಬಂದುವು. ಭಾವನವರು ಅದನ್ನು ತೆಗೆದು ಎಣಿಸಲು ಅರವತ್ತೈರಡು ರೂಪಾಯಿಗಳಿದ್ದುವು. ಇಷ್ಟು ಹಣ ನಿನಗೆಲ್ಲಿ ಸಿಕ್ಕಿತೆಂದು ಕೇಳಲು ಅವನು ನಡುಗುತ್ತಾ ತನ್ನ ಅಜ್ಜಿಯನ್ನು ತೋರಿಸಿದನು. ಅದರ ಅರ್ಥವೇನೆಂದು ಎಲ್ಲರೂ ಕೇಳಲು, ನಾನು ಈಗ ಒಂದು ತಿಂಗಳಲ್ಲಿ ನಿಮ್ಮ ಮನೆಯಲ್ಲಿ ಪೆಟ್ಟಿಗೆಯಲ್ಲಿದ್ದ ಹಣವನ್ನು ಕೈಗೆ ಸಿಕ್ಕಿದಷ್ಟನ್ನು ತಂದು ನನ್ನ ಅಜ್ಜಿಯ ಕೈಗೆ ಕೊಡಲು ಅವಳು ಅದನ್ನು ನನ್ನೆದುರಾಗಿ ಇಲ್ಲಿ ಹೂಳಿಟ್ಟಳೆಂದು ಹೇಳಿದನು. ಘಾತಕರೆ! ಈಗ ಮುದುಕಿಯ ಮುಖವನ್ನು ಒಮ್ಮೆ ದೃಷ್ಟಿಸಿ ನೋಡಿರಿ. ಗುಟ್ಟುಬಯಲಾಯಿತು. ಇನ್ನೊಂದು ಕ್ಷಣವೂ ತಮ್ಮ ಮನೆಯಲ್ಲಿರಲಾಗದೆಂದು ಮುದುಕಿಯನ್ನು ಆ ಹುಡುಗನೊಡನೆ ಹೊರಕ್ಕೆ ಕಳುಹಿಸಿಬಿಟ್ಟರು. ಈ ರೀತಿಯಾಗಿ ಶ್ರೀ ನಗರದಲ್ಲಿ ಕಳ್ಳತನ ಪತ್ತೆಯಾಯಿತು.

ನಮ್ಮ ಭಾವನವರ ಪೆಟ್ಟಿಗೆಯಲ್ಲಿ ಹಿಂದೆ ಕಳುವಾದುದು ಐವತ್ತೈದು ರೂಪಾಯಿಗಳೆಂದೂ ನಿರ್ಧರವಾಯಿತಂತೆ! ಮುದುಕಿಯು ಆಹುಡುಗನೊಡನೆ ಮನೆಬಿಟ್ಟು ಹೊರಟು ಹೊದಮೇಲೆ ಮನೆಯವರೆಲ್ಲರೂ ಮಾತನಾಡಿಕೊಂಡು ನನ್ನನ್ನೂ ನಮ್ಮ ಯಜಮಾನರನ್ನೂ ಪುನಃ ಹಿಂತಿರುಗಿ ಮನೆಗೆ ಬರುವಂತೆ ಎಷ್ಟೋ ಉಪಚಾರವನ್ನು ಹೇಳಿದರು. ನಾನು ತಸ್ಕರಿಯಲ್ಲವೆಂದು ಆಗ ನಮ್ಮ ಮನೆಯವರಿಗೆ ಗೊತ್ತಾಗಿ ನನ್ನ ವಿಷಯದಲ್ಲಿ ಹಿಂದೆ ನಡೆಸಿದ ನಡವಳಿಕೆಗಾಗಿ ಬಹು ಪಶ್ಚಾತ್ತಾಪ ಪಟ್ಟರಂತೆ!

ಈರೀತಿಯಾಗಿ ಸಮಸ್ತ ವೃತ್ತಾಂತವೂ ನನಗೆ ಪತ್ರಮೂಲಕವಾಗಿ ತಿಳಿದು ಬಂದಿತು–ಹೀಗೆಯೇ ಇನ್ನೂ ಒಂದು ತಿಂಗಳು ಕಳೆದಿತು. ನಮ್ಮ ಯಜಮಾನರಿಗೆ ಆಷ್ಟು ಹೊತ್ತಿಗೆ ರಜವು ಮುಗಿದುದರಿಂದ ನನ್ನನ್ನು ಕರೆದು ಕೊಂಡು ಹೋಗಲು ರಂಗಪುರಕ್ಕೆ ಬಂದರು.

ನಾವು ರಂಗಪುರದಿಂದ ಶ್ರೀನಗರಕ್ಕೆ ಬಂದು ನಮ್ಮ ಯಜಮಾನರು ಹೊಸ ದಾಗಿ ಹತ್ತು ರೂಪಾಯಿ ಬಾಡಿಗೆಗೆ ಮಾಡಿದ್ದ ಒಂದು ದಿವ್ಯ ಗೃಹದಲ್ಲಿ ಸಂಸಾರ ಮಾಡಲಾರಂಭಿಸಿದೆವು. ಆದೇ ತಿಂಗಳಲ್ಲೇ ನಮ್ಮ ಯಜಮಾನರಿಗೆ 15ರೂಪಾಯಿ ಸಂಬಳ ಹೆಚ್ಚಾಯಿತು. ನಮ್ಮ ಭಾವನವರಿಗೂ 100ರೂಪಾಯಿಗಳು ಆತಿಂಗಳಿಂದ ಬರಲಾರಂಭವಾಯಿತು. ಇನ್ನೊಂದು ತಿಂಗಳಿಗೆ ನಮ್ಮ ಭಾವನವರ ಮಗು ವಿದ್ಯಾಮೂರ್ತಿಗೆ ಉಪನಯನವೂ ನಮ್ಮ ಹುಡುಗಿ (ಸಪತ್ನಿಪುತ್ರಿ) ಸೀತಾಲಕ್ಷ್ಮಿಗೆ ವಿವಾಹ ಲಗ್ನವೂ ಹರಪುರದಲ್ಲಿ ಬೆಳೆಯಲು ನಿಶ್ಚಯವಾಗಿರುವುದು. ನಾವೆಲ್ಲರೂ ಅಲ್ಲಿಗೆ ಹೋಗ ಬೇಕಾಗಿದೆ. ಇಂದೀಗಲೇ ನಮ್ಮ ಸಂಸಾರವು ಶಾಂತಿ ಗೃಹದಂತೆ ರಾರಾಜಿಸುತ್ತಲಿದೆ. ವಿಷಬೀಜವೂ ವಿಷಲತೆಯೂ ಧ್ವಂಸವಾಗಿ ಸರ್ವತ್ರವೂ ಮೃತ ವರ್ಷಣವು ವರ್ಷಿಸುತಲಿದೆ. ನಾನು ಪತಿಯ ಬೋಧೆಗಳನ್ನು ಮನನಮಾಡುತ್ತಾ ಪತಿಸೇವೆಯನ್ನು ತೃಪ್ತಿಕರವಾಗಿ ಮಾಡಲು ಆರಂಭಮಾಡಿರುವೆನು. ಸೋದರಿಯರೇ! ಪುನಃ ನಮ್ಮ ಸಂಸಾರದಲ್ಲಿ ಅಶಾಂತಿ ಯುಂಟಾಗಲು ಕಾರಣವೇನೂ ಇರದು. ನನ್ನೀ ಸಂಸಾರಸ್ಥಿತಿಯನ್ನು ನೋಡಿ–ಓದಿ, ಸರ್ವರೂ ಗೃಹಚ್ಛಿದ್ರಗಳನ್ನು ಕಳೆದು ಸುಖಿಗಳಾಗಲೆಂದೂ, ನಮ್ಮೀ ಭಾರತ ಭೂಮಾತೆಯು ಸದ್ಗೃಹಿಣಿಯರಿಂದ ಕೂಡಿ ಚಿರಕಾಲ ರಾರಾಜಿಸಲೆಂದೂ ಮಂಗಳ ಪರಂಪರೆಗಳು ಗೃಹಗೃಹದಲ್ಲೂ ವೃದ್ಧಿ ಯಾಗಲೆಂದೂ ಅನನ್ಯ ಭಾವದಿಂದ ಪರಮಾತ್ಮನನ್ನು ಧ್ಯಾನಿಸಿ ವಿಶ್ರಾಂತಿ ಹೊಂದುವೆನು. ಸಮಯ ಬಂದಾಗ ಪುನಃ ನಿಮ್ಮ ಸಂದರ್ಶನವನ್ನು ತೆಗೆದುಕೊಳ್ಳಲು ಅಡ್ಡಿಯಿಲ್ಲ.

ನಮ್ಮ ಭಗಿನೀಪರ್ಗಕ್ಕೆ ಶುಭವಾಗಲಿ ! ! !

ಸಂಪೂರ್ಣಂ.

Printed by **B. V. Narasimha Iyengar**, at the
ROYAL PRINTING PRESS, MYSORE.

ಅಚಾತುರ್ಯದಿಂದ ಕೈಬಿಟ್ಟುಹೋದ ಕೆಲವು ಅಶುದ್ಧಗಳು.

ಪುಟ	ಪಙ್ತಿ	ಶುದ್ಧ	ಅಶುದ್ಧ
41	9	ಐವತ್ತ್ಮೈದು	ಐವತ್ತು
,,	22	55	50
42	2	ಮೌಗ್ದ್ಯ	ಮೌಗ್ಧ್ಯ
,,	8	ಉದ್ಬಂಧನಂ	ಉದ್ಬಂಧನಂ
,,	15	ಪಾರ್ಥಿವ	ಪ್ರಾರ್ಥಿವ
,,	21	ದುರ್ಗುಣ	ಗುಣ
43	9	ಜ್ಞಾನ	ಜ್ಞಾನ
,,	19	ತಪ್ಪು	ತಂಪು
,,	27	ಬೇಕೆಂಬುದನ್ನೂ	ಬೇಕೆಂಬುದನ್ನು
44	2	ಮನಸ್ಸಿನಲ್ಲಿ	ಮಸಸ್ಸಿಸಲ್ಲಿ
,,	6	ತಂಪೆ	ತೆಂಪೆ
45	16	ಬೇಜಾರಾಗುವುದೆಂದಾಗಲೀ	ಬೇಜಾರಾಗುವುದಾಗಲೀ
,,	18	ಸುಳ್ಳನ್ನೂ	ಸುಳ್ಳನ್ನು
,,	19	ನಿಂದೆಯನ್ನೂ	ನಿಂದೆಯನ್ನು
47	27	ಶಿರಸ್ಸನ್ನಿಟ್ಟು	ಶಿಲಸ್ಸನ್ನಿಟ್ಟು
,,	28	ತಪ್ಪುಗಳನ್ನೆಲ್ಲಾ	ತಪ್ಪುಗಳಿನ್ನೆಲ್ಲಾ
48	7	ಕೂಗಿದುದರಿಂದ	ಕೊಗಿದದುಂದ
,,	21	ವಿಚಾರವನ್ನೂ	ವಿಚಾರವನ್ನು
,,	24	ಐವತ್ತೈದು	ಐವತ್ತು

N.B.—ಅರ್ಥವ್ಯತ್ಯಾಸವಾಗುವ ಕೆಲವು ತಪ್ಪುಗಳನ್ನು ಮಾತ್ರ ತಿದ್ದಿದೆ. ಉಳಿದುವನ್ನು ವಾಚಕರೇ ಸರಿಮಾಡಿಕೊಂಡು ಓದಬೇಕು.

ಕಾದಂಬರೀ ಸಂಗ್ರಹ.

(ತಿಳಿಗನ್ನಡ ಮಾಸಪತ್ರಿಕೆ.)

ವಾರ್ಷಿಕ ಚಂದಾ 1-4-0.

Vol. 4.] July, 1915. [No. 1.

Contents—(ವಿಷಯಸೂಚಿಕೆ)

1. ನನ್ನ ಸಂಸಾರ ... ... 1–24.
2. ಲಲಿತೆಯ ಪಾತಿವ್ರತ್ಯ ... ... ಮುಖಪತ್ರ.

EDITED BY
C. VENKATARAMANA SASTRY,

PRINTED AT THE ROYAL PRINTING PRESS,
MYSORE.
1915.

ನೂತನ ವತ್ಸರಾರಂಭ.

ಪೋಷಕಮಹಾಶಯ! ನಿಮ್ಮ ಅಮೋಘ ಸಹಾಯ ಸಂಪತ್ತಿಯಿಂದ ಸಂಗ್ರಹಶಿಶುವು ಚತುರ್ಥ ವರ್ಷದಲ್ಲಿ ಕಾಲನ್ನಿಟ್ಟಿರುವುದು. ಕಳೆದಮೂರುವರ್ಷಕಾಲ ಸಂಗ್ರಹವು ಅನೇಕ ಕಷ್ಟದಿಂದ ಪ್ರಜುರವಾದುದು ಸರಿಯಷ್ಟೆ! ಮುಂದೆ ಈಪತ್ರಿಕೆಯು ನಿರಾಯಾಸವಾಗಿ ಹೊರಡುವಂತೆಯೂ, ಕಾಲಕ್ಕೆ ಸರಿಯಾಗಿ ಪ್ರಜುರವಾಗುವಂತೆಯೂ, ಗ್ರಾಹಕ ಸಂಖ್ಯೆಯು ಅಭಿವೃದ್ಧಿಯಾಗಿ ಸಂಗ್ರಹಕ್ಕೆ ಮಂಗಳ ಶುಂಟಾಗುವಂತೆಯೂ ನೀವೆಲ್ಲರೂ ಅನುಗ್ರಹಿಸುವದಲ್ಲದೆ ಸ್ವಹಸ್ತ ಪರಹಸ್ತಗಳಿಂದ ಉದಾರಾಶ್ರಯಕೊಟ್ಟು ಕಾಪಾಡ ಬೇಕಾಗಿ ಪ್ರಾರ್ಥಿಸುತ್ತೇನೆ

ಸಂಗ್ರಹ ಪತ್ರಕರ್ತ.

ಲಲಿತೆಯು ಪಾತಿವ್ರತ್ಯರಕ್ಷಣೆ.

ಹೊಸೂರಿನ ಆಚೆ ಸುಮಾರು ಅರ್ಧಮೈಲಿ ದೂರದಲ್ಲಿದ್ದ ಒಂದು ಮೈದಾನದಲ್ಲಿ ಸಣ್ಣದೊಂದು ಗುಡಿಸಲಿದ್ದಿತು. ಒಂದು ದಿನ ಬೆಳಿಗ್ಗೆ ಹತ್ತು ಗಂಟೆಯಲ್ಲಿ ಒಬ್ಬ ಭಿಕ್ಷುಕನು ಆ ಗುಡಿಸಲಿನ ಬಾಗಿಲಿನಲ್ಲಿ ನಿಂತು ತನ್ನ ಕೈಯಲ್ಲಿದ್ದ ಕಬ್ಬಿಣದ ಝಾಲರಿಯನ್ನು ಸದ್ದುಮಾಡಿದನು. ಒಳಗಿನಿಂದ ಯುವತಿಯೊಬ್ಬಳು ಭಿಕ್ಷುವನ್ನು ತಂದು ಪಾಕಿದಳು. ಯುವತಿಗೆ ಹದಿನೆಂಟು ವರ್ಷ ವಯಸ್ಸು. ಸ್ವಭಾವವಾಗಿ ಆಕೆಯು ಸುಂದರಿಯಾಗಿದ್ದಳು. ಆಕೆಯ ಹೆಸರು ಲಲಿತಾಂಬ. ಲಲಿತೆಯು ಭಿಕ್ಷುವನ್ನು ಪಾಕುತ್ತಿದ್ದಾಗ ಆ ಭಿಕ್ಷುಕನು ಪಾಪಪೂರಿತವಾದ ಕ್ರೂರದೃಷ್ಟಿಯಿಂದ ಆ ಸುಂದರಿಯನ್ನು ನೋಡತೊಡಗಿದನು. ಈತನ ಸ್ಥಿತಿಯನ್ನು ನೋಡಿ ಲಲಿತೆಯು ಪೆದರು ಬೇಗ ಭಿಕ್ಷುವನ್ನು ಹಾಕಿ ಒಳಕ್ಕೆ ಹೋಗಿ ಬಾಗಿಲು ಹಾಕಿಕೊಂಡಳು. ಬಳಿಕ ಭಿಕ್ಷುಕನು ಹೊಸೂರಿನ ಕಡೆಗೆ ಹೊರಟುಹೋದನು. ಆದರೆ ಅವನ ಮನಸ್ಸು ಈಗ ಮೊದಲಿನಂತಿರಲಿಲ್ಲ. ಊರ ಹೊರಗಿನ ನೆರೆಯಿಲ್ಲದ ಗುಡಿಸಲನ್ನೂ ಅಲ್ಲಿರುವ ಅಸದೃಶರೂಪರಾಶಿಯನ್ನೂ ನೋಡಿ ಅವನ ಮನಸ್ಸಿನಲ್ಲಿ ಏನೋ ಒಂದು ದುರಾಲೋಚನೆಯು ಉತ್ಪನ್ನವಾಯಿತು. ಹಾವು ಕಡಿದವನ ದೇಹದಲ್ಲಿ ವಿಷವೇರುವಂತೆ ಆ ಪಾಪಿಯ ಹೃದಯದಲ್ಲಿ ಜನಿಸಿದ ಆ ದುರಾಲೋಚನೆಯು ಒಂದು ಕ್ಷಣದೊಳಗಾಗಿ ಅವನನ್ನು ಆಕ್ರಮಣಮಾಡಿ ಅವನನ್ನು ಶಾಸಿಸತೊಡಗಿತು.

ಅವನು ಹೊಸೂರಿಗೆ ಬಂದು ಬಹು ಜಮತ್ಕಾರದಿಂದ ಆ ಗುಡಿಸಲಿಗೆ ಸಂಬಂಧಪಟ್ಟ ಕೆಲವು ವಿಷಯಗಳನ್ನು ತಿಳಿದುಕೊಂಡನು. ಅಷ್ಟರಲ್ಲೇ ಸಾಯಂಕಾಲವಾಯಿತು. ಕತ್ತಲೆಯಾದ ಮೇಲೆ ಪೂರ್ವೋಕ್ತವಾದಾ ಗುಡಿಸಲಿನಲಿ ವಾಸಿಸುತಿದ

ಲಲಿತೆಯು ಎರಡು ವರ್ಷದ ತನ್ನ ಮಗುವನ್ನು ಎತ್ತಿಕೊಂಡು ಬೀದಿಯ ಬಾಗಿಲಿಗೆ ಬಂದಳು. ಜಗಲಿಯ ಮೇಲೆ ಯಾರೋ ಮಲಗಿರುವಂತೆ ತೋರಿತು. ವಿಚಾರಿಸಿ ನೋಡಲು ಆ ವ್ಯಕ್ತಿಯು ಬೆಳಿಗ್ಗೆ ಬಂದಿದ್ದ ಭಿಕ್ಷುಕನೆಂದು ತಿಳಿದುಬಂದಿತು. ಲಲಿತೆಗೆ ಸಂಶಯವುಂಟಾಯಿತು. ಆಗ ಆ ಭಿಕ್ಷುಕನು ಮೃದುಸ್ವರದಿಂದ, "ತಾಯಿ! ಮುಂದಿನೂರಿಗೆ ಹೋಗಲು ಕತ್ತಲಾದುದರಿಂದ ಈ ರಾತ್ರಿ ಇಲ್ಲಿ ಮಲಗಿದ್ದು ಬೆಳಿಗ್ಗೆ ಮುಂದಕ್ಕೆ ಹೋಗುವೆನು" ಎಂದು ಹೇಳಲು ಲಲಿತೆಯು ಧೈರ್ಯಗೊಂಡು ಒಳಕ್ಕೆ ಹೋದಳು. ಆ ದಿನ ಮನೆಯಲ್ಲಿ ಲಲಿತೆಯೊಬ್ಬಳೇ ಇದ್ದಳು. ಆಕೆಯ ಪತಿಯು ಪರಸ್ಥಳಕ್ಕೆ ಹೋಗಿದ್ದುದರಿಂದಲೂ ಆತನು ಮಾರನೆ ದಿನ ಬೆಳಿಗ್ಗೆ ಬರುವ ವಾಯಿದೆ ಇದ್ದುದರಿಂದಲೂ ಏಕಾಂಗಿಯಾಗಿ ಆ ರಾತ್ರಿ ಲಲಿತೆಯು ಆ ಗುಡಿಸಲಿನಲ್ಲಿರುವುದು ದುಸ್ತರವಾಗಿ ಹೋಯಿತು. ಕಾರ್ಯಾಂತರಗಳಿಂದ ಆಕೆಯ ಪತಿಯು ಅವಳೊಬ್ಬಳನ್ನೇ ಅಲ್ಲಿ ಬಿಟ್ಟು ಹೋಗಬೇಕಾಗಿ ಬಂದಿದ್ದಿತು. ಲಲಿತೆಯು ಆಗ ಏನು ಮಾಡಬಲ್ಲಳು? ತನ್ನ ಪತಿಯನ್ನೇ ಧ್ಯಾನಿಸುತ್ತಾ ಊಟವನ್ನು ಮಾಡಿ ಕೈತೊಳೆದುಕೊಂಡು ಒಳಗೆ ಹೋದಳು. ಹೋಗುವಾಗ ಭಿಕ್ಷುಕನು ಜಗಲಿಯ ಮೇಲೆ ಮಲಗಿರಲಿಲ್ಲ. ಲಲಿತೆಯು ಒಳಕ್ಕೆ ಹೋಗಿ ಬಾಗಿಲನ್ನು ಭದ್ರವಾಗಿ ಮುಚ್ಚಿದಳು. ಕೂಡಲೆ ಹಾಸಿಗೆಯನ್ನು ಹಾಸಿ ಮಲಗಲು ಸನ್ನಾಹಮಾಡುತ್ತಿದ್ದಾಗ ಆ ಗುಡಿಸಲಿನ ಮೂಲೆಯೊಂದರಲ್ಲಿ ಯಾರೋ ಕೆಮ್ಮಿದಂತೆ ಕೇಳಿಸಿತು. ದೀಪದಲ್ಲಿ ಎಣ್ಣೆ ಮುಗಿದು ಆರಿಹೋಗುವ ಸ್ಥಿತಿಯಲ್ಲಿದ್ದಿತು. ಆ ಸಣ್ಣ ಉರಿಯಲ್ಲೇ ಆ ಮೂಲೆಯನ್ನು ದೃಷ್ಟಿಸಿ ನೋಡಲು ಅಲ್ಲಿ ಒಬ್ಬ ಪುರುಷ ವ್ಯಕ್ತಿಯು ನಿಂತಿದ್ದಂತೆ ಬೋಧೆಯಾಯಿತು. ಮತ್ತು ಆ ವ್ಯಕ್ತಿಯು ತನ್ನ ಕಡೆಗೇ ನಡೆದು ಬರುತ್ತಿರುವುದನ್ನು ಲಲಿತೆಯು ನೋಡಿದಳು. ಆಕೆಯ ದೇಹವು ಗಢಗಢನೆ ನಡುಗ ತೊಡಗಿತು. ಬಾಯಲ್ಲಿ ಮಾತೇ ಹೊರಡದು. ಆಗ ಆ ಕಳ್ಳ ಭಿಕ್ಷುಕನು, "ನೀನು ಕೂಗಿಕೊಂಡರೆ ನಿನ್ನ ಪ್ರಾಣವನ್ನು ಕಳೆದುಬಿಡುವೆನು." ಎಂದು ಆಕೆಯನ್ನು ಬೆದರಿಸಿದನು. ತನ್ನ ಮನೆಯಲ್ಲಿರುವ ಸರ್ವಸ್ವವನ್ನೂ ನಿನಗೆ ಒಪ್ಪಿಸುವೆನೆಂದು ಲಲಿತೆಯು ಅವನನ್ನು ಪ್ರಾರ್ಥಿಸಿದಳು. ಆಗ ಅವನು, ನಾನು ಹಣದಾಸೆಯಿಂದ ಇಲ್ಲಿಗೆ ಬರಲಿಲ್ಲ. ನಿನ್ನಲ್ಲಿ ಮೋಹಿತನಾಗಿ ಇಲ್ಲಿಗೆ ಬಂದಿರುವೆನೆಂದು ಹೇಳಿದನು. ಈ ಮಾತನ್ನು ಕೇಳಿ ಲಲಿತೆಗೆ ದೇಹದಮೇಲೆ ಸ್ಮೃತಿಯೇ ತಪ್ಪಿತು. ಆದರೂ ಅವಳು ಆಗ ಧೈರ್ಯಮಾಡಿ ಅಯ್ಯ! ನನ್ನ ಮಗುವನ್ನು ಬಹಿರ್ಭೂಮಿಗೆ ಕರೆದುಕೊಂಡು ಹೋಗಿದ್ದು ಬಂದು ನಿನ್ನ ಮಾತನ್ನು ನಡೆಯಿಸುವೆನೆಂದು ಹೇಳಿದಳು. ಆ ಜಂಡಾಲನು ಅದಕ್ಕೊಪ್ಪದೆ ತಾನೇ ಮಗುವನ್ನು ಕರೆದುಕೊಂಡು ಹೋಗಿಬರುವೆನೆಂದು ಹೇಳಲು ಲಲಿತೆಯು ಉಪಾಯಾಂತರವನ್ನು ಕಾಣದೆ ಮಗುವನ್ನು ಮುದ್ದಿಸಿ ಆ ಪಾಪಿಯ ಕೈಗೆ ಕೊಟ್ಟಳು. ಅವನು ಹೊರಗೆ ಕಾಲಿಟ್ಟೊಡನೆಯೇ ಲಲಿತೆಯು ಬಾಗಿಲನ್ನು ಬಂಧಿಸಿ ಬಿಟ್ಟಳು. ಭಿಕ್ಷುಕನು,

ವಾಗಿ ಹೆದರಿಸಿದನು. ನಿಶ್ಯಬ್ದ. ಆವನು ಮಿತಿ ಮೀರಿದ ಕೊಪದಿಂದ ಆಗುಡಿಸಲಿಗೆ ಬೆಂಕಿ ಹಚ್ಚುವೆನೆಂದೂ ಮಗುವನ್ನು ಸಂಹರಿಸಿ ಬಿಡುವೆನೆಂದೂ ಬೊಗಳಿದನು. ಆ ಕಟುಕನಿಗೆ ಆಗ ಕನಿಕರ ವೆಳ್ಳಷ್ಟೂ ಇರಲಿಲ್ಲ. ಆಪಾ! ಕಾಮಾಂಧರು ತಮ್ಮ ಕಾರ್ಯನಿರ್ವಾಹಕ್ಕೆ ಏನು ಬೇಕಾದರೂಮಾಡುವರಲ್ಲವೆ ? ಏನಾದರೂ ಲಲಿತೆಯು ಮಾತನಾಡಲೇ ಇಲ್ಲ. ಆ ಕಟುಕನು ಬಹುಕೋಪದಿಂದ ಆಮಗುವಿನತಲೆಯನ್ನು ಕದಕ್ಕೆ ಹೊಡೆದನು. ಮಗುವು ಕಿಟ್ಟನೆ ಕಿರುಚ ತೊಡಗಿತು. ಆಮಗುವು ಆಳುವಿನಲ್ಲೂ ಮುದ್ದು ಮುದ್ದಾಗಿ ಅಮ್ಮ, ಅಮ್ಮ, ಎಂದು ಕೂಗುತ್ತಿತ್ತು. ಆದರೂ ಬಾಗಿಲು ತೆರೆಯಲ್ಪಡಲಿಲ್ಲ. ಲಲಿತೆಯು ಎಂತಹ ಕಠಿನ ಹೃದಯಳಿರಬಹುದು; ಸ್ತ್ರೀಯರು ಆವದುಃಖವನ್ನಾದರೂ ಸಹಿಸಬಲ್ಲರು. ತಮ್ಮ ಮಕ್ಕಳು ತಮ್ಮಿದಿರಿಗೆ ಆರ್ತನಾದ ಮಾಡುತ್ತಿದ್ದರೆ ನೋಡಿ ಸಹಿಸಲಾರರು. ಲಲಿತೆಯು ಮಗುವನ್ನು ಅವನ ಕೈಗೆ ಕೊಟ್ಟಾಗಲೇ ಯಮನ ವಶಮಾಡಿದಂತೆ ಭಾವಿಸಿದ್ದಳು. ಭಿಕ್ಷುಕನು ಕೊನೆಗೆ ಆ ಮಗುವನ್ನು ವೇಗವಾಗಿ ಬೀದಿಗೆ ಎಸೆದು ಆ ಮನೆಗೆ ಕನ್ನವನ್ನಿಕ್ಕಲು ಪ್ರಯತ್ನಿಸಿ ಒಂದು ಕಡೆ ಗೋಡೆಯನ್ನು ಹೊಡೆದು ಆ ರಂಧ್ರದಿಂದ ತನ್ನ ತಲೆಯನ್ನು ಒಳಕ್ಕೆ ನುಗ್ಗಿಸಿದನು. ಇದನ್ನು ಲಲಿತೆಯು ನೋಡಿ ತನ್ನ ಮನೆಯಲ್ಲಿದ್ದ ಮಚ್ಚುಕತ್ತಿಯಿಂದ ಆ ಕಳ್ಳನ ತಲೆಗೆ ಬಲವಾಗಿ ಹೊಡೆದಳು. ಆವನ ತಲೆಯೊಡೆದು ರಕ್ತ ಸುರಿಯುತ್ತಿದ್ದಾಗಲೇ ಆವನ ಕಾಲನ್ನು ಒಂದು ಸರ್ಪವು ಕಚ್ಚಿತ್ತು. ಆರ್ಧ ಗಳಿಗೆಯೊಳಗಾಗಿ ಕಳ್ಳಭಿಕ್ಷುಕನು ಲೋಕಾಂತರವನ್ನೈದಿದನು. ಲಲಿತೆಯು ಬಾಗಿಲು ತೆರೆಯದೆ ಒಳಗೇ ಇದ್ದಳು. ಬೆಳಗಾಯಿತು. ಲಲಿತೆಯ ಗಂಡನು ಬಂದನು. ಗುಡಿಸಲಿಗೆ ಹತ್ತುಮಾರು ದೂರದಲ್ಲಿ ಮಗುವು ಭೀಕರಾವಸ್ಥೆಯಲ್ಲಿ ಬಿದ್ದಿರುವುದನ್ನೂ ಗುಡಿಸಲಿನ ಹೊರಗೆ ಭಿಕ್ಷುಕನು ಸತ್ತಿರುವುದನ್ನೂ ನೋಡಿದನು. ಬಾಗಿಲು ತೆರೆಯಲ್ಪಟ್ಟಿರಲಿಲ್ಲ. ಕೂಗಿದರೂ ನಿರುತ್ತರ. ಕೂಡಲೆ ಹೊಸೂರಿನಿಂದ ಪೊಲೀಸಿನವರನ್ನು ಕರದುಕೊಂಡು ಬಂದು ಗುಡಿಸಲು ಬಾಗಿಲನ್ನೊಡೆಸಿ ಒಳಹೊಕ್ಕನು. ಲಲಿತೆಯು ಮೂರ್ಛಿತಳಾಗಿ ಬಿದ್ದಿದಾಳೆ. ಆವಳನ್ನು ಉಪಚರಿಸಿ ಮೇಲಕ್ಕೆಬ್ಬಿಸಿ ಜ್ಞಾನೋದಯವಾದಮೇಲೆ ಕೇಳಲು ನಡೆದ ವೃತ್ತಾಂತವು ತಿಳಿದುಬಂದಿತು. ಮಗುವನ್ನು ವೈದ್ಯರಿಗೆ ತೋರಿಸಲು ಸತ್ತಿರಲಿಲ್ಲವೆಂದು ತಿಳಿಯಿತು. ಮಗುವಿನ ಪ್ರಾಣವು ಉಳಿದುದಕ್ಕಾಗಿ ಎಲ್ಲರೂ ಸಂತೋಷಿಸಿದರು. ಲಲಿತೆಯ ಈ ಪಾತಿವ್ರತ್ಯರಕ್ಷಣೆಯ ವಿಚಾರವು ಊರಿಗೆಲ್ಲಾ ತಿಳಿದು ಜನರೆಲ್ಲರೂ ಆಕೆಯನ್ನು ಹೊಗಳಿದರು.

ಕಾದಂಬರೀ ಸಂಗ್ರಹ ಗ್ರಂಥಮಾಲಾ ನಂ. ೩೬.

MADHUSUDANA

(A DETECTIVE NOVEL)

BY

M. S. RAMASWAMY

ಮಧುಸೂದನ

(ಒಂದು ಪತ್ತೇದಾರೀ ನಾವಲ್)

ಎಂ. ಎಸ್. ರಾಮಸ್ವಾಮಿಯವರಿಂದ ಬರೆಯಲ್ಪಟ್ಟಿತು.

MYSORE:
ROYAL PRESS
1916

Price 4 As.] [ಬೆಲೆ 4 ಆಣೆ.

PRINTED BY
B. V. NARASIMHAIYENGAR
AT THE ROYAL PRESS, MYSORE—1916.

ಪೀಠಿಕೆ.

ಆರ್ಯಮಹಾಶಯರಿಗೊಂದು ವಿಜ್ಞಾಪನೆ :—

ಮಹಾಶಯರೇ? ನಮ್ಮ ಕರ್ನಾಟಕ ಭಾಷೆಯಲ್ಲಿ ಈಚಿಗೆ ಅಂದರೆ ಹತ್ತಿಪ್ಪತ್ತು ವರ್ಷಗಳಿಂದ ಅನೇಕವಿಧವಾದ ನಾವಲುಗಳೂ, ಕಥೆಗಳೂ, ಅನೇಕ ಮಹನೀಯರಿಂದ ಬರೆಯಲ್ಪಟ್ಟಿರುವುದು ಸಕಲರಿಗೂ ವೇದ್ಯವಾಗಿದೆ. ಆದರೆ ಆಂಗ್ಲೇಯಭಾಷೆಯಲ್ಲಿರುವಂತೆ ಕನ್ನಡದಲ್ಲಿ ಪತ್ತೇದಾರೀನಾವಲುಗಳು ಅತಿಯಾಗಿ ಇಲ್ಲವು. ಪತ್ತೇದಾರೀನಾವಲುಗಳು ಮನುಷ್ಯನ ಮನಸ್ಸನ್ನು ಆಹ್ಲಾದಪಡಿಸಿ ಅವನನ್ನು ಯೋಚನೆಮಾಡುವಹಾಗೆ ಮಾಡುತ್ತವೆ. ಹೀಗೆ ಯೋಚನಾಶಕ್ತಿಯನ್ನು ಹೆಚ್ಚಿಸುವುದರಿಂದ ಮನುಷ್ಯನು ಅನೇಕ ವಿಷಯಗಳನ್ನು ಗ್ರಹಿಸಬಲ್ಲನು. ಮತ್ತು ಪೋಲೀಸ್ ಅಧಿಕಾರಿಗಳಿಗೆ ಅನೇಕವೇಳೆ ಸಹಾಯಕನಾಗಿಯೂ ಆಗಬಹುದು.

ಈ ಅಭಿಪ್ರಾಯಗಳನ್ನಿಟ್ಟುಕೊಂಡೇ ನಾವು ಕೆಲವರು ಒಂದು ಸಂಘವನ್ನೇರ್ಪಡಿಸಿಕೊಂಡು ಪತ್ತೇದಾರೀನಾವಲುಗಳನ್ನು ಬರೆದು ಮಾಸಪತ್ರಿಕೆಗಳ ಮೂಲಕ ಪ್ರಚುರಪಡಿಸಿಯೂ ಕೈಲಾದಾಗ ಬಿಡಿಳ ಅಲ್ಪ ಬೆಲೆಗೆ —ಲಾಭಾಪೇಕ್ಷೆಯಿಲ್ಲದೆ—ಜನಗಳಿಗೆ ಕೊಡಬೇಕೆಂತಲೂ ಯೋಚಿಸಿರುವೆವು. ಆಗಲೇ ಈ ಸಂಘದವರು ಅನೇಕ ನಾವಲುಗಳನ್ನು ಬರೆದಿರುವರು. ಆದರೆ ದ್ರವ್ಯವಿಲ್ಲದೇ ಇರುವುದರಿಂದಲೂ, ಪ್ರೋತ್ಸಾಹ ಕಡಮೆಯಾಗಿರುವ್ದರಿಂದಲೂ, ಅವುಗಳು ಮೂಲೆಯೆಲ್ಲಿ ಬಿದ್ದಿವೆ. ಸಮಯ ಸಿಕ್ಕಿದಾಗೆಲ್ಲಾ ಅವುಗಳನ್ನು ಪ್ರಚುರಪಡಿಸುವೆವು. ತಿಳಿದವರು ತಪ್ಪುಗಳಿದ್ದರೆ ಮನ್ನಿಸಿ ನಮ್ಮನ್ನು ಪ್ರೋತ್ಸಾಹಿಸಬೇಕೆಂಬುದೇ ಪ್ರಾರ್ಥನೆ. ಈ ಪುಸ್ತಕವನ್ನು ಪ್ರಕಟಿಸಲು ಸಹಾಯಮಾಡಿದ ಕಾದಂಬರೀ ಸಂಗ್ರಹ ಮಾಸಪತ್ರಿಕಾ ಸಂಪಾದಕರಾದ ಮು|| ಸಿ. ವೆಂಕಟರಮಣ ಶಾಸ್ತ್ರಿಗಳಿಗೆ ನಾವು ನಿರಂತರವೂ ಕೃತಜ್ಞರಾಗಿರುತ್ತೇವೆ.

ಗ್ರಂಥಕರ್ತ.

ಮಧುಸೂದನ.

ಒಂದನೆಯ ಅಧ್ಯಾಯ.

(ಮದನಗೆಗನೆಲ್ಲಿ?)

ಈ ದಿವಸ ವಾಸವಪುರದ ಜಹಗೀರ್‌ದಾರ್ ಸೋಮಸುಂದರನ ಮನೆಯಲ್ಲಿ ಬಹುಕೆಲಕಲ. ಮನೆಯು ತಳಿರ್ತೋರಣಗಳಿಂದಲೂ ಬಾಳೆಯಕಂಬಗಳಿಂದಲೂ ವಿವಿಧವಾಗಿ ಅಲಂಕೃತವಾಗಿರುವುದು. ಜನಗಳು ವಿವಿಧವೇಷಭೂಷಾದಿಗಳನ್ನು ಧರಿಸಿಕೊಂಡು ಬರುತ್ತಿರುವರು. ಅಧಿಕಾರಿಗಳನೇಕರು ಕುದುರೇಗಾಡಿಗಳಲ್ಲಿ ಕುಳಿತುಬಂದು ಈ ಸೋಮಸುಂದರನ ಮನೇಬಾಗಿಲಲ್ಲಿ ಕೆಳಗಿಳಿದು ಒಳಹೊಗುತ್ತಿದಾರೆ. ಸೇವಕರ ಸಡಗರವೂ ವೈದಿಕರ ಪ್ರಾಥಾವಿವಾಹ, ಸಮುದ್ರಯಾನಗಳ ಖಂಡನರೂಪವಾದ ಮಾತುಗಳೂ ಮಂಗಳವಾದ್ಯಗಳ ರವವೂ ಎಲ್ಲೆಲ್ಲಿಯೂ ಕೇಳಿಬರುತ್ತಲಿದೆ. ಈ ಸಂಭ್ರಮಕ್ಕೆ ಕಾರಣವೇನೆಂದು ನಾವು ವಿಚಾರಿಸಿದಾಗ ಸೋಮಸುಂದರನ ಏಕಮಾತ್ರ ಪುತ್ರನಾದ ಮಧುಸೂದನನಿಗೆ ಮಹೋಪಾಧ್ಯಾಯ ತ್ರಿಯಂಬಕ ಶಾಸ್ತ್ರಿಗಳ ಮಗಳು ಸರಳ ಬಾಲೆಯನ್ನು ಕೊಟ್ಟು ವಿವಾಹವೆಂದು ತಿಳಿದುಬಂದಿತು.

ಸೋಮಸುಂದರನು ಶುದ್ಧ ಲೌಕಿಕನಾಗಿದ್ದಾಗ್ಯೂ ವೈದಿಕರಲ್ಲೂ, ವೇದಶಾಸ್ತ್ರಗಳಲ್ಲಿಯೂ ಅಕೃತ್ರಿಮವಾದ ಭಕ್ತಿಯನ್ನಿಟ್ಟಿದ್ದನು. ಆಧುನಿಕರ ಸಂಘಸಂಸ್ಕಾರಗಳನ್ನು (ಪ್ರಾಥಾ ವಿವಾಹಾದಿಗಳನ್ನು) ಇವನು ಅನುಮೋದಿಸದೆ, ತನ್ನ ಮಗನಿಗೆ ೨ವರ್ಷ ವಯಸ್ಸಿನ ಸರಳಬಾಲೆಯನ್ನು ತಂದುಕೊಂಡನು.

ಬೆಳಿಗ್ಗೆ ಹತ್ತುಗಂಟೆಗೆ ಸುಮಾಗಿ ವಿವಾಹ ಲಗ್ನವು ನಿಷ್ಕರ್ಷಸಲ್ಪಟ್ಟಿದ್ದಿತು. ಒಂಭತ್ತು ಗಂಟೆಗೆ ಕಾಶೀಯಾತ್ರಾ ಮಹೋತ್ಸವವು ನಡೆದು ಅನುಕ್ರಮವಾಗಿ, ಪ್ರವರ ಪಾರಾಯಣ, ಮಧುಪರ್ಕ, ವಾಗ್ದಾನಗಳೇ ಮೊದಲಾದ ಶಾಸ್ತ್ರಗಳು ನೆರವೇರಿದ್ದುವು. ಮಾಂಗಲ್ಯ ಧಾರಣವು ಬೆಳಿಯುವದಕ್ಕೆ ಮೂರು ನಿಮಿಷ ಮೊದಲನ್ನು ವಾಗ ಯುವಕನೊ

ಬ್ಬನು ಆ ಜನಗಳ ಗುಂಪಿನಲ್ಲಿ ನುಗ್ಗಿಬಂದು ವರನ ಕಿವಿಯಲ್ಲಿ ಏನೋ ಹೇಳಿ ತಕ್ಷಣ ಅದೃಶ್ಯನಾದನು. ಮಧುಸೂದನನು ಆತನಮಾತನ್ನು ಕೇಳಿ ವಿಷಣ್ಣತೆಯನ್ನು ಹೊಂದಿದನಾದರೂ ಕೂಡಲೇ ಗಾಂಭೀರ್ಯವನ್ನು ಹೊಂದಿ ಪುರೋಹಿತನ ಕಡೆ ತಿರುಗಿ ಮೂರು ನಿಮಿಷ ವಿರಾಮಬೇಕೆಂದು ಕೇಳಿದನು. ಪುರೋಹಿತನು ಒಡಂಬಡಲು ವರನು ತನ್ನ ಚಿಕ್ಕ ಮನೆಗೆ ಪ್ರವೇಶಮಾಡಿದನು.

ಮೂರು ನಿಮಿಷ ಕಳೆಯಿತು. ಐದು-ಹತ್ತು-ಹದಿನೈದು ನಿಮಿಷಗಳೂ ಕಳೆದುವು. ಕಡೆಗೆ ಅರ್ಧಗಂಟೆ ಹೊತ್ತಾಯಿತು. ಮದನಗಿಗನು ಈಚಿಗೆ ಬಾರಲೇ ಇಲ್ಲ. ಕೂಡಲೇ ಎಲ್ಲರೂ ವರನನ್ನು ಹುಡುಕ ತೊಡಗಿದರು. ಮನೆಯಲ್ಲೆಲ್ಲಿಯೂ ವರನಿಲ್ಲ. ಎಲ್ಲರೂ ಭಯಭ್ರಾಂತರಾಗಿ ಮೂಲೆ ಮೂಲೆಯಲ್ಲಿ ಹುಡುಕಿದರು. ಎಲ್ಲಿಯೂ ಇಲ್ಲ. ಬೀದಿಯಕಡೆ ಹೋಗಿರಬಹುದೇ ಎಂದು ವಿಚಾರಿಸಲು ದ್ವಾರಪಾಲಕರು ಈಜೆಗೆ ಬರಲೇ ಇಲ್ಲವೆಂದು ಹೇಳಿಬಿಟ್ಟರು ಈಗ ಮಾಡುವುದೇನು? ಸರ್ವತ್ರ ಹಾ-ಪಾ-ಕಾರ! ಇಂತಹ ವೇಳೆಯಲ್ಲಿ ಮದನಗಿಗನು ಮಾಯವಾದರೆ ಹಾಪಾಕಾರವಲ್ಲದೆ ಮತ್ತೇನು? ಸೋಮಸುಂದರನಿಗ ಏನೂ ತೋರಲಿಲ್ಲ. ತ್ರಿಯಂಬಕ ಶಾಸ್ತ್ರಿಯು ಲಗ್ನ ಸಮಯ ಕಳೆದುದಕ್ಕಾಗಿ ವ್ಯಸನಪಡುತ್ತಾ ಒಂದು ಮೂಲೆಯಲ್ಲ ಕುಳಿತಿದ್ದನು. ಆದರೆ ಆಗ ಒಂದು ಚಮತ್ಕಾರ ನಡೆದಿತ್ತು. ಮಧುಸೂದನನ ಕಿರುಮನೆಯು ಒಳಗಡೆ ಬಂಧಿತವಾಗಿದ್ದಿತು. ಯಾರೆಷ್ಟು ಕೂಗಿದರೂ ಬಾಗಿಲು ತೆರೆಯಲ್ಪಡಲಿಲ್ಲ. ಎಲ್ಲರೂ ವಿಷಾದದಿಂದ ಕುಳಿತುಬಿಟ್ಟರು. ಸೋಮಸುಂದರನು ಕೆಲವು ಮಂದಿ ಸೇವಕರನ್ನು ಗುದ್ದಲಿ, ಹಾರೆಗಳೊಡನೆ ಕರೆತಂದು ಬಾಗಿಲನ್ನು ಇಡಿಸೆತ್ತಿಸಿ ಒಳಹೊಕ್ಕನು. ಒಳಗೆ ಮಧುಸೂದನನಿರಲಿಲ್ಲ. ಆದರೆ ವರನ ಉಡಿಸಿನದ ಪಂಚೆಯು ಮಾತ್ರ ಅಲ್ಲಿ ಬಿದ್ದಿದ್ದಿತು. ವರನಾಗಲೀ ವರನು ಹೋದ ದಾರಿಯಾಗಲೀ ಗೊತ್ತಾಗಲಿಲ್ಲ. ಸೋಮಸುಂದರನು ವ್ಯಸನದಿಂದ ಮೂರ್ಛಿತನಾದನು. ತಕ್ಷಣವೇ ಎಲ್ಲೆಲ್ಲಿಯೂ ಮದುವಣಿಗನೆಲ್ಲಿ ? ಎಂಬ ಕೂಗು ಹಬ್ಬುವುದಕ್ಕೆ ಆರಂಭವಾಯಿತು. ಊರಲ್ಲೆಲ್ಲಾ ಹುಡುಕಿದರೂ ವರನು ಸಿಕ್ಕಲಿಲ್ಲ. ಮದುವೆ ಮನೆಗೆ ಬಂದಿದ್ದವರೆಲ್ಲರೂ ವಿಷಾದವನ್ನು ಪ್ರದರ್ಶಿಸುತ್ತಾ ಮನೆಗೆ ಹೊರಟು ಹೋದರು. ವಿವಾಹ ಸಂಭ್ರಮಗಳೆಲ್ಲವೂ ಕ್ಷಣಕಾಲದಲ್ಲಿ ತಿರೋಹಿತವಾದುವು. ಸ್ವಲ್ಪ ಹೊತ್ತಿಗೆ ಮುಂಚೆ ಆನಂದ ಕೋಲಾಹಲದಿಂದ ತುಂಬಿದ್ದ ವಿವಾಹ ಮಂಟಪವು ಈಗ ರೋದನಧ್ವನಿಯಿಂದ ಕೂಡಿ ಭಯಂಕರವಾಗಿ ಕಾಣುತ್ತಿತ್ತು.

ಮೂರ್ಛಿತನಾಗಿ ಬಿದ್ದಿದ್ದ ಸೋಮಸುಂದರನನ್ನು ಆತನ ಪತ್ನಿ ತಾರಾಸುಂದರಿಯು ವ್ಯಸನದಿಂದ ಶೈತ್ಯೋಪಚಾರಮಾಡಿಸಿ ತನ್ನ ಶಯನ ಗೃಹಕ್ಕೆ ಕರೆದುಕೊಂಡು

ಹೋದಳು. ಈ ವೃತ್ತಾಂತವು ಕ್ಷಣಕಾಲದಲ್ಲಿ ಊರಲ್ಲೆಲ್ಲಾ ಹಬ್ಬಿ ಎಲ್ಲರೂ ಇದೇ ವಿಷಯವನ್ನೇ ಮಾತಾಡುತ್ತಿದ್ದರು.

ಇಷ್ಟು ಗದ್ದಲ ನಡೆಯುತ್ತಿದ್ದಾಗ ಐದಾರು ವರ್ಷ ವಯಸ್ಸಿನ ಮದುವಣಗಿತ್ತಿಯಾದ ಸರಳಬಾಲೆಯು ಏನುಮಾಡುತ್ತಿರಬಹುದು? ಬಲ್ಲರಾ? ಸುಶಿಕ್ಷಿತಳೂ ವಿವೇಕಿಯೂ ಆದ ಆ ಕನ್ಯೆಯು ಈ ಘಟನೆಯನ್ನು ನೋಡಿ ವ್ಯಸನಮಗ್ನಳಾಗಿ ಕೂಡಲೆ ದೇವರ ಮನೆಗೆ ಹೋಗಿ "ತನ್ನ ಗಂಡನಿಗೆ ಶುಭವಾಗಲೆಂದು" ಗೌರೀ ಪೂಜೆಯನ್ನು ಮಾಡತೊಡಗಿದಳು. ವಿವಾಹವು ಪೂರ್ಣವಾಗಿ ನಡೆಯದಿದ್ದರೂ ಮಧುಸೂದನನೇ ತನ್ನ ಯಾವಜ್ಜೀವವೂ ಪತಿಯಾಗಿರುವನೆಂದು ಆವಳು ದೃಢನಿಶ್ಚಯ ಮಾಡಿಕೊಂಡು ಭಕ್ತಿಯಿಂದ ದೇವರನ್ನು ನುತಿಸತೊಡಗಿದಳು.

ಸೋಮಸುಂದರನು ಈ ವೃತ್ತಾಂತವನ್ನು ಕೂಡಲೆ ಪೋಲೀಸಿನವರಿಗೆ ತಿಳಿಸಿದನು. ಅವರೂ ಹುಡುಕುವುದಕ್ಕೆ ಆರಂಭಿಸಿದರು. ಒಂದಿಕ ಸೋಮಸುಂದರನು ತ್ರಿಯಂಬಕ ಶಾಸ್ತ್ರಿಗಳನ್ನು ಕುರಿತು ಮುಂದೇನು ಮಾಡಬೇಕೆಂದು ಕೇಳಲು ಆತನು ಸ್ವಾಮಿ! ಈಗ ನನಗೇನೂ ತೋರದು. ಮಾಂಗಲ್ಯಧಾರಣೆಯು ಆಗದಿದ್ದರೂ ವಿವಾಹವು ನಡೆಯಿತೆಂದೇ ನಾವು ಭಾವಿಸಬೇಕು. ನಾನು ನನ್ನ ಮಗಳನ್ನು ಇನ್ನೊಬ್ಬನಿಗೆ ಕೊಟ್ಟು ಆ ಹುಡುಗಿಯ ಸತೀತ್ವನನ್ನು ಹಾಳುಮಾಡಲಾರೆನೆನಲು ಸೋಮಸುಂದರನು, ಸ್ವಾಮಿ! ನಿಮ್ಮ ಮಗಳು ನನ್ನ ಸೊಸೆಯೇ ಸರಿ! ಆದರೆ ಆ ಕನ್ಯೆಯು ನನ್ನ ಮನೆಯಲ್ಲಿದ್ದರೆ ನನಗೆ ಆಗಾಗ್ಗೆ ಆ ಮಗುವಿನ ಮುಖವನ್ನು ನೋಡಿ ದುಃಖ ಬರುವುದರಿಂದ ನನ್ನ ಮಗನು ಸಿಕ್ಕುವವರೆಗೆ ಆ ಹುಡುಗಿಯು ನಿಮ್ಮ ಮನೆಯಲ್ಲೇ ಇರಲಿ. ನನ್ನ ಮಗನು ಸಿಕ್ಕಿದೊಡನೆ ವಿವಾಹ ಕಾರ್ಯಗಳನ್ನು ಮುಂಬರಿಸೋಣವೆಂದು ಹೇಳಲು ಇಬ್ಬರೂ ಸುಮ್ಮನಾದರು.

ಎರಡನೆಯ ಅಧ್ಯಾಯ.

(ಭಾಸ್ಕರ)

ಮೇಲೆಕಂಡ ವಿಷಯಗಳು ನಡೆದು ಹತ್ತುದಿನಗಳಾದವು. ಪೋಲೀಸ್ ಆಫೀಸರು ಬಂದು ವಿಷಯಗಳನ್ನೆಲ್ಲಾ ವಿಚಾರಿಸಿಕೊಂಡು ಹೋಗಿ ತಮ್ಮ ಕೈಲಾದ ಪ್ರಯತ್ನವನ್ನೆಲ್ಲಾ ಮಾಡಿ ಮಧುಸೂದನನನ್ನು ಹುಡುಕಿಸಿದರು. ಆದರೂ ಯಾವ ಪ್ರಯೋಜ

ನವೂ ಆಗಲಿಲ್ಲ. ಬಹಳ ಕಾತರನಾದ ಸೋಮಸುಂದರನು ಪತ್ರಿಕೆಗಳಲ್ಲೇನಾದರೂ ತನ್ನ ಮಗನ ವಿಷಯವನ್ನು ತಿಳಿಯಬಹುದೆಂದು ಒಂದು ವಾರ ಪತ್ರಿಕೆಯನ್ನು ಓದುತ್ತಿದ್ದನು. ಆದರ ಒಂದು ಭಾಗದಲ್ಲಿ ''ಘೋರವಾದ ಕೊಲೆಯೂ ಆದರ ಪರ್ಯವಸಾನವೂ'' ಎಂದು ಬರೆಯಲ್ಪಟ್ಟಿದ್ದ ಲೇಖನವನ್ನು ಓದತೊಡಗಿದನು. ಈಗ್ಗೆ ಸುಮಾರು ಹತ್ತುದಿವಸಗಳ ಕೆಳಗೆ ರಾಣೀಗಂಜಿನಲ್ಲಿ ಒಂದು ಮನೆಯಲ್ಲಿ ಒಂದೇರಾತ್ರಿಯಲ್ಲಿ ಮೂರು ಜನಗಳು ಕೊಲ್ಲಲ್ಪಟ್ಟರು. ಆ ವಿಷಯದಲ್ಲಿ ಪೋಲೀಸಿನವರು ತಮ್ಮ ಸಾಮರ್ಥ್ಯವನ್ನೆಲ್ಲಾ ಉಪಯೋಗಿಸಿ ಕಂಡುಹಿಡಿಯಲು ಪ್ರಯತ್ನಪಟ್ಟರೂ ಯಾವ ಪ್ರಯೋಜನವನ್ನೂ ಹೊಂದದೇಹೋದರು. ಆಗ ಪೋಲೀಸ್ ಮುಖ್ಯಾಧಿಕಾರಿಯೇ ಬೊಂಬಾಯಿಯಲ್ಲಿದ್ದ ಪ್ರಸಿದ್ಧ ಪತ್ತೇದಾರರಾದ ಭಾಸ್ಕರ ಎಂಬುವರನ್ನು ಕರತರಿಸಿ ಅವರಿಗೆ ಈ ವಿಷಯವನ್ನು ಒಪ್ಪಿಸಿದನು. ಅವರು ನಾಲ್ಕುದಿವಸಗಳೊಳಗಾಗಿ ಕಷ್ಟಪಟ್ಟು ಕೊಲೆಪಾತಕನನ್ನು ಪತ್ತೇಮಾಡಿದರು. ಆ ಕೊಲೆಪಾತಕನು ಎಲ್ಲವನ್ನೂ ಒಪ್ಪಿಕೊಂಡು ಈ ದಿನ ಮಧ್ಯಾಹ್ನ ಯಾರಿಗೂ ಅರಿಯದ ರೀತಿ ತನ್ನನ್ನು ಕೂಡಿಟ್ಟ ಕೊಠಡಿಯ ಬಾಗಿಲಿನ ಕಂಬಗಳಿಗೆ ನೇಣುಹಾಕಿಕೊಂಡು ಸತ್ತನು.

ಸೋಮಸುಂದರನು ಇದನ್ನೋದಿ ಸ್ವಲ್ಪಯೊತ್ತು ಏನೋ ಯೋಚಿಸಿ ತನ್ನ ಗುಮಾಸ್ತೆಯನ್ನು ಕರಸಿ ರಾಣೇಗಂಜಿನ ಪೋಲೀಸ್ ಅಧಿಕಾರಿಗೆ ತಕ್ಷಣವೇ ಭಾಸ್ಕರನನ್ನು ಕಳುಹಿಸುವ ಹಾಗೆ ತಂತಿಯನ್ನು ಕೊಡುವಂತೆ ಆಜ್ಞಾಪಿಸಿದನು.

ಮಾರನೇದಿನ ಒಂಭತ್ತುಗಂಟೆಯ ಸಮಯದಲ್ಲಿ ಸುಮಾರು ಇಪ್ಪತ್ತೈದು ವರ್ಷ ಪ್ರಾಯದ ಮನುಷ್ಯನೊಬ್ಬನು ಬಂದು ಸೋಮಸುಂದರನನ್ನು ನೋಡಲಪೇಕ್ಷಿಸಿದನು. ಸೋಮಸುಂದರನು ಅವನನ್ನು ಒಳಕ್ಕೆ ಬರುವಹಾಗೆ ಹೇಳಿ ತನ್ನ ವೈಶಕಖಾನೆಯಲ್ಲಿ ಕಾದಿದ್ದನು. ಬಂದ ಮನುಷ್ಯನು ಸೋಮಸುಂದರನಿಗೆ ವಂದಿಸಿ ಅಲ್ಲೇ ಇದ್ದ ಒಂದು ವೇತ್ರಾಸನದಮೇಲೆ ಕುಳಿತುಕೊಂಡನು. ಸೋಮಸುಂದರನು ಅವನೇ ಭಾಸ್ಕರನಿರಬಹುದೆಂದು ಯೋಚಿಸಿ ಸ್ವಾಮೀ ನೀವೇನೋ ಭಾಸ್ಕರರೆಂಬುವರು, ಎಂದು ಕೇಳಿದನು.

ಹೊಸಮನುಷ್ಯ—ಹೌದು. ನಿಮ್ಮ ತಂತಿಯನ್ನು ನೋಡಿ ನನ್ನನ್ನು ಪೋಲೀಸ್ ಸೂಪರಿಂಟೆಂಡೆಂಟರು ಕಳುಹಿಸಿರುವರು. ನನ್ನನ್ನು ಕರೆಯಕಳುಹಿಸಿದ ಕಾರಣವೇನು?

ಸೋಮಸುಂದರ—ಸ್ವಾಮೀ! ನಾನು ಏನು ಹೇಳಲೀ ಎಂದು ಕಣ್ಣೀರು ಸುರಿಸುತ್ತಾ ತನ್ನ ಮಗನು ಕಾಣದೇಹೋದ ವಿಷಯವನ್ನೆಲ್ಲಾ ಕ್ರಮವಾಗಿ ತಿಳಿಸಿದನು.

ಭಾಸ್ಕರನು ಸ್ವಲ್ಪಹೊತ್ತು ಹಾಗೇ ಯೋಚಿಸಿ ಮಧ್ಯಾಹ್ನದಮೇಲೆ ಎಲ್ಲಾ ವಿಷಯಗಳನ್ನೂ ಪರೀಕ್ಷಿಸುವುದಾಗಿಯೂ ಈಗ ಹೊತ್ತಾದ್ದರಿಂದ ಭೋಜನಾದಿಗಳನ್ನು ಮುಗಿಸಿಕೊಳ್ಳುವುದು ಒಳ್ಳೆಯದೆಂದೂ ತಿಳಿಸಿದನು. ಸೋಮಸುಂದರನೂ ಒಪ್ಪಿ ಅವನನ್ನು ಸ್ನಾನಾದಿಗಳನ್ನು ಮಾಡುವಂತೆ ಹೇಳಿ ಹೊರಟುಹೋದನು.

ಮೂರನೆಯ ಅಧ್ಯಾಯ.

(ಭಾಸ್ಕರನು ಏನು ಯೋಚಿಸಿದನು?)

ಮಧ್ಯಾಹ್ನ ಸುಮಾರು ಎರಡು ಗಂಟೆಯ ಹೊತ್ತಿಗೆ ಸೋಮಸುಂದರನೂ ಭಾಸ್ಕರನೂ ಮಧುಸೂದನನ ಕೊಠಡಿಗೆ ಬಂದು ಸೇರಿದರು. ಭಾಸ್ಕರನು ಸೋಮಸುಂದರನನ್ನು ಕುರಿತು "ನೀವು ಈ ಕೊಠಡಿಯ ಸಮೀಪಕ್ಕೆ ಬಂದಾಗ ಒಳಗೆ ಅಗಣಿ ಹಾಕಿತ್ತೆಂದು ಹೇಳಿದಿರಲ್ಲವೆ? ಹಾಗಾದರೆ ಒಳಗಿನಿಂದ ಹೋಗಲು ಬೇರೇ ಮಾರ್ಗವಾವುದಾದರೂ ಇರುವುದೊ? ಇಲ್ಲದಿದ್ದರೆ ಹಾಗೆ ಒಳಗಿನಿಂದ ಅಗಣೀ ಹಾಕಿರಲು ಅದು ಹೇಗೆ ಸಾಧ್ಯವು? ಆದ್ದರಿಂದ ನಿನಗೆ ತಿಳಿಯದ ಯಾವದೋ ಒಂದು ಮಾರ್ಗವು ಇರಲೇಬೇಕು" ಎಂಬದಾಗಿ ಹೇಳಿದನು.

ಸೋಮಸುಂದರ:—ಸ್ವಾಮಿ, ನನಗೆ ತಿಳಿದಮಟ್ಟಿಗೆ ಇಲ್ಲಿ ಯಾವ ಗುಪ್ತ ಮಾರ್ಗವೂ ಇಲ್ಲವು. ಇದೇ ಪ್ರಶ್ನೆಯನ್ನು ಪೋಲೀಸ್ ಮುಖ್ಯಾಧಿಕಾರಿಯೂ ನನ್ನನ್ನು ಕೇಳಿದನು. ಈ ಮನೆಯು ನನ್ನ ಪಿತ್ರಾರ್ಜಿತವಾದುದು. ಇದರಲ್ಲಿ ಯಾವ ಗೂಢ ಮಾರ್ಗವಿದ್ದರೂ ನನಗೆ ತಿಳಿದಿರಬೇಕು. ಆದರೂ ನನ್ನ ಪುತ್ರನನ್ನು ಪ್ರಾಣಕ್ಕೆ ಎತ್ತಿಕೊಂಡು ಹೋಗಿರಬೇಕೆಂಬುವುದೂ ಒಳಗೆ ಅಗಣೀ ಹಾಕಿದ್ದೂ ನನಗೆ ತಿಳಿಯಲಸಾಧ್ಯವಾದ ಒಗಟಾಗಿದೆ.

ಭಾಸ್ಕರನು ತನ್ನ ಪತ್ತೇದಾರೀ ಮಾರ್ಗದ ಹುಡುಕುವಿಕೆಯನ್ನು ಪ್ರಾರಂಭಿಸಿದನು. ಅವನು ಸೋಮಸುಂದರನನ್ನು ಕುರಿತು ಅಲ್ಲಿ ಎಲ್ಲಾ ಸಾಮಾನುಗಳೂ ಮಧುಸೂದನನು ಕಾಣದೇ ಹೋದ ದಿನ ಇದ್ದ ಹಾಗೆಯೇ ಇದೆಯೋ ಎಂದು ಕೇಳಲು, ಅವನು ಪೊಲೀಸಿನವರು ತೆರಿಗಿ ಹಾಕಿದ ಪದಾರ್ಥಗಳು ಏನಾ ಉಳಿದವುಗಳೆಲ್ಲಾ ಹಾಗೆಯೇ ಇರುವುದೆಂದು ತಿಳಿಸಿದನು. ಭಾಸ್ಕರನು ಹಾಗೇ ಸ್ವಲ್ಪ ಹೊತ್ತು ಆ ಕೊಠಡಿಯ ಆಕಾರ ಮತ್ತು ಅದರ ರಚನೆ ಇವುಗಳನ್ನು ನೋಡುತ್ತಿದ್ದನು. ಅವನಿಗೆ ಯಾವ ವಿಧ

ವಾದ ಸುಳಿವಾದರೂ ಸಿಗಲಿಲ್ಲವು. ಕೊಠಡಿಯ ಒಂದು ಭಾಗದಲ್ಲಿ ಒಂದು ದೊಡ್ಡ ಮಂಜವು ಹಾಕಲ್ಪಟ್ಟಿತ್ತು. ಭಾಸ್ಕರನ ಸೂಕ್ಷ್ಮವಾದ ಕಣ್ಣಿಗೆ ಆ ಮಂಜದ ಒಂದು ಭಾಗದಲ್ಲಿ ಸ್ವಲ್ಪ ಅಂತಿನವು ಕಾಣಬಂದಿತು. ಭಾಸ್ಕರನು ಅದನ್ನು ತನ್ನ ಬುಕ್ಕಿನಲ್ಲಿ ಬರೆದುಕೊಂಡನು. ಕೊಠಡಿಗೆಲ್ಲಾ ಮೆತ್ತನಾದ ಜಮಖಾನವನ್ನು ಹಾಸಿದ್ದರು. ಅದರ ಮೇಲೇನಾದರೂ ಕಾಲಿನ ಗುರುತುಗಳು ಕಾಣುವುವೋ ಎಂದು ಬಹಳ ಹೊತ್ತು ದೃಷ್ಟಿಸಿ ನೋಡಿದನು. ಏನೂ ಪ್ರಯೋಜನ ಕಂಡು ಬರಲಿಲ್ಲ. ಹಾಗೇ ಮಲಗಿಕೊಂಡು ಪರೀಕ್ಷಿಸುತ್ತಾ ಬಂದನು. ಮಂಜದ ಸಮೀಪದಲ್ಲಿ ಸ್ವಲ್ಪ ಮಂಕು ಮಂಕಾಗಿ ಎರಡು ಮೂರು ಬೂಟ್ಸಿನ ಕಾಲಿನ ಗುರುತುಗಳು ಮಂಜದ ಕಡೆಗೆ ತೋರಿಸುತ್ತಿದ್ದವು. ಅದನ್ನೂ ತನ್ನ ಬುಕ್ಕಿನಲ್ಲಿ ಬರೆದುಕೊಂಡನು. ಆನಂತರ ಆವನಿಗೆ ಯಾವ ಸುಳಿವಾದರೂ ಕಾಣಲಿಲ್ಲವು. ಇನ್ನು ಹುಡುಕಿ ಪ್ರಯೋಜನವಿಲ್ಲವೆಂದು ತೀರ್ಮಾನಿಸಿ ಸೋಮಸುಂದರನನ್ನೂ ಸಹಾ ಹಿಂದಕ್ಕೆ ಕರೆದುಕೊಂಡು ಬಂದು ಮಾರನೇ ದಿವಸ ಬೆಳಿಗ್ಗೆ ಒಂದು ಮಾತನಾಡುವುದಾಗಿ ಹೇಳಿ ಹೊರಟು ತನಗಾಗಿ ಕೊಟ್ಟಿದ್ದ ಕೊಠಡಿಯನ್ನು ಸೇರಿ ಅಲ್ಲಿ ಒಂದು ಮೇತ್ರಾಸನದ ಮೇಲೆ ಕುಳಿತುಕೊಂಡು ಯೋಚಿಸಲಾರಂಭಿಸಿದನು.

ಭಾಸ್ಕರನು ಯೋಚನೆಯಲ್ಲಿಯೇ ರಾತ್ರಿ ಎಂಟು ಗಂಟೆಗಳವರೆಗೆ ಕುಳಿತಿದ್ದನು. ಆಗ ಹಠಾತ್ತಾಗಿ ಆವನು ಆಹಾ! ಗೊತ್ತಾಯಿತು. ನಾನು ಈಗ ಯೋಚಿಸಿದ್ದೇ ಸರಿಯಾಗಿರಬೇಕು. ಇರಲಿ. ಎಲ್ಲವನ್ನೂ ಪರೀಕ್ಷಿಸಿದರೆ ತಿಳಿಯುವುದು ಎಂದು ಹೇಳಿಕೊಂಡು ಊಟಕ್ಕೆ ಹೊತ್ತಾದ್ದರಿಂದ ಎದ್ದು ಊಟಮಾಡಿ ಪುನಃ ಬಂದು ಕುಳಿತನು. ಆಗ ಆವನು ಸ್ವಲ್ಪ ಹೊತ್ತು ಯೋಚಿಸುತ್ತಿದ್ದು ತನ್ನ ಪುಸ್ತಕದಲ್ಲಿ ಏನನ್ನೋ ಬರೆದುಕೊಂಡು ಮಲಗಿ ನಿದ್ರೆಹೋದನು.

ಮಾರನೇ ದಿನ ಬೆಳಿಗ್ಗೆ ಒಂಭತ್ತು ಗಂಟೆಯ ಸುಮಾರಿಗೆ ಭಾಸ್ಕರನು ಸೋಮಸುಂದರನ ಕೊಠಡಿಗೆ ಹೋಗಿ ಅಲ್ಲಿದ್ದ ಮೇತ್ರಾಸನದ ಮೇಲೆ ಕುಳಿತುಕೊಂಡು ಆವನು ಕೊಟ್ಟ ಕಾಫಿಯನ್ನು ಕುಡಿದನು.

ಭಾಸ್ಕರ:—ಸ್ವಾಮೀ. ನಿಮ್ಮ ಮನೆಯಲ್ಲಿ ಬಹಳ ಜನರ ಸೇವಕರಾರಾದರೂ ಇರುವರೋ?

ಸೋಮಸುಂದರ:—ಆಹಾ! ಇರುವರು. ನಮ್ಮ ತಾತನ ಕಾಲದಿಂದಲೂ ಬಂದ ಮುದುಕನಾದ ಕೃಷ್ಣನೆಂಬುವನೊಬ್ಬನೂ ನಮ್ಮ ತಂದೆಯ ಕಾಲದಿಂದ ಬಂದ ವೀರಣ್ಣನೆಂಬುವನೂ ಇರುವರು.

ಭಾಸ್ಕರ:—ಆವುಬ್ಬರಿಗೂ ಮನೆಯ ಪ್ರತಿಯೊಂದು ಭಾಗವೂ ಚನ್ನಾಗಿ ತಿಳಿದಿದೆಯೋ?

ಸೋಮಸುಂದರ ಅವುಬ್ಬರಲ್ಲಿ ಮುದುಕನಾದ ಕೃಷ್ಣನಿಗೆ ಅನೇಕ ವಿಷಯಗಳು ತಿಳಿದಿರುತ್ತವೆ. ಈಗ ತಾನೇ ಸ್ವಲ್ಪದಿವಸಗಳ ಕೆಳಗೆ ಅವನು ನನಗೊಂದು ಗುಪ್ತಮಾರ್ಗವನ್ನು ತೋರಿಸಿದನು. ಅಲ್ಲಯವುಗೂ ಅದು ಇರುವುದಾಗಿ ನನಗೆ ತಿಳಿದೇ ಇರಲಿಲ್ಲ. ಆ ಗುಪ್ತಮಾರ್ಗವು ನನ್ನ ಕೊಠಡಿಯಿಂದ ಆಚೆ ಅಲ್ಲಿರುವ ಕೊಠಡಿಗೆ ಭೂಮಿಯೊಳಗಿಂದ ದಾರಿಮಾಡಿಕೊಂಡು ಹೋಗುತ್ತದೆ. ಏನಲು ಬಲ್ಲಿ ನೋಪೋಣ ನೀವು ಆ ಗುಪ್ತಮಾರ್ಗವಿರುವ ಸ್ಥಳವನ್ನು ತೋರಿಸಿ. ಎಂದುಹೇಳಿ ಭಾಸ್ಕರನು ಮತ್ತೊಂದು ಕೊಠಡಿಯಿರುವ ದಿಕ್ಕನ್ನು ನೋಡಿಕೊಂಡು ಅದಕ್ಕೆ ಸುಲಭವಾಗಿ ತಾನುಕುಳಿತಿದ್ದ ಕೊಠಡಿಯ ಬಾಗಲನ್ನು ತನ್ನ ಸೂಕ್ಷ್ಮವಾದ ಕಣ್ಣಿನಿಂದ ನೋಡಿದನು. ಆಬಲ್ಲೊಂದು ದೊಡ್ಡದಾದ ಗುಂಡಾದ ಮೇಜುಇರಿಕೆಯ್ತು. ಇಂಥಾ ಗುಪ್ತಮಾರ್ಗಗಳ ವಿಷಯವನ್ನು ಬಲ್ಲವನಿದ್ದ ಭಾಸ್ಕರನು ಅಲ್ಲೇ ಏನೋ ಗುಟ್ಟಿದೆಯೆಂದು ಯೋಚಿಸಿ ಆ ಗುಪ್ತಮಾರ್ಗದ ದಾರಿಯು ಆ ಗುಂಡಾದ ಮೇಜಿನಿಂದಯಿಂದ ಪ್ರಾರಂಭವಾಗುತ್ತದೆಂದು ತಿಳಿಸಿದನು. ಸೋಮಸುಂದರನು ನಕ್ಕು, ಹೌದು ಅದು ಅಲ್ಲೇಇರುವುದು. ಆದರೆ ನಾನು ಯೋಚಿಸಿದ್ದರೆ ಪತ್ತೆಯಾಗುವುದು ಅಸಾಧ್ಯವಲ್ಲವೇ'' ಎಂದು ಕೇಳಿದನು.

ಭಾಸ್ಕರ:—ರಯಸಿಟ್ಟು ಆ ಕೃಷ್ಣನೆಂಬ ಸೇವಕನನ್ನು ನನ್ನ ಕೊಠಡಿಗೆ ಕಳುಹಿಸಿ. ನುತ್ತು ನಾನು ಕೇಳುವ ಪ್ರಶ್ನೆಗಳಿಗೆಲ್ಲಾ ಸುಲಭವಾದ ಉತ್ತರವನ್ನು ಕೊಡುವಂತೆ ಯೋಚಿಸಲು ಹೇಳಿಬಿಟ್ಟು ತನ್ನ ಕೊಠಡಿಗೆ ಹೋದನು. ಸ್ವಲ್ಪ ಹೊತ್ತಿಗೆ ಎಂಭತ್ತು ವರ್ಷ ವಯಸ್ಸಿನ ಅತಿಸೃದ್ಧಸೊಬ್ಬನು ಚೋಲೂಲುಕೊಂಡು ಕೆಮ್ಮುತ್ತಾ ಬಂದು ಭಾಸ್ಕರನಿತ್ತ ಆಸನದ ಸೀಳೆ ಕುಳಿತುಕ್ಕೊಂಡು ತನ್ನನ್ನು ಕರೆಯ ಕಳುಹಿಸಿದ ಕಾರಣವೇನೆಂದು ಕೇಳಿದನು.

ಭಾಸ್ಕರ:—ಅಯ್ಯಾ ನೀನು ಈ ಮನೆಯಲ್ಲಿ ಎಷ್ಟು ವರ್ಷಗಳಿಂದ ಇರುವಿ.

ಕೃಷ್ಣ:—ಸ್ವಾಮಿ ನಾನು ಈ ಮನೆಯನ್ನು ನನ್ನ ಐವತ್ತನೇ ವರ್ಷದಲ್ಲಿ ಸೇರಿದೆನು. ಈಗ ನನಗೆ ಎಂಭತ್ತೈರಡು ವರ್ಷ ವಯಸ್ಸು. ಆದ್ದರಿಂದ ನಾನು ಇಲ್ಲಿ ಆರವತ್ತೈರಡು ವರ್ಷಗಳಿಂದಿರುವೆನು. ನಾನು ಕೆಲಸಕ್ಕೆ ಸೇರುವಾಗ ಸೋಮಸುಂದರರ ತಾತಂದಿರುದ್ದರು. ಆಗಿನಿಂದಲೂ ನಾನು ನಂಬಿಗಸ್ತನಾಗಿ ಕೆಲಸಮಾಡುತ್ತಾ ಬಂದೆನು. ನನ್ನ ಹೃದಾಭ್ಧದಲ್ಲಿ ಇವರು ನನ್ನನ್ನು ತಮ್ಮ ಮನೆಯವರಂತೆ ನೋಡಿಕೊಳ್ಳುತ್ತಿದ್ದಾರೆ. ಎಲ್ಲಾ ವಿಷಯಗಳೂ ನನ್ನ ಮೂಲಕವೇ ನಡೆಯಬೇಕಾಗಿದೆ. ನಮ್ಮ ಯಜಮಾನು

ಗುಂಟಾದ ಕಷ್ಟದಿಂದ ನನ್ನ ಹೃದಯವು ಒಡದುಹೋಗುವ ಹಾಗಾಗಿದೆ. ನಮ್ಮ ಮಧುಸೂದನನನ್ನು ಮಗುವಾಗಿದ್ದಾಗಲಿಂದಲೂ ನಾನೇ ಎತ್ತಿ ಲಾಲನೆ ಪಾಲನೆ ಮಾಡಿದವನು. ನನಗೆ ಸಂಸಾರವೇ ಇಲ್ಲದಿದ್ದರಿಂದ ಮಧುಸೂದನನನ್ನು ನನ್ನ ಮಗನೆಂದೇ ತಿಳಿದುಕೊಂಡಿದ್ದೆನು. ಅವನೂ ಸಹಾ ನನ್ನನ್ನು ಬಹಳ ಪ್ರೀತಿಯಿಂದ ಕಾಣುತ್ತಾ ನನ್ನ ಮಾತುಗಳನ್ನು ಮೀರಿ ನಡೆಯುತಿ ಇದ್ದನು. ಅವನು ತಂದೆಗೆ ತಿಳಿಸದ ಅನೇಕ ವಿಷಯಗಳನ್ನು ನನಗೆ ಹೇಳಿದ್ದನು. ಆವುಗಳಲ್ಲಿ ಒಂದನ್ನೂ ಇದುವರೆಗೂ ನಾನು ಯಾರ ಸಂಗಡಲೂ ಹೇಳಿಲ್ಲವು. ಅದು ಯಾವುದೆಂದರೆ ಅವನು ಕಲ್ಕತ್ತಾ ನಗರದಲ್ಲಿದ್ದಾಗ ಕೆಲವು ದುರ್ಮಾರ್ಗಪ್ರವರ್ತಕರು ಅವನು ಬಹಳ ಐಶ್ವರ್ಯಕ್ಕೆ ಯಜಮಾನನೆಂದು ತಿಳಿದು ಅವನನ್ನು ಕೆಡಿಸುವುದಾಗಿ ನಿಶ್ಚಯಿಸಿಮಾಡಿಕೊಂಡು ಅವನ ಸ್ನೇಹವನ್ನು ಬೆಳಸಿದರು. ಅವನು ಅವರ ಮೋಸವನ್ನರಿಯದೆ ಅವರ ಕಪಟಸ್ನೇಹಕ್ಕೆ ಮರುಳಾಗಿ ಅವರ ಸಂಗಡವೇ ಕಾಲಕಳೆಯಲು ಪ್ರಾರಂಭಮಾಡಿದರು. ಆ ದುರ್ಮಾರ್ಗಿಗಳೆಲ್ಲರೂ ಜನಗಳನ್ನು ಮೋಸಮಾಡಿ ತಮ್ಮ ಜೀವನವನ್ನು ಮಾಡಿಕೊಳ್ಳುತಕ್ಕಂಥಾ ಒಂದು ಕಳ್ಳ ಸಂಘಸಂಸ್ಥರಣ ಪಂಗಡಕ್ಕೆ ಸೇರಿದವರು. ಈ ಸಂಘದವರನ್ನೆ ಕಂಡರೆ ಇತರ ಸಂಘದವರೆಲ್ಲಾ ರಹಸ್ಯದಿಂದ ತಮ್ಮ ಕೂಟಕ್ಕೆ ಕೆಟ್ಟ ಹೆಸರು ತರುವವರೆಂದು ಅವರನ್ನು ಜರೆಯುತ್ತಿದ್ದರು. ಇವರುಗಳೆಲ್ಲಾ ಮುಖಂಡನಾಗಿ ಒಬ್ಬ ಬಿ.ಎ. ಬಿ.ಎಲ್. ಪರೀಕ್ಷೆ ಮಾಡಿದ ನೀಚನೊಬ್ಬನಿದ್ದನು. ಈ ದುರ್ಮಾರ್ಗಿಗಳು ತಾವು ಮಹಾ ಸುಗುಣಿಗಳಂತೆ ತೋರ್ಪಡಿಸಿಕೊಳ್ಳುತ್ತಾ ತಮ್ಮ ಕೆಲ ಉಡುಪುಗಳನ್ನು ಧರಿಸಿಕೊಂಡು ಎಲ್ಲಾ ಸಂಘ ಸಂಸ್ಕರಣ ಸಂಬಂಧವಾದ ಮೀಟಿಂಗಿಗೆ ಸಿಲ್ಲುತ್ತಲೂ, ಖರ್ಚುವಾದ ಕಸ್ಟೆಗಳನ್ನು ವಿವಾಹ ಮಾಡಿಕೊಳ್ಳುವುದಾಗಿ ಬರೆದು ಕೊಡುತ್ತಲೂ ಜಾತಿ ಭೇದವಿಲ್ಲವೆಂದು ಹೇಳಿ ಎಲ್ಲರೊಡನೆಯೂ ಸೇರಿ ಮಾದಕ ಪದಾರ್ಥಗಳನ್ನು ಸೇವಿಸುತ್ತಲೂ ಯಾವಾಗಲೂ ಸಿಗರೇಟ್ ಮುಂತಾದವುಗಳನ್ನು ಬಾಯಲ್ಲಿ ಕಚ್ಚಿಕೊಂಡೇ ಆಲೆಯುತ್ತಲೂ, ವೈದೀಕರನ್ನು ಕಂಡರೆ ಜರಿಯುತ್ತಲೂ, ಇದ್ದರು. ಇಂಥಾ ನೀಚರು ತಮ್ಮ ಪಂಗಡಕ್ಕೆ ಏನೂ ಆಸೆಯದ ಹೊಸಮನುಷ್ಯರನ್ನೆಲ್ಲಾ ಸೇರಿಸಿಕೊಂಡು ಅವರನ್ನೂ ಹಾಳುಮಾಡುತ್ತಿದ್ದರು. ಇವರ ಮೇಲೆಲ್ಲಾ ಪೋಲೀಸಿನವರಿಗೆ ಕಣ್ಣು ಇಲ್ಲೇಇತ್ತು. ಈ ಮಹಾತ್ಮರುಗಳು ಅನ್ಯಾಯವಾಗಿ ದೇಶವತ್ಸಲರಾದ ನಿರ್ಮಲ ಹೃದಯರಾದ ಸಂಘಸಂಸ್ಕರಣ ಕರ್ತರ ಹೆಸರನ್ನು ಹಾಳುಮಾಡುತ್ತಿದ್ದರು. ಇಂಥಾ ನೀಚರ ಗುಣವನ್ನರಿಯದೆ ನಮ್ಮ ಮಧುಸೂದನನು ಅವರ ಸ್ನೇಹವನ್ನು ಸಾಧಿಸಿದನು ಸ್ವಲ್ಪ ಕಾಲದಲ್ಲೇ ಈ ನೀಚರು ಇವನನ್ನು ದುರ್ಮಾರ್ಗಕ್ಕೆಳೆಯಲು ಪ್ರಾರಂಭಿಸಿದರು. ಸ್ವಲ್ಪ ಕಾಲದಲ್ಲೇ

ಅವನೂ ಅವರ ಹಾಗೆ ಬೂಚಾಟಗಳನ್ನು ಕಲಿತನು. ಯಾವಾಗ ಬೂಚಾಟವು ಬಂದಿತೋ ಆಗಲೇ ಕುಡುಕತನ ಮುಂತಾದ ದುರ್ನಡತೆಗಳು ಒಂದರ ಹಿಂದೆ ಒಂದಾಗಿ ಬಂದು ಬಿಟ್ಟವು. ತಂದೆಯು ಕಳುಹಿಸುತ್ತಿದ್ದ ಹಣವು ಸಾಲದೆ ಸ್ವಲ್ಪ ಕಾಲದಲ್ಲೇ ಇಪ್ಪತ್ತುಸಾವಿರ ರೂಪಾಯಿಗಳನ್ನು ಸಾಲಮಾಡಿ ಆ ಸಂಘದ ಯಜಮಾನನಿಂದ ತರಬೇಕಾಗಿ ಬಂದಿತು. ಈ ವಿಷಯಗಳಾವುವೂ ನನ್ನ ಯಜಮಾನನಿಗೆ ತಿಳಿಯದು. ಮಧುಸೂದನನು ಇಷ್ಟು ಕೆಟ್ಟುಹೋಗಿದ್ದರೂ ವಿದ್ಯೆಯನ್ನು ಮಾತ್ರ ಮಾಡಿಕೊಳ್ಳದೆ ಎಫ್.ಎ ಪರೀಕ್ಷೆಯಲ್ಲಿ ತೇರ್ಗಡೆಯನ್ನು ಹೊಂದಿದನು. ಅಷ್ಟಕ್ಕೆ ಅವನ ಇಂಗ್ಲೀಷ್ ವಿದ್ಯಾಭ್ಯಾಸವು ಸಾಕೆಂದು ಸೋಮಸುಂದರನು ಅವನನ್ನು ಕರತಂದು ಸಂಸ್ಕೃತವನ್ನು ಕಲಿಯುವಹಾಗೆ ವಿದ್ವಾಂಸರ ಕೈಕೆಳಗೆ ಬಿಟ್ಟನು. ಮಧುಸೂದನನು ಸಕಲ ವಿದ್ಯದಲ್ಲಿಯೂ ನೈಪುಣ್ಯವನ್ನು ಹೊಂದಿದನು. ಇಲ್ಲಿಗೆ ಬಂದಮೇಲೆ ಅವನಿಗೆ ತಾನು ಕಲ್ಕತ್ತಾ ನಗರದಲ್ಲಿ ನಡಸಿದ ಅಕೃತ್ಯಗಳೆಲ್ಲಾ ಮನಸ್ಸಿಗೆ ಹೊಳೆದು ಬಹಳ ಪಶ್ಚಾತ್ತಾಪಪಟ್ಟುಕೊಂಡು ತಂದೆಯ ಬಳಿ ತನ್ನ ಸಾಲದ ವಿಷಯವನ್ನು ಹೇಳುವುದಕ್ಕೆ ಹೆದರಿ ನನಗೆ ಎಲ್ಲವನ್ನೂ ತಿಳಿಯಪಡಿಸಿದನು. ಆ ಸಾಲದ ವಿಷಯವಾಗಿ ಅವನಿಗೆ ಆಗಾಗ್ಗೆ ಕಾಗದಗಳು ಬರುತ್ತಿದ್ದಹಾಗೆ ಕಂಡು ಬರುತ್ತದೆ. ಒಂದುದಿವಸ ಅಂದರೆ ಈಗ ಹತ್ತುದಿವಸಗಳ ಕೆಳಗೆ ಒಂದುಕಾಗದವು ಬಂದಿತು. ಆ ಕಾಗದವು ಬಂದಾಗ ನಾನು ಅವನ ಕೊಠಡಿಯಲ್ಲೇ ಕುಳಿತಿದ್ದೆನು. ಅದು ಅವನಿಗೆ ತಿಳಿದಿರಲಿಲ್ಲ. ಅವನು ಕಾಗದವನ್ನು ಓದುತ್ತಾ ಓದುತ್ತಾ ಏನೇನೋ ಯೋಚಿಸಿಕೊಂಡನು. ಅವುಗಳಲ್ಲಿ ನನಗೆ ಕೇಳಿ ಬಂದವುಗಳು ಇಷ್ಟು ಮಾತ್ರ ,, ಅಯ್ಯೋ ನಾನು ಇನ್ನೇನು ಮಾಡಲಿ. ನಮ್ಮ ತಂದೆಗೆ ತಿಳಿದು ಬಂದರೆ ಅವನೇ ನನ್ನುವನು. ನನ್ನ ಏಜೆನ್ಸಿಕಾಲವು ಸಮಾಪ್ತಿಸುತ್ತಾ ಬಂದಿತಲ್ಲಾ. ಅವನೇನಾದರೂ,'' ಎಂದುಯೋಚಿಸಿ ನನ್ನಕಡೆತಿರುಗಿ ನನ್ನ ಮುಖವನ್ನು ನೋಡಿದನು. ತಕ್ಷಣವೆ ಅವನು ಕಾಗದವನ್ನು ಬಚ್ಚಿಟ್ಟು ನನ್ನನ್ನು ಯಾವಾಗಬಂದೆ'' ಎಂದು ಕೇಳಿದನು.

ಈ ರೀತಿಯಾಗಿ ಆ ಮುದುಕನು ತನ್ನನ್ನು ಕೇಳದಿದ್ದರೂ ಈವಿಷಯಗಳನ್ನೆಲ್ಲಾ ಹೇಳಿದನು. ಭಾಸ್ಕರನು ನಡುವೆ ಮಾತನಾಡದೆ ಆಗಾಗ್ಗೆ ತನ್ನ ಜುಕ್ಕಿನಲ್ಲಿ ಏನೇನೋ ಬರೆದುಕೊಳ್ಳುತ್ತಿದ್ದನು. ಕೃಷ್ಣನು ಮಾತನಾಡಿ ನಿಲ್ಲಿಸಿದ ಮೇಲೆ ನಗುಮುಖದಿಂದ ಅವನ ಕಡೆಗೆ ತಿರುಗಿ ,, ಅಯ್ಯಾ ನೀನು ಈಗ ಹೇಳಿದ ವಿಷಯಗಳೆಲ್ಲಾ ಬಹಳಸಹಾಯ ಮಾಡಿದವು. ನಿನಗೆ ಮಧುಸೂದನನು ಕಾಗದಗಳನ್ನಿಟ್ಟಿದ್ದ ಸ್ಥಳವು ಗೊತ್ತಿದೆಯೋ'' ಎಂದು ಕೇಳಿದನು.

ಕೃಷ್ಣ:—ಆಹಾ ಗೊತ್ತಿದೆ. ಅವನು ಬಹಳ ದಿವಸದಿಂದ ಕಾಗದಗಳನ್ನಿಡುತ್ತಿದ್ದ ಸ್ಥಳವು ನನಗೆಗೊತ್ತಿದೆ. ಬೇಕಾಗಿದ್ದರೆ ಈಗಲೇ ತೋರಿಸುವೆನು.

ಭಾಸ್ಕರ:—ಆಗಲಿ. ಮೊದಲು ಈ ಒಂದುಪ್ರಶ್ನೆಗೆ ಉತ್ತರಕೊಡು. ಈ ನಿಮ್ಮ ಮಧುಸೂದನನಿದ್ದ ಕೊಠಡಿಗೆ ಯಾವುದಾದರೂ ಗುಪ್ತಮಾರ್ಗವಿರುವುದೋ ?

ಕೃಷ್ಣ:—(ಸ್ವಲ್ಪಯೋಚಿಸಿ) ಆಹಾ! ಈಗ ಜ್ಞಾಪಕಕ್ಕೆಬಂದಿತು. ಈಗ ಒಂದು ತಿಂಗಳ ಕೆಳಗೆ ಮಧುಸೂದನನಿಗೆ ಅವನ ಕೊಠಡಿಯಲ್ಲಿದ್ದ ಗುಪ್ತಮಾರ್ಗದ ವಿಷಯವನ್ನು ತಿಳಿಸಿದ್ದೆನು. ಈಗ ನೀವು ಕೇಳದಿದ್ದರೆ ಅದರ ವಿಷಯವು ನನಗೆ ಜ್ಞಾಪಕವೇ ಬರುತ್ತಿರಲಿಲ್ಲ. ಆ ಗುಪ್ತಮಾರ್ಗವು ಬಹಳವಿಚಿತ್ರವಾದದ್ದು. ಮೇಲಿನಿಂದ ನೋಡುವುದಕ್ಕೆ ಏನೂ ತಿಳಿಯುವುದಿಲ್ಲ. ಎಲ್ಲಾ ಗುಪ್ತಮಾರ್ಗಗಳಿಗೂ ಇರುವಹಾಗೆ ಮೇಲುಗಡೆ ಯಾವವಿಧವಾದ ಕೀಲಾಗಲೀ ಹೊಳೆಯಾಗಲೀ ಇಲ್ಲ. ಆದ್ದರಿಂದ ನೀವು ಒಂದುವರ್ಷವೆಲ್ಲಾ ಹುಡುಕಿದರೂ ಏನೂ ತಿಳಿದುಬರುವುದಿಲ್ಲ. ಆ ಗುಪ್ತಮಾರ್ಗವು ಆ ಕೊಠಡಿಯಲ್ಲಿರುವ ಮಂಚದ ಕೆಳಗಿದೆ. (ಭಾಸ್ಕರನು ತಾನು ಸಂದೇಹಪಟ್ಟಿದ್ದು ನಿಜವಾಯಿತೆಂದು ಯೋಚಿಸಿದನು.) ಅದನ್ನು ತೆರೆಯುವುದು ಹೇಗೆಂದು ನೀವು ಯೋಚಿಸಬಹುದು. ಆ ಸಮ್ಮ ಮನೆಗೆ ಅರ್ಧ ಫರಲಾಂಗ್ ದೂರದಲ್ಲೊಂದು ಪುರಾತನ ಮಸೆಯಿರುವುದು. ಆ ಮನೆಯಲ್ಲಿ ಸುರಳು ಕೊಠಡಿಗಳಿರುವುವು. ಅವುಗಳಲ್ಲಿ ಮೊದಲನೇ ಕೊಠಡಿಯಲ್ಲಿ ಮುಪಡಿಯತ್ತುವುದಕ್ಕೆ ಹೆಬ್ಬಲುಗಳಿರುವುವು. ಆ ಹೆಬ್ಬಲುಗಳ ತಳದಲ್ಲಿ ಒಂದು ಗುಪ್ತ ಮಾರ್ಗವಿರುವುದು. ಅದನ್ನು ಸುಲಭವಾಗಿ ಒಂದು ಪಾರೆಯ ಸಹಾಯದಿಂದ ಹೊಟಿ ತೆಗೆಯಬಹುದು. ಅಲ್ಲಿಂದ ಮಧುಸೂದನನ ಕೊಠಡಿಯೊಳಕ್ಕೂ ಒಂದು ಸುರಂಗ ಮಾರ್ಗವಿರುವುದು. ಈ ಮಧುಸೂದನನ ಕೊಠಡಿಯಲ್ಲಿರುವ ಗುಪ್ತಮಾರ್ಗದ ಬಾಗಿಲು ದುಂಡಾಗಿರುವದು. ಅದರಮೇಲೆ ಮಣ್ಣು ಹೆತ್ತಲ್ಪಟ್ಟಿರುವದು. ಅದಕ್ಕೆ ಅಡಿಯಲ್ಲಿ ಚಿಲುಕವಿರುವುದು. ಆ ಚಿಲುಕವನ್ನು ತೆಗೆದು ಅಡಿಯಲ್ಲಿರುವ ಪಿಡಿಯನ್ನು ಪಿಡಿದು ಆ ಬಾಗಿಲನ್ನು ಎತ್ತಿದರೆ ಅದುಮೇಲಕ್ಕೆಬಂದು ಒಂದುಗುಂಡಾದ ಸುರಂಗವು ಕಾಣುವದು. ಈ ವಿಧವಾದ ಸುರಂಗಮಾರ್ಗವು ಈಗ್ಗೆ ಇನ್ನೂರು ವರ್ಷಗಳಿಂದೆ ಮಾಡಲ್ಪಟ್ಟಿತು. ಆ ಕಾಲದಲ್ಲಿ ಹಿಂದಾರುಗಳು ಪಂಬುಕಳ್ಳರು ಇವರುಗಳ ಹಾವಳಿಯಿಂದಲೂ ಮತ್ತು ಅನೇಕ ಪರದೇಶೀಯರು ದಂಪತ್ತಿಬಂದು ಐಶ್ವರ್ಯವನ್ನು ಕೊಳ್ಳೇಹೊಡೆದುಕೊಂಡು ಹೋಗುತ್ತಿದ್ದ ದ್ದರಿಂದಲೂ ಐಶ್ವರ್ಯವಂತರು ತಮ್ಮ ಹಣದ ವಿಷಯವಾಗಿ ಯಾವಾಗಲೂ ಹೆದರುಕೆಯಿಂದಲೇ ಇರುತ್ತಿದ್ದರು. ಆಗ ವಾಸವಪುರದ ಜಹಗೀರ್‌ದಾರರೊಬ್ಬರು ಯಾರಿಗೂ ತಿಳಿಯದ ರೀತಿ ಈ ರೀತಿ ಸುರಂಗ ಮಾರ್ಗವನ್ನೂ ಗುಪ್ತಮಾರ್ಗಗಳನ್ನೂ ರಚಿಸಿ ಅದರಲ್ಲಿ ತಮ್ಮ

ಐಶ್ವರ್ಯವನ್ನೆಲ್ಲಾ ಇಟ್ಟಿದ್ದರು. ಕಳ್ಳರಾಗಲೀ ಆಥವಾ ಲೂಟಿಯೊಡೆಯುವ ಸೈನ್ಯವಾಗಲಿ ಒರುತ್ತೆಂದು ತಿಳಿದಕೂಡಲೇ ಅವರು ಆಹಾರ ಸಾಮಗ್ರಿಗಳನ್ನು ತೆಗೆದುಕೊಂಡು ಈ ಗುಪ್ತ ಮಾರ್ಗದೊಳಕ್ಕೆಹೋಗಿ ಹತ್ತಿಪ್ಪತ್ತು ದಿವಸಗಳು ವಾಸಮಾಡುತ್ತಿದ್ದರು. ಅದು ಕತ್ತಲೆಯೂ ಮತ್ತು ಅಸಹ್ಯಕರವೂ ಆದ ಪ್ರದೇಶವಾಗಿದ್ದರೂ ಪ್ರಾಣಭಯದಿಂದಲೂ ಧನದಾಶೆಯಿಂದಲೂ ಅವರು ಎಲ್ಲವನ್ನೂ ಸಹನೆಯಿಂದ ಅನುಭವಿಸುತ್ತಿದ್ದರು. ಆದ್ದರಿಂದಲೇ ವಾಸವಪುರದ ಜಹಗೀರ್‌ದಾರರು ಪುರಾತನ ಕಾಲದಿಂದಲೂ ಅತುಲೈಶ್ವರ್ಯಸಂಪನ್ನರಾಗಿರುತ್ತಾರೆ. ಇದರವಿಷಯವು ಈಗಲೂ ಯಾರಿಗೂ ತಿಳಿಯದು. ನನಗೆ ಮಾತ್ರ ಇದು ಮೊದಲಿಂದ ತಿಳಿದಿತ್ತು. ಸನ್ಮಾನ್ಯಮಾನಸರಾದ ಸೋಮಸುಂದರ ರಾಯರಿಗೂ ಈ ವಿಷಯ ತಿಳಿದಿಲ್ಲ.

ಭಾಸ್ಕರ: —ಈಗಲೇಗನೀವು ನನಗೆ ಬಹಳಸಹಾಯ ಮಾಡಿದಿರಿ. ಮಧುಸೂದನನು ಹೋದ ಮಾರ್ಗವು ನನಗೆ ತಿಳಿಯಿತು.

ಕೃಷ್ಣ —ಏನು ? ಮಧುಸೂದನನೂ ಆ ಮಾರ್ಗದಲ್ಲಿ ಹೋದನೇ? ಎಲ್ಲಿಗೆ ಹೋದನು ? ಅಯ್ಯೋ ! ಆದರ ವಿಷಯವನ್ನು ಅವನಿಗೇಕೆ ನಾನು ತಿಳಿಸಿದೆನು? ಎಂದು ಪೇಚಾಡಿದನು.

ಭಾಸ್ಕರ:—ಅಯ್ಯಾ ಸಮಾಧಾನವನ್ನು ತಂದುಕೊಳ್ಳಿರಿ. ನೀವುಯೋಚಿಸಿದ್ದರಿಂದ ಅಷ್ಟೇನೂ ಕೆಡಕಾಗಲಿಲ್ಲ. ಈಗ ದಯವಿಟ್ಟು ಮಧುಸೂದನನು ಇಟ್ಟಿರುವ ಕಾಗದಗಳನ್ನು ತಂದುಕೊಡಿರಿ.

ಮುದುಕನು ಏನೇನೋ ಗೊಣಗುತ್ತಾ ಹೊರಟುಹೋದನು. ಭಾಸ್ಕರನು ಅವನು ಹೇಳಿದ ಎಲ್ಲಾ ವಿಷಯಗಳನ್ನೂ ಯೋಚಿಸುತ್ತಾ ಕುಳಿತಿದ್ದನು. ಅವನ ಮನಸ್ಸಿಗೆ ನಾನಾಬಗೆಯ ಯೋಚನೆಗಳು ಹೊಳೆದವು. ಒಂದು ವೇಳೆ ಮಧುಸೂದನನ ಕೆಲ್ಕತ್ತಾ ಸ್ನೇಹಿತರೇನಾದರೂ ಕೆಡಕನ್ನು ಮಾಡಿರಬಹುದೋ ಎಂದು ಯೋಚಿಸಿದನು. ಇಲ್ಲಿ ಮಧುಸೂದನನೇ ಮದುವೆಯಮೇಲೆ ಆಕ್ಷೇಪ್ಸೆಯಿಲ್ಲದೆ ಆಗುಸ್ತ ಮಾರ್ಗದಲ್ಲೇ ನಾದರೂ ಅಡಗಿರಬಹುದೋ ಎಂದೂ ಯೋಚಿಸಿದನು. ಆದರೆ ಆಗಲೇ ಯಾವುದೂ ಸರಿಯಾಗಿ ತೋರಿಬರಲಿಲ್ಲ. ಅಷ್ಟುಹೊತ್ತಿಗೆ ಕೃಷ್ಣನು ಒಂದು ಕಂತೆ ಕಾಗದಗಳನ್ನು ತೆಗೆದುಕೊಂಡು ಬಂದು ಮೇಜಿನಮೇಲೆಹಾಕಿ ಪುಟ್ಟು ಹೊರಟುಹೋದನು.

ಭಾಸ್ಕರನು ಎಲ್ಲಾ ಕಾಗದಗಳನ್ನೂ ಒಂದೊಂದಾಗಿ ಓದುತ್ತಾ ಬಂದನು. ಯಾವಕಾಗದದಿಂದಲೂ ಉಪಯೋಗವಾಗಲಿಲ್ಲ. ಕೊನೆಗೆ ನೆಲದಮೇಲೆ ಒಂದು ಜೂರುಕಾಗದವು ಬಿದ್ದಿರುವುದನ್ನು ನೋಟ ಅದನ್ನು ತೆಗೆದು ಓದಿದನು. ತಕ್ಷಣವೇ

ಭಾಸ್ಕರನ ಮುಖವು ಕೆಂಪಗಾಯಿತು. ಕುಳಿತಿದ್ದ ಆಸನದಿಂದೆದ್ದು ಪುನಃ ಆ ಕಾಗದವ ನ್ನೋದಿದನು. ಅದರಲ್ಲಿಷ್ಟೇ ಬರೆದಿತ್ತು ‘‘ಮಾರ್ಗದ ವಿಷಯ ತಿಳಿಯಿತು. ಅದು ಇನ್ಯಾರಿಗಾದರೂ ಗೊತ್ತೋ? ನೀನುಮಾಡಿದ ಶಪಥವನ್ನು ಚ್ಞಾಪಿಸಿಕೋ. ಅದಕ್ಕೆ ಮೀರಿ ಮದುವೆ ಮಾಡಿಕೊಳ್ಳಲು ಹೋದರೆ ಆನಿಷ್ಟ ಸಂಘಟನೆಯೊಗುವುದು. ಹುಷಾರ್’’ ಭಾಸ್ಕರನು ಆ ಕಾಗದವನ್ನು ತನ್ನ ಬುಕ್ಕಿನಲ್ಲಿಟ್ಟುಕೊಂಡು ಉಳಿದ ಕಾಗದ ಗಳನ್ನೆಲ್ಲಾ ಕಟ್ಟಿ ಮೇಜಿನಲ್ಲಿಟ್ಟನು.

ಅಷ್ಟುಹೊತ್ತಿಗೆ ಭೋಜನಕಾಲವಾದ್ದರಿಂದ ಬದ್ಧುಯೋಗಿ ಸ್ನಾನಾದಿಗಳನ್ನು ಮಾಡಿ ಭೋಜನವನ್ನು ಮುಗಿಸಿಕೊಂಡು ಪುನಃ ತನ್ನ ಕೊಠಡಿಗೆ ಬಂದು ಕುಳಿತು ಯೋಚಿಸಲಾರಂಭಿಸಿದನು. ಸ್ವಲ್ಪಹೊತ್ತು ‘‘ಇನ್ನೇನು ನಾನುಯೋಚಿಸಿನ್ಪೆಲ್ಲಾ ಅವರ ಮೇಲೆ ಸಂಶಯವನ್ನು ತೋರಿಸುತ್ತಿದೆ. ಆದರೆ ಅವರು ಏತಕ್ಕೋಸ್ಕರ ಈ ಕೆಲಸವನ್ನು ಮಾಡಿದರೋ ತಿಳಿದುಬರುವದಿಲ್ಲ. ‘‘ಏನೇ ಆಗಲಿ, ಪುಣುಸೂದನನ ಕಳ್ಳತ್ತಾ ನಗರದ ನ್ನೇಪಿತರೇ ಈ ಕೆಲಸವನ್ನು ಮಾಡಿರುವರೆಂದು ನಾನು ಯೋಚಿಸುತ್ತೇನೆ’’ ಎಂದು ಹೇಳಿಕೊಂಡನು.

ನಾಲ್ಕನೆಯ ಅಧ್ಯಾಯ.

(ಭಾಸ್ಕರನೂ ಮತ್ತು ಸುಖಿವುಗಳೂ)

ಮಾರನೇ ದಿವಸ ಭಾಸ್ಕರನು ಒಂದು ದೀಪವನ್ನೂ ಕೆಲವು ಬೆಂಕೀಕಡ್ಡಿ ಪೆಟ್ಟಿಗೆ ಗಳನ್ನೂ ಎರಡು ರಾಜಾಸ್ಥರುಗಳನ್ನೂ ಮತ್ತು ಒಂದು ಸಣ್ಣ ಪಾರೆಯನ್ನೂ ತೆಗೆದು ಕೊಂಡು ಹೊರಟು ಸೋಮಸುಂದರನಿಗೆ ಸೇರಿದ ಹಳೆಮನೆಯನ್ನು ಸೇರಿದನು. ಆ ಮನೆಯು ಬಹಳ ಪುರಾತನ ಕಾಲದ್ದಾದ್ದರಿಂದ ಅನು ಬಹಳ ಜೀರ್ಣಸ್ಥಿತಿಗೆ ಬಂದಿ ದ್ದಿತು. ಮೂಲೆಮೂಲೆಯಲ್ಲಿಯೂ ಧೂಳು ರಾಶಿರಾಶಿಯಾಗಿ ಬಿದ್ದಿದ್ದಿತು. ಭಾಸ್ಕರನು ನೆಟ್ಟಗೆ ಅಲ್ಲಿದ್ದ ಒರನು ಕೊಠಡಿಗಳಲ್ಲಿ ನೊಡಲನೆ ನೊಡಲೊಳಕ್ಕೆ ಹೋಗಿ ಅಲ್ಲಿದ್ದ ಮೆಟ್ಟಿಲಿನ ಸಮೀಪಕ್ಕೆ ಹೋಗಿ ಅದರ ಬುಡದಸತ್ತಿಲಾ ನೋಡಿದನು. ಅಲ್ಲಿ ಬಿದ್ದಿದ್ದ ಧೂಳಿನ ರಾಶಿಯು ಹೇಳಿ ಅನೇಕ ‘‘ಬೂಟ್ಸು’’ ಕಾಲಿನ ಗುರುತುಗಳು ಕಾಣಬಂದವು. ಭಾಸ್ಕರನು ಅಲ್ಲಿದ್ದ ಒಂದು ಬಲಿಯನ್ನು ಸ್ವಲ್ಪ ಸೀಳಿದ್ದ ಬತ್ತಿ ನೋಡಲು ಅಡಿ ಯಲ್ಲಿ ಗುಂಡಾದ ಒಂದು ಮರದ ಬಾಗಿಲು ಕಾಣಬಂದಿತು. ತಾನು ತಂದಿದ್ದ ಸಣ್ಣ

ಹಾರೆಯಿಂದ ಅದನ್ನು ಮೀಟಲು ಅದು ಸುಲಭವಾಗಿ ಹೊರಕ್ಕೆ ಬಂಯಿತು. ಆದ್ದರಿಂದ ಅದು ಸ್ವಲ್ಪದಿನಗಳ ಕೆಳಗೆ ತೆಗೆಯಲ್ಪಟ್ಟಿತ್ತು ಎಂದು ತಿಳಿದು ಕೊಂಡನು. ಅಲ್ಲೊಂದು ಗುಂಡಾದಮಾರ್ಗವು ಕಂಡುಬಂದಿತು. ಗಾಳಿಯು ಪ್ರವೇಶವಾಗಲೆಂದು ಸ್ವಲ್ಪಹೊತ್ತು ಕಾದಿದ್ದು ಭಾಸ್ಕರನು ಆ ಮಾರ್ಗವಾಗಿ ಒಳಕ್ಕಿಳಿದು ಹೋದನು. ಒಳಗೆ ವಿಶಾಲವಾದ ಮಾರ್ಗವೊಂದು ಕಾಣಬಂದಿತು. ಎಲ್ಲಿಂದಲೋ ತಣ್ಣಗೆ ಗಾಳಿಯು ಬೀಸುತ್ತಿತ್ತು. ಮುಂದಕ್ಕೆ ಹೋಗುತ್ತಾ ಹೋಗುತ್ತಾ ಕತ್ತಲೆಯು ಹೆಚ್ಚಾದ್ದರಿಂದ ತಾನು ತಂದಿದ್ದ ದೀಪವನ್ನು ಹತ್ತಿಸಿಕೊಂಡು ಮುಂದಕ್ಕೆ ಹೊರಟನು. ಅವನು ಬಹಳ ಸೂಕ್ಷ್ಮವಾಗಿ ನೆಲವನ್ನು ಪರೀಕ್ಷಿಸುತ್ತಾ ಹೋಗುತ್ತಿರಲು ಅಲ್ಲೊಂದುಸ್ಥಳದಲ್ಲಿ ಒಂದು ಗಡಿಯಾರದ ಸರಪಣಿಯು ಬಿದ್ದಿತ್ತು. ಆದರೆ ಅಂದಘಾಗಲೆಲ್ಲ ಇಂಗ್ಲೀಷಿನ "ಎಂ" (M) ಎಂಬಕ್ಷರವು ಕೆತ್ತಲ್ಪಟ್ಟಿತ್ತು. ಅದನ್ನು ತೆಗೆದುಕೊಂಡು ತನ್ನ ಕಿಸೆಯಲ್ಲಿ ಭದ್ರವಾಗಿಟ್ಟುಕೊಂಡು ಮುಂದಕ್ಕೆ ಹೋದನು. ಅಲ್ಲಲ್ಲಿ ಬಿಟ್ಟಿಯ ಚೂರುಗಳೂ, ಹಗ್ಗದ ಜೂರುಗಳೂ ಬಿದ್ದಿದ್ದವು. ಇವುಗಳಿಂದ, ಬಂಟಿದ್ದ ಜನಗಳು ಮಧುಸೂದನನನ್ನು ಕಟ್ಟಿ ತೆಗೆದುಕೊಂಡುಹೋಗಿರುತ್ತಾರೆಂದೂ, ಅವನು ಪಡಿಸಿಕೊಳ್ಳುವುದಕ್ಕಾಗಿ ಬಹಳ ಹೆಣಗಾಡಿದ್ದಾನೆಂದೂ ತಿಳಿದುಕೊಂಡನು. ಇನ್ನೂ ಸ್ವಲ್ಪದೂರ ಹೋಗಲು ಅಲ್ಲೊಂದು ಏಳು ಬಣ್ಣದ ವಸ್ತ್ರವು ಹುರಿ ಬದ್ದಿದ್ದಿತು. ಅದನ್ನೂ ತೆಗೆದುಕೊಂಡು ಮುಂದಕ್ಕೆ ಹೊರಟನು. ಸ್ವಲ್ಪಹೊತ್ತಿಗೆಲ್ಲಾ ಅವನು ಒಂದು ಅಟ್ಟಣೆಯ ಬಳಿಗೆ ಬಂದನು. ಅಲ್ಲೇ ಸ್ವಲ್ಪಹೊತ್ತು ದೃಷ್ಟಿಸಿನೋಡಲು ಒಂದು ಗುಂಡಾದ ಜಾಗಲೂ ಅದರ ಪಿಡಿಯೂ ಕಾಣಬಂದಿತು. ಆ ಜಾಗಲು ಒಳಗೆ ಚಿಲುಕ ಹಾಕಲ್ಪಟ್ಟಿತ್ತು, ಇನ್ನುತಾನು ತಿಳಿದುಕೊಳ್ಳಬೇಕಾದ ವಿಷಯಗಳನ್ನೆಲ್ಲಾ ತಿಳಿದು ಕೊಂಡಹಾಗಾಯಿತೆಂದು ಒಂದಕ್ಕೆ ಹೊರಟು ತಾನು ಪ್ರವೇಶಮಾಡಿದ ಜಾಗಲಿನ ಮೂಲಕವೇ ಹೊಲಕ್ಕೆ ಬಂದು ಅದನ್ನು ಮುಚ್ಚಿ ಬಿಟ್ಟು ಊರಿನ ಮೇಲೆ ಹಲಗೆಯನ್ನಿಟ್ಟು ಮನೆಯ ಸುತ್ತಲೂ ಪರೀಕ್ಷಿಸುತ್ತಾ ಬಂದನು. ಅಲ್ಲಲ್ಲಿ ಚಕ್ರದ ಗುರುತುಗಳನ್ನು ಕಂಡು, ಬಂದಿದ್ದವರು ಗಾಡಿಯಲ್ಲಿ ಬಂದಿದ್ದರೆಂದು ಯೋಚಿಸಿಕೊಂಡು ಇನ್ನೇನೂ ನೋಡತಕ್ಕದ್ದಿಲ್ಲವೆಂದು ತೀರ್ಮಾನಿಸಿಕೊಂಡು ಸೋಮಸುಂದರನ ಮನೆಗೆ ಹಿಂದಿರುಗಿ ಬಂದು ಊಟಮಾಡಿ ತನಗೆ ಸಿಕ್ಕಿದ ಸುಳುವುಗಳನ್ನೆಲ್ಲಾ ಪರೀಕ್ಷಿಸುತ್ತಾ ಕುಳಿತಿದ್ದನು. ಅಷ್ಟು ಹೊತ್ತಿಗೆ ಸೋಮಸುಂದರನೂ ಅಲ್ಲಿಗೆ ಬಂದು ಸೇರಿದನು.

ಸೋಮಸುಂದರ. ಏನಾದರೂ ಇಲ್ಲಿಯ ಸುಗೆ ಏನು ಪತ್ತೇಮಾಡಿರುವಿರಿ? ನನ್ನ ಮಗನು ಜೀವದಿಂದಿರುತ್ತಾನೋ ಇಲ್ಲವೋ?

ಭಾಸ್ಕರ:—ನಾನು ಈಗ ಏನೂ ಹೇಳಲಾರೆನು. ಆದರೆ ಇಷ್ಟುಮಾತ್ರ ಹೇಳ ಬಲ್ಲೆನು: ನಿಮ್ಮ ಪುತ್ರನು ಜೀವವಂತನಾಗಿಯೇ ಇರುತ್ತಾನೆ. ಅವನನ್ನು ತಿಳಿದವರೇ ಯಾರೋ ಅವನನ್ನು ಬಲವಂತದಿಂದ ಎತ್ತಿಕೊಂಡು ಹೋಗಿರುತ್ತಾರೆ.

ಸೋಮಸುಂದರ:—ಹಾಗೆ ಅವನನ್ನು ಎತ್ತಿಕ್ಕೊಂಡು ಹೋಗಲು ಕಾರಣವೇನು? ಧನದಾಶೆಯಿಂದ ಮಾಡಿದ್ದರೆ ಇಲ್ಲಿಯವರಗೂ ಏನನ್ನೂ ಕೇಳದೇ ಇರಲು ಕಾರಣವೇನು?

ಭಾಸ್ಕರ:—ಅವರು ಧನಾಪೇಕ್ಷೆಯಿಂದ ಈ ಕೆಲಸವನ್ನು ಮಾಡಿರುವಹಾಗೆ ಕಂಡುಬರುವುದಿಲ್ಲ. ಮಧುಸೂದನನ ವಿವಾಹವಿಷಯದಲ್ಲೇ ಏನೋ ಬಹಳ ಒಳಸಂಚು ನಡೆದಿರುವಹಾಗೆ ನನಗೆಸಿಕ್ಕಿದ ಒಂದುಜೊತು ಕಾಗದದಿಂದ ತಿಳಿದುಬರುತ್ತದೆ. ಆದರೆ ಈಗ ನಾವು ಯಾವುದನ್ನೂ ಸರಿಯಾಗಿ ತೀರ್ಮಾನಿಸುವುದಕ್ಕಾಗುವುದಿಲ್ಲ.

ಸೋಮಸುಂದರ:—ನನ್ನ ಪುತ್ರನಿಗೇನಾದರೂ ಅಪಾಯ ಸಂಭವಿಸಿರಬಹುದೋ ಎಂದು ನನ್ನಮನಸ್ಸು ಕಳವಳ ಪಡುತ್ತಿದೆ. ನೀವು ಇದರ ಮೂಲವನ್ನೆಲ್ಲಾ ಬೇಗ ಕಂಡುಹಿಡಿದು ನನ್ನ ಪುತ್ರನನ್ನು ಬಿಡಿಸಿಕೊಟ್ಟರೆ ಬಹಳ ಒಳ್ಳೆದು. ಅದಕ್ಕಾಗಿ ಎಷ್ಟೇ ಖರ್ಚಾಗಲಿ ನಾನುಕೊಡಲು ಸಿದ್ದನಾಗಿದ್ದೇನೆ.

ಭಾಸ್ಕರ:—ನಿಮ್ಮ ಪುತ್ರನಿಗೇನೂ ಅಪಾಯಸಂಭವಿಸಿರಲಾರದೆಂದು ನಾನು ಯೋಚಿಸುತ್ತೇನೆ. ಇದೆಲ್ಲ ಇರಲಿ. ತಮಗೆ ಅವನು ಕಲ್ಕತ್ತಾನಗರದಲ್ಲಿದ್ದಾಗ ವಾಸ ವಿದ್ದ ಮನೆಯ ವಿಳಾಸ ಗೊತ್ತಿದೆಯೋ? ಗೊತ್ತಿದ್ದರೆ ದಯವಿಟ್ಟು ತಿಳಿಸಿ.

ಸೋಮಸುಂದರ:—ತಿಳಿಯದೇ ಏನು. ಅವನು ತನ್ನ ಸ್ನೇಹಿತ ರೊಡನೆ ಬೋ ಬಜಾರ್ ಬೀದಿಯಲ್ಲಿ ೩೦ನೇ ನಂಬರ್‌ಮನೆಯಲ್ಲಿ ವಾಸ ಮಾಡುತ್ತಿದ್ದನು. ಅವನು ಊಟವನ್ನು ಕಾಳೀ ಬೀದಿಯಲ್ಲಿರುವ ವೈದೀಕರಹೊಟಲ್ ಎಂಬುವುದರಲ್ಲಿ ಮಾಡು ತ್ತಿದ್ದನು.

ಭಾಸ್ಕರ:—ನಾನು ಈ ದಿವಸನೇ ಕಲ್ಕತ್ತೆಗೆ ಹೊರಡುತ್ತೇನೆ. ನೀವು ನನ ಗಾಗಿ ಮಾಡತಕ್ಕ ಒಂದು ಕೆಲಸವಿದೆ. ಅದೇನಂದರೆ ನಾನು ಈ ವಿಷಯದಲ್ಲಿ ಪ್ರಯೇ ಶಮಾಡಿರುವುದನ್ನು ಯಾರಸಂಗಡಲೂ ತಿಳಿಸಕೂಡದು. ನನಗೇನಾದರೂ ಕಾಗದಗಳನ್ನು ಬರೆಯಬೇಕಾಗಿದ್ದರೆ ನನ್ನ ಸ್ನೇಹಿತನಾದ ಗೋವಿಂದನೆಂಬುವನ ಆಡ್ರೆಸ್ಸಿಗೆ ಬರೆಯಿರಿ. ಇದೋ ಇದೇ ಅವನವಿಳಾಸ. ಈಗ ಸದ್ಯಕ್ಕೆ ಖರ್ಚಿಗಾಗಿ ಒಂದು ಸಾವಿರ ರೂಪಾಯಿ ಗಳನ್ನು ಕೊಟ್ಟರೆ ನಾನು ಕಲ್ಕತ್ತೆಯಿಂದ ಒಂದುವೇಳೆ ಕಾಗದವನ್ನು ಬರೆದರೂ ಬರೆದೆ. ಇಲ್ಲದಿದ್ದರೂ ಇಲ್ಲ. ಆದರೆ ತಾವು ಯಾವುದಕ್ಕೂ ಯೋಚಿಸಕೂಡದು.

ಸೋಮಸುಂದರನು ಭಾಸ್ಕರನ ಅಪ್ಪಣೆಯನ್ನುಹೊಂದಿ ಒಳಕ್ಕೆಹೋಗಿ ಸಾವಿರದ ಐನೂರು ರೂಪಾಯಿಗಳನ್ನು ಕೊಟ್ಟುಕಳುಹಿಸಿದನು.

ಭಾಸ್ಕರನು ಭೋಜನವಾದನೇಲೆ ತನ್ನ ಆಕಾರವನ್ನು ಬದಲಾಯಿಸಲು ಕೂತನು. ಯಾತಕ್ಕಂದರೆ ಕಲ್ಕತ್ತದಲ್ಲಿ ಎದುರಿಗೆ ಅನೇಕರು ಇವನನ್ನು ನೋಡಿಯೂ ಮತ್ತು ಫೋಟೋಗಳ ಮೂಲಕ ನೋಡಿಯೂ ಬಲ್ಲರು. ಈಗ ನಿಜರೂಪದಿಂದ ಹೋದರೆ ಸಂಶಯಕ್ಕಾಸ್ಪದವಾಗಬಹುದು-ಆದ್ದರಿಂದ ಕೃತ್ರಿಮವಾದ ಬೀಡಾಡೀ ಮೀಶೆಗಳನ್ನೂ ಕೂದಲನ್ನೂ ಕಟ್ಟಿಕೊಂಡು ಶರೀರಕ್ಕೆಲ್ಲಾ ಯಾವುದೋ ಒಂದು ವಿಧವಾದ ದ್ರಾವಕವನ್ನು ಬಳಿದುಕೊಳ್ಳಲು ದೇಹವೆಲ್ಲಾ ಮುದುಕರ ದೇಹದಂತೆ ಸುಕ್ಕುಬಿದ್ದಿರುವ ಹಾಗೆ ಕಾಣಬಂದಿತು. ಹೀಗೆ ಕಂಡುಹಿಡಿಯಸಾಧ್ಯವಾದ ಮುದುಕವೇಷವನ್ನು ಧರಿಸಿ ತನ್ನ ಸಾಮಗ್ರಿಗಳನ್ನೆಲ್ಲಾ ತೆಗೆಸಿಕೊಂಡು ಸೋಮಸುಂದರನ ಗಾಡಿಯಲ್ಲಿ ಸಮೀಪದ ಶೈಲ್ಪೀ ಸ್ಟೇಷನನ್ನು ತಲುಪಿ ರೈಲುಗಾಡಿಯ ಮುಖಾಂತರ ಅನೇ ದಿವಸ ಕಲ್ಕತ್ತಾ ಮಹಾನಗರವನ್ನು ತಲುಪಿ ತನ್ನ ಸ್ನೇಹಿತನ ದ ಗೋವಿಂದನ ಮನೆಯನ್ನು ಸೇರಿದನು.

ಐದನೆಯ ಅಧ್ಯಾಯ.

(ಸೋಮಾರಿಗಳ ಗುಹೆ.)

ಕಲ್ಕತ್ತಾ ನಗರವು ಇಂಗ್ಲೀಷರು ಇಂಡಿಯಾ ದೇಶಕ್ಕೆ ಬಂದು ನೆಲಸಿದಾಗಲಿಂದಲೂ ದಿನೇದಿನೇ ವೃದ್ಧಿಯನ್ನು ಹೊಂದಿ ಈಗ ಇಂಡಿಯಾದಲ್ಲೆಲ್ಲಾ ಜನಸಂಖ್ಯೆಯಲ್ಲಿ ಎರಡನೆಯದೆನಿಸಿಕೊಂಡಿರುವುದು ಸಕಲರಿಗೂ ತಿಳಿದ ವಿಷಯವಾಗಿದೆ. ಪುರಾತನಕಾಲದಿಂದಲೂ ಈ ನಗರವು ಸಂಪತ್ತುಳ್ಳದ್ದಾಗಿರುವುದು. ಇಂಗ್ಲೀಷರು ಇಲ್ಲಿನೆಲಸಿದಮೇಲೆ ಇದರ ಪ್ರಾಮುಖ್ಯತೆಯು ಮತಷ್ಟು ಹೆಚ್ಚಿತು. ಸುತ್ತುಮುತ್ತಲೂ ಇರುವ ರಾಜ್ಯಗಳು ಗಂಗಾ ಮತ್ತು ಹೂಗ್ಲಿ ಈ ನದಿಗಳ ಸಹಾಯದಿಂದ ಇಂಡಿಯದಲ್ಲೆಲ್ಲಾ ಅತ್ಯಂತ ಫಲವತ್ತಾದ ಪ್ರದೇಶಗಳಾಗಿ, ಅಲ್ಲಿನ ಜನಗಳು ಅತ್ಯಂತ ಧನಿಕರಾಗಲು ಕಾರಣವಾದವು. ವ್ಯಾಪಾರಾದಿಗಳಿಗೆ ಮಧ್ಯಭಾಗವಾಗಿಯೂ, ಇಂಡಿಯಾ ದೇಶಕ್ಕೇ ರಾಜಧಾನಿಯಾಗಿಯೂ ಇದ್ದದ್ದರಿಂದ ಕಲ್ಕತ್ತಾ ಪಟ್ಟಣವು ಜನಸಂಖ್ಯೆಯಲ್ಲಿಯೂ ಐಶ್ವರ್ಯದಲ್ಲಿಯೂ ಬಹಳ ಮುಂದಕ್ಕೆ ಬಂದಿತು. ಇಲ್ಲಿನ ಜನಗಳು ಅಧಿಕ ಕಷ್ಟವಿಲ್ಲದೇ ತಮ್ಮ ಆಹಾರ ಸಾಮಗ್ರಿಗಳನ್ನು ಹೊಂದುವರಾದ್ದರಿಂದ ಜೀವನಕ್ಕೆ ಕಷ್ಟಪಡದೆ ತಮ್ಮ

ಕಾಲವನ್ನೆಲ್ಲಾ ಏಷ್ಯೆಯಲ್ಲಿಯೂ, ದೇಶಕ್ಕೆ ಒಳ್ಳೆಯದಾಗುವ ಕಾರ್ಯಗಳಲ್ಲಿಯೂ ಮತ್ತೆ ಕೆಲವರು ಸೋಮಾರಿಗಳಾಗಿ ಕಳ್ಳತನ, ಕುಡಿತ, ಅರಾಜಕತ್ವ ಇವುಗಳಲ್ಲೂ ಕಳೆಯುತ್ತಾ ಬಂದರು. ಇಲ್ಲಿ ಎಲ್ಲೆಲ್ಲಿ ನೋಡಿದರೂ ಸಂಘಗಳೂ, ಪ್ರತಿ ದಿವಸವೂ ಉಪನ್ಯಾಸಗಳೂ ತುಂಬಿಹೋಗಿರುವುವು. ಅತ್ಯಂತ ವಿದ್ಯಾವಂತರಾದ ಇಲ್ಲಿಯ ಜನಗಳು ಇಂಡಿಯಾ ದೇಶಕ್ಕೆ ಬಹಳ ಒಳ್ಳೆಯ ಹೆಸರನ್ನು ತಂದಿರುವರು. ಇಲ್ಲೇ ಸಂಘ ಸಂಸ್ಕರಣದಕ್ಷರೂ, ದೇಶಸುಧಾರಕರೂ ಮೊಟ್ಟಮೊದಲು ತಲೆಯನ್ನೆತ್ತಿ ಜಯವನ್ನು ಹೊಂದುತ್ತಿವಾರೆ. ಇಲ್ಲೇ ಕ್ರೂರವಾದ ಸಹಗಮನಪದ್ಧತಿಯನ್ನು ನಿಲ್ಲಿಸಲು ಮೊಟ್ಟ ಮೊದಲಿನ ಪ್ರಯತ್ನ ನಡೆಯಿತು.

ಇಂತಹ ಮಹಾ ಪಟ್ಟಣದಲ್ಲೂ ಕೆಲವು ಮಂದಿ ದುಷ್ಟರು ಅನೇಕ ಪಂಗಡಗಳನ್ನು ಮಾಡಿಕೊಂಡಿದ್ದರು. ಪ್ರತಿಯೊಂದು ಪಂಗಡವೂ ಇಂಗ್ಲೀಷ್ ಅಕ್ಷರಗಳನ್ನು ತಮ್ಮ ಪ್ರತ್ಯೇಕ ಭಾಗಗಳಿಗೊಂದೊಂದನ್ನಾಗಿ ಒಂದೊಂದು ವಿಧವಾದ ಗುಂಡಿಗಳ ಮೇಲೆ ಕೆತ್ತಿಸಿ ತಮ್ಮ ಉಡುಪಿನ ಯಾವದಾದರೂ ಒಂದು ಭಾಗದಲ್ಲಿಟ್ಟುಕ್ಕೊಂಡಿರುತ್ತಿದ್ದರು. ಇವರುಗಳ ಕೆಲಸವು ಕದಿಯುವುದು ರಾಜದ್ರೋಹಕರವಾದ ಬರವಣಿಗೆಗಳನ್ನು ಬರೆಯುವುದು; ಹೊರಗೆ ಮಹಾ ಸತ್ಪುರುಷರಂತೆಯೂ, ಸಾತ್ವಿಕ ಶಿಖಾಮಣಿಗಳಂತೆಯೂ ಕಾಣಿಸಿಕೊಳ್ಳುತ್ತಲೂ, ಸುಗುಣಿಗಳೂ ದೇಶಹಿತವನ್ನೇ ವ್ರತವಾಗುಳ್ಳವರೂ ಆದ ಸಂಘಸಂಸ್ಕರಣಕರ್ತರ ಸಭೆಗೆ ಯೋಗಿ ಅಲ್ಲಿ ಮನಸ್ಸಿನಲ್ಲಿ ಏನಿಲ್ಲದಿದ್ದರೂ ಮಹಾ ತಿಳಿದವರಂತೆ ತಲೆಯನ್ನಾಡಿಸುತ್ತಲೂ, ಶಾಭಾಸ್, ವೆರಿಗುಡ್ (very good) ಇದಕ್ಕೆ ವೈದೀಕ ಮೂಢರುಗಳೇನು ಹೇಳುವರು (what can the orthodox people say to this) ಎಂದು ಕೂಗುತ್ತಲೂ, ಸಭೆಯು ಮುಗಿದಮೇಲೆ ಎಲ್ಲರಿಗಿಂತಲೂ ಗಟ್ಟಿಯಾಗಿ ಕೈ ಚಪ್ಪಾಳೆತಟ್ಟಿ, ವಯಸ್ಕರಾದ ಕನ್ಯೆಗಳನ್ನು ಲಗ್ನ ಮಾಡಿಕೊಳ್ಳುವುದಕ್ಕೆ ಒಪ್ಪುವವರು ತಮ್ಮ ನಾಮಧೇಯಗಳನ್ನು ಬರೆಯಿರೆಂದು ಹೇಳಿದರೆ ತಾವು ಮೊದಲೆಂದು ನುಗ್ಗಿ ತಮ್ಮ ಹೆಸರುಗಳನ್ನು ಬರೆಯುತ್ತಲೂ, ಸಂಘಕೂಟಗಳಿಂದು ಹೇಳಿ (Social gatherings) ತಮ್ಮಂತಹ ನೀಚರನ್ನೇ ಸೇರಿಸಿಕೊಂಡು ದ್ರಾಕ್ಷಾರಸ ಮುಂತಾದವುಗಳನ್ನು ಕುಡಿದು ಮನಸ್ಸಿಗೆ ಬಂದಹಾಗೆ ಕುಣಿಯುತ್ತಲೂ ಇರುತ್ತಿದ್ದರು. ಇವರ ವಿಷಯವನ್ನೇ ಬರೆಯುತ್ತಾ ಹೋದರೆ ಎಷ್ಟು ಪುಸ್ತಕಗಳನ್ನು ಬರೆದರೂ ಮುಗಿಯುವುದಿಲ್ಲವು.

ಈ ದಿವಸ ಮೇಲೆ ಹೇಳಿದಂಥಾ ಪಂಗಡಗಳಲ್ಲೊಂದಾದ ಎಂ(M) ಕೂಟದವರ ವಾರ್ಷಿಕ ಕೂಟವು. ಆದ್ದರಿಂದ ಇವರು ತಮ್ಮ ಕಾಳೀ ಬೀದಿಯಲ್ಲಿರುವ ತಮ್ಮ

ಸ್ನೇಹಿತರನ್ನೆಲ್ಲಾ ಮನೆಗೆ ಸಂಘಕೂಟಕ್ಕಾಗಿ (social gathering) ಕರೆದಿರುವರು. ಮಧ್ಯಾಹ್ನ ನಾಲ್ಕು ಗಂಟೆಯ ಹೊತ್ತಿಗೆ ಆ ಮನೆಯು ಅನೇಕ ಐರೋಪ್ಯರ ಟೊಪ್ಪಿಗ ಳನ್ನು ಧರಿಸಿರತಕ್ಕಂಥಾ ತರುಣರಿಂದ ತುಂಬಿಹೋಯಿತು. ಆ ತರುಣರು ಆ ಟೊಪ್ಪಿಗ ಳನ್ನು ಧರಿಸಿದ್ದರೂ ಅವರ ಮುಖವು ವಿಕಾರವಾಗಿ ಕಪ್ಪುಬಣ್ಣದಿಂದಿತ್ತೇ ವಿನಹಾ ಅವರು ಬೇರೆ ಐರೋಪ್ಯರಂತೆ ಕಂಡುಬರುತ್ತಿರಲಿಲ್ಲ. ಏನೂ ಅರಿಯದ ಹೊಸಬನೊ ಬ್ಬನು ಆ ದಿನ ಅಲ್ಲಿಗೆ ಪ್ರವೇಶಮಾಡಿದ್ದರೆ ಅಲ್ಲಿ ನೆರದಿದ್ದ ಜನಗಳೆಲ್ಲರೂ ಕ್ರಿಸ್ತಮ ತಾವಲಂಬಿಗಳಾದವರೆಂದು ಹೇಳುತ್ತಿದ್ದನು. ಏಕಂದರೆ ಎಲ್ಲರೂ ತಲೆಯ ಕೂದಲನ್ನು ವಿಧವಿಧವಾಗಿ ಕತ್ತರಿಸಿಕೊಂಡು, ಟೊಪ್ಪಿಗಳನ್ನು ಹಾಕಿಕೊಂಡು, ಬಾಯಲ್ಲಿ ಜುಟ್ಟಾ ಗಳನ್ನು ಕಚ್ಚಿಕೊಂಡು ಕಚ್ಚಿ ಕೆಚ್ಚಿ ಮಾತನಾಡುತಿದ್ದರು. ಒಬ್ಬನ ಹಣೆಯಲ್ಲಾದರೂ ಮತಸಂಬಂಧವಾದ ಗುರುತುಗಳೇ ಇರಲಿಲ್ಲ. ಕ್ರಿಸ್ತಪಾದ್ರಿಗಳು ಹಣವನ್ನೂ, ತಮ್ಮ ಸಾಮರ್ಥ್ಯವನ್ನೂ ಮತ್ತು ತಮ್ಮ ಜೀವಮಾನವನ್ನೆಲ್ಲಾ ಖರ್ಚು ಮಾಡಿದರೂ ಈಚಿಗೆ ಕ್ರಿಸ್ತಮತವನ್ನವಲಂಬಿಸತಕ್ಕವರು ಎಲ್ಲೋ ಸಾವಿರಕ್ಕೊಬ್ಬನು. ಆದರೆ ಮೇಲೆ ಕಂಡ ಹಿಂದುಗಳೂ ಅಲ್ಲದ, ಕ್ರಿಸ್ತರೂ ಅಲ್ಲದ ಜನಗಳ ಹಾಗೆ ಎಲ್ಲರೂ ಆಗುತ್ತಾ ಬಂದರೆ ಪಾದ್ರಿಗಳು ಕಷ್ಟಪಡದೇನೇ ಸ್ವಲ್ಪ ಕಾಲದಲ್ಲೇ ಅನೇಕರು ಕ್ರಿಸ್ತಮತವನ್ನವಲಂಬಿಸು ವುದನ್ನು ನೋಡಿ ಆಶ್ಚರ್ಯಪಡುವ ಕಾಲವುಬಂದೇ ಬರುವುದು. ಈ ವಿಷಯವು ಈಗ ಎಲ್ಲೆಲ್ಲಿಯೂ ನಡೆಯುತ್ತಿರುವುದನ್ನು ಘಂಟಾಘೋಷವಾಗಿ ಹೇಳಬಹುದು. ಸಂಘ ಸಂಸ್ಕರಣ ಧುರೀಣರು ಇತರ ವಿಷಯಗಳಿಗೆ ಗಮನ ಕೊಡುವುದನ್ನು ನಿಲ್ಲಿಸಿ ಅನ್ಯಾ ಯವಾಗಿ ಹಾಳಾಗುತ್ತಿರುವ ತಮ್ಮ ತರುಣರನ್ನು ಸರಿಪಡಿಸುವುದಕ್ಕೆ ಪ್ರಯತ್ನಪಟ್ಟರೆ ದೇಶಕ್ಕೆ ಎಷ್ಟು ದೊಡ್ಡ ಸಹಾಯಮಾಡಿದಂತಾಗುವುದು ?

ಮನೆಯ ಬಾಗಿಲಿನಲ್ಲಿ ಇಬ್ಬರು ತರುಣರು ನಿಂತುಕೊಂಡು ಬಂದಂಥ ಅತಿಥಿಗ ಳನ್ನೆಲ್ಲಾ ಒಳಕ್ಕೆ ಬಿಡುತ್ತಿದ್ದರು. ಪ್ರತಿಯೊಬ್ಬ ಅತಿಥಿಯೂ ತನ್ನ ಪಂಗಡದ ಗುಂಡಿ ಯನ್ನು ತೋರಿಸುತ್ತಾ ಒಳಕ್ಕೆ ಹೋಗುತ್ತಿದ್ದನು. ಸುಮಾರು ಐದೂಪರೆ ಗಂಟೆಯ ಹೊತ್ತಿಗೆ ಬಾಗಿಲು ಹಾಕಲ್ಪಟ್ಟಿತು. ಈ ವಿಷಯಗಳೆಲ್ಲಾ ನಡೆದು ಹದಿನೈದು ವರ್ಷಗ ಳಾದ್ದರಿಂದ ಆಗ ಪೊಲೀಸಿನವರ ಕಾಟವೇನೂ ಇರಲಿಲ್ಲ. ಆಗ ಯಾರು ಬೇಕಾದರೂ ಯಾವ ಬಗೆಯ ಮಾಟಿಂಗುಗಳನ್ನಾದರೂ ಹೂಡಬಹುದಾಗಿತ್ತು. ಈಗಿನ ಕಾಲವಾಗಿ ದ್ದರೆ ತಕ್ಷಣವೇ ದಂಡಪಾಣಿಯಾದ ಪೊಲೀಸಿನವನು ಬಂದು ಗುಂಪನ್ನು ಚದರಿಸಿ ಮುಖ್ಯಸ್ಥರನ್ನು ಅನುಮಾನಾಸ್ಪದರೆಂದು ಸೆರೆ ಹಿಡಿಯುತ್ತಿದ್ದನು. ಮನೆಯೊಳಗೆಲ್ಲಾ ಅನೇಕ ಮೇಜುಗಳೂ, ವೇತ್ರಾಸನಗಳೂ ಇಡಲ್ಪಟ್ಟಿದ್ದವು. ಅಲ್ಲಲ್ಲಿ ಗುಂಡಾದ

ಮೇಜು (Round Tables) ಗಳ ಮೇಲೆ ಬ್ರಾಂದಿ, ವೈನು ಮುಂತಾದವುಗಳೂ, ಗಾಜಿನ ಬಟ್ಟಲುಗಳೂ ಇಡಲ್ಪಟ್ಟಿದ್ದವು. ಮನೆಯ ತುಂಬ ಹೊಗೆಯ ಬತ್ತಿಯ ಧೂಮ್ರವು ತುಂಬಿಕೊಂಡಿದ್ದಿತು. ಒಂದೊಂದು ಕಡೆಯಲ್ಲಿ ಐದಾರು ಜನಗಳಾಗಿ ಗುಂಪುಕೂಡಿಕೊಂಡು ಇಸ್ಪೀಟುಗಳನ್ನಾಡುತ್ತಲೂ, ಇಲ್ಲವೆ ನಾನಾವಿಧವಾದ ಜೂಜಾಟಗಳನ್ನಾಡುತ್ತಲೂ ಇದ್ದರು. ಜೂಜಾಡುತ್ತಿದ್ದ ಜನಗಳ ಕೂಗೂ, ಅವರು ಎಸೆದಾಡುತ್ತಿದ್ದ ಹಣಗಳ ಧಣ್ ಧಣ್ ನಾದವೂ, ಮದ್ಯಪಾಯಿಗಳ ' ಎಲ್ಲಿ ಆ ಓಲ್ಡ್ ವೈನ್ (old wine) ಕೊಡು, ಈ ಬಟ್ಟಲಿಗೆ ಇನ್ನಿಷ್ಟುಹಾಕು'' ಎಂಬ ಆರ್ಭಟವೂ, ಮತ್ತೆ ಕೆಲವರ, ವೈದೀಕರನ್ನು ಹೇಳನಮಾಡತಕ್ಕಂಥಾ ನಿಂದನಾ ವಾಕ್ಯಗಳೂ ಕೇಳಿಬಂದು ಆ ಮನೆಯು ಮದ್ಯಪಾಯಿಗಳೂ ಮತ್ತು ಸೋಮಾರಿಗಳೂ ಆದವರ ದೊಡ್ಡಗುಹೆಯಂತೆ ಕಂಡುಬರುತ್ತಿತ್ತು. ಇವರನ್ನೆಲ್ಲಾ ಬಿಟ್ಟು ಒಬ್ಬ ಯೌವನಸ್ಥನು ಸ್ವಲ್ಪದೂರದಲ್ಲೇ ಇದ್ದ ಒಂದು ಆಸನದಮೇಲೆ ಕುಳಿತುಕೊಂಡು ತಲೆಯನ್ನು ಬಗ್ಗಿಸಿಕೊಂಡು ಏನೇನೋ ಯೋಚಿಸುತ್ತಿದ್ದನು. ಅವನು ಸುಮಾರು ಮೂವತ್ತೈದುವರ್ಷನಯಸ್ಸಿನಂತೆ ಕಾಣಬಂದನು. ಆಗಾಗ್ಗೆ ಯಾರಾದರೂ ಬಂದು ಕರೆದರೆ ಆಮೇಲೆ ಬರುವೆನೆಂದು ಹೇಳುತ್ತಿದ್ದನು. ಅವನು ಯಾರೆಂಬುದಾಗಲೀ, ಯಾಕೆ ಹಾಗೆ ಕುಳಿತಿರುತ್ತಾನೆಂಬುದಾಗಲೀ ಯಾರಿಗೂ ತಿಳಿಯದು.

ಸುಮಾರು ರಾತ್ರಿ ಏಳುಬರೆಗಂಟೆಯ ಹೊತ್ತಿಗೆ ಆಟಗಳೆಲ್ಲವೂ ಮುಗಿದವು. ಆನೇಕರು ತಮ್ಮ ಹಣವೆಲ್ಲಾ ಹೋಯಿತೆಂದು ಗೊಣಗುಟ್ಟಿಕೊಳ್ಳುತ್ತಿದ್ದರು. ಮದ್ಯವೂ ಮುಗಿದುಹೋಗಿದ್ದಿತು. ಹೊಸಸುದ್ಯವು ತರಲ್ಪಟ್ಟಿತು. ಎಲ್ಲರೂ ಮದ್ಯವನ್ನು ಪಾನ ಮಾಡಿದರು. ವ್ಯಸನಾಕ್ರಾಂತನಾದ ಮನುಷ್ಯನೂ ಅಲ್ಲಿದ್ದವನೊಬ್ಬನ ಬಲವಂತದಿಂದ ಎರಡು ಮೂರು ಬಟ್ಟಲು ದ್ರಾಕ್ಷಾರಸವನ್ನು ಕುಡಿದನು. ಕ್ಷಣಮಾತ್ರದಲ್ಲೇ ಗುಂಡಾದ ಮೇಜುಗಳೆಲ್ಲಾ ತೆಗೆಯಲ್ಪಟ್ಟು ಕುರ್ಚಿಗಳು ಸಾಲುಸಾಲಾಗಿ ಇಡಲ್ಪಟ್ಟವು. ಒಂದುಭಾಗದಲ್ಲಿ ಒಂದುಎತ್ತರವಾದಸ್ಥಳದಲ್ಲಿ ಮೂರುಕುರ್ಚಿಗಳಿದ್ದವು. ಎಲ್ಲರೂ ಕುರ್ಚಿಗಳಮೇಲೆ ಕುಳಿತುಕೊಂಡರು. ಆಗ ಒಬ್ಬ ತರುಣನೆದ್ದು ಈ ದಿವಸದ ಸಂತೋಷ ಕೂಟಕ್ಕೆ ನಮ್ಮ ಸಹೋದರರಾದ ಬಿ. (B) ಕೂಟದ ಮುಖ್ಯಸ್ಥರನ್ನು ಅಧಿಪತಿಗಳಾಗಿರಬೇಕೆಂದು ನಾನು ಕೋರುತ್ತೇನೆ ಎನಲು ಎಲ್ಲರೂ ಹಾಗೇ ಆಗಬೇಕೆಂದು ಒಪ್ಪಿದರು. ಆಗ ಸುಮಾರು ಮುನ್ನತ್ತುವಯಸ್ಸಿನ ಮನುಷ್ಯನೊಬ್ಬನು ಎದ್ದುಹೋಗಿ ಎತ್ತರವಾದ ಸ್ಥಳದಲ್ಲಿ ಕುಳಿತನು. ಕೂಡಲೇ ಈ ಯಂ (M) ಕೂಟದ ಮುಖ್ಯಸ್ಥನು ವ್ಯಸನಾಕ್ರಾಂತನಾಗಿ ಕುಳಿತಿದ್ದ ಮನುಷ್ಯನನ್ನೂ ಸಂಗಡ ಕರೆದು

ಕೊಂಡು ಉಳಿದಿದ್ದ ಕುರ್ಚಿಗಳಲ್ಲಿ ಅವರನ್ನೂ ಕೂರಿಸಿ ತಾನೂ ಕುಳಿತನು. ಆಗ್ರಾಸ ನಾಧಿಪತಿಯು 'ಎಂ' ಕೂಟದ ಮುಖ್ಯಸ್ಥನನ್ನು ಕಳೆದ ವರ್ಷದ ರಿಪೋರ್ಟನ್ನು ಓದು ವಹಾಗೆ ಕೇಳಿದನು. ಅವನು ತನ್ನಾಸನದಿಂದ ಎದ್ದುನಿಂತು ಈ ರೀತಿಯಾಗಿ ಹೇಳತೊ ಡಗಿದನು.

ಸಹೋದರರೇ!

ನಮ್ಮ ಸಂಘವು ಸ್ಥಾಪಿಸಲ್ಪಟ್ಟು ಇಂದಿಗೆ ಐದುವರ್ಷಗಳಾದುವು. ಈ ಐದು ವರ್ಷಗಳಲ್ಲಿ ನಾವು ಎಷ್ಟೋ ಕೆಲಸವನ್ನು ಮಾಡಿರುವೆವು. ಮುಖ್ಯವಾಗಿ ಹೋದ ವರ್ಷದಲ್ಲಿ ಅನೇಕ ಕೆಲಸಗಳನ್ನು ಮಾಡಿರುವೆವು. ಅವುಗಳಲ್ಲಿ ಮುಖ್ಯವಾದವುಗಳಾ ವುವೆಂದರೆ:—ನಮ್ಮ ಸಂಘದಲ್ಲಿ ನಾಲ್ವರು, ವಿಧವೆಗಳನ್ನು ವಿವಾಹಮಾಡಿಕೊಂಡರು. ದೇಶೋನ್ನತಿಗಾಗಿ ಯಾವ ಸಹಾಯವನ್ನೂ ಮಾಡದೇ ಇದ್ದ ಶುದ್ಧಲೋಭಿಯಾದ ಚರ್ಮದ ವ್ಯಾಪಾರಿಯೊಬ್ಬನನ್ನು ಸೂರೆಗೊಂಡೆವು. ನಮ್ಮವರಿಗೆ ರಿನಾಲ್ವರುಗಳು ಸಾಲದೇ ಇದ್ದದ್ದರಿಂದ ಒಂದು ಕಂಪನಿಯನ್ನು ಲೂಟಿಮಾಡಿ ಐವತ್ತು ರಿನಾಲ್ವರುಗ ಳನ್ನೂ ಅನೇಕ ತೋಟಾಗಳನ್ನೂ ಕದ್ದು ತಂದೆವು. ನಮ್ಮ ಮೆಂಬರ್‌ಗಳು ಇಪ್ಪತ್ತರಿಂದ ಇಪ್ಪತ್ತೈದಕ್ಕೇರಲ್ಪಟ್ಟರು. ಖರ್ಚುಕಳೆದು ಈಗ ೧೦ಸಾವಿರ ರೂಪಾಯಿ ಉಳಿದಿರುವುದು. ಇದೋ ನನ್ನ ಪಕ್ಕದಲ್ಲಿ ಕುಳಿತಿರುವವರೊಬ್ಬರು ನಮ್ಮ ಸಂಘಕ್ಕೆ ಹೊಸಬರು. ಇವರು ಮಹದ್ಧೈಶ್ವರ್ಯ ಸಂಪನ್ನರು. ಇವರು ಸ್ವಲ್ಪ ಕಾಲದಲ್ಲೇ ನನ್ನ ಮಗಳನ್ನು ವಿವಾಹಮಾಡಿ ಕೊಳ್ಳುವುದಾಗಿ ಒಪ್ಪಿರುತ್ತಾರೆ. ಅವರ ಈಗಿರುವ ಆಕಾರವು ನಿಜವಾದದ್ದಲ್ಲ. ಇನ್ನೂ ಸ್ವಲ್ಪಕಾಲ ಹೀಗಿದ್ದು ಆ ಮೇಲೆ ತಮ್ಮ ನಿಜರೂಪವನ್ನು ಧರಿಸುವರು. ಮುಂದೆ ನಮ್ಮ ಸಂಘವನ್ನು ಕಾಪಾಡುವುದಾಗಿ ವಾಗ್ದಾನಮಾಡಿರುತ್ತಾರೆ. ಅವರು ಯಾರೆಂಬುದಾಗಲೀ, ಅವರ ಹೆಸರೇನೆಂಬುದಾಗಲೀ ಇನ್ನೂ ಸ್ವಲ್ಪಕಾಲ ಯಾರಿಗೂ ತಿಳಿಯದೇ ಇರುವುದೇ ಒಳ್ಳೇದು. ಈಗ ನಿಮ್ಮನ್ನು ನಾನು ಒಂದು ಪ್ರಶ್ನೆಯನ್ನು ಕೇಳಬೇಕೆಂದಿರುತ್ತೇನೆ. ಅದಕ್ಕೆ ದಯವಿಟ್ಟು ಸರಿಯಾದ ಉತ್ತರವನ್ನು ಕೊಡಿರಿ. ಒಂದು ಮದುವೆಯು ಮಾಂಗಲ್ಯಸೂತ್ರಧಾರಣಕ್ಕೆ ಮುಂಚೆ ನಿಂತು ಹೋದರೆ ಆಗ ಆ ಹುಡುಗಿಯು ವಿವಾಹಿತಳೇ, ಅಧವಾ, ಅವಿವಾಹಿತಳೇ? ಒಂದುವೇಳೆ ಹಾಗೆ ವಿವಾಹ ಭಂಗವಾದ ಮೇಲೆ ಆ ಕನ್ಯೆಯು ಋತುವಾದರೆ ಏನುಮಾಡುವುದು?

ಆಗ ಅನೇಕರು ಎದ್ದುನಿಂತು ಹಾಗೆ ನಿಂತುಹೋದ ಮದುವೆಯು ಶಾಸ್ತ್ರಗಳಲ್ಲಿ ವಿವರಿಸಿರುವ ಹಾಗೂ ಮಾಂಗಲ್ಯಸೂತ್ರ ಕಟ್ಟಿದೇ ಇದ್ದದ್ದರಿಂದ ವಧೂವರರಿಗೇನೂ ಸಂಬಂಧವೇ ಇಲ್ಲವೆಂತಲೂ ಹಾಗೆ ಕನ್ಯೆಯು ಋತುವಾದರೆ ಅವಳು ಹಿಂಡುಗಳ

ಗೊಡ್ಡು ಶಾಸ್ತ್ರದಂತೆ ಬಹಿಷ್ಕಾರಕ್ಕೆ ಯೋಗ್ಯಳೆಂದೂ ಆದರೆ ತಾವೆಲ್ಲರೂ ಔನ್ನತ್ಯವನ್ನು (Reform) ಪಡೆದವರಾದ್ದರಿಂದ ಹುಡುಗಿಯು ಋತುವಾದರೂ ಲಕ್ಷ್ಯಮಾಡುವುದಿಲ್ಲವೆಂತಲೂ ತಿಳಿಸಿದರು.

ಆಗ ಮುಖ್ಯಸ್ಥನು "ಸರಿ, ನೀವು ಹೇಳಿದ ರೀತಿಯೇ ನಡೆದುಕೊಳ್ಳೋಣ" ಎಂದು ತನ್ನ ಬಳಿ ಕುಳಿತಿದ್ದವನ ಮುಖವನ್ನು ನೋಡಿಬಿಟ್ಟು ಪುನಹಾ ಹೇಳತೊಡಗಿದನು. "ಸಹೋದರರೇ, ನಾನು ಹೇಳಿದ ರೀತಿ ಒಂದು ವಿವಾಹವು ನಿಂತುಹೋಯಿತು. ವರನ ತಂದೆಯೂ ವಧುವಿನ ತಂದೆಯೂ ವಿವಾಹವು ಸಂಪೂರ್ಣವಾಗಿ ನೆರವೇರಿದ ಹಾಗೆಯೇ ತೀರ್ಮಾನಿಸಿರುತ್ತಾರೆ. ನಿಮ್ಮ ಅಭಿಪ್ರಾಯವನ್ನು ವರನ ತಂದೆಗೆ ತಿಳಿಯಪಡಿಸಬೇಕು. ನನ್ನ ಪುತ್ರಿಯು ಋತುಮತಿಯಾದವಳು. ಅವಳನ್ನು ಇವರಿಗೆ ಕೊಡುತ್ತೇನೆ. ನೀವೆಲ್ಲರೂ ಬಂದು ಈ ಕೂಟವನ್ನು ಸಾಂಗವಾಗಿ ನೆರವೇರುವ ಹಾಗೆ ಮಾಡಿದ್ದಕ್ಕೆ ನಿಮ್ಮನ್ನೆಲ್ಲಾ ವಂದಿಸುತ್ತೇನೆ. ಈ ಹೊಸ ಮೆಂಬರಿನ ವಿಷಯವಾಗಿ ಜಯವನ್ನು ಪಾಡಿ ಅವನ ಆರೋಗ್ಯಲಾಭಕ್ಕಾಗಿ ಎಲ್ಲರೂ ಮದ್ಯವನ್ನು ಕುಡಿಯೋಣ.

ಕ್ಷಣಮಾತ್ರದಲ್ಲೇ ಎಲ್ಲರ ಕೈಗೂ ಮದ್ಯ ತುಂಬಿದ ಬಟ್ಟಲುಗಳು ಬಂದವು. ಎಲ್ಲರೂ ಜಯನಾದವನ್ನು ಮಾಡುತ್ತಾ ಮದ್ಯವನ್ನು ಪಾನಮಾಡಿದರು. ಅಗ್ರಾಸನಾಧಿಪತಿಯು ಎದ್ದು ಎಲ್ಲರಿಗೂ ಆರೋಗ್ಯವೂ ಲಾಭವೂ ಉಂಟಾಗಲೆಂದೂ ಎಲ್ಲರೂ ಜಾಗರೂಕರಾಗಿರಬೇಕೆಂದೂ ಹೇಳಿ ಸಭೆಯನ್ನು ಮುಗಿಸಿದನು. ಎಲ್ಲರೂ ಕೈ ಜಪ್ಪಾಳೆ ತಟ್ಟುತ್ತ ವ್ಯಸನಾಕ್ರಾಂತನಾದ ಹೊಸ ಮೆಂಬರನ ಕೈ ಹಿಡಿದು ಆಡಿಸುತ್ತಾ ಎಂ (M) ಸಂಘದ ಅಧಿಕಾರಿಯಿಂದ ಅಪ್ಪಣೆಯನ್ನು ಪಡೆದು ಒಬ್ಬೊಬ್ಬರಾಗಿ ಹೊರಕ್ಕೆ ಹೊರಟು ಬಂದರು. ಸ್ವಲ್ಪಕಾಲದಲ್ಲೆ ಆ ಸೋಮಾರಿಗಳ ಗುಹೆಯಲ್ಲಿ ಐದಾರು ಜನಗಳು ವಿನಾ ಮತ್ತಾರೂ ಇಲ್ಲದ ಹಾಗಾಯಿತು.

ಆರನೇ ಅಧ್ಯಾಯ.

(ಏಳುಬಣ್ಣದ ಕರವಸ್ತ್ರ.)

ಭಾಸ್ಕರನು ಕಲ್ಕತ್ತಾ ನಗರವನ್ನು ತಲಪಿ ಗೋವಿಂದನ ಮನೆಯನ್ನು ತಲಪಿದನೆಂದು ಹಿಂದೆಯೇ ತಿಳಿಸಿದ್ದೇವಷ್ಟೆ. ಅಲ್ಲಿ ಅವನು ಗೋವಿಂದನಿಗೆ ಎಲ್ಲಾ ವಿಷಯಗಳನ್ನೂ ತಿಳಿಸಿ ತನ್ನನ್ನು ಇನ್ನು ಮುಂದೆ ಸತ್ಯಜಂದನೆಂದು ಕರೆಯಬೇಕೆಂದು ಹೇಳಿದನು.

ಮಾರನೇ ದಿವಸವೇ ಬೊ ಬಜಾರ್ ಬೀದಿಗೆ ಹೋಗಿ ಅಲ್ಲಿನ 29 ನೇ ನಂಬರ್ ಮನೆಯ ಯಜಮಾನನನ್ನು ಹುಡುಕಿಕೊಂಡು ಹೋದನು. ಆವನನ್ನು ಕಂಡುಹಿಡಿದು ಆವನನ್ನು ಮಧುಸೂದನನ ವಿಷಯವೇನಾದರೂ ಗೊತ್ತೋ ಎಂದು ಕೇಳಿದನು.

ಯಜಮಾನ:—ಮಧುಸೂದನನೆಂಬುವನು ಈಗ ನಮ್ಮ ಮನೆಯಲ್ಲಿ ಇಲ್ಲ.

ಭಾಸ್ಕರ:—ಈಗ್ಗೆ ಎರಡು ವರ್ಷಗಳ ಹಿಂದೆ ಇಲ್ಲಿ ಇದ್ದನು. ಆವನನ್ನೇನಾದರೂ ಈಚಿಗೆ ನೋಡಿದ್ದಿರಾ ?

ಯಜಮಾನ:—ಆಪಾ! ಈಗ ಚ್ಲಾಪಕಕ್ಕೆ ಬಂದಿತು. ಈಗ ಎರಡು ವರ್ಷಗಳಲ್ಲಿ ಮಧುಸೂದನನೆಂಬೊಬ್ಬ ಜಮಿಾನ್ದಾರನಿದ್ದನು. ಆವನು ನನ್ನ ಮನೆಯನ್ನು ಬಿಟ್ಟ ಮೇಲೆ ಏನಾದನೋ ನನಗೆ ಗೊತ್ತಿಲ್ಲ.

ಭಾಸ್ಕರ:—ಆವನ ಸಂಗಡ ಅನೇಕ ಸ್ನೇಹಿತರಿದ್ದರು. ಆವರ ವಿಷಯವೇನಾದರೂ ನಿಮಗೆ ಗೊತ್ತಿದೆಯೋ?

ಯಜಮಾನ:—ಸ್ವಾಮಿಾ. ನನಗಾವುದೂ ತಿಳಿಯದು. ಆ ಮಧುಸೂದನನೆಂಬುವನು ಹೊರಟು ಹೋದಮೇಲೆ ಆವರೆಲ್ಲರೂ ಹೊರಟು ಹೋದರು. ಅಷ್ಟೇ ನನಗೆ ಗೊತ್ತಿರುವುದು.

ಭಾಸ್ಕರನು ಇನ್ನು ಇವನನ್ನು ಕೇಳಿ ಪ್ರಯೋಜನವಿಲ್ಲವೆಂದು ಆವನಿಂದಪ್ಪಣೆಯನ್ನು ಪಡೆದುಕೊಂಡು ಕಾಳೀಬೀದಿಯಲ್ಲಿದ್ದ ವೈದೀಕರ ಹೋಟಲಿಗೆ ಹೋದನು. ಆ ಹೋಟಲು ಮೈಸೂರು ದೇಶಸ್ಥನಾದ ಸುಬ್ರಹ್ಮಣ್ಯಶಾಸ್ತ್ರಿಯೆಂಬುವನಿಂದ ನಡೆಸಲ್ಪಡುತ್ತಿತ್ತು. ಅಲ್ಲಿ ವೈದೀಕರಿಗೆ ಮಾತ್ರ ಭೋಜನವನ್ನು ಹಾಕುತ್ತಿದ್ದರು. ಪ್ರತಿಯೊಬ್ಬನೂ ಸ್ನಾನಾದಿಗಳನ್ನೂ ಅಲ್ಲೇ ಮಾಡಿಕೊಂಡು ಜಪ ತಪಗಳನ್ನೂ ಮಾಡಿ ಅಲ್ಲಿದ್ದ ವಿಗ್ರಹಗಳ ಪೂಜೆಯನ್ನು ನೋಡಿಬಿಟ್ಟು ಅಭಿಷೇಕ ಜಲವನ್ನು ಸ್ವೀಕರಿಸಿ ಸಾಲುಸಾಲಾಗಿ ಹಾಕಿದ್ದ ಎಲೆಗಳ ಬಳಿ ಕುಳಿತು ಭೋಜನಮಾಡುತ್ತಿದ್ದರು. ನೆಲವೆಲ್ಲಾ ಜನ್ನಾಗಿ ಸಾರಿಸಲ್ಪಟ್ಟು ರಂಗವಲ್ಲಿಗಳಿಂದಲಂಕರಿಸಲ್ಪಟ್ಟಿರುತ್ತಿದ್ದವು. ಅಡಿಗೆ ಮುಂತಾದವೆಲ್ಲವೂ ವಯಸ್ಕರಾದ ಮತ್ತು ಆಚಾರ ಸಂಪನ್ನರಾದ ವಿಧವೆಗಳಿಂದ ನಡೆಯುತ್ತಿದ್ದವು. ಬಡಿಸುವವರೂ ಆವರೇ ಆಗಿದ್ದರು. ಇತರ ಹೋಟಲುಗಳಹಾಗೆ ಅಲ್ಲಿ ಯಾರೂ ತಮ್ಮ ಅಂಗಿ ಮುಂತಾದವುಗಳೊಡನೆ ಕುಳಿತು ಭೋಜನಮಾಡುವುದಕ್ಕೆ ಆಗುತ್ತಿರಲಿಲ್ಲ. ಮಧ್ಯದಲ್ಲಿ ಯಾರೂ ಎದ್ದು ಹೊಗಕೂಡದು. ಭೋಜನವು ನಡೆಯುತ್ತಿರುವಾಗ ಇಬ್ಬರು ಬ್ರಾಹ್ಮಣರು ವೇದ ಮಂತ್ರಗಳನ್ನು ಹೇಳುತ್ತಿದ್ದರು. ಹೆಚ್ಚಿನ

ಮಾತೇನು? ಆಚಾರ ರುಚಿ ಇವುಗಳಿಗೆ ಆ ಭೋಜನಶಾಲೆಯು ತವರು ಮನೆಯಾ ಗಿತ್ತು. ಇತರ ಹೋಟಲುಗಳಿಗಿಂತಲೂ ಇಲ್ಲಿನ ದರವು ಸ್ವಲ್ಪ ಚಾಸ್ತಿಯಾಗಿತ್ತು. ಆದರೂ ಇಲ್ಲಿಗೆ ಎಲ್ಲಾ ಹೋಟಲಿಗಿಂತಲೂ ಹೆಚ್ಚಾಗಿ ಜನಗಳು ಬರುತ್ತಿದ್ದರು.

ಅನೇಕರು ಹೋಟಲುಗಳಲ್ಲಿರುವುದರಿಂದ ಹಾಳಾಗಿ ಹೋಗಿ ದುರ್ಮಾರ್ಗಿಗಳಾಗಿ ರುವರೆಂಬ ವಿಷಯವು ಎಲ್ಲರಿಗೂ ತಿಳಿದೇ ಇದೆ. ಹೋಟಲುಗಳಲ್ಲಿ ಯಾವ ಆಚಾ ರವೂ ಇಲ್ಲದೆ ಮನಸ್ಸಿಗೆ ಬಂದಹಾಗೆ ನಡೆಯುವುದರಿಂದ ಕೆಟ್ಟ ನಡತೆಗಳಿಗೆ ತವರು ಮನೆಗಳಾಗಿವೆ. ಆಚಾರ ಸಂಪನ್ನರಾದವರು ವಿಧಿಯಿಲ್ಲದೆ ಹೋಟಲುಗಳಿಗೆ ಸೇರಿ ಸ್ವಲ್ಪಕಾಲದಲ್ಲೇ ಆಚಾರಾದಿಗಳನ್ನು ಮರೆತು ನಾಸ್ತಿಕರಾಗುತ್ತಾರೆ. ನಾವು ಮೇಲೆ ವಿವರಿಸಿರುವ ಕಲ್ಕತ್ತಾ ನಗರದ ವೈದೀಕ ಹೋಟಲಿನ ನೇಮನಿಷ್ಠೆಗಳಲ್ಲಿ ಹತ್ತರ ಲ್ಲೊಂದು ಭಾಗವು ಇತರ ಹೋಟಲುಗಳಲ್ಲಿ ನಡದರೂ ಸಾಕಾ ಸಾಕಾಗಿದೆ. ಅನೇಕರು ಅಲ್ಲಿಗೆ ಸೇರಿ ತಮ್ಮ ಆಚಾರಾದಿಗಳನ್ನುಳಿಸಿಕೊಳ್ಳುವರು.

ಭಾಸ್ಕರನು ಮೇಲೆ ಕಂಡ ವೈದಿಕರ ಹೋಟಲಿಗೆ ಹೋಗಿ ಅಲ್ಲಿನ ಯಜಮಾನ ನೊಡನೆ ಸ್ವಲ್ಪಹೊತ್ತು ಮಾತನಾಡಲಪೇಕ್ಷಿಸಿದನು. ಲೌಕಿಕರನ್ನು ನೋಡುವುದಕ್ಕಾ ಗಿಯೇ ಪ್ರತ್ಯೇಕವಾಗಿ ನಿರ್ಮಾಣವಾಗಿದ್ದ ಕೊಠಡಿಗೆ ಭಾಸ್ಕರನು ಹೋಗಿ ಕಾದಿರಲು ಸ್ವಲ್ಪ ಹೊತ್ತಾದ ಮೇಲೆ ಶುಭ್ರವಾದ ವಸ್ತ್ರಗಳನ್ನು ಧರಿಸಿ ವಿಭೂತಿಯನ್ನು ಧರಿಸಿದ್ದ ಬ್ರಾಹ್ಮಣನೊಬ್ಬನು ಬಂದು ತನ್ನನ್ನು ಕರೆಯ ಕಳುಹಲು ಕಾರಣವೇನೆಂದು ಕೇಳಿ ದನು. ತನ್ನ ದೇಶದವನಾದ ಆ ಬ್ರಾಹ್ಮಣನು ತನ್ನನ್ನು ಸ್ವಭಾಷೆಯಲ್ಲಿ ಮಾತನಾಡಿ ಸಲು ಭಾಸ್ಕರನು ಸಂತೋಷಪಟ್ಟವನಾಗಿ ಅವನಿಗೆ ವಂದಿಸಿ, ಅಯ್ಯಾ ತಮ್ಮ ಗೃಹ ದಲ್ಲಿ ಈಗೆರಡು ವರ್ಷಗಳಿಂದೆ ಭೋಜನಮಾಡುತ್ತಿದ್ದ ಮಧುಸೂದನನೆಂಬುವನನ್ನು ಬಲ್ಲಿರಾ? ''

ಬ್ರಾಹ್ಮಣ:—ಚೆನ್ನಾಗಿ ಬಲ್ಲೆನು. ಅವನಸಂಗಡ ಅವನ ಸಹಪಾಠಿಗಳಾದವರು ಅನೇಕರು ಬರುತ್ತಿದ್ದರು. ಅವರಿಗೆಲ್ಲಾ ಅವನೇ ದುಡ್ಡುಕೊಡುತ್ತಿದ್ದನು. ನಾನು ಅಲ್ಲಲ್ಲಿ ಜನಗಳ ಆಚಾರಾದಿಗಳನ್ನು ತಿಳಿದುಕೊಳ್ಳುವುದಕ್ಕಾಗಿ ಗೂಢಚಾರರನ್ನಿಟ್ಟಿರುವೆನು. ಒಂದು ದಿವಸ ನನ್ನ ಗೂಢಚಾರರಲ್ಲೊಬ್ಬನು, ಮಧುಸೂದನನ ಸ್ನೇಹಿತನೊಬ್ಬನು ರಾತ್ರೀ ಕಾಲದಲ್ಲಿ ಇಲ್ಲೇ ಸಮೀಪದಲ್ಲಿರುವ ಮದ್ಯದಂಗಡಿಯಿಂದ ಹೊರಕ್ಕೆ ಬರುವುದನ್ನು ನೋಡಿ ನನಗೆ ತಿಳಿಸಿದನು. ನಾನು ಆ ವಿಷಯವನ್ನು ಸರಿಯಾಗಿ ವಿಚಾರಿಸಲು ಅವನು ಮದ್ಯಪಾಯಿಯೆಂದು ತಿಳಿಯಬಂದಿತು. ಅವನನ್ನು ಇಲ್ಲಿಗೆ ಇನ್ನು ಮುಂದೆ ಬರಕೂಡ ದೆಂದು ಕಟ್ಟಪ್ಪಣೆಮಾಡಿದೆನು. ಮಧುಸೂದನನು ಅವನ ಪರವಾಗಿ ಮಾತನಾಡಿದನು. ನಾನು

ಅದನ್ನು ಕೇಳಲೇಹೋಗಲು ಮಾರನೇ ದಿವಸದಿಂದ ಮಧುಸೂದನನೂ ಅವನ ಸ್ನೇಹಿತರೂ ಇಲ್ಲಿಗೆ ಬರುವುದನ್ನೇ ನಿಲ್ಲಿಸಿಬಿಟ್ಟರು. ಆ ಮೇಲೆ ಅವರೆಲ್ಲಾ ಏನಾದರೋ ನನಗೆ ತಿಳಿಯದು. ಆದರೆ ಅವರಲ್ಲಿ ಕೆಲವರು ಈಗಲೂ ಅಲ್ಲೋ ಅಲ್ಲಿ ಕಾಣುವ ಮದ್ಯದಂಗಡಿಗೆ ರಾತ್ರೀ ಕಾಲದಲ್ಲಿ ಬರುತ್ತಾರೆಂದು ಕೇಳಿ ಬಲ್ಲೆನು.

ಭಾಸ್ಕರ:—ನಾನು ಇಷ್ಟೇ ತಿಳಿದುಕೊಳ್ಳಬೇಕಾಗಿದ್ದದ್ದು ಎಂದು ಯೋಚಿಸಿ ನಾನು ಹೋಗಿ ಬರುವೆನು ಎಂದು ಆತನ ಆಪ್ಪಣೆಪಡೆದು ಹೊರಟು ಹೋದನು.

ಭಾಸ್ಕರನು ನೆಟ್ಟಗೆ ಮನೆಗೆ ಬಂದು ಗೋವಿಂದಸನ್ನು ಒಬ್ಬ ಕುಡುಕನ ಉಡುಪನ್ನು ತರುವಂತೆ ಕೇಳಿಕೊಂಡನು. ಅದರಂತೆ ಮಾರನೇ ದಿವಸ ಗೋವಿಂದನು ಒಂದು ಹಳೆಯ ಉಡುಪನ್ನು ತಂದು ಕೊಟ್ಟನು. ಭಾಸ್ಕರನು ತನ್ನ ರೂಪವನ್ನು ಬದಲಾಯಿಸಿಕೊಂಡು ಉದ್ದವಾದ ಕೃತಕದಾಡಿಗಳನ್ನೂ ಮೀಶೆಗಳನ್ನೂ ಕಟ್ಟಿಕೊಂಡು ಮುಖಕ್ಕೆಲ್ಲಾ ಯಾವದೋ ಒಂದು ವಿಧವಾದ ಬಣ್ಣವನ್ನು ಬಳಿದು ಕೊಳ್ಳಲು ಮುಖವು ಘೋರವಾಗಿ ಕಾಣುತ್ತಾ ನೋಡುವುದಕ್ಕೆ ತಕ್ಕನ ಮುಖದಂತೆ ಕಾಣುವಂತೆಮಾಡಿಕೊಂಡು ಗೋವಿಂದನು ತಂದುಕೊಟ್ಟ ಉಡುಪನ್ನು ಧರಿಸಿದನು. ಆಗ ಅವನನ್ನು ನೋಡಿದ್ದೇ ಆದರೆ ಯಾರೇ ಆಗಲೀ ಅವನನ್ನು ಒಬ್ಬ ಕಳ್ಳನೆಂದು ಹೇಳುತ್ತಿದ್ದರು. ಸಾಯಂಕಾಲ ಏಳುಘಂಟೆಯವರುಗೂ ಕಾದಿದ್ದು ಆ ಮೇಲೆ ಇನ್ನೂರು ಮುನ್ನೂರು ರೂಪಾಯಿಗಳನ್ನು ತೆಗೆದುಕೊಂಡು ತನ್ನ ಒಳಜೋಬಿನಲ್ಲಿ ಭದ್ರಪಡಿಸಿಕೊಂಡು ಎರಡು ರಿವಾಲ್ವರುಗಳನ್ನೂ ಒಳಗಿಟ್ಟುಕೊಂಡು ಹೊರಕ್ಕೆ ಹೊರಟು ನೆಟ್ಟಗೆ ಕಾಳೀಬೀದಿಗೆ ಹೋದನು. ಅಲ್ಲಿಗೆ ಹೋಗುವಹೊತ್ತಿಗೆ ಎಂಟುಗಂಟೆಯ ಸಮಯವಾಗಿದ್ದಿತು. ಅಲ್ಲಿಂದ ಭಾಸ್ಕರನು ಕೂಗಾಡುತ್ತಲೂ ಕುಣಿಯುತ್ತಲೂ, ಹಾಡುತ್ತಲೂ, ಬಾಯಿಗೆ ಬಂದಹಾಗೆಲ್ಲಾ ಮಾತನಾಡುತ್ತಲೂ ಸಂಪೂರ್ಣವಾಗಿ ಕುಡಿದವನಂತೆ ನಟಿಸುತ್ತಾ ಅಲ್ಲಲ್ಲಿ ಬಿದ್ದೇಳುತ್ತಾ ಕೊನೆಗೆ ಆ ಬೀದಿಯಲ್ಲಿದ್ದ ಮದ್ಯದಂಗಡಿಯನ್ನು ಪ್ರವೇಶ ಮಾಡಿದನು. ಮದ್ಯಪಾಯಿಗಳಿಗಾಗಿಯೇ ಕಾದಿರತಕ್ಕಂಥಾ ಅಲ್ಲಿಯ ಜನಗಳು ಇವನನ್ನು ಎದುರುಗೊಂಡು ಬಂದು ಒಳಕ್ಕೆ ಕರೆದುಕೊಂಡು ಹೋದರು.

ಸಂಘಸಂಸ್ಕರಣ ಕರ್ತರೂ ಇತರರೂ ಸೇರಿ ಬಾಲ್ಯ ವಿವಾಹದಿಂದಲೂ ಮತ್ತು ಇತರ ಆಚಾರಗಳಿಂದಲೂ ಇಂಡಿಯಾ ದೇಶದ ಮರಣವು ಹೆಚ್ಚಾಗಿದೆಯೆಂದು ಅನ್ಯಾಯವಾಗಿ ಸರಿಯಾದ ಕಾರಣಗಳಿಲ್ಲದೇನೇ ಹೇಳುತ್ತಾರೆ. ಸರಿಯಾಗಿ ಯೋಚಿಸಿನೋಡುವಲ್ಲಿ ಬಾಲ್ಯ ವಿವಾಹದಿಂದ ಮರಣಗಳೇನೂ ಹೆಚ್ಚಿಲ್ಲವು. ಮದುವೆಯಾಗ ತಕ್ಕಂಥಾ ಹೆಣ್ಣೇನೂ ತನ್ನ ಗಂಡನನ್ನು ಕಚ್ಚಿಕೊಲ್ಲುವುದಕ್ಕೆ ಸರ್ಪವಲ್ಲವು. ವಿವಾಹ

ವಾದ ಕೂಡಲೇ ಗಂಡನಾದವನು ಸಾಯ ಬೇಕೆಂದು ಯಾವಶಾಸ್ತ್ರದಲ್ಲಿಯೂ, ಯಾವ ಆರೋಗ್ಯ ಸೂತ್ರಗಳಲ್ಲಿಯೂ ಹೇಳಿಲ್ಲವು. ವಿವಾಹ ಮೂಡಿಕೊಳ್ಳತಕ್ಕಂಥಾ ಹುಡುಗ ನಾದವನು ತನ್ನ ದೇಹವನ್ನು ಸರಿಯಾಗಿಟ್ಟುಕೊಂಡಿದ್ದು ತನ್ನ ಬ್ರಹ್ಮಚರ್ಯವನ್ನು ಕಾಪಾಡಿ ಕೊಂಡಿದ್ದರೆ ಅವನು ವಿವಾಹವಾದಕೂಡಲೇ ಹೇಗೆ ಸಾಯುವನು? ಇದನ್ನು ಯೋಚಿಸದೆ ಬಾಲ್ಯವಿವಾಹವು ಮರಣಕ್ಕೆ ಕಾರಣವಾಗಿದೆಯೆಂದು ಹೇಳಿದರೆ ಹೇಗೆ ಅದನ್ನು ನಂಬಬಹುದು. ಬಾಲ್ಯವಿವಾಹವನ್ನು ಬಿಟ್ಟು ಪ್ರೌಢಾವಿವಾಹ ಮಾಡಬೇ ಕೆಂಬುವರ ಸಂಖ್ಯೆಯು ಈಗ ಅಧಿಕವಾಗಿರುವದು. ಒಂದು ಭಾಗವಾದ ಬ್ರಾಹ್ಮ ಣರಲ್ಲೂ ವೈಶ್ಯರಲ್ಲೂ ಬಾಲ್ಯ ವಿವಾಹವು ಕಂಡುಬರುವುದು. ಆದರೆ ಸರಿಯಾಗಿ ವಿಚಾರಿಸಿ ನೋಡಿದ್ದರಲ್ಲಿ ಇತರ ಜಾತಿಯವರಲ್ಲಾಗುವಷ್ಟು ಮರಣವು ಇವರಲ್ಲಾ ಗುವುದಿಲ್ಲವೆಂದು ತಿಳಿದು ಬಂದಿದೆ. ಹಾಗಾದರೆ ಚಿಕ್ಕ ವಯಸ್ಸಿನ ಮರಣಕ್ಕೇನು ಕಾರಣ? ಸ್ವಲ್ಪ ಯೋಚಿಸಿನೋಡಿದರೆ ತಿಳಿಯುವುದು. ಇತರ ಜಾತಿಯವರು ಅಧಿಕ ವಾಗಿ ಮದ್ಯವನ್ನು ಪಾನಮಾಡುವುದರಿಂದಲೂ ಮಾದಕ ಪದಾರ್ಥಗಳನ್ನು ತಿನ್ನುವು ದರಿಂದಲೂ ಬಾಲಾದಿಗಳೂ ಕೂಡ ದೇಹವನ್ನು ಹಾಳುಮಾಡಿಕೊಳ್ಳುತ್ತಾರೆ. ಈ ಮದ್ಯದಂಗಡಿಗಳು ಒನಸಿಬಿಡವಾದ ಸ್ಥಳಗಳಲ್ಲಿರುವುದರಿಂದ ಅನೇಕರು ಅವುಗಳ ಆಶೆಯೆಂಬ ಬಲೆಗೆ ತುತ್ತಾಗುತ್ತಾರೆ. ಸಂಘಸಂಸ್ಕರಣ ಕರ್ತರು ಯಾವ ಕೆಡು ಕನ್ನೂ ಮಾಡದ ಬಾಲ್ಯ ವಿವಾಹಾದಿಗಳ ವಿಷಯವನ್ನು ಬಿಟ್ಟು ಕಣ್ಣೆದುರಿಗೇ ಕಾಣು ತ್ತಿರುವ ಈ ಕೆಟ್ಟ ಕುಡಿತವನ್ನೂ, ಮದ್ಯದಂಗಡಿಗಳನ್ನೂ ನಾಶಪಡಿಸುವುದಕ್ಕೆ ಪ್ರಯತ್ನಪಡಲಿ! ಆದರೆ ಇದು ಸರ್ಕಾರದವರಿಗೆ ಸೇರಿದ ವಿಷಯ. ಅವರೊಡನೆ ಹೆಣ ಗಾಡಲು—ಇವರಿಗೆ ಧೈರ್ಯಸಾಲದು.

ಭಾಸ್ಕರನು ಒಳಕ್ಕೆ ಹೋಗಿ ಸುತ್ತಲೂ ನೋಡಿದನು. ಒಂದು ಮೂಲೆಯಲ್ಲಿ ಗೌರವಸ್ಥನಂತೆ ಕಂಡು ಬರುತ್ತಿದ್ದವನೊಬ್ಬನು ಕುಳಿತಿರುವುದನ್ನು ನೋಡಿ ತೂರಾಡಿ ಕೊಂಡು ಅವನಬಳಿ ಹೋಗಿ ಕುಳಿತುಕೊಂಡು ಏನೇನೋ ಮಾತನಾಡ ತೊಡಗಿದನು. ಅಲ್ಲಿ ಕುಳಿತಿದ್ದ ಮನುಷ್ಯನು ಇವನನ್ನು ನೋಡಿ ಇಂಗ್ಲೀಷಿನಲ್ಲಿ ನೀನು ಯಾರು who are you) ಎಂದುಕೇಳಿದನು. ಆದಕ್ಕೆ ಭಾಸ್ಕರನು ಅರ್ಧ ಇಂಗ್ಲೀಷಿನಿಂದಲೂ ಅರ್ಧ ಹಿಂದೂಸ್ಥಾನದಿಂದಲೂ ಅರ್ಧಾರ್ಧ ಮಾತುಗಳಾಗಿ,, ನಾನೇ...ನಾನು ನಾನೇ ಗೊತ್ತಿಲ್ಲವೇ ನನ್ನ ಹೆಸರು...ನಾನು...ನಾನೇ ನೀಲಕಂಠಬಾಬು...ನೀನ್ಯಾರು ನಿನ್ನಲ್ಲಿ ದುಡ್ಡಿದೆಯೋ ಎಲ್ಲಿ. ದಾಹವಾಗುತ್ತೆ. ಮದ್ಯವನ್ನು ಕೊಡಿಸು ನೋಡೋಣ'' ಎಂದನು.

ಮನುಷ್ಯ:—ಅಯ್ಯಾ ನೀಲಕಂಠ ಬಾಬು ಆಗಲೇ ಅತಿಯಾಗಿ ಕುಡಿದಿರುವೆ. ಇನ್ನೂ ಬೇಕೇ? ನಾನು ಯಾರಾದರೆ ನಿನಗೇನು? ಬೇಕಾಗಿದ್ದರೆ ನಿನಗೆ ಕುಡಿಯುವು

ದಕ್ಕೆ ಸ್ವಲ್ಪ ನೀರು ತರಿಸಿಕೊಡುತ್ತೇನೆ.

ಭಾಸ್ಕರ:—ನಾನು–ಏನು–ನಾನು–ಕುಡಿದಿರುವೆನೋ ನಿನಗೇನು ತಲೆತಿರುಗುತ್ತದೋ ನಾನೆಂದಿಗೂ ಕುಡಿಯುವುದಿಲ್ಲ. ನೀನು–ನಿನಗೆ ದುಡ್ಡಿಲ್ಲವೇ ನೀರು ನನಗೆ ಬೇಡಾ ಇಕೋ ತಕೋ ಈ ಹತ್ತುರೂಪಾಯಿಗಳಿಗೆ ಮದ್ಯತರಿಸು ಕುಡಿಯೋಣ ನಾನು ನಾನು ನಾನೇನು ಬಡವನಾ ಇದೋ ನೋಡು ಇನ್ನೂ ಹಣವಿದೆ ಎಲೋ ಯಾರೋ ಅಲ್ಲಿ ಮೂರುಶೀಸೆ ಬರಾಂದಿ ತೆಗೆದುಕೊಂಡುಬಾರೋ.

ಅಲ್ಲಿದ್ದ ಸೇವಕನು ನಗುತ್ತಾ ಮೂರುಶೀಸೆ ಬ್ರಾಂದಿಯನ್ನೂ ಬಟ್ಟಲುಗಳನ್ನೂ ತಂದಿಟ್ಟುಹೋದನು. ಭಾಸ್ಕರನು ಬಟ್ಟಲುಗಳನ್ನು ತುಂಬಿ ಅಲ್ಲಿದ್ದ ಮನುಷ್ಯನಿಗೆ ಕೊಟ್ಟು ತಾನೂ ಕುಡಿಯುವಂತೆ ನಟಿಸುತ್ತಾ ಎಲ್ಲವನ್ನೂ ತಾನು ಉಡುಪಿನಿಂದೆ ಬಚ್ಚಿಟ್ಟುಕೊಂಡಿದ್ದ ಚೀಲದೊಳಕ್ಕೆ ಪತ್ತೇದಾರರಿಗೇನೆ ತಿಳಿಯದ ರೀತಿಯಿಂದ ತುಂಬಿಕೊಳ್ಳುತ್ತಿದ್ದನು. ಈ ವಿಧವಾದ ಮೋಸಮಾಡುವಿಕೆಯು ಅಕ್ಬರಿನ ಕಾಲದಿಂದಲೂ ಬಂದಿದೆಯೆಂದು ಅನೇಕ ವಿಷಯಗಳಿಂದ ತಿಳಿದುಬರುತ್ತದೆ. ಇವನು ಹೀಗೆ ಬಹಳ ಬೆಲೆಯುಳ್ಳ ಮದ್ಯವನ್ನು ಕೊಡುವುದನ್ನು ನೋಡಿದ ಅಲ್ಲಿದ್ದ ಒಬ್ಬ ಮನುಷ್ಯನು ನಗುತ್ತಾ ಅವನು ಕೊಟ್ಟಿದ್ದನ್ನೆಲ್ಲಾ ಕುಡಿಯುತ್ತಾ ಬಂದನು. ಮದ್ಯವು ಬಹಳ ಖಾರವುಳ್ಳದಾದ್ದರಿಂದ ಬಹಳಬೇಗ ಮತ್ತನ್ನುಂಟುಮಾಡತಕ್ಕುದಾಗಿತ್ತು. ಮತ್ತೇರುವಹಾಗೆಲ್ಲಾ ಇನ್ನೂ ಕುಡಿಯಬೇಕೆಂಬಭಿಲಾಷೆಯು ಅಂಕುರಿಸಿತು, ಇದನ್ನರಿತ ಭಾಸ್ಕರನು " ಛೇ! ಬಿಡಯ್ಯಾ! ಏನು ಕುಡಿದೆ ನೀನು–ನಾನು ಇಲ್ಲ ನೀನು ಮನುಷ್ಯನೇ ಏನೂ ಕುಡಿಯಲಿಲ್ಲಾ. ಎಲ್ಲವನ್ನೂ ನಾನೇ ಕುಡಿದುಬಿಟ್ಟೆನು. (ಕುಣಿದಾಡತೊಡಗಿದನು) ಆಹಹ! ಮದ್ಯವು ಬಹಳ ಸೊಗಸಾಗಿದೆಯಪ್ಪ! ಅಯ್ಯೋ ಎಲ್ಲಾ ಆಗಿಹೋಯಿತು, ? ಓಹೋ ನಾನೇನು ಬಡವನಾ? ಎಲೋ ಆಳು ಇಲ್ಲಿಬಾರೋ ಇಕೋ ತಕೋ ತಕ್ಕೊಂಡು ಬಾರೋ ಇನ್ನಿಷ್ಟು ಬರಾಂದಿ–ಒಳ್ಳೇದಾಗಿರಬೇಕು. ಗೊತ್ತಿದೆಯೋ ನಾನು ಯಾರು? ನೀಲಕಂಠಬಾಬು ಈಗ ಹೋಗು ಇದೋ ರೂಪಾಯಿ (ಎಂದು ಹೇಳಿ ತೂರಾಡುತ್ತಾ ಎದ್ದು ನಿಂತುಕೊಂಡು) ಇನ್ನಿಪ್ಪತ್ತುರೂಪಾಯಿಗಳನ್ನು ಧಣಧಣವೆಂದು ಮೇಜಿನಮೇಲೆ ಹಾಕಿದನು. ಅಲ್ಲಿದ್ದ ಮನುಷ್ಯನು ಇನ್ನೂ ಸಂಪೂರ್ಣವಾಗಿ ಮತ್ತೇರಲ್ಪಟ್ಟವನಾಗಿರಲಿಲ್ಲವಾಗಿ ಇದೆಲ್ಲವನ್ನೂ ನೋಡಿ ಇವನು ಯಾರೋ ಮಹದೈಶ್ವರ್ಯವಂತನು. ಹೀಗೆ ಧನವನ್ನು ವಿಚ್ರ್ಯಮಾಡುತ್ತಿದ್ದಾನೆಂದು ಯೋಚಿಸಿ ನಗುತ್ತಾ ಕುಳಿತಿದ್ದನು. ಸ್ವಲ್ಪ ಹೊತ್ತಿಗೆಲ್ಲಾ ಮದ್ಯವೂ ಬಂದಿತು. ಪುನಹಾ ಭಾಸ್ಕರನು ಬಟ್ಟಲುಗಳಲ್ಲಿ ತುಂಬಿತುಂಬಿ ಆ ಮನುಷ್ಯನಿಗೆ ಕೊಟ್ಟು ತಾನೂ ಕುಡಿಯುವಂತೆ ನಟಿಸಿದನು. ಸಂತಯಕ್ತಾಸ್ಪದವಾ

ಗದಿರಲೆಂದು ಒಂದು ಬಟ್ಟಲು ಮದ್ಯವನ್ನು ಕೈನಡುಗುವಹಾಗೆ ತೋರ್ಪಡಿಸಿ ಎತ್ತಿ ಹಾಕಿದನು. ಸುರಾದೇವತೆಯು ಆಲ್ಲಿದ್ದ ಮನುಷ್ಯನನ್ನು ಸ್ವಲ್ಪಸ್ವಲ್ಪವಾಗಿ ಆಕ್ರಮಣ ಮಾಡಲಾರಂಭಿಸಿದಳು. ಸ್ವಲ್ಪ ಕಾಲದಲ್ಲೇ ಅವನ ಜ್ಞಾನವು ಅವನ ತಲೆಯನ್ನು ಬಿಟ್ಟೋಡಿತು.

ಭಾಸ್ಕರನು ಆ ಮನುಷ್ಯನು ತನ್ನ ಬಲೆಗೆ ಶಿಕ್ಕಿಬಿದ್ದನೆಂದು ಮನಸ್ಸಿನಲ್ಲೇ ಸಂತೋಷಪಟ್ಟುಕ್ಕೊಂಡು ಇನ್ನೂ ಉಳಿದಿದ್ದ ಒಂದು ಶೀಸೆ ಬ್ರಾಂದಿಯನ್ನು ಬಟ್ಟಲಲ್ಲಿ ಸುರಿದು ಕೊಡುತ್ತಾ ಬಂದನು. ಆ ಮನುಷ್ಯನು ‹‹ ಆಹಾ ! ಭಲೇ ! ಶಾಬಾಸ್ ಕೊಡು ಕೊಡು ! ಎಲ್ಲಿ . ಮದ್ಯ ! ಆಹಾ ! ಅಮೃತದಂತಿರುವ ಮದ್ಯವೇ !ನಿನ್ನ ಸಮಾನ ರಾರು ? ಭಲೆ ! ಭಲೆ ! ಈಗ ನಾನೆ ಜಂದ್ರ ನೀನೆ ರೆವತಿ ಎಲೇ ಎಲ್ಲಿದ್ದೀ ನೋಡಿದಿಯಾ ದೂರ ಓಡಿಹೋಗುತ್ತೀ ಹತ್ತಿರ ಬಾ ಬಾ ಎಂದು (ಕುಣಿಯಲಾರಂಭಿಸಿದನು) ಎಲೋ ಯಾರೋ ಅಲ್ಲಿ ? ಸಂ ಗೀ ತ ಹಾಡೋ ಎಲ್ಲಿ ಸಾ ಗಾ ರಿ ಮಾ ತೈ ಶೈ ಭಲಾ ಶಾಬಾಸ್ ಜೆನ್ನಾಗಿವೆ ನಿನಗೆ ನಮ್ಮ ಸಂಘದ ಯಜಮಾನನಿಂದ ಬಹುಮಾನ-ಊ-ರೂಪಾಯಿ ಕೊಡಿಸುತ್ತೇನೆ ಬಾ ಇದೇ ಬೀದಿಯಲ್ಲಿ ನಮ್ಮ ಮನೆಯಿದೆ ’’ ಎಂದು ಪದರಿದನು.

ಭಾಸ್ಕರನು ಇದೇಸಮಯವೆಂದು ಯೋಚಿಸಿದನು. ಆದರೂ ಸಮೀಪದಲ್ಲೇ ಯಾರಾದರೂ ಆ ಮನುಷ್ಯನಿಗೆ ತಿಳಿದ ಮನುಷ್ಯರಿರಬಹುದೆಂಬ ಹೆದರಿಕೆಯಿಂದ ಸರಿಯಾಗಿ ಮಾತನಾಡದೆ ಮತ್ತೇರಿದವನಂತೆಯೇ ಮಾತನಾಡುತ್ತಾ ಬಂದನು.

ಭಾಸ್ಕರ:——ಅಣ್ಣಾ ಶಾಬಾಸ್! ಮದ್ಯವು ಬಹಳ ಪಸಂದಾಗಿದೆ. ನೀನು ಹಾಡು. ನಾನು ಕುಣಿಯುತ್ತೇನೆ (ಕುಣಿಯುತ್ತಾನೆ) ನಾನು ನೀಲಕಂಠಬಾಬುವಲ್ಲವಾ ? ನಾನಿರುವದು ಬ್ಲಾಕ್‌ಬೀದಿ ಅಹಹ ! ನೀನ್ಯಾರಣ್ಣಾ ! ಮಂಗನಂತೆ ಇಲ್ಲಿ ಬಂದಿದ್ದೀ ನೀನೆಲ್ಲಿರುವುದು ಹೇಳಣ್ಣಾ.

ಮನುಷ್ಯ:——ಸೈ ಸೈ ನೀನು ಬಾಬುವಾ-ಪಾಗಾದರೆ ನಾನು ಹರಿಜಂದ್ರ-ನಾನಿರುವುದು ಅದೆಲ್ಲಪ್ಪಾ ಹಾಳುಹೆಸರು ಸ್ಪ್ರಿಂಗ್‌ಬೀದಿ-ಮರೆತುಹೋಯಿತು. ಹೋಗಲಿ ನನಗೇನಪ್ಪಾ ಕಡಮೇ ನನ್ನ ಸಹೋದರರಿದ್ದಾರೆ. ಬೇಕಾದ್ದು ಕೊಡುತ್ತಾರೆ. ಹೊಸಬ-ಜಮಾನ್ದಾರ-ಯಜಮಾನರ-ಮಗಳನ್ನು ಅದೇನೋ ಅಲ್ಲಿ ಮದುವೆಯಾಗುತ್ತಾನೆ ನಮಗೆಲ್ಲಾ ಬೇಕಾದಷ್ಟು-ಥೂಥೂ-ಕಣ್ಮುಳ್ಳಿಗೆ ದೆವ್ವ ಮಾರಿ ಸೇರಿಕೊಂಡಿದ್ದಾಳೆ. ಆದೆಲ್ಲಿ ನನ್ನ ಕರವಸ್ತ್ರ. ನಮ್ಮ ಪಂಗಡದವರ ಗುರುತು ಕಾಣಣ್ಣಾ (ಎಂದು ಹೇಳುತ್ತಾ, ತನ್ನ ಒಳಜೋಬಿನಿಂದ ಒಂದು ಕರವಸ್ತ್ರವನ್ನು ತೆಗೆದನು. ಭಾಸ್ಕರನು

ನೋಡಲು ಅದು ತಾನು ಕಂಡುಹಿಡಿದ ಹರಿದುಹೋದ ಏಳುಬಣ್ಣದ ಕರವಸ್ತ್ರದಹಾಗಿತ್ತು. ಅದನ್ನು ನೋಡಿ ಅವನಿಗಿದ್ದ ಸಂಶಯಗಳೆಲ್ಲಾ ಅಡಗಿಹೋದವು. ಇವನೇ ಸರಿಯಾದಮನುಷ್ಯನೆಂದು ಯೋಚಿಸಿದನು. (ಇನ್ನೂ ಇವನಿಂದೇನಾದರೂ ಗುಟ್ಟುಗಳನ್ನು ಹೊರಪಡಿಸಬೇಕೆಂದು ಯೋಚಿಸಿ)

ಭಾಸ್ಕರ:—ಅದರೆ ಅಣ್ಣಾ ಅದೇನೋ ಹಾಂಗಿದೆ-ಕರವಸ್ತ್ರ-ಹೊತ್ತಾಯಿತು ಗಂಟೆನೋಡಣ್ಣ ಹೋಗೋಣ.

ಹರಿಚಂದ್ರ:—ಅದಾ ನಮ್ಮ ಸಂಘದ ಕರವಸ್ತ್ರ-ಅದ್ಯಾರೋ ನನ್ನನ್ನು ಕೇಳುವದು-ಹೋಗು-ನಾನು ಬೇಳುವುದಿಲ್ಲ. ನಿನಾ ನಮ್ಮಣ್ಣ ಗಂಟೆನೋಡಾಲಾ (ಗಡಿಯಾರವನ್ನು ಹೊರಗೆ ತೆಗೆಯಲು ಭಾಸ್ಕರನು ಅವನಿಗೆ ತಿಳಿಯದಹಾಗೆ ಸರಪಣಿಯ ಕೊನೆಯಲ್ಲಿ ಎಂ (M) ಎಂಬಕ್ಷರದ ಗುಂಡಿಯನ್ನು ಕಿತ್ತುಕೊಂಡು ತನ್ನ ಜೋಬಿನಲ್ಲಿ ಭದ್ರಪಡಿಸುವನು) ಗಂಟೆ ಹದಿಮೂರಾಯಿತು. ಅಯ್ಯಯ್ಯೋ ಹೊತ್ತಾಯಿತಪ್ಪಾ ನಾನು ಹೋಗುತ್ತೇನೆ. ನಾಳೇದಿವಸ ನಮ್ಮ ಸಂಘದ ಮಾಟಿಂಗಿದೆ ಸೈ ರಾಜ ಅದೆಲ್ಲೋದಾರಿ (ಎದ್ದು ತಡವರಿಸುತ್ತಾ ಹೋಗುವನು)

ಭಾಸ್ಕರ:—ಅದೇನಪ್ಪಾ ನಿಮ್ಮ ಸಂಘದ ಮಾಟಿಂಗ್ ನಾಳೆ ಬರಬಾರದಾ ನಾನೂ ಬರುತ್ತೇನೆ ನಡಿಯಪ್ಪಾ.

ಹರಿಚಂದ್ರ:—ಮಾಟಿಂಗಾ ಹೂ ಮಾಟಿಂಗ್ ಉಂಟು. ನಾಳೆರಾತ್ರಿ ಹತ್ತು ಗಂಟೆಗೆ ಸರಿಯಾಗಿ. ನಿನಾ ನೀನ ಯಾರೋ ಎಲ್ಲೋ ನಿನ್ನ ಗುಂಡಿ (ಅಷ್ಟರಲ್ಲೇ ದಾರಿಯನ್ನು ಕಂಡು ಹೊರಕ್ಕೆ ಬಂದು ಜರಂಡಿಯಲ್ಲಿ ಬಿದ್ದುಕೊಳ್ಳುವನು.) ಭಾಸ್ಕರನು ಎಷ್ಟು ಪ್ರಯತ್ನಮಾಡಿದರೂ ಅವನು ಏಳಲಿಲ್ಲಾ. ಜೋಬಿನಲ್ಲೇನಾದರೂ ಕಾಗದಗಳಿವೆಯೋ ಎಂದು ನೋಡಲು ಒಂದುಹೂರು ಕಾಗದವಿನಹಾ ಮತ್ತೇನೂ ಸಿಗಲಿಲ್ಲ. ಆ ಚೂರಿನಲ್ಲಿ " ಎಂ ಸಂಘದವತೆಲ್ಲಾ ನಾಳೇದಿವಸ ರಾತ್ರಿ ಹತ್ತುಗಂಟೆಗೆ ಸರಿಯಾಗಿ ಗುಪ್ತಗೃಹಕ್ಕೆ ಬರಬೇಕು " ಎಂದು ಮಾತ್ರ ಬರೆದಿತ್ತು. ಅದನ್ನು ಜೋಬಿನಲ್ಲಿ ಹಾಕಿಕೊಂಡು ಸುತ್ತುಮುತ್ತಾ ನೋಡುತ್ತಾ ತನ್ನನ್ನು ಯಾರೂ ಹಿಂಬಾಲಿಸುತ್ತಿಲ್ಲವೆಂದು ತಿಳಿದಮೇಲೆ ವೇಗವಾಗಿ ನಡೆದು ಅಲ್ಲೊಂದು ಸ್ಥಳದಲ್ಲಿ ತಾನು ಚೀಲದಲ್ಲಿ ತುಂಬಿಟ್ಟುಕೊಂಡಿದ್ದ ಮದ್ಯವನ್ನೆಲ್ಲಾ ಸುರಿದುಬಿಟ್ಟು ಗೋವಿಂದನ ಮನೆಯನ್ನು ಸೇರಿ ಸ್ನಾನವನ್ನು ಮಾಡಿ ಶುಭ್ರವಸ್ತ್ರವನ್ನು ಧರಿಸಿ ಊಟಮಾಡಿಕೊಂಡು ಮಲಗಿ ನಿದ್ರೆಹೋದನು.

ಏಳನೇಽಧ್ಯಾಯ

(ಹರಿಚಂದ್ರ.)

ಮಾರನೇದಿನ ಪ್ರಾತಃಕಾಲದಲ್ಲೇ ಭಾಸ್ಕರನೆದ್ದು ಕಾಳೀಬೀದಿಗೆ ಹೋಗಿ ಅಲ್ಲಿ ಹರಿಚಂದ್ರನು ಹೇಳಿದ ಮನೆ ಯಾವುದೆಂದು ಹುಡುಕಿದನು. ಯಾವುದೂ ಅವನಿಗೆ ಸರಿ ಬೀಳಲಿಲ್ಲ. ಒಂದು ಸಂದಿಯಲ್ಲಿ ನುಗ್ಗಿ ಬುರುತ್ತಿರುವಾಗಲೊಂದುಮನೆಯ ಗೋಡೆಯ ಮೇಲೆ " ಈ ದಿವಸ ಮದ್ಯವಿಸರ್ಜನೆವಿಷಯದಲ್ಲಿ ರಾತ್ರಿ ಉಪನ್ಯಾಸ. ಟಿಕೀಟುಗಳನ್ನು ಕೋರತಕ್ಕಂತಾ ಮೆಂಬರುಗಳು ಒಳಕ್ಕೆ ಬಿಡಲ್ಪಡುವರು " ಎಂದು ಬರೆದಿರುವುದನ್ನೋದಿನೋಡಿ ಒಂದುನೇಳೆ ಈ ಮನೆಯೇ ಆಗಿರಬಹುದೋ ಎಂದು ಯೋಚಿಸಿ ಏನೇಆಗಲಿ ಈ ರಾತ್ರೀ ಇಲ್ಲಿಗೇ ಬಂದು ಪರೀಕ್ಷೆಮಾಡೋಣವೆಂದು ಹೇಳಿಕೊಂಡು ಗೋವಿಂದನ ಮನೆಗೆ ಹಿಂದಿರುಗಿ ಬಂದನು.

ಅಲ್ಲಿಗೆ ಬಂದಕೂಡಲೇ ಗೋವಿಂದನು ಒಂದು ಕಾಗದವನ್ನು ತಂದುಕೊಟ್ಟನು. ಅದು ವಸಂತಪುರದಿಂದ ಬಂದಿದ್ದಿತು. ಒಡೆದು ನೋಡಲು ಸೋಮಸುಂದರನು ಬರೆದದ್ದಾಗಿತ್ತು. ಅದರಲ್ಲಿದ್ದದ್ದೇನೆಂದರೆ.

" ಅಯ್ಯಾ, ಇದರ ಸಂಗಡಲೇ ಮತ್ತೊಂದು ಕಾಗದವನ್ನೂ ಕಳುಹಿಸಿರುವೆನು. ನನಗೇನೂ ತೋಹುವುದಿಲ್ಲವು. ನೀನೇ ನನ್ನನ್ನು ಕಾಪಾಡಬೇಕು. ನಾನು ಏನು ಬದಲು ಬರೆಯಲಿ ? ನನ್ನ ಮಗನ ವಿಷಯವೇನಾದರೂ ತಿಳಿಯಬಂದಿದೆಯೋ ? ಯಾವದಕ್ಕೂ ಕೂಡಲೇ ಜವಾಬುಬರೆಯಿರಿ.

ಇತಿ ಸೋಮಸುಂದರ.

ಭಾಸ್ಕರನು, ಮತ್ತೊಂದು ಕಾಗದವನ್ನು ತೆಗೆದುಕೊಂಡು ಓದಲಾರಂಭಿಸಿದನು ಸೋಮಸುಂದರರಾಯರಿಗೆ:—

ಅಯ್ಯಾ !

ನಾವುಗಳು ಈ ಕಾಗದದಮೂಲಕ ನಿಮಗೆ ತಿಳಿಯಪಡಿಸುವುದೇನಂದರೆ, ನಿಮ್ಮ ಪುತ್ರನು ಜೀವಂತನಾಗಿರುವನು. ಇನ್ನೇನು ಸ್ವಲ್ಪ ದಿವಸದಲ್ಲೇ ಅವನು ಒಬ್ಬ ಋತುಮತಿಯಾದ ಕನ್ಯೆಯನ್ನು ವಿವಾಹ ಮಾಡಿಕೊಳ್ಳಲು ಕಾದಿರುತ್ತಾನೆ. ನಾವುಗಳು ಶಾಸ್ತ್ರಕಾರರನ್ನು ವಿಚಾರಿಸಿನೋಡುವಲ್ಲಿ ಅರ್ಧದಲ್ಲಿ ನಿಂತುಹೋದ ಮದುವೆಯು, ಮದುವೆಯು ನಡೆಯದಹಾಗೇ ಆಯಿತೆಂದು ತಿಳಿದುಬರುತ್ತದೆ. ಆದ್ದರಿಂದ ನಿಮ್ಮ

ಮಗನಿಗೂ ತ್ರಿಯಂಬಕಶಾಸ್ತ್ರಿಗಳ ಪುತ್ರಿಗೂ ಸಂಬಂಧವೇನೂಇಲ್ಲವು. ಆದರೆ ನೀವು ವಿವಾಹವು ಸಂಪೂರ್ಣವಾಗಿ ನೆರವೇರಿತೆಂದೇ ಹೇಳಿದಹಾಗೆ ತಿಳಿಯಬಂದಿತು. ಅದು ತಪ್ಪು. ನಿಮ್ಮ ಪುತ್ರನೂ ಅದಕ್ಕೆ ಒಪ್ಪುವುದಿಲ್ಲ. ಆದ್ದರಿಂದ ಕೂಡಲೇ ತ್ರಿಯಂಬಕಶಾಸ್ತ್ರಿಗಳಿಗೆ ಕಾಗದಬಾರದು ಅವರ ಮಗಳನ್ನು ಮತ್ತಾರಿಗಾದರೂ ಮದುವೆ ಮಾಡಿಕೊಡುವಂತೆ ತಿಳಿಸಿರಿ. ನಾವು ಕೇಳದಿದ್ದರೂ ನಿಮ್ಮ ಪುತ್ರನು ತಾನಾಗಿಯೇ ಒಬ್ಬ ಋತುಮತಿಯಾದ ಕನ್ಯೆಯನ್ನು ಇನ್ನು ಕೆಲವು ದಿವಸಗಳಲ್ಲಿ ವಿವಾಹವಾಗಬೇ ಕೆಂದಿರುತ್ತಾನೆ. ನೀವು ಇದನ್ನು ತಪ್ಪಿಸಲಾರಿರಿ. ನೀವು ನಿಮ್ಮ ಪುತ್ರನನ್ನು ಕಂಡುಹಿ ಡಿಯಲು ಏನು ಪ್ರಯತ್ನ ಮಾಡಿದರೂ ಸಾರ್ಥಕವಾಗಲಾರದು. ನೀವು ಪೋಲೀಸಿನವರಿಗೆ ಹೇಳಿ ಮಾಡಿದ್ದೇನು ? ಇನ್ನೂ ಪ್ರಯತ್ನ ಮಾಡಬೇಕೆಂದಿದ್ದರೆ ಆ ಆಲೋಚನೆಯನ್ನು ತ್ಯಜಿಸಿರಿ. ಹಾಗೇನಾದರೂ ಪತ್ತೇದಾರರನ್ನು ಕರೆಸಿ ಪ್ರಯತ್ನ ಮಾಡಿದ್ದೇಆದರೆ '' ಹುನಾರ್ ''ನಿಮ್ಮ ಪುತ್ರನ ಸೌಖ್ಯಕ್ಕೆ ಕುಂದಕ ಬರುವುದು. ಎಚ್ಚರಿಕೆ.

ಇತಿ, ನಾವುಗಳು.

ಈ ರೀತಿಯಾಗಿ ಬರೆದಿದ್ದ ಕಾಗದವನ್ನು ಓದಿ ಮುಗಿಸಿದಂತರ ಭಾಸ್ಕರನು ನಗುತ್ತಾ ಸೋಮಸುಂದರನು ಈ ಕಾಗದವನ್ನು ನೋಡಿ ಬಹಳ ಭಯಪಟ್ಟಿರಬೇ ಕೆಂದು ಯೋಚಿಸಿ ತಕ್ಷಣವೇ ಸೋಮಸುಂದರನಿಗೆ '' ಭಯಪಡಬೇಡಿ ಸ್ವಲ್ಪ ಕಾಲ ದಲ್ಲೇ ಎಲ್ಲಾ ವಿಷಯಗಳೂ ಹೊರಕ್ಕೆ ಬರುವವು. ತ್ರಿಯಂಬಕಶಾಸ್ತ್ರಿಗಳಿಗೇನೂ ಕಾಗದ ಬರೆಯಬೇಡಿ '' ಎಂದು ಒಂದು ಕಾಗದವನ್ನು ಬರೆದು ಆ ದಿವಸದ ಟಪ್ಪಾ ಲಿಗೇ ಹಾಕಿಬಿಟ್ಟನು.

ಸಾಯಂಕಾಲವಾದಮೇಲೆ ಭಾಸ್ಕರನು ಹಿಂದಲದಿವಸದಹಾಗೆಯೇ ಉಡು ಪನ್ನು ಧರಿಸಿ ಗೋವಿಂದನಿಗೆ ಹೇಳಬೇಕಾದ ವಿಷಯಗಳನ್ನೆಲ್ಲಾ ಹೇಳಿಬಿಟ್ಟು ಒಂದು ಗಾಡಿಯನ್ನು ಬಾಡಿಗೆಗೆ ಮಾಡಿಕೊಂಡು ಕಾಳೀಬೀದಿಗೆ ಹೋಗಿ ಅಲ್ಲಿ ಆ ಗಾಡಿಯನ್ನು ಅಲ್ಲೇ ಕಾದಿರುವಹಾಗೂ ಸ್ವಲ್ಪ ಹೊತ್ತಾದಮೇಲೆ ತಾನು ಒಬ್ಬ ಕುಡುಕನನ್ನು ಕರ ದುಕೊಂಡುಬಂದು ಗಾಡಿಯಲ್ಲಿ ಕೂರಿಸುವಹಾಗೂ, ಅವನನ್ನು ಗೋವಿಂದನ ಮನೆಗೆ ಕರದುಕೊಂಡುಹೋಗಿ ಅಲ್ಲೇ ಕಾದಿರುವಹಾಗೂ ಆಮೇಲೆ ಪ್ರಸಾ ಕಾಳೀಬೀದಿಗೆ ಬರಬೇಕಾಗುವುದೆಂದೂ ಹೇಳಲು ಆ ಗಾಡಿಯವನು ಇಷ್ಟಕ್ಕೂ ಹತ್ತುರೂವಾಯಿ ಬಾಡಿಗೇ ಕೇಳಲು ಅದನ್ನು ಕೊಡುವುದಾಗಿಯೂ ಅದರಮೇಲೆ ಇನ್ನೂ ಇನಾಮನ್ನು ಕೊಡುವುದಾಗಿಯೂ ಹೇಳಿ ಈ ವಿಷಯಗಳನ್ನು ಯಾರಿಗೂ ಹೇಳಕೂಡದೆಂತಲೂ ನಾನು ಒಬ್ಬ ಪತ್ತೇದಾರನೆಂದೂ ಹೇಳಿ ಆ ಗಾಡಿಯ ನಂಬರು ಮುಂತಾದ್ದನ್ನು ತೆಗೆ

ದುಕೊಂಡು ಪುನಃ ಅವನನ್ನು ಎಚ್ಚರಿಸಿಬಿಟ್ಟು ಮದ್ಯದಂಗಡಿಯನ್ನು ಹೊಕ್ಕನು.

ಈ ದಿವಸ ಭಾಸ್ಕರನು ಕುಡಿದವನಂತೆ ನಟಿಸದೆ ನೆಟ್ಟಗೆ ಒಳಕ್ಕೆ ಹೋಗಿ ಸುತ್ತಲೂ ನೋಡಲು ಹರಿಜಂದ್ರನು ಮೊದಲನೇದಿವಸದಲ್ಲಿ ಕುಳಿತಿದ್ದ ಸ್ಥಳದಲ್ಲೇ ಕುಳಿತಿರುವುದನ್ನು ನೋಡಿಕೊಂಡು ಅವನನ್ನರಿಯದವನಾಗಿ ಬೇರೇ ಒಂದುಕಡೆ ಕುಳಿತುಕೊಂಡನು. ಇವನು ಬಂದದ್ದನ್ನು ನೋಡಿದ ಹರಿಜಂದ್ರನು ನಿನ್ನೇದಿವಸ ಬಂದಿದ್ದ ಮನುಷ್ಯನು ಇವನೇ ಎಂದು ತಿಳಿದು ಅವನನ್ನು ಬರುವಹಾಗೆ ಕರೆದನು. ಭಾಸ್ಕರನು ಸಮೀಪಕ್ಕೆ ಹೋಗಿ ಕರೆಯಲು ಕಾರಣವೇನೆಂದು ಕೇಳಿದನು. ಅದಕ್ಕೆ ಹರಿಜಂದ್ರನು ಇವನು ಎಲ್ಲಾ ವಿಷಯಗಳನ್ನೂ ಮರೆತುಬಿಟ್ಟಿದ್ದಾನೆಂದು ತಿಳಿದು " ಅಯ್ಯಾ ನೀನು ನೀಲಕಂಠಬಾಬುವಲ್ಲವೇ ?" ಎಂದು ಕೇಳಿದನು.

ಭಾಸ್ಕರ:- —ಹೌದು ನನ್ನ ಹೆಸರು ನೀಲಕಂಠಬಾಬು-ಆದರೆ ನನ್ನ ಹೆಸರು ನಿನಗೆ ಹೇಗೆ ತಿಳಿಯಿತು ?

ಹರಿಜಂದ್ರ:—ನಿನ್ನೆದಿವಸ ನೀನು ಇಲ್ಲಿಗೆ ಬಂದು ಕುಡಿದು ನಿನ್ನ ಹೆಸರನ್ನು ಹೇಳಲಿಲ್ಲವೇ ? ಮತ್ತೇರಿತ್ತಾದ್ದರಿಂದ ಆಗ ನಡೆದ ವಿಷಯಗಳನ್ನು ಮರೆತುಬಿಟ್ಟಿರುವಿ. ನೀನು ನಿನ್ನೇದಿವಸ ನನಗೆ ಕೊಡಿಸಿದ ಮದ್ಯಕ್ಕಾಗಿ ನಿನಗೆ ವಂದನೆಯನ್ನು ಸಮರ್ಪಿಸುತ್ತೇನೆ.

ಭಾಸ್ಕರ:—ಏನೋ ಸ್ವಾಮಿ ! ನನಗೇನೂ ಜ್ಞಾಪಕವಿಲ್ಲವು. ನಾನು ಇಲ್ಲೇ ಇರುವ ಮೈದಾನದಲ್ಲಿ ಬಿದ್ದಿದ್ದು ಜ್ಞಾನಬಂದಮೇಲೆ ಎದ್ದು ಹೋದದ್ದು ಮಾತ್ರ ಜ್ಞಾಪಕವಿದೆ. ನಾನು ನನ್ನ ಹೆಸರನ್ನು ಹೇಳಿದ್ದಮೇಲೆ ನಿಮ್ಮ ಹೆಸರನ್ನು ನೀವು ಹೇಳಿದ ಜ್ಞಾಪಕವಿಲ್ಲವಲ್ಲಾ. ಬೇಕಾಗಿದ್ದರೆ ಈ ದಿವಸವೂ ಬೇಕಾದಷ್ಟು ಮದ್ಯವನ್ನು ಕುಡಿಡಿಸುತ್ತೇನೆ.

ಹರಿಜಂದ್ರ:—ನನ್ನ ಹೆಸರನ್ನು ಹೇಳಲು ನನಗಿಷ್ಟವಿಲ್ಲ. ಮದ್ಯವನ್ನು ಕುಡಿಯೋಣ. ನನಗೆ ಬಹಳ ಅವಸರವಾದ ಕೆಲಸವೊಂದಿದೆ. ಆಗಲೇ ಎಂಟು ಗಂಟೆಯಾಯಿತು. ನಾನು ಹೋಗಬೇಕು.

ಭಾಸ್ಕರನು:—ಮದ್ಯವನ್ನು ತಾನೇ ತರುವುದಾಗಿ ಹೇಳಿ ಮದ್ಯವನ್ನು ಮಾರುವನ ಬಳಿಗೆ ಹೋಗಿ " ಅಯ್ಯಾ ! ಆಗಾಗ್ಗೆ ನಾನಾ ವಿಧವಾದ ಮದ್ಯಗಳ ಹೆಸರನ್ನು ಹೇಳಿ ಅವುಗಳ ಗುಣವನ್ನು ಹೊಗಳುತ್ತಾ ಇರು. ನಾನು ಕರೆದಾಗಲೆಲ್ಲಾ ಬೇರೆಬೇರೆ ವಿಧದ ಮದ್ಯಗಳನ್ನು ತೆಗೆದುಕೊಂಡುಬಾ. ಇದೋ ಇಲ್ಲಿ ಐವತ್ತುರೂಪಾಯಿಗಳಿವೆ" ಎಂದು ಹೇಳಿ ಮೂರು ಶೀಸೆ ವಿಸ್ಕಿ ಎಂಬುದನ್ನು ತೆಗೆದುಕೊಂಡುಬಂದು ಒಟ್ಟಿಗೆ

ಳಲ್ಲಿ ಸುರಿದು ಕೊಟ್ಟು ತಾನೂ ಕುಡಿಯುವವನಂತೆ ನಟಿಸಿದನು. ಹರಿಜಂದ್ರನು ಭಾಸ್ಕರನ ಉದಾರತ್ವಕ್ಕಾಗಿ ಅವನನ್ನು ವಂದಿಸುತ್ತಾ ಕೊಟ್ಟಿದ್ದನ್ನೆಲ್ಲಾ ಕುಡಿದು ಇನ್ನು ಸಾಕು ಹೋಗೋಣವೆಂದು ಹೇಳಿದನು.

ಅಷ್ಟುಹೊತ್ತಿಗೆ ಆ ಮದ್ಯದಂಗಡಿಯ ಯಜಮಾನನು ಅಲ್ಲಿಗೆ ಬಂದು ಭಾಸ್ಕರನನ್ನು ಕುರಿತು " ಅಯ್ಯಾ ಈಗತಾನೇ ನನ್ನ ಸೇವಕನು ಹೊಸದಾಗಿ ಬಂದ ಫ್ರಾಂಸ್ ದೇಶದ ಹಳೆಯ ದ್ರಾಕ್ಷಾರಸವನ್ನು ತಂದಿರುತ್ತಾನೆ. ಅದರ ಗುಣವನ್ನು ನಾನು ಇಷ್ಟೆಂದು ಹೇಳಲಾರೆನು. ಬಹಳ ದೊಡ್ಡ ಮನುಷ್ಯರೆಲ್ಲರೂ ಅದನ್ನು ನನ್ನಿಂದ ತರಿಸಿ ಕುಡಿಯುತ್ತಾರೆ. ನಿಮಗಾಗಿ ಮೂರು ಶೀಸೆಗಳನ್ನು ತಂದು ಕೊಡಲಾ" ಎಂದು ಕೇಳಿದನು. ಭಾಸ್ಕರನು ಹರಿಜಂದ್ರನ ಮುಖವನ್ನು ನೋಡಲು ಅವನು ತರಿಸೆಂದು ತಲೆಯನ್ನಲ್ಲಾಡಿಸಿದನು. ಭಾಸ್ಕರನು ಮದ್ಯದಂಗಡಿಯವನನ್ನು ಮೂರು ಶೀಸೆಗಳನ್ನು ತರುವಹಾಗೆ ಹೇಳಿದನು. ಅವನು ತರುವುದಕ್ಕೆ ಹೋದನು. ಅಷ್ಟರಲ್ಲೇ ಭಾಸ್ಕರನು ತನ್ನ ಬಳಿಯಲ್ಲಿಟ್ಟುಕೊಂಡಿದ್ದ ಒಂದು ಪುಡಿಯನ್ನು ತೆಗೆದು ಯಾರೂ ಕಾಣದಹಾಗೆ ಒಂದು ಬಟ್ಟಲಿಗೆ ಹಾಕಿ ಸಿದ್ಧವಾಗಿಟ್ಟುಕೊಂಡಿದ್ದನು. ಮದ್ಯದ ಶೀಸೆಗಳು ಬಂದಕೂಡಲೇ ಆ ಬಟ್ಟಲಿಗೆ ಅದನ್ನು ಸುರಿದು ಹರಿಜಂದ್ರನಿಗೆ ಕೊಟ್ಟು ತಾನೂ ಕುಡಿಯುವಂತೆ ನಟಿಸುತ್ತಾ ಆಹಾ! ಎಷ್ಟು ರುಚಿಯಾಗಿದೆ. ಎಂದು ಕೂಗುತ್ತಾ ಬಟ್ಟಲುಗಳಾದಮೇಲೆ ಬಟ್ಟಲುಗಳನ್ನು ತುಂಬಿ ಹರಿಜಂದ್ರನಿಗೂ ಕೊಡುತ್ತಾ ತಾನು ಕುಡಿಯುವಂತೆ ನಟಿಸುತ್ತಾ ಬಂದನು. ಮದ್ಯದ ವೇಗವು ಹರಿಜಂದ್ರನ ತಲೆಯನ್ನೇರಿತು. ಉನ್ಮಾದಾವಸ್ಥೆಯು ಬಂದಿತು, ಅದನ್ನರಿತ ಭಾಸ್ಕರನು ತಾನೂ ಮತ್ತೇರಲ್ಪಟ್ಟವನಹಾಗೆ ಮಾತನಾಡುತ್ತಾ ಮದ್ಯವು ಮುಗಿದುಹೋಗಲು ಇನ್ನೂ ಮದ್ಯ ಎಂದು ಕೂಗಿದನು. ಕಾದು ಕೊಂಡಿದ್ದ ಮದ್ಯದಂಗಡಿಯವನು ಇನ್ನೆರಡು ಶೀಸೆಗಳನ್ನು ತಂದಿಟ್ಟನು. ಹರಿಜಂದ್ರನು ಅವುಗಳನ್ನೂ ಕುಡಿದುಬಿಟ್ಟು ಕುಣಿಯತೊಡಗಿದನು. ಆಗ ಭಾಸ್ಕರನು " ವಹವಾ! ಇದೀಗ ಒಳ್ಳೇಮದ್ಯ!! ಅಲ್ಲವೇ? ಅಣ್ಣಾ ನೀನೇಹೇಳು ಹೊತ್ತಾಗಲಿಲ್ಲವೆ? ಹೋಗೋಣ ನೀನು--ನೀನೆಲ್ಲಿಗೋ ಹೋಗಬೇಕೆಂದೆಯಲ್ಲಾ? ಆಗಲಿ ಹೋಗೋಣ. ಎಲ್ಲಿಗಣ್ಣಾ ಹೋಗುವುದು?

ಹರಿಜಂದ್ರ;——ಅಹಹ! ಓ! ಓ! ಓಹೋ ಹೊತ್ತಾಯಿತೆ? ಹತ್ತುಗಂಟೆಗೆ ಸರಿಯಾಗಿ ಮಿಟಿಂಗ್. ನಾನು ಆಪಾ ಹವುದು ನಾನು ಬಿ. ಎ. ಪರೀಕ್ಷೆ ಕೊಟ್ಟಿಲ್ಲವೇ? ನಾನು ನಾಳೇದಿವಸ ಒಬ್ಬ ವಿಧವೆಯನ್ನು ಮದುವೆಯಾಗುತ್ತೇನೆ. ನೀವೆಲ್ಲಾ ಮೂಷರು--ಆಹಾ! ನಾವು ಪೋಲೀಸಿನವರನ್ನೆಲ್ಲಾ ಶೀಕ್ಷಿಸಬೇಕು. ಸರ್ಕಾರವಂತೆ——

ಎಲ್ಲಿಯ ಸರ್ಕಾರ-ಬನ್ನಿ-ನಾವೆಲ್ಲಾ ಸರ್ಕಾರವನ್ನೇ ತಲೆಕೆಳಗುಮಾಡೋಣ, ಓಹೋ ನಮ್ಮ ಹೊಸ ಮನುಷ್ಯನೆಲ್ಲಿ ,, ಎಂದು ಹೇಳುವನು '' ಎಲ್ಲಿ ಇನ್ನಿಷ್ಟು ಮದ್ಯ ಕೊಡು ಹೊತ್ತಾಯಿತಪ್ಪಾ ನಾನು ಹೊರಡುತ್ತೇನೆ (ಎಂದು ಬೀದಿಗೆ ಬಂದು ಭಾಸ್ಕರನು ಕೊಟ್ಟಿದ್ದ ಪುಡಿಯ ಮಹಾತ್ಮೆಯಿಂದ ಜ್ಞಾನ ಹೋಗಿ ನೆಲದಮೇಲೆ ಉರುಳಿದನು.)

ಭಾಸ್ಕರನು:—ಸುತ್ತಲೂ ನೋಡಿ ಯಾರೂಇಲ್ಲದಿರುವುದನ್ನು ತಿಳಿದು ದೂರದಲ್ಲಿ ನಿಂತುಕೊಂಡಿದ್ದ ಗಾಡಿಯನ್ನು ಬರುವಂತೆ ಸನ್ನೇಮಾಡಿದನು. ಅವನು ಗಾಡಿಯೊಡನೆ ಬಂದಕೂಡಲೇ ಇಬ್ಬರೂ ಸೇರಿ ಹರಿಜಂದ್ರನನ್ನು ಗಾಡಿಯೊಳಕ್ಕೆ ಎತ್ತಿ ಕೂರಿಸಿ ಭಾಸ್ಕರನು ತಾನೂ ಕುಳಿತುಕೊಂಡು ಬಾಗಿಲನ್ನೂ ಕಿಟಕಿಗಳನ್ನೂ ಮುಚ್ಚಿ ಗಾಡಿಯನ್ನು ಮೆಲ್ಲಗೆ ಹೊಡೆಯುವಹಾಗೆ ಹೇಳಿದನು. ಗಾಡಿಯು ಹೋಗುತ್ತಿದ್ದ ಹಾಗೆಯೇ ಭಾಸ್ಕರನು ಹರಿಜಂದ್ರನ ಮೇಲಿನ ಉಡುಪುಗಳನ್ನು ಕಳಚಿಕೊಂಡು ತಾನು ಧರಿಸಿ ತನ್ನ ಮಿಾಶೆ ಮುಂತಾದವುಗಳನ್ನು ಅವನದರಹಾಗೇ ಮಾಡಿಕೊಂಡು ಗಾಡಿಯನ್ನು ನಿಲ್ಲಿಸುವಹಾಗೆ ಹೇಳಿ ತಾನು ಕೆಳಕ್ಕಿಳಿದು ಗಾಡಿಯನ್ನು ಗೋವಿಂದನಮನೆಗೆ ತೆಗೆದುಕೊಂಡುಹೋಗುವಹಾಗೆ ಹೇಳಿದನು. ಗಾಡಿಯು ಸ್ವಲ್ಪ ಹೊತ್ತಿಗೆಲ್ಲಾ ಗೋವಿಂದನ ಮನೆಯನ್ನು ಸೇರಿತು. ಅದನ್ನೇ ಕಾದಿದ್ದ ಗೋವಿಂದನು ತನ್ನ ಸೇವಕನ ಸಹಾಯದಿಂದ ಹರಿಜಂದ್ರನನ್ನು ಒಳಕ್ಕೆ ಸಾಗಿಸಿ ಅವನನ್ನೊಂದುಕಡೆ ಮಲಗಿಸಿ ಗಾಡಿಯವನನ್ನು ಕಾದಿರುವಹಾಗೆ ಆಪ್ಪಣೆಮಾಡಿದನು.

ಇತ್ತ ಗಾಡಿಯಿಂದಿಳಿದ ಭಾಸ್ಕರನು ಗೋಪ್ಯವಾದೊಂದು ಸ್ಥಳಕ್ಕೆ ಹೋಗಿ ಅಲ್ಲಿ ತನ್ನ ಚೀಲದಲ್ಲಿ ತುಂಬಿಕೊಂಡಿದ್ದ ಮದ್ಯವನ್ನೆಲ್ಲಾ ಸುರಿದುಬಿಟ್ಟು ಒಂದು ಕನ್ನಡಿಯಿಂದ ದೀಪದ ಬೆಳಕಿನಲ್ಲಿ ತನ್ನ ಆಕಾರವನ್ನು ನೋಡಿಕೊಳ್ಳಲು ಹರಿಜಂದ್ರನಹಾಗೇ ಕಂಡುಬರಲು ಇನ್ನು ಭಯವಿಲ್ಲವೆಂದು ಯೋಚಿಸಿ ನೆಟ್ಟಗೆ ತಾನು ಬೆಳಗ್ಗೆ ನೋಡಿಕೊಂಡು ಬಂದಿದ್ದ ಮನೆಯ ಬಳಿಗೆ ಹೋದನು. ಆಗಲೇ ಅನೇಕರು ಆ ಮನೆಯನ್ನು ಹೊಗುತ್ತಿದ್ದರು. ಭಾಸ್ಕರನು ತಾನೂ ಸಹಾ ಹಳಬನಂತೆ ಬಾಗಿಲಿಗೆ ಬರಲು ಅಲ್ಲಿದ್ದ ತರುಣರಿಬ್ಬರು,, ಹರಿಜಂದ್ರಾ! ಗುಂಡಿಯೆಲ್ಲಿ? ನಿನಗೆಷ್ಟುದಿವಸ ಹೇಳುವುದು '' ಎಂದರು. ಕೂಡಲೇ ಭಾಸ್ಕರನು ತನ್ನ ಕಿಶೆಯಲ್ಲಿಟ್ಟುಕೊಂಡಿದ್ದ ಗುಂಡಿಯನ್ನು ತೋರಿಸಲು ಅವರು ಇವನನ್ನು ಒಳಕ್ಕೆ ಬಿಟ್ಟುಬಿಟ್ಟರು,

ಆಗಲೇ ಹತ್ತುಗಂಟೆಯಾಗಿತ್ತು. ಮೆಂಬರುಗಳೆಲ್ಲಾ ಬಂದು ಸೇರಿದ್ದರು. ಇನ್ನು ಬರುವವರಾರೂ ಇಲ್ಲವೆಂದು ಹೊರಬಾಗಲು ಹಾಕಲ್ಪಟ್ಟಿತು. ನಮ್ಮ ಪಾತಕರಿಗೆ ಈ ಮನೆಯು ಹೊಸದಲ್ಲವಾದ್ದರಿಂದ ಅದರ ವಿಷಯವಾಗಿ ಹೆಚ್ಚೇನೂ ಒರೆಯಬೇಕಾ

ದದ್ದಿಲ್ಲ. ಇಲ್ಲಿ ನಡೆಯುವ ವಿಷಯಗಳು ಸ್ವಲ್ಪಮಾತ್ರವೂ ಹೊರಗೆ ಕೇಳಿಸುತ್ತಿರ ಲಿಲ್ಲ. ಎಲ್ಲರೂ ಮದ್ಯಪಾನಸಹಿಷೇಧಸಂಬಂಧವಾದ ಉಪನ್ಯಾಸವೆಂದೇ ತಿಳಿದುಕೊಂಡಿ ದ್ದರು. ಎಂ ಸಂಘದ ಮುಖ್ಯಸ್ಥನು ಅಗ್ರಾಸನಾಧಿಪತಿಯಾಗಿದ್ದನು. ಸಭೆಯ ಪ್ರಾರಂ ಭದಲ್ಲಿ ಅವನು ಅಲ್ಲಿದ್ದವರನ್ನು ಕುರಿತು ‘‘ಸಹೋದರಿರಾ! ಈ ದಿವಸದ ಮೀಟಿಂಗ್ ಯಾವಕಾರಣಕ್ಕಾಗಿಂದು ನಿಮಗೆಲ್ಲರಿಗೂ ತಿಳಿದೇ ಇದೆ. ನಮ್ಮ ಮೇಲೆ ಪೊಲೀಸಿನವ ರಿಗೂ, ಸರ್ಕಾರದವರಿಗೂ ಯಾವದೋ ಒಂದು ವಿಧವಾದ ಸಂದೇಹವುಂಟಾಗಿರುವು ದಾಗಿ ತಿಳಿಯಬಂದಿದೆ. ಅದಕ್ಕೇನುಕಾರಣವೋ ತಿಳಿಯದು. ಸುಮಾರು ನಾವು ಈಗ ಒಂದು ತಿಂಗಳ ಹಿಂದೆ ನಡೆಸಿದ್ದ ದರೋಡೆಯ ವಿಷಯದಲ್ಲೇನಾದರೂ ಅವರಿಗೆ ಸಂಶ ಯವಿದೆಯೋ ಏನೋ ತಿಳಿಯದು? ನಾವು ಹೇಗಾದರೂ ಮಾಡಿ ಇನ್ನೊಂದು ತಿಂಗಳ ಕಾಲ ಕಳೆಯಬೇಕಾಗಿದೆ. ಆದ್ದರಿಂದ ನೀವೆಲ್ಲಾ ಹೆಚ್ಚಾಗಿ ಬೀದಿಯಲ್ಲಿ ತಿರುಗಾಡ ಬೇಡಿ: ಮತ್ತು ಹಾಗೆ ಬೀದಿಯಲ್ಲಿ ಹೋದರೂ ಜೊತೆಯಲ್ಲಿ ರಿವಾಲ್ವರುಗಳನ್ನು ತೆಗೆದುಕೊಂಡು ಹೋಗಬೇಡಿ. ಮುದುನೆಯು ನೆರಸೇರಿ ನಮ್ಮಿಷ್ಟವು ಕೈಗೂಡಿಬಿಟ್ಟರೆ ಸಾಕು.’’ ಎಂದು ಹೇಳಿ ಕುಳಿತುಕೊಂಡನು.

ಆಗ ಸಮಾಪದಲ್ಲೇ ಕುಳಿತಿದ್ದ ಈಶ್ವರಲಾಲನೆಂಬವನೊಬ್ಬನು ಮಾತನಾಡುವು ದಕ್ಕಾಗಿ ಎದ್ದುನಿಂತನು. ಇವನು ಸರಿಯಾಗಿ ಆರುವರಡಿಗಳ ಎತ್ತರವೂ ಅದಕ್ಕೆ ತಕ್ಕ ಗಾತ್ರವೂ ಉಳ್ಳ ರಾಕ್ಷಸನಾಗಿದ್ದನು. ಅವನು ಅಲ್ಲಿದ್ದವರನ್ನು ಕುರಿತು ‘‘ಸಹೋದ ರರಾ! ನೀವೆಲ್ಲಾ ನಮ್ಮ ಪ್ರೀತಿಪಾತ್ರರಾದ ಯಜಮಾನರ ಮಾತನ್ನು ಕೇಳಿರುವಿರಿ. ಇಷ್ಟು ದಿವಸವೂ ಹೆದರದಿದ್ದ ನಾವು ಈಗತಾನೇ ಯಾಕೆ ಹೆದರಬೇಕು. ಸರ್ಕಾರದ ವರೂ ನಮ್ಮನ್ನೇನೂ ಮಾಡಲಾರರು. ನಿಮ್ಮಲ್ಲಿ ಹಾಗೇನಾದರೂ ಬಹಳ ಹೆದರಿಕೊಂ ಡಿರತಕ್ಕವರಿದ್ದರೆ ನಮ್ಮ ಗುಪ್ತಗೃಹದಲ್ಲಿ ಸ್ವಲ್ಪದಿವಸಗಳ ಮಟ್ಟಿಗೆ ವಾಸಮಾಡುತ್ತಿರಿ. ಅದರೊಳಗಾಗಿಮತ್ತೆರಡು ಮಂದಿ ಸಾಹುಕಾರರನ್ನು ಲೂಟೀಮಾಡಿಕೊಂಡು ಆ ಹಣ ದಿಂದ ಬೇರೆ ಬೇರೆ ಕಡೆ ಸುಖವಾಗಿ ಆ ಮೇಲೆ ವಾಸಮಾಡುತ್ತಿರಬಹುದು.’’ ಎಂದು ಹೇಳಿ ಕುಳಿತನು. ಅಗ್ರಾಸನಾಧಿಪತಿಯು ‘‘ಹರಿಚಂದ್ರ! ನೀನೇನು ಹೇಳುವಿ! ಎಂದು ಕೂಗಿದನು.’’ ಭಾಸ್ಕರನು ಥಟ್ಟನೆ ಭಯಪಟ್ಟರೂ ಧೈರ್ಯವನ್ನು ತಂದುಕೊಂಡು ‘‘ಸಹೋದರರಾ! ನಾನು ಇನ್ನು ಹೆಚ್ಚಾಗಿ ಏನು ಹೇಳಲಿ? ಆದರೆ ನಮ್ಮ ಸಂಘವು ಜಯವನ್ನು ಹೊಂದಬೇಕಾಗಿದ್ದರೆ ದೊಡ್ಡಮನುಷ್ಯರ ಸಹಾಯವಿರಬೇಕು. ಇನ್ನು ಸ್ವಲ್ಪ ದಿವಸಗಳಲ್ಲೇ ಲಾಯರ್ ಕಾಳಿಕಿಶೋರರು ತಮ್ಮ ಮಗಳಾದ ಆನಂದಿಯೆಂಬ ವಿಧವೆಯನ್ನು ನನಗೆ ಮದುವೇ ಮಾಡಿಕೊಡುತ್ತಾರೆ. ಆ ಮೇಲೆ ನಮಗೆ ಅವರ ಸಹಾ

ಎಲ್ಲಿಯ ಸರ್ಕಾರ–ಬನ್ನಿ–ನಾವೆಲ್ಲಾ ಸರ್ಕಾರವನ್ನೇ ತಲೆಕೆಳಗುಮಾಡೋಣ, ಓಹೋ ನಮ್ಮ ಹೊಸ ಮನುಷ್ಯನೆಲ್ಲಿ ,, ಎಂದು ಹೇಳುವನು '' ಎಲ್ಲಿ ಇನ್ನಿಷ್ಟು ಮದ್ಯ ಕೊಡು ಹೊತ್ತಾಯಿತಪ್ಪಾ ನಾನು ಹೊರಡುತ್ತೇನೆ (ಎಂದು ಬೀದಿಗೆ ಬಂದು ಭಾಸ್ಕರನು ಕೊಟ್ಟಿದ್ದ ಪುಡಿಯ ಮಹಾತ್ಮೆಯಿಂದ ಜ್ಞಾನ ಹೋಗಿ ನೆಲದಮೇಲೆ ಉರುಳಿದನು.)

ಭಾಸ್ಕರನು:—ಸುತ್ತಲೂ ನೋಡಿ ಯಾರೂಇಲ್ಲದಿರುವುದನ್ನು ತಿಳಿದು ದೂರದಲ್ಲಿ ನಿಂತುಕೊಂಡಿದ್ದ ಗಾಡಿಯನ್ನು ಬರುವಂತೆ ಸನ್ನೇಮಾಡಿದನು. ಅವನು ಗಾಡಿಯೊಡನೆ ಬಂದಕೂಡಲೇ ಇಬ್ಬರೂ ಸೇರಿ ಹರಿಜಂದ್ರನನ್ನು ಗಾಡಿಯೊಳಕ್ಕೆ ಎತ್ತಿ ಕೂರಿಸಿ ಭಾಸ್ಕರನು ತಾನೂ ಕುಳಿತುಕೊಂಡು ಬಾಗಿಲನ್ನೂ ಕಿಟಕಿಗಳನ್ನೂ ಮುಚ್ಚಿ ಗಾಡಿಯನ್ನು ಮೆಲ್ಲಗೆ ಹೊಡೆಯುವಹಾಗೆ ಹೇಳಿದನು. ಗಾಡಿಯು ಹೋಗುತ್ತಿದ್ದ ಹಾಗೆಯೇ ಭಾಸ್ಕರನು ಹರಿಜಂದ್ರನ ಮೇಲಿನ ಉಡುಪುಗಳನ್ನು ಕಳಚಿಕೊಂಡು ತಾನು ಧರಿಸಿ ತನ್ನ ಮಾತೆ ಮುಂತಾದವುಗಳನ್ನು ಅವನದರಹಾಗೇ ಮಾಡಿಕೊಂಡು ಗಾಡಿಯನ್ನು ನಿಲ್ಲಿಸುವಹಾಗೆ ಹೇಳಿ ತಾನು ಕೆಳಕ್ಕಿಳಿದು ಗಾಡಿಯನ್ನು ಗೋವಿಂದನಮನೆಗೆ ತೆಗೆದುಕೊಂಡುಹೋಗುವಹಾಗೆ ಹೇಳಿದನು. ಗಾಡಿಯು ಸ್ವಲ್ಪ ಹೊತ್ತಿಗೆಲ್ಲಾ ಗೋವಿಂದನ ಮನೆಯನ್ನು ಸೇರಿತು. ಅದನ್ನೇ ಕಾದಿದ್ದ ಗೋವಿಂದನು ತನ್ನ ಸೇವಕನ ಸಹಾಯದಿಂದ ಹರಿಜಂದ್ರನನ್ನು ಒಳಕ್ಕೆ ಸಾಗಿಸಿ ಅವನನ್ನೊಂದುಕಡೆ ಮಲಗಿಸಿ ಗಾಡಿಯವನನ್ನು ಕಾದಿರುವಹಾಗೆ ಅಪ್ಪಣೆಮಾಡಿದನು.

ಇತ್ತ ಗಾಡಿಯಿಂದಿಳಿದ ಭಾಸ್ಕರನು ಗೌಪ್ಯವಾದೊಂದು ಸ್ಥಳಕ್ಕೆ ಹೋಗಿ ಅಲ್ಲಿ ತನ್ನ ಚೀಲದಲ್ಲಿ ತುಂಬಿಕೊಂಡಿದ್ದ ಮದ್ಯವನ್ನೆಲ್ಲಾ ಸುರಿದುಬಿಟ್ಟು ಒಂದು ಕನ್ನಡಿಯಿಂದ ದೀಪದ ಬೆಳಕಿನಲ್ಲಿ ತನ್ನ ಆಕಾರವನ್ನು ನೋಡಿಕೊಳ್ಳಲು ಹರಿಜಂದ್ರನಹಾಗೇ ಕಂಡುಬರಲು ಇನ್ನು ಭಯವಿಲ್ಲವೆಂದು ಯೋಚಿಸಿ ನೆಟ್ಟಗೆ ತಾನು ಬೆಳಗ್ಗೆ ನೋಡಿಕೊಂಡು ಬಂದಿದ್ದ ಮನೆಯ ಬಳಿಗೆ ಹೋದನು. ಆಗಲೇ ಅನೇಕರು ಆ ಮನೆಯನ್ನು ಹೊಗುತ್ತಿದ್ದರು. ಭಾಸ್ಕರನು ತಾನೂ ಸಹಾ ಹಳಬನಂತೆ ಬಾಗಿಲಿಗೆ ಬರಲು ಅಲ್ಲಿದ್ದ ತರುಣರಿಬ್ಬರು,, ಹರಿಜಂದ್ರಾ! ಗುಂಡಿಯೆಲ್ಲಿ? ನಿನಗೆಷ್ಟುದಿವಸ ಹೇಳುವುದು '' ಎಂದರು. ಕೂಡಲೇ ಭಾಸ್ಕರನು ತನ್ನ ಕಿಶೆಯಲ್ಲಿಟ್ಟುಕೊಂಡಿದ್ದ ಗುಂಡಿಯನ್ನು ತೋರಿಸಲು ಅವರು ಇವನನ್ನು ಒಳಕ್ಕೆ ಬಿಟ್ಟುಬಿಟ್ಟರು,

ಆಗಲೇ ಹತ್ತುಗಂಟೆಯಾಗಿತ್ತು. ಮೆಂಬರುಗಳೆಲ್ಲಾ ಬಂದು ಸೇರಿದ್ದರು. ಇನ್ನು ಬರುವವರಾರೂ ಇಲ್ಲವೆಂದು ಹೊರಬಾಗಲು ಹಾಕಲ್ಪಟ್ಟಿತು. ನಮ್ಮ ಪಾಠಕರಿಗೆ ಈ ಮನೆಯು ಹೊಸದಲ್ಲವಾದ್ದರಿಂದ ಆದರ ವಿಷಯವಾಗಿ ಹೆಚ್ಚೇನೂ ಬರೆಯಬೇಕಾ

ದದ್ದಿಲ್ಲ. ಇಲ್ಲಿ ನಡೆಯುವ ವಿಷಯಗಳು ಸ್ವಲ್ಪಮಾತ್ರವೂ ಹೊರಗೆ ಕೇಳಿಸುತ್ತಿರ ಲಿಲ್ಲ. ಎಲ್ಲರೂ ಮದ್ಯಪಾನಸಿನೇಧಸಂಬಂಧವಾದ ಉಪನ್ಯಾಸವೆಂದೇ ತಿಳಿದುಕೊಂಡಿ ದ್ದರು. ಎಂ ಸಂಘದ ಮುಖ್ಯಸ್ಥನು ಅಗ್ರಾಸನಾಧಿಪತಿಯಾಗಿದ್ದನು. ಸಭೆಯ ಪ್ರಾರಂ ಭದಲ್ಲಿ ಅವನು ಅಲ್ಲಿದ್ದವರನ್ನು ಕುರಿತು ,, ಸಹೋದರಿರಾ! ಈ ದಿವಸದ ಮೀಟಿಂಗ್ ಯಾವಕಾರಣಕ್ಕಾಗಿಂದು ನಿಮಗೆಲ್ಲರಿಗೂ ತಿಳಿದೇ ಇದೆ. ನಮ್ಮ ಮೇಲೆ ಪೊಲೀಸಿನವ ರಿಗೂ, ಸರ್ಕಾರದವರಿಗೂ ಯಾವದೋ ಒಂದು ವಿಧವಾದ ಸಂದೇಹವುಂಟಾಗಿರುವು ದಾಗಿ ತಿಳಿಯಬಂದಿದೆ. ಅದಕ್ಕೇನುಕಾರಣವೋ ತಿಳಿಯದು. ಸುಮಾರು ನಾವು ಈಗ ಒಂದು ತಿಂಗಳ ಹಿಂದೆ ನಡೆಸಿದ್ದ ದರೋಡೆಯ ವಿಷಯದಲ್ಲೇನಾದರೂ ಅವರಿಗೆ ಸಂಶ ಯವಿದೆಯೋ ಏನೋ ತಿಳಿಯದು? ನಾವು ಹೇಗಾದರೂ ಮಾಡಿ ಇನ್ನೊಂದು ತಿಂಗಳ ಕಾಲ ಕಳೆಯಬೇಕಾಗಿದೆ. ಆದ್ದರಿಂದ ನೀವೆಲ್ಲಾ ಹೆಚ್ಚಾಗಿ ಬೀದಿಯಲ್ಲಿ ತಿರುಗಾಡ ಬೇಡಿ: ಮತ್ತು ಹಾಗೆ ಬೀದಿಯಲ್ಲಿ ಹೋದರೂ ಜೊತೆಯಲ್ಲಿ ರಿವಾಲ್ವರುಗಳನ್ನು ತೆಗೆದುಕೊಂಡು ಹೋಗಬೇಡಿ. ಮದುವೆಯು ನೆರವೇರಿ ನಮ್ಮಿಷ್ಟವು ಕೈಗೂಡಿಬಿಟ್ಟರೆ ಸಾಕು." ಎಂದು ಹೇಳಿ ಕುಳಿತುಕೊಂಡನು.

ಆಗ ಸಮೀಪದಲ್ಲೇ ಕುಳಿತಿದ್ದ ಈಶ್ವರಲಾಲನೆಂಬವನೊಬ್ಬನು ಮಾತನಾಡುವು ದಕ್ಕಾಗಿ ಎದ್ದುನಿಂತನು. ಇವನು ಸರಿಯಾಗಿ ಆರುವರಡಿಗಳ ಎತ್ತರವೂ ಅದಕ್ಕೆ ತಕ್ಕ ಗಾತ್ರವೂ ಉಳ್ಳ ರಾಕ್ಷಸನಾಗಿದ್ದನು. ಅವನು ಅಲ್ಲಿದ್ದವರನ್ನು ಕುರಿತು ,, ಸಹೋದ ರರಾ! ನೀವೆಲ್ಲಾ ನಮ್ಮ ಪ್ರೀತಿಪಾತ್ರರಾದ ಯಜಮಾನರ ಮಾತನ್ನು ಕೇಳಿರುವಿರಿ. ಇಷ್ಟು ದಿವಸವೂ ಹೆದರದಿದ್ದ ನಾವು ಈಗತಾನೇ ಯಾಕೆ ಹೆದರಬೇಕು. ಸರ್ಕಾರದ ವರೂ ನಮ್ಮನ್ನೇನೂ ಮಾಡಲಾರರು. ನಿಮ್ಮಲ್ಲಿ ಹಾಗೇನಾದರೂ ಬಹಳ ಹೆದರಿಕೊಂ ಡಿರತಕ್ಕವರಿದ್ದರೆ ನಮ್ಮ ಗುಪ್ತಗೃಹದಲ್ಲಿ ಸ್ವಲ್ಪದಿವಸಗಳ ಮಟ್ಟಿಗೆ ವಾಸಮಾಡುತ್ತಿರಿ. ಆದರೊಳಗಾಗಿಮತ್ತೆರಡು ಮಂದಿ ಸಾಹುಕಾರರನ್ನು ಲೂಟೀಮಾಡಿಕೊಂಡು ಆ ಹಣ ದಿಂದ ಬೇರೆ ಬೇರೆ ಕಡೆ ಸುಖವಾಗಿ ಆ ಮೇಲೆ ವಾಸಮಾಡುತ್ತಿರಬಹುದು.'' ಎಂದು ಹೇಳಿ ಕುಳಿತನು. ಅಗ್ರಾಸನಾಧಿಪತಿಯು ,, ಹರಿಜಂದ್ರ! ನೀನೇನು ಹೇಳುವಿ! ಎಂದು ಕೂಗಿದನು.'' ಭಾಸ್ಕರನು ಥಟ್ಟನೆ ಭಯಪಟ್ಟರೂ ಧೈರ್ಯವನ್ನು ತಂದುಕೊಂಡು ,, ಸಹೋದರರಾ! ನಾನು ಇನ್ನು ಹೆಚ್ಚಾಗಿ ಏನು ಹೇಳಲಿ? ಆದರೆ ನಮ್ಮ ಸಂಘವು ಜಯವನ್ನು ಹೊಂದಬೇಕಾಗಿದ್ದರೆ ದೊಡ್ಡಮನುಷ್ಯರ ಸಹಾಯವಿರಬೇಕು. ಇನ್ನು ಸ್ವಲ್ಪ ದಿವಸಗಳಲ್ಲೇ ಲಾಯರ್ ಕಾಳಿಕಿಶೋರರು ತಮ್ಮ ಮಗಳಾದ ಆನಂದಿಯೆಂಬ ವಿಧವೆಯನ್ನು ನನಗೆ ಮದುವೇ ಮಾಡಿಕೊಡುತ್ತಾರೆ. ಆ ಮೇಲೆ ನಮಗೆ ಅವರ ಸಹಾ

ಯವು ಸಿಕ್ಕುತ್ತದೆ. ಇದೆಲ್ಲಾ ಇರಲಿ. ಸರ್ಕಾರದವರಿಂದಲೂ ಪೊಲೀಸಿನವರಿಂದಲೂ ನಮಗೇನು ಅಪಾಯಬರಬಲ್ಲದು? ನಾವು ಪ್ರಯತ್ನ ಮಾಡಿದರೆ ಸರ್ಕಾರದವರನ್ನು ತಲೆಕೆಳಗು ಮಾಡಬಹುದು. ಪೊಲೀಸಿನವರನ್ನೆಲ್ಲಾ ಕೊಲ್ಲಬಹುದು (ಆಗ ಅಲ್ಲಿದ್ದವರು ಹರಿಜಂದ್ರಾ! ಇದೇನು ವಿಪರೀತ? ಕುಡಿದಿದ್ದೀಯೋ? ಎಂದು ಕೂಗಿದರು). ಆಗ ಹರಿಜಂದ್ರನು (ಭಾಸ್ಕರ) ಇಲ್ಲ. ಇಲ್ಲ. ನಾನು ಕುಡಿದಿಲ್ಲ. ನಾವೇನು ಕೈಲಾಗದವರೋ? ನಾನೇನೋ ಕಲ್ಕತ್ತಾವನ್ನೇ ಬಿಟ್ಟು ಮತ್ತೆಲ್ಲಾದರೂ ಹೋಗಿ ನಮಗೆ ಮಧುಸೂದನನು ಕೊಡುವ ಹಣದಿಂದ ಜೀವನ ಮಾಡಬೇಕೆಂದಿರುತ್ತೇನೆ. (ಅಗ್ರಾಸನಾಧಿಪತಿಯು ಬಾಯಿನಮೇಲೆ ಬೆರಳಿಟ್ಟು ಹುಷಾರ್ ಎಂದು ಸನ್ನೆಮಾಡಿದನು.)

ಎಲ್ಲರೂ ಭಾಸ್ಕರನ ಉಪನ್ಯಾಸವು ಮುಗಿದ ಕೂಡಲೇ ಕೈತಟ್ಟಿ "ಬೇಷ್" ಇಂದು ಹರಿಜಂದ್ರನು ಕನ್ಫಪಟ್ಟಿದ್ದಾನೆಂದು ಅವನ ಬೆನ್ನನ್ನು ಕೆಲವರು ತಟ್ಟಿದರು. ಮತ್ತೆ ಕೆಲವರು (ಹರಿಜಂದ್ರಾ! ಬೀದಿಯಲ್ಲೆಲ್ಲಾದರೂ ಈ ರೀತಿ ಮಾತನಾಡಿಯೇ) ಕಾರಾಗೃಹವಾಸವು ಬರುವುದು! ಎಂದು ಹೇಳಿದರು. ಆಗ ಅಗ್ರಾಸನಾಧಿಪತಿಯು ಎದ್ದುನಿಂತು ಮದುವೆಯು ಎಂಟುದಿವಸದಲ್ಲಿ ನಡೆಯುವುದು. ಹೆದರಿಕೆಯುಳ್ಳವರೆಲ್ಲಾ ನಾಳೇದಿವಸದಿಂದ ಗುಪ್ತಗೃಹದಲ್ಲಿ ವಾಸಮಾಡಿರಿ! ಎಂದು ಹೇಳಿ ಸಭೆಯನ್ನು ಮುಗಿಸಿದನು. ಎಲ್ಲರೂ ಹರಿಜಂದ್ರನನ್ನು ಹೊಗಳುತ್ತಾ ಬೀದಿಗೆ ಬಂದರು. ಅಲ್ಲಿ ಎಲ್ಲರ ಕತ್ತಿಗೂ ಹೂವಿನ ಮಾಲೆಗಳು ಹಾಕಲ್ಪಟ್ಟವು. ಭಾಸ್ಕರನೂ ಹೊರಕ್ಕೆ ಬಂದು ವೇಗವಾಗಿ ನಡೆದು ಗೋವಿಂದನ ಮನೆಯನ್ನು ಸೇರಿದನು. ಇವನನ್ನೇ ಎದುರುನೋಡುತ್ತಿದ್ದ ಗೋವಿಂದನು ಇವನನ್ನು ಕರೆದುಕೊಂಡು ಹರಿಜಂದ್ರನು ಮಲಗಿದ್ದ ಕೊಠಡಿಗೆ ಹೋದನು. ಅಲ್ಲಿ ಭಾಸ್ಕರನು ಅವನ ಉಡುಪನ್ನು ಅವನಿಗೇನೆ ಹಾಕಿ ಕತ್ತಿಗೆ ಹೂವಿನ ಮಾಲೆಯನ್ನೂ ಹಾಕಿ ಅವನನ್ನೆತ್ತಿಕೊಂಡು ಬಂದು ಗಾಡಿಯಲ್ಲಿ ಹಾಕಿಕೊಂಡು ಕಾಳೀಬೀದಿಯ ಎಂಕೂಟದವರ ಮನೆಯ ಬಳಿ ಒಂದು ಮೂಲೆಯಲ್ಲಿ ಹಾಕಿಬಿಟ್ಟು ಪುನಃ ಗೋವಿಂದನ ಮನೆಯನ್ನು ತಲುಪಿ ಮಲಗಿ ನಿದ್ರೆಹೋದನು.

ಎಂಟನೆಯ ಅಧ್ಯಾಯ.

(ಪೋಲೀಸ್ ಅಧಿಕಾರಿಯ ಕೊಲೆ)

ಮಾರನೇದಿವಸ ಬೆಳಗ್ಗೆ ಹರಿಜಂದ್ರನು ಕಣ್ಣುತೆರೆದು ನೋಡಲು ತಾನು ಯಾವದೋ ಒಂದು ಮೂಲೆಯಲ್ಲಿ ಮಲಗಿರುವ ಹಾಗೆ ಕಾಣಬಂದಿತು. ಅಲ್ಲಿಗೆ

ತಾನು ಹೇಗೆ ಬಂದನೆಂಬುವುದು ಅವನಿಗೆ ಗೊತ್ತಾಗಲಿಲ್ಲ. ಕತ್ತಿನಲ್ಲಿ ಹೂವಿನ ಮಾಲೆ ಇರಲು ಅದು ಹೇಗೆ ಬಂದಿತೆಂದು ಯೋಚಿಸಿದನು. ಅವನಿಗೆ ಯಾವದೂ ಬಗೆ ಹರಿಯಲಿಲ್ಲ. ಮೆಲ್ಲಗೆ ಎದ್ದು ತಮ್ಮ ಸಂಘದ ಮನೆಯ ಬಳಿಗೆ ಹೋದನು. ಅಲ್ಲಿದ್ದ ಇಬ್ಬರು ಮೆಂಬರುಗಳು "ಹರಿಚಂದ್ರಾ ಇದೇನು ಬಂದದ್ದು. ರಾತ್ರಿ ನೀನು ಮಾತನಾಡಿದ್ದನ್ನು ನೋಡಿ ನೀನು ಕುಡಿದಿದ್ದೀ ಎಂದೇ ಯೋಚಿಸಿದ್ದೆವು" ಎಂದು ಹೇಳಿದರು.

ಹರಿಚಂದ್ರ:—ಏನು ? ರಾತ್ರಿ ಇಲ್ಲಿ ಮಾತನಾಡಿದೆನೇ ? ಏನೇನು ಹೇಳಿದೆನು ? ನನಗಾವುದೂ ಜ್ಞಾಪಕವಿಲ್ಲವಲ್ಲ.

ಮೆಂಬರುಗಳು:—ಚೆನ್ನಾಗಿ ಹೇಳಿದೆ. ಹಾಗಾದರೆ ಪಂಡಿತವಾಗಿಯೂ ನೀನು ಕುಡಿದಿದ್ದೀ. ಸರ್ಕಾರದವರಮೇಲೇ ತಿರಿಗಿಬೀಳಬೇಕೆಂದು ಹೇಳಿದೆಯಲ್ಲಾ ! ಕುಡಿದು ಬೀದಿಯಲ್ಲೇನಾದರೂ ಹೇಳೀಯಾ ? ಹುಸಾರ್.

ಇತ್ತ ಭಾಸ್ಕರನು ಬೆಳಗಾದಕೂಡಲೇ ಎದ್ದು ಕಾಳಿಕೇಶೋರನೆಂಬ ಲಾಯರಿಗೆ ಇಂತು ಕಾಗದ ಬರೆದನು. ನಿಮ್ಮ ಮಗಳನ್ನು ಹರಿಚಂದ್ರನಿಗೆ ಕೊಡಬೇಡಿ. ಏನಾದರೂ ಕಾರಣ ಹೇಳುತ್ತಾ ನಿಧಾನಿಸುತ್ತಾ ಇರಿ. ಮುಂದಲಿಂದ ಎಲ್ಲಾ ವಿಷಯಗಳನ್ನೂ ತಿಳಿಸುತ್ತೇನೆ. ಪತ್ತೇದಾರ ಭಾಸ್ಕರ

ಕಾಗದವನ್ನು ಬರೆದು ತಪ್ಪಾಲಿಗೆ ಹಾಕಿಬಿಟ್ಟು ತನ್ನ ಕೊಟಡಿಯಲ್ಲಿ ಕುಳಿತುಕೊಂಡು ಯೋಚಿಸಲಾರಂಭಿಸಿದನು. "ಮಧುಸೂದನನೇನೋ ಅವರ ಕೈಯಲ್ಲಿ ಶಿಕ್ಕಿಬಿದ್ದಿದ್ದಾನೆ. ಆದರೆ ಅವನು ಎಲ್ಲಿದ್ದಾನೆಂಬುದೂ, ಏನುಮಾಡುತ್ತಿರುವನೆಂಬದೂ ತಿಳಿಯದು. ಎಲ್ಲವನ್ನೂ ತಿಳಿಯುವುದಕ್ಕೆ ಅವರ ಗುಪ್ತಗೃಹವನ್ನು ಪ್ರವೇಶಮಾಡಲೇಬೇಕು. ಅಲ್ಲಿಗೆ ಹೇಗೆ ಹೋಗುವುದು. ? ಆದದ್ದಾಗಲಿ ! ನಮ್ಮ ಹರಿಚಂದ್ರನಿದ್ದಾನೆ.

ಭಾಸ್ಕರನು ಆ ದಿವಸ ಸಾಯಂಕಾಲ ಹಿಂದಿನದಿನಗಳ ಹಾಗೆಯೇ ಮದ್ಯದಂಗಡಿಗೆ ಹೋಗಿ ಹರಿಚಂದ್ರನನ್ನು ಮರಳುಮಾಡಿ ಅವನನ್ನು ಗೋವಿಂದನ ಮನೆಗೆ ಕರದುಕೊಂಡು ಬಂದು ಒಂದು ಕೊಠಡಿಯಲ್ಲಿ ಶೆರೆಹಾಕಿಬಿಟ್ಟು ತಾನು ಅವನ ಉಡುಪನ್ನು ಧರಿಸಿಕೊಂಡು ಸಂಘದ ಗೃಹದ ಬಳಿಗೆ ಹೋಗಿ, ತಾನು ಗುಪ್ತಗೃಹದೊಳಕ್ಕೆ ಹೋಗಬೇಕೆಂದು ಹೇಳಿದನು. ತಕ್ಷಣವೇ ಇವನನ್ನು ಕರೆದುಕೊಂಡುಹೋಗಿ ಅಲ್ಲಿದ್ದ ಒಂದು ಕೊಠಡಿಯಲ್ಲಿ ಕೆಳಕ್ಕೆ ಹಾಸಿದ್ದ ಜಮಖಾನವನ್ನು ತೆಗೆದು ನೆಲದಮೇಲೆ ಇದ್ದ ಒಂದು

ಮೊಳೆಯನ್ನು ಅದುಮಿದರು. ಸ್ವಲ್ಪ ಹೊತ್ತಿಗೆಲ್ಲಾ ಎಲ್ಲೋ ಗಂಟೆಯ ಶಬ್ದವಾಗಿ ಒಂದು ಸಣ್ಣ ಬಾಗಲು ನೆಲದಲ್ಲಿ ತೆರೆಯಲ್ಪಟ್ಟಿತು. ಭಾಸ್ಕರನು ಧೈರ್ಯವಾಗಿ ಒಳಕ್ಕೆ ಮೆಟ್ಟಿಲುಗಳನ್ನು ಇಳಿದುಹೋಗಲು ಬಾಗಲನ್ನು ತೆರೆದ ಮನುಷ್ಯನು ' ಹರಿಜಂದ್ರಾ, ಈ ದಿನದ ಕೊಳ್ಳೆಗೆ ನೀನೇಕೆ ಹೋಗಲಿಲ್ಲ ' ಎಂದು ಕೇಳಿದನು.

ಹರಿಜಂದ್ರ (ಭಾಸ್ಕರ)—ನನಗೆ ಆದರ ವಿಷಯವೇನೊ ಗೊತ್ತಿಲ್ಲವು. ನಾನು ಹಗಲೆಲ್ಲಾ ಅಡಗಿಕೊಂಡಿದ್ದೆನು. ನನ್ನ ಮೇಲೆ ಪೊಲೀಸಿನವರಿಗೆ ಕಣ್ಣು ಇರುವಹಾಗೆ ಕಾಣುತ್ತೆ. ಈ ದಿನದ ಕೊಳ್ಳೆ ಎಲ್ಲಿ ?

ಮನುಷ್ಯ :—ಈ ದಿವಸ ನಮ್ಮವರು ಪದಿನೆಂಟು ಜನಗಳು ಸೇರಿ ಸುರತಪುರದ ಜಹಗೀರ್‌ದಾರನನ್ನು ಕೊಳ್ಳೇಹೊಡೆಯಲು ಹೋಗಿರುತ್ತಾರೆ. ಏನಿದ್ದರೂ ಹತ್ತುಲಕ್ಷ ರೂಪಾಯಿಗಳಿಗೆ ಕಮ್ಮೀ ಇಲ್ಲ. ಅಗೋ ಆ ಕೊಠಡಿಯಲ್ಲಿ ನೀನಿರು. ಇಗೋ ಈ ಕೊಠಡಿಯ ಸಮೀಪಕ್ಕೆ ಮಾತ್ರ ಬರಬೇಡ.

ಭಾಸ್ಕರನು, ಬರಬೇಡನೆಂದು ಹೇಳಿದ ಕೊಠಡಿಯಲ್ಲಿಯೇ ಏನೋ ಇದೆಯೆಂದು ತಿಳಿದುಕೊಂಡನು. ಆ ಗುಪ್ತಗೃಹವು ಭೂಮಿಯೊಳಗಿದ್ದರೂ ಮನೆಯಹಾಗೇ ಇದ್ದಿತು. ಉದ್ದವಾದ ಕೊಳವಿಗಳನ್ನು ನೆಟ್ಟು ಅವುಗಳ ಮೂಲಕ ಯಂತ್ರಗಳ ಸಹಾಯದಿಂದ ಗಾಳಿಯನ್ನು ಎಳೆದುಬಿಡುತ್ತಿದ್ದರು. ಅನೇಕ ದೀಪಗಳು ಉರಿಯುತ್ತಿದ್ದವು. ಹೊರಗಿನ ಸ್ವಲ್ಪವಾದ ವಿಷಯವು ಸ್ವಲ್ಪವಾದರೂ ಕೇಳಿಬರುತ್ತಿರಲಿಲ್ಲ.

ಮಾರನೇದಿವಸ ಬೆಳಗ್ಗೆ ಕಲ್ಕತ್ತಾನಗರವೆಲ್ಲಾ ಒಂದು ಘೋರವಾದ ಡಕಾಯಿತಿ ಮತ್ತು ಕೊಲೆ ಇವುಗಳ ವಿಷಯವನ್ನು ಕೇಳಿ ಭಯವನ್ನೂ ಆಶ್ಚರ್ಯವನ್ನೂ ಹೊಂದಿತು. ಸುರತಪುರದ ಜಹಗೀರ್‌ದಾರನ ಮನೆಯನ್ನು ಅನೇಕ ಡಕಾಯಿತೀ ಕಳ್ಳರು ಆಯುಧಪಾಣಿಗಳಾಗಿ ನುಗ್ಗಿ, ತಡೆಯಲು ಬಂದ ಹತ್ತುಜನ ಸೇವಕರಲ್ಲಿ ಆರುಜನರನ್ನು ಕೊಂದು ಉಳಿದ ನಾಲ್ವರನ್ನು ಬಹಳ ಘಾಯಮಾಡಿ ಜಮೀನ್ದಾರನನ್ನೂ ಅವನ ಹೆಂಡತೀಮಕ್ಕಳನ್ನೂ ಕಂಬಗಳಿಗೆ ಕಟ್ಟಿಹಾಕಿಬಿಟ್ಟು ಐವಾರು ಲಕ್ಷ ರೂಪಾಯಿಬಾಳುವ ಜವಾಹಿರಿಯನ್ನೂ ಮೂರು ಲಕ್ಷ ರೂಪಾಯನ್ನೂ ಹೊತ್ತು ಕೊಂಡು ಹೋದರೆಂದು ಕೇಳಲು ಯಾರಿಗೆತಾನೇ ಭಯವಾಗಲಾರದು ? ಆ ದಿವಸದ ವೃತ್ತ ಪತ್ರಿಕೆಗಳೂ ಆ ವಿಷಯವನ್ನೇ ಕುರಿತು ಮಾತನಾಡುತ್ತಿದ್ದವು. ಒಂದು ಪತ್ರಿಕೆಯು " ಬಂದಿದ್ದ ಕಳ್ಳರೆಲ್ಲಾ ಮುಖಕ್ಕೆ ಗುರುತು (Mark) ಹಾಕಿಕೊಂಡು ಕೈಗಳಲ್ಲಿ ರಿವಾಲ್ವರುಗಳನ್ನು ಹಿಡಿದುಕೊಂಡಿದ್ದರೆಂತಲೂ, ಅವರಲ್ಲನೇಕರು ಇನ್ನೂ

ತರುಣರಾಗಿಯೇ ಕಂಡುಬಂದರೆಂದೂ '' ತಿಳಿಸಿತ್ತು. ಪೋಲೀಸಿನವರು ಅನೇಕ ತರುಣರನ್ನು ಸಂಶಯದಮೇಲೆ ಹಿಡಿದು ಸೆರೆಮನೆಗೆ ಕೊಂಡೊಯ್ದರು. ಕಳ್ಳರನ್ನು ಪತ್ತೆ ಮಾಡಿಕೊಟ್ಟವರಿಗೆ ಇಪ್ಪತ್ತುಸಾವಿರ ರೂಪಾಯಿಗಳ ಬಹುಮಾನ ಕೊಡುವುದಾಗಿ ಪ್ರಸಿದ್ಧಪಡಿಸಿದರು.

ಅದೇ ದಿವಸ ಎಂ ಸಂಘದ ಮೆಂಬರುಗಳಲ್ಲನೇಕರು, ಗುಪ್ತಗೃಹಕ್ಕೆ ಬಂದು ವಾಸಮಾಡಲಾರಂಭಿಸಿದರು. ಅವರ ಮುಖ್ಯಸ್ಥನು ಏನನ್ನೋ ಅನೇಕರ ಕೈಲಿ ಹೊರಿಸಿ ಕೊಂಡುಬಂದು ಸಿದ್ಧವಾಗಿದ್ದ ಗುಳಿಯಲ್ಲಿ ಹೂಳಿಬಿಟ್ಟು ಹೊರಟುಹೋದನು. ಭಾಸ್ಕರನು ಅದೇನೆಂಬುದನ್ನು ತಿಳಿದುಕೊಂಡನು. ಆದರೆ ಅವನಿಗೆ ಕೊಲೆಗಳ ವಿಷಯವೂ ದರೋಡೆಯ ವಿಷಯವೂ ಏನೂ ತಿಳಿಯದು. ಅಲ್ಲಿದ್ದವರೂ ಸಹ ಯಾವ ಮಾತನ್ನೂ ಆಡಲಿಲ್ಲ. ಭಾಸ್ಕರನು ಅನೇಕಸಲ ಹೋಗಕೂಡದೆಂದು ಹೇಳಲ್ಪಟ್ಟಿದ್ದ ಕೊಠಡಿಯ ಕಡೆಗೆ ಹೋಗಿ ಹಿಂದಕ್ಕೆ ಕಳುಹಲ್ಪಟ್ಟಿದ್ದನು. ಆದರೆ ,ಎಲ್ಲಾ ವಿಷಯಗಳಲ್ಲಿಯೂ ಹರಿಜಂದ್ರನಂತೇ ನಟಿಸುತ್ತಿದ್ದ ಭಾಸ್ಕರನ ವಿಷಯವಾಗಿ ಯಾರೂ ಸಂಶಯಪಡಲಿಲ್ಲ. ಅದೇ ದಿವಸ ಮಧ್ಯಾಹ್ನ ಭಾಸ್ಕರನು ನೀರು ಕುಡಿಯುತ್ತಿರುವಾಗ ಆ ಕೊಠಡಿಯಿಂದ ಒಬ್ಬ ಮನುಷ್ಯನು ಹೊರಕ್ಕೆ ಬಂದನು. ಭಾಸ್ಕರನು ಓರೆಗಣ್ಣಿನಿಂದ ಅವನನ್ನು ನೋಡಲು ತಕ್ಷಣವೇ ಅವನಾರೆಂಬುದು ತಿಳಿಯಬಂತು. ಆ ಮನುಷ್ಯನ ಮುಖವು ಬಾಡಿಹೋಗಿ ಬೆಳ್ತುಕೊಂಡಿದ್ದರೂ, ಅವನು ಕುಡುಕನಂತೆ ನಡೆದರೂ, ಸೂಕ್ಷ್ಮದೃಷ್ಟಿಯುಳ್ಳ ಭಾಸ್ಕರನು ತಾನು ಫೊಟೋ (Photo) ಏನಲ್ಲಿ ನೋಡಿದ ಮಧುಸೂದನನು ಅವನೇ ಎಂದು ತಿಳಿದುಕೊಂಡನು. ಆದರೆ ಅವನ ಕೂಡ ಮಾತನಾಡಲು ಆಗಲಿಲ್ಲವು. ಭಾಸ್ಕರನು ತಾನು ಬಂದಕಾರ್ಯವು ಮುಗಿಯಿತೆಂದು ತಿಳಿದುಕೊಂಡನು.

ಕಲ್ಕತ್ತಾಪಟ್ಟಣದ ಪೊಲೀಸ್ ಇನ್‌ಸ್ಪೆಕ್ಟರ್‌ಗಳಲ್ಲೊಬ್ಬನಾದ ಮೋಸೆಸ್ ಎಂಬುವನು ಅನೇಕ ದಿವಸಗಳಿಂದಲೂ, 'ಎಂ' ಪಂಗಡದವರ ಮೇಲೆ ಕಣ್ಣಿಟ್ಟಿದ್ದನು. ಅವರು ಚರ್ಮದ ವ್ಯಾಪಾರಿಯನ್ನು ಲೂಟಿಮಾಡಿದಾಗ ಅವನು ಕೆಲವರನ್ನು ಹಿಂಬಾಲಿಸಿ ಪತ್ತೇಮಾಡುವುದರಲ್ಲಿದ್ದನು. ಆದರೆ ಅವರು ಅವನಿಗಿಂತಲೂ ಜಾರುಕಾಗಿದ್ದದ್ದರಿಂದ ತಪ್ಪಿಸಿಕೊಂಡರು. ಅದರ ವಿಷಯವಾಗಿಯೇ ಅವನು ಹಗಲೂ ರಾತ್ರಿಯೂ ಕಷ್ಟಪಡುತ್ತಿದ್ದನು. ಈ ವಿಷಯವು 'ಎಂ' ಪಂಗಡದ ಮುಖ್ಯಸ್ಥನಾದ ವಿಶ್ವನಾಥನೆಂಬ ಒಬ್ಬ ಬಿ.ಎ. ಬಿ.ಎಲ್. ಪರೀಕ್ಷೆಯನ್ನು ಕೊಟ್ಟಿದ್ದವನಿಗೆ ತಿಳಿದಿದ್ದಿತು. ಅದೇ ವಿಷಯವಾಗಿಯೇ ಅವನು ಸ್ವಲ್ಪ ದಿವಸಗಳ ಹಿಂದೆ ನಡೆದ ಮಾಟಿಂಗಿನಲ್ಲಿ ಸೂಚಿಸಿ

ದ್ದನು. ವಿಶ್ವನಾಥನು ಮೋಸೆಸ್ಸನ್ನು ಹಿಂಬಾಲಿಸುತ್ತಲೂ ಅವನು ಇವನನ್ನು ಹಿಂಬಾಲಿಸುತ್ತಲೂ ಇದ್ದರು. ಈ ದಿವಸ ನಡೆದ ಸುರತಪುರದ ಡಕಾಯತೀ ವಿಷಯವನ್ನು ಕೇಳಿದ ಕೂಡಲೇ ಅವನಿಗೆ 'ಎಂ' ಕೂಟದವರ ಮೇಲೆ ಸಂದೇಹವುಂಟಾಯಿತು. ಅವನು ಇದಕ್ಕೆ ಮೊದಲೇ ಅವರ ಕಾಳೀಬೀದಿಯಲ್ಲಿದ್ದ ಮನೆಯನ್ನು ನೋಡಿ ತಿಳಿದುಕೊಂಡಿದ್ದನು. ಆದ್ದರಿಂದ ಈ ದಿನ ಸಾಯಂಕಾಲ ಆರುಗಂಟೆಗೆ ಸರಿಯಾಗಿ ಸಂಗಡ ಒಬ್ಬ ಪೊಲೀಸ್ ಜವಾನನನ್ನೂ ಕರೆದುಕೊಂಡು ಕಾಳೀಬೀದಿಯ ಮನೆಗೆ ಬಂದು ಬೀದಿಯಲ್ಲಿದ್ದ ಗಂಟೆಯ ದಾರವನ್ನು ಹಿಡಿದೆಳೆದನು. ಸ್ವಲ್ಪಹೊತ್ತಿಗೆಲ್ಲಾ ಒಬ್ಬ ತರುಣನು ಬಂದು ಕರೆಯಲು ಕಾರಣವೇನೆಂದು ಕೇಳಿದನು.

ಮೋಸೆಸ್ :—ಅಯ್ಯಾ ನಾನು ನಿಮ್ಮ ಕೂಟದ ಯಜಮಾನನನ್ನು ನೋಡಬೇಕು. ನಾನು ಸರ್ಕಾರದ ಪರವಾಗಿ ಬಂದಿರುತ್ತೇನೆ.

ತರುಣ :—ತಾವು ಸರ್ಕಾರದ ಪರವಾಗಿ ಬಂದಿದ್ದರೆ ತಕ್ಷಣವೇ ಒಳಕ್ಕೆ ಬರಬಹುದು. ನಮ್ಮ ಯಜಮಾನರು ಓದುತ್ತಾ ಕುಳಿತಿರುವರು.

ಮೋಸೆಸ್ಸನು ತಾನು ಬರುವಾಗ ತನ್ನನ್ನು ತಡೆಯುವರೆಂದೂ, ಅದಕ್ಕಾಗಿ ಎರಡು ರಿವಾಲ್ವರುಗಳನ್ನು ತೆಗೆದುಕೊಂಡು ತನ್ನ ಸಂಗಡ ಕರತಂದಿದ್ದ ಸೇವಕರಿಗೆ ಏನಾದರೂ ಜಗಳವಾಗುವಹಾಗೆ ಕಂಡುಬಂದರೆ ತಕ್ಷಣವೇ ಸಮೀಪದಲ್ಲಿದ್ದ ಪೊಲೀಸ್‌ಸ್ಟೇಷನ್ನಿಗೆ ಹೋಗಿ ಅಲ್ಲಿಂದ ಸಹಾಯವನ್ನು ತರಬೇಕೆಂದೂ ಹೇಳಿಕೊಟ್ಟಿದ್ದನು. ಆದರೆ ಅವನು ಇದನ್ನೆಲ್ಲಾ ಅರಿತ ವಿಶ್ವನಾಥನ ಬುದ್ಧಿಯನ್ನು ಇನ್ನೂ ಅರಿತಿರಲಿಲ್ಲ. ಇವನು ಬರುವನೆಂದು ತಿಳಿದೇ ಎಲ್ಲವನ್ನೂ ಸಿದ್ಧಪಡಿಸಿಟ್ಟುಕೊಂಡಿದ್ದನು. ತನ್ನನ್ನು ಯಾವ ವಿಧವಾದ ಅಡಚಣೆಯನ್ನೂ ಮಾಡದೆ ಒಳಕ್ಕೆ ಬಿಟ್ಟುದನ್ನು ನೋಡಿ ಮೋಸೆಸ್ಸನು ಆಶ್ಚರ್ಯಪಡುತ್ತಾ ಒಳಕ್ಕೆ ಪ್ರವೇಶಮಾಡಿದನು. ಅಲ್ಲಿ "ಹಾಲಿನ (Hall) ಮಧ್ಯದಲ್ಲಿ ಎರಡು ಮೂರು ಕುರ್ಚಿಗಳೂ ಒಂದು ದೊಡ್ಡ ಮೇಜೂ ಇಡಲ್ಪಟ್ಟಿದ್ದವು. ಒಂದು ಸುಖಾಸನ (Easy chair) ದಮೇಲೆ ವಿಶ್ವನಾಥನು ಕುಳಿತುಕೊಂಡು ಏನನ್ನೋ ಓದುತ್ತಿದ್ದನು. ಮೋಸೆಸ್ಸನು ಒಳಕ್ಕೆ ಬಂದುದನ್ನು ನೋಡಿ ಓದುತ್ತಿದ್ದ ಪುಸ್ತಕವನ್ನು ಮುಚ್ಚಿಟ್ಟು ಬಂದಂಥಾವನಿಗೆ ವಂದಿಸಿ ಒಂದು ಕುರ್ಚಿಯಮೇಲೆ ಕುಳಿತುಕೊಳ್ಳುವಹಾಗೆ ಹೇಳಿ, ಬಂದ ಕೆಲಸವೇನೆಂದು ಕೇಳಿದನು. ಮೊಸೆಸ್ಸು (ನಗುತ್ತಾ) ನಿಮಗೇ ತಿಳಿದಿರಬಹುದು. ನೀವು ನನ್ನನ್ನು ಮೋಸಪಡಿಸುವುದಕ್ಕೆ ಪ್ರಯತ್ನಪಟ್ಟರೆ ಅದು ಸಾಗಲಾರದು.

ವಿಶ್ವನಾಥ:—ಸ್ವಾಮಿಾ ! ನೀವೇನು ಹೇಳುತ್ತಿರುವಿರಿ ? ನೀವು ಹೇಳುವದೊಂದೂ ನನಗರ್ಥವಾಗುವುದಿಲ್ಲ. ಹೀಗೆ ಗೂಢಾರ್ಥವಾಗಿ ಮಾತನಾಡಿದರೆ ನಾನು ಹೇಗೆ ತಿಳಿದುಕೊಳ್ಳಲಿ. ?

ಮೋಸೆಸ್:—ಅಯ್ಯಾ ! ಸಾಕು !!! ವೃಥಾ ಏಕೆ, ನನ್ನನ್ನು ಮೋಸಗೊಳಿಸಲು ಪ್ರಯತ್ನಮಾಡುವಿರಿ. ಕಳೆದ ಆರುತಿಂಗಳುಗಳಿಂದಲೂ ನಿಮ್ಮಮೇಲೆ ನನಗೆ ಕಣ್ಣಿರುವುದು. ಜರ್ಮದ ವ್ಯಾಪಾರಿಯನ್ನು ಲೂಟೀಮಾಡಲಿಲ್ಲವೆಂದೂ ನಿನ್ನೆದಿವಸ ನೀವು ದರೋಡೆಯನ್ನು ನಡಿಸಲಿಲ್ಲವೆಂದೂ ನನ್ನ ಮುಖವನ್ನು ನೋಡಿ ಹೇಳಿರಿ.

ವಿಶ್ವನಾಥ:—ಇದೀಗ ಸರಿಯಾದ ಮಾತು. ಏನು ? ನಾನು ದರೋಡೇ ಮಾಡತಕ್ಕ ಕಳ್ಳನೋ ? ನಾನೇನು ಕೊಲೆಪಾತಕನೋ ? ಸರಿ ಸರಿ ! ನನ್ನನ್ನು ಹಿಡಿಯುವುದಕ್ಕಾಗಿ ಬಂದಿರುವಿರಲ್ಲವೇ ? ವಾರಂಟನ್ನು ಸ್ವಲ್ಪ ತೋರಿಸಿ ! ನೋಡೋಣ! ಯಾರಾರನ್ನು ಸಾಕ್ಷಿಗಾಗಿ ಸಿದ್ಧಪಡಿಸಿರುವಿರಿ ? ಸ್ವಾಮಿಾ ! ನಿಶ್ಚಯವಾಗಿಯೂ ತಮ್ಮ ಮಾತುಗಳು ನನಗೆ ಆಶ್ಚರ್ಯವನ್ನುಂಟುಮಾಡುತ್ತಿವೆ. ನಾನು ಮನಃಪೂರ್ವಕವಾಗಿ ದೇಶದ ಹಿತಕ್ಕಾಗಿ ಕಷ್ಟಪಡುತ್ತಿರಲು ನನ್ನನ್ನು ಕಳ್ಳನೆಂದೂ ಬೀದಿಯಲ್ಲಿ ನಿಂತು ತಲೆಯೊಡೆಯುವ ಕೊಲೆಪಾತಕನೆಂದೂ !! ಅಪರಾಧವನ್ನು ಹೊರಿಸುವಿರಾ ? ನೀವು ಪೋಲೀಸ್ ಇಲಾಖೆಗೇ ಗೌರವವನ್ನು ತರತಕ್ಕವರಲ್ಲವೇ !!!

ಮೋಸೆಸ್ :–(ಆಶ್ಚರ್ಯದಿಂದ ಸ್ತಂಭಿತನಾಗಿ,) ತಾನು ಯೋಚಿಸಿದ್ದ ಉಪಾಯಗಳೆಲ್ಲಾ ಹಾಳಾದವೆ:ದು ಯೋಚಿಸಿ, ನಗುತ್ತಾ ಅಯ್ಯಾ! ನಿಮಗೆ ಇಷ್ಟು ಬುದ್ಧಿಯಿಲ್ಲದಿದ್ದರೆ ನೀವು ಇಷ್ಟುದಿವಸವೂ ತಪ್ಪಿಸಿಕೊಂಡು ಅಲೆಯುತ್ತಿರಲಿಲ್ಲ. ಈಗತಾನೇ ಏನು ? ದಯವಿಟ್ಟು ನನ್ನನ್ನು ಈ ಮನೆಯನ್ನು ಶೋಧಿಸುವುದಕ್ಕೆ ಬಿಡುವಿರಾ ?

ವಿಶ್ವನಾಥ :–ಯಾವ ಅಧಿಕಾರದ ಮೇಲೆ ನನ್ನ ಮನೆಯನ್ನು ನೀವು ಹುಡುಕುವಿರಿ ? ಒಂದುವೇಳೆ ನಾನು ನಿಮ್ಮನ್ನು ತಡದರೋ ? ಪೋಲೀಸ್—(ಆಹಾ ಈಗಲೀಗ ಸಿಕ್ಕಿಬಿದ್ದನೆಂದು ಯೋಚಿಸಿ) ಇದೋ ಈ ಪೋಲೀಸ್ ಅಧಿಕಾರದ ಮಹಾತ್ಮೆಯಿಂದಲೂ ಮತ್ತು ಇದೋ, ಈ ಎರಡು ರಿವಾಲ್ವರುಗಳ ಮಹಾತ್ಮೆಯಿಂದಲೂ ನಾನು ನಿಮ್ಮ ಮನೆಯನ್ನು ಹುಡುಕುವೆನು. ಹಾಗೆ ನೀವು ನನ್ನನ್ನು ಬಿಡದಿದ್ದರೆ ನಿಮ್ಮನ್ನು ಈ ಕ್ಷಣದಲ್ಲಿ ಕೈದಿಯನ್ನಾಗಿಮಾಡಿ ತೆಗೆದುಕೊಂಡು ಹೋಗುವೆನು. ಆದಾಗದಿದ್ದರೆ ಈ ಗೋಲಿಗಳು ನಿಮ್ಮ ದೇಹವನ್ನು ಹೊಕ್ಕು ದಾರಿಯನ್ನು ಬಿಡಿಸುವವು.

ವಿಶ್ವನಾಥ :–ಸ್ವಾಮಿಾ ನೀವು ಅಷ್ಟು ಆಗ್ರಹಮಾಡಿದಮೇಲೆ ನಾನೇನು ಮಾಡುವದು ? ಅಂತೂ ಈ ರಾಜ್ಯದಲ್ಲಿ ಜನಗಳಿಗೆ ತಮ್ಮ ಮನೆಯಲ್ಲಿ ಕೂಡಾ ಸ್ವಾತಂತ್ರ್ಯ

ವಿಲ್ಲವೆಂದು ಕಾಣುತ್ತೆ. ಇನ್ನು ನೀವು ಹುಡುಕಬಹುದು. ನಾನು ತಮ್ಮ ಸಂಗಡಲೇ ಬರಲೋ, ಇಲ್ಲ ಹೊರಕ್ಕೆ ಹೋಗಲೋ ?

ಮೋಸೆಸ್ಸನು ವಿಶ್ವನಾಥನನ್ನೂ ಸಂಗಡಲೇ ಬರುವಂತೆ ಹೇಳಿ ತನ್ನ ಸಂಗಡ ಬಂದಿದ್ದ ಪೋಲೀಸ್ ಸೇವಕನನ್ನು ತನ್ನ ರಿವಾಲ್ವರು ಗಳನ್ನು ಕೈಲಿ ಹಿಡಿದು ಕೊಂಡು ಬಾಗಿಲಲ್ಲಿ ಕಾದಿರಬೇಕೆಂದು ಆಪ್ಪಣೆಯನ್ನು ಮಾಡಿ ತಾನೂ ತನ್ನ ರಿವಾಲ್ವರುಗಳನ್ನು ಕೈಯಲ್ಲಿಟ್ಟುಕೊಂಡು ಒಂದೊಂದು ಕೊಠಡಿಗಳನ್ನಾಗಿ ಪರೀಕ್ಷಿಸುತ್ತಾ ಹೊರಟನು. ಅವನು ನೋಡಿದ ಸ್ಥಳದಲ್ಲೆಲ್ಲಾ ಒಬ್ಬ ಸಭ್ಯರು ವಾಸಮಾಡುವುದಕ್ಕೆ ಬೇಕಾದ ಸಾಮಗ್ರಿಗಳಿದ್ದಿತೇ ವಿನಹಾ ಮತ್ತೇನೂ ಇರಲಿಲ್ಲವು. ಮೋಸೆಸ್ಸನು ತನ್ನನ್ನು ತನ್ನ ಶತ್ರುವು ಸೋಲಿಸಿದನೆಂದು ಯೋಚಿಸುತ್ತಾ ಒರುತ್ತಿರಲು ಒಂದು ಕೊಠಡಿಯಲ್ಲಿ ನೆಲಕ್ಕೆ ಜಮಖಾನವನ್ನು ಹಾಸಿರುವುದನ್ನು ನೋಡಿ ಅದನ್ನು ತೆಗೆದು ನೋಡಲು ಒಂದು ಮೊಳೆಯು ಕಾಣಿಸಿತು. ಅದನ್ನು ಪಿಡಿದು ಒಂದಕ್ಕೂ ಮುಂದಕ್ಕೂ, ಕೆಳಕ್ಕೂ ಮೇಲಕ್ಕೂ ಆಡಿಸಿದರೂ ಏನೂ ಪ್ರಯೋಜನ ವಿಲ್ಲದಿರುವುದನ್ನು ನೋಡಿ ಅದರಲ್ಲೆನೂ ಇಲ್ಲವೆಂದು ತಿಳಿದು ಅದನ್ನು ಬಿಟ್ಟು ಮುಂದಕ್ಕೆ ಹೊರಟನು. ಕೊನೆಗೂ ಅವನಿಗೆ ಸಂಶಯಾಸ್ಪದವಾದ ಪದಾರ್ಥವೊಂದೂ ಸಿಗಲಿಲ್ಲ. ವಿಶ್ವನಾಥನು ನಗುತ್ತಾ '' ಸ್ವಾಮಿ ! ಮತ್ತೊಂದುಸಲ ಬೇಕಾದರೂ ಹುಡುಕಿರಿ '' ಎಂದನು.

ಮನಸ್ಸಿನಲ್ಲಿ ಉಕ್ಕಿ ಬರುತ್ತಿದ್ದ ಕೋಪವನ್ನು ತೋರ್ಪಡಿಸದೆ, ಮೋಸೆಸ್ಸನು ವಿಶ್ವನಾಥನನ್ನು ಕುರಿತು '' ಅಯ್ಯಾ ನೀನು ಈ ದಿವಸ ನನ್ನನ್ನು ಸೋಲಿಸಿರುವಿ. ಆದರೆ ಒಂದು ಕುರಿಯು ಒಂದುಸಲ ಬಿದ್ದ ಹಳ್ಳಕ್ಕೆ ಮತ್ತೊಂದುಸಲ ಬೀಳುವುದಿಲ್ಲವು. ನೀನು ನನ್ನನ್ನು ಜಯಿಸಿದೆನೆಂದು ಸಂತೋಷಪಡದಿರು. ಅಲ್ಪಕಾಲದಲ್ಲೇ ನಿನ್ನನ್ನು ಪೋಲೀಸಿಗೆ ಪಿಡಿದುಕೊಡುವೆನು. ನಿನ್ನ ವಿಷಯವೆಲ್ಲಾ ನನಗೆ ತಿಳಿದಿದೆ. '' ಎಂದು ಹೇಳಿ ತನ್ನ ಸೇವಕನನ್ನೂ ಕರೆದುಕೊಂಡು ಹೊರಟನು.

ವಿಶ್ವನಾಥನು ಮೋಸೆಸ್ಸನು ಹೊರಟುಹೋದ ಕೂಡಲೇ ಗುಪ್ತಗೃಹವನ್ನು ಹೊಕ್ಕು ಅಲ್ಲಿದ್ದವರಿಗೆಲ್ಲಾ ಮೋಸೆಸ್ಸನ ವಿಷಯವನ್ನು ತಿಳಿಸಿ ಮದುವೆಯು ಇನ್ನು ಮೂರುದಿವಸಗಳಲ್ಲಿ ಆದೇ ಮನೆಯಲ್ಲಿ ನಡೆಯುವುದೆಂದು ಹೇಳಿ ಪುನಃ ಮೇಲಕ್ಕೆ ಹೊರಟುಹೋದನು. ಭಾಸ್ಕರನು ಅವನು ಹೋಗುವುದನ್ನೇ ನೋಡಿಕೊಂಡಿದ್ದು ತಾನೂ ಮೇಲಕ್ಕೆ ಬಂದು ಸ್ವಲ್ಪ ಹೊರಕ್ಕೆ ಹೋಗಿ ಬರುವುದಾಗಿ ತಿಳಿಸಿ ಅಲ್ಲಿಂದ ಹೊರಟು ಯಾರಿಗೂ ತಿಳಿಯದ ರೀತಿ ಗೋವಿಂದನ ಮನೆಯನ್ನು ಸೇರಿ ತನ್ನ ಉಡುಪನ್ನು ಬದಲಾಯಿಸಿಕೊಂಡು ವೃತ್ತ ಪತ್ರಿಕೆಗಳನ್ನು ನೋಡುತ್ತ ಕುಳಿತನು.

ಒಂಭತ್ತನೇ ಅಧ್ಯಾಯ.

(ವಿವಾಹಭಂಗ ಮತ್ತು "ಎಂ" ಸಂಘದ ಮುಕ್ತಾಯ.)

ಮಾರನೇ ದಿವಸ ಪೊಲೀಸ್ ಕಮಿಷರ್ರು ತಮ್ಮ ಆಫೀಸಿನಲ್ಲಿ ಕುಳಿತಿರುವಾಗ ಒಬ್ಬ ಸೇವಕನು ಬಂದು ಚೀಟಿಯೊಂದನ್ನು ಕೊಟ್ಟನು. ಅದರಲ್ಲಿ "ಪತ್ತೇದಾರಿ ಇಲಾಖೆಗೆ ಸೇರಿದ ಭಾಸ್ಕರ" ಎಂದಿದ್ದಿತು. ಕೂಡಲೇ ಕಳೆಗುಂದಿದ್ದ ಕಮಿಷರ್ರ ಮುಖವು ಕಾಂತಿಯನ್ನು ಹೊಂದಿತು. 'ತಕ್ಷಣವೇ ಅವರನ್ನು ಕರೆದುಕೊಂಡು ಬಾ' ಎಂದು ಕಟ್ಟಪ್ಪಣೆಮಾಡಿ ಕಳುಹಿಸಿದನು. ಭಾಸ್ಕರನು ಅವನಿಗೆ ಹೊಸಬನಲ್ಲವು. ಭಾಸ್ಕರನೂ ಅವನೂ ಸ್ನೇಹಿತರಾಗಿದ್ದರು. ಹಿಂದಲ ದಿವಸಗಳಲ್ಲಿ ನಡೆದ ವಿಷಯಗಳ ವಿಷಯವಾಗಿ ಯೋಚಿಸುತ್ತಾ ಭಾಸ್ಕರರಿಗೆ ಈ ವಿಷಯಗಳನ್ನೆಲ್ಲಾ ತಿಳಿಯಪಡಿಸಬೇಕೆಂದಿದ್ದನು. ಅಷ್ಟರಲ್ಲೇ ಭಾಸ್ಕರನೇ ತನ್ನನ್ನು ನೋಡಲು ಬರಲು ಅತ್ಯಂತ ಸಂತೋಷದಿಂದ ಅವನನ್ನು ಬರುವಹಾಗೆ ಹೇಳಿಕಳುಹಿಸಿದನು.

ಸ್ವಲ್ಪಹೊತ್ತಿಗೆ ಭಾಸ್ಕರನು ಪೊಲೀಸ್ ಕಮಿಷರ್ರ ಕೊಠಡಿಗೆ ಬಂದು ಅವನನ್ನು ಕಾಣಿಸಿಕೊಂಡನು. ಆತನು ಇವನ ಕೈಹಿಡಿದು ಆಡಿಸಿ 'ಭಾಸ್ಕರಾ! ನೀನು ಈ ಸಮಯದಲ್ಲಿ ಬಂದದ್ದು ನನಗೆ ಬಹಳ ಸಂತೋಷವನ್ನುಂಟುಮಾಡಿದೆ. ನೀನು ನಿನ್ನೇ ಮೊನ್ನೇ ನಡೆದ ಡಕಾಯಿತಿಗಳನ್ನೂ ಮತ್ತು ಕೊಲೆಗಳನ್ನೂ ಕೇಳಿರುವಿಯೆಂದು ನಂಬುತ್ತೇನೆ. ನೀನು ಈ ವಿಷಯಗಳಲ್ಲಿ ಪ್ರವೇಶಮಾಡಿ ಈ ಕೊಲೆಪಾತಕರನ್ನು ಪತ್ತೇಮಾಡುವಿಯೆಂದು ನಂಬಿರುತ್ತೇನೆ. ನೀನು ಪತ್ತೇಮಾಡಿಕೊಟ್ಟರೆ ನಿನಗೆ ಬಹುಮಾನವೂ ಮತ್ತು ಯಶಸ್ಸೂ ಬರುವುವು ಮತ್ತು ನನಗೂ ಬಹಳ ಸಹಾಯಮಾಡಿದಂತಾಗುವುದು." ಎಂದು ಹೇಳಿದನು.

ಭಾಸ್ಕರ:—ಸ್ವಾಮಿ! ನಾನು ಆಗಲೇ ಎಲ್ಲವನ್ನೂ ಪತ್ತೇಮಾಡಿರುತ್ತೇನೆ. ಈ ಎರಡು ದಿವಸಗಳಲ್ಲಿ ನಡೆದ ವಿಷಯಗಳಲ್ಲದೆ ಕೆಲವು ದಿವಸಗಳ ಹಿಂದೆ ವಾಸವಪುರದ ಜಮಿನ್ದಾರರ ಮಗನು ಕಾಣದೇಹೋದ ವಿಷಯವನ್ನೂ ಸಹಾ ಪತ್ತೇಮಾಡಿರುತ್ತೇನೆ.

ಕಮಿಷನರು:—ಏನು? ಆಗಲೇ ಎಲ್ಲವನ್ನೂ ಪತ್ತೇಮಾಡಿರುವಿಯಾ? ನೀನೀಗ ನಿಜವಾದ ಪತ್ತೇದಾರನು. ಈ ವಿಷಯಗಳೆಲ್ಲಾ ಪತ್ತೆಯಾಗಲು ಇನ್ನೂ ಅನೇಕ ತಿಂಗಳುಗಳಾಗುವುವೆಂದು ನಾನು ಯೋಚಿಸಿದ್ದೆನು. ಆದರೆ ನೀನು ಆಗಲೇ

ಎಲ್ಲವನ್ನೂ ಪತ್ತೇಮಾಡಿರುವ ವಿಷಯವನ್ನು ನೋಡಿ ನನಗೆ ಆಶ್ಚರ್ಯವಾಗುತ್ತದೆ. ಕಳ್ಳರನ್ನು ಯಾವಾಗ ಹಿಡಿಯೋಣ ?

ಭಾಸ್ಕರ :—ನಾನು ವಾಸವಪುರದ ಜಮೀನ್ದಾರನ ಪರವಾಗಿ ಇಲ್ಲಿಗೆ ಬಂದು ಅವನ ಮಗನ ವಿಷಯವಾಗಿ ಪತ್ತೇಮಾಡುತ್ತಿರಲು ಇತರ ವಿಷಯಗಳೂ ನನ್ನ ಮಾರ್ಗದಲ್ಲಿ ತಾವಾಗಿಯೇ ಬಂದವು.

ಭಾಸ್ಕರನೂ ಪೊಲೀಸ್ ಕಮೀಷನರೂ ಒಳಹೊತ್ತು ಮಾತನಾಡುತ್ತಿದ್ದು ಎಲ್ಲಾ ವಿಷಯಗಳನ್ನೂ ಕ್ರಮವಾಗಿ ತೀರ್ಮಾನಮಾಡಿಕೊಂಡ ಮೇಲೆ ಭಾಸ್ಕರನು ಅಪ್ಪಣೆಯನ್ನು ಪಡೆದು ಗೋವಿಂದನ ಮನೆಗೆ ಹೋದನು. ಅದೇ ದಿವಸ ಮಧ್ಯಾಹ್ನ ಹರಿಚಂದ್ರನು ಭಾಸ್ಕರನ ನಯಭಯಗಳಿಗೊಳಪಟ್ಟು ತಮ್ಮ ಸಂಘಕ್ಕೆ ಸಂಬಂಧವಾದ ಎಲ್ಲಾ ವಿಷಯಗಳನ್ನೂ ಅಂದರೆ (1) ಮಧುಸೂದನನನ್ನು ವಿಶ್ವನಾಥನು ಎತ್ತಿಕೊಂಡು ಹೋದ ವಿಷಯವನ್ನೂ, (೨)ವಿವಾಹದ ದಿವಸ ತಾನು ಜನಗಳ ಮಧ್ಯದಲ್ಲಿ ನುಗ್ಗಿ ತಮ್ಮ ಯಜಮಾನನಾದ ವಿಶ್ವನಾಥನು ಬಂದು ಮಧುಸೂದನನ ಕೊಠಡಿಯಲ್ಲಿ ಕಾದಿರುವ್ಯ ಹಾಗೂ ತಕ್ಷಣವೇ ಬಾರದಿದ್ದರೆ ಮಧುಸೂದನನು ತನಗೆ ಕೊಡಬೇಕಾದ ಇಪ್ಪತ್ತು ಸಾವಿರ ರೂಪಾಯಿಗಳ ವಿಷಯವನ್ನೂ ಮತ್ತು ಅವನು ತನ್ನ ಮಗಳನ್ನು ಮದುವೆಯಾಗುವೆನೆಂದು ಮಾತು ಕೊಟ್ಟಿದ್ದ ವಿಷಯವನ್ನೂ ತಿಳಿಸುವುದಾಗಿ ಹೇಳಿರುವನೆಂಬ ವಿಷಯಗಳನ್ನೆಲ್ಲಾ ಅವನೊಡನೆ ಹೇಳಿದನು. ಭಾಸ್ಕರನು ಅವನನ್ನು ಸರ್ಕಾರದ ವರ ಪಕ್ಷದ ಸಾಕ್ಷಿಯಾಗಿ ತೆಗೆದುಕೊಳ್ಳುವುದಾಗಿ ಹೇಳಿ ಅವನನ್ನು ಪುನಃ ಕೊಠಡಿಯಲ್ಲಿ ಕೂಡಿಟ್ಟನು.

ಅದೇ ದಿವಸ ಮಧ್ಯಾಹ್ನ 'ಎಂ' ಸಂಘದವರ ಗುಪ್ತಗೃಹದಲ್ಲಿ ಮಾರನೇದಿವಸದ ವಿವಾಹಕ್ಕಾಗಿ ಎಲ್ಲವನ್ನೂ ಸಿದ್ಧಪಡಿಸಿಟ್ಟುಕೊಳ್ಳುತ್ತಿದ್ದರು. ಒಂದು ಕಡೆಯಲ್ಲಿ ಮಧುಸೂದನನೂ ವಿಶ್ವನಾಥನೂ ಕುಳಿತುಕೊಂಡು ಮಾತನಾಡುತ್ತಿದ್ದರು. ಅವರ ಮುಂದುಗಡೆ ಮೇಜಿನಮೇಲೆ ಮೂರು ಶೀಸೆಗಳ ವ್ಹಿಸ್ಕಿಯೂ, ಒಂದು ತಟ್ಟೆಯಲ್ಲಿ ಕೆಲವು ಫಲಹಾರ ಸಾಮಗ್ರಿಗಳೂ ಮತ್ತೊಂದುಕಡೆ ಕೆಲವು ಹೊಗೆಯಬತ್ತಿಗಳೂ ಇದ್ದವು. ವಿಶ್ವನಾಥನು ಬಟ್ಟಲುಗಳಲ್ಲಿ ಮದ್ಯವನ್ನು ತುಂಬಿತುಂಬಿ ಮದುಸೂದನನಿಗೆ ಕುಡಿಸುತ್ತಿದ್ದನು. ಅಯ್ಯೋ! ಅತ್ಯಂತ ಆಚಾರಸಂಪನ್ನನಾದವನ ಪುತ್ರನಾಗಿ ಹುಟ್ಟಿ ತಾನೂ ಆಚಾರಸಂಪನ್ನನಾಗಿದ್ದು ಈಗ ಸಹವಾಸದೋಷದಿಂದ ಒಂದೇಸಲಕ್ಕೆ ತನ್ನ ಆಚಾರವನ್ನೂ, ಶೀಲವನ್ನೂ, ಜಾತಿಯನ್ನೂ ಮರೆತು ಮದ್ಯಪಾನ ಮಾಡುತ್ತಿರು

ಈ ಮಧುಸೂದನನನ್ನು ನೋಡಿ ತಂದೆಗಳಾದವರು ತಮ್ಮ ಪುತ್ರರವಿಷಯದಲ್ಲಿ ಎಚ್ಚರವಾಗಿರಲಿ! ಪುತ್ರರು ಕೆಟ್ಟ ಸಂಘಗಳಿಗೆ ಸೇರಿ ಜಾತಿ ಭೇದವಿಲ್ಲವೆಂದು ಹೇಳಿಕೊಂಡು ಕುಡಿತ ಮುಂತಾದುವುಗಳನ್ನು ಕಲಿತು ಹಾಳಾಗುವರೆಂದು ತಿಳಿದು, ಅವರು ಅಂಥಾ ಸಂಘಗಳಿಗೆ ಸೇರದಹಾಗೆ ಇರುವುದಕ್ಕೆ ಪ್ರಯತ್ನಪಡಲಿ !!

ವಿಶ್ವನಾಥ:—ಮಧುಸೂದನಾ! ನಾಳೆದಿವಸ ನೀನು ನನ್ನ ಅಳಿಯನಾಗುವಿ. ಆಮೇಲೆ ನೀನು ನಿನ್ನ ಮನೆಗೆ ಹೋಗಬಹುದು. ನಾನೂ ಸಹಾ ನನ್ನ ಸಂಘವನ್ನೊಡೆದು ಬೀರೆಸ್ಥಳಕ್ಕೆ ಹೋಗುವೆನು.

ಮಧುಸೂದನ (ಮದ್ಯದ ವೇಗದಿಂದ ಉನ್ಮತ್ತನಾಗಿ) ಅದಕ್ಕೇನು! ನಾನು ನಿಮ್ಮ ಪುತ್ರಿಯನ್ನು ವಿವಾಹ ಮಾಡಿಕೊಳ್ಳುವೆನು. ನನ್ನ ಸಂಗಡಲೇ ನಿಮ್ಮ ಪುತ್ರಿಯನ್ನೂ ಕರೆದುಕೊಂಡು ವಾಸವಪುರಕ್ಕೆ ಹೋಗುವೆನು. ನನ್ನ ತಂದೆಯು ನನ್ನನ್ನು ಬಹಿಷ್ಕರಿಸಿದರೆ ನನ್ನ ಭಾಗವನ್ನು ತೆಗೆದುಕೊಂಡು ಸುಖವಾಗಿರುವೆನು. (ಸ್ವಲ್ಪ ಶಾಂತನಾಗಿ) ಅಯ್ಯೋ ನನ್ನ ಗತಿಯು ಏಗೆ ಆಗಬೇಕೇ? ನನ್ನ ತಂದೆಯೇನು ಹೇಳುವನೋ? ಈ ವಿವಾಹಕ್ಕೆ ಅವನೆಂದಿಗೂ ಒಪ್ಪನು.

ವಿಶ್ವನಾಥನು ಅವನಿಗೆ ಮತ್ತಷ್ಟು ಮದ್ಯವನ್ನು ಕೊಟ್ಟು ನಿಮ್ಮ ತಂದೆಯು ಒಪ್ಪದೇ ಏನುಮಾಡುವನು? ವಿವಾಹವು ಶಾಸ್ತ್ರಾಚಾರರೀತಿಯಿಂದಲೇ ನಡೆದಮೇಲೆ ನಿಮ್ಮ ತಂದೆಯೇನುಮಾಡುವನು? ಇನ್ನು ಹೊತ್ತಾಯಿತು. ನಾನು ಹೋಗಿಬರುವೆನು. ನಾನು ಹೇಳಿದ ವಿಷಯಗಳು ಎಚ್ಚರಿಕೆದಲ್ಲಿರಲಿ. ವಾಸವಪುರವನ್ನು ಸೇರಿದಮೇಲೆ ಒಂದು ಲಕ್ಷರೂಪಾಯನ್ನು ಕಳುಪಲು ಮರೆತುಬಿಡಬೇಡ'' ಎಂದು ಹೇಳಿ ಹೊರಟು ಹೋದನು.

ಈದಿವಸ ಕಾಳಿಬೀದಿಯಲ್ಲಿರುವ ''ಎಂ'' ಸಂಘದವರ ಮನೆಯಲ್ಲಿ ಅತ್ಯಂತ ಕೋಲಾಹಲ. ಮನೆಯೆಲ್ಲವೂ ಕದಳೀ ಸ್ತಂಭಗಳಿಂದಲೂ ಮಾವಿನ ತೋರಣಗಳಿಂದಲೂ ಅಲಂಕರಿಸಲ್ಪಟ್ಟಿರುವುದು. ಒಂದು ಕಡೆಯಲ್ಲಿ ವಾದ್ಯಗಳು ತಮ್ಮ ನಾದವನ್ನು ಎಲ್ಲ ಕಡೆಗೂ ಕಳುಹಿಸುತ್ತಿದ್ದವು. ಬೀದಿಯಲ್ಲಿ ಜನಗಳೆಲ್ಲರೂ ವಿಶ್ವನಾಥನ ಮಗಳಾದ ಸುಂದರಿಯೆಂಬ ಋತುಮತಿಯಾದ ಕನ್ಯೆಯನ್ನು ಸೋಮೇಂದ್ರನೆಂಬುವನಿಗೆ ಕೊಟ್ಟು ವಿವಾಹವೆಂದು ಹೇಳಿಕೊಳ್ಳುತ್ತಿದ್ದರು. ಕರೆಯಲ್ಪಟ್ಟಿದ್ದ ಜನಗಳು ಮಾತ್ರ ಬಿಡಲ್ಪಡುವರೆಂದೂ ಹೇಳಿಕೊಳ್ಳುತ್ತಿದ್ದರು. ಸುಮಾರು ಇಪ್ಪತ್ತೈದುಮಂದಿ ವೈದಿಕಬ್ರಾಹ್ಮಣರುಗಳು ವಿಭೂತೀ ರುದ್ರಾಕ್ಷೀ ಮುಂತಾದವುಗಳನ್ನು ಧರಿಸಿಕೊಂಡು ಬೀದೀಬಾಗಿಲಿನಲ್ಲಿ

ನಿಂತಿದ್ದ ಇಬ್ಬರು ಬ್ರಾಹ್ಮಣ ತರುಣರಿಗೆ ಏನನ್ನೋ ತೋರಿಸುತ್ತಾ ಒಳಕ್ಕೆ ಹೋಗುತ್ತಿದ್ದರು. ಈ ಬ್ರಾಂಹ್ಮಣರುಗಳನ್ನು ಯಾರಾದರೂ ಶೋಧನೆಮಾಡಿದ್ದರೆ ಪ್ರತಿಯೊಬ್ಬನ ಮಡಿಲಿಯಲ್ಲಿಯೂ ಒಂದೊಂದು ರಿವಾಲ್ವರುಗಳನ್ನು ನೋಡಬಹುದಾಗಿತ್ತು. ಈ ವಿವಾಹಮಂಟಪದಲ್ಲಿ ಮತ್ತೊಂದು ವಿಶೇಷವೇನೆಂದರೆ, ಆ ಸ್ಥಳದಲ್ಲಿ ಒಬ್ಬ ಸ್ತ್ರೀಯಾದರೂ ಇರಲಿಲ್ಲ. ಸುಂದರಿ ಯೆಂಬ ಋತುಮತಿಯಾದ ಕನ್ಯೆಯು ಸರ್ವಾಭರಣಗಳಿಂದಲಂಕೃತಳಾಗಿದ್ದಳು. ಅವಳು ಅತ್ಯಂತ ಸುಂದರಿಯಾಗಿದ್ದ ದ್ದರಿಂದ ಬಂದವರೆಲ್ಲರೂ ಅವಳನ್ನೇ ಅವಾಕ್ಕಾಗಿ ನೋಡುತ್ತಿದ್ದರು. ಇಂಥಾ ನಾರೀರತ್ನವು ನೀಚನಾದ ವಿಶ್ವನಾಥನಿಗೆ ಮಗಳಾಗಿ ಹುಟ್ಟಿದ್ದು ಆಶ್ಚರ್ಯವಾಗಿರುವದು. ಆಕೆಗೆ ತನ್ನ ತಂದೆಯ ದುರ್ವ್ಯವಹಾರದ ವಿಷಯವು ಸ್ವಲ್ಪವಾದರೂತಿಳಿಯದು. ಆಕೆಗೆ ತಾನು ಋತುಮತಿಯಾದಮೇಲೆ ವಿವಾಹವಾಗುವ ವಿಷಯದಲ್ಲಿ ಸ್ವಲ್ಪವಾದರೂ ಮನವಿಲ್ಲವು. ವಿಶ್ವನಾಥನು ಅವಳನ್ನು ಸೋಮೇಂದ್ರನೆಂಬ ಅತುಳೈಶ್ವರ್ಯ ಸಂಪನ್ನನಿಗೆ ವಿವಾಹ ಮಾಡಿಕೊಡುವುದಾಗಿಯೂ, ಮದುವೆಯಾದಮೇಲೆ ಆ ಸೋಮೇಂದ್ರನ ನಿಜವಾದ ಹೆಸರು ತಿಳಿಯುವುದೆಂದೂ ಅವನು ಈಗ ಯಾವುದೋ ಒಂದು ಕಾರಣದಿಂದ ಛದ್ಮವೇಷದಲ್ಲಿರುತಾನೆಂದೂ ಹೇಳಿ, ಅವಳನ್ನು ಈ ವಿವಾಹವನ್ನು ಮಾಡಿಕೊಳ್ಳುವ ಹಾಗೆ ಒಪ್ಪಿಸಿದನು. ಚಿಕ್ಕವಯಸ್ಸಿನಲ್ಲೇ ತಾಯಿಯನ್ನು ಕಳೆದುಕೊಂಡಿದ್ದ ಆ ಬಾಲೆಯು ತನ್ನ ತಂದೆಯನ್ನು ತನ್ನ ಸರ್ವಸ್ವನೆಂದು ನಂಬಿ ಅವನ ಮಾತಿಗೆ ವ್ಯತಿರಿಕ್ತವಾಗಿ ನಡೆಯದೆ ಅವನ ಮಾತಿಗೊಪ್ಪಿದಳು. ಇಂಥಾ ನವಕೋಮಲಾಂಗಿಯು ಕೊನೆಗೆ ಧೂರ್ತನಾದ ತಂದೆಯ ದೆಸೆಯಿಂದಲೇ ಪ್ರಾಣಬಿಡುವ ಕಾಲವು ಬಂದಿತು.

ವಿವಾಹ ಮುಹೂರ್ತವು ಹತ್ತು ಗಂಟೆಗೆ ಸರಿಯಾಗಿಡಲ್ಪಟ್ಟಿತ್ತು. 'ನನಗೆ ಹೆಂಡತಿ ಯಿಲ್ಲವಾದ್ದರಿಂದ ಪತ್ನಿಯಿಲ್ಲದೇನೇ ಮದುವೆಮಾಡಿಕೊಡುತ್ತೇನೆಂದು ವಿಶ್ವನಾಥನು ಹೇಳಿದನು.' ಇಬ್ಬರು ವೈದಿಕಬ್ರಾಹ್ಮಣರು ದುಡ್ಡಿನಾಶೆಗಾಗಿ ವಿಶ್ವನಾಥನು ಹೇಳಿದ ಹಾಗೇ ವಿವಾಹ ಮಾಡಿಸುವುದಾಗಿ ಹೇಳಿ ಬಂದಿದ್ದರು. ಸೋಮೇಂದ್ರನೆಂದು ಕರಯಲ್ಪಟ್ಟ ಮದವಣಿಗನು ಅಲಂಕರಿಸಲ್ಪಟ್ಟು ಕರತರಲ್ಪಟ್ಟನು. ಅವನಿಗೆ ಸುಮಾರು ಮೂವತ್ತು ವರ್ಷ ವಯಸ್ಸಾಗಿರಬಹುದೆಂದು ಕಾಣಬಂದಿತು. ಮುಖದಲ್ಲಿ ಮೀಸೆಯೂ ದಾಡಿಯೂ ಇದ್ದವು. ಅವನು ಸುಂದರಿಯನ್ನು ನೋಡಿ ನಗುತ್ತಾ ಬಂದನು. ಮನೆಗೆ ಸೇರಿದ ಆವರಣದಲ್ಲೇ ಕಾಶೀಯಾತ್ರೆಯು ನಡೆಸಲ್ಪಟ್ಟಿತು. ವಧೂವರರು ಮಣೆಯಮೇಲೆ ಕುಳಿತುಕೊಂಡು ಹೋಮಾದಿಗಳನ್ನು ಮಾಡಿದರು. ಇನ್ನೇನು ಧಾರೆ

ಯಿರೆಯುವದೂ ಮಾಂಗಲ್ಯಸೂತ್ರಧಾರಣೆಯೂ ಉಳಿದಿದ್ದವು. ಪುರೋಹಿತರುಗಳು ವೇದಮಂತ್ರವನ್ನು ಘಟ್ಟಿಯಾಗಿ ಹೇಳುತ್ತಿದ್ದರು. ಮಧುಸೂದನನ ಕೈಗೆ ಮಾಂಗಲ್ಯ ಸೂತ್ರವು ಕೊಡಲ್ಪಟ್ಟಿತು. ಅವನು ಅವನ್ನು ಸುಂದರಿಯ ಕತ್ತಿಗೆ ಕಟ್ಟುವುದಕ್ಕೆ ಹೋದನು.

ಇದೇನು ಕೂಗಾಟ? ತೆರೆದಿದ್ದ ಬಾಗಲಿನ ಮೂಲಕ ಏಕಕಾಲದಲ್ಲಿ ಆಯುಧ ಪಾಣಿಗಳಾದ ಐವತ್ತುಜನ ಪೋಲೀಸಿನವರೂ ಅವರ ಮುಂದುಗಡೆ ಭಾಸ್ಕರನೂ ಮತ್ತು ಪೋಲೀಸ್‌ಕಮಿಷನರೂ ಎರಡೆರಡು ರಿವಾಲ್ವರುಗಳನ್ನು ಹಿಡಿದುಕೊಂಡು ನುಗ್ಗಿಬಂದರು! ಭಾಸ್ಕರನು, ಮಧುಸೂದನ! ನಿಧಾನಿಸು. ಮಾಂಗಲ್ಯವನ್ನು ಕಟ್ಟಬೇಡ ವೆಂದು ಕೂಗಿದನು. ಅಲ್ಲಿ ನೆರದಿದ್ದವರೆಲ್ಲಾ ಎದ್ದುನಿಂತು ವಿಶ್ವನಾಥನ ಮುಖವನ್ನು ನೋಡಿದರು. ಇಂಥಾ ಸಮಯದಲ್ಲಿಯೂ ಕೂಡಾ ಅವನು ನಗುತ್ತಾ ನೀವು ನನ್ನ ಮನೆಯೊಳಕ್ಕೆ ನುಗ್ಗಲು ಕಾರಣವೇನು? ಎಂದು ಕೇಳಿದನು. ಭಾಸ್ಕರನು ಇದೋ ಇದೇ ಕಾರಣ ಎಂದು ಹೇಳಿ ಸೋಮೇಂದ್ರನ ಬಳಿಗೆ ನುಗ್ಗಿ ಅವನ ದಾಡಿಯನ್ನೂ ವಿಾಶೆಯನ್ನೂ ಹಿಡಿದೆಳೆಯಲು ಅವರೆಡೂ ಬಂದುಬಿಟ್ಟವು. ಕೂಡಲೇ ಭಾಸ್ಕರನು ವಿಶ್ವನಾಥ! ನಿನ್ನನ್ನು, ಮಧುಸೂದನನನ್ನು ಕದ್ದಿದ್ದಕ್ಕೂ ಸುರತಪ್ರದ ಜಹಗೀರ್‌ದಾರನ ಮನೆಯಲ್ಲಿ ಡಕಾಯತಿ ಮತ್ತು ಕೊಲೆಯ ನಡಿಸಿದ್ದಕ್ಕಾಗಿಯೂ, ಮೋಸೆಸ್ಸನನ್ನು ಕೊಂದದ್ದಕ್ಕಾಗಿಯೂ ಸೆರೆಹಿಡಿಯುವೆನು ಎಂದು ಹೇಳಿದ ಕೂಡಲೆ ಸುಂದರಿಯು, ಅಯ್ಯೋ' ಎಂದು ಕೂಗಿ ಕೆಳಕ್ಕೆ ಬಿದ್ದಳು. ಕೂಡಲೇ ವಿಶ್ವನಾಥನು ತನ್ನ ರಿವಾಲ್ವರುಗಳನ್ನು ಎಳೆದುಕೊಂಡು '' ನಾವು ನಿಮ್ಮ ಕೈಗೆ ಸುಲಭವಾಗಿ ಶಿಗತಕ್ಕವರಲ್ಲವೆಂದು ಘರ್ಜಿಸಿ ಭಾಸ್ಕರನ ಮೇಲೆ ಹೊಡೆದನು. ಕೂಡಲೇ 'ಎಂ' ಸಂಘದ ಮೆಂಬರುಗಳೆಲ್ಲರೂ ತಮ್ಮತಮ್ಮ ರಿವಾಲ್ವರುಗಳನ್ನು ಎಳೆದು ಗುಂಡುಗಳನ್ನು ಹೊಡೆಯಲು ಪ್ರಾರಂಭಿಸಿದರು. ಪೋಲೀಸಿನವರಲ್ಲಿಯೂ ಅನೇಕರು ಗತಾಸುಗಳಾಗಿ ಉರುಳಿದರು. ಆದರೆ '' ಎಂ'' ಸಂಘದ ಮೆಂಬರುಗಳಲ್ಲಿ ಆಗಲೇ ಹದಿನೆಂಟು ಜನಗಳು, ಕೆಲವರು ಪ್ರಾಣ ಬಿಟ್ಟೂ ಮತ್ತೆ ಕೆಲವರು ಪ್ರಾಣಾಪಾಯವಾದ ಘಾಯಗಳನ್ನು ಹೊಂದಿಯೂ ನೆಲದ ಮೇಲೆ ಉರುಳಿದ್ದರು. ಉಳಿದ ಏಳು ಜನಗಳನ್ನು ಸೆರೆಹಿಡಿದುಕೊಂಡರು. ಇಷ್ಟು ಹೊತ್ತಿನವರಿಗೂ ಘೋರವಾಗಿ ಜಗಳವಾಡುತ್ತಿದ್ದ ವಿಶ್ವನಾಥನು ಇನ್ನು ಪ್ರಯೋಜನ ವಿಲ್ಲವೆಂದು ಯೋಚಿಸಿ ಭಾಸ್ಕರನಮೇಲೂ ಬಂದೂಕ ಹೊಡೆಯಲು ಅದು ತಪ್ಪಿಹೋಗಿ ಇಬ್ಬರು ಪೋಲೀಸಿನವರನ್ನು ಘಾಯಪಡಿಸಿದವು. ಇನ್ನು ಎರಡೇ ಗೋಲಿಗಳು ಉಳಿದಿರುವುದನ್ನು ನೋಡಿ ಅಯ್ಯೋ! ಪುತ್ರಿ, ನನ್ನನ್ನು ಕ್ಷಮಿಸು. ನಿನ್ನನ್ನೊಬ್ಬಳನ್ನೇ ಬಿಟ್ಟು

ಹೋಗಲಾರೆನೆಂದು ಕೂಗಿ ಆ ನೀಚನು ಮೇಲಕ್ಕೇಳುತ್ತಿದ್ದ ಸುಂದರಿಯ ಹೃದಯ ಕ್ಕೊಂದು ಗೋಲಿಯನ್ನು ಕಳುಹಿಸಿ ತಾನೂ ಉಳಿದಿದ್ದ ಗೋಲಿಯಿಂದ ಭಾಸ್ಕರನು ತಡೆಯುವುದರೊಳಗಾಗಿ, ತಲೆ ಹೊಡೆದುಕೊಂಡು ಕೆಳಕ್ಕುರುಳಿದನು. ಭಾಸ್ಕೆ ರನು ಸುಂದರಿಯ ಸಮೀಪಕ್ಕೆ ಬಂದು ನೋಡುವಲ್ಲಿ ಪ್ರಾಣವು ಅವಳ ದೇಹವನ್ನು ಬಿಟ್ಟು ನೀಗಿತ್ತು. !!

ಮಧುಸೂದನನನ್ನೂ ಬ್ರಾಹ್ಮಣರಿಬ್ಬರನ್ನೂ ಮೊದಲೇ ಒಂದು ಕೊಠಡಿಗೆ ಕರೆದು ಕೊಂಡುಹೋಗಿಟ್ಟುಕೊಂಡಿದ್ದರು. ಪೋಲಿಸಿನವರ ಕಡೆಯೂ ಹತ್ತು ಜನಗಳು ಸತ್ತುಹೋ ಗಿದ್ದರು. ಮತ್ತಾರು ಜನಗಳಿಗೆ ಬಹಳ ಘಾಯವಾಗಿದ್ದಿತು. ' ಎಂ ' ಕೂಟದವರಲ್ಲಿ ಕೈತೇ ಸಿಕ್ಕಿದ ಏಳು ಜನಗಳನ್ನೂ ತನ್ನ ಪೋಲೀಸ್ ಸೇವಕರನ್ನೂ ಕರೆದುಕೊಂಡು ಮನೆಯಲ್ಲಿ ಬಿದ್ದಿದ್ದ ಹೆಣಗಳನ್ನೆಲ್ಲಾ ಸಾಗಿಸುವಂತೆ ಆಪ್ಪಣೇ ಮಾಡಿ ಮನೆಯ ಬಳಿ ಹತ್ತು ಜನರನ್ನು ಕಾವಲಿಟ್ಟು, ಕಮೀಷನರು ಹೊರಟುಹೋದರು. ಭಾಸ್ಕರನು ಮಧು ಸೂದನನನ್ನೂ ಬ್ರಾಹ್ಮಣಬ್ಬರನ್ನೂ ಕರೆದುಕೊಂಡು ಬೀದಿಗೆ ಬಂದು ಅಲ್ಲಿ ಬ್ರಾಹ್ಮಣ ರನ್ನು ಕಳುಹಿಸಿಬಿಟ್ಟು ಗೋವಿಂದನ ಮನೆಗೆ ಬಂದು ಅಲ್ಲಿ ಮಧುಸೂದನನನ್ನು ಬಿಟ್ಟು ತಾನು ಕಮೀಷನರ ಆಫೀಸಿಗೆ ಬಂದನು.

ಇತ್ತ ಕಲ್ಕತ್ತಾ ನಗರದಲ್ಲೆಲ್ಲಾ ಈ ಸಂಗತಿಗಳು ಹರಡಿದವು. ಕೂಡಲೇ ಅನೇಕ ಸಂಘದವರು ಕಲ್ಕತ್ತಾವನ್ನು ಬಿಟ್ಟೋಡಿದರು. ಎಲ್ಲರೂ ಇವುಗಳನ್ನೆಲ್ಲಾ ಪತ್ತೇಮಾಡಿದ ಭಾಸ್ಕರನನ್ನು ಹೊಗಳಲಾರಂಭಿಸಿದರು. ಅನೇಕರು ' ಎಂ ' ಸಂಘದ ಮುಕ್ತಾಯವನ್ನು ಕೇಳಿ " ಸತ್ಪುರುಷರಂತೆ ಕಾಣಬಂದ ಆ ನೀಚರುಗಳ ಹಾಗೆ ಇನ್ನೆಷ್ಟು ಜನಗಳಿದ್ದಾರೋ " ಎಂದು ಮಾತನಾಡಿದರು. ಅನೇಕರು ಸುಂದರಿಗಾದ ಗತಿಯನ್ನು ಕೇಳಿ ಮರುಗಿದರು.

ಹತ್ತನೇ ಅಧ್ಯಾಯ.

ಭಾಸ್ಕರನ ಹೇಳಿಕೆ—ಮುಕ್ತಾಯ.

ವಾಸವಪುರದಿಂದ ಸೋಮಸುಂದರನೂ ತ್ರಿಯಂಬಕ ಶಾಸ್ತ್ರಿಯೂ ಕಲ್ಕತ್ತೆಗೆ ಬಂದು ಭಾಸ್ಕರನನ್ನೂ ಮಧುಸೂದನನನ್ನೂ ಕಾಣಿಸಿಕೊಂಡರು. ಮಧುಸೂದನನು ತನ್ನ ಸ್ನೇಹಿತರಿಂದ ತಾನು ಕೆಟ್ಟುಹೋದ ವಿಷಯಗಳನ್ನೆಲ್ಲಾ ತನ್ನ ತಂದೆಗೆ ತಿಳಿಸಿ

ಅವನ ಕ್ಷಮಾಪಣೆಯನ್ನು ಕೇಳಿದನು. ಕರುಣಾಶಾಲಿಯಾದ ಸೋಮಸುಂದರನು ತನ್ನ ಮಗನನ್ನು ಕ್ಷಮಿಸಿ ಅವನಿಗೆ ಪ್ರಾಯಶ್ಚಿತ್ತಮಾಡಿಸಿ ಅನೇಕ ಬ್ರಾಹ್ಮಣರಿಗೆ ದಾನಾದಿಗಳನ್ನು ಕೊಟ್ಟನು. ಭಾಸ್ಕರನನ್ನು ಆಗ ಅವನು ಯಾವ ರೀತಿಯಲ್ಲಿ ಮಾತನಾಡಿಸಿದನೆಂಬುದನ್ನು ಹೇಳಬೇಕಾಗಿಲ್ಲ.

ಸೆರೇ ಸಿಕ್ಕಿದ ಏಳುಮಂದಿಯನ್ನೂ ವಿಚಾರಣೇ ಮಾಡುವುದಕ್ಕಾಗಿ ಬೇರೆ ಒಂದು ನ್ಯಾಯಸ್ಥಾನವು ಏರ್ಪಾಡಾಯಿತು. ವಿಚಾರಣೆಯ ದಿವಸ ನ್ಯಾಯಸ್ಥಾನವೆಲ್ಲಾ ಜನಗಳಿಂದ ಕಿಕ್ಕಿರಿದು ಹೋಗಿತ್ತು. ಒಂದು ಬೆಂಚಿನ ಮೇಲೆ ಮಧುಸೂದನ, ಸೋಮ ಸುಂದರ, ತ್ರಿಯಂಬಕಶಾಸ್ತ್ರಿ ಗೋವಿಂದ ಮೊದಲಾದವರು ಕುಳಿತಿದ್ದರು. ಅಪರಾಧಿಗಳ ಪಕ್ಷ ಯಾವ ಲಾಯರೂ ಬಂದಿರಲಿಲ್ಲ. ಸರ್ಕಾರದ ಕಡೆ ಸಾಕ್ಷಿ ಹೇಳುವುದಕ್ಕಾಗಿ ಬಂದಿದ್ದ ಹರಿಚಂದ್ರನು ಅಪರಾಧಿಗಳ ಪಕ್ಕದಲ್ಲಿ ನಿಂತಿದ್ದನು. ಭಾಸ್ಕರನೂ ಇತರ ಪೋಲೀಸ್ ಅಧಿಕಾರಿಗಳೂ ಕುರ್ಚಿಗಳ ಮೇಲೆ ಕುಳಿತಿದ್ದರು. ಜನಗಳೆಲ್ಲರೂ ಭಾಸ್ಕರನನ್ನೇ ನೋಡುತ್ತಿದ್ದರು. ನ್ಯಾಯಾಧಿಪತಿಯು ಬಂದು ತನ್ನಾಸನದಲ್ಲಿ ಕುಳಿತು ಮಧುಸೂದನ, ಹರಿಚಂದ್ರ ಇವರ ಹೇಳಿಕೆಗಳನ್ನು ತೆಗೆದುಕೊಂಡನು. ಮಧು ಸೂದನನ ಹೇಳಿಕೆಯಿಂದ ಅವನು ತಾನು ಮಾಡಿದ್ದ ಸಾಲದ ಭಯಕ್ಕಾಗಿ ವಿಶ್ವನಾಥನ ಮಗಳನ್ನು ಮದುವೆಯಾಗುವುದಾಗಿ ಮಾತುಕೊಟ್ಟಿದ್ದಹಾಗೂ, ತನ್ನ ತಂದೆಯ ಬಳಿ ಅದನ್ನು ಹೇಳುವುದಕ್ಕೆ ಹೆದರಿ, ಅವನ ಮಾತಿನಂತೆ ಸರಳಬಾಲೆಯೆನ್ನು ವಿವಾಹ ಮಾಡಿಕೊಳ್ಳುವುದಕ್ಕೊಪ್ಪಿದ ವಿಷಯವು ವಿಶ್ವನಾಥನಿಗೆ ತಿಳಿದು ಮದುವೆಯ ದಿವ ಸವೇ ಬಂದು ಎಲ್ಲಾ ಸಂಗತಿಗಳನ್ನೂ ಬಹಿರಂಗಪಡಿಸುವುದಾಗಿ ಹೇಳಿ ಕಳುಹಲು, ತಾನು ಹೋಗಿ ತನ್ನ ಕೊಠಡಿಯಲ್ಲಿ ಆರು ಜನಗಳೊಡನೆ ಬಂದಿದ್ದ ವಿಶ್ವನಾಥನನ್ನು ಕಂಡಹಾಗೂ ಅವನು ಕೂಡಲೇ ತನ್ನನ್ನು ಹಿಡಿದು ಕೈಕಾಲುಕಟ್ಟಿ ಅವರಿಗೆ ತಾನೇ ಹೇಳಿದ್ದ ಸುರಂಗ ಮಾರ್ಗವಾಗಿ ಸಾಗಿಸಿಕೊಂಡು ಹೋಗಿ ಕಲ್ಕತ್ತೆಗೆ ಕರದುತಂದು ಅಲ್ಲಿ ಗುಪ್ತಗೃಹದಲ್ಲಿ ಶೆರೇ ಇಟ್ಟಹಾಗೂ ಬಲವಂತದಿಂದಲೂ, ಹೆದರಿಕೆಯಿಂದಲೂ ಅವರ ಮಾತಿಗೊಪ್ಪಿ ವಿಶ್ವನಾಥನ ಕನ್ಯೆಯನ್ನು ವಿವಾಹಮಾಡಿಕೊಳ್ಳುವುದರಲ್ಲಿದ್ದಿ ನೆಂದೂ, ಮಧುಸೂದನನು ತಿಳಿಸಿದನು.

ಹರಿಚಂದ್ರನು ಅಲ್ಲಿದ್ದ ಏಳು ಅಪರಾಧಿಗಳನ್ನೂ ತೋರಿಸಿ ಅವರೆಲ್ಲರೊಡನೆ ತಾನೂ ಚರ್ಮದ ವ್ಯಾಪಾರಿಯನ್ನು ಸುಲಿಗೇ ಮಾಡಿದಹಾಗೂ ಆ ಮೇಲೆ ನಡೆದ ಕೃತ್ಯಗಳಲ್ಲಿ ಭಾಸ್ಕರನ ದೆಶೆಯಿಂದ ತಾನು ಸೇರಿರಲಿಲ್ಲವೆಂದೂ ತಿಳಿಸಿದನು.

ಭಾಸ್ಕರನು, ತನ್ನ ನರದಿಯು ಬರಲು ಎದ್ದುನಿಂತು " ಧರ್ಮಾವತಾರನೇ (Judge) ನಾನು ಮಧುಸೂದನನನ್ನು ಪತ್ತೇಮಾಡುವುದಕ್ಕಾಗಿ ಕರೆಸಲ್ಪಟ್ಟೆನು. ನಾನು ವಿಚಾರಿಸಿದ್ದರಲ್ಲಿ ಮಧುಸೂದನನ ಕೊತಡಿಯಿಂದ ಸುರಂಗಮಾರ್ಗ ವೊಂದಿರುವುದೆಂದೂ ಮಧುಸೂದನನು ತನ್ನ ಸ್ನೇಹಿತರಿಂದ ಪೀಡಿಸಲ್ಪಡುತ್ತಿದ್ದನೆಂದೂ ತಿಳಿಯಬಂತು. ನಾನು ಅಲ್ಲಿನ ಸುರಂಗಮಾರ್ಗವನ್ನು ಪರೀಕ್ಷೆಮಾಡುವಲ್ಲಿ ಇದೋ ಈ ಗುಂಡಿಯೂ, ಈ ಹರಿದುಹೋದ ಎಳು ಬಣ್ಣದ ಕರವಸ್ತ್ರವೂ ಸಿಕ್ಕಿದವು. ಅವುಗಳನ್ನು ತೆಗೆದುಕೊಂಡುಬಂದು ಕಲ್ಕತ್ತೆಯಲ್ಲಿ ಮಧುಸೂದನನ ಸ್ನೇಹಿತನ ವಿಷಯವಾಗಿ ವಿಚಾರಿಸುವಲ್ಲಿ ಅವರಲ್ಲೊಬ್ಬನು ಮದ್ಯದಂಗಡಿಗೆ ಬರುವುದಾಗಿ ತಿಳಿಯಬಂದಿತು. ಹಾಗೆ ಬರುತಿದ್ದವನೇ ಈ ಹರಿಚಂದ್ರನು.

ಅವನಿಗೆ ಮದ್ಯವನ್ನು ಹೆಚ್ಚಾಗಿ ಕುಡಿಸಿ ಅವನು ತನ್ನ ಏಳು ಬಣ್ಣದ ಕರವಸ್ತ್ರವನ್ನು ಹೊರಕ್ಕೆ ತೆಗೆದುದನ್ನು ನೋಡಿ ಅವನೇ ನನಗೆ ಬೇಕಾದ ಮನುಷ್ಯನೆಂದು ತಿಳಿದು ಅವನ ಮೂಲಕ ಅವನ ಸಂಘದ ವಿಷಯವನ್ನೂ ಅವರ ಮನೆಯನ್ನೂ ಅರಿತು, ಎರಡನೇದಿವಸ ರಾತ್ರಿ ಅವನನ್ನು ನನ್ನ ಸ್ನೇಹಿತನ ಮನೆಗೆ ಕೊಂಡೊಯ್ದು ಅಲ್ಲಿ ಅವನನ್ನು ಬಿಟ್ಟು ಅವನ ಉಡುಪುಗಳನ್ನು ನಾನು ಧರಿಸಿ ಆ ಸಂಘದ ಮನೆಗೆ ಹೋಗಿ ಅಲ್ಲಿ ಹರಿಚಂದ್ರನಹಾಗೇ ಮಾತನಾಡಿ ಬಂದೆನು. ಪುನಃ ಹರಿಚಂದ್ರನ ವೇಷದಲ್ಲಿ ಅವರ ಗುಪ್ತಗೃಹವನ್ನು ಹೊಕ್ಕು ಅಲ್ಲಿ ಎರಡು ದಿವಸಗಳು ವಾಸಮಾಡಿದೆನು. ಈಗಲೀಗ ಆ ಕಳ್ಳರ ಸಂಗತಿಯನ್ನು ಹೇಳಬೇಕಾಗಿದೆ. ಈ ನೀಚರುಗಳೆಲ್ಲರೂ ವಿದ್ಯಾವಂತರಾಗಿದ್ದರೂ ಕೆಟ್ಟತನಕ್ಕೆ ಬಿದ್ದು ಸಂಘವನ್ನೇರ್ಪಡಿಸಿಕೊಂಡು ಹೊರಕ್ಕೆ ಮಹಾ ಸಭ್ಯರಂತೆ ತೋರ್ಪಡಿಸಿಕೊಳ್ಳುತ್ತಾ ಒಳಗೊಳಗೇ ಕಳ್ಳತನಗಳನ್ನೂ ಕೊಲೆಗಳನ್ನೂ ನಡಿಸಿ ಆ ಹಣದಿಂದ ಜೀವನ ಮಾಡುತ್ತಿದ್ದರು. ಇವರುಗಳು ತಾವು ಮಹಾ ಶ್ರೇಷ್ಠರಾದ ಸಂಘಸಂಸ್ಕರಣಕರ್ತರಂತೆ ತೋರ್ಪಡಿಸಿಕೊಳ್ಳುತ್ತಾ ಜನಗಳನ್ನೂ ಇತರ ಸಂಘಸಂಸ್ಕರಣೆಗಳನ್ನೂ ಮರುಳುಮಾಡುತ್ತಿದ್ದರು. ಈ ನೀಚರುಗಳು ಒಂದು ತಿಂಗಳಿನ ಕೆಳಗೆ ಒಬ್ಬ ಚರ್ಮವ್ಯಾಪಾರಿಯನ್ನು ಲೂಟಿಮಾಡಿ ಅವನ ಹಣವನ್ನೆಲ್ಲಾ ತಿಂದುಹಾಕಿರುವರು. ಈ ನೀಚರುಗಳೇ ಒಂದು ಕಂಪನಿಯಿಂದ ರಿವಾಲ್ವರುಗಳನ್ನು ಕದ್ದವರು. ಆ ರಿವಾಲ್ವರುಗಳೆಲ್ಲಾ ಈಗ ಅವರ ಗುಪ್ತಗೃಹದಲ್ಲಿರುವುದು. ಇವರ ಮುಖ್ಯಸ್ಥನಾದ ವಿಶ್ವನಾಥನೆಂಬುವನು ತನ್ನ ಮಗಳನ್ನು ಯಾರಾದರೂ ಧನವಂತನಿಗೆ ಮದುವೇ ಮಾಡಬೇಕೆಂಬ ಭಿಲಾಷೆಯಿಂದಲೇ ಮಧುಸೂದನನನ್ನು ಕದ್ದು ತಂದು ಅವನಿಗೆ ಮದ್ಯಾದಿಗಳನ್ನು ಕುಡಿಸಿ ತನ್ನ ಮಾತಿಗೊಪ್ಪುವಂತೆ ಮಾಡಿಕೊಂಡನು. ಅನ್ಯಾಯವಾಗಿ ಆ ನೀಚನ ಕಾರ್ಯಕ್ಕಾಗಿ ಪ್ರಾಣ ಕೊಟ್ಟ ಅವನ ಪುತ್ರಿಯ ವಿಷಯದಲ್ಲಿ ನಾವು ಮರುಗಬೇಕಾಗಿದೆ.

" ಈಗ ಎರಡು ಮೂರು ದಿವಸಗಳಹಿಂದೆ ನಡೆದ ವಿಷಯಗಳನ್ನು ತಿಳಿಸುತ್ತೇನೆ. ಈ ಗುಂಪಿನವರಿಗೆ ತಮ್ಮ ಮೇಲೆ ಪೊಲೀಸಿನವರಿಗೆ ಕಣ್ಣಿದೆಯೆಂದು ತಿಳಿಯಬಂತು. ಆದ್ದರಿಂದ ಬೇಕಾದಷ್ಟು ಧನವನ್ನು ಸೇರಿಸಿಕೊಂಡು ಎಲ್ಲಾದರೂ ಬೇರೇಕಡೆಗೆ ಹೋಗಿ ಜೀವಿಸುತ್ತಿರಬೇಕೆಂಬಭಿಪ್ರಾಯದಿಂದ ವಿಶ್ವನಾಥನು ಹದಿನೆಂಟು ಜನಗಳೊಡನೆ ಸುರತ ಪುರಿಯ ಜಮೀನ್ದಾರನ ಮನೆಯನ್ನು ಹೊಕ್ಕು ಸೇವಕರನ್ನು ಕೊಂದು ಸುಮಾರು ಹತ್ತುಲಕ್ಷ ರೂಪಾಯಿ ಬಾಳುವ ಪದಾರ್ಥಗಳನ್ನೂ ಹಣವನ್ನೂ ತಂದು ಅವರ ಗುಪ್ತ ಗೃಹದಲ್ಲಿ ಹೂತಿರುವರು (ಜನಗಳು ತಮ್ಮಲ್ಲೇ ಮಾತನಾಡ ತೊಡಗಲು, ಅಳುಗಳು ಸದ್ದು ಎಂದು ಕೂಗಿದರು.) ಇದಾದ ಮಾರನೇ ದಿವಸ ಪೊಲೀಸ್ ಇನ್‌ಸ್ಪೆಕ್ಟರ್ ಮೋಸೆಸ್ ಎಂಬುವನಿಗೆ ವಿಶ್ವನಾಥನ ಮೇಲೆ ಸಂಶಯಹುಟ್ಟಿ ಆ ಮನೆಯನ್ನು ಹೊಕ್ಕು ಪರೀಕ್ಷೆಮಾಡಿದನು. ಆದರೆ ಅಲ್ಲಿ ಅವನಿಗೇನೂ ಸಂಶಯಾಸ್ಪದವಾದ ವಸ್ತುಗಳು ಸಿಕ್ಕಲಿಲ್ಲ. ಆದರೂ ಆವನಿಗೆ ಸಂಶಯವಿದ್ದದ್ದರಿಂದ ಹೊರಟುಹೋಗುವಾಗ ಆದೇ ವಿಷಯವನ್ನು ತಿಳಿಸಿ ಹೊರಟುಹೋದನು. ವಿಶ್ವನಾಥನು ಆ ಮೋಸೆಸ್ಸನಿಂದ ತನಗೆ ಕೆಡಕು ಬರುವುದೆಂದು ಯೋಚಿಸಿದನು. ಆದ್ದರಿಂದ ಅವನನ್ನು ಒಂಬಾಲಿಸಿ ಮೋಸೆಸ್ಸ ನನ್ನೂ ಅವನ ಸೇವಕನನ್ನೂ ರಿವಾಲ್ವರಿನ ಗುಂಡುಗಳಿಂದ ಕೊಂದು ಮನೆಯನ್ನು ಸೇರಿದನು. ಇವನು ಹೀಗೆ ಮಾಡುವನೆಂದು ತಿಳಿದಿದ್ದರೆ ಆದನ್ನು ತಪ್ಪಿಯುತ್ತಿದ್ದೆನು. ಆದರೆ ಅವನು ಆ ವಿಷಯವನ್ನೇ ಹೇಳಲಿಲ್ಲವು. ಆದ್ದರಿಂದ ನಾನೂ ಸಂಶಯಪಡಲಿಲ್ಲ. ಇನ್ನು ತನ್ನ ಮಗಳ ಮದುವೆಯೊಂದೇ ಉಳಿದಿತ್ತು. ಅದರೊಳಗಾಗಿ ನಾನು ನನ್ನ ಸ್ನೇಹಿತರಾದ ಪೊಲೀಸ್ ಕಮಿಷನರ ಬಳಿಗೆ ಬಂದು ಅವರಿಗೆ ಸಕಲ ವಿಷಯಗಳನ್ನೂ ತಿಳಿಸಿದೆನು. ಮಾರನೇ ದಿವಸ ವಿವಾಹವು ನಡೆಯುವುದೆಂದೂ ಆಗ ಅಲ್ಲಿ ಎಲ್ಲಾ ಮೆಂಬರುಗಳೂ ಸೇರುವರೆಂದೂ ನನಗೆ ತಿಳಿದಿದ್ದದ್ದರಿಂದ ಮಾರನೇ ದಿವಸ ಅನೇಕ ಪೊಲೀಸಿನವರೊಡನೆ ಹೋಗಿ ಅವರನ್ನು ಸೆರೆಹಿಡಿಯಬೇಕೆಂದು ಹೇಳಿದೆನು. ಅದರಂತೆ ನಾವು ಸರಿಯಾದ ಸಮಯಕ್ಕೆ ಹೋಗಿ ಆ ವಿವಾಹವನ್ನು ನಿಲ್ಲಿಸಿ ಸತ್ತುಳಿದ ಈ ಏಳು ಮಂದಿಗಳನ್ನೂ ಹಿಡಿದುತಂದಿರುವೆವು. ಇವರನ್ನೆಲ್ಲಾ ಸುರತಪುರಿಯ ಕೊಲೆ ಮತ್ತು ಡಕಾಯಿತಿಗಳಲ್ಲಿ ಮತ್ತು ಹಿಂದಲ ಅನೇಕ ಕೆಟ್ಟಕೃತ್ಯಗಳಲ್ಲಿ ಭಾಗಿಗಳಾಗಿದ್ದರೆಂದೂ ನಾನು ಅವರ ಮೇಲೆ ಆಪರಾಧವನ್ನು ಹೊರಿಸುತ್ತೇನೆ. ಇದೋ ಈ ಹರಿಜಂದ್ರನು ಜರ್ಮದ ವ್ಯಾಪಾರಿಯನ್ನು ಸುಲಿಗೇಮಾಡಿದ್ದಾಗ ಸೇರಿದ್ದರೂ ಆ ಮೇಲೆ ನಡೆದ ಕೃತ್ಯಗಳಲ್ಲಿ ಸೇರಲಿಲ್ಲವು. ಅವನು ಎಲ್ಲಾ ವಿಷಯಗಳನ್ನೂ ನನಗೆ ತಿಳಿಯ

ಪಡಿಸಿದನು. ಆದ್ದರಿಂದ ಧರ್ಮಾವತಾರನು ಅವನ ಮೇಲೆ ಕರುಣೆಯನ್ನು ತೋರಬೇಕೆಂದು ಬೇಡುತ್ತೇನೆ. ಸುರತಪುರಿಯ ಜಮೀನ್ದಾರನ ಆಸ್ತಿಯೆಲ್ಲವೂ ಮತ್ತು ಕಳುವಾದ ರಿವಾಲ್ವರುಗಳೂ ಮತ್ತು ಚರ್ಮದ ವ್ಯಾಪಾರಿಯ ಸ್ವಲ್ಪ ಭಾಗ ಧನವೂ ಈ ಅನಾಯಕ ಪಾಳಯದವರ ಗುಪ್ತಗೃಹದಲ್ಲಿರುವದು" ಎಂದು ಹೇಳಿ ಧರ್ಮಾವತಾರನಿಗೆ ವಂದಿಸಿ ಕುಳಿತುಕೊಂಡನು. ಕೂಡಲೇ ಜನಗಳೆಲ್ಲಾ ಕೈತಟ್ಟಿ ತಮ್ಮ ಸಂತೋಷವನ್ನು ತೋರ್ಪಡಿಸಿದರು. ಆಗ ನ್ಯಾಯಾಧಿಪತಿಯು ಆ ಏಳುಜನ ಅಪರಾಧಿಗಳನ್ನೂ ಏನು ಹೇಳುವಿರೆಂದು ಕೇಳಲು ಅದಕ್ಕವರು "ನಾವು ಹೇಳತಕ್ಕುದೇನೂ ಇಲ್ಲವು ಭಾಸ್ಕರನು ಹೇಳಿದ್ದೆಲ್ಲಾ ನಿಜವು. ತಮ್ಮ ವಿಷಯದಲ್ಲಿ ಕರುಣೆಯನ್ನು ತೋರಿಸಬೇಕೆಂದು" ಬೇಡಿದರು.

ಜನಗಳ ಕೋಲಾಹಲವು ನಿಲ್ಲಿಸಲ್ಪಟ್ಟಮೇಲೆ ಪಂಚಾಯಿತರ ಅಭಿಪ್ರಾಯವನ್ನು ಹೊಂದಿ ಧರ್ಮಾವತಾರನು ಎದ್ದು ನಿಂತುಕೊಂಡು ಈ ರೀತಿಯಾದ ತೀರ್ಪನ್ನೊದಿದನು. "ನಮ್ಮ ಮುಂದೆ ನಿಂತಿರುವ ಅಪರಾಧಿಗಳ ಕೃತ್ಯಗಳು ಬಹಳವಾಗಿವೆ. ನಮ್ಮ ಪಂಚಾಯಿತರು ಅವರುಗಳನ್ನೆಲ್ಲಾ ತಪ್ಪಿತಸ್ಥರೆಂದು ಹೇಳಿರುತ್ತಾರೆ. ಇವರುಗಳು ಕೊಲೇ ಡಕಾಯಿತಿ ಮುಂತಾದವುಗಳನ್ನು ಮಾಡಿರುವದು ರುಜುವಾತಾಗಿದೆ. ಆದರೆ ಇವರಲ್ಲಿ ಮೂವರು ಇನ್ನೂ ಬಹಳ ಚಿಕ್ಕವಯಸ್ಕರಾದ್ದರಿಂದ ನಾವು ಅವರಿಗೆ ಕರುಣೆಯನ್ನು ತೋರಿ ತಲಾ ಏಳು ವರುಷಗಳ ಕಠಿನ ಸಜಾವನ್ನೂ, ಉಳಿದ ನಾಲ್ವರೂ ದೊಡ್ಡವರೂ ವಿದ್ಯಾವಂತರೂ, ತಿಳಿದವರೂ ಆಗಿ ಈರೀತಿಯಾದ ಕೆಟ್ಟಕೆಲಸಗಳನ್ನು ಮಾಡಿರುವುದರಿಂದ ನಾವು ಅವರಿಗೆ ಜೀವಾವಧಿದ್ವೀಪಾಂತರವಾಸವನ್ನೂ ವಿಧಿಸಿರುತ್ತೇವೆ. ನಾವೆಲ್ಲರೂ ಈ ಪತ್ತೇದಾರೀ ಭಾಸ್ಕರರ ಘಟ್ಟಿಗತನವನ್ನು ಹೊಗಳುತ್ತೇವೆ. ಈ ನೀಚರುಗಳು ಕದ್ದಿದ್ದ ಪದಾರ್ಥಗಳೆಲ್ಲಾ ಆಯಾಮಾಲೀಕರಿಗೆ ಕೊಡಲ್ಪಡಬೇಕು. ಇನ್ನು ಮುಂದೆ ಇಂಥಾ ಸಂಘಗಳಮೇಲೆ ಪೋಲೀಸಿನವರು ಕಣ್ಣಿಟ್ಟಿರುವರೆಂದು ನಾವು ನಂಬುತ್ತೇವೆ. ಇದಕ್ಕೆ ನಮ್ಮ ವಿದ್ಯಾವಂತರಾದ ಪಂಚಾಯಿತರೂ ಒಪ್ಪುತ್ತಾರೆಂದು ನಂಬುತ್ತೇವೆ. ಈ ಹರಿಶಂದ್ರನೆಂಬುವನು ಕೊಲೆ ಮುಂತಾದವುಗಳನ್ನು ಮಾಡದೇ ಇದ್ದದ್ದರಿಂದಲೂ ಸರ್ಕಾರದ ಪಕ್ಷವಾಗಿ ಸಾಕ್ಷಿ ಕೊಟ್ಟಿದ್ದರಿಂದಲೂ ಅವನಿಗೆ ಅಧಿಕ ಶಿಕ್ಷೆಯನ್ನು ಕೊಡದೆ ಒಂದು ವರ್ಷ ಕಠಿಣಸಜಾವನ್ನು ವಿಧಿಸಿರುತ್ತೇವೆ." ಎಂದು ಮುಗಿಸಿದಕೂಡಲೆ ಅಪರಾಧಿಗಳೆಲ್ಲಾ ಕಾರಾಗೃಹಕ್ಕೆ ಒಯ್ಯಲ್ಪಟ್ಟರು. ಜನಗಳ ಗುಂಪಿನಲ್ಲಿದ್ದ ಸುರತಪುರಿಯ ಜಹಗೀರ್‌ದಾರನೂ, ಚರ್ಮವ್ಯಾಪಾರಿಯೂ ಎದ್ದುಬಂದು ಭಾಸ್ಕ

ಕನಿಗೆ ಹಸ್ತಲಾಘವವನ್ನು ಕೊಟ್ಟು ಅವನನ್ನು ಹೊಗಳಿ ದಯವಿಟ್ಟು "ತಮ್ಮನ್ನು ಬಂದುಕಾಣಬೇಕೆಂದು" ಹೇಳಿ ಹೊರಟುಹೋದರು.

ವಾಸವಪುರದಲ್ಲಿ ಮಧುಸೂದನ ಮತ್ತು ಸರಳಬಾಲೆ ಇವರುಗಳ ವಿವಾಹವು ನೆರವೇರಿತು. ಆ ಸಮಯದಲ್ಲಿ ಸುರತಪುರಿಯ ಜವಿೂನ್ದಾರನೂ, ಚರ್ಮವ್ಯಾಪಾರಿಯೂ ಬಂದಿದ್ದು ಅಲ್ಲಿದ್ದ ಭಾಸ್ಕರನನ್ನು ಕಾಣಿಸಿಕೊಂಡು ತಮಗೆ ತೋಚಿದ ರೀತಿಯಲ್ಲಿ ಅವನಿಗೆ ಪಾರಿತೋಷಕವನ್ನು ಕೊಟ್ಟರು. ಸರ್ಕಾರದಿಂದ ಬರಬೇಕಾಗಿದ್ದ ಬಹುಮಾನವೂ ಬಂದಿತು. ಸೋಮಸುಂದರನೂ ತನಗೆ ತೋರಿದ್ದನ್ನೆಲ್ಲಾ ಕೊಟ್ಟನು. ಸ್ವಲ್ಪ ಕಾಲದಲ್ಲೇ ಭಾಸ್ಕರನು ಅರವತ್ತು ಸಾವಿರ ರೂಪಾಯಿಗಳನ್ನು ಸಂಪಾದಿಸಿಬಿಟ್ಟನು. ಆದರೂ ಅವನು ಆಗಾಗ್ಗೆ ಸುಂದರಿಗಾದ ಗತಿಯನ್ನು ಕುರಿತು ವ್ಯಸನಪಡುತ್ತಿದ್ದನು. ವಿವಾಹವಾದಮೇಲೆ ಎಲ್ಲರೂ ತಮ್ಮತಮ್ಮ ಸ್ಥಳಗಳಿಗೆ ಹೋದರು. ಭಾಸ್ಕರನು ಮಾತ್ರ ಮಧುಸೂದನನ ಸಂಗಡ ಒಂದೆರಡು ತಿಂಗಳು ಇರುವುದಾಗಿ ಒಪ್ಪಿ ನಿಂತನು.

ಪಾಠಕಮಹಾಶಯ! ಸದ್ಯದಲ್ಲಿ ಭಾಸ್ಕರನನ್ನು ವಾಸವಪುರದಲ್ಲಿ ಬಿಟ್ಟಿರುವೆವು. ಮುಂದಕ್ಕೆ ಅವನ ವಿಷಯವಾಗಿ ನೀವು ಕೇಳಬೇಕೆಂದಿದ್ದರೆ ಶ್ಯಾಮಲಾಂಗಿಯೆಂಬ ಪುಸ್ತಕವನ್ನು ಓದಿನೋಡಿರಿ.

ಸಂಪೂರ್ಣಂ.

ಕಾದಂಬರೀ ಸಂಗ್ರಹ ಆಫೀಸಿನಲ್ಲಿ ಬೆಲೆಗೆ ದೊರೆಯುವ ಗ್ರಂಥಗಳ ಪಟ್ಟಿ.

1.	ವಿಶಾಲಾಕ್ಷಿ	0	12	0	16.	ಪ್ರೇಮಪಿಪಾಸೆ	0	2	0
2.	ಕಮಲಕುಮಾರಿ	0	9	0	17.	ಸುಲೋಚನಾ	0	3	0
3.	ನನ್ನ ಸಂಸಾರ	0	5	0	18.	ವಿನೋದಚಂದ್ರ	0	2	0
4.	ಚಂದ್ರಿಕಾವಿಜಯ	0	3	0	19.	ಡಕಾಯಿತಿ	0	2	0
5.	ಮಧುಸೂದನ	0	4	0	20.	ಸದಾಹಾರವಿವೇಚನೆ	0	2	0
6.	ಶಂಕರಕಥಾಸಾರ	0	8	0	21.	ನೀತಿಬೋಧಿನಿ	0	2	0
7.	ಮೃತ್ಯುಪರೀಕ್ಷೆ	0	2	0	22.	ಕರಾವಲಂಬಸ್ತೋತ್ರ	0	1	0
8.	ದೈವಾನುಗ್ರಹ	0	2	0	23.	ಹರಿಣಾಕ್ಷಿ	0	1	0
9.	ಏನೋ ಆಗಿ ಹೋಯಿತು	0	1	0	24.	ಕ್ಷಾತ್ರತೇಜ	0	6	0
10.	ವಿಲಕ್ಷಣ ದೈವಘಟನೆ	0	4	0	25.	ಬಿಲ್ಲುಗಾರಮಲ್ಲ	0	1	6
11.	ವಿರಕ್ತಳಾದ ಸೌದಾಮಿನಿ	0	5	0	26.	ವಿಶ್ವನಾಥ	0	1	0
12.	ಕುಮಾರಭೀಮಸಿಂಹ	0	1	0	27.	ಸುವರ್ಣಸಂಪುಟ	0	3	0
13.	ಸುಮನೋರಮಾ	0	2	0	28.	ಜಯಚಂದ್ರಿಕೆ	0	4	0
14.	ಬೃಂದಾವನ	0	2	0	29.	ಅಧ್ಯಾತ್ಮರಾಮಾಯಣ ಬಾಲಕಾಂಡ	0	10	0
15.	ಮಾಲಿನೀ	0	2	0	30.	ವಲೀಮುಖವಿಲಾಸ	0	8	0
					31.	ಕಂಠೀರವಶತಕ	0	2	0
					32.	ರೋಹಿಣಿ	0	4	0

ಕಾದಂಬರೀ ಸಂಗ್ರಹ ಮಾಸಪತ್ರಿಕೆಯ ವಾರ್ಷಿಕಚಂದಾ 1–4–0, ಹೊಸ ಚಂದಾದಾರರಿಗೆ ಯಾವುದಾದರೂ 4 ಆಣೆಯ ಪುಸ್ತಕ ಬಹುಮಾನ. ಮಾದರೀ ಪತ್ರಿಕೆಗೆ 2 ಆಣೆ. ಏಜಂಟರಿಗೆ ಧಾರಾಳವಾದ ಕಮಿಷನ್. ಕನ್ನಡಿಗರ ಪ್ರೋತ್ಸಾಹವು ನಿರೀಕ್ಷಣೀಯ.

ನಮ್ಮ ವಿಳಾಸ—ಎಡಿಟರ್, ಕಾದಂಬರೀ ಸಂಗ್ರಹ,

ಮೈಸೂರು.

ಶಂಕರಕಥಾಸಾರ

(The Life and Teachings of Sri Sankara)

ಡಿ. ಎಸ್. ಶಂಕರನಾರಾಯಣಶಾಸ್ತ್ರಿ

ಮೈಸೂರು.

MYSORE:
ROYAL PRESS
1916

Price 8 *As.*] [ಬೆಲೆ 8 ಆಣೆ.

PRINTED BY
B. V. NARASIMHAIYENGAR
AT THE ROYAL PRESS, MYSORE—1916.

Contents (ವಿಷಯಸೂಚಿಕೆ.)

ವಿಷಯಗಳು			ಪುಟಸಂಖ್ಯೆ
ಪ್ರಥಮವಲ್ಲರೀ	...	ಈಶ್ವರಾಜ್ಞೆ ...	೧
		ಭಟ್ಟಪಾದಾವತಾರ	
ದ್ವಿತೀಯವಲ್ಲರೀ	...	ಈಶ್ವರಾನುಗ್ರಹ ...	೪
ತೃತೀಯವಲ್ಲರೀ	...	ಶ್ರೀಶಂಕರಾವತಾರಘಟ್ಟಃ ...	೬
ತುರೀಯವಲ್ಲರೀ	...	ಶ್ರೀಶಂಕರಕೌಮಾರವರ್ಣನವು...	೯
ಪಂಚಮವಲ್ಲರೀ	...	ಶ್ರೀಶಂಕರರ ಕ್ರಮಸನ್ಯಾಸ ...	೧೫
ಷಷ್ಠವಲ್ಲರೀ	...	ಶಿಷ್ಯಾನುಗ್ರಹ ...	೧೮
		ಭಾಷ್ಯರಚನೆ	
ಸಪ್ತಮವಲ್ಲರೀ	...	ವ್ಯಾಸ ಸಂದರ್ಶನ ...	೨೩
		ಭಟ್ಟಪಾದಾನುಗ್ರಹ	
		ಮಂಡನಮಿಶ್ರೋಭಯಭಾರತಿಗಳ ಪರಾಭವ	
ಅಷ್ಟಮವಲ್ಲರೀ	...	ಉಗ್ರಭೈರವವಧೆ ...	೩೯
		ನರಸಿಂಹಪ್ರತ್ಯಕ್ಷ ವಿಷಯ	
ನವಮವಲ್ಲರೀ	...	ಮೂಕಾಂಬಾದರ್ಶನ(ಶ್ರೀಚಕ್ರಸ್ಥಾಪನೆ)	೪೧
		ಶೃಂಗಗಿರಿಯಲ್ಲಿ ಶ್ರೀಮಠಸ್ಥಾಪನೆ	
ದಶಮವಲ್ಲರೀ	...	ಬ್ರಹ್ಮವಿದ್ಯಾಪ್ರಚಾರ ...	೪೪
ಏಕಾದಶವಲ್ಲರೀ	...	ಶ್ರೀಶಂಕರಕೃತ ಜನನೀಕರ್ಮ...	೪೬
		ಪದ್ಮಪಾದ ತೀರ್ಥಯಾತ್ರಾ	
ದ್ವಾದಶವಲ್ಲರೀ	...	ಆಚಾರ್ಯಕೃತದಿಗ್ವಿಜಯ ವರ್ಣನವು	೪೮
ತ್ರಯೋದಶವಲ್ಲರೀ	...	ಅಭಿನವಗುಪ್ತ ಕೃತಾಭಿಚಾರಿಕವು	೬೫
		ಸರ್ವಜ್ಞಪೀಠಾರೋಹಣ	
		ಕೈಲಾಸಗಮನ	

ಶುದ್ಧಾಶುದ್ಧಗಳು.

ಪುಟ.	ಪಙ್ಕ್ತಿ.	ಅಶುದ್ಧ.	ಶುದ್ಧ.
೪	೨೪	ಜ್ಯೊತಿರ್ಲಿಂಗ	ಜ್ಯೋತಿರ್ಲಿಂಗ
೭	೨	ಪಡೆಯದಂತೆ	ಪಡೆದಂತೆ
,,	೯	ಪುಸಕ	ಪುಸ್ತಕ
೯	೧೩	ದ್ವೇತ	ದ್ವೈತ
,,	೧೫	ಹುಜ್ಜಿದರು	ಹುಟ್ಟಿದರು
೨೧	೨೦	ಪ್ರತಿಜಾದೃಷ್ಟಾಂತ	ಪ್ರತಿಜ್ಞಾದೃಷ್ಟಾಂತ
೨೬	೧೩	ನಿನಗೆ	ನನಗೆ
೨೭	೨೪	ಕಪಟವಾಯಿತು	ಪ್ರಕಟವಾಯಿತು
೨೯	೪	ಲುಕ್ರಮಿಸಿದರು	ಲುಪಕ್ರಮಿಸಿದರು
೩೨	೧೧	ಮೋಸ	ಮೋಹ
,,	೧೪	ವಿಲವಿಲ್ಲದವನಾಗಿ	ವಿಲ್ಲದವನಾಗಿ
೩೯	೧೯	ಮಖೇನ	ಮುಖೇನ
೪೪	೨೨	ಹಸ್ತಾಮಲಕ್ಕ	ಹಸ್ತಾಮಲಕ
೪೫	೧೭	ಆ ರಡರ	ಆ ಎರಡರ
೪೭	೭	ಕಾಳಹಸ್ತಿಶ್ವರ	ಕಾಳಹಸ್ತೀಶ್ವರ
೫೦	೨೫	ಆದ್ದರಿಂಡ	ಆದ್ದರಿಂದ
೫೫	೨೧	ಯಜ್ಞಾಭದಿಕರ್ಮ	ಯಜ್ಞಾದಿಕರ್ಮ
,,	೨೨	ಭಿನ್ನರನಪವಾದ	ಭಿನ್ನರೂಪವಾದ
,,	,,	ವೃದಿ;	ವೃದ್ಧಿ
,,	೨೩	ಉಂಟಾಗುತ್ತದ್ಧೆ	ಉಂಟಾಗುತ್ತದೆ
೫೭	೮	ಬಂಧವು	ಬಂಧುವು
೬೪	೧೨	ಮತಾನುಸಿದ್ಧಾಂತ ಜ್ಞಾನಯಾಯಿಗಳಾದ	ಮತಾನುಯಾಯಿಗಳಾದ
೬೫	೧೫	ವನ್ಯುಪಾಂತಮಾವ	ವನ್ಯುಪಾಂತಮಾಪ
೬೮	೧೧	ಪ್ರಸಿದ್ಧರು	ಸಿದ್ಧರು.

N.B.—ಅರ್ಥ ವ್ಯತ್ಯಾಸವಾಗುವ ಕೆಲವು ತಪ್ಪುಗಳನ್ನು ತಿದ್ದಿದೆ. ಉಳಿದು ವನ್ನು ವಾಚಕರು ತಿದ್ದಿಕೊಂಡು ಓದಬೇಕಾಗಿ ಪ್ರಾರ್ಥನೆ.

ಪ್ರಸ್ತಾವನೆ.

ಮಹನೀಯರೇ,

ಮಹಾಪುರುಷರ ಚರಿತ್ರೆಯನ್ನು ಬರೆಯಬೇಕಾದರೆ ಮಹಾಪಂಡಿತರಿಂದ ಲ್ಲದೇ ಸಾಮಾನ್ಯರಿಂದಾಗಲಾರದೆಂಬ ವಿಷಯವು ಸರ್ವರಿಗೂ ತಿಳಿದೇಯಿರುವುದು; "ಲೋಕೋಭಿನ್ನರುಚಿಃ" ಎಂಬ ನಾಣ್ನುಡಿಯಂತೆ, ಸರ್ವಜನರಿಗೂ ಸಮಾಧಾನವಾಗಿರುವಂತೆ ಗ್ರಂಥವನ್ನು ರಚಿಸುವುದು ಬಹಳ ಕಷ್ಟವಾದ ಕೆಲಸವಾಗಿರುವುದು.

ಹೀಗಿರುವಲ್ಲಿ ಮಹಾಪುರುಷರಾದ ಶ್ರೀ ಶಂಕರಾಚಾರ್ಯರ ಚರಿತ್ರೆಯನ್ನು ಬರೆಯುವುದು ಸಾಮಾನ್ಯವಾದುದಲ್ಲ. ಅದರಲ್ಲಿಯೂ "ಶಂಕರಕಥಾಸಾರ" ವೆಂಬ ಈ ಗ್ರಂಥರಚನೆಯು ಅತ್ಯಧಿಕವಾದ ಪ್ರಯತ್ನದಿಂದ ರಸಭರಿತವಾಗಿ ಮೂಡಲ್ಪಟ್ಟಿದೆ. ಈ ಗ್ರಂಥಕರ್ತರಾದ ಮ|| ರಾ|| ಡಿ. ಎಸ್. ಶಂಕರನಾರಾಯಣಶಾಸ್ತ್ರಿಯವರು ಇನ್ನೂ ಚಿಕ್ಕವಯಸ್ಸಿನವರು. ಇದೇ ಇವರ ಮೊದಲನೆಯ ಗ್ರಂಥರಚನೆಯು. ಈ ಬಾಲ್ಯದಲ್ಲಿಯೇ ಗ್ರಂಥರಚನೆಯಲ್ಲಿ ಇವರಿಗೆ ಉತ್ಸಾಹಹುಟ್ಟಿ, ತಮ್ಮ ಆಶಾಪೂರ್ಣತೆಯನ್ನು ಮಾಡಿಕೊಳ್ಳಲು, ಸಾಮಾನ್ಯವಾದ ಕಟ್ಟುಕಥೆಗಳನ್ನು ಬರೆಯಲುಪಕ್ರಮಿಸದೇ ಶ್ರೀ ಆಚಾರ್ಯರಿನ ಚರಿತ್ರೆಯ ಸಾರವನ್ನು ಸಂಗ್ರಹಿಸಿ ಬರೆಯಲುಪಕ್ರಮಿಸಿ ಮುಗಿಸಿದುದು ಆಚಾರ್ಯರ ಮಹಿಮೆಯಿಂದಲ್ಲದೇ ಬೇರೆಯಲ್ಲ.

ಈ ಗ್ರಂಥಕರ್ತರು ಪುಸ್ತಕವನ್ನು ಪ್ರಚಾರಕ್ಕೆ ತರಲು "ಶ್ರೇಯಾಂಸಿಬಹು ವಿಘ್ನಾನಿ" ಎಂಬಂತೆ ನಾನಾ ಕಷ್ಟಗಳನ್ನು ಅನುಭವಿಸಿದ್ದರಿಂದ ಇಂತಹ ಸತ್ಕಾರ್ಯದಲ್ಲಿ ಹತಾಶರಾಗಿ ಧೈರ್ಯಗುಂದಿದವರಾಗಿದ್ದರು. ಆಗಾಗ್ಯೆ ಇವರಿಗೆ ಉತ್ಸಾಹ ಕೊಟ್ಟಿದುದರಿಂದ ಈ ಪುಸ್ತಕವು ಪ್ರಚಾರಕ್ಕೆ ಬರಲು ಅನುಕೂಲವಾಯಿತು.

ಮಹನೀಯರು ತಮ್ಮ ಉದಾರವಾದ ಮನಸ್ಸಿನಿಂದ ಈ ಗ್ರಂಥಕರ್ತರಿಗೆ ಪ್ರೋತ್ಸಾಹಕೊಟ್ಟು ಇವರ ಗ್ರಂಥರಚನೆಯಲ್ಲಿನ ಉತ್ಸಾಹವನ್ನು ಅಭಿವೃದ್ಧಿಗೊಳಿಸುವರೆಂದು ಕೋರುತ್ತೇವೆ.

ಇತಿ

ಮೈಸೂರು
15-3-1916

ಬಿ. ವಿ. ನರಸಿಂಹಯ್ಯಂಗಾರ್ಯ.

ಉಪೋದ್ಘಾತ.

ಬ್ರಹ್ಮಸತ್ಯಂ ಜಗನ್ಮಿಥ್ಯಾ ಜೀವೋ ಬ್ರಹ್ಮೈವ ನಾಪರಃ |
ಅನೇನವೇದ್ಯಂ ಸಚ್ಶಾಸ್ತ್ರಂ ಇತಿ ವೇದಾಂತ ಡಿಂಡಿಮಃ ||

ಆರ್ಯಮಹನೀಯರೇ !

ಪರಮಾತ್ಮನು ಸಕಲಪ್ರಪಂಚವನ್ನೂ ಸೃಷ್ಟಿಸಿದನಂತರದಲ್ಲಿ, ವೇದಗಳನ್ನೂ, ವೇದಗಳ ತತ್ತ್ವವನ್ನು ಬೋಧಿಸುವ ಆದ್ಯೈತವನ್ನೂ ಮಹರ್ಷಿಗಳಿಗೆ ಬೋಧಿಸಿದನು. ಚತುರ್ವೇದವೆಂಬ ವೃಕ್ಷವು ಆದ್ವೈತವೆಂಬ ಮುಖ್ಯ ಶಾಖೆಯಿಂದಲೂ, ಷಡಂಗಗಳಿಂಬ ಉಪಶಾಖೆಗಳಿಂದಲೂ, ಮೋಕ್ಷವೆಂಬ ಫಲದಿಂದಲೂ ಕೂಡಿ ಮಹರ್ಷಿಗಳಿಂದ ರಕ್ಷಿಸಲ್ಪಡುತ್ತಿತ್ತು. ಹೀಗೆಯೇ ಬಹಳಕಾಲ ನಡೆಯಿತು. ಅನಂತರ, ಅಂದರೆ ಈಗ್ಗೆ ಸುಮಾರು ೧೨೦೦ ವರುಷಗಳ ಹಿಂದೆ (ಶಂಕರದೇಶಿಕರು ಇದ್ದ ಕಾಲವನ್ನು ಸರಿಯಾಗಿ ನಿಶ್ಚಯಿಸಲಾಗುವುದಿಲ್ಲ. ಒಬ್ಬೊಬ್ಬರ ಮತವು ಒಂದೊಂದು ವಿಧವಾಗಿರುತ್ತದೆ. ಅದರಲ್ಲಿ ಕೆಲವನ್ನು ವಾಚಕರ ಅವಗಾಹನೆಗಾಗಿ ವಿವರಿಸಿದೆ :—

ಶಂಕರದೇಶಿಕರ ಕಾಲವಿಚಾರ.

(1) "ಪ್ರೊಫೇಸರ್, ವಿಷ್ಣುಮಯಾದೇವಜಾತಕ" ರೆಂಬುವರು, ಶ್ರೀಮಚ್ಛಂಕರ ಭಗವತ್ಪಾದರು ಕ್ರಿ. ಶ. 788 ರಲ್ಲಿ ಅವತಾರಮಾಡಿ ಕ್ರಿ. ಶ. 820 ರಲ್ಲಿ ವೃಷಭಾರೂಢರಾಗಿ ಕೈಲಾಸಗತರಾದರೆಂದು [ಕ್ರಿ. ಶ. 1882 ನೇ ಜುಲೈ 6 ರಲ್ಲಿ ಪ್ರಸಿದ್ಧವಾಗಿರುವ (ಇಂಡಿಯನ್ ಆಂಟಿಕ್ವೇರಿ-Indian Antiquary) ದಕ್ಷಿಣಹಿಂದೂ ಸ್ಥಾನೇತಿಹಾಸದ 11 ನೇ ಗ್ರಂಥದಲ್ಲಿ] ಹೇಳುತ್ತಾರೆ.

(2) "ತಾರಾನಾಥತರ್ಕವಾಚಸ್ಪತಿಮಿಶ್ರ, ಬಿ. ಎ." ಎಂಬುವರು ತಾವು ಮಾಡಿರುವ ಬುದ್ಧನ ಚರಿತ್ರೆಯಲ್ಲಿ, ಕ್ರಿ. ಶ. 700 ಮತ್ತು 750 ರಲ್ಲಿ ಉತ್ಪನ್ನನಾದ ಕುಮಾರಿಲಭಟ್ಟನಿಗಿಂತ ಮುಂಚೆಯೇ ಶಂಕರಾಚಾರ್ಯರಿದ್ದರೆಂದು ತಿಳಿಸುತ್ತಾರೆ.

(3) "ಡಾಕ್ಟರ್, ಬರ್ನಲ್" ಎಂಬುವರು, ಕ್ರಿ. ಶ. 650 ಮತ್ತು 700 ವರುಷಗಳ ಮಧ್ಯದಲ್ಲಿ ಶಂಕರದೇಶಿಕರಿದ್ದರೆಂದು ತಿಳಿಸುತ್ತಾರೆ.

(4) "ಡಾಕ್ಟರ್, ಟೇಲರ್" ಎಂಬುವರು ಶಂಕರರು 900 ವರುಷಗಳಿಗಿಂತಲೂ ಹಿಂದೆ ಇದ್ದರೆಂದು ತಿಳಿಸುತ್ತಾರೆ.

(5) "ಪಂಡಿತ್, ಕೊಲಬ್ರೂಕ್" ಎಂಬುವರು ಶಂಕರಭಗವತ್ಪಾದರು 1000 ವರುಷಗಳಿಗಿಂತ ಹಿಂದೆ ಇದ್ದರೆಂದು ತಿಳಿಸುತ್ತಾರೆ.

" ಜೆ. ಸಿ. ಆರ್ಲ್, ಎಮ್, ಎ," ಎಂಬುವರು " ಇ. ಡಬ್ಲೂ, ಥಾಂಸ್, ಎಮ್, ಎ,". ಎಂಬುವರು ಹೇಳುವಂತೆ ಶಂಕರಾಚಾರ್ಯರು 8 ನೇ ಶತಮಾನದಲ್ಲಿದ್ದರೆಂದು ತಿಳಿಸುವರು.

(6) " ಪಂಡಿತ್, ರಾಮಮೋಹನರಾಯ" ಎಂಬುವರು ಶಂಕರಾಚಾರ್ಯರಿಂದ ಪರಂಪರೆಯಾಗಿ ಬಂದಿರುವ ಆಚಾರ್ಯರ ಚರಿತ್ರೆಯನ್ನು ಲೆಕ್ಕಮಾಡುವಲ್ಲಿ ಶಂಕರಭಗವತ್ಪಾದರು ಕ್ರಿ. ಶ. 700 ಮತ್ತು 800 ರಲ್ಲಿ ಇದ್ದರೆಂದು ತಿಳಿಸುತ್ತಾರೆ.

(7) " ಪಂಡಿತ್, ವಿಲ್ಸ್" ಎಂಬುವರು ಈ ಮೇಲಿನ ಮೂವರ ಮತವನ್ನೂ ತಿಳಿಸಿ " ಶಂಕರದೇಶಿಕರು 8 ನೇ ಶತಮಾನದ ಅಂತ್ಯದಲ್ಲಿ ಇದ್ದರೆಂದು ತಿಳಿಸುತ್ತಾರೆ. ಇದರಿಂದ ಶಂಕರರು 1200 ವರುಷಗಳ ಹಿಂದೆ ಇದ್ದರೆಂದು ತಿಳಿಯುತ್ತದೆ"

(8) ಜಿನವಿಜಯದಲ್ಲಿ ಶಂಕರಾಚಾರ್ಯರು 2000 ವರುಷಗಳ ಹಿಂದೆ ಇದ್ದರೆಂದು ಇದೆ.

(9) ' ಕಲ್ಯಾದಿನೇಮಹಾದೇವಿ ಸಹಸ್ರದ್ವಿತಯೋತ್ಪರಮ್ ' ಎಂಬ ಶಿವರಹಸ್ಯದ ವಚನದಂತೆ ಶಂಕರಾಚಾರ್ಯರು 2000 ವರುಷಗಳ ಹಿಂದೆ ಇದ್ದರೆಂದು ತಿಳಿಯಬರುತ್ತದೆ.

(10) " ಧರ್ಮೋದ್ಧಾವಿಂಶತಿತಕೆ ಸಪ್ತಶದ್ವಿ ಸಹಸ್ರಕೇ" ಎಂದು ಸದಾನಂದ ಪಂಡಿತರು ಹೇಳುತ್ತಾರೆ. ಇದರಿಂದ ಆಚಾರ್ಯರು ಸುಮಾರು 2000 ವರುಷಗಳ ಹಿಂದೆ ಇದ್ದರೆಂದು ತಿಳಿಯಬರುತ್ತದೆ.)

ಕಲಿಮುಖದಿಂದಲೂ, ದುರ್ಮತಸಂಜಾತರೂ, ಕ್ರೂರಕರ್ಮಿಗಳೂ ಆದ ಕ್ರಕಚರು, ಕಾಪಾಲಿಕರು, ಶಾಕ್ತರು, ಶೈವರು, ವೈಷ್ಣವರು ಇತ್ಯಾದಿ ಜನರ ಪ್ರಾಬಲ್ಯದಿಂದ ಪರಬ್ರಹ್ಮನಿಂದ ಸೃಷ್ಟಿಸಲ್ಪಟ್ಟ ಆ ಜಗನ್ಮೋದವೆಂಬ ವೃಕ್ಷವು ನಾಶವಾಗುವ ಸಮಯಬಂದಿತು.

ಯಜ್ಞಯಾಗಾದಿಗಳನ್ನು ಮಾಡತಕ್ಕವರಿಲ್ಲದೆ ದೇವತೆಗಳೆಲ್ಲಾ ನಿರಶನವ್ರತವನ್ನು ಕೈಗೊಳ್ಳಬೇಕಾಯಿತು. ಆಗ ದೇವತೆಗಳು ಬ್ರಹ್ಮ ಸಹಿತರಾಗಿ ಪರಮೇಶ್ವರನಲ್ಲಿಗೆ ಹೋಗಿ ಭೂಲೋಕದ ಅನಾಚಾರವನ್ನೆಲ್ಲಾ ತಿಳಿಸಿದರು.

ಆಚಾರ್ಯರ ಅವತಾರಕಾರಣ.

ಆಗ ಕರುಣಾಳುವೂ ಭಕ್ತಜನರಕ್ಷಕನೂ ಆದ ಮಹೇಶ್ವರನು—

(1) " ಕಲೌರುದ್ರೋ ಮಹಾದೇವೋ ಲೋಕಾನಾಮಿಶ್ವರಃಪ್ರಭುಃ |
ತದೈವ ಸಾಧಯೇನ್ನೃಣಾಂ ದೇವತಾನಾಂಚ ದೈವತಮ್ ||೧||

ಕರಿಷ್ಯತ್ಯವತಾರಾಣಿ ಶಂಕರೋ ನೀಲಲೋಹಿತಃ |
ಶ್ರೌತಸ್ಮಾರ್ತ ಪ್ರತಿಷ್ಠಾರ್ಥಂ ಭಕ್ತಾನಾಂ ಹಿತಕಾಮ್ಯಯಾ ||೨||
ಉಪದೇಕ್ಷ್ಯತಿತದ್ಜ್ಞಾನಂ ಶಿಷ್ಯಾಣಾಂ ಬ್ರಹ್ಮಸಂಜ್ಞಿತಮ್ |
ಸರ್ವವೇದಾನ್ತ ಸಾರಂ ಹಿ ಧರ್ಮಾನ್ ವೇದನಿದರ್ಶನಾನ್ ||೩||
ಯೇ ತಂ ಪ್ರೀತ್ಯಾನಿಷೇವನ್ತೆಯೇನಕೇನೋಪಚಾರತಃ |
ವಿಜಿತ್ಯ ಕಲಿಜಾನ್ ದೋಷಾನ್ ಯಾನ್ತಿತೆ ಪರಮಂಪದಮ್ ||೪||
ಅನಾಯಾಸೇನಸುಮಹತ್ಪುಣ್ಯಂತೇ ಯಾನ್ತಿ ಮಾನವಾಃ |
ಅನೇಕದೋಷ ದುಷ್ಟಸ್ಯ ಕಲೇರೇಷಮಹಾನ್ ಗುಣಃ '' ||೫||

ಎಂದು ಕೂರ್ಮಪುರಾಣದ 30 ನೇ ಅಧ್ಯಾಯದಲ್ಲಿದೆ.

(2) '' ವ್ಯಾಕುರ್ವನ್ ವ್ಯಾಸಸೂತ್ರಾರ್ಥಂ ಶ್ರುತೇರರ್ಥಂ ಯಥೋಚಿವಾನ್ |
ಶ್ರುತೇರ್ನಾಮ್ಯಯಸ್ಸ ಏವಾರ್ಥಃ ಶಂಕರಃಸವಿತಾನಸಃ '' ||೧||

ಎಂದು ಶಿವಪುರಾಣ 7 ನೇ ಖಂಡ, 1 ನೇ ಅಧ್ಯಾಯದಲ್ಲಿದೆ ;

(3) ಶೃಣುದೇವಿ ಭವಿಷ್ಯನ್ತ್ಸದ್ಭಕ್ತಾನಾಂಚರಿತಂ ಕಲೌ | ವದಾಮಿಸಂ ಗ್ರಹೇ ನೈವ. . . . . || ಮದಂಶಜಾತಂ ದೇವೇಶಿ ಕಲಾವತಿತಪೋಧನಮ್ | ತಸ್ಯೇ ವಾಚರಿತಂತೇ s ದ್ಯವಕ್ಷ್ಯಾಮಿ ಶೃಣುಶೈಲಜೆ || ಕಲ್ಯಾದಿಮೆಮಹಾದೇವಿ ಸಹಸ್ರ ದ್ವಿತಯಾತ್ಪರಮ್ | . . . . . || ಕೇರಳೇಶಶಲಗ್ರಾಮೆ ವಿಪ್ರ ಪತ್ನ್ಯಾಂ ಮದಂಶತಃ | ಭವಿಷ್ಯತಿ ಮಹಾದೇವಿ ಶಂಕರಾಖ್ಯೋ ದ್ವಿಜೋತ್ತಮಃ || ಎಂದು ಶಿವರಹಸ್ಯದ ನವಮಾಂಶದ 16 ನೇ ಅಧ್ಯಾಯದಲ್ಲಿದೆ.

(4) ಯದಾಯದಾಹಿಧರ್ಮಸ್ಯ ಗ್ಲಾನಿರ್ಭವತಿ ಭಾರತ | ಅಭ್ಯುತ್ಥಾನ ಮಧರ್ಮಸ್ಯ ತದಾತ್ಮಾನಂ ಸೃಜಾಮ್ಯಹಮ್' || ಇತ್ಯಾದ್ಯನೇಕ ಭಗವದ್ವಾಕ್ಯ ಪ್ರಾಮಾಣ್ಯಗಳಂತೆ ಕೇರಳದೇಶದ ಕಾಲಟ್ಯಗ್ರಹಾರದಲ್ಲಿರುವ, ಶಿವಗುರು ಆರ್ಯಾಂಬಿಕೆಯರಿಗೆ ಪುತ್ರನಾಗಿ ಅವತರಿಸಿ ಧರ್ಮಸಂಸ್ಥಾಪನೆಯಂ ಮಾಡುವೆನೆಂದು ಹೇಳಿ ದೇವತೆಗಳನ್ನು ಬೀಳ್ಕೊಟ್ಟನು.

ಈಶ್ವರನು ಆದೇರೀತಿಯಲ್ಲಿ ಅವತರಿಸಿ, ಬ್ರಹ್ಮಚಾರಿಯಾಗಿರುವಾಗಲೇ ಸನ್ಯಸ್ತನಾಗಿ ಶಂಕರನಾಮಧೇಯವಂ ಧರಿಸಿ, ವ್ಯಾಸರಿಂದ ರಚಿತವಾದ ಬ್ರಹ್ಮಸೂತ್ರಗಳಿಗೂ, ಗೀತಾ, ನೃಸಿಂಹತಾಪಿನೀ, ವಿಷ್ಣುಸಹಸ್ರನಾಮ, ಗಾಯತ್ರೀ ಇವುಗಳಿಗೂ, ಸನತ್ಸುಜಾತೀಯ, ಶ್ವೇತಾಶ್ವತರ, ಮಂಡಲಬ್ರಾಹ್ಮಣ, ದಶೋಪನಿಷತ್ತುಗಳು, ಇವೇ ಮೊದಲಾದ ಉಪನಿಷತ್ತುಗಳಿಗೂ, ಭಾಷ್ಯವಂ ರಚಿಸಿ, ದೇವಾಂಶಸಂಭೂತರಾದ, ಶಿಷ್ಯರಿಗೆ ಉಪದೇಶಿಸಿ, ವಾದಿಗಳನ್ನು ಗೆದ್ದು, ದುರ್ಮತಗಳಂ ಖಂಡಿಸಿ, ಬ್ರಹ್ಮಸರಸ್ವತ್ಯವತಾರ

ರಾದ ಮಂಡನಮಿಶ್ರೋಭಯಭಾರತಿಗಳನ್ನು ಶಾಪದಿಂದ ವಿಮೋಚನಮಾಡಿ, ಮಂಡನ ಮಿಶ್ರರನ್ನು ಶಿಷ್ಯತ್ವೇನಪರಿಗ್ರಹಿಸಿ, ಸರಸ್ವತಿಯನ್ನು ಗುರುಪೀಠದಲ್ಲಿ ಪ್ರತಿಷ್ಠಿಸಿ, ಷಣ್ಮತಗಳಂ ಸ್ಥಾಪನೆಮಾಡಿ, ಷಣ್ಮತಸ್ಥಾಪನಾಚಾರ್ಯರೆನಿಸಿಕೊಂಡು, ಸರ್ವಜ್ಞಪೀಠಾರೋಹಣವಂ ಮಾಡಿ, ಸರ್ವಜ್ಞರೆನಿಸಿಕೊಂಡು, ಗುರುಪೀಠಗಳಂ ನಿರ್ಮಾಣಮಾಡಿ, ಬ್ರಹ್ಮೇಂದ್ರೋಪೇಂದ್ರಾದಿಗಳಿಂದ ಪ್ರಾರ್ಥಿಸಲ್ಪಟ್ಟು ಸಶರೀರನಾಗಿ ಕೈಲಾಸಕ್ಕೆ ತೆರಳಿದನು.

" ದೈವಾಧೀನಂಜಗತ್ಸರ್ವಂಮನ್ತ್ರಾಧೀನಂತು ದೈವತಮ್ | ತನ್ಮನ್ತ್ರಂಬ್ರಾಹ್ಮಣಾಧೀನಂ ಬ್ರಾಹ್ಮಣೋಮಮೆದೇವತಾ " || ಎಂಬ ಭಗವದ್ವಾಕ್ಯಪ್ರಾಮಾಣ್ಯದಂತೆ ಬ್ರಾಹ್ಮಣರನ್ನು ದ್ಧರಿಸಿದ ಆ ಮಹನೀಯರ ಚರಿತ್ರೆಯು ಯಾರಿಂದತಾನೇ ಶ್ಲಾಘಿಸಲ್ಪಡುವುದಿಲ್ಲ ?

ಈ ಮಹನೀಯರ ಚರಿತ್ರೆಯು ಮಾತೃಭಾಷೆಯಾದ ಸಂಸ್ಕೃತದಲ್ಲಿ ಪದ್ಮಪಾದ, ಚಿದ್ವಿಲಾಸ, ವ್ಯಾಸಾಚಲ, ಆನಂದಗಿರಿ, ಮಾಧವಾಚಾರ್ಯರೇ ಮೊದಲಾದ ಅನೇಕ ಮಹನೀಯರಿಂದ ವಿಶದವಾಗಿಯೂ, ರಸಭರಿತವಾಗಿಯೂ ರಚಿಸಲ್ಪಟ್ಟಿದೆ. ಆದರೆ ಅವೆಲ್ಲಾ ಸಂಸ್ಕೃತಭಾಷಾಭ್ಯಾಸವಿಲ್ಲದವರಿಗೆ ತಿಳಿಯವು. ದೇಶಭಾಷೆಯಾದ ಕನ್ನಡದಲ್ಲಿ ಕೆಲವಿದ್ದರೂ, ಅವುಗಳಲ್ಲಿ ಕೆಲವು ಎಲ್ಲಿ ವಿಸ್ತರಿಸಲ್ಪಟ್ಟಿರಬೇಕೋ ಅಲ್ಲಿ ವಿಸ್ತೃತವಾಗದೆಯೂ, ಎಲ್ಲಿ ಸಂಕ್ಷೇಪವಾಗಿರಬೇಕೋ ಅಲ್ಲಿ ಸಂಕ್ಷಿಪ್ತವಾಗದೆಯೂ, ಮತ್ತೆ ಕೆಲವು ವಿಷಯಗನೇನಕಗಳಿಂದ ದೂರವಾಗಿಯೂ, ಇವೆ. ಇದನ್ನು ನೋಡಿ ನಾನು ಈ ಕುಂದಕಗಳನ್ನೆಲ್ಲಾ ಪರಿಹರಿಸಿ ಆರ್ಯಮಹನೀಯರಿಗೆ ಆಚಾರ್ಯರ ಚರಿತ್ರೆಯು ವಿಶದವಾಗಿ ತಿಳಿಯಲೆಂದು, ಅನೇಕ ಸಂಸ್ಕೃತ, ಕನ್ನಡ, ತೆಲುಗು, ಇಂಗ್ಲಿಷ್ ಪುಸ್ತಕಗಳ ಸಹಾಯದಿಂದ " ಶಂಕರಕಥಾಸಾರ " ವೆಂಬ ಈ ಗ್ರಂಥವನ್ನು ರಚಿಸಿರುವೆನು.

ಈ ಗ್ರಂಥರಚನೆಗೆ ಆಧಾರಗ್ರಂಥಗಳು:—

(1) ಮಾಧವೀಯ ಶಂಕರದಿಗ್ವಿಜಯ
(2) ಶಂಕರವಿಜಯವಿಲಾಸ (ಚಿದ್ವಿಲಾಸಶಂಕರವಿಜಯ)
(3) ಮಣಿಮಂಜರಿಭೇದಿನೀ
} ಸಂಸ್ಕೃತಪದ್ಯ

(4) ಶ್ರೀಮದಾಚಾರ್ಯಚರಿತ
(5) ಶ್ರೀ ಶಂಕರಾಚಾರ್ಯಚರಿತ್ರಮ್
} ಸಂಸ್ಕೃತಗದ್ಯ

(6) ಶ್ರೀ ಶಂಕರಾಕಥಾಮೃತ
(7) ಶ್ರೀ ಶಂಕರಭಗವತ್ಪಾದಾಚಾರ್ಯಚರಿತ್ರೆ
} ಕನ್ನಡಗದ್ಯ

(8) ಶ್ರೀ ಶಾಂಕರಮಠ ತತ್ವಪ್ರಕಾಶಿಕಾರ್ಥಸಂಗ್ರಹಮು—ತೆನುಗು

(9) ಹೀಸ್, ಲೈಫ್, ಅಂಡ್ ಟೈಮ್ಸ್—ಹೀಸ್ ಫಿಲಾಸಫೀ—ಇಂಗ್ಲೀಷು.
(His Life and Times—His Philosophy.)

ಈ ಗ್ರಂಥದಲ್ಲಿದ್ದ ಅನೇಕ ದೋಷಗಳನ್ನು ತಿದ್ದಿಕೊಟ್ಟು, ಮುದ್ರಣಕ್ಕೆ ಅನುಕೂಲವಾಗುವಂತೆ ಮಾಡಿದ ಮೈಸೂರು, ಧಾರ್ವಾಡ, ಚಿದಂಬರಂ, ಹಿಂದೂಪುರಂ, ಮೊದಲಾದ ಸ್ಥಳೀಯರಾದ ಅನೇಕ ವಿದ್ವಾಂಸರುಗಳಿಗೂ, ತಮ್ಮ ಅಮೋಘವಾದ ಮಾಸಪತ್ರಿಕೆಯಲ್ಲಿ ಪ್ರಕಟಿಸಿದ, ವೇ|| ಸಿ. ವೆಂಕಟರಮಣಶಾಸ್ತ್ರಿಗಳಿಗೂ ಮತ್ತು ಬಹಳ ಆಂದವಾಗಿಯೂ ಜಾಗ್ರತೆಯಾಗಿಯೂ, ಮುದ್ರಣಮಾಡಿಸಿಕೊಟ್ಟ ರಾಯಲ್‌ಪ್ರೆಸ್ ಪ್ರೊಪ್ರೈಟರಾದ ಮ|| ರಾ|| ಬಿ. ವಿ. ನರಸಿಹ್ಮೈಂಗಾರ್ಯರಿಗೂ ನಾನು ಅಹರ್ನಿಶಿಯಲ್ಲಿಯೂ ಕೃತಜ್ಞನಾಗಿರುವೆನು.

ವೃ|| ‘‘ದೋಷವಕಂಡುತಿರ್ದಿ, ಗುಣದೊಳ್ಪೆರೆಸಾನರೆ ? ಮೋದಮುತ್ತಮರ್; |
ದೋಷವಕಂಡದಂಬಿಡುತ್ತೆ, ತೋಷಿಪರೈ ! ಗುಣದಿಂದೆ, ಮಧ್ಯಮರ್, ||
ದೋಷಮದಲ್ಪಮಿರ್ದೊಡೆಯುಮೆಲ್ಲವದೂಷಿಪರೆಂದುಮಲ್ಪರಾ; |
ದೋಷಮೆಶೂನ್ಯಮಾದೊಡೆಯುಮೇಡಿಪರೈ ! ಕುಕವೀಂದ್ರಶೇಖರರ್ ||’’

ಎಂಬ ನೀತಿವಚನದಂತೆ ಗುಣಗ್ರಹಣತತ್ಪರರಾದ ಮಹನೀಯರು ಇದರಲ್ಲಿ ಪ್ರಮಾದದಿಂದ ಬಿದ್ದಿರುವ ದೋಷವನ್ನು ತಿಳಿಸಿದರೆ ಅದನ್ನು ಮುಂದಣ ಮುದ್ರಣದಲ್ಲಿ ಸರಿಪಡಿಸಿಕೊಳ್ಳುವೆನು.

ಇತಿಶಂಕರಕಿಂಕರ,

ರಾಕ್ಷಸ, ಸಂ|| ಫಾ|| ಶು|| ೯ ಸೋಮವಾರ13-3-1916

ಡಿ. ಎಸ್. ಶಂಕರನಾರಾಯಣಶಾಸ್ತ್ರಿ,
ದಿಡ್ಡಿಪುರ(ಚಾಮರಾಜನಗರದತಾಲ್ಲೂಕು.)

ಸರ್ವತನ್ತ್ರಸ್ವತನ್ತ್ರಾಯಸದಾತ್ಮಾದ್ವೈತವೇದಿನೇ |
ಶ್ರೀಮತೇಶಂಕರಾರ್ಯಾಯವೇದಾನ್ತಗುರವೇನಮಃ ||

ಶ್ರೀಃ.

ಜಯ ! ಶಂಕರ ಭಗವನ್ !!

ಶಂಕರಕಥಾಸಾರ.

ಪ್ರಥಮವಲ್ಲರೀ

ಪರಿಚಿನ್ತ್ಯ ಪರಾತ್ಮಾನಂ ಅದ್ವಿತೀಯಂ ಮುಹುರ್ಮುಹುಃ |
ಶಾಂಕರೇ ವಿಜಯೇ ಸಾರಃ ಸಂಗ್ರಹೇಣ ನಿರೂಪ್ಯತೆ || ೧ ||

ಅದ್ವೈತವಿದ್ಯಾಬ್ಧಿವಿಲೋಡನೇನ |
ವಿದ್ಯೋತಮಾನಂ ಮಕರಂದಮೀಡ್ಯಮ್ ||
ಪ್ರದಾಯ ಯೋಸ್ಮಾನ್ ಕೃಪಯಾ ರರಕ್ಷ |
ಸ ದೇಶಿಕಃ ಶಂಕರ ಏವ ಚಿನ್ತ್ಯಃ || ೨ ||

ಧರ್ಮಾರ್ಥಕಾಮಮೋಕ್ಷಗಳೆಂಬ ಚತುರ್ವಿಧ ಪುರುಷಾರ್ಥಗಳಲ್ಲಿ ಮೋಕ್ಷವೇ ಉತ್ತಮವಾದದ್ದೆಂದು ಸಕಲರಿಗೂ ತಿಳಿದೇಇದೆ. ಆ ಮೋಕ್ಷವು " ಸರ್ವಂ ಖಲ್ವಿದಂ ಬ್ರಹ್ಮ " " ಅಹಂ ಬ್ರಹ್ಮಾಸ್ಮಿ " ಎಂಬ ಅದ್ವೈತ ಜ್ಞಾನದಿಂದ ಬರುವುದೇ ಹೊರ್ತು ಬೇರೇ ಅಲ್ಲ. " ಜ್ಞಾನಾತ್ ಕೈವಲ್ಯಮಶ್ನುತೆ " ಎಂಬಂತೆ ಬ್ರಹ್ಮಜ್ಞಾನ ಸಂಪಾದನೆಯು ಅತ್ಯಾವಶ್ಯಕವು. ಆ ಬ್ರಹ್ಮಜ್ಞಾನವು ಅದ್ವೈತ ಜ್ಞಾನವಲ್ಲದೇ ಬೇರೇ ಅಲ್ಲ. ಅದ್ವೈತಜ್ಞಾನವು ಕೇವಲ ಮುಕ್ತಿಹೇತುವೆಂದು ಅನೇಕ ಶ್ರುತಿ, ಸ್ಮೃತಿಗಳು ಬೋಧಿಸುತ್ತವೆ. ಅಂತಹ ಅದ್ವೈತವಿದ್ಯೆಯು ದುರ್ಮತಸಂಜಾತರಾದ ಬೌದ್ಧರೇ ಮೊದಲಾದವರ ಪ್ರಾಬಲ್ಯದಿಂದ ಕ್ಷೀಣತೆಯನ್ನು ಹೊಂದುತ್ತಿತ್ತು. ಆಗ ದೇವತೆಗಳು ಬ್ರಹ್ಮನಲ್ಲಿಗೆ ಹೋಗಿ, ಭೂಲೋಕದ ಅನಾಚಾರಗಳನ್ನೆಲ್ಲಾ ತಿಳಿಸಿದರು. ಬ್ರಹ್ಮನೂ ಆವರ ಸಂಗಡಲೇ ಲೋಕಶಂಕರನಾದ ಶಂಕರನ ಸಮೀಪವನ್ನು ಕುರಿತು ತೆರಳಿದನು.

ಕೈಲಾಸಪರ್ವತದ ಶಿಖರದಲ್ಲಿ ಸರ್ವ ರಕ್ಷಕನಾದ ತ್ರ್ಯಕ್ಷನು ಪಾರ್ವತೀ ಮತ್ತು ಗಜಾನನನಿಂ ಸಹಿತನಾಗಿ, ಮಹರ್ಷಿಗಳಿಂದ ಪರಿಸಲ್ಪಡುತ್ತಿರುವ ವೇದಗಳಂ ಲಾಲಿಸುತ್ತಾ ಹಸನ್ಮುಖನಾಗಿ ಕುಳಿತಿದ್ದನು. ಆಗ ದೇವತೆಗಳು ತಮಗೆಲ್ಲಾ ಹಿರಿಯನೂ, ರಕ್ಷಕನೂ ಮತ್ತು ಕರುಣಾಳುವೂ ಆದ ಪರಮೇಶ್ವರನಂ ಬಹಳವಾಗಿ ಸ್ತುತಿಸಲಾಮಹಾತ್ಮನು, ಬಂದ ಕಾರಣಮಂ ಪೇಳಿರೆನಲಾ ದೇವತೆಗಳು ಗಂಭೀರಭಾವದಿಂದ ‘‘ಸ್ವಾಮಿ! ಮಹಾವಿಷ್ಣುವು ಅಸುರರನ್ನು ವ್ಯಾಮೋಹಗೊಳಿಸುವುದಕ್ಕೆ ಬೌದ್ಧಾವತಾರಂ ಮಾಡಿದಾಗ, ಆತನಿಂದ ಹೇಳಲ್ಪಟ್ಟ ಶಾಸ್ತ್ರಯುಕ್ತಿಗಳ ಬಲದಿಂದ, ಬೌದ್ಧರು ಶ್ರೌತಸ್ಮಾರ್ತಸಿದ್ಧಾಂತಗಳಂ ತಿರಸ್ಕರಿಸುತ್ತಾ ವೇದಗಳಿಗೆ ಅಪ್ರಾಮಾಣ್ಯವನ್ನು ಸಾಧಿಸತೊಡಗಿದ್ದಾರೆ. ಯಜ್ಞಪಂಬದನ್ನು ಸಕಲರೂ ನಿಂದಿಸುತ್ತಾರೆ. ಶೈವಾಗಮ, ವೈಷ್ಣವಾಗಮಗಳು ಪ್ರಸಿದ್ಧವಾಗಿವೆ. ಉಚ್ಛಿಷ್ಟಭಕ್ಷಣ, ನರಬಲಿ, ಮದ್ಯಪಾನ ಇವುಗಳನ್ನು ಅನೇಕ ಸಜ್ಜನರೂ ಕೂಡ ಆಚರಿಸುತ್ತಿದಾರೆ. ಆದ್ದರಿಂದ ಎಲೈ ಮಹಾನುಭಾವನೇ! ನೀನು ಆ ದುಷ್ಟರಂ ನಿಗ್ರಹಿಸಿ ವೇದಮಾರ್ಗಪ್ರತಿಷ್ಠಾಪನೆಯುಂಗೈದು ನಮ್ಮನ್ನುದ್ಧರಿಸಬೇಕು’’ ಎಂದು ಬೇಡಿದರು.

ಅಪರ ಪ್ರಾರ್ಥನೆಯಂ ಕೇಳಿ ಆ ಲೋಕಶಂಕರನು ‘‘ಎಲೈ ದೇವತೆಗಳಿರಾ! ವೇದಬ್ರಾಹ್ಮಣಿಕೆಯನ್ನುದ್ಧರಿಸಲೋಸುಗವೂ ಮತ್ತು ಧರ್ಮ ಸಂಸ್ಥಾಪನೆಯನ್ನು ಮಾಡಲೋಸುಗವೂ ದ್ವೈತಧ್ವಾಂತಮಧ್ಯಾಹ್ನಭಾನುಗಳಂತಿರುವ ನಾಲ್ವರು ಶಿಷ್ಯರಿಂದೊಡಗೂಡಿ ಪರಮಹಂಸನಾಗಿ, ಶಂಕರನೆಂಬ ನಾಮಧೇಯದಿಂದ ಮನುಷ್ಯಾವತಾರಂ ಗೈಯುತ್ತೇನೆ. ನೀವೂ ಕೂಡ ಸುಪ್ತಪಾಯಾರ್ಧವಾಗಿ ಮನುಷ್ಯರೂಪದಿಂದ ಅವತರಿಸಿ ನನ್ನ ಆಗಮನವನ್ನು ನಿರೀಕ್ಷಿಸಿಕೊಂಡಿರಿ. ಆಗ ನಿಮ್ಮ ಹೃದಯಾಭಿಲಾಷೆಯು ಸಂಪೂರ್ಣವಾಗುತ್ತದೆ’’ ಎಂದುತ್ತರಿಸಿತ್ತನು.

ಅನಂತರ ಜಂದ್ರಶೇಖರನು ತನ್ನ ತನುಜನಾದ ಗುಹನಂ ಕುರಿತು—‘‘ಎಲೈ ಕ್ರೌಂಚವಾರಣನೇ! ಕಾಂಡತ್ರಯಾತ್ಮಕವಾದ ವೇದವು ಉದ್ಧರಿಸಲ್ಪಟ್ಟರೆ ಬ್ರಾಹ್ಮಣರು ಉದ್ಧರಿಸಲ್ಪಟ್ಟಂತಾಗುವರು. ನಿನ್ನಿಂದಲೇ ಅಪ್ಪಣೆಯಂ ಪಡೆದುಹೋಗಿರುವ ಶೇಷ ವಿಷ್ಣುಗಳು ಸಂಕರ್ಷಣಪತಂಜಲಿಗಳೆಂಬ ಮುನಿಗಳಾಗಿ ಉಪಾಸನಾ ಮತ್ತು ಯೋಗ ಕಾಂಡಗಳನ್ನು ಉದ್ಧಾರಮಾಡುತ್ತಲಿರುವರು. ಮೂರನೆಯದಾದ ಜ್ಞಾನಕಾಂಡವನ್ನು ನಾನೇ ಉದ್ಧಾರಮಾಡುವೆನು. ನೀನು ಜೈಮಿನಿಯ ಪೂರ್ವಮೀಮಾಂಸೆಂಬ ಕರ್ಮ ಕಾಂಡವನ್ನು ಊರ್ಜಿತಸ್ಥಿತಿಗೆ ತಂದು ಸುಬ್ರಹ್ಮಣ್ಯನೆಂಬ ಹೆಸರನ್ನು ಅನ್ವರ್ಥಗೊಳಿಸಬೇಕು. ಬ್ರಹ್ಮನೂ ನಿನಗೆ ಸೌಗತಾದಿಗಳ ನಾಶವಿಷಯದಲ್ಲಿ ಮಂಡನ ಮಿಶ್ರಾಭಿಖ್ಯಾ

ನದಿಂದ ಸಹಾಯಮಾಡುವನು. ಇಂದ್ರನೂ ಸುಧನ್ವನೆಂಬ ಅರಸನಾಗಿ ನಿನ್ನನ್ನು ನಿರೀಕ್ಷಿಸುತ್ತಾ ಸೌಗತರಂ ಗುಂಪುಕೂಡಿಸುತ್ತಲಿರುವನು'' ಎಂದುಸುರಿದನು. ಮಹೇಶ್ವರನ ಈ ಪ್ರಕಾರವಾದ ಆಜ್ಞೆಯಂ ಕುಮಾರಸ್ವಾಮಿಯು ಮಹಾಪ್ರಸಾದವೆಂದಂಗೀಕರಿಸಿದನು.

ಬಳಿಕ ಆ ವಿಶಾಖನು ''ಭಟ್ಟಪಾದಾಚಾರ್ಯ'' ರೆಂಬ ಹೆಸರಿನಿಂದ ಭೂಲೊಕದಲ್ಲಿ ಅವತಾರವಂ ಮಾಡಿದನು. ಆತನು, ವಾದಗಳಲ್ಲಿ ಯುಕ್ತಿಯುಕ್ತಮಾದ ಶಾಸ್ತ್ರನಿದರ್ಶಗಳಿಂದ ಶತ್ರುಗಳಂ ಗೆಲ್ಲುತ್ತ ದಿಗ್ವಿಜಯವಂ ಮಾಡಿಕೊಂಡು ಸುಧನ್ವರಾಯನ ರಾಜಧಾನಿಗೆ ಬಂದನು. ಬಹಳಕಾಲದಿಂದ ನಿರೀಕ್ಷಿಸಿಕೊಂಡಿದ್ದ ರಾಜನು ಅವರನ್ನು ಅರ್ಘ್ಯಪಾದ್ಯಾಚಮನಾದಿಗಳಿಂದ ಪೂಜಿಸಿ ಸಿಂಹಾಸನದಮೇಲೆ ಕುಳ್ಳಿರಿಸಿದನು.

ಆಗ ಭಟ್ಟಪಾದರು ಸಮೀಪದಲ್ಲಿದ್ದ ಒಂದು ಮರದಮೇಲೆ ಕುಳಿತು ಕೂಗುತ್ತಿದ್ದ ಒಂದು ಕೋಗಿಲೆಯನ್ನು ಕಂಡು ''ಮಲಿನೈಶ್ಚೇನ್ನಸಂಗಸ್ಯೆ ನೀಚೈಃ ಕಾಕ ಕುಲೈಃ ಪಿಕ| ಶ್ರುತಿದೂಷಕನಿಷ್ಕಾರ್ಯೈರ್ಯಶಾಶ್ಲಾಘನೀಯಸ್ತ್ವಂ ಭವೇಃ'' || ಎಲೈ ಕೋಗಿಲೆಯೇ! ಮಲಿನವಾಗಿಯೂ, ನೀಚವಾಗಿಯೂ, ಶ್ರುತಿದೂಷಕವಾಗಿಯೂ ಇರುವ ಈ ಕಾಗೆಗಳ ಸಂಬಂಧವಿಲ್ಲದಿದ್ದರೆ ನೀನು ಶ್ಲಾಘ್ಯನಾಗುವಿ. ಎಂದರ್ಥವುಳ್ಳ ಶ್ಲೋಕದಿಂದ ''ಶ್ರುತಿದೂಷಕರಾದ ಬೌದ್ಧರ ಸಂಬಂಧವಿಲ್ಲದಿದ್ದರೆ ನೀನು ಕೀರ್ತಿವಂತನಾಗುವಿ'' ಎಂದು ಹೇಳಿದರು.

ಅದನ್ನು ಕೇಳಿ ಬೌದ್ಧರೆಲ್ಲರೂ ಮತವಿಷಯಕವಾದ ವಾಗ್ವಾದಕ್ಕಾರಂಭಿಸಿದರು. ಭಟ್ಟಪಾದರು ಅದನ್ನೆಲ್ಲಾ ಯುಕ್ತಿಸಹಿತವಾದ ಪ್ರಮಾಣಗಳಿಂದ ಖಂಡಿಸಿ ರಾಜನಿಗೆ ವೇದತತ್ವವನ್ನು ಬೋಧಿಸಲಾರಂಭಿಸಿದರು. ಆಗ ರಾಜನು ''ಯಾರು ತಮ್ಮ ಮತವು ಸತ್ಯವೆನ್ನುತ್ತಾರೋ ಅವರು ಪರ್ವತದ ತುದಿಯಿಂದ ಧುಮುಕಿ ಜೀವಸಹಿತವಾಗಿ ಬದುಕಿ ಬಂದರೆ ಅವರ ಮತವೇ ಸತ್ಯವೆನ್ನುತ್ತೇನೆ'' ಎಂದನು.

ಬೌದ್ಧರು ಇದಕ್ಕೆ ಹೆದರಿದರು. ಆಗ ಭಟ್ಟಪಾದರು ಪರ್ವತದ ತುದಿಗೆ ಹತ್ತಿ ''ವೇದಗಳು ಪ್ರಮಾಣವಾಗಿದ್ದರೆ ನನಗೇನೂ ಆಗಬೇಡ'' ಎಂದು ಬಿದ್ದು, ಯಾವ ಉಪಪತಿಯೂ ಇಲ್ಲದೆ ರಾಜನಲ್ಲಿಗೆ ಬಂದರು.

ಆಗ ಬೌದ್ಧರು ''ಇವನು ಯಾವುದೋ ಮಣಿಮಂತ್ರೌಷಧದ ಸಹಾಯದಿಂದ ಬದುಕಿಬಂದಿದ್ದಾನೆ'' ಎನ್ನಲು, ರಾಜನು ಗುಟ್ಟಾಗಿ ಒಂದು ಕುಂಭದಲ್ಲಿ ಒಂದು ಕರುನಾಗರಪಾಪವನ್ನು ಹಾಕಿಸಿ ಭದ್ರವಾಗಿ ಬಾಯಿಕಟ್ಟಿದಮೇಲೆ ಸಭೆಗೆ

ತರಿಸಿ ‘‘ ಇದರಲ್ಲಿರುವುದನ್ನು ನೀವು ತಿಳಿಸಬೇಕು; ಯಾರಮಾತು ಸುಳ್ಳಾಗುವುದೋ ಅವರನ್ನು ಕಲ್ಲುಗಾಣಕ್ಕೆ ಹಾಕಿಸಿ ಅರೆಯಿಸುತ್ತೇನೆ. ’’ ಎಂದು ಹೇಳಿ ಸಭೆಯನ್ನು ಬೀಳ್ಕೊಟ್ಟನು.

ಉಭಯಪಕ್ಷದವರೂ ಸ್ವಸ್ವಗೃಹಾಭಿಮುಖರಾದರು. ಸೌಗತರು ಆ ರಾತ್ರಿಯೆಲ್ಲಾ ಒಂದು ಕೊಳದಲ್ಲಿ ಕಂಠಪರ್ಯಂತ ನೀರಿನಲ್ಲಿ ನಿಂತು ಸೂರ್ಯನಂ ಕುರಿತು ತಪವಂ ಗೈದು ನಿಶ್ಚಿತಾಂಶವನ್ನು ಸೂರ್ಯದೇವನಿಂದ ತಿಳಿದು ರಾಜನ ಸಭೆಗೆ ಪ್ರಾತಃಕಾಲ ಹೊತ್ತಿಗೆಮುಂಚೆ ಬಂದರು.

ಬ್ರಾಹ್ಮಣರು ಆ ರಾತ್ರಿಯೆಲ್ಲಾ ಸುಖನಾಗಿ ನಿದ್ರೆಮಾಡಿ ಸ್ವಕರ್ಮಾನಂತರ ರಾಜನ ಸಭೆಗೆ ಬಂದರು. ಸೌಗತರೆಲ್ಲರೂ ಆ ಕುಂಭದಲ್ಲಿ ಕರೀಘಟಸರ್ಪವಿದೆ ಎಂದರು.

ಬ್ರಾಹ್ಮಣರು ‘‘ ನನ್ನ ಒಂದಂಶದಿಂದ ಈ ಪ್ರಪಂಚವನ್ನೆಲ್ಲಾ ವ್ಯಾಪಿಸಿದ್ದೇನೆ ’’ ಎಂಬ ಭಗವದ್ವಾಕ್ಯಪ್ರಾಮಾಣ್ಯದಿಂದ ಕುಂಭದಲ್ಲಿ ಸರ್ಪಶಾಯಿಯಾದ ಮಹಾವಿಷ್ಣುವಿರುವನೆಂದರು.

ರಾಜನು ಬ್ರಾಹ್ಮಣರನ್ನು ಕೊಲ್ಲಿಸಬೇಕೆಂದು ಬಹಳ ಖಿನ್ನನಾದನು. ಸೌಗತರು ಆ ಸರ್ಪದಿಂದಲೇ ಭಟ್ಟಪಾದನನ್ನು ಕೊಲ್ಲಿಸಬೇಕೆಂದು, ‘‘ ನಿನ್ನ ಮಾತು ನಿಜವಾಗಿದ್ದರೆ ಆ ಕುಂಭದಿಂದ ವಿಷ್ಣುವನ್ನು ತೆಗೆ ’’ ಎಂದರು.

ಆಗ ಭಟ್ಟಪಾದರು ಸಭಾಮಧ್ಯದಲ್ಲಿದ್ದ ಆ ಕುಂಭದಿಂದ ಶೇಷಶಯನನಾದ ವಿಷ್ಣುಪ್ರತಿಮೆಯನ್ನು ತೆಗೆದು ತೋರಿಸಿದರು.

ಅನಂತರ ರಾಜನು ಸೌಗತರನ್ನೆಲ್ಲಾ ಕೊಲ್ಲಿಸಿಬಿಟ್ಟನು.

ದ್ವಿತೀಯವಲ್ಲರೀ

ಕೇರಳೇ ಸರಳೇ ದೇಶೆ ಕರುಣಾನೀರಧಿಃ ಶಿವಃ |
ಪೂರ್ಣಾನದೀಪುಣ್ಯತಟೇ ಸ್ವಯಂಭೂ ರ್ಭಾತಿ ಸಂತತಮ್ ||

ಕೇರಳದೇಶದಲ್ಲಿ ವೃಷಭಾಚಲದೊಳಗೆ ಇರುವ ಪೂರ್ಣವಾಹಿನೀನದಿಯ ದಡದಲ್ಲಿ ಮುಕ್ತೇಶ್ವರನು ಜ್ಯೋತಿರ್ಲಿಂಗರೂಪದಿಂದ ಅವತರಿಸಿದ್ದನು. ಆದೇವನು ಭಕ್ತರವಾಂಛಿತಾರ್ಥಗಳಂ ಕೊಡುತ್ತಾ ಪ್ರಸಿದ್ಧನಾಗಿ

ದ್ದನು. ಆ ನದಿಗೆ ಸಮೀಪದಲ್ಲಿ ವಿಖ್ಯಾತವಾದ ಕಾಲಟಿ ಎಂಬ ಅಗ್ರಹಾರವಿತ್ತು. ಅಲ್ಲಿ ವಿದ್ಯಾಧಿರಾಜನ ಮಗನಾದ ಶಿವಗುರುವು ಪತ್ನಿಯಾದ ಆರ್ಯಾಂಬಿಕೆಯಿಂದ ಸಹಿತನಾಗಿ ಅನೇಕ ಯಾಗಾದಿಗಳನ್ನೂ, ವ್ರತಗಳನ್ನೂ ಮಾಡಿಕೊಂಡು ಅತಿಥಿ ಅಭ್ಯಾಗತರಿಗೆ ಅನ್ನದಾನವಮಾಡುತ್ತಾ ಧರ್ಮದಿಂದಿರುತ್ತಿದ್ದನು. ಅವರಿಗೆ ಬಹಳ ಕಾಲದವರಿವಿಗೂ ಪುತ್ರೋದಯವೇ ಆಗಲಿಲ್ಲ. ಇದೊಂದು ಚಿಂತೆಯು ಅವರನ್ನು ಬಹಳವಾಗಿ ಕಾಡುತ್ತಿತ್ತು.

ಅನಂತರ ಆ ದಂಪತಿಗಳು ಜ್ಯೋತಿರ್ಲಿಂಗರೂಪಧಾರಿಯಾದ ಪರಮೇಶ್ವರನನ್ನು ಭಜಿಸಿದರೆ ಆ ಮಹಾತ್ಮನ ಅನುಗ್ರಹದಿಂದ ತಮ್ಮ ವಾಂಛಿತಾರ್ಥವು ಸಿದ್ಧಿಸಬಹುದೆಂದು ತಿಳಿದು ಅಗಸ್ತ್ಯಶಿಷ್ಯರಿಂದುಪದೇಶಿಸಲ್ಪಟ್ಟ ಶಿವಮಂತ್ರವನ್ನು ಜಪಿಸುತ್ತಾ ಭಕ್ತೇವರದನಾದ ಆ ಮಹಾದೇವನನ್ನು ಹನ್ನೆರಡುವರ್ಷಕಾಲ ಸಕಲಶ್ರಮಗಳನ್ನೂ ಸಹಿಸಿಕೊಂಡು ನಿಶ್ಚಲಜ್ಞಾನದಿಂದಾರಾಧಿಸುತ್ತಿದ್ದರು.

ಹೀಗಿರೆ, ಒಂದಾನೊಂದುದಿನ ಮಹೇಶ್ವರನು ವೃದ್ಧಬ್ರಾಹ್ಮಣವೇಷದಿಂದ ಬಂದು ಸ್ವಪ್ನದಲ್ಲಿ ಶಿವಗುರುವನ್ನು ಕುರಿತು " ಎಲೈಶಿವಗುರುವೇ! ನಿನ್ನಭಕ್ತಿಗೆ ನಾನು ಮೆಚ್ಚಿದೆನು, ನಿನಗೇನುಬೇಕು" ಎಂದನು. ಅದಕ್ಕೆ ಶಿವಗುರುವು " ಸ್ವಾಮಿ? ಪುತ್ರರತ್ನವು ಉದಯಿಸುವಂತೆ ವರನನ್ನು ದಯಪಾಲಿಸಿದರೆ ಸಾಕು" ಎಂದುತ್ತರವಿತ್ತನು.

ಮಹೇಶ್ವರನು ಪುನಃ " ನಿನಗೆ ಸುಗುಣಿಯೂ, ಸಕಲಶಾಸ್ತ್ರಜ್ಞನೂ, ಅಲ್ಪಾಯುವೂ, ಆದಿರ್ವಪುತ್ರನುಬೇಕೋ? ಅಥವಾ ದುರ್ಗುಣಿಗಳೂ, ದಡ್ಡರೂ, ದೀರ್ಘಾಯುಷ್ಮಂತರೂ ಆದ ಬಹುಮಂದಿ ಪುತ್ರರುಬೇಕೋ?" ಎಂದುಕೇಳಲು—— ಶಿವಗುರುವ್ರತನಗೆ, ಸುಗುಣಿಯೂ, ಸಕಲಶಾಸ್ತ್ರಜ್ಞನೂ, ಅಲ್ಪಾಯುವೂ ಆದಿರ್ವ ಪುತ್ರನೇಸಾಕೆಂದುತರವಿತ್ತನು.

ಮಹೇಶ್ವರನು ಹಾಗೆಯೇ ಆಗಲೆಂದುಪೇಳಿ ವಿಭೂತಿಯನ್ನೂ, ಫಲವನ್ನೂ, ಮಂತ್ರಿಸಿಕೊಟ್ಟು ಅಂತರ್ಹಿತನಾದನು.

ಅನಂತರ ಈ ದಂಪತಿಗಳು ಎಚ್ಚರವಾದಮೇಲೆ ದೇವರಿಗೆ ನಮಸ್ಕರಿಸಿ ಸ್ವಗೃಹಕ್ಕೆತೆರಳಿ ತಮಗಾದ ಶುಭವಾರ್ತೆಯನ್ನು ಬಂಧುವರ್ಗಕ್ಕೆ ತಿಳಿಸಲು ಅವರು " ನಿಮ್ಮ ವಂಶವೇಪವಿತ್ರವಾಯಿತು ನೀವು ಕೃತಕೃತ್ಯರಾದಿರಿ" ಎಂದುಸುರಿದರು.

ಈದಂಪತಿಗಳು, ಮಂತ್ರಜಪಶಾಸ್ತಿಯನ್ನು ಮಾಡಿ, ಲಕ್ಷಜನ ಬ್ರಾಹ್ಮಣರ ಭೋಜನದಿಂದಲೂ, ರುದ್ರಾಭಿಷೇಕದಿಂದಲೂ, ಚತುರ್ವೇದ ಪಾರಾಯಣದಿಂದಲೂ, ಗೋಬ್ರಾಹ್ಮಣರಸೇವೆಯಿಂದಲೂ, ಪರಮೇಶ್ವರನ ಸೇವೆಯಂಮಾಡುತ್ತಾ ಸುಕೃತವೂ

ರ್ಣರಾಗಿ ಪುತ್ರಕಾಮೇಷ್ಟಿಯಂಮಾಡಿ, ಅನೇಕ ಭೂರಿದಕ್ಷಿಣೆಗಳಂ ಬ್ರಾಹ್ಮಣರಿಗೆ ಕೊಟ್ಟು ಅವರಿಂದ ಕೊಡಲ್ಪಟ್ಟ ಮಂತ್ರಪ್ರಕ್ಷತೆಯನ್ನು ಶಿರಸಾಧಾರಣಮಾಡಿ, ಶಿವ ಮಂತ್ರಾಭಿಮಂತ್ರಿತವಾದ ಪರಮಾನ್ನಹವಿಶ್ಶೇಷವನ್ನು ಭುಂಜಿಸಿ ಧರ್ಮರತರಾಗಿ ದ್ದರು. ಪರಮೇಶ್ವರನು ತನ್ನ ಕಲೆಯನ್ನೆಲ್ಲಾ ಆ ಪರಮಾನ್ನಹವಿಶ್ಶೇಷದಲ್ಲಿಟ್ಟಿ ದ್ದನು. ಇಷ್ಟಾದಬಳಿಕ ಆರ್ಯಾಂಬೆಗೆ ದೋಹದಲಕ್ಷಣಗಳೊಂದೊಂದಾಗಿ ಕಾಣಲು ಪ್ರಾರಂಭವಾದವು.

ಇದಲ್ಲದೆ ಆರ್ಯಾಂಬೆಯು, ತಾನು ವೃಷಭಾಚಲದಮೇಲೆ ದೇವತೆಗಳಿಂದ ಸೇವಿಸಲ್ಪಡುತ್ತಿದ್ದಂತೆಯೂ, " ಜಯ, ಜಯ " ಎಂದು ಹೊಗಳಿಸಿಕೊಳ್ಳುತ್ತಿದ್ದಂತೆ ಯೂ, ಕನಸಂಕಂಡು ಬೆಚ್ಚಿಬೀಳುತ್ತಿದ್ದಳು. ಪ್ರಾತಃಕಾಲ ಎದ್ದು ನೋಡಿದರೆ ಆಕೆಯ ಹಾಸಿಗೆಯಮೇಲೆ ಪಾರಿಜಾತಾದಿಪುಷ್ಪಗಳು ಇರುತ್ತಿದ್ದವು.

ಶಿವಗುರುವು ಆ ಗರ್ಭಕ್ಕೆ ಪುಂಸವನವೇ ಮೊದಲಾದ ಶಾಸ್ತ್ರೋಕ್ತವಾದ ಸಂಸ್ಕಾರಗಳಂ ಮಾಡುತ್ತಾ ಧರ್ಮದಿಂದಿರುತ್ತಿದ್ದನು.

ತೃತೀಯವಲ್ಲರೀ

ಶಾಕ್ತೈಃ ಪಾಶುಪತೈರಪಿ ಕ್ಷಪಣಕೈಃ ಕಾಪಾಲಿಕೈರ್ವೈಷ್ಣವೈಃ
ಆಪ್ಯನ್ಯೈರಪಿಲೌಕಿಕೈಃ ಖಲುಕಿಲಂ ದುರ್ವಾದಿಭಿರ್ವೈದಿಕಮ್ |
ಪನ್ಥಾನಂ ಪರಿರಕ್ಷಿತುಂ ಕ್ಷಿತಿತಲಂ ಪ್ರಾಪ್ತಃ ಪುರಕ್ರೀಡತೆ
ಘೋರೇ ಸಂಸೃತಿಕಾನನೇ ವಿಹರತಾಂ ಭದ್ರಂಕರಃ ಶಂಕರಃ||

ಶ್ರೀ ಶಂಕರಾವತಾರಪುಟ್ಟಿ.

ಕಲಿಯುಗದಲ್ಲಿ 3890 (ವಿಕ್ರಮಶಕೆ 850, ಕ್ರಿಶ 788) ನೇ ವಿಭವ ನಾಮಸಂವತ್ಸರದ ವೈಶಾಖಮಾಸ, ಶುಕ್ಲಪಕ್ಷ ಪಂಚಮಿ * ಯದಿನ,

* ಪಂಚಮಿ ದಿನ ಆಚಾರ್ಯಾವತಾರವೆಂಬುದಕ್ಕೆ ಸರಿಯಾದ ಆಧಾರವಿಲ್ಲ. ದಶಮಿದಿನ ಆಚಾರ್ಯಾವತಾರವೆಂದು ಸದಾನಂದಪಂಡಿತರು ಹೇಳುತ್ತಾರೆ. ಉತ್ತರದೇಶದವರು ದಶಮಿಯ ದಿನವೇ ಶಂಕರಜಯಂತಿಯನ್ನು ವಿಶೇಷವಾಗಿ ಆಚರಿಸುತ್ತಾರೆ. ದಾಕ್ಷಿಣಾತ್ಯರು ಸಂಚಲನಿಧಿವಸ ಆರಾಧಿಸುತ್ತಾರೆ.

ಕೌಸಲ್ಯೆಯು ರಾಮನನ್ನು ಪಡೆದಂತೆಯೂ, ದೇವಕಿಯು ಶ್ರೀ ಕೃಷ್ಣನಂ ಪಡೆದಂತೆಯೂ, ಅದಿತಿದೇವಿಯು ವಾಮನಮೂರ್ತಿಯಂ ಪಡೆಯದಂತೆಯೂ ಪಾರ್ವತಿಯು ಕುಮಾರಸ್ವಾಮಿಯಂ ಪಡೆದಂತೆಯೂ, ಸುದಕ್ಷಿಣಾದೇವಿಯು ರಘುಮಹಾರಾಯನನ್ನು ಪಡೆದಂತೆಯೂ, ಶಿವಗುರುಪತ್ನಿಯಾದ ಆರ್ಯಾಂಬೆಯು, ಗ್ರಹಗಳೆಲ್ಲವೂ ಉಚ್ಚಸ್ಥಾನದಲ್ಲಿರುವಾಗ, ಚಿದ್ರೂಪನಾದ, ಲೋಕಶಂಕರನನ್ನು ಶುಭಮುಹೂರ್ತದಲ್ಲಿ ಪ್ರಸವಿಸಿದಳು.

ಆ ಶಿವನ ಜನ್ಮದಿಂದ ಮಳೆಇಲ್ಲದಿದ್ದರೂ ಕಾಡುಗಿಚ್ಚು ಶಾಂತವಾಯಿತು. ಪ್ರಾಣಿಗಳೆಲ್ಲವೂ ತಮ್ಮ ತಮ್ಮ ಶತ್ರುಗಳನ್ನು ಮಿತ್ರರನ್ನಾಗಿ ಗಣನೆಮಾಡಿದವು. ಅಕಾಲವಾದರೂ, ವೃಕ್ಷಗಳೆಲ್ಲಾ ಫಲ ಪುಷ್ಪಭರಿತವಾದವು. ಹೋಮ ಕುಂಡದಯಜ್ಞೇಶ್ವರನು ಪ್ರದಕ್ಷಿಣಾಕಾರವಾಗಿ ಹವಿಸ್ಸನ್ನು ತೆಗೆದುಕೊಂಡನು. ಸೌಗತಾದಿಗಳ ಕೈಲಿದ್ದ ಪುಸ್ತಕಗಳು ಕೆಳಗೆಬಿದ್ದವು. ದುರ್ಮತ ಪ್ರವರ್ತಕರಾದ ಕಾಪಾಲಿಕರೇ ಮೊದಲಾದವರ ಕಣ್ಣುಗಳು ಮಂಜಾದವು. ಬ್ರಾಹ್ಮಣರ ಮನಸ್ಸಿನಲ್ಲಿ ಸಂತೋಷ ಉಕ್ಕಿತು. ಈ ಶಿಶುವಿನ ಜನನವಾದಕೂಡಲೇ ಅಲ್ಲಿದ್ದ ದೀಪಗಳೆಲ್ಲಾ ಚಿತ್ರಾರ್ಪಿತಪ್ರತಿಮೆಗಳಂತಾದವು. ಅಲ್ಲಿ ಒಂದು ವಿಧವಾದ ಕಾಂತಿಯುಂಟಾಯಿತು.

ಶಿವಗುರುವು ಮಗುಹುಟ್ಟಿತೆಂಬ ಶುಭವಾಕ್ಯವನ್ನು ಕೇಳಿದಕೂಡಲೇ ಸ್ನಾನ ಮಾಡಿಬಂದು ಮಗುವಿಗೆ ಜಾತಕರ್ಮಾದಿಗಳನ್ನು ಮಾಡಿ ಬ್ರಾಹ್ಮಣರಿಗೆ ಅನೇಕಭೂಗೋ ಹಿರಣ್ಯದಾನಗಳನ್ನಿತ್ತನು.

ಜ್ಯೋತಿಷಿಕರು ಜಾತಕವನ್ನು ಬರೆದರು. ಅದರಫಲವಿಸ್ತಾರವಂದು ಯೇಳಲೂ ಅವರು ಶಕ್ತರಾಗಲಿಲ್ಲ.

ಒಂದುದಿನ ಆಮಗುವು ತೊಟ್ಟಿಲಿನಲ್ಲಿ ಆಟವಾಡುತ್ತಿರುವಾಗ ಆದಿಶೇಷನು ಆ ಮಗುವನ್ನು ಸೇವಿಸುತ್ತಿದ್ದನು ತೊಟ್ಟಿಲಿನಲ್ಲಿ ಸರ್ಪವಿರುವುದನ್ನು ಮನೆಯವರು ಕಂಡು ಘಾಬರಿಯಿಂದ ನೋಡುವಲ್ಲಿ ಅದು ರುದ್ರಾಕ್ಷಮಾಲೆಯಂತೆ ಕಾಣಬಂದಿತು.

ಅನಂತರ ಅವರು ಇದೆಲ್ಲಾ ದೇವರ ಮಾಯೆಯೆಂದು ತಿಳಿದರು. ಒಂದುದಿನ ಮಗುವು ಯಾರಕಣ್ಣಿಗೂ ಕಾಣದೇ ಮಾಯವಾಯಿತು. ಎಲ್ಲರೂ ಹುಡುಕಲಾರಂಭಿಸಿದರು.

ಆಗ ಓರ್ವವೃದ್ಧನು ಸಾಮಗಾನವಂ ಮಾಡುತ್ತಾ ಬಂದು ಅಲ್ಲಿ ಇದ್ದ ಒಂದು ಕೂಶ್ಮಾಂಡವನ್ನು ಯಾಚಿಸಿದನು.

ಅವನು ಅದನ್ನು ಮುಟ್ಟಿದಕೂಡಲೇ ಅದು ಪರಿದುಹೋಯಿತು. ಅದರ ಒಳಗಡೆಂದ ಶಿಶುವು ಹೊರಕ್ಕೆ ಬಂದಿತು. ಎಲ್ಲರೂ ಆ ಮಗುವಿಗೆ ಅನೇಕ ರಕ್ಷಾದಿಗಳನ್ನಿಟ್ಟು ತಾಯಿಯ ಸಮೀಪಕ್ಕೆ ಕೊಟ್ಟರು

ಆ ಹುಡುಗನ ತಲೆಯಲ್ಲಿ ಚಂದ್ರರೇಖೆಯೂ, ಹಣೆಯಲ್ಲಿ ಫಾಲನೇತ್ರಚಿಹ್ನವೂ, ಭುಜಗಳಲ್ಲಿ ತ್ರಿಶೂಲರೇಖೆಯೂ, ಕೈಗಳಲ್ಲಿ, ಚಕ್ರ, ಡಮರುಕ, ಕಮಲಕಲಶಾದಿಗುರುತುಗಳೂ, ಉರಸ್ಸಿನಲ್ಲಿ ನಾಗರೇಖೆಯೂ, ಕತ್ತಿನಲ್ಲಿ ಕಪ್ಪುಮಚ್ಚೆಯೂ ಇದ್ದವು; ಮತ್ತು ದೇಹವು ಸುವರ್ಣದಕಾಂತಿಗಿಂತಲೂ ಅತಿಶಯವಾದ ಕಾಂತಿಯುಳ್ಳದ್ದಾಗಿತ್ತು.

ಶಿವಗುರುವು ಹನ್ನೊಂದನೆಯ ದಿನದಲ್ಲಿ ಶಿವಪ್ರಸಾದದಿಂದ ಹುಟ್ಟಿದ ಆ ಶಿಶುವಿಗೆ ಶ್ರೀ ಶಂಕರನೆಂದು ನಾಮಕರಣಮಾಡಿದನು.

ಹೀಗೆ ಬಾಲಮೃಗಾಂಕಶೇಖರನು ಭೂಲೋಕದಲ್ಲಿ ಅವತಾರಮಾಡಲಾಗಿ, ಸುರಶ್ರೇಷ್ಠರು ಆತನನ್ನು ಸೇವಿಸಲು ಶಾಸ್ತ್ರಜ್ಞರಾದ ಬ್ರಾಹ್ಮಣರಿಗೆ ಪುತ್ರರಾಗಿ ಅವತರಿಸಿದರು. ಅವರಲ್ಲಿ ವಿಷ್ಣುವು ವಿಮಲನೆಂಬ ವಿಪ್ರಶ್ರೇಷ್ಠನಿಗೆ ಸನಂದನಾಭಿಧಾನದಿಂದ ಮಗನಾಗಿ ಹುಟ್ಟಿ, ಆನಂತರ ಪದ್ಮಪಾದನೆಂಬ ಹೆಸರನ್ನು ವಹಿಸಿದನು. ವಾಯುವು ಪ್ರಭಾಕರನೆಂಬ ಬ್ರಾಹ್ಮಣನಿಗೆ ಮಗನಾಗಿ ಅವತರಿಸಿದನು. ಇವನನ್ನೇ ಹಸ್ತಾಮಲಕರೆನ್ನುತ್ತಾರೆ. ಅಗ್ನ್ಯಂಶದಿಂದ ತೋಟಕಾಚಾರ್ಯರು ಅವತರಿಸಿದರು. ಬ್ರಹ್ಮನು ಜಿಮಮಿತ್ರಭಟ್ಟಾಚಾರ್ಯನಿಗೆ ಮಂಡನಮಿಶ್ರನೆಂಬ ಹೆಸರಿನಿಂದ ಮಗನಾದನು. ಆತನನ್ನೇ ಸುರೇಶ್ವರಾಚಾರ್ಯರೆನ್ನುತ್ತಾರೆ. ನಂದೀಶ್ವರ, ವೀರಭದ್ರ, ಗಣೇಶಾಂಶಗಳಿಂದ ಉದಂಕಮುನಿ ಹುಟ್ಟಿದನು. ಬೃಹಸ್ಪತಿಯು ಆನಂದಗಿರಿಯಾದನು. (ಬೃಹಸ್ಪತಿಯೇ ಮಂಡನಮಿಶ್ರನಾಗಿಯೂ, ನಂದೀಶ್ವರನೇ ಆನಂದಗಿರಿಯಾಗಿಯೂ, ಅವತರಿಸಿದರೆಂದು ಕೆಲವರು ಹೇಳುತ್ತಾರೆ.) ವರುಣನು ಚಿತ್ಸುಖಾಚಾರ್ಯನಾದನು. ಯಮನು ಕಾಲಾನಲನೆಂಬ ವಾದಿಯಾಗಿ ಹುಟ್ಟಿದನು. ನಿರ್ಋತಿಯು ಶಾಕ್ತಮಂತ್ರವಾದಿಯಾದನು.

ದೂರ್ವಾಸಮಹರ್ಷಿಗಳು ವೇದಪಾರಾಯಣಮಾಡುತ್ತಿದ್ದಸಮಯದಲ್ಲಿ ಎಲ್ಲೋ ಒಂದು ಸ್ವರವನ್ನು ತಪ್ಪಲು ಸರಸವಾಣಿಯು ನಕ್ಕಳು. ಆಗ ದೂರ್ವಾಸರು ಕೋಪಾರುಣನೇತ್ರರಾಗಿ " ಎಲೈ ಶಾರದೆಯೇ ! ನನ್ನ ಅವಮಾನವನ್ನು ನೋಡಿ ನೀನು ನಕ್ಕವಳಾದಕಾರಣ ನೀನು ಮನುಷ್ಯಜನ್ಮವಂ ಪಡೆ " ಎಂದು ಶಪಿಸಿದರು.

ಅದನ್ನು ಕೇಳಿ ಶಾರದೆಯು ನಡುಗುತ್ತಾ, ಭೂಸುರೇಂದ್ರನ ಪಾದಾರವಿಂದಕ್ಕೆರಗಿ ತನ್ನ ತಪ್ಪನ್ನು ಕ್ಷಮಿಸಬೇಕೆಂದು ಪ್ರಾರ್ಥಿಸಿದಳು.

ದೂರ್ವಾಸರು ಅವಳ ಪ್ರಾರ್ಥನೆಯಿಂದ ಸ್ವಲ್ಪ ಕರುಣೆಯಂ ಪೊಂದಿ " ಧರ್ಮಸಂಸ್ಥಾಪನೆಗಾಗಿ ಅವತರಿಸುವ ಶಂಕರಾಚಾರ್ಯರ ದರ್ಶನದಿಂದ ನಿನಗೆ ಶಾಪವಿಮೋಚನೆಯಾಗುತ್ತದೆ " ಎಂದರು. ಅದರಂತೆ ಶಾರದೆಯು ವಿಷ್ಣುಮಿತ್ರಭಟ್ಟಾಚಾರ್ಯನೆಂಬ

ಬ್ರಾಹ್ಮಣನಿಗೆ ಮಗಳಾಗಿ "ಉಭಯಭಾರತೀ" ಎಂಬ ಹೆಸರಂಪೊಂದಿ ಹಿಮಕರ ಭಟ್ಟಾಚಾರ್ಯನ ಮಗನೂ, ಬ್ರಹ್ಮಾವತಾರಿಯೂ ಆದ ಮಂಡನಮಿಶ್ರನನ್ನು ವಿವಾಹ ಮಾಡಿಕೊಂಡು ಸುಖವಾಗಿದ್ದಳು.

ಶಂಕರಾವತಾರಕ್ಕಿಂತ ಮುಂಚೆ ಈಶಾನ, ವಿಷ್ಣು, ಕಮಲಾಸನ, ಕಾರ್ತವೀರ್ಯಾಂಶಗಳಿಂದ ಕೂಡಿದ ಆದಿಶೇಷನು ಸ್ವಾಮಿಸೇವೆಗಾಗಿ ಗೋವಿಂದಭಗವತ್ಪಾದರೆಂಬ ಹೆಸರಿನಿಂದ ಅವತರಿಸಿ, ಶುಕಶಿಷ್ಯರಾದ ಗೌಡಪಾದರಲ್ಲಿ ಬ್ರಹ್ಮೋಪದೇಶವಂ ಪಡೆದು, ಪತಂಜಲಿಯ ಬಳಿಯಲ್ಲಿ ವ್ಯಾಕರಣಾದಿ ಶಾಸ್ತ್ರಗಳಂ ಅಧ್ಯಯನಮಾಡಿ, ನರ್ಮದಾತೀರದಲ್ಲಿ ತಪಸ್ಸು ಮಾಡಿಕೊಂಡಿದ್ದರು.

ಕಲಿ, ಕಾಮೋಭಯಾಂಶಗಳಿಂದ ಅಮರುಕರಾಯನು ಹುಟ್ಟಿ ಕಾಮಶಾಸ್ತ್ರಪ್ರವೀಣನಾದನು. ಕಾಲಭೈರವಾಂಶವು ಅಥರ್ವಣಾಂಶದಿಂದೊಡಗೂಡಿ ಉಗ್ರಭೈರವನೆಂಬವಾದಿಯಾಗಿ ಹುಟ್ಟಿತು. ತಂತ್ರಾಗಮಶಾಬರ ದೇವತಾಂಶಗಳು ಕಾಪಾಲಿಕರಾಗಿ ಹುಟ್ಟಿದರು. ಕುಬೇರನು ಕೇರಳಾಧಿಪನಾದನು. ವೀರಾವಳ್ಯಂಶಗಳು ಶಾಕ್ತರಾದರು. ರಾಕ್ಷಸರು ಚಾರ್ವಾಕರಾದರು. ದಾನವರು ದ್ವೈತದುರ್ಮತವಾದಿಗಳಾದರು. ದೈತ್ಯರು ಕ್ಷಪಣಕರಾದರು. ಗೌತಮ, ದಧೀಚಿ ಮೊದಲಾದವರು ನೀಲಕಂಠಭಟ್ಟ, ಅಭಿನವಗುಪ್ತ, ಭಾಸ್ಕರ, ಶ್ರೀಹರ್ಷರೂಪದಿಂದ ಹುಟ್ಟಿದರು. ಪ್ರಮಥಗಣಾಂಶದಿಂದ ಕ್ರಕಚಕಾಪಾಲಿಕರೂ ವಿಷ್ವಕ್ಸೇನಾದ್ಯಂಶಗಳಿಂದ ವೈಖಾನಸಪಾಂಚರಾತ್ರರೂ ಅವತರಿಸಿದರು.

ಹೀಗೆ ದೇವಲೋಕವೇ ಭೂಲೋಕವಾಗಿಯೂ, ದೇವತೆಗಳೇ ಮನುಷ್ಯರಾಗಿಯೂ ಅವತರಿಸಿದರು.

ತುರೀಯವಲ್ಲರೀ.

ಧರ್ಮಗ್ಲಾನಿ ಮಪಾಚಕೀರ್ಷುರವನೌ ಕಾತ್ಯಾಯನೀವಲ್ಲಭಃ
ಪ್ರಾದುರ್ಭೂಯ ಮಜೀಸುರೇಷು ವಿಹರ ಷಡ್ಭರ್ಶನೈಃ ಕಂದುಕೈಃ |
ಗೃಹ್ಣಾನೋ ಜನನೀನಿಯೋಗ ಮಮಿತಗ್ರಾಹಗ್ರಹಚ್ಛದ್ಮನಾ
ಬಾಲ್ಯೇ ಪ್ರೌರಜನಂ ಜಕಾರ ಭವತಾತ್ ಸ ಶ್ರೇಯಸೇ ದೇಶಿಕಃ || ೧ ||

ಶ್ರೀ ಶಂ ಕ ರ ಕೌ ಮಾ ರ ವ ರ್ಣ ನವು.

ರಾ ತ್ರಿಕಮಾಸದಲ್ಲೊಂದುದಿನ ಆ ಅಗ್ರಹಾರದ ಬ್ರಾಹ್ಮಣರು ಸ್ವಯಂಭುಲಿಂಗೇಶ್ವರನಿಗೆ ಪೂಜೆಯಲ್ಲಿ ಸಮರ್ಪಿಸಿದ ಬಿಲ್ವಪುಷ್ಪಮಾಲಿಕೆ

ಗಳು ಶಂಕರನ ಕೊರಳಿನಲ್ಲಿರುವುದನ್ನು ಕಂಡು ಪುನಃ ದೇವಸ್ಥಾನಕ್ಕೆ ಹೋಗಿ ನೋಡಿ, ದೇವರ ಕಂಠದಲ್ಲಿ ಯಾವ ಮಾಲೆಯೂ ಇಲ್ಲದೇಇರುವುದನ್ನು ಕಂಡು, ಭಯಾಶ್ಚರ್ಯಮೊದಲಾದ ಈ ವಿಧವಾದ ದೇವಾಂಶಸಂಭೂತವಲ್ಲದೇ ಜೀವೆ ಅಲ್ಲವೆಂದು ತಿಳಿದುಕೊಂಡು ಅವನ್ನು ಬಹುವಾಗಿ ಸ್ತುತಿಸುತ್ತಿದ್ದರು.

ಮತ್ತೊಂದಡೆಯಲಿ ಶಿವಗಿರಿಯಲ್ಲಿ ನಡೆಯುತ್ತಿದ್ದ ಒಂದು ವಿಪ್ರಸಂತರ್ಪಣೆಯ ಬಗೆ ಯೋಚಿಸಿದ ಆಚಾರ್ಯಮಾರುತಿಯಿಂದ ಶಂಕರನು ಅಂತರಿಕ್ಷಕ್ಕೊಯ್ಯಲ್ಪಟ್ಟನು. ಶಿವಗುರಾಚಾರ್ಯಾದಿ ಬ್ರಾಹ್ಮಣರೆಲ್ಲರೂ ಮುಚ್ಚುಕುತ್ತಿರಲು, ಎಂಟು ದಿಕ್ಕುಗಳಿಂದಲೂ, ಎಂಟು ಮಂದಿ ಮಹಾಸಾರಥಿಗಳಾದ ಎಂಟು ಶಂಕರಶಿಶುಗಳನ್ನು ತಂದು ಕೊಟ್ಟೆಯಾಗಿ ಅವ್ಯಾಜವನ್ನು ಆಪೈಸೂತಿಗಗೆಂಬವಾಗಿ ಭಾವಿಸಿದರು.

ಸಂತರ್ಪಣಾದಿಕಾರ್ಯಗಳನ್ನು ಪರಿಪೂರ್ಣವಾಗಿ ನಡೆಸಿದ ಆಚಾರ್ಯಮಾರುತಿಯು ಕೈಗೊಳ್ಳುವಾಗ್ಯೆ, ಗುರುವಾಯೂರೆಂಬ ಊರಿನಲ್ಲಿ ಶ್ರೀ ಶ್ರೀನಿವಾಸ ಸಭ್ಯಗೃಹದಲ್ಲಿದ್ದ ಈ ಶಿಶುವನ್ನು, ಪರಿಚಿತರು ಯಾರೋ ಕಂಡು, ಕರೆದುಕೊಂಡು ಬಂದಿದ್ದರು.

ಅನೇಕರು ಅಲ್ಲಿದ್ದ ಬ್ರಾಹ್ಮಣರು, ಆ ಶಿಶುವಿಗೆ ಅನೇಕ ರಕ್ಷಾವಿಧಾನಗಳನ್ನು ಮಾಡಿ ಬಾಯಿಯ ಬಗೆಗೆ ಕೊಂಡಿದ್ದರು.

ಆ ಸಮಯ ಬಾಲ್ಯದಲ್ಲಿ ಸ್ವಾಭಾವಿಕವಾಗಿ ಉಸ್ಸೆಂದರೆಯನ್ನೂ, ವಾಯುವು ಪ್ರೇರಿತಾದಿ ವ್ಯಾಪದಾಂತ ಶಬ್ದ ಪದವನ್ನು ಉಚ್ಚರಿಸಿದರು.

ಹುಟ್ಟಿದ್ದಂದಿನಿಂದ, ಶೈಶವಕಾಲದಲ್ಲಿ ಶಿಶುವಿನ ರಕ್ಷಣೆಯನ್ನೆಲ್ಲ, ದೇವರಿಗೆ ಪ್ರತಿನಿಧಿಯಾಗಿ ಶ್ರೀ ಶಂಕರನೇ ರಕ್ಷಿಸಿಕೊಂಡು ಬಂದಿರುವುದನ್ನು, ಆಗಲೇ ಎಲ್ಲರ ಕಣ್ಣಿಗೂ ಕಾಣಲ್ಪಟ್ಟಿತು.

ಇವನನ್ನು ನೋಡಿದ ಜನರು ಅವನೇನೊ ಮಹಾತ್ಮೆಯೆಂದುತರು.

ಐದನೆಯ ವರ್ಷಕಾಲದಲ್ಲಿ ಶಿವಗಿರಿಯ ಯಜ್ಞಶಾಲೆಯಲ್ಲಿ ಹುಡುಗರೆಲ್ಲರೂ ಸೇರಿದ್ದರು. ಶಂಕರನೂ ಸೇರಿದ್ದನು. ಆಗ ಅವರು ಅಲ್ಲಿದ್ದ ಕಾಯಿಪಲ್ಯಗಳ ಸಮೀಪ ಕ್ಕೆಹೋಗಿ, "ಈ ಬೆಂಡಿಕಾಯಿಯಲ್ಲಿ ಎಷ್ಟು ಬೀಜಗಳಿವೆ? ಈ ಬದನೇಕಾಯಿಯಲ್ಲೆಷ್ಟು ಬೀಜಗಳಿವೆ?" ಎಂದು ಪ್ರಶ್ನೆಮಾಡಿದ್ದು ಯಾರಿಂದ ಬಂದ ಉತ್ತರದಿಂದಲೂ ತೃಪ್ತಿಗೊಳ್ಳದೇ ಶ್ರೀ ಶಂಕರನೇ ಲೆಕ್ಕಮಾಡಿ, ಅವನು ಹಗಲ್ಬೀಜಸಂಖ್ಯೆಯನ್ನೇ ಪರಿಶೀಲಿಸಿ ನೋಡಿತೆಂದು ಹೇಳಲು, ಆ ಬಾಲಕರು ಆ ವಾಕ್ಯಾರ್ಥವು ತಿಳಿಯದೇ ವಿದ್ವಜ್ಜನರಿಗೆ ತಿಳುಹಲಾಗಿ, ಅವರು ಆ ಬಾಲಿಗಳನ್ನು ಪರೀಕ್ಷಿಸಿ ನೋಡಿ ಅಲ್ಲಿ ಒಂದೇಒಂದು ಬೀಜವಿರುವುದಂ ಕಂಡು ಶಂಕರನ ಪ್ರತಿಭಾಶಕ್ತಿಗೆ ಇದಮಿತ್ಥಮೆಂದು ಅರ್ಥಮಾಡಲಾರದೆಹೋದರು.

ಶ್ರೀ ಶಂಕರನು ತನ್ನ ಪ್ರಥಮವಯಸ್ಸಿನಲ್ಲಿ ನೇರುಭಾಷೆಯಂ ಕಲಿತನು. ದ್ವಿತೀಯ ವಯಸ್ಸಿನಲ್ಲಿ ವರ್ಣಬೋಧಕಗಳಾದ ಪುರಾಣಕಥೆಗಳನ್ನು ಕಲಿತನು.

ಶಿವಗುರುವು ಶಂಕರನಿಗೆ ತೃತೀಯವಯಸ್ಸಿನಲ್ಲಿ ಚೂಲಕರ್ಮವಂ ಮಾಡಿ, ತನ್ನ ಆಯುಷ್ಯ ಮುಗಿಯಿತೆಂದು ತಿಳಿದು ಪತ್ನಿಗೆ ವೇಳಯೇಕಾದ್ಯನ್ನ ಹೇಳಿ ಪರಲೋಕವನ್ನೈದಿದನು.

ಆರ್ಯಾಂಬೆಯು ತನ್ನ ಜ್ಞಾತಿಗಳಿಂದ ಪತಿಗೆ ಔರ್ಧ್ವದೈಹಿಕವಂ ಮಾಡಿಸಿದಳು.

ಅನಂತರ ಶಂಕರನ ಐದನೆಯ ವಯಸ್ಸಿನಲ್ಲಿ 'ಬ್ರಹ್ಮವರ್ಚಸಕಾಮಸ್ಯಕಾರ್ಯಂ ಕುರ್ವೀತಪಂಚಮೇ' ಎಂಬ ಮನುವಾಕ್ಯದಂತೆ ಆರ್ಯಾಂಬೆಯು ಜ್ಞಾತಿಗಳಿಂದಲೂ, ಶ್ರೋತ್ರಿಯ ಬ್ರಾಹ್ಮಣರಿಂದಲೂ, ಸುಲಗ್ನದಲ್ಲಿ ಶಿಶುವಿಗೆ ಬ್ರಹ್ಮೋಪದೇಶವಂ ಮಾಡಿಸಿದಳು.

ಆ ಬ್ರಹ್ಮಚಾರಿಯು, ದಂಡಾಜಿನ ಮೌಂಜೀಧರನಾಗಿ, ಗುರುನಮಸ್ಕಾರವಂ ಮಾಡಿಕೊಂಡು, ಭಿಕ್ಷಾನ್ನವಂ ಮಾಡುತ್ತಾ ಶಿಷ್ಯಪಾಠ್ಯಗುರುಶುಶ್ರೂಷಾನಿರತನಾಗಿದ್ದನು.

ಒಂದುದಿನ ಶ್ರೀ ಶಂಕರನು ಒಂದು ಮನೆಗೆ ಹೋಗಿ 'ಓಂ ಭವತಿಭಿಕ್ಷಾಂದೇಹಿ' ಎಂದನು.

ಆಗ ಆ ಮನೆಯ ಹೆಂಗಸು ಬಂದು "ಸ್ವಾಮಿ! ನನಗೆ ಬಹಳಗತಿಯಿಲ್ಲ" ಎಂದು ಹೇಳಿ ಒಂದುನೆಲ್ಲಿಕಾಯಿಯನ್ನು ಸಮರ್ಪಿಸಿದಳು.

ಅನಂತರ ಶಂಕರನು ಲಕ್ಷ್ಮಿಯಂ ಸ್ತುತಿಸಲಾರಂಭಿಸಿದನು. ಪ್ರಸನ್ನಳಾಗಿ—

ಲಕ್ಷ್ಮಿ:—ಶಂಕರವಟುವೇ! ನನ್ನನ್ನು ಸ್ತುತಿಸಲು ಕಾರಣವೇನು?

ಶಂಕರವಟು:—ಮಾತಃ! ಈ ಕುಟುಂಬಿಗೆ ಬಡತನವನ್ನು ನಾಶಮಾಡಬೇಕು.

ಲ:—ಇವರು ಪೂರ್ವಜನ್ಮದಲ್ಲಿ ದಾನಮಾಡಿಲ್ಲವಾದ್ದರಿಂದ ಧನಪ್ರಾಪ್ತಿ ಹೇಗುಂಟಾಗುವುದು?

ಶಂ. ವ:—ಪೂಜ್ಯಳೇ? 'ಅತ್ಯಲ್ಪಾದ್ಯೈ: ಪ್ರಯತ್ನಾತ್ಪೈತೃಕಧನಮಶ್ನುತೆ' ಎಂಬುದು ಸತ್ಯವಲ್ಲವೇ?

ಲ:—ಸಂದೇಹವೇನು?

ಶಂ. ವ:—ಹಾಗಾದರೆ, ಈ ಗೃಹಿಣಿಯು ಈಗ ದಾನಮಾಡಿರುವ ಆಮಲಕಫಲ ಕ್ಕಾದರೂ ಪ್ರತಿಫಲವನ್ನು ದಯೆಪಾಲಿಸು.

ಆಗ ಲಕ್ಷ್ಮಿಯು ನಿರ್ವಾಪವಿಲ್ಲದೇ ಅರನಿಮಿಷದಲ್ಲಿ ಮನೆಯ ಮುಂದಿನ ನೆಲ್ಲಿಕಾಯಿಗಳ ವೃಷ್ಟಿಯಂ ಆ ಮನೆಯಲ್ಲಿ ಸುರಿಯಿಸಿ ಅನುಗ್ರಹಿಸಿದನು.

ಈ ಪ್ರಕಾರ ನಿಯಮಬ್ರಹ್ಮಚರ್ಯದಿಂದ ಗುರುಕುಲ ವಾಸಮಾಡಿ, ಚತುರ್ವೇದಗಳನ್ನೂ, ಸಕಲ ಶಾಸ್ತ್ರಗಳನ್ನೂ ಅಧ್ಯಯನಮಾಡಿ ಗುರುಗಳಿಗೆ ಗುರುದಕ್ಷಿಯನ್ನಿತ್ತು, 'ಭದ್ರವಟಮೂಲದಿಂದ ಹಿಂತಿರಿಗಿ ಬಂದ ದಕ್ಷಿಣಾಮೂರ್ತಿಯೊ' ಎಂಬಂತೆ ಮನೆಗೆ ಬಂದನು.

ಮೇರುವು ಇತರ ಪರ್ವತಗಳಿಗಿಂತ ಹ್ಞೇಗೆ ಶ್ರೇಷ್ಠವೋ ಹಾಗೆ ಈ ಶಂಕರನು ಎಲ್ಲಾ ಬ್ರಹ್ಮಚಾರಿಗಳಿಗಿಂತಲೂ ಶ್ರೇಷ್ಠನಾಗಿದ್ದನು. ಇಂತಹ ಬ್ರಹ್ಮಚಾರಿಯು ಹಿಂದೆ ಅವತರಿಸಿರಲಿಲ್ಲ; ಮುಂದೆ ಅವತರಿಸಲಾರನು. ಇವನು ಕಾಮಾದ್ಯರಿಷಡ್ವರ್ಗಗಳನ್ನೂ ಜಯಿಸಿದ್ದನು. ವಾಂಛಿತಫಲಪ್ರದಾನವಂ ಮಾಡುತ್ತಿದ್ದುದರಿಂದ ಎಲ್ಲರೂ ಅವನನ್ನು 'ಧರಣೀಕಲ್ಪದ್ರುಮ' ವೆನ್ನುತ್ತಿದ್ದರು.

ಒಂದುದಿನ ದೂರ್ವಾಸರು ಬಂದು ಶ್ರೀ ಶಾಂಕರಬ್ರಹ್ಮಚಾರಿಗೆ ಸರ್ವ ವಿದ್ಯಾಶಕ್ತಿಯನ್ನೂ ಅನುಗ್ರಹಿಸಿ ತಮ್ಮ ತಪಸ್ಸಾಮರ್ಥ್ಯವಂ ಕೊಟ್ಟು ಆಶೀರ್ವದಿಸಿ ಹೊರಟುಹೋದರು.

ಮತ್ತೊಂದುದಿನ ಬಹಳ ಕೃಶಳಾದ ಇವನ ತಾಯಿಯು, ನದೀಸ್ನಾನಕ್ಕೆ ಹೋಗಿ, ಬಿಸಿಲಿನ ತಾಪದಿಂದ ತಪ್ತಳಾಗಿ ನಡೆಯಲಾರದೇ ಶ್ರಮಪಡುತ್ತಿರುವುದನ್ನು ತಿಳಿದು ಶಂಕರನು ಅಲ್ಲಿಗೆ ಹೋಗಿ ಆಕೆಯನ್ನು ಪಜರಿಸಿ ಮನೆಗೆ ಕರೆದುಕೊಂಡುಬಂದು, ಆ ನದಿಯನ್ನು ಗ್ರಾಮದ ಸಮೀಪದಲ್ಲಿ ಹರಿಯಬೇಕೆಂದು ಪ್ರಾರ್ಥಿಸಲು, ಆ ನದಿಯು ಪ್ರಾತಃಕಾಲದಹೊತ್ತಿಗೆ ಸರಿಯಾಗಿ ಗ್ರಾಮದ ಹತ್ತಿರ ಹರಿಯುತ್ತಿತ್ತು.

ಇದನ್ನೆಲ್ಲಾ ಜನಗಳು ತಿಳಿದು ಶಾಂಕರಬ್ರಹ್ಮಚಾರಿಯನ್ನು ಕೊಂಡಾಡುತ್ತಿದ್ದರು. ಇಂತಹ ತನ್ನ ಮಗನು ಅಲ್ಪಾಯುವೆಂದು ಆರ್ಯಾಂಬೆಗೆ ತಿಳಿದಿದ್ದಾಗ್ಯೂ ಪೂರ್ಣಂಡೇಯನಂತೆ ಮೃತ್ಯುವನ್ನು ಜಯಿಸಿ ಚಿರಾಯುವಾಗುವನೆಂದು ತಿಳಿದು ಶಿವನಂ ಪ್ರಾರ್ಥಿಸುತ್ತಿದ್ದಳು.

ಕೇರಳದೇಶದ ಜನರು ಯಾವ ಈತಿಬಾಧೆಯೂ ಇಲ್ಲದೇ ಕ್ಷೇಮವಾಗಿದ್ದರು. ದುರ್ಭಿಕ್ಷವೆಂಬ ಪೆಸರೇ ಅಡಗಿಹೋಗಿತ್ತು. ಅಲ್ಲಿನ ಧೊರೆಯು ಈ ಬ್ರಹ್ಮಚಾರಿಯ ಮಹಿಮೆಯಂ ಕೇಳಿ ಶಂಕರನನ್ನು ಕರೆದುಕೊಂಡು ಬರುವಂತೆ ಮಂತ್ರಿ ಮೊದಲಾದವರನ್ನು ಕಳುಹಿಸಲು ಅವರು ಬಂದು ನಿಸ್ಪೃಪಶಿಖಾಮಣಿಯಾದ ಶಂಕರನಂ ಕರೆದರು.

ಅದಕ್ಕೆ ಶಂಕರನು '' ಸ್ವಧರ್ಮನುಷ್ಠಾನವಂ ಬಿಟ್ಟು ಲೋಕಾನುವರ್ತನಕಾಲಕ್ಷೇಪವು ಸುಯಲ್ಲವು'' ಎಂದು ತಿಳಿದು '' ಧರ್ಮದಿಂದ ಸಕಲ ಪ್ರಜೆಗಳನ್ನೂ ಪರಿಪಾಲನೆ ಮಾಡುವುದೇ ಅರಸನಿಗೆ ಶ್ರೇಯಸ್ಕರವು'' ಎಂದು ಹೇಳಲು ಅವರು ನಿರಾಶರಾಗಿ ಹಿಂತಿರಿಗಿಬಂದು ಧೊರೆಗೆ ನಡೆದ ಸಂಗತಿಗಳನ್ನೆಲ್ಲಾ ತಿಳಿಸಿದರು.

ಆಗ ರಾಜನು ತಾನು ಮಾಡಿದ ಮೂರು ನಾಟಕಗಳನ್ನೂ ಹತ್ತುಸಹಸ್ರ ವರಹ ಕಾಣಿಕೆಗಳೊಂದಿಗೆ ತೆಗೆದುಕೊಂಡು ಬಂದು ಆವುಗಳನ್ನೆಲ್ಲಾ ಶಂಕರಪಾದಾರವಿಂದಕ್ಕ ರ್ಪಿಸಿ ನಿಲ್ಲಲು, ಶಂಕರನು, ನಾಟಕಗಳನ್ನು ಕೇರಳದೇಶದಲ್ಲಿ ಪ್ರಚಾರಮಾಡುವಂ ತೆಯೂ, ಆ ವರಹವನ್ನೆಲ್ಲಾ ಅಗ್ನಿಹೋತ್ರಗಳಾದ ಬ್ರಾಹ್ಮಣರಿಗೆ ಕೊಡುವಂತೆಯೂ ಹೇಳಿ ಸಂತಾನಾರ್ಥಿಯಾಗಿ ಇರುವ ಆ ರಾಯನಿಗೆ ಬಂದು ಇಷ್ಟಿಯನ್ನುಪದೇಶಿಸಿ ಕಳುಹಿಸಲಾರಾಯನು ಶ್ರೀ ಶಾಂಕರಮಹಿಮೆಯಿಂದ ಪುತ್ರವಂತನಾಗಿ ಸಂತೋಷಿ ಸುತ್ತಿದ್ದನು.

ಶ್ರೀ ಶಂಕರನ ಸಂದರ್ಶನಾರ್ಥವಾಗಿ ಬಹಳ ದೂರದ ದೇಶಗಳಿಂದ ಜನಗಳು ಬಂದು ಅಭೀಷ್ಟವು ನೆರವೇರಿದ ಬಳಿಕ ಹಿಂತಿರುಗುತ್ತಿದ್ದರು. ಶಂಕರವಚನಮಾತ್ರದಿಂದ ಜನಗಳಿಗೆ ನಿಧಿನಿಕ್ಷೇಪಾದಿಗಳೂ, ವಿದ್ಯಾರ್ಥಿಗಳಿಗೆ ಅಪಿಳವಿದ್ಯೆಗಳೂ ಬರುತ್ತಿದ್ದವು. ಶಂಕರಸ್ಮರಣಮಾತ್ರದಿಂದಲೇ ಕ್ಷುದ್ರಗ್ರಹ, ಪಿಶಾಚ, ಭೂತಾದಿಬಾಧಿಚಾರಿಕೆಗಳು ನಾಶವಾ ಗುತ್ತಿದ್ದವು. ಸಕಲಮಹರ್ಷಿಗಳೂ ಬಂದು ತಮ್ಮ ತಮ್ಮ ತಪಸ್ಸಾಮರ್ಥ್ಯಗಳಂ ಕೊಟ್ಟು ಹಿಂತಿರುಗುತ್ತಿದ್ದರು.

ಒಂದುದಿನ ಶಂಕರಜನನಿಯು ಆಗಸ್ತ್ಯಾಶ್ರಮಂ ಪ್ರಾರ್ಥಿಸಲು, ಅವರು ಬಂದರು. ಆರ್ಯಾಂಬೆಯು ಅವರನ್ನು ಪೂಜಿಸಿ ನಮ್ಮ ಮಗನಿಗೆ ಮುಂದೆ ಯಾವಾಗ ಆಗುವುದೆನ್ನ ಲವರು ,, ಅಮ್ಮಾ! ನಿನ್ನ ಮಗನಿಗೆ ಇದು ಗರ್ಭಾಷ್ಟಮ; ಈ ವರ್ಷ ತುಂಬುವುದ ರೊಳಗಾಗಿ ಆಯುರ್ದಾಯವು ಪೂರ್ಣವಾಗುತ್ತದೆ; ಆಗ್ಯೇ ಸನ್ಯಾಸಸ್ವೀಕಾರದಿಂದ ಜನ್ಮವನ್ನು ಬದಲಾಯಿಸಿಕೊಂಡರೆ ಆಯುಸ್ಸು ಮತ್ತಷ್ಟು ಹೆಚ್ಚುತ್ತದೆ. ಬಳಿಕ ದೈವಾ ನುಗ್ರಹದಿಂದ ಇನ್ನೂ ಹೆಚ್ಚುತ್ತದೆ'' ಎಂದುಹೇಳಿ ಮುನಿಗಳಸನ್ನಿಧಿಂದ ಅಂತರ್ಹಿತ ರಾದರು.

ಇದನ್ನು ಕೇಳಿ ಆರ್ಯಾಂಬೆಯು ಹತಾಶಳಾಗಿ, ' ಪಾ ! ಪರಮೇಶ್ವರಾ!! ' ಎಂದು ಮೂರ್ಛಾಕ್ರಾಂತಳಾದಳು. ಶಂಕರನು ಆಕೆಯನ್ನು ಉಪಚರಿಸಿ ಚಿಂತಾನಾಶಕಗಳಾದ ಅನೇಕ ಪುರಾಣಗಳಂ ಹೇಳುತ್ತಾ ಕಾಲವನ್ನು ಕಳೆಯಿಸುತ್ತಿದ್ದನು. ಆರ್ಯಾಂಬೆಯು ತನ್ನ ಚಿಂತೆಯನ್ನೆಲ್ಲಾ ಮರೆತು ಶಿವಪೂಜಾಸಕ್ತಳಾಗಿದ್ದಳು.

ಕೆಲವು ದಿನಗಳನಂತರ ಮಾತೃಪುತ್ರರಿಬ್ಬರೂ ನದಿಗೆ ಸ್ನಾನಕ್ಕೆ ಹೋದರು. ಶಂಕರನು ನದಿಯಲ್ಲಿಳಿದು ಸ್ನಾನಮಾಡುತ್ತಿರುವಾಗ ಒಂದು ಮೊಸಳೆಯು ಬಂದು ಶಂಕರನ ಪಾದವನ್ನು ಹಿಡಿದು ಸೆಳೆಯತೊಡಗಿತು.

ಆಗ ಶಂಕರನು ,, ಅಮ್ಮಾ ! ಒಂದು ಬೊಸಳೆಯು ನನ್ನ ಪಾದವನ್ನು ಪಿಡಿದು ಶೆಳೆಯುತ್ತಿದೆ; ಏನುಮಾಡಲಿ? ಪ್ರಾಣಾಪಾಯಕ್ಕೆ ಸಿಕ್ಕಿದೆನಲ್ಲಾ ! ಅನ್ಯಾಯವಾಗಿ ದುರ್ಮರಣವಾಗುವ ಸಂದರ್ಭವು ಬಂತು; ನನ್ನ ಪ್ರಾಣಗಳು ಇನ್ನು ಕೆಲವು ನಿಮಿಷ ಗಳು ಮಾತ್ರ ಬದುಕಬಹುದಾದಷ್ಟು ವ್ಯವಧಾನವಿದೆ; ನಾನು ಬದುಕಿರಬೇಕೆಂದು ನಿನಗಿಷ್ಟವಿದ್ದರೆ ಸನ್ಯಾಸಕ್ಕಾದರೂ ತಡಮಾಡದೆ ಅಪ್ಪಣೆಯನ್ನು ಕೊಡು,, ಎಂದು ವ್ಯಸನದಿಂದ ಘಟ್ಟಿಯಾಗಿ ಕೂಗಿದನು.

ನದಿಯ ದಡದಮೇಲಿದ್ದ ಬ್ರಾಹ್ಮಣರು, ಸನ್ಯಾಸಕ್ಕಾದರೂ ಅಪ್ಪಣೆ ಕೊಡ ಬಹುದೆಂದರು.

ಆಗ ಆಕಾಶವಾಣಿಯು ,, ಈಗಲೆ ತಡಮಾಡದೇ ಸನ್ಯಾಸಗ್ರಹಣಂ ಮಾಡಿ ದರೆ ಇನ್ನೂ ಕೆಲವುಕಾಲ ಬದುಕಬಹುದು,, ಎಂದಿತು.

ಆರ್ಯಾಂಬೆಯು ಇದನ್ನೆಲ್ಲಾ ನೋಡಿ ಬೇರೆ ಮಾರ್ಗವಿಲ್ಲದೇ ,, ಮಗುವೇ ! ನೀನು ಸನ್ಯಾಸವನ್ನಾದರೂ ತೆಗೆದುಕೊಂಡು ಸುಖವಾಗಿ ಬದುಕು,, ಎಂದು ಚಿಂತೆಯಿಂದ ಕೂಗಿ ಹೇಳಿದಳು.

ತಾಯಿಯ ಉತ್ತರನನ್ನು ಕೇಳಿದಕೂಡಲೇ ಶಂಕರನು ಈಷಣಾದ್ಯಭಿಮಾನ ಗಳಂ ತೊರೆದು ಬ್ರಹ್ಮೀಭೂತನಾಗಿ ,, ಆಶಯಂ ಸರ್ವಭೂತೇಭ್ಯಃ,, ಎಂದು ಎರಡು ಕೈಗಳನ್ನೂ ಮೇಲಕ್ಕೆತ್ತಲು, ನಕ್ರವು ಶಂಕರನನ್ನು ಬಿಟ್ಟು ಗಂಧರ್ವರೂಪವಂ ಪೊಂದಿ ಶಂಕರಯತಿಗೆ ನಮಸ್ಕರಿಸಿ ಹೊರಟುಹೋಯಿತು.

ಶಂಕರರು ಸಂಸಾರಸಾಗರವಂ ದಾಂಟಿದಮೇಲೆ ಸ್ನಾನಮಾಡಿಕೊಂಡು ಮೇಲಕ್ಕೆ ದ್ದುಬಂದು ತಾಯಿಗೆ ವಂದಿಸಿ, ದುಃಖಪಡುತ್ತಿದ್ದ ತಾಯಿಯಂ ಸಮಾಧಾನಗೊಳಿಸಿ ಕಷ್ಟಕಾಲದಲ್ಲಿ ಸ್ಮರಿಸಿಕೊಳ್ಳುವಂತೆ ಹೇಳಿ, ಅನಳಪ್ಪಣೆಯಂ ಪಡೆದು ಕ್ರಮಸನ್ಯಾ ಸವಂ ತೆಗೆದುಕೊಂಡು ನೈಷ್ಠುರ್ಮಸಿದ್ಧಿಯನ್ನು ಹೊಂದಬೇಕೆಂದು ತಕ್ಕ ಗುರುವನ್ನು ಹುಡುಕುತ್ತಾ ಹೊರಟರು.

ಆ ಅಗ್ರಹಾರದ ಜನರು ಶಂಕರರನ್ನು ಆ ದಿನ ಆಲ್ಲಿಯೇ ಇದ್ದು ಮಾರ ನೆಯದಿನ ಹೊರಡಬಹುದೆಂದರು. ಶಂಕರರು ಅವರ ಮಾತಿನಂತೆ ಆ ದಿನವೆಲ್ಲಾ ಅಲ್ಲಿನ ಕೃಷ್ಣದೇವಾಲಯದಲ್ಲಿ ಜನರಿಂದ ಸೇವಿಸಲ್ಪಡುತ್ತಿದ್ದರು.

ಆಗ ಸುತ್ತುಮುತ್ತಣ ಪ್ರಾಂತ್ಯದಲ್ಲಿದ್ದ ಕೆಲವರು ಪಂಡಿತರು ಬಂದು, ಕಲಿಯುಗದಲ್ಲಿ ಸನ್ಯಾಸಗ್ರಹಣವು ನಿಷೇಧಿಸಲ್ಪಟ್ಟಿದೆ; ನೀವು ಹೇಗೆ ಸನ್ಯಾಸಗ್ರಹಣಮಾಡಿದಿರಿ? ಎಂದು ಪ್ರಶ್ನೆಮಾಡಲು, ಶಂಕರಯತಿಗಳು ಆ ದಿನದಲ್ಲಿಯೇ 'ಸನ್ಯಾಸೋಪಾಧಿರವೆಂಬ ಗ್ರಂಥವನ್ನು ಮಾಡಿ ಅವರನ್ನು ಒಪ್ಪಂಬಡಿಸಿ 'ಸನ್ಯಾಸಪ್ರತಿಷ್ಠಾಪನಾಚಾರ್ಯ' ರೆಂದು ವಂದಿಸಲ್ಪಟ್ಟರು.

ಆ ರಾತ್ರಿಯಲ್ಲಿ ಶ್ರೀಕೃಷ್ಣನು ಪ್ರತ್ಯಕ್ಷನಾಗಿ "ನದಿಯು ನನ್ನ ದೇವಾಲಯವನ್ನು ಕೊರೆಯುತ್ತಿದೆ ನನ್ನ ಅರ್ಚಾಮೂರ್ತಿಯನ್ನು ಬೇರೊಂದುಕಡೆ ಪ್ರತಿಷ್ಠಿಸಿ ಹೋಗು" ಎನ್ನಲು, ಶಂಕರಾಚಾರ್ಯರು ಆ ಮೂರ್ತಿಯನ್ನು ತನ್ನ ಹಿಂದೆ ಬರುವಂತೆ ಪ್ರಾರ್ಥಿಸಿ, ಮಂತ್ರಶಕ್ತಿಯಿಂದ ಆಕರ್ಷಿಸಿ ಕರಪೊಯ್ದು ಮತ್ತೊಂದುಕಡೆ ಪ್ರತಿಷ್ಠಿಸಿ ಅನೇಕ ರಕ್ಷಾದಿಗಳನ್ನು ರಚಿಸಿ, ಗೋಬ್ರಾಹ್ಮಣರಿಗೆ ಶುಭವಾಗಲೆಂದು ಹರಿಸಿ ಹೊರಟುಹೋದರು.

(ಆಗ ಆಚಾರ್ಯರಿಂದ ರಚಿಸಲ್ಪಟ್ಟ ಗ್ರಂಥಗಳನ್ನು ಪಠಿಸುವಕಡೆಯಲ್ಲಿ ಈಗಲೂ ಪಶುಪೈರುಗಳಿಗೂ ಬ್ರಾಹ್ಮಣಾದಿ ಚಾತುರ್ವರ್ಣ್ಯಕ್ಕೂ ಕ್ಷೇಮವಿಲ್ಲ.)

ಪಂಚಮಮವಲ್ಲರೀ.

ಶ್ರೀ ಶಂಕರೋ ಗುರುಗವೇಷಣ ತತ್ಪರಸ್ಸನ್
ಗೋವಿಂದಪೂಜ್ಯಪದಾಬ್ಜಸಮೀಪಮೇತ್ಯ |
ತಸ್ಮಾದವಾಪ್ತನಿಖಿಲಾಗಮಸಾರತತ್ತ್ವಃ
ಗುರ್ವಾಜ್ಞಯೇಷ್ಟಮಹಿಮಾ ಪ್ರಯಯೌ ಚ ಕಾಶೀಮ್ ||

ಆ ನಂತರ ಶಂಕರಾಚಾರ್ಯರು, ಮಾತೃ ಮತ್ತು ಶ್ರೀಕೃಷ್ಣಸಮಾತ್ಮರ ಅನುಜ್ಞೆಯಂ ಪಡೆದು ಕಾಮಕ್ರೋಧಾದಿಗಳನ್ನು ಬಿಟ್ಟು, ಶಮಾದಿಗಳಿಂದಲಂಕೃತರಾಗಿ ಮೋಕ್ಷವೆಂಬ ಅಶ್ವವನ್ನೇರಿ, ವೈರಾಗ್ಯವೆಂಬ ಛತ್ರವಂ ಪಿಡಿದು, ಉಪನಿಷತ್ಪರಿಮಳದೊಂದಿಗೆ ಸುಕೃತಪರಿಪಾಕವೆಂಬ ಗಾಳಿಯು ಬೀಸುತ್ತಿರಲು, ವಿವೇಕವೆಂಬ ಸೂರ್ಯನ ಬೆಳಕಿನಲ್ಲಿ ತಕ್ಕ ಗುರುಗಳನ್ನು ಹುಡುಕುತ್ತಾ ಪಟ್ಟಣಗಳನ್ನೂ, ಪರ್ವ

ತಗಳನ್ನೂ, ಗ್ರಾಮಗಳನ್ನೂ, ಜನಗಳನ್ನೂ, ಪಶುಗಳನ್ನೂ, ನೋಡುತ್ತಾ ಉಪನಿಷತ್ಸ್ವರೂಪಿಣಿಯಾದ ಗೋವನ್ನು ಎಳೆಯುತ್ತಿರುವ ವಾದಿಗಳ ದೆಸೆಯಿಂದ ಸಂರಕ್ಷಿಸಲು ಕೋಲು ಬೇಕಾಗಲು, ಈ ದಂಡವನ್ನು ಧರಿಸಿರುವರೋ ಎಂಬಂತೆ ದಂಡಧಾರಿಗಳಾಗಿ ಹೊರಟು ಗೋವಿಂದಭಗವತ್ಪಾದರ ತಪೋವನವನ್ನು ಸಾಯಂಕಾಲಕ್ಕೆ ಸರಿಯಾಗಿ ಸೇರಿ, ಚಂದ್ರಪ್ರಭಾನದಿಯ ತೀರದಲ್ಲಿ ನಿಂತರು.

ಆಚಾರ್ಯರು, ಸಮೀಪದಲ್ಲಿ ಒಂದು ಗುಹೆಯೊಳಗೆ ಯೋಗಾರೂಢರಾಗಿ ಕುಳಿತಿರುವ ಗೋವಿಂದಭಗವತ್ಪಾದರನ್ನು ಕಂಡು, ಅಲ್ಲಿಗೆ ಹೋಗಿ ಗೋವಿಂದಭಗವತ್ಪಾದರನ್ನು ಬಹಳವಾಗಿ ಸ್ತುತಿಸಲು, ಅವರು ಬಹಿರ್ಮುಖರಾದಮೇಲೆ ಶಂಕರಯತಿಯೆಂಬುದಾಗಿ ತಿಳಿದು ''ನೀನು ಯಾರು'' ಎನ್ನಲು ಶಂಕರರು ''ಸ್ವಾಮಿ! ನಾನು ಪೃಥಿವಿಯಲ್ಲ; ಜಲವಲ್ಲ; ತೇಜಸ್ಸಲ್ಲ; ವಾಯುವಲ್ಲ; ಆಕಾಶವಲ್ಲ; ತದ್ಭೂತೇಂದ್ರಿಯಗಳೂ ಅಲ್ಲ; ಆನಂದಸ್ವರೂಪಿಯಾದ ಪರಶಿವನೇ ನಾನಾಗಿದ್ದೇನೆ'' ಎಂದುತ್ತರವಿತ್ತರು.

ಅದನ್ನು ಕೇಳಿ ಗೋವಿಂದಭಗವತ್ಪಾದರು ''ಶಂಕರಯತಿಯೇ! ನಿನ್ನನ್ನು ಶಂಕರನೆಂಬುದಾಗಿ ತಿಳಿದಿರುವೆನು; ನೀನು ಲೋಕಾನುಗ್ರಹಕ್ಕಾಗಿ ಅವತರಿಸಿರುವಿ ಎಂಬುದನ್ನೂ ತಿಳಿದಿರುವೆನು. ನಾನೇ ನೀನಾಗಿರುವಲ್ಲಿ ಹೇಳಬೇಕಾದ್ದೇನೂ ಇರುವುದಿಲ್ಲ. ಆದರೂ, ಶುಕಾಚಾರ್ಯರ ಶಿಷ್ಯರಾದ ಗೌಡಪಾದಮಹರ್ಷಿಗಳಿಂದ ನನಗೆ ಉಪದೇಶಿಸಲ್ಪಟ್ಟಿರುವ ಬ್ರಹ್ಮವಿದ್ಯಾರಹಸ್ಯವನ್ನು ನಿನಗೆ ಉಪದೇಶಿಸುತ್ತೇನೆ'' ಎಂದು ಹೇಳಲು ಶಂಕರದೇಶಿಕರು ಓಂಕಾರವನ್ನುಚ್ಚರಿಸಿ ಗುರುಪಾದನ್ಯಸ್ತಮಸ್ತಕರಾದರು.

ಆಗ ಗುರುಗಳು ಶಿಷ್ಯನನ್ನು ಮೇಲಕ್ಕೆತ್ತಿ, ಕ್ರಮಸನ್ಯಾಸವಿತ್ತು, ಚತುರ್ವೇದ ಸಾರಗಳಾದ ಅನೇಕ ಮಹಾಮಂತ್ರಗಳನ್ನೂ ಬ್ರಹ್ಮವಿದ್ಯಾರಹಸ್ಯವನ್ನೂ, ರಾಜಯೋಗವಿದ್ಯಾರಹಸ್ಯವನ್ನೂ ಉಪದೇಶಿಸಿದರು.

ಶಂಕರರು ಗುರುಗಳ ಸಮೀಪದಲ್ಲೆ ಸೇವೆ ಮಾಡಿಕೊಂಡು ಬಹಳಕಾಲವಿದ್ದರು.

ಅಲ್ಲಿದ್ದ ಇತರ ಮಹರ್ಷಿಗಳು ಶಂಕರರನ್ನು 'ಪರಮಹಂಸ' ರೆಂದು ಸ್ತುತಿಸುತ್ತಿದ್ದರು.

ಒಂದಾನೊಂದು ಕಾಲದಲ್ಲಿ ಮಹರ್ಷಿಗಳೆಲ್ಲರೂ ಚಾತುರ್ಮಾಸ್ಯವ್ರತವಂ ಕೈಕೊಂಡು ಸಮಾಧಿನಿಷ್ಠರಾಗಿರುವ ಕಾಲದಲ್ಲಿ ಚಂದ್ರಪ್ರಭಾ (ನರ್ಮದಾ) ನದಿಯು ಪೂರ್ಣಪ್ರವಾಹದೊಡನೆ ದಡಮೀರಿ ಹರಿಯುತ್ತಿದ್ದಿತು. ಪ್ರವಾಹವು ಕ್ರಮೇಣ

ಹೆಚ್ಚಾಗಿ, ಚಾತುರ್ವರ್ಣ್ಯಸಂಕಲ್ಪವಂ ಕೈಗೊಂಡಿದ್ದ ಯತಿಗಳ ಬ್ರಹ್ಮಸತ್ರಶಾಲೆಗಳ ಕಡೆಗೂ, ವೇದನಾರಾಯಣ ಮಾಡುತ್ತಿದ್ದ ಬ್ರಹ್ಮಬೃಂದಗಳ ಕಡೆಗೂ ಬಹಳ ರಭಸದಿಂದ ಬರುತ್ತಿತ್ತು.

ಅದನ್ನುಕಂಡು ಯತಿಗಳು ಓಡಿಹೋಗುವುದಕ್ಕೂ ಅವಕಾಶವಿಲ್ಲದೇ ಕೂಗಿಕೊಳ್ಳಲಾರಂಭಿಸಲು ಯೋಗಾರೂಢರಾಗಿದ್ದ ಶಂಕರಯೇತಿಕರು, ಸಮಾಧಿನಿಷ್ಠರಾಗಿರುವ ಗುರುಗಳಿಗೆ ಅರಿಕೆಮಾಡುವುದರಲ್ಲಿ ಕಾಲಾತಿಕ್ರಮಣವಾಗುವುದೆಂದರಿತು, ತಮ್ಮಕಮಂಡಲುವನ್ನು ಅಭಿಮಂತ್ರಿಸಿ ಪ್ರವಾಹಕ್ಕಡ್ಡಲಾಗಿಡಲು ಹೆಚ್ಚುನೀರೆಲ್ಲಾ ಆಕಮಂಡಲುವಿನಲ್ಲಿ ಅಡಗಿಹೋಯಿತು.

ಇದನ್ನು ನೋಡಿ ಅಲ್ಲಿದ್ದ ಬ್ರಾಹ್ಮಣರೆಲ್ಲರೂ ' ಅಗಸ್ತ್ಯನೇನಾದರೂ ಈ ರೂಪದಿಂದ ಬಂದಿದಾನೆಯೋ ' ಎಂದು ಶಂಕರರನ್ನು ಸ್ತುತಿಸಿದರು.

ಮತ್ತೊಂದುಕಾಲದಲ್ಲಿ, ನದಿಯಲ್ಲಿ ಸ್ನಾನಾಹ್ನಿಕಗಳಂ ಮಾಡಿಕೊಂಡು ಸಿದ್ಧಾಶ್ರಮಕ್ಕೆ ಹೋಗುತ್ತಿದ್ದಾಗ ಮಧ್ಯಾಹ್ನ ಭಾನುವಿನ ಚಂಡಕಿರಣಗಳಿಂದ ತಪ್ತರಾಗುತ್ತಲಿರುವ ಗುರುಗಳಂಕಂಡು ಶಂಕರಯೇತಿಕರು ತನ್ನ ಶಾಟಿ (ವಸ್ತ್ರ) ಯನ್ನು ಮೇಲಕ್ಕೆಸೆಯಲು ಅದು ಛತ್ರದಂತೆ ಗುರುಗಳಿಗೆ ನೆರಳುಮಾಡುತ್ತಾ ಬರುತ್ತಿತ್ತು.

ಅದನ್ನು ನೋಡಿ ಅಲ್ಲಿದ್ದವರೆಲ್ಲರೂ ಬಹಳ ಆಶ್ಚರ್ಯಪಟ್ಟರು.

ಗೋವಿಂದಭಗವತ್ಪಾದರು, ವ್ಯಾಸರು ತಮಗೆ ಅಪ್ಪಣೆಕೊಡಿಸಿದ ಶಿಷ್ಯನು ಇವನೇ ಎಂತಲೂ, ಮತ್ತು ಇವನು ಬ್ರಹ್ಮಸೂತ್ರಗಳಿಗೆ ಸಿದ್ಧಾಂತಾರ್ಥವಾದ ಭಾಷ್ಯ ಮಾಡುವನೆಂದೂ ಸಂತೋಷಿಸುತ್ತಿದ್ದರು.

ಅನಂತರ ಗೋವಿಂದಭಗವತ್ಪಾದರು ಶಿಷ್ಯನನ್ನು ಕುರಿತು " ಯತಿಯೇ ! ನಾನು ಅತ್ರಿಮಹರ್ಷಿಯು ಮಾಡಿದ ಯಜ್ಞಕ್ಕೆ ಹೋಗಿದ್ದಾಗ ವ್ಯಾಸರನ್ನು ಕುರಿತು ' ಬ್ರಹ್ಮಸೂತ್ರಗಳಿಗೆ ಭಾಷ್ಯವಿದ್ದರೆ ಚೆನ್ನಾಗಿತ್ತು ' ಎಂದು ಕೇಳಲು ಅವರು ' ಈಶ್ವರನೇ ಮನುಷ್ಯಾವತಾರವಂಗೈದು ನಿನ್ನಿಂದ ಉಪದಿಷ್ಟನಾಗಿ ಭಾಷ್ಯವಂ ರಚಿಸಿ ಧರ್ಮಪ್ರತಿಷ್ಠಾಪನೆಯಂ ಗೈಯುತ್ತಾನೆ ' ಎಂದು ಹೇಳಲು, ನಾನು ' ಆ ಮನುಷ್ಯರೂಪಿಯಾದ ಶಂಕರನನ್ನು ಕಂಡು ಹಿಡಿಯಲು ಕುರುಹೇನು ' ಎನ್ನಲವರು ' ಮಹಾನದೀಪ್ರವಾಹವನ್ನು ಯಾವ ಬಾಲಸನ್ಯಾಸಿಯು ಕಮಂಡಲುವಿನಲ್ಲಿ ಅಡಗಿಸುವನೋ ಅವನೇ ಈಶ್ವರನು ' ಎಂದು ಹೇಳಿದರು. ಅದರಂತೆ ನಿನ್ನಲ್ಲಿ ಆ ಲಕ್ಷಣಗಳು ತೋರ್ಪಟ್ಟಕಾರಣ, ನೀನು ಭಾಷ್ಯರಚನೆಯಂಗೈದು ದಿಗ್ವಿಜಯವಂ ಮಾಡಿಕೊಂಡು ಧರ್ಮಸಂಸ್ಥಾಪನೆಯಂಮಾಡಿ ನಮಗೆಲ್ಲಾ ಕೀರ್ತಿಯನ್ನು ತರಬೇಕು " ಎಂದರು.

ಅವರ ಅಪ್ಪಣೆಯಂತೆ ಆಚಾರ್ಯರು ಅವರಿಗೆ ವಂದನಾದಿಗಳನ್ನುಮಾಡಿ ಮಹೇಶ್ವರನ ರಾಜಧಾನಿಯಾದ ಕಾಶಿಗೆ ಹೋಗಿ ಭಾಗೀರಥಿಯಲ್ಲಿ ಸ್ನಾನಮಾಡಿ, ಅಲ್ಲಿ ಗಂಗಾಷ್ಟಕವೆಂಬ ಸ್ತೋತ್ರವನ್ನು ರಚಿಸಿ, ಕ್ಷೇತ್ರಯಾತ್ರೆಯಂ ನೆರವೇರಿಸಿ ಧುಂಡಿರಾಜ, ಭೈರವಮಾಧವಾದ್ಯಷ್ಟಕಸ್ತವಗಳನ್ನು ಹೇಳಿ ದೇವಾದಿದೇವನಾದ ವಿಶ್ವೇಶ್ವರನನ್ನು ಪೂಜಿಸಿ, ಕಾಶಿಜನಗಳಿಂದ ಸೇವಿಸಲ್ಪಡುತ್ತಲೂ, ಸನ್ಯಾಸವನ್ನು ಪ್ರಚಾರಮಾಡುತ್ತಲೂ ಇದ್ದರು.

ಪದ್ಮಪಾದರು.

ಕಾಶ್ಯಾಂ ವಸನ್ನಖಿಲದುಷ್ಟಮತಾನಿ ಭಿಂದ-
ಶಿಷ್ಯಂ ಸನಂದನಮವಾಪ್ತಮನೇಕ್ಷ್ಯ ತಸ್ಯ |
ಚಕ್ರೇ ಪಿ ಪದ್ಮಚರಣಾಹ್ವಯಮಾತ್ಮಬುಧ್ಯಾ
ಭಾಷ್ಯಾದಿಕಂ ಚ ಗುರುಚಾರಮಣಾನುಮತ್ಯಾ ||

ಶಂಕರಾಚಾರ್ಯರು ಸನ್ಯಾಸಪ್ರಚಾರಮಾಡುತ್ತಿರುವ ಸಮಯದಲ್ಲಿ ಒಂದು ದಿನ ಒಬ್ಬ ಬ್ರಾಹ್ಮಣಬಾಲಕನು ಬಂದು ಆಚಾರ್ಯರಿಗೆ ನಮಸ್ಕರಿಸಿ ನಿಲ್ಲಲು, ಶಂಕರರು ಅವನನ್ನು "ನೀನು ದ್ವಿಜರಲ್ಲಿ ಯಾರು? ನಿನ್ನ ವಾಸವು ಎಲ್ಲಿ? ಇಲ್ಲಿಗೆ ಏತಕ್ಕೆ ಬಂದೆ?" ಎನ್ನಲು ಆ ಬಾಲಕನು "ಸ್ವಾಮಿ! ನಾನು ದ್ವಿಜರಲ್ಲಿ ಬ್ರಾಹ್ಮಣನು; ನನ್ನ ವಾಸವು ಜೋಲದೇಶವು; ಈ ಸಂಸಾರಸಾಗರದಲ್ಲಿ ಮುಳಿಗಿದಂಥಾವನಾಗಿ ಏಳಲು ಶಕ್ತಿಯಿಲ್ಲದೇ, ಅದನ್ನು ನಿವಾರಿಸಲರ್ಹರಾದ ಗುರುಗಳನ್ನು ನಾನಾ ದೇಶಗಳಲ್ಲಿಯೂ ಹುಡುಕಿ ಎಲ್ಲಿಯೂ ಕಾಣದೇ ಇಲ್ಲಿಗೆ ಬಂದಿದ್ದೇನೆ; ಇದೇ ನನ್ನ ಉದ್ದೇಶವು; ಆದ್ದರಿಂದ ತಾವು ನನ್ನಲ್ಲಿ ದಯವಿಟ್ಟು ನನ್ನನ್ನು ತಮ್ಮ ಶಿಷ್ಯನನ್ನಾಗಿಮಾಡಿಕೊಳ್ಳಬೇಕು" ಎಂದು ಪ್ರಾರ್ಥಿಸಲಾಚಾರ್ಯರು, ತಮಗೆ ಆಹಿಂದಣರಾತ್ರಿಯಲ್ಲಿ ಬಿಂದುಮಾಧವಸ್ವಾಮಿಯು "ನಿನ್ನ ಅಂಶೋದ್ಭವನಾದ ಓರ್ವನು ಬಂದು ನಿನ್ನ ಶಿಷ್ಯನಾಗುವನು" ಎಂದು ಸ್ವಪ್ನದಲ್ಲಿ ಹೇಳಿದ್ದುದ್ದು ನಿಜವೆಂದು ತಿಳಿದು ಅವನಿಗೆ ಸನ್ಯಾಸಾಶ್ರಮವಂ ಕೊಟ್ಟು ಸನಂದನನೆಂಬ ಹೆಸರಿನಿಂದ ಶಿಷ್ಯನನ್ನಾಗಿ ಮಾಡಿಕೊಂಡರು.

ಆ ಸನಂದನನ ಹಸ್ತಗಳಲ್ಲಿ ಶಂಖಚಕ್ರರೇಖೆಗಳೂ, ಹೃದಯದಲ್ಲಿ ವನಮಾಲಾವೈಜಯಂತೀ ರೇಖೆಗಳೂ, ಪಾದಗಳಲ್ಲಿ ಪದ್ಮರೇಖೆಗಳೂ, ಇದ್ದವು. ಆತನ ವಕ್ಷಸ್ಥಲವು ವಿಶಾಲವಾಗಿದ್ದಿತು; ಆತನು ಆಜಾನುಬಾಹುವಾಗಿದ್ದನು; ನೇತ್ರಗಳು ಪದ್ಮಗಳಂತೆ ವಿಸ್ತಾರವಾಗಿದ್ದವು; ಈ ಮೇಲಿನ ಲಕ್ಷಣಗಳಿಂದ ಅವನನ್ನು ವಿಷ್ಣ್ವಂಶಸಂಭೂತನೆನ್ನಬಹುದಾಗಿದ್ದಿತು.

ಆಚಾರ್ಯರು ಅಲ್ಲಿರುವಾಗ ಪ್ರತಿದಿನವೂ ಒಂದೊಂದು ದೇವರುಗಳನ್ನು ಸ್ತುತಿಸುತ್ತಾ, ಅನೇಕಸಾವಿರ ಸ್ತೋತ್ರಗ್ರಂಥಗಳನ್ನೂ, ಆತ್ಮಬೋಧ, ಅಪರೋಕ್ಷಾನುಭೂತಿ, ಜ್ಞಾನವಾಸಿಷ್ಠಸಾರೋದ್ಧಾರೇತ್ಯಾದ್ಯನೇಕಪ್ರಕರಣಗ್ರಂಥಗಳನ್ನೂ ರಚಿಸಿ, ಶಿಷ್ಯರಿಗೆ ಕೊಡುತ್ತಾ, ದರ್ಶನಮಾತ್ರದಿಂದ ಕಾಶೀಜನಗಳ ಕಷ್ಟನಿವಾರಣೆಯಂಮಾಡುತ್ತಾ ದುಷ್ಟನಿಗ್ರಹಶಿಷ್ಟಪರಿಪಾಲನಾಚಾರ್ಯರೆನಿಸಿಕೊಂಡು ವರ್ಣಾಶ್ರಮಧರ್ಮಗಳಂ ನ್ಯಾಯದಿಂದ ಪರಿಪಾಲಿಸುತ್ತಿದ್ದರು.

ಶಂಕರರು ಅಲ್ಲಿಗೆಬಂದ ತೊಂಭತ್ತುಸಹಸ್ರಮಂದಿ ದ್ವೈತಿಗಳನ್ನು ನಾಶಮಾಡಿ ಗೋವಿಂದಭಗವತ್ಪಾದರು ತಮಗೆ ಕೊಟ್ಟಿದ್ದ ಶ್ರೀಚಂದ್ರಮೌಳೀಶ್ವರಲಿಂಗವನ್ನೂ ರತ್ನಗರ್ಭಗಣಪತಿಯನ್ನೂ, ಶ್ರೀಚಕ್ರ, ನವಗ್ರಹಯಂತ್ರ, ನೃಸಿಂಹಸಾಲಗ್ರಾಮಾದಿಗಳನ್ನು ಸನಂದನರಿಗೆ ಪೂಜೆಮಾಡಿಕೊಂಡಿರುವಂತೆ ಕೊಡಲು ಅವರು ಅವುಗಳನ್ನು ಪೂಜಿಸುತ್ತಾ ಜನರಿಗೆ ತನ್ಮಹಿಮೆಗಳಂ ಪೇಳುತ್ತಾ ಧರ್ಮರತರಾಗಿದ್ದರು.

ಒಂದುದಿನ ಶಂಕರಾಚಾರ್ಯರು, ಶಿಷ್ಯಸಹಿತರಾಗಿ, ಗಂಗಾಸ್ನಾನಕ್ಕೆ ಹೋಗಿಬರುತ್ತಿರುವಾಗ, ದಾರಿಯಲ್ಲಿ, ಓರ್ವಚಂಡಾಲನು, ಮದ್ಯಘಟವನ್ನು ತಲೆಯಮೇಲೆ ಹೊತ್ತುಕೊಂಡು ನಾಲ್ಕು ನಾಯಿಗಳನ್ನು ಜಿಡಿದುಕೊಂಡೆದುರಿಗೆ ಬರುತ್ತಿರಲು, ಆಚಾರ್ಯರು, 'ಗಚ್ಛಗಚ್ಛ' ಎಂದು ಕೈಸನ್ನೆಮಾಡಲಾಗಿ, ಆ ಚಂಡಾಲನು ಅಲ್ಲಿಯೇ ನಿಂತು,'' ಓ ಯತಿವರನೇ ! ಅನ್ನಮಯವಾದ ಶರೀರದ ಸಮೀಪದಿಂದ ಅನ್ನಮಯವಾದ ಮತ್ತೊಂದು ಶರೀರವನ್ನು ದೂರಹೋಗಹೇಳುತ್ತೀಯೋ ? ಒಂದೇಜಾತಿಯಲ್ಲಿ ಭೇದವು ಇಬ್ಬರಿಗೂ ಯುಕ್ತವಲ್ಲವು. ಪರಮಾರ್ಥವಾದ ಅದ್ವೈತವನ್ನು ವಿಚಾರಿಸುವ ಪರಮಹಂಸರಿಗೆ ಈ ಭೇದಗಣನೆಯು, ಸತ್ಯವಲ್ಲವಷ್ಟೆ? ಓರ್ವ ಸೂರ್ಯನೇ ಗಂಗೆಯಲ್ಲೂ, ಹೊಲಗೇರಿಯ ಬಚ್ಚಲಿನಲ್ಲೂ ಪ್ರತಿಬಿಂಬಿಸಿ ಅನೇಕವಾಗಿ ತೋರಿದಮಾತ್ರಕ್ಕೆ ಅನೇಕ ಸೂರ್ಯರು ದಿಟರಾಗಿಹರೋ'' ?ಎನ್ನಲು, ಆಚಾರ್ಯರು ಅವನ ವಾಕ್ಯಗಳಿಂದ ಸಂತುಷ್ಟರಾಗಿ, '' ಆಹಾ ! ವೇದಾಂತರಹಸ್ಯವು ಈ ಚಂಡಾಲನಿಗೆ ಹೇಗೆ ತಿಳಿಯುವುದು ! ಶರೀರಕ್ಕಂತ ಜ್ಞಾನವೇ ಪ್ರಧಾನವಾದ್ದರಿಂದ ಇವನು ಪರಬ್ರಹ್ಮಸ್ವರೂಪನೇ ಸರಿ'' ಎಂದು

ಯೋಚಿಸುತ್ತುರುವಾಗಲೇ ಜಂಡಾಲರೂಪವು ಬಯಲಾಗಿ ಕೋಟಿಸೂರ್ಯಪ್ರಕಾಶವಾದ ದಿವ್ಯರೂಪದೊಂದಿಗೆ ಉಮಾರ್ಧದೇಹವೂ ವೃಷಭಾರೂಢವೂ ಪ್ರಮಥಗಣಯುತವೂ ಚತುರ್ವೇದಸ್ತೂಯಮಾನವೂ ಆದ ದೇವೋತ್ತಮನನ್ನೆಸಗುವ ಪರಮೇಶ್ವರನು ನಿಂತಿದ್ದನು.

ಆಗ ಮುಕ್ತೇಶ್ವರನು, ಮದಂಶಸಂಭೂತನಾದ ಯತಿಯೇ! ನೀನು ಪ್ರಪಂಚವನ್ನು ಉದ್ಧರಿಸಿ ವೇದಾಂತಪ್ರತಿಷ್ಠಾಪನಾರ್ಥವಾಗಿ ಅವತರಿಸಿರುವ ಕಾರಣ, ಮಹಾವಿಷ್ಣ್ವಂಶಜನಾದ ವೇದವ್ಯಾಸನಿಂದ ರಚಿತವಾದ ಬ್ರಹ್ಮಸೂತ್ರಗಳಿಗೂ, ದಶೋಪನಿಷತ್ಪಂಜರುದ್ರ, ನೃಸಿಂಹತಾಪನೀ, ಶ್ರೀ ರುದ್ರಾದಿನೇಪಾಂತಗಳಿಗೂ, ಗೀತಾ, ಸಹಸ್ರನಾಮಾದಿಗಳಿಗೂ ಅದ್ವೈತಪ್ರತಿಪಾದಕವಾದ ಭಾಷ್ಯವಂ ರಚಿಸಿ, ಶಿಷ್ಯರಿಗೆ ಪ್ರವಚನಮಾಡಿಸಿ, ದುರ್ಮತಗಳಂ ಖಂಡಿಸಿ, ದೇವತಾಕಳೆಗಳಂ ಪ್ರತಿಷ್ಠಿಸಿ, ವಾಣೀಪುರಣ್ಯಗರ್ಭರಿಗೆ ಶಾಪವಿಮೋಚನೆಯಂಮಾಡಿ, ಗುರುಪೀಠಗಳಂ ಸ್ಥಾಪಿಸಿ, ಷಣ್ಮತಸ್ಥಾಪನಾಚಾರ್ಯನೆನಿಸಿಕೊಂಡು, ಶಿಷ್ಯರನ್ನು ಉದ್ಧರಿಸಿ, ಶಾಶ್ವತಕೀರ್ತಿಯಂಪಡೆದು, ಕೊನೆಗೆ ಸಶರೀರನಾಗಿ ನನ್ನೊಳಗೈಕ್ಯವಾಗೆಂದು ಹೇಳಿ ಅಂತರ್ಧಾನವನ್ನು ಹೊಂದಿದನು.

ಆಚಾರ್ಯರು, ಅಲ್ಲಿಂದ ಬದರಿಕಾಶ್ರಮಕ್ಕೆ ಹೋಗಿ, ಅಲ್ಲಿ ವ್ಯಾಸರು ಕಾಣದೇ ಹೋಗಲು, ಸನಂದನರನ್ನು ಅಲ್ಲಿಯೇ ಬಿಟ್ಟು ನರನಾರಾಯಣಾಶ್ರಮಕ್ಕೆ ಹೋಗಿ ಅವರ ಆತಿಥ್ಯಮಂ ಕೈಕೊಂಡು "ನೀನು ಮಣಿಕರ್ಣಿಕಾಘಟ್ಟದಲ್ಲಿ, ಶಿಷ್ಯರಿಗೆ ಭಾಷ್ಯಪ್ರವಚನಮಾಡಿಸುತ್ತಿರುವ ಸಮಯದಲ್ಲಿ ವ್ಯಾಸರಂ ಕಾಣುವಿ" ಎಂಬ ಅವರ ಮಾತಿನಂತೆ, ಹಿಂತಿರಿಗಿ, ಭಾಷ್ಯವಂ ರಚಿಸಿ ಶಿಷ್ಯರಿಗೆ ಉಪದೇಶಿಸುತ್ತಿದ್ದರು.

ಅಲ್ಲಿದ್ದ ಇತರ ಶಿಷ್ಯರು, ಪದ್ಮನಾಭಾವತಾರಿಯಾದ, ಸನಂದನರನ್ನು ಅಂತರಂಗದಲ್ಲಿ ದ್ವೇಷಿಸುತ್ತಿದ್ದರು.

ಸನಂದನಾಚಾರ್ಯನು, ಒಂದುದಿನ ಗಂಗಾನದಿಯು ಆಚೆದಡದಲ್ಲಿ, ದೇವತಾರ್ಚನೆಗೆ ತುಲಸೀ, ಬಿಲ್ವ, ಪುಷ್ಪಗಳಂ, ಕುಯ್ಯುತ್ತಿರಲು, ಆಚಾರ್ಯರು ಅವನನ್ನು ಆಗಲೇ ಬಾಯೆಂದು ಕೂಗಿದರು.

ಅದನ್ನು ಕೇಳಿದಕೂಡಲೇ ಗುರುಭಕ್ತಿಯುಳ್ಳ ಶಿಷ್ಯನು, ನದಿಯ ಪ್ರವಾಹದ ಮೇಲೆಯೇ ನಡೆಯಲಾರಂಭಿಸಿದನು. ಗಂಗೆಯು, ಇವನ ಗುರುಭಕ್ತಿಯನ್ನು ಕಂಡು ಅವನ ಪ್ರತಿಒಂದು ಹೆಜ್ಜೆಗೂ, ಒಂದೊಂದು ಕಮಲವನ್ನು, ಒಡ್ಡುತ್ತಾ ಬಂದಳು.

ಸನಂದನರು ಬೇಗ ಬಂದು ಗುರುಗಳಿಗೆ ನಮಸ್ಕರಿಸಿ ನಿಲ್ಲಲು, ಶಂಕರಾಚಾರ್ಯರು ಬಹಳ ಸಂತೋಷದಿಂದ ಅವರನ್ನು ಕಟಾಕ್ಷಿಸಿ ಪದ್ಮಪಾದರೆಂದು ಹೆಸರಿಟ್ಟರು.

ಇತರ ಶಿಷ್ಯರು, ಅದನ್ನುನೋಡಿ ಭಯಾಶ್ಚರ್ಯಯುಕ್ತರಾಗಿ, ಅವರಲ್ಲಿದ್ದ ದ್ವೇಷವನ್ನು ಬಿಟ್ಟುಬಿಟ್ಟರು.

ಅನಂತರ ಒಂದುದಿನ ಆಚಾರ್ಯರು ಶಿಷ್ಯರಿಗೆ ಭಾಷ್ಯಪ್ರವಚನಮಾಡಿಸುತ್ತಿದ್ದಾಗ ಸಗರ್ವಿಗಳಾದ ಕೆಲವರು ಪಾಶುಪತರು ಆಚಾರ್ಯರ ಭಾಷ್ಯವಂ ಖಂಡಿಸಬೇಕೆಂಬ ಮನಸ್ಸಿನಿಂದ ಬಂದು ' ಕಾರ್ಯ, ಕಾರಣ, ಯೋಗ, ವಿಧಿ, ದುಃಖಾಂತಗಳೆಂಬ ಐದು ಪದಾರ್ಥಗಳು ಜನರ ಮೋಕ್ಷಾರ್ಥವಾಗಿ ಈಶ್ವರ (ಪಶುಪತಿ) ನಿಂದ ಉಪದೇಶಿಸಲ್ಪಟ್ಟಿನೆ; ಅವುಗಳಲ್ಲಿ ಮಹತ್ತಾದಿಗಳೇ ಕಾರ್ಯವು; ಪ್ರಧಾನವೇ ಕಾರಣವು; ಸಮಾಧಿಯೇ ಯೋಗವು; ತ್ರಿಷವಣಸ್ನಾನಾದಿಗಳೇ ವಿಧಿಯು; ಮೋಕ್ಷವೇ ದುಃಖಾಂತವಾಗಿಇರುತ್ತವೆ; ಅವುಗಳಲ್ಲಿ ಪ್ರಪಂಚಕ್ಕೆ ಪ್ರಧಾನವೇ ಉಪಾದಾನಕಾರಣವು; ಪಶುಪತಿಯಾದ ಈಶ್ವರನೇ ನಿಮಿತ್ತಕಾರಣವು; ' ಸಈಕ್ಷಾಂಚಕ್ರೆ–ಸಪ್ರಾಣಮಸೃಜತ ' ಇತ್ಯಾದಿ ಪ್ರಾಣಾದಿಸೃಷ್ಟಿಯನ್ನು ತಿಳಿಸುವ ಈಕ್ಷಾಪೂರ್ವಕವಾದ ಶ್ರುತಿಗಳಿಂದ ಘಟಕರ್ತನಾದ ಕುಲಾಲನಂತೆ ಆದಿಕರ್ತನಾವ ಪರಮೇಶ್ವರನು ರಾಜಸ್ಪೆಪತ್ಯಾದಿಗಳಂತೆ ನಿಮಿತ್ತಕಾರಣನಾಗಿದ್ದಾನೆ; ಮತ್ತು ಸಾವಯವವಸ್ತುಗಳಿಗೂ, ಅಚೇತನವಾಗಿಯೂ, ಅಶುದ್ಧವಾಗಿಯೂ, ನಾನಾವಿಧವಾಗಿಯೂ, ಇರುವ ಪ್ರಪಂಚಪ್ರ ವ್ಯಕ್ತಿಕಾರಣವಾದ ಘಟರುಚಕಾದಿಗಳಂತೆ ಪ್ರಕೃತ್ಯುಪಾದಾನಕಗಳಲ್ಲದೇ ಬ್ರಹ್ಮೋಪಾದಾನಕಗಳಲ್ಲವು; ಜಗತ್ತಿಗೆ ಬ್ರಹ್ಮವೇ ಉಪಾದಾನವಾದರೆ ಪ್ರಳಯದಲ್ಲಿ ಬ್ರಹ್ಮನೊಡನೆ ಅಭಿಭಾಗವಾಗುವ ಪ್ರಪಂಚದ ದೋಷಗಳಿಂದ ಬ್ರಹ್ಮವು ದುಷ್ಟನೆಂದು ಒಪ್ಪಬೇಕಾದೀತು; ಆದ್ದರಿಂದ ಆಸ್ತ್ರೈತಿಗಳಿಗಭಿಮತವಾದ ಬ್ರಹ್ಮೋಪಾದಾನಕತ್ವವು ಸುಯಲ್ಲವು '' ಎಂದು ಇದೇ ಮೊದಲಾಗಿ ಹೇಳಲು—

ಸನಂದನರು ಆಚಾರ್ಯರ ಆಪ್ತಣಿಯಂ ಪಡೆದು ' ಪ್ರಪಂಚಕ್ಕೆ ಬ್ರಹ್ಮವು ಅಭಿನ್ನನಿಮಿತ್ತೋಪಾದಾನವೆಂದರೆ ಛಾಂದೋಗ್ಯಾದಿಶ್ರುತಿಗಳಲ್ಲಿ ಸ್ಪಷ್ಟವಾಗಿರುವ ಪ್ರತಿಜ್ಞಾದೃಷ್ಟಾಂತಗಳಿಗೆ ಉಪರೋಧವಿಲ್ಲವೆಂದು ಬ್ರಹ್ಮಸೂತ್ರವೇ ನಿರ್ಣಯಿಸುತ್ತದೆ. ' ಉತ ತಮಾದೇಶಮಪ್ರಾಕ್ಷ್ಯಃ ' ಇತ್ಯಾದಿ ಶ್ರುತಿವಾಕ್ಯಗಳು ಬ್ರಹ್ಮವೇ ಜಗತ್ತಿಗೆ ಉಪಾದಾನವಾಗಿದ್ದರೆ ಉಪರೋಧಿಸಲ್ಪಟ್ಟಾವು; ಭಿನ್ನನಿಮಿತ್ತೋಪಾದಾನಕತ್ವವನ್ನು ಹೇಳುವುದಾದರೆ ಏಕಮೃತ್ಪಿಂಡವಿಜ್ಞಾನದಿಂದ ಸರ್ವಮೃಣ್ಮಯವಿಜ್ಞಾನವನ್ನು ದೃಷ್ಟಾಂತವಾಗಿ ತಿಳಿಸುವ ಛಾಂದೋಗ್ಯವಚನವು ಉಪರೋಧಿಸಲ್ಪಟ್ಟಿತು; ಜಗದುತ್ಪತ್ತಿಗಿಂತಲೂ, ಪೂರ್ವದಲ್ಲಿ ' ಏಕಮೇವಾದ್ವಿತೀಯಂ ಬ್ರಹ್ಮ ' ಎಂಬ ಅವಧಾರಣವಿಂದಲೂ ಬೇರೆ ಅಧಿಷ್ಠಾತೃವಿಲ್ಲದ್ದರಿಂದಲೂ, ಬ್ರಹ್ಮವೇ ನಿಮಿತ್ತವೆಂದು ಹೇಳಬಹುದು; ' ಸೋಕಾಮಯತ **ಬಹು ಸ್ಯಾಂಪ್ರಜಾಯೆಯೇತಿ, ಇತ್ಯಾದಿ ಶ್ರುತಿಗಳಿಂದ ಪ್ರಪಂಚಕ್ಕೆ ಪರಮಾತ್ಮನೇ ಕರ್ತೃ**

ನಾಗಿಯೂ ಪ್ರಕೃತಿಯಾಗಿಯೂ ಇರುವನೆಂದು ನಿಶ್ಚಿತವಾಗಿದೆ; ಉಪಾದಾನೋಪಾದೇಯಗಳಿಗೆ ಸಾದೃಶ್ಯವು ಅನಪೇಕ್ಷಿತವಾಗಿರುತ್ತದೆ; ಅಚೇತನವಾದ ಗೋಮಯದಿಂದ ವೃಶ್ಚಿಕವೂ, ಚೇತನನೆಂದು ಪ್ರಸಿದ್ಧನಾದ ಪುರುಷನಿಂದ ಕೇಶನಖಾದಿಗಳೂ ಉಂಟಾದ ಹಾಗೆ ಸಚ್ಚಿದಾನಂದಸ್ವರೂಪನಾದ ಬ್ರಹ್ಮದಿಂದ ದುಃಖಾನೃತಬಹುಳವಾದೀಜಡ ಪ್ರಪಂಚವು ಉಂಟಾಗುವುದೆಂಬುದರಲ್ಲಿ ಕಾರ್ಯಕಾರಣವೈಲಕ್ಷಣ್ಯವು ಬಾಧಕವಲ್ಲವಷ್ಟೆ; ಕಾರಣವಾದ ಮಣ್ಣಿನೊಂದಿಗೆ ಅವಿಭಾಗವಾಗುವಧ್ವಸ್ತಘಟಾದಿಗಳು ಸ್ವೋಪಾದಾನವಾದ ಮಣ್ಣಿಗೆ ದೂಷಕವಲ್ಲದೇ ಅನನ್ಯಗಳಾಗಿರುವಂತೆ ಪ್ರಳಯದಲ್ಲಿ ಪ್ರಪಂಚವು ಬ್ರಹ್ಮಾನನ್ಯವೆಂಬುದಕ್ಕೆ ' ಆತ್ಮೈವೇದಂ, ಬ್ರಹ್ಮೈವೇದಂ,ಯಥಾಮರೀಚ್ಯುದಕೇನ, ಇತ್ಯಾದಿ ಶ್ರುತಿಗಳು ಪ್ರಮಾಣಗಳಾಗಿವೆ; ಅನುಭವದಲ್ಲಿಯೂ, ಸುಪ್ತೋತ್ಥಿತಪ್ರತ್ಯಭಿಜ್ಞೆಯೊಳಗೆ ವಿಶ್ವಪ್ರಪಂಚವು ಪ್ರಾಜ್ಞನಲ್ಲಿ ಅನನ್ಯವಾಗಿತ್ತೆಂದು ತಿಳಿಯಬರುತ್ತೆ '' ಎಂದೀಪ್ರಕಾರವಾಗಿ ಅವರನ್ನು ಶ್ರುತ್ಯುಕ್ತಪ್ರಮಾಣಗಳೆಂಬೊಡಂಬಡಿಸಿ, ಅದ್ವೈತಸ್ಥಾಪನೆಯಂ ಗೈದು ವಾದಕ್ಕೆ ಬಂದ ಭೇದವಾದಿಗಳನ್ನೂ ಬೌದ್ಧಾದಿಗಳನ್ನೂ ಆಚಾರ್ಯರು ಸೋಲಿಸಿದರು.

ಹೀಗೆ ವೇದಾಂತವೆಂಬ ಕಾಡಿನಲ್ಲಿ ಕೈತಪ್ರಚಾರಕರಾದ ಶಂಕರರು ಸದ್ಯುಕ್ತಿಗಳೆಂಬ ತೀಕ್ಷ್ಣಗಳಾದ ನಖಗಳಿಂದ ಕೂಡಿದವರಾಗಿ ವಾದಿಗಳೆಂಬ ಆನೆಗಳ ಎದುರಿಗೆ ಸಿಹ್ಮದಂತೆ ಪ್ರಕಾಶಿಸಿದರು.

ಯತಿಯೆಂಬ ಸಮುದ್ರದಲ್ಲಿ ಹುಟ್ಟಿದ ಭಾಷ್ಯವೆಂಬ ಚಂದ್ರನು ವಿಬುಧ (ದೇವತೆಗಳು ಮತ್ತು ವಿದ್ವಾಂಸರುಗಳು) ರಿಗೆ ಅಮೃತ (ಅವ್ಯತ ಮತ್ತು ಮೋಕ್ಷ) ವನ್ನು ಕೊಟ್ಟು ವಾಗ್ಲಕ್ಷಣಗಳೆಂಬ ಕಿರಣಗಳಿಂದ ಕುಮತಗಳೆಂಬ ಅಂಧಕಾರಗಳನ್ನು ತೊಲಗಿಸಿ ಬ್ರಾಹ್ಮಣರ ಮನಸ್ಸೆಂಬ ಚಕೋರಗಳನ್ನು ಸಂತೋಷಪಡಿಸಿದನು; ಮತ್ತು, ವಿಷ್ಣುವಿನ ಪಾದದಿಂದ ಗಂಗೆಯು ಅವತರಿಸಿದಳು; ಶಂಕರನ ಮುಖದಿಂದ ಭಾಷ್ಯವೆಂಬ ಸೂಕ್ತಿಯು ಹೊರಟಿತು; ಗಂಗೆಯು ತನ್ನಲ್ಲಿ ಮುಳಿಗಿದವರನ್ನುದ್ಧರಿಸುತ್ತದೆ; ಶಂಕರಭಾಷ್ಯವು ಸಂಸಾರಸಾಗರದಲ್ಲಿ ಮುಳಿಗಿಹೋಗಿದ್ದವರನ್ನೂ ಉದ್ಧರಿಸುತ್ತದೆ.

ಹೀಗೆ ಮಹಾಮಹಿಮೆಯುಳ್ಳ ಶಂಕರಭಾಷ್ಯಾಮೃತವು ಶಿಷ್ಯವರ್ಗದಮೇಲೆ ಸಿಂಚಿಸಲ್ಪಟ್ಟು ಅವರನ್ನು ಜ್ಞಾನಮಾರ್ಗಗಾಮಿಗಳನ್ನಾಗಿ ಮಾಡುತ್ತಾ ಮೋಕ್ಷದಾಯಕವಾಗಿ ಪ್ರಕಾಶಿಸುತ್ತಿದ್ದಿತು.

ಸಪ್ತಮವಲ್ಲರೀ.

ವ್ಯಾಸೇ ವೃದ್ಧಮಜೀಸುರಾಕೃತಿಯುತೇ ಭಾಷ್ಯಾದಿ ವೀಕ್ಷ್ಯ ಸ್ವಕಂ
ಪ್ರಾಪ್ತೇಂತರ್ಧಿಮಥ ಪ್ರಯಾಗಮುಪಲಭ್ಯಾಯೋ೯ ತುಷಾಗ್ನಿಸ್ಥಿತಂ|
ಭಟ್ಟಾರ್ಯಂ ಹ್ಯುಪದಿಶ್ಯ ತತ್ರ ಚ ತತಶ್ಚ್ರೀಮಂಡನಂಶಾರದಾಂ
ಮಾಹಿಷ್ಮತ್ಯಭಿಧೇ ವಿಜಿತ್ಯ ನಗರೇ ವ್ಯಾಯಾದ್ದಿಶಂ ದಕ್ಷಿಣಾಮ್‌||

ಓಂ ದಾನೊಂದುದಿನ ಆಚಾರ್ಯರು, ಗಂಗಾತೀರದಲ್ಲಿ ಶಿಷ್ಯರಿಗೆ ಭಾಷಳೆ ಪ್ರವಚನಮಾಡಿಸುತ್ತಿದ್ದಾಗ ಮಧ್ಯಾಹ್ನವಾಗಲು, ಆಯಾಸಗೊಂಡು, ಮಾಧ್ಯಾಹ್ನಿಕ ಸ್ನಾನಕ್ಕೆ ಏಳುತ್ತಿರುವಾಗ ಓರ್ವ ವೃದ್ಧಬ್ರಾಹ್ಮಣನು ಬಂದು ಆಚಾರ್ಯರನ್ನು ಕುರಿತು ' ನೀನು ಯಾರು ? ಇವರಿಗೆ ಏನು ಹೇಳುತ್ತೀಯೆ ? ' ಎನ್ನಲು ಪದ್ಮಪಾದಾದಿಗಳು ' ಇವರು ನಮ್ಮ ಗುರುಗಳು; ವೇದಾಂತಭಾಷ್ಯಕಾರರು; ಬ್ರಹ್ಮಸೂತ್ರಭಾಷ್ಯವನ್ನು ನಮಗೆ ಬೋಧಿಸುತ್ತಿದ್ದಾರೆ ' ಎಂದರು.

ಅದನ್ನು ಕೇಳಿ ಆ ವೃದ್ಧಬ್ರಾಹ್ಮಣನು ಯಾವುದಾದರೂ ಒಂದು ಸೂತ್ರಕ್ಕೆ ಅರ್ಥವನ್ನು ಹೇಳೆನ್ನಲು ಶಂಕರರು ' ನನಗೆ ಅರ್ಥಜ್ಞನೆಂಬ ಅಹಂಕಾರವಿಲ್ಲ; ತಾವು ಯಾವುದಾದರೂ ಒಂದು ಸೂತ್ರವನ್ನು ಕೇಳಬಹುದು ' ಎಂದರು.

ಆಗ ವೃದ್ಧಬ್ರಾಹ್ಮಣನು ' ತದಂತರ ಪ್ರತಿಪತ್ತೌರಂಹತಿಸಂಪರಿಷ್ವಕ್ತಃ ಪ್ರಶ್ನನಿರೂಪಣಾಭ್ಯಾಮ್ ' ಎಂಬ ಸೂತ್ರವನ್ನು ಕೇಳಿ, ಶಂಕರರು ಹೇಳಿದ ಅರ್ಥದಮೇಲೆ ಅನೇಕ ವಿಕಲ್ಪಗಳನ್ನು ತೋರಿಸಿದರು.

ಶಂಕರರು ಅವುಗಳನ್ನೆಲ್ಲಾ ಖಂಡಿಸಲು ಇಬ್ಬರಿಗೂ ವಾದವು ಆರಂಭವಾಯಿತು.

ಸಮೀಪದಲ್ಲಿದ್ದ ಪದ್ಮಪಾದನು ಅವರಿಬ್ಬರನ್ನೂ ಧ್ಯಾನಿಸಿನೋಡಿ ಅವರನ್ನು ಹರಿಹರಸ್ವರೂಪರೆಂದು ತಿಳಿದು (ಶಂಕರಃ ಶಂಕರಃ ಸಾಕ್ಷಾತ್ ವ್ಯಾಸೋನಾರಾಯಣೋ ಹರಿಃ | ತಯೋರ್ವಿವಾದೆ ಸಂಪ್ರಾಪ್ತೆ ಕಿಂಕರಃ ಕಿಂಕರೋಮ್ಯಹಂ) '' ಶಂಕರಾವತಾರಿಗಳಾದ ಶಂಕರಾಚಾರ್ಯರಿಗೂ, ನಾರಾಯಣಾವತಾರಿಗಳಾದ ವ್ಯಾಸರಿಗೂ ವಿವಾದವ್ಯಾರಂಭವಾದರೆ ಕಿಂಕರನಾದ ನಾನು ಏನುಮಾಡಲು ಶಕ್ತನು ? '' ಎನ್ನಲು ಶಂಕರರು ತಕ್ಷಣದಲ್ಲಿ ವ್ಯಾಸರಿಗಭಿವಂದಿಸಿ ಸ್ತುತಿಸಲು ವ್ಯಾಸರು ತಮ್ಮ ನೈಜರೂಪವನ್ನು ತೋರಿಸಿದರು.

ಆಗ ವೇದವ್ಯಾಸರು ಆಚಾರ್ಯರನ್ನು ಕುರಿತು ‘‘ಯತಿಯೇ! ನೀನು ನನಗೆ ಸಮಾನನು; ನೀನು ನನ್ನ ತಾತ್ಪರ್ಯವನ್ನೇ ಚೆನ್ನಾಗಿ ಪ್ರಕಾಶಗೊಳಿಸಿದ್ದರಿಂದ ನನಗೆ ಸಂತೋಷವಾಯಿತು; ಹರಿಪಾದದಿಂದುದ್ಭವಿಸಿದ ಗಂಗೆಯು ತನ್ನಲ್ಲಿ ಸ್ನಾನಮಾಡಿದ ವರನ್ನು ಪರಿಶುದ್ಧಗೊಳಿಸುತ್ತದೆ; ನಿನ್ನ ಭಾಷ್ಯವು ತನ್ನನ್ನು ಕೇಳಿ ತಿಳಿದವರನ್ನು ಸಂರಕ್ಷಿಸುತ್ತದೆ’’ ಎಂದು ಸಂತಸದಿಂದುತ್ತರವಿತ್ತರು.

ಅನಂತರ ಶಂಕರರು‘‘ಗುರುಗಳೇ! ನನಗೆ ಇದು ಜನ್ಮಸೋಡಶವಾದ್ದರಿಂದ ಮಣಿಕರ್ಣಿಕಾಘಟ್ಟದಲ್ಲಿ ತಮ್ಮ ಚರಣಗಳ ಸಮೀಪದಲ್ಲಿ ದೇಹೋಪಾಧಿಯನ್ನು ಕಳೆಯಲು ಯತ್ನಿಸಿರುವೆನು’’ ಎನ್ನಲು ವ್ಯಾಸರು ಬ್ರಹ್ಮನನ್ನು ಧ್ಯಾನಿಸಿ ಪ್ರತ್ಯಕ್ಷನಾದ ಬ್ರಹ್ಮದೇವನನ್ನು ‘‘ಶಂಕರಯತಿಯು ಮಾಡಬೇಕಾದ ಕೆಲಸಗಳು ಬಹಳವಾಗಿವೆಯಾಗಿ ಮತ್ತಷ್ಟು ಆಯುಸ್ಸನ್ನು ಕೊಡಬೇಕು’’ ಎಂದು ಪ್ರಾರ್ಥಿಸಲು ಬ್ರಹ್ಮನು ಇನ್ನೂ ಹದಿನಾರುವರುಷ ಆಯುಸ್ಸನ್ನು ಕೊಟ್ಟು, ಅವರ ಭಾಷ್ಯವಂಕೇಳಿ ಸಂತುಷ್ಟನಾಗಿ ಅಂತರ್ಹಿತನಾದನು.

ಅನಂತರ ಶಂಕರರು ತಮ್ಮ ಭಾಷ್ಯಗಳಿಗೆ ಭಟ್ಟಪಾದರಿಂದ ವಾರ್ತಿಕವನ್ನು ಮಾಡಿಸಬೇಕೆಂದು ರುದ್ರಪುರಕ್ಕೆ ಪ್ರಯಾಣಮಾಡಿ ಅವರು ತುಷಾಗ್ನಿಪ್ರವೇಶಮಾಡಿರುವರೆಂದು ಕರ್ಣಾಕರ್ಣಿಕೆಯಾಗಿ ತಿಳಿದು, ಅಲ್ಲಿಗೆ ಬೇಗ ಹೋಗಿ ಅವರನ್ನು, ಈರೀತಿ ಏಕೆಮಾಡಿದಿರಿ? ಎಂದರು.

ಆದಕ್ಕೆ ಭಟ್ಟಪಾದರು ‘‘ಸ್ವಾಮಿ! ನಾನು ಸೌಗತಮತವಂ ತಿಳಿಯಲಿಚ್ಛಿಸಿ ಅವರ ಗುರುಗಳ ಬಳಿಗೆ ಹೋಗಿ ಅವರ ಸಿದ್ಧಾಂತವನ್ನು ಕೇಳುತಲಿದ್ದೆನು; ವೇದದೂಷಣಪ್ರಸ್ತಾಪ ಬಂದಾಗ ನನ್ನ ಕಣ್ಣಿನಲ್ಲಿ ನೀರು ಬಂದಿತು; ಆಗ ಅವರು ನನ್ನನ್ನು ಬ್ರಾಹ್ಮಣನೆಂದು ತಿಳಿದು ಉಪ್ಪರಿಗೆಯ ಮೇಗಣಿಂದ ತಳ್ಳಿಬಿಟ್ಟರು; ನಾನು ಅಲ್ಲಿಂದ ಬೀಳುವಾಗ ‘ವೇದಗಳು ಪ್ರಮಾಣವಾಗಿದ್ದರೆ ನನಗೇನೂ ಆಗಬೇಡ’ ಎಂದುಸುರಿದೆನು. ಅವುಗಳ ಪ್ರಭಾವದಿಂದಲೇ ನಾನು ಅಪಾಯರಹಿತನಾದೆನು‘ ಪ್ರಮಾಣವಾಗಿದ್ದರೆ’ ಎಂದು ಸಂದೇಹವನ್ನಾಡಿದ್ದರಿಂದ ನನ್ನ ಒಂದು ಕಣ್ಣು ಕುರುಡಾಯಿತು. ಅಲ್ಲಿಂದ ಮೊದಲು ನಾನು ನಾಸ್ತಿಕರುಗೆ ವಿರೋಧಿಯಾಗಿ ರಾಜನ ಮೂಲಕ ಬೌದ್ಧಕುಲವನ್ನೇ ನಾಶಮಾಡಿಬಿಟ್ಟೆನು. ಗುರುದ್ರೋಹಮಾಡಿದ್ದೊಂದುಪಾಪವು; ನಾಸ್ತಿಕರನ್ನು ತಕ್ಕ ಯುಕ್ತಿಗಳಿಂದ ಖಂಡಿಸಿ, ಜೈಮಿನಿಯ ನ್ಯಾಯಗಳಿಂದ ತರ್ಕಯುಕ್ತಿಗಳನ್ನು ಖಂಡಿಸಿದ್ದೊಂದುಪಾಪವು. ಈ ಎರಡು ಪಾಪಗಳ ನಿವೃತ್ತ್ಯರ್ಥವಾಗಿ ಈ ವ್ರತವನ್ನು ಕೈಕೊಂಡಿದ್ದೇನೆ. ತಮ್ಮ ದರ್ಶನದಿಂದ ನಾನು ಕೃತಾರ್ಥನಾದೆನು. ನನಗೆ ತಾರಕೋ

ಪದೇಶವನ್ನು ಮಾಡಬೇಕೆಂದು ಹೇಳಿ ಆಚಾರ್ಯರು ಬಂದ ಕಾರಣವನ್ನು ತಿಳಿದು ಕೊಂಡು '' ತಮ್ಮ ಭಾಷ್ಯಕ್ಕೆ ವಾರ್ತಿಕಮಾಡುವಬಗ್ಗೆ ನನ್ನ ಶಿಷ್ಯನೂ, ಕರ್ಮವಾ ದಿಯೂ, ಆದ ಮಂಡನಮಿಶ್ರನು ಆರ್ಯಾವರ್ತದಲ್ಲಿದ್ದಾನೆ; ನೀವು ಆತನನ್ನು ವಾದ ದಲ್ಲಿ ಸೋಲಿಸಿ ನಿಮ್ಮಿಷ್ಟವನ್ನು ನೆರವೇರಿಸಿಕೊಳ್ಳಬಹುದು'' ಎಂದು ಆಚಾರ್ಯರಿಗೆ ಹೇಳಲು, ಆಚಾರ್ಯರು ಭಟ್ಟಪಾದರನ್ನು ಆ ವ್ರತವನ್ನು ಬಿಡುವಂತೆ ಬಹಳವಾಗಿ ಹೇಳಿ ದರೂ ಅದು ನಿಷ್ಪ್ರಯೋಜನವಾಗಲು, ಅವರ ಇಷ್ಟದಂತೆ ತಾರಕೋಪದೇಶವಂಗೈದು ಸಶಿಷ್ಯರಾಗಿ ಮಾಹಿಷ್ಮತೀನಗರದ ಕಡೆ ತೆರಳಿದರು.

ಆ ನಗರವಂ ತಲುಪಿದನಂತರ ಆಚಾರ್ಯರು ಮಂಡನಪಂಡಿತನ ಮನೆಯ ಸಮೀಪಕ್ಕೆ ಹೋದರು.

ಆ ದಿನ ಮಂಡನಪಂಡಿತನ ತಂದೆಯ ಶ್ರಾದ್ಧವಾದ್ದರಿಂದ, ಮಂಡನಪಂಡಿತನು ಮನೆಬಾಗಿಲುಗಳನ್ನು ಮುಚ್ಚಿ ವ್ಯಾಸರನ್ನು ಪಿತೃಸ್ಥಾನದಲ್ಲಿಯೂ, ಜೈಮಿನಿಗಳನ್ನು ವಿಶ್ವೇದೇವಸ್ಥಾನದಲ್ಲಿಯೂ, (ಅವರಿಬ್ಬರಿಗೂ ಸಮಾನರಾದ ಬ್ರಾಹ್ಮಣರು ದೊರೆಯು ದಕಾರಣ) ಲಕ್ಷ್ಮೀನಾರಾಯಣಮೂರ್ತಿ ಸಾಲಿಗ್ರಾಮವನ್ನು ವಿಷ್ಣುಸ್ಥಾನದಲ್ಲಿಯೂ ಇಟ್ಟು ಅರ್ಚಿಸುತ್ತಿದ್ದನು. ಆಗ ಶಂಕರರು ಯೋಗಶಕ್ತಿಯಿಂದ ಪಂಡಿತನ ಮನೆಯ ಒಳಕ್ಕೆಹೋಗಿ ಇದು ಒಳ್ಳೆಯಸಮಯವೆಂದರಿತು ಅವರ ಸಮೀಪಕ್ಕೆ ಹೋದರು.

ಆಗ ಮಂಡನಪಂಡಿತನಿಗೂ ಆಚಾರ್ಯರಿಗೂ ಈಕೀತಿ ಪ್ರಶ್ನೋತ್ತರಗಳು ನಡೆದವು :

ಮಂ ಪಂ:—''ಸನ್ಯಾಸಿಯು ಎಲ್ಲಿಂದಬಂದವನು'' ಎಂಬರ್ಥದಿಂದ '' ಕುತೋ ಮುಂಡೀ'' ಎನ್ನಲು.

ಶಂ. ಯ.:—'' ಮುಂಡೀ'' ಎಂಬ ಶಬ್ದಕ್ಕೆ '' ಬೋಳ'' ಎಂದರ್ಥವಂ ಮಾಡಿ, '' ಆಗಳಾನ್ಮುಂಡೀ'' (ಕತ್ತಿನಿಂದಮೇಲೆ ಬೋಳ) ಎಂದರು.

ಮಂ. ಪಂ:—' ಕುತಃ' ಎಂಬ ಶಬ್ದದಿಂದ ದಾರಿಯನ್ನು ಕೇಳಿದ್ದೇನೆಂದು ಹೇಳಿ '' ಪಂಥಾಸ್ತೇಪೃಚ್ಛತೇಮಯಾ '' (ನಿನ್ನ ದಾರಿಯು ನನ್ನಿಂದ ಕೇಳಲ್ಪಡುತ್ತದೆ) ಎಂದನು.

ಶಂ. ಯ.:—'' ನಿನ್ನನ್ನು ಕೇಳುವುದಿಲ್ಲ; ನಿನ್ನ ದಾರಿಯನ್ನು ಕೇಳುತ್ತೇನೆ'' ಎಂದರ್ಥಮಾಡಿಕೊಂಡು '' ಕಿಮಾಹಪಂಥಾಃ'' (ದಾರಿಯು ಏನುಹೇಳಿತು) ಎಂದರು.

ಮಂ. ಪಂ.:—'' ತ್ವನ್ಮಾತಾಮುಂಡೇತ್ಯಾಹ'' (ನಿನ್ನ ತಾಯಿಯು ಮುಂಡೆ ಎಂದಿತು ಅಂದರೆ ' ಮುಂಡೆಮಗನೇ' ಅಂದಿತು, ಎಂದುತ್ತರವಿತ್ತನು.

ಶಂ. ಯ.:—“ ಆ ಉತ್ತರವು ಪೃಚ್ಛಕನಾದ ನಿನಗೆ ಸೇರುವುದೇಹೊರತು ನನಗಲ್ಲವು ” ಎಂದು ಹೇಳಿ “ ಹಾಗನ್ನಿಸಿಕೊಂಡೆಯಾ ” ಎಂದರು.

ಮಂ. ಪಂ:—(ಕೋಪದಿಂದ) “ ಸುರಾಪೀತಾವಾ ” (ಹೆಂಡವು ಕುಡಿಯಲ್ಪಟ್ಟಿದೆಯೋ?) ಎನ್ನಲು—

ಶಂ. ಯ.:—“ ಪೀತ ” ಶಬ್ದಕ್ಕೆ “ ಹಳದಿ ” ಎಂದರ್ಥಮಾಡಿ “ ಹೆಂಡವುಹಚ್ಚಗಿಲ್ಲ ” ; ಆದರೆ “ ಶ್ವೇತಾ ” (ಬಿಳುಪು) ಎಂದರು.

ಮಂ. ಪಂ.:—(ಮತ್ತಷ್ಟು ಕೋಪದಿಂದ) “ ಕೆಂತ್ಪಂಜಾನಾಸಿತದ್ವರ್ಣಮ್? ” (ಸನ್ಯಾಸಿಗೆ ಅದರ ಬಣ್ಣವು ಹೇಗೆ ತಿಳಿಯಿತು ? ”

ಶಂ.ಯ.:—“ ಅಹಂವರ್ಣಂಭವಾನ್ರಸಮ್ ” (ಸನ್ಯಾಸಿಗೆ ಬಣ್ಣ ತಿಳಿಯುವುದು; ಗೃಹಸ್ಥನಿಗೆ ರುಚಿ ತಿಳಿಯುವುದು.)

ಮಂ. ಪಂ.:—ಎಲೈ ಯತಿಯೇ! ಕತ್ತೆಯಿಂದಲೂ ಹೊರಲಸಾಧ್ಯವಾದ ಕಂತೆಯನ್ನು ಹೊದ್ದಿರುವ ನಿನಗೆ ಜುಟ್ಟು ಜನಿವಾರಗಳಿಂದ ಭಾರವಾಯಿತೇ?

ಶಂ. ಯ.:—ಮೂಢಮತಿಯೇ! ಅದು ನಿನಗೆ ಭಾರವಲ್ಲ; ವೇದಕ್ಕೆ ಭಾರವು;

ಮಂ. ಪಂ.:—“ ಮತ್ತೋ ಜಾತಃ ಕಳಂಜಾಸೀ ವಿಪರೀತಾನಿ ಭಾಷಸೇ ? ” (ಮಾಂಸಭಕ್ಷಕನೂ, ಮತ್ತು ಮತ್ತನೂ, ಆಗಿರುವುದರಿಂದಲೇ ಈ ವ್ಯತ್ಯಾಸಗಳಾದ ಮಾತುಗಳನ್ನಾಡುತ್ತೀಯೆ ” ಎನ್ನಲು

ಶಂ. ಯ.:—“ ಮತ್ತೋಜಾತಃ ” ಎಂಬುದಕ್ಕೆ “ ನನ್ನಿಂದ ಹುಟ್ಟಿದವನು ” ಎಂದರ್ಥಮಾಡಿ “ಸತ್ಯಂ ಬ್ರವೀಷಿ ಪಿತೃವತ್ತ್ವತ್ತೋಜಾತಃ ಕಳಂಜಭುಕ್ ” (ನೀನು ಹೇಳಿದ್ದು ನ್ಯಾಯವೇ; ನೀನು ಮಾಂಸಭಕ್ಷಕನಾದಕಾರಣ ನಿನ್ನ ಮಗನೂ ಮಾಂಸಭಕ್ಷಕನು) ಎಂದರು.

ಮಂ. ಪಂ.:—“ ತ್ಯಕ್ತ್ವಾ ಪಾಣಿಗೃಹೀತಿಂ ಸ್ವಾಂ ಅಶಕ್ತ್ಯಾ ಪರರಕ್ಷಣೇ ಶಿಷ್ಯಪುಸ್ತಕಭಾರೇಜ್ಝೋಃ ವ್ಯಾಖ್ಯಾತಾ ಬ್ರಹ್ಮನಿಷ್ಠತಾ ” (ಮದುವೆಯಾದರೆ ಹೆಂಡತಿಯನ್ನು ಅನ್ನವಸ್ತ್ರಗಳಿಂದ ರಕ್ಷಿಸಬೇಕಾಗಿ ಬರುತ್ತದೆ ಎಂದು ತಿಳಿದು, ಶಿಷ್ಯರನ್ನೂ ಪುಸ್ತಕಗಳನ್ನೂ ಸಂಗ್ರಹಿಸಲಿಚ್ಛೆಯುಳ್ಳ ನಿನ್ನಿಂದ ಬ್ರಹ್ಮಜ್ಞಾನತತ್ತ್ವವು ತೋರಿಸಲ್ಪಡುತ್ತದೆ) ಎನ್ನಲು—

ಶಂ. ಯ.:—“ ಗುರುಶುಶ್ರೂಷಣಾಲಸ್ಯಾತ್ ಸಮಾವೃತ್ಯ ಗುರೋಃಕುಲಾತ್ ಸ್ತ್ರಿಯಶ್ಚ ಶ್ರೂಷಮಾಣಸ್ಯ ವ್ಯಾಖ್ಯಾತಾ ಕರ್ಮನಿಷ್ಠತಾ ” (ಗುರುಸೇವೆಮಾಡುವುದ

ರಲ್ಲಿ ಸೋಮಾರಿಯಾಗಿ ಸಮಾವರ್ತನೆ ಎಂಬ ನೆವದಿಂದ, ಹೆಂಗಸರನ್ನು ಸೇವಿಸಲೋ ಸುಗ ನಿನ್ನಿಂದೆ ಕರ್ಮತತ್ವವು ತೋರಿಸಲ್ಪಡುತ್ತದೆ) ಎಂದರು.

ಮಂ. ಪಂ.!—" ಸ್ಥಿತೋಸಿ ಯೋಷಿತಾಂ ಗರ್ಭೆ ತಾಭಿರೇವ ವಿವರ್ಧಿತಃ | ಅಹೋಕೃತಘ್ನತಾ ಮೂರ್ಖ ಕಥಂ ತಾಏವ ನಿಂದಸಿ" (ಹೆಂಗಸರ ಗರ್ಭದಲ್ಲಿದ್ದು, ಅವರಿಂದಲೇ ವರ್ಧಿಸಲ್ಪಟ್ಟವನಾಗಿ ಅವರನ್ನೇ ನಿಂದಿಸುವ ನೀನು ಕೃತಘ್ನನೇಸರಿ) ಎನ್ನಲು

ಶಂ. ಯ.!—" ಯಾಸಾಂ ಸ್ತನ್ಯಂ ತ್ವಯಾ ಪೀತಂ ಯಾಸಾಂ ಜಾತೋಸಿ ಯೋನಿತಃ | ತಾಸು ಮೂರ್ಖತಮ ಸ್ತ್ರೀಷು ಪಶುವದ್ರಮಸೇ ಕಥಮ್ "(ಎಲೈ ಮೂರ್ಖನೇ ! ಯಾರ ಸ್ತನ್ಯವು ನಿನ್ನಿಂದ ಕುಡಿಯಲ್ಪಟ್ಟಿತೋ, ಯಾರಯೋನಿಯು ದೆಸೆಯಿಂದ ನೀನು ಹುಟ್ಟಿದೆಯೋ, ಅಂಥಾ ಹೆಂಗಸರಲ್ಲಿಯೇ ಪಶುಜಾತಿಯಂತೆ ಹೇಗೆ ರಮಿಸುವೇ ?) ಎಂದರು.

ಮಂ. ಪಂ.:—" ವೀರಹತ್ಯಾಮವಾಪ್ತೋಸಿ ವಹ್ನೀನುದ್ವಾಸ್ಯ ಯತ್ನತಃ| ಆತ್ಮ ಹತ್ಯಾಮವಾಪ್ತ ಸ್ತ್ವಮವಿದಿತ್ವಾ ಪರಂ ಪದಮ್ || ದ್ವಾವಾರಿಕಾ೯ವಂಚಯಿತ್ವಾ ಕಥಂ ಸ್ತೇನವದಾಗತಃ "(ನೀನು ಗಾರ್ಹಪತ್ಯಾದ್ಯಗ್ನಿಪರಿತ್ಯಾಗವನ್ನು ಮಾಡಿರುವುದರಿಂದ ವೀರಹತ್ಯಾದೋಷಕ್ಕೆ ಪಾತ್ರನಾದೆ; ಕೇವಲ ಬ್ರಹ್ಮಸ್ವರೂಪವೂ ತಿಳಿಯದೇಇರುವುದರಿಂದ ಆತ್ಮಹತ್ಯಾದೋಷಕ್ಕೆ ಗುರಿಯಾದೆ; ಆದರೂ ಬಾಗಲಿನಲ್ಲಿದ್ದವರನ್ನು ವಂಚಿಸಿ ಒಳಗೆ ಹೇಗೆ ಬಂದೆ ?) ಎನ್ನಲು —

ಶಂ. ಯ.:—" ಭಿಕ್ಷುಭ್ಯೋ s ನ್ನಮದತ್ವಾ ತ್ವಂ ಶ್ವೇನವದ್ಭುಕ್ಷಸೇ ಕಥಮ್ " (ಮಧ್ಯಾಹ್ನಕಾಲಕ್ಕೆ ಬಂದ ಭಿಕ್ಷುಕರಿಗೆ ಅನ್ನವನ್ನು ಕೊಡದೆ ಗಿಡುಗನಂತೆ ನೀನು ಹೇಗೆ ಅನ್ನವನ್ನು ತಿನ್ನುವೆ ?) ಎಂದರು.

ಮಂ. ಪಂ.:—" ಕರ್ಮಕಾಲೇ ನ ಸಂಭಾಷ್ಯಃ ಅಹಂ ಮೂರ್ಖೇಣ ಸಂಪ್ರತಿ " (ಕರ್ಮಮಾಡತಕ್ಕ ಸಮಯದಲ್ಲಿ ನಾನು ಮೂರ್ಖರೊಡನೆ ಮಾತನಾಡಲರ್ಹನಲ್ಲವು) ಎನ್ನಲು—ಶಂಕರರು ಮಂಡನನು ಹೇಳಿದ ವಾಕ್ಯದಲ್ಲಿ ಯತಿಭಂಗದೋಷವನ್ನು ಕಂಡು

" ಅಹೋ ಪ್ರಕಟಿತಂ ಜ್ಞಾನಂ ಯತಿಭಂಗೇನ ಭಾಷಿಣಾ " (ಯತಿಭಂಗದಿಂದ ಮಾತನಾಡಿದ ನಿನ್ನ ಮಾತಿನಲ್ಲಿ ನಿನ್ನ ಜ್ಞಾನವು ಕಪಟವಾಯಿತು) ಎಂದರು.

ಮಂ. ಪಂ.:—" ಯತಿಭಂಗೇ ಪ್ರವೃತ್ತಸ್ಯ ಯತಿಭಂಗೋ ನ ದೋಷಭಾಕ್ " (ಯತಿಭಂಗದಲ್ಲಿ ತೊಡಗಿರುವವನಿಗೆ ಯತಿಭಂಗದೋಷವಿಲ್ಲ) ಎನ್ನಲು—

ಶಂ. ಯ.:—" ಯತಿಭಂಗೆ ಪ್ರವೃತ್ತಸ್ಯ ಪಂಚಮ್ಯಂತಂ ಸಮಸ್ಯತಾಮ್ " (ಯತಿಭಂಗವೆಂಬ ಶಬ್ದದಲ್ಲಿ ಷಷ್ಠ್ಯೀತತ್ಪುರುಷಕ್ಕೆ ಬದಲಾಗಿ ಪಂಚಮಿಯಾ ತತ್ಪುರುಷವನ್ನು ಮಾಡು) ಎಂದರು.

ಮಂ. ಪ.:—" ಕ್ವ ಬ್ರಹ್ಮ ಕ್ವ ಜ ದುರ್ಮೇಧಾಃ ಕ್ವ ಸನ್ಯಾಸಃ ಕ್ವ ವಾ ಕಲಿಃ | ಸ್ವಾದ್ವನ್ನಂಜಗ್ಧುಕಾಮೇನ ವೇಷೋಯಂ ಯೋಗಿನಾ ಧೃತಃ " (ಬ್ರಹ್ಮವೆಲ್ಲಿ? ದುರ್ಬುದ್ಧಿಯಾದನೀನೆಲ್ಲಿ ? ಸನ್ಯಾಸವೆಲ್ಲಿ ? ಕಲಿಯುಗವೆಲ್ಲಿ ? ರುಚಿಯಾದ ಅನ್ನಭಕ್ಷಣೆಗೋಸ್ಕರ ಯೋಗಿಯಾದ ನಿನ್ನಿಂದ ಈ ವೇಷವು ಧರಿಸಲ್ಪಟ್ಟಿದೆ.) ಎನ್ನಲು—

ಶಂ. ಯ.:—" ಕ್ವ ಸ್ವರ್ಗಃ ಕ್ವ ದುರಾಚಾರಃ ಕ್ವಾಗ್ನಿಹೋತ್ರಂ ಕ್ವ ವಾ ಕಲಿಃ | ಮನ್ಯೇ ಮೈಥುನಕಾಮೇನ ವೇಷೋ s ಯಃ ಕರ್ಮಿಣಾ ಧೃತಃ || " ಸ್ವರ್ಗವೆಲ್ಲಿ ? ದುರಾಚಾರಿಯಾದ ನೀನೆಲ್ಲಿ? ಅಗ್ನಿಹೋತ್ರವೆಲ್ಲಿ ? ಕಲಿಯುಗವೆಲ್ಲಿ ? ಮೈಥುನಾಭಿಲಾಷೆಯಿಂದ ಕರ್ಮಿಷ್ಠರ ವೇಷವನ್ನು ಧರಿಸಿರುತ್ತೀಯೇ) ಎಂದರು.

ಹೀಗೆಯೇ ಇವರಿಬ್ಬರಿಗೂ ಬಹಳಕಾಲ ವಕ್ರೋಕ್ತಿಯುಕ್ತಗಳಾದ ಪ್ರಶ್ನೋತ್ತರಗಳು ನಡೆದವು.

ಅನಂತರ ಮಂಡನಮಿಶ್ರನು ವೇದವ್ಯಾಸ ಜೈಮಿನಿಗಳ ಬುದ್ಧಿವಾದದಿಂದ ವಕ್ರೋಕ್ತಿಯನ್ನು ಬಿಟ್ಟು, ಆಚಾರ್ಯರನ್ನು ವಿಷ್ಣುಸ್ಥಾನದಲ್ಲಿ ಕೂಡುವಂತೆ ಪ್ರಾರ್ಥಿಸಿದನು.

ಅದಕ್ಕೆ ಆಚಾರ್ಯರು " ನಾನು ಅನ್ನಭಿಕ್ಷಾರ್ಥಿಯಾಗಿ ಬಂದವನಲ್ಲ; ವಾದಭಿಕ್ಷಾರ್ಥಿಯಾಗಿ ಬಂದಿರುವೆನು " ಎಂದರು.

ಆ ವಾಕ್ಯವನ್ನು ಕೇಳಿ ಮಂಡನಪಂಡಿತನು " ನಾನೂ ಅದನ್ನೇ ಅಪೇಕ್ಷಿಸುತ್ತಲಿದ್ದೆನು; ನಾಳೆಯದಿನ ವಾದಭಿಕ್ಷೆಯಾಗಲೀ; ಈ ದಿನ ಅನ್ನಭಿಕ್ಷೆಯಾಗಲೀ; " ಎಂದುತ್ತರವನ್ನಿತ್ತಲು ಆಚಾರ್ಯರು ಅವನ ಮಾತಿನಂತೆ ವಿಷ್ಣುಸ್ಥಾನದಲ್ಲಿ ಕುಳಿತರು. ಆಕರ್ಮಾನಂತರ ಆಚಾರ್ಯರು ಯೋಗಶಕ್ತಿಯಿಂದ ಊರುಬೊರಗಿಳಿದಿರುವ ತಮ್ಮ ಶಿಷ್ಯರಲ್ಲಿಗೆ ಬಂದು ಅಂದಿನ ಸಂಗತಿಗಳನ್ನೆಲ್ಲಾ ಅವರಿಗೆ ತಿಳಿಯಿಸಿ ಮಾರನೇದಿನ ಪ್ರಾತಃಕಾಲ ಸ್ವಕರ್ಮಾನಂತರ ಸಶಿಷ್ಯರಾಗಿ ಮಂಡನಪಂಡಿತನ ಮನೆಗೆ ಹೋದರು. ಸರಸ್ವತಿಯೇ ಮಾಧ್ಯಸ್ಥ್ಯವನ್ನು ವಹಿಸಿದಳು.

ಆಗ ಸರಸ್ವತಿಯು ಇಬ್ಬರ ಕೊರಳಿನಲ್ಲೂ ಒಂದೊಂದು ಪುಷ್ಪಮಾಲಿಕೆಯನ್ನು ಹಾಕಿ " ಯಾರಕೊರಳಿನ ಪುಷ್ಪಮಾಲೆಯು ಬಾಡುವುದೋ ಅವರು ಸೋತವರಂತೆ ಎಣಿಸಲ್ಪಡುತ್ತಾರೆ" ಎಂದಳು.

ಅವರ ಶಪಥವೇನೆಂದರೆ ಶಂಕರಯತಿಯು ಸೋತರೆ, ಸನ್ಯಾಸವನ್ನು ಬಿಟ್ಟು ಮಂಡನಪಂಡಿತನ ಶಿಷ್ಯನಾಗಬೇಕು; ಮಂಡನಪಂಡಿತನು ಸೋತರೆ ಗೃಹಸ್ಥಾಶ್ರಮವನ್ನು ಬಿಟ್ಟು ಸನ್ಯಾಸಾಶ್ರಮ ಸ್ವೀಕಾರಮಾಡಿ ಶಂಕರಯತಿಯ ಶಿಷ್ಯನಾಗಬೇಕು. ಹೀಗೆ ಶಪಥಮಾಡಿ ವಾದಮಾಡಲುಕ್ರಮಿಸಿದರು.

ಆಗ ಮಂಡನಪಂಡಿತನು ‘‘ಕಲಿಯುಗದಲ್ಲಿ ಸನ್ಯಾಸವು’’ ಅಶ್ವಾಲಂಭಂಗವಾಲಂಭಂ ಸನ್ಯಾಸಂ ಪಲಪೈತೃಕಮ್ | ದೇವರೇಣಸುತೋತ್ಪತ್ತಿಃ ಕಲೌಪಂಚವಿವರ್ಜಯೇತ್, ಎಂಬ ಪ್ರಮಾಣವಚನದಿಂದ ತಿರಸ್ಕರಿಸಲ್ಪಟ್ಟಿದ್ದರೂ ನಿನ್ನಿಂದ ಹೇಗೆ ಸ್ವೀಕರಿಸಲ್ಪಟ್ಟಿತು?

‘‘ಯಜ್ಞೋಪವೀತಂ ಸರ್ವೇಷಾಂದ್ವಿಜಾನಾಂಮುಕ್ತಿ ಸಾಧನಮ್| ಪರಿತ್ಯಜಂತಿಯೇಮೋಹಾತ್ತೇವೈನಿರಯಗಾಮಿನಃ||’’ ಎಂಬ ಸ್ಮರಣದಂತೆ ಯಜ್ಞೋಪವೀತತ್ಯಾಗವು ದೂಷ್ಯವಲ್ಲವೆ?

‘ಚತ್ವಾರೋಪ್ಯಾಶ್ರಮಾಪ್ಯೇತೆಯಜ್ಞಾಧ್ಯಯನವರ್ಜಿತಾಃ | ಬ್ರಾಹ್ಮಣ್ಯಾದೇವ ಹೀಯಂತೆ’ ||.....ಎಂಬ ವಚನದಂತೆ ಯಜ್ಞಾದಿಕರ್ಮಪರಿತ್ಯಾಗವು ಬ್ರಾಹ್ಮಣ್ಯಕ್ಕೆ ಹಾನಿಕರವಲ್ಲವೇ?

‘ವೇದೋಕ್ತಮಾಹರನ್ಮತ್ಯೋನರಕಂ ನೈವಪಶ್ಯತಿ’ ಎಂಬ ಆಧಾರದಿಂದ ವೇದೋಕ್ತಕರ್ಮಗಳಂ ಮಾಡುವನನಿಗೆ ನರಕಬಾಧಗಳು ತಪ್ಪುವುದಲ್ಲವೇ?

‘ಸತ್ಕರ್ಮಾಜರಣೇನಿನ್ಯಂಜ್ಞಾನವಾಕ್ ಭಕ್ತಿಮಾರ್ಕವಿದುಃ’ ಎಂಬ ಪ್ರಮಾಣದಿಂದ ವೇದೋಕ್ತಕರ್ಮವಮಾಡುವವನೇ ಜ್ಞಾನಿಯಲ್ಲನೇ?

ಇತ್ಯಾದಿ ವಚನಗಳಿಂದ ನಿಷಿದ್ಧವಾದ ಸನ್ಯಾಸವನ್ನು ನೀನು ಹೇಗೆ ಸ್ವೀಕರಿಸಿದೆ? ಎನ್ನಲು—

ಶಂಕರದೇಶಿಕರು ‘‘ಎಲೈ, ಮೂಢನೇ! ‘ಯಾನದ್ವರ್ಣವಿಭಾಗೋಸ್ತಿಯಾವದ್ವೇದಃಪ್ರವರ್ತತೇ | ಸನ್ಯಾಸಶ್ಚಾಗ್ನಿಹೋತ್ರಂ ಚ ತಾವದೇವಕಲೌಯುಗೇ ||’ ಎಂಬ ವಾಕ್ಯದಿಂದ ‘ಚಾತುರ್ವರ್ಣ್ಯವಿಭಾಗವೂ, ವೇದಗಳೂ, ಎದುವರಿವಿಗೆ ಪ್ರಚಾರದಲ್ಲಿರುವುವೋ ಆದುವರಿವಿಗೂ ಸನ್ಯಾಸವೂ, ಅಗ್ನಿಹೋತ್ರವೂ, ಕಲಿಯುಗದಲ್ಲಿ ಉಂಟು’ ಎಂದು ಇರುವುದರಿಂದ ಸನ್ಯಾಸವು ಹೇಗೆ ನಿಷಿದ್ಧವು?

ವಪನಂಸಶಿಖಂಯೈತ್ಯಾತ್ಯಜೇತ್ಸೂತ್ರಂ ಬಹಿರ್ಧೃತಮ್ || ಬ್ರಹ್ಮೈವಸೂತ್ರಮಿತ್ಯುಕ್ತಂತಾದೃಕ್ಸೂತ್ರಂವಯೇದ್ಬುಧಃ | ಬಹಿಸೂತ್ರಂತ್ಯಜೇದ್ಯೋಗೀವಜೇನುಕ್ತ್ಯಾಪದೇಸ್ಥಿತಃ, (ಜ್ಞಾನಿಯು ಶಿಖೆಯನ್ನೂ, ಹೊರಗೆಧರಿಸಿರುವ ಸೂತ್ರವನ್ನೂ ಬಿಟ್ಟು 'ಬ್ರಹ್ಮ' ಎಂಬ ಸೂತ್ರವನ್ನು ಧರಿಸತಕ್ಕದ್ದು; ಜೀವನ್ಮುಕ್ತಿಕಾಮನು ಹೊರಗಿನ ಯಜ್ಞೋಪವೀತವನ್ನು ಪರಿತ್ಯಾಗಮಾಡಬೇಕು) ಎಂಬ ವಚನಗಳಿಂದ ಸೂತ್ರತ್ಯಾಗವು ಹೇಗೆ ದೂಷ್ಯವು?

'ಯೆಜಸಂತಾನಜಾದೋಷಾಃ ಯೇಚಸ್ಯುಃಕರ್ಮಸಂಭವಾಃ | ಸನ್ಯಾಸಸ್ತಾ೯ದ ಹೇತ್ಸರ್ವಾ೯.....|| ಮತ್ತು ಚತ್ವಾರೋಬ್ರಾಹ್ಮಣಸ್ಯೋಕ್ತಾಃ ಆಶ್ರಮಾಃಶ್ರುತಿಚೋದಿತಾಃ | ಕ್ಷತ್ರಿಯಸ್ಯತ್ರಯಃವೈಶ್ಯೋಕ್ತಾದ್ವಾವೇಕೋವೈಶ್ಯಶೂದ್ರಯೋಃ ||' (ಸಂತಾನಜಗಳಾದ ದೋಷಗಳೂ, ಕರ್ಮಜಗಳಾದ ದೋಷಗಳೂ ಸನ್ಯಾಸದಿಂದ ನಶಿಸಲ್ಪಡುತ್ತವೆ; ಮತ್ತು ಬ್ರಾಹ್ಮಣನಿಗೆ ನಾಲ್ಕು ಆಶ್ರಮಗಳಲ್ಲಿಯೂ ಅಧಿಕಾರವಿರುವುದರಿಂದ ಸನ್ಯಾಸ ಸ್ವೀಕಾರದಿಂದ ಬ್ರಾಹ್ಮಣ್ಯಪಾನಿಯು ಯೇಗೆ ?) ಎಂಬ ಪ್ರಮಾಣದಿಂದ ಸನ್ಯಾಸವು ಸಿಷ್ಟಿದ್ಧವಲ್ಲವಸ್ಟೆ!

'ಅಕ್ಷರಂಪರಮಂಬ್ರಹ್ಮಸದಾಧ್ಯಾಯ೯ಜಿತೇಂದ್ರಿಯಃ | ಶಿಖಾಂಯಜ್ಞೋಪವೀತಂಚನಿತ್ಯಕರ್ಮಪರಿತ್ಯಜೇತ್' (ಉತ್ಕೃಷ್ಟವೂ, ನಾಶರಹಿತವೂ ಆದ ಬ್ರಹ್ಮಸ್ವರೂಪವನ್ನು ಧ್ಯಾನಿಸುತ್ತಾ ಜಿತೇಂದ್ರಿಯನಾದವನು, ಶಿಖಾಯಜ್ಞೋಪವೀತ ಮತ್ತು ನಿತ್ಯಕರ್ಮಗಳನ್ನು ಪರಿತ್ಯಜಿಸಬೇಕು) ಎಂಬ ವಚನದಿಂದ, ಮೋಕ್ಷಾರ್ಥಿಯಾಗಿ ಕರ್ಮಬಿಟ್ಟವನಿಗೆ ನರಕಬಾಧೆಯು ಹೇಗೆ? ಮತ್ತು ಇವನಿಗೆ ಸ್ವರ್ಗಕ್ಕಿಂತ ಅಧಿಕವಾದ ಮೋಕ್ಷ ಪ್ರಾಪ್ತವಾಗಿರುವಾಗ ಸ್ವರ್ಗಾದಿಗಳಿಂದ ಪ್ರಯೋಜನವೇನು? ಎಂದು ಹೇಳಲು, ಮಂಡನಮಿಶ್ರರು ಪ್ರತ್ಯುತ್ತರ ಕೊಡಲು ಅಸಮರ್ಥರಾದ್ದನ್ನು ಕಂಡು, ಶಂಕರರು ಮೂಢನೇ! ಪೂರ್ವದಲ್ಲಿ ನೀನು ಏನು ಪ್ರಲಾಪಿಸಿದೆ? ಆಜೇತನವಾದ ಕರ್ಮವು ಹೇಗೆ ಮೋಕ್ಷಪ್ರದವು? ಆ ಮೋಕ್ಷವನ್ನು ಕೊಡತಕ್ಕದ್ದು ಶ್ರುತಿಸಮ್ಮತವಾದ ಬ್ರಹ್ಮವಲ್ಲವೇ? ಮತ್ತು ಉತ್ತಮವಾದ ಸನ್ಯಾಸಾಶ್ರಮವನ್ನು ದೂಷಿಸಿದವನು ಅವನಿಗಿಂತಲೂ ದೂಷ್ಯನಲ್ಲವೆ? ಎಂದು ಕೋಪದಿಂದ ಹೇಳಿದರು. ''

ಆಗ ಮಧ್ಯಸ್ಥಳಾಗಿದ್ದ ಶಾರದೆಯು ಜಾಗ್ರತೆ ಎದ್ದು, ಪ್ರತಿನಿತ್ಯವೂ, ಯತಿಗಳಾದ ಶಂಕರರನ್ನು ಮಾತ್ರ ಭಿಕ್ಷಕ್ಕೆ ಕರೆಯುತ್ತಿದ್ದಂತೆ ಆ ದಿನ ಪತಿಯತಿಗಳೀರ್ವ

ರನ್ನೂ ಭಿಕ್ಷಕ್ಕೆ ಕರೆದಳು. (ಹಿಂದಿನ ಶಪಥದಂತೆ ಮಂಡನಪಂಡಿತನು ಸೋತದ್ದನ್ನೂ, ಅವನ ಕೊರಳಿನ ಮಾಲಿಕೆಯು ಬಾಡಿದ್ದನ್ನೂ ಕಂಡು ಆಕೆಯು ಈರೀತಿ ಹೇಳಿದಳು.)

ಆಗ ಮಂಡನಮಿಶ್ರರು ಭಕ್ತಿಯಿಂದ ಮೇಲಕ್ಕೆದ್ದು ಆಚಾರ್ಯರಿಗೆ ನಮಸ್ಕರಿಸಿ ನಾನು ಮಾಡಿದ ಸನ್ಯಾಸಾಶ್ರಮನಿಂದೆಯನ್ನು ಕ್ಷಮಿಸಿ, ನನ್ನ ಅಜ್ಞಾನವನ್ನು ಹೋಗ ಲಾಡಿಸಿ, ಪುನೀತನನ್ನಾಗಿಮಾಡಿ ನನಗೂ ಸನ್ಯಾಸವನ್ನಿತ್ತು ತಮ್ಮ ಶಿಷ್ಯನನ್ನಾಗಿ ಮಾಡಿಕೊಳ್ಳಬೇಕು ಎಂದು ಪ್ರಾರ್ಥಿಸಲು ಶಂಕರಾಚಾರ್ಯರು ಮಂಡನಪಂಡಿತನಿಗೆ ಸನ್ಯಾಸವನ್ನು ಕೊಟ್ಟು, ಸತ್ಯಲೋಕಕ್ಕೆ ಹೋಗಬೇಕೆಂದು ಅಂತರಿಕ್ಷಕ್ಕೆ ಹಾರಿದ ಶಾರದೆಯನ್ನು ವನದುರ್ಗಾಮಂತ್ರದಿಂದ ಆ ಸಭೆಯಲ್ಲಿದ್ದ ಕೋಟ್ಯನುಕೋಟಿ ಪಂಡಿ ತರೆದುರಿಗೆ ಆಕರ್ಷಿಸಿ ಜನಗಳ ಪಿತಕ್ಕೋಸ್ಕರ ಭೂಮಿಯಲ್ಲಿ ನಿಲ್ಲಬೇಕೆಂದು ಆಕೆ ಯನ್ನು ಪ್ರಾರ್ಥಿಸಿದರು.

ಆಗ ಶಾರದೆಯು ಪತ್ನಿಯ ಪತಿಯ ಅರ್ಧಾಂಗಿಯೆಂಬುದು ಲೋಕವಿದಿತ ವಷ್ಟೆ. ಆದರಂತೆ ನನ್ನ ಪತಿಯು ಸೋತರೆ ನಾವಿಬ್ಬರೂ ಸೋತಂತಾಗುತ್ತೇವೆಯೇ? ನಿಮಗೆ ಅರ್ಧಜಯ ಬಂದಿರುವುದಲ್ಲದೇ ಪೂರ್ಣಜಯವಲ್ಲ; ನನ್ನನ್ನು ಸೋಲಿಸಿದಹೊ ರತು ಪೂರ್ಣಜಯ ಬರಲಾರದೆಂದಳು.

ಆಚಾರ್ಯರು ಮೊದಲು ನಾಪಕ್ಕೊಪ್ಪದಿದ್ದರೂ ಅನಂತರ ಒಪ್ಪಿದರು. ವಾದೋ ಪಕ್ರಮವಾಯಿತು.

ಶಾರದೆಯು ಆಚಾರ್ಯರನ್ನು ಕಾಮಶಾಸ್ತ್ರದಲ್ಲಿ ಪ್ರಶ್ನಿಸಲಾರಂಭಿಸಿದಳು.

ಆಚಾರ್ಯರು ಸರಿಯಾದ ಉತ್ತರವನ್ನೀಯದಿದ್ದರೆ ಸರ್ವಜ್ಞತ್ವಕ್ಕೆ ಭಂಗಬ ರುವುದು. ಉತ್ತರವನ್ನಿತ್ತರೆ ಯತಿಧರ್ಮಕ್ಕೆ ಭಂಗಬರುವುದು ಎಂದು ಯೋಚಿಸಿ, ಅದನ್ನು ತಿಳಿದುಕೊಂಡುಬರಲು ಒಂದುತಿಂಗಳು ವ್ಯವಧಾನವನ್ನು ತೆಗೆದುಕೊಂಡು ಸಶಿಷ್ಯರಾಗಿ ಹೊರಟರು. ಆನಂತರ ಶಂಕರರು ಅಮೃತಪುರವೆಂಬ ಪಟ್ಟಣದ ಹೊರಗೆ ನಿಂತು, ಆ ದೇಶದ ರಾಯನು ಮೃತನಾಗಿರಲು ಅವನ ಮಹಿಷಿಯರು ಪತಿಯ ಶವ ವನ್ನು ಸಕಲರಾಜಮರ್ಯಾದೆಗಳೊಡನೆ ಸ್ಮಶಾನಕ್ಕೆ ತೆಗೆಯಿಸಿಕೊಂಡುಹೋಗಿ ಅಳು ತ್ತಿರುವುದನ್ನು ಕಂಡು ಶಿಷ್ಯನನ್ನು ಕುರಿತು "ಎಲೈ ಸನಂದನೇ! ಇಲ್ಲಿನೋಡು; ಜಾಣೆ ಯರಾದ ಹಲವುಮಂದಿ ಯುವತಿಯರು ಸತ್ತ ತಮ್ಮ ಪತಿಯ ಸುತ್ತಲೂ ಪ್ರಲಾಪಿಸು

ತ್ತಲಿದಾರೆ. ನಾನು ಯೋಗಸಾಮರ್ಥ್ಯದಿಂದ ಆ ರಾಜನ ದೇಹಕ್ಕೆ ನನ್ನ ಆತ್ಮವನ್ನು ನುಗ್ಗಿಸಿ ಅವರಿಂದ ಕಳಾಶಾಸ್ತ್ರವನ್ನೆಲ್ಲಾ ಕಲಿತುಬರುವೆನು " ಎನ್ನಲು ಸನಂದನನು ಗುರುಗಳನ್ನು ಕುರಿತು " ಆಚಾರ್ಯರೇ! ಮತ್ಸ್ಯೇಂದ್ರಯೋಗಿಯೆಂಬುವನು ಪರಕಾಯ ಪ್ರವೇಶವಿದ್ಯಾಬಲದಿಂದ ತನ್ನ ದೇಹವನ್ನು ಶಿಷ್ಯನಾದ ಗೋರಕ್ಷನ ಬಳಿ ಇಟ್ಟು ಆತ್ಮವನ್ನು ಮೃತನಾಗಿರುವ ಓರ್ವ ಮಹಾರಾಜನ ದೇಹಕ್ಕೆ ನುಗ್ಗಿಸಲು, ಶವವು ಎದ್ದದ್ದನ್ನು ಕಂಡು ಎಲ್ಲರೂ ಭಯಾಶ್ಚರ್ಯಯುಕ್ತರಾಗಿ ಆ ದೇಹಕ್ಕೆ ಸಂಸ್ಕಾರಾದಿಗಳಂ ಮಾಡಿ ಪಟ್ಟಣಕ್ಕೆ ಕರೆದುಕೊಂಡುಹೋದನಂತರದಲ್ಲಿ ಮಂತ್ರಿಗಳು ಯಾರೋ ಯೋಗಿಗಳು ನಮ್ಮ ರಾಜನ ಸತ್ತದೇಹದಲ್ಲಿ ಸೇರಿ ವಿಲಾಸತೋರುಸುತ್ತಿರುವುದರಿಂದಲೇ ದುರ್ಭಿಕ್ಷವು ದೇಶದ ಯಾವಭಾಗದಲ್ಲಿಯೂ ಇಲ್ಲವೆಂದೂಹಿಸಿ ಆತನು ರಾಜಶರೀರವನ್ನು ಬಿಟ್ಟಹೋಗದೇ ಇರುವಹಾಗೆ ಮಾಡಲು, ನವಯೌವನಸಂಪನ್ನೆಯರಾದ ಅನೇಕಸುಂದರೀಮಣಿಗಳನ್ನು ಕೂಡಿಸಾಕಿ ತನ್ಮೂಲಕ ಆ ಯತಿಗೆ ಮೋಸಗೊಳಿಸಲು ಆ ಯತಿಯು ತನ್ನ ಸಮಾಧಿಯನ್ನು ಮರೆತು ಕಾಮಕ್ರೀಡಾಲಾಲಸನಾಗಿರುವ ಸಮಯದಲ್ಲಿ ಗೋರಕ್ಷನು ಗುರುದೇಹವನ್ನು ಬೇರೆಜನರ ರಕ್ಷಣೆಯಲ್ಲಿಟ್ಟು; ತಾನು ಭರತಾಚಾರ್ಯಸಂತೆ ವೇಷಧರಿಸಿ ಸರಿಯಾದ ಸಮಯದಲ್ಲಿ ರಾಜನಿಗೆ ತತ್ತ್ವೋಪದೇಶವಂ ಮಾಡಿ ಯತಿಯನ್ನು ಆ ದೇಹವನ್ನು ಬಿಟ್ಟುಬರುವಹಾಗೆ ಮಾಡಿದನೆಂಬ ಕಥೆಯು ಪ್ರಸಿದ್ಧವಾಗಿಲ್ಲವೆ? ಎಂದನು. ಅದನ್ನು ಕೇಳಿ ಆಚಾರ್ಯರು ಎಲೈ ಶಿಷ್ಯನೇ! ಕೃಷ್ಣನುರತಿಕ್ರೀಡಾಲೋಲನಾಗಿದ್ದರೂ ವಜ್ರೋಲಿಯೆಂಬ ಯೋಗದ ಮಹಿಮೆಯಿಂದ ಇಂದ್ರಿಯಸ್ಖಲನವಿಲ್ಲದವನಾಗಿ ಅನಾದಿ ಬ್ರಹ್ಮಚಾರಿ ಎಂಬ ಹೆಸರನ್ನು ಹೊಂದಲಿಲ್ಲವೆ? ಇದಲ್ಲದೇ ಇಂದ್ರನು ಯತಿಗಳನ್ನು ಕೊಂದು ತೋಳಗಳಿಗೆ ಹಾಕಿ ತ್ವಷ್ಟೃಬ್ರಹ್ಮನ ಮಗನನ್ನು ಕೊಂದನು. ಹೀಗೆ ಯತಿಹತ್ಯೆ ಬ್ರಹ್ಮಹತ್ಯೆಗಳೆಂಬ ಮಹಾ ಪಾಪಗಳನ್ನು ಮಾಡಿದರೂ ತನ್ನ ಒಂದು ರೋಮವನ್ನೂ ನೋಯಲಿಲ್ಲವೆಂದು ಆತ್ಮಜ್ಞಾನಪ್ರಭಾವವನ್ನೆ ಹೇಳಿರುವುದು ಋಗ್ವೇದದಿಂದ ತಿಳಿದುಬರುತ್ತದೆ; ಮತ್ತು ಜನಕನು ಅನೇಕದಕ್ಷಿಣೆಗಳಿಂದ ಯುಕ್ತಗಳಾದ ಕ್ರತುಗಳನ್ನು ಮಾಡಿ ದೇವತೆಗಳನ್ನೂ ಬ್ರಾಹ್ಮಣರನ್ನೂ ತೃಪ್ತಿಪಡಿಸಿದನು. ಹೀಗೆ ಮಾಡಿದಾಗ್ಯೂ ತತ್ಫಲಭೋಗಾರ್ಹವಾದ ಶರೀರವು ಬರದೇ ಮೋಕ್ಷವು ಬಂದಿತೆಂದು ಕಾಣ್ವಶಾಖೋಪನಿಷತ್ತುಗಳಿಂದ ತಿಳಿಯಬರುತ್ತದೆ. ಆದ್ದರಿಂದ ವ್ರತಭಂಗಶಂಕೆಯು ಬರಲಾರದು. ಎಂದು ಹೇಳಿ ತಮ್ಮ ದೇಹವನ್ನು ಒಂದು

ಭಂಡೆಯ ಪೊಟರೆಯಲ್ಲಿಟ್ಟು, ಅದನ್ನು ಕಾಪಾಡುವಂತೆ ಶಿಷ್ಯರಿಗೆ ಹೇಳಿ ತಮ್ಮ ಆತ್ಮವನ್ನು ಅಮರುಕರಾಯನ ದೇಹಕ್ಕೆ ಪ್ರವೇಶಗೊಳಿಸಲು, ಅಮರುಕರಾಯನು ಮೂರ್ಛೆಹೋಗಿ ಎದ್ದವನಂತೆ ಎದ್ದನು.

ಅದನ್ನು ನೋಡಿ ಆ ರಾಜನ ಪೂರ್ವವಯಸ್ಕರೂ ಸುಂದರಿಗಳೂ ಆದ ಪತ್ನಿಯರು, ಮತ್ತು ಮಂತ್ರಿಗಳು ಪುರೋಹಿತನಿಂದ ಅನೇಕ ಶಾಂತಿಕರ್ಮಗಳಂ ಮಾಡಿಸಿ ರಾಜನನ್ನು ಮಂಗಳ ವಾದ್ಯಘೋಷದೊಡನೆ ಪಟ್ಟಣಕ್ಕೊಯ್ದರು.

ಆಚಾರ್ಯರು ನೃಪತಿಯ ಶರೀರದಲ್ಲಿದ್ದು ಬಹಳ ನೀತಿಯಿಂದ ರಾಜ್ಯವನ್ನಾಳುತ್ತಾ ಅಂತಃಪುರದ ಕಾಂತೆಯರ ಸಹವಾಸದಿಂದ ಕಾಮಶಾಸ್ತ್ರವನ್ನು ತಿಳಿದರು. ಇವರು ರಾಜ್ಯವಾಳತಕ್ಕಕಾಲದಲ್ಲಿ ಕಾಲಕಾಲಕ್ಕೆ ಮಳೆಯಾಗಿ ದೇಶವೆಲ್ಲಾ ಸುಭಿಕ್ಷವಾಗಿತ್ತು.

ಆ ಭೂಮಿಪಾಲನ ಪಟ್ಟ ಮಹಿಷಿಯಾದ ಕನಕಮಂಜರಿಯೆಂಬುವಳು ಅತನ ಅಮಾನುಷಪ್ರಜ್ಞಾವಿಶೇಷಕ್ಕೆ ಆಶ್ಚರ್ಯವನ್ನುಹೊಂದಿ, ತನ್ನ ಮಂತ್ರಿಯಂ ಕರೆದು ಅಯ್ಯ! ಈ ಶರೀರವು ನಮ್ಮ ಪತಿಯದೇ ಹೊರತು ಆತ್ಮವು ಪತಿಯದಲ್ಲ. ಯಾವನೋ ಒಬ್ಬ ಯೋಗಿವರ್ಯನು ನಮ್ಮ ಪತಿಯ ದೇಹವನ್ನು ಪ್ರವೇಶಿಸಿರುವಂತೆ ತೋರುತ್ತದೆ, ಆದ್ದರಿಂದ ಈ ಪ್ರಾಂತ್ಯದಲ್ಲಿರತಕ್ಕ ಶವಗಳನ್ನೆಲ್ಲಾ ಸುಡಿಸಬೇಕೆಂದಾಜ್ಞಾಪಿಸಲು. ಅವನು ಅದರಂತೆ ಸಿಕ್ಕಿದ ಶವಗಳನ್ನು ಸುಡಿಸುತ್ತಾ ಶಂಕರಾಚಾರ್ಯರ ಶವವಿದ್ದಸ್ಥಳಕ್ಕೂ ಬಂದು, ಆಚಾರ್ಯರ ದೇಹವನ್ನು ನೋಡಿ ಅದನ್ನೂ ಬೆಂಕಿಯಮೇಲಿಡಿಸಿದನು.

ಆಗ ಶಿಷ್ಯರು, ಆಚಾರ್ಯರ ಸಮೀಪಕ್ಕೆ ಬಂದು "ತತ್ತ್ವಮಸಿ, ತತ್ತ್ವಮಸಿ, ತತ್ತ್ವಮಸಿ ರಾಜ್ಞ್! " ಎಂದು ಸ್ತೋತ್ರಮಾಡಲು ಆಚಾರ್ಯರು ಆ ದೇಹವನ್ನು ಬಿಟ್ಟು ಗಿಣಿಯರೂಪದಿಂದ ಹಾರಿಬಂದು, ತಮ್ಮ ದೇಹವು ಸುಡುತ್ತಾ ಇರುವುದಂ ಕಂಡು ಅದರಲ್ಲಿ ಪ್ರವೇಶಮಾಡಿ—

"* ಶ್ರೀಮತ್ಪಯೋನಿಧಿ ನಿಕೇತನಚಕ್ರಪಾಣೇ |
ಭೋಗೀಂದ್ರಭೋಗಮಣಿರಂಜಿತಪುಣ್ಯಮೂರ್ತೇ ||
ಯೋಗೀಶ ಶಾಶ್ವತ ಶರಣ್ಯ ಭವಾಬ್ಧಿಪೋತ |
ಲಕ್ಷ್ಮೀನೃಸಿಂಹ ಮಮ ದೇಹಿ ಕರಾವಲಂಬಮ್ ||೧||

* ಭಕ್ತರಾದ ವಾಚಕರು ಆಚಾರ್ಯರಿಂದ ರಚಿತವಾದ ಈ ಕರಾವಲಂಬ ಸ್ತೋತ್ರವನ್ನು ನಿತ್ಯ ನಾರಾಯಣವಲ್ಲಿಪುವುದು ಶ್ರೇಯಸ್ಕರವು.

ಬ್ರಹ್ಮೇಂದ್ರರುದ್ರಮರುದರ್ಕಕಿರೀಟಕೋಟಿ |
ಸಂಘಟ್ಟಿತಾಂಘ್ರಿಕಮಲಾಮಲಕಾಂತಿಕಾಂತ ||
ಲಕ್ಷ್ಮೀಲಸತ್ಕುಚಸರೋರುಹರಾಜಹಂಸ |
ಲಕ್ಷ್ಮೀನೃಸಿಂಹ ಮಮ ದೇಹಿ ಕರಾವಲಂಬಮ್ || ೨ ||

ಸಂಸಾರಘೋರಗಹನೇ ಚರತೋ ಮುರಾರೇ |
ಮಾರೋಗ್ರಭೀಕರಮೃಗಪ್ರವರಾರ್ದಿತಸ್ಯ ||
ಆರ್ತಸ್ಯ ಮತ್ಸರನಿದಾಘನಿಪೀಡಿತಸ್ಯ |
ಲಕ್ಷ್ಮೀನೃಸಿಂಹ ಮಮ ದೇಹಿ ಕರಾವಲಂಬಮ್ || ೩ ||

ಸಂಸಾರಕೂಪಮತಿಘೋರಮಗಾಧಮೂಲಮ್ |
ಸಂಪ್ರಾಪ್ಯ ದುಃಖಶತಸರ್ಪಸಮಾಕುಲಸ್ಯ ||
ದೂನಸ್ಯ ದೇವ ಕೃಪಣಂ ಪದಮಾಗತಸ್ಯ |
ಲಕ್ಷ್ಮೀನೃಸಿಂಹ ಮಮ ದೇಹಿ ಕರಾವಲಂಬಮ್ || ೪ ||

ಸಂಸಾರಸಾಗರ ವಿಶಾಲಕರಾಲಕಾಲ |
ನಕ್ರಗ್ರಹಗ್ರಸನನಿಗ್ರಹವಿಗ್ರಹಸ್ಯ ||
ವ್ಯಗ್ರಸ್ಯ ರಾಗರಸನೋರ್ಮಿನಿಪೀಡಿತಸ್ಯ |
ಲಕ್ಷ್ಮೀನೃಸಿಂಹ ಮಮ ದೇಹಿ ಕರಾವಲಂಬಮ್ || ೫ ||

ಸಂಸಾರವೃಕ್ಷಮಘಬೀಜಮನಂತಕರ್ಮ |
ಶಾಖಾಶತಂ ಕರಣಪತ್ರಮನಂಗಪುಷ್ಪಮ್ ||
ಆರುಹ್ಯ ದುಃಖಫಲಿತಂ ಪತತೋ ದಯಾಳೋ |
ಲಕ್ಷ್ಮೀನೃಸಿಂಹ ಮಮ ದೇಹಿ ಕರಾವಲಂಬಮ್ || ೬ ||

ಸಂಸಾರಸರ್ಪಘನವಕ್ತ್ರಭಯೋಗ್ರತೀವ್ರ |
ದಂಷ್ಟ್ರಾಕರಾಲವಿಷದಗ್ಧವಿನಷ್ಟಮೂರ್ತೇ ||
ನಾಗಾರಿವಾಹನ ಸುಧಾಬ್ಧಿನಿವಾಸ ಶೌರೇ |
ಲಕ್ಷ್ಮೀನೃಸಿಂಹ ಮಮ ದೇಹಿ ಕರಾವಲಂಬಮ್ || ೭ ||

ಸಂಸಾರದಾವದಹನಾತುರಭೀಕರೋರು |
ಜ್ವಾಲಾವಲೀಭಿರತಿದಗ್ಧತನೂರುಹಸ್ಯ ||
ತ್ವತ್ಪಾದಪದ್ಮಸರಸೀಶರಣಾಗತಸ್ಯ |
ಲಕ್ಷ್ಮೀನೃಸಿಂಹ ಮಮ ದೇಹಿ ಕರಾವಲಂಬಮ್ || ೮ ||

ಸಂಸಾರಜಾಲಪತಿತಸ್ಯ ಜಗನ್ನಿವಾಸ |
ಸರ್ವೇಂದ್ರಿಯಾರ್ಥಬಡಿಶಾರ್ಥ ಝಷೋಪಮಸ್ಯ ||
ಪ್ರೋತ್ಖಂಡಿತಪ್ರಚುರತಾಲುಕಮಸ್ತಕಸ್ಯ |
ಲಕ್ಷ್ಮೀನೃಸಿಂಹ ಮಮ ದೇಹಿ ಕರಾವಲಂಬಮ್ || ೯ ||

ಸಂಸಾರಭೀಕರಕರೀಂದ್ರಕಲಾಭಿಘಾತ |
ನಿಷ್ಪಿಷ್ಟಮರ್ಮವಪುಷಃ ಸಕಲಾರ್ತಿನಾಶ ||
ಪ್ರಾಣಪ್ರಯಾಣಭವಭೀತಿಸಮಾಕುಲಸ್ಯ |
ಲಕ್ಷ್ಮೀನೃಸಿಂಹ ಮಮ ದೇಹಿ ಕರಾವಲಂಬಮ್ || ೧೦ ||

ಸಂಸಾರಯೂಥಗಜಸಂಯತಿಸಿಂಹದಂಷ್ಟ್ರ |
ಭೀತಸ್ಯ ಕ್ರೂರಮತಿಶೇಷಭಯಂಕರೇಣ ||
ಪ್ರಾಣಪ್ರಯಾಣ ಭವಭೀತಿನಿವಾರಣೇನ |
ಲಕ್ಷ್ಮೀನೃಸಿಂಹ ಮಮ ದೇಹಿಕರಾವಲಂಬಮ್ || ೧೧ ||

ಸಂಸಾರಸಾಗರ ನಿಮಜ್ಜನಮುಹ್ಯಮಾನಮ್ |
ದೀನಂ ವಿಲೋಕಯ ವಿಭೋ ಕರುಣಾನಿಧೇ ಮಾಮ್ ||
ಪ್ರಹ್ಲಾದಖೇದಪರಿಹಾರ ಪರಾವತಾರ |
ಲಕ್ಷ್ಮೀನೃಸಿಂಹ ಮಮ ದೇಹಿ ಕರಾವಲಂಬಮ್ || ೧೨ ||

ಸಂಸಾರಯೋಗಿಸಕಲೇಪ್ಸಿತ ನಿತ್ಯಕರ್ಮ |
ಸಂಪ್ರಾಪ್ಯದುಃಖ ಸಕಲೇಂದ್ರಿಯ ಮೃತ್ಯುನಾಶ ||
ಸಂಕಲ್ಪಸಿಂಧುತನಯಾಕುಚಕುಂಕುಮಾಂಕ |
ಲಕ್ಷ್ಮೀನೃಸಿಂಹ ಮಮ ದೇಹಿ ಕರಾವಲಂಬಮ್ || ೧೩ ||

ಬಧ್ವಾಕಚೆಯಮಭಟಾ ಬಹು ಭರ್ತ್ಸಯಂತಿ ।
ಕರ್ಷಂತಿ ಯತ್ರ ಸಥಿ ಸಾಶಶತೈರ್ಯದಾ ಮಾಮ್ ॥
ಏಕಾಕಿನಂ ಪರವಶಂ ಚಕಿತಂ ದಯಾಳೋ ।
ಲಕ್ಷ್ಮೀನೃಸಿಂಹ ಮಮ ದೇಹಿಕರಾವಲಂಬಮ್ ॥ ೧೪ ॥

ಅಂಧಸ್ಯ ಮೆ ಹೃತ ವಿವೇಕಮಹಾಧನಸ್ಯ ।
ಚೋರೈಃ ಪ್ರಭೋ ಬಲಿಭಿರಿಂದ್ರಿಯನಾಮಧೇಯೈಃ ॥
ಮೋಹಾಂಧಕೂಪಕುಹರೇ ವಿನಿಪಾತಿತಸ್ಯ ।
ಲಕ್ಷ್ಮೀನೃಸಿಂಹ ಮಮ ದೇಹಿಕರಾವಲಂಬಮ್ ॥ ೧೫ ॥

ಪ್ರಹ್ಲಾದ ನಾರದ ಪರಾಶರ ಪುಂಡರೀಕ ।
ವ್ಯಾಸಾಂಬರೀಷ ಶುಕ ಶೌನಕ ಭೃನ್ನಿವಾಸ ॥
ಭಕ್ತಾನುರಕ್ತ ಪರಿಪಾಲನಪಾರಿಜಾತ ।
ಲಕ್ಷ್ಮೀನೃಸಿಂಹ ಮಮ ದೇಹಿಕರಾವಲಂಬಮ್ ॥ ೧೬ ॥

ಏಕೇನ ಚಕ್ರಮಪರೇಣ ಕರೇಣ ಶಂಖಮ್ ।
ಅನ್ಯೇನ ಸಿಂಧುತನಯಾಮವಲಂಬ್ಯ ತಿಷ್ಠನ್ ॥
ವಾಮೇ ಕರೇಣ ವರದಾಭಯಹಸ್ತಮುದ್ರಾ ।
ಲಕ್ಷ್ಮೀನೃಸಿಂಹ ಮಮದೇಹಿಕರಾವಲಂಬಮ್ ॥ ೧೭ ॥

ಆದ್ಯಂತಶೂನ್ಯಮಜಮವ್ಯಯಮಪ್ರಮೇಯಮ್ ।
ಆದಿತ್ಯರುದ್ರನಿಗಮಾದಿತನುಪ್ರಭಾವಮ್ ॥
ಆಂಭೋಧಿಜಾಸ್ಯಮಧುಲೋಲ ಉಪಮತ್ಪಭೃಂಗ ।
ಲಕ್ಷ್ಮೀನೃಸಿಂಹ ಮಮದೇಹಿ ಕರಾವಲಂಬಮ್ ॥ ೧೮ ॥

ವಾರಾಹ ರಾಮ ನರಸಿಂಹ ರಮಾದಿಕಾಂತ ।
ಕ್ರೀಡಾವಿಲೋಲ ವಿಧಿಶೂಲಿಸುರಪ್ರವಂದ್ಯ ॥
ಹಂಸಾತ್ಮಕಂ ಪರಮಹಂಸವಿಹಾರಶೀಲ ।
ಲಕ್ಷ್ಮೀನೃಸಿಂಹ ಮಮ ದೇಹಿಕರಾವಲಂಬಮ್ ॥ ೧೯ ॥

ಪ್ರಹ್ಲಾದಮಾನಸಸರೋಜವಿಹಾರಭೃಂಗ |
ಗಂಗಾತರಂಗ ಧವಳಾಂಗ ರಮಾಸ್ಥಿತಾಂಗ ||
ಶೃಂಗಾರ ಸಂಗತ ಕಿರೀಟಲಸದ್ವರಾಂಗ |
ಲಕ್ಷ್ಮೀನೃಸಿಂಹ ಮಮ ದೇಹಿಕರಾವಲಂಬಮ್ || ೨೦ ||

ಮಾತಾ ನೃಸಿಂಹಶ್ಚ ಪಿತಾ ನೃಸಿಂಹಃ |
ಭ್ರಾತಾ ನೃಸಿಂಹಶ್ಚ ಸಖಾ ನೃಸಿಂಹಃ ||
ನೃಸಿಂಹದೇವಾನ್ನ ಪರಂ ನ ಕಿಂಚಿತ್ |
ಲಕ್ಷ್ಮೀನೃಸಿಂಹ ಮಮ ದೇಹಿಕರಾವಲಂಬಮ್ || ೨೧ ||

ಲಕ್ಷ್ಮೀಪತೇ ಕಮಲನಾಭ ಸುರೇಶ ವಿಷ್ಣೋ |
ವೈಕುಂಠ ಕೃಷ್ಣ ಮಧುಸೂದನ ಪುಷ್ಕರಾಕ್ಷ ||
ಬ್ರಹ್ಮಣ್ಯ ಕೇಶವ ಜನಾರ್ದನ ವಾಸುದೇವ |
ದೇವೇಶ ದೇಹಿ ಕೃಪಣಸ್ಯ ಕರಾವಲಂಬಮ್ || ೨೨ ||

ಶ್ರೀಮನ್ನೃಸಿಂಹವಿಭವೇ ಗರುಡಧ್ವಜಾಯ |
ತಾಪತ್ರಯೋಪಶಮನಾಯ ಭವೌಷಧಾಯ ||
ತೃಷ್ಣಾದಿ ವೃಶ್ಚಿಕ ಜಲಾಗ್ನಿ ಭುಜಂಗರೋಗ |
ಕ್ಲೇಶಘ್ನ ನಾಮ ಹರಯೇ ಗುರವೇ ನಮಸ್ತೇ || ೨೩ ||

ಶ್ರೀಶಂಕರಾರ್ಯರಚಿತಂ ಸತತಂ ಮನುಷ್ಯಃ |
ಸ್ತೋತ್ರಂ ಪಠೇದ್ಯ ಇಹ ಸರ್ವಗುಣಪ್ರಸನ್ನಮ್ ||
ಸದ್ಯೋವಿಮುಕ್ತಃಕಲುಷೋ ಮುನಿವರ್ಯಗಣ್ಯಃ |
ಲಕ್ಷ್ಮೀಪತೇಃ ಪದಮುಪೈತಿ ಸ ನಿರ್ಮಲಾತ್ಮಾ || ೨೪ ||

ಯನ್ಮಾಯಯೋರ್ಜಿತವಪುಃ ಪ್ರಚುರಪ್ರವಾಹ |
ಮಗ್ನಾರ್ಥಮತ್ರ ನಿಮಯೋರುಕರಾವಲಂಬಮ್ ||
ಲಕ್ಷ್ಮೀನೃಸಿಂಹಚರಣಾಬ್ಜಮಧುವ್ರತೇನ |
ಸ್ತೋತ್ರಂ ಕೃತಂ ಸುಖಕರಂ ಭುವಿ ಶಂಕರೇಣ || ೨೫ ||''

ಎಂದು ಲಕ್ಷ್ಮೀನೃಸಿಂಹನನ್ನು ಸ್ತುತಿಸಲು, ಲಕ್ಷ್ಮೀನೃಸಿಂಹನು ಪ್ರತ್ಯಕ್ಷನಾಗಿ, ಆ ವಹ್ನಿಯಂ ಶಮನಮಾಡಿ, ಆಚಾರ್ಯರ ದೇಹವನ್ನು ತನ್ನ ಹಸ್ತಸ್ಪರ್ಶನದಿಂದ ಸುಖಶೀತಲವುಂಟಾಗುವಂತೆಮಾಡಿ, ಬಾಧೆಯಂ ಪರಿಹರಿಸಿ ಅಂತರ್ಹಿತನಾದನು.

ಅನಂತರ ಶಂಕರರು ಮಂಡನ ಪಂಡಿತನ ಮನೆಗೆ ಬಂದು, ಮಂಡನಪಂಡಿತನಿಂದ ಪೂಜಿಸಲ್ಪಟ್ಟವರಾಗಿ, ಶಾರದೆಯನ್ನು ವಾದಕ್ಕೆ ಕರೆಯಲು, ಶಾಂಕರಮಹಿಮೆಯನ್ನು ತಿಳಿದ ಶಾರದೆಯು, ದಂಪತಿಗಳಾದ ತಾವಿಬ್ಬರೂ ಸೋತೆವೆಂದೂ ಮತ್ತು ತನ್ನ ಅವತಾರ ಪೂರ್ತಿಯಾಯಿತೆಂದೂ ಲಜ್ಜೆಯಿಲ್ಲದೆ ಹೇಳಿ ಅಂತರ್ಹಿತಳಾಗಲು ಆಚಾರ್ಯರು ಆಕೆಯನ್ನು ಯೋಗದೃಷ್ಟಿಯಿಂದ ನೋಡಿ ''ಎಲೌ, ಮಾತೆಯೇ! ನೀನು ಬ್ರಹ್ಮದೇವರ ಪತ್ನಿಯೆಂಬುದನ್ನೂ, ಈಶ್ವರನ ಸಹೋದರಿಯೆಂಬುದನ್ನೂ, ವಾಗ್ದೇವಿಯೆಂಬುದನ್ನೂ, ಪ್ರಪಂಚರಕ್ಷಣೆಗೋಸ್ಕರವೇ ಲಕ್ಷ್ಮೀಸರಸ್ವತಿ ರೂಪಗಳನ್ನೂ ಧರಿಸುತ್ತೀಯೆಂಬುದನ್ನೂ, ಬಲ್ಲೆನಾದ್ದರಿಂದ, ನಮ್ಮಿಂದ ರಚಿಸಲ್ಪಡುವ ಶೃಂಗೇರ್ಯಾದಿ ಕ್ಷೇತ್ರಗಳಲ್ಲಿ ಶಾರದೆಯೆಂಬ ಹೆಸರಿನಿಂದ ನೆಲೆಗೊಂಡವಳಾಗಿ, ಜನರ ಇಷ್ಟಾರ್ಥಗಳನ್ನೀಯುತ್ತಾ ಸತ್ಪುರುಷರಿಂದ ಅರ್ಚಿಸಲ್ಪಡುತ್ತಿರಬೇಕು'' ಎಂದು ಪ್ರಾರ್ಥಿಸಲು, ವೈಧವ್ಯ ಸಂಭವಿಸುವುದೆಂಬ ಶಂಕೆಯಿಂದ ಭೂಸ್ಪರ್ಶಮಾಡದೇ ನಿಂತಿದ್ದು, ಸಭೆಯವರಿಗೆಲ್ಲಾ ದರ್ಶನವನ್ನಿತ್ತು 'ತಥಾಸ್ತು' ಎಂದು ಹೇಳಿ, ಹಾಗೆಯೇ ಅಂತರಿಕ್ಷಕ್ಕೇರಿದ ಮಾಯವಾದ ಶಾರದೆಯನ್ನು ನೋಡಿ ಎಲ್ಲರೂ ಆಶ್ಚರ್ಯಭರಿತರಾದರು. ಅನಂತರ ಶಂಕರದೇಶಿಕರು ಮಂಡನಮಿಶ್ರನಿಗೆ ಸನ್ಯಾಸವನ್ನಿತ್ತು ಆತ್ಮತತ್ತ್ವಗಳನ್ನುಪದೇಶಿಸಿ ಸುರೇಶ್ವರಾಚಾರ್ಯರೆಂಬ ಹೆಸರನ್ನಿಟ್ಟು ಸಶಿಷ್ಯರಾಗಿ ದಕ್ಷಿಣಕಡೆಗೆ ಬಂದು, ಮಹಾರಾಷ್ಟ್ರಾದಿ ದೇಶಗಳಲ್ಲಿ ತಮ್ಮ ಭಾಷ್ಯಗಳನ್ನು ಪ್ರಚಾರಮಾಡುತ್ತಾ ಶ್ರೀಶೈಲಕ್ಕೆ ಬಂದು ಪಾತಾಳಗಂಗೆಯಲ್ಲಿ ಸ್ನಾನಮಾಡಿ ಭ್ರಮರಾಂಬಾಸಹಿತನಾದ ಮಲ್ಲಿಕಾರ್ಜುನೇಶ್ವರನನ್ನು ಪೂಜಿಸಿ, ಅಲ್ಲಿದ್ದ ಪಾಶುಪತರು, ವೈಷ್ಣವರು, ವೀರಶೈವರು, ಮಾಹೇಶ್ವರರು ಮುಂತಾದವರನ್ನು ಸೋಲಿಸಿ, ಅವರಿಗೆಲ್ಲಾ, ಜ್ಞಾನಮಾರ್ಗೋಪದೇಶವಂಗೈಯುತ್ತಿದ್ದರು.

ಆಷ್ಟಮವಲ್ಲರೀ

ಉಗ್ರಭೈರವ ವಧಾದಧೋ ಘೃಣಾಂ |
ವೀಕ್ಷ್ಯ ಪದ್ಮಚರಣೇ ನೃಸಿಂಹಚಾಮ್ ||
ಶಂಸತೋಕ್ಷಿಪಥಗೊ ನೃಕೇಸರೀ |
ಶಂಕರಸ್ಯ ಪುರತಸ್ತಿರೋದಧೇ ||

ಚಾರ್ಯರು ಶ್ರೀಶೈಲ ಪ್ರಾಂತ್ಯದಲ್ಲಿರುವಾಗ ರಾವಣನಂತೆ ಸಾಧು ವೇಷವನ್ನು ಧರಿಸಿಕೊಂಡಿದ್ದಂಥ ಉಗ್ರಭೈರವನೆಂಬ ಕಾಪಾಲಿಯು ಭಾಷ್ಯಪ್ರವಚನಾನಂತರದಲ್ಲಿ ಏಕಾಂತದಲ್ಲಿ ಕುಳಿತಿರತಕ್ಕ ಗುರುಗಳನ್ನು ನೋಡಿ ,, ಗುರುಗಳೇ! ತಮ್ಮ ಸಾರ್ವಜ್ಞ, ಸೌಶೀಲ್ಯ, ದಯಾಳುಗುಣಗಳನ್ನು ಕೇಳಿ ತಮ್ಮನ್ನು ನೋಡಬೇಕೆಂದು ಇಲ್ಲಿಗೆ ಬಂದಿದೇನೆ. ನೀವು ಸ್ವದೇಹಾಭಿಮಾನವನ್ನು ಬಿಟ್ಟು ಪರೋಪಕಾರಾರ್ಥವಾಗಿ ಅವತರಿಸಿರುವಿರಿ. ಸಮಸ್ತವಾದ ಕಲ್ಯಾಣಗುಣಗಳಿಗೆ ಸ್ವಾಸಭೂತರೂ, ಪೂರ್ಣಪರಮೇಶ್ವರನೇ ಜನಶೀಲರೂ ಆದ ನಿಮ್ಮಂಥಾವರುಗಳಲ್ಲಿ ಬಂದ ಕಾರ್ಯಾರ್ಥಿಗಳ ಕಾರ್ಯವು ಅಸಾಧ್ಯವಾಗಿದ್ದರೂ ಕೊಡ ಜಯಶಾಲಿಗಳಾಗದೆ ಹಿಂತಿರುಗುವುದಿಲ್ಲ. ನಾನು ಸಶರೀರನಾಗಿ ಕೈಲಾಸಕ್ಕೆ ಹೋಗಬೇಕೆಂದು ಕಪಾಲಿಯನ್ನು ಒಂದುನೂರು ವರುಷ ತಪವಂಗೈಯಲು ರುದ್ರನು ಪ್ರತ್ಯಕ್ಷನಾಗಿ ವಾಂಛಿತವೇನೆಂದನು.

ಆಗ ನಾನು ನನ್ನಭಿಲಾಷೆಯಂ ತಿಳಿಸಲು ಕಾಪಾಲಿಯು ,ನೀನು ಪಟ್ಟಾಭಿಷಿಕ್ತನಾದ ಒಬ್ಬ ಚಕ್ರವರ್ತಿಯ ತಲೆಯನ್ನಾಗಲೀ, ಅಥವಾ ಬ್ರಹ್ಮವೇತ್ತೃವಾದ ಪರಿವ್ರಾಜಕನ ತಲೆಯನ್ನಾಗಲೀ, ನನಗೆ ಅಗ್ನಿಮುಖೇನ ಸಮರ್ಪಣೆಮಾಡಿದರೆ ನಿನ್ನ ಅಭಿಲಾಷೆಯು ಪೂರ್ತಿಯಾಗುತ್ತದೆ' ಎಂದನು. ನಾನು ಅದರಂತೆ ಹುಡುಕುತ್ತಾ ಬಂದೆನು. ಚಕ್ರವರ್ತಿಯ ತಲೆಯು ಸಿಕ್ಕುವುದು ದುರ್ಲಭವು. ದೇಹಾಭಿಮಾನವಿಲ್ಲದ ನಿಮ್ಮಂಥ ವಿರಕ್ತರಿಗೆ ದೇಹದಿಂದ ಪ್ರಯೋಜನವಿಲ್ಲವಷ್ಟೆ? ಆದ್ದರಿಂದ ನೀವು ತಮ್ಮ ತಲೆಯನ್ನು ಅನುಗ್ರಹಿಸಬೇಕು. ದಧೀಚಿ ಮುಖ್ಯರಾದ ಕೆಲವರು ಕ್ಷಣಿಕವಾದ ಈ ಶರೀರವನ್ನು ಯಜ್ಞಶರೀರಕ್ಕೋಸ್ಕರ ಅರ್ಪಣೆ ಮಾಡಲಿಲ್ಲವೇ ?'' ಎಂದನು.

ಆಗ ಆಚಾರ್ಯರು ,, ಎಲೈ ಕಾಪಾಲಿಕನೇ ! ನನಗೆ ಈ ದೇಹದಲ್ಲಭಿಮಾನವಿಲ್ಲದಿದ್ದರೂ ನಮ್ಮ ಶಿಷ್ಯರಿಗೆ ಬಹಳ ಭಕ್ತ್ಯಭಿಮಾನಗಳುಂಟು. ಅವರು ಇದನ್ನು ತಿಳಿ

ದರೆ ನಿನ್ನನ್ನು ಸಂಹರಿಸಿಬಿಡ ವದು. ಆದ್ದರಿಂದ ಅವಿಲ್ಲಿದಿರುವ ಕಡೆಯಲ್ಲಿ ನಾನು ಸಮಾಧಿನಿಷ್ಠನಾಗಿರುವಾಗ ನಿನ್ನಭಿಲಾಷೆಯಂ ತೀರಿಸಿಕೋ'' ಎಂದರು.

ಅದರಂತೆ, ಕಾಪಾಲಿಕನು ಅವರು ಒಬ್ಬಂಟಿಗರಾಗಿರುವ ಸಮಯದಲ್ಲಿ ಅಲ್ಲಿಗೆ ಹೋಗಿ ತಲೆಯನ್ನು ಕತ್ತರಿಸಬೇಕೆಂದು ಕತ್ತಿಯನ್ನೆತ್ತಲು ಯೋಗನಿಷ್ಠರಾಗಿ ಕುಳಿತಿದ್ದ ಪದ್ಮಪಾದರು ಯೋಗಮಹಿಮೆಯಿಂದ ಆಚಾರ್ಯರಿಗೆ ಸಂಭವಿಸಿದ ವಿಪತ್ತುಗಳನ್ನು ತಿಳಿದು ನೃಸಿಹ್ಮರೂಪದಿಂದ ಬಂದು ತನ್ನ ದರ್ಶನಮಾತ್ರದಿಂದಲೇ ಕಾಪಾಲಿಕನನ್ನು ಸಾಯುವಂತೆ ಮಾಡಿದರು.

ಅವನು ಬಿದ್ದ ಶಬ್ದದಿಂದ ಆಚಾರ್ಯರು ಬಹಿರ್ಮುಖರಾಗಿ ಅಲ್ಲಿ ನಡೆದ ವಿಷಯವನ್ನೆಲ್ಲಾ ಅವನಿಂದ ತಿಳಿದು 'ನೀನು ನೃಸಿಹ್ಮನನ್ನು ಹೇಗೆ ಪ್ರತ್ಯಕ್ಷಮಾಡಿಕೊಂಡೆ?'' ಎನ್ನಲು—

ಪದ್ಮಪಾದರು ''ಗುರುಗಳೇ! ನಾನು ಅಘೋಬಲದಲ್ಲಿ ನೃಹರಿಯಂ ಕುರಿತು ತಪಸ್ಸುಮಾಡುತ್ತಿದ್ದೆನು. ಆಗ ದೇವನು ಸ್ವಲ್ಪಕಾಲ ದರ್ಶನವನ್ನಿತ್ತು ಅದೃಶ್ಯನಾದನು. ನಾನು ಪುನಃ ಸ್ವಾಮಿಯಂ ಕಾಣಬೇಕೆಂದು ತಪಸ್ಸು ಮಾಡುತ್ತಿರಲು ಒಬ್ಬ ಬೇಡನು ಬಂದು 'ನೀನು ಹೀಗೆ ಏತಕ್ಕೆ ಶ್ರಮಪಡುತ್ತಲಿರುವಿ?' ಎಂದು ಪ್ರಶ್ನಿಸಿದಾಗ ನಾನು ನನ್ನಭಿಪ್ರಾಯವನ್ನು ತಿಳಿಸಲು ಬೇಡನು ಹೊರಗೆಹೋಗಿ ಸ್ವಲ್ಪಕಾಲದಲ್ಲಿ ನರಸಿಹ್ಮನನ್ನು ಬಳ್ಳಿಗಳಿಂದ ಬಿಗಿದು ನನ್ನಲ್ಲಿಗೆ ತಂದನು.

ಆಗ ನಾನು ಸ್ವಾಮಿಯನ್ನು ಪೂಜಿಸಿ ಕಾಡುಬೇಡನಿಗೆ ದೇವನು ವಶವಾದ ವಿಷಯವನ್ನು ಕೇಳಲು ಸ್ವಾಮಿಯು ಇವನು ನನ್ನನ್ನೆಲ್ಲರಿಗಿಂತಲೂ ಭಕ್ತಿಯಿಂದ ಭಜಿಸಿದನೆಂದು ಹೇಳಿ ಅದೃಶ್ಯನಾದನು'' ಎಂದನು.

ಅದನ್ನು ಕೇಳಿ ಆಚಾರ್ಯರು ನೃಹರಿಯಂಸ್ತುತಿಸಲಾಮಹಾತ್ಮನು ಪ್ರತ್ಯಕ್ಷನಾಗಿ ಸೌಮ್ಯರೂಪದಿಂದ ಪದ್ಮಪಾದರನ್ನನುಗ್ರಹಿಸಿ ಅಂತರ್ಧಾನವನ್ನು ಹೊಂದಿದನು.

ಈ ಚರಿತ್ರೆಯನ್ನು ತ್ರಿಸಂಧ್ಯಾಕಾಲಗಳಲ್ಲಿಯೂ ಯಾರು ಪಠನೆಮಾಡುತ್ತಾರೋ ಅಥವಾ ಕೇಳುತ್ತಾರೋ ಅಂತಹರು ಅಪಮೃತ್ಯುವಿನಿಂದ ಬಿಡಲ್ಪಟ್ಟವರಾಗಿ ದೇವರಲ್ಲಿ ಭಕ್ತಿಯನ್ನು ಹೊಂದಿ ಇಹಲೋಕದಲ್ಲಿ ಸಕಲಭೋಗಗಳನ್ನೂ ಅನುಭವಿಸಿ ದೇಹಾಂತ್ಯದಲ್ಲಿ ಮೋಕ್ಷವನ್ನುಹೊಂದುತ್ತಾರೆ.

ನವಮವಲ್ಲರೀ

ಗತ್ವಾ ಗೋಕರ್ಣತೀರ್ಥಂ ಗುರುರಗತನಯಾಧೀಶಮಾರಾಧ್ಯ ತಸ್ಮಾತ್
ಗಾಯಕ್ ಮೂಕಾಂಬಿಕಾಯಾಃ ಪದಯುಗಮಥ ಸಂಜೀವ್ಯ ಭೂದೇವಪುತ್ರಮ್ |
ಲಬ್ಧ್ವಾ ಬಲ್ಯಗ್ರಹಾರಂ ತದನು ಪುರಿ ಯುತಶೃಂಗಗಿರ್ಯಾಂ ಸ್ವಶಿಷ್ಯೈಃ
ವಾಕ್ಪೀಠಸ್ಥಂ ಸುರೇಶಂ ವಿದಧದಘಹೃತೀ ವಾಕ್ಪದಾಬ್ಜೇ ನಿಷೇವೇ ||

ನಂತರ ಆಚಾರ್ಯರು ತೀರ್ಥಯಾತ್ರೆಗಳಂ ಮಾಡುತ್ತಾ ಗೋಕರ್ಣ ಕ್ಷೇತ್ರಕ್ಕೆ ಬಂದು ಗೋಕರ್ಣೇಶ್ವರನನ್ನು ಪೂಜಿಸಿ ವಾದಿಗಳನ್ನು ಜಯಿಸುತ್ತಾ ಮೂಕಾಂಬಿಕೆಯ ದರ್ಶನಾರ್ಥವಾಗಿ ತೆರಳಿದರು

ದಾರಿಯಲ್ಲಿ ವಿಪ್ರದಂಪತಿಗಳೋರ್ವರು ಮೃತನಾಗಿರುವ ತಮ್ಮ ಏಕಮಾತ್ರ ಪುತ್ರನನ್ನು ತೊಡೆಯಮೇಲಿಟ್ಟುಕೊಂಡು ಪ್ರಲಾಪಿಸುತ್ತಿರುವುದನ್ನು ಆಚಾರ್ಯರು ನೋಡಿ ಬಹಳ ವ್ಯಸನಾಕ್ರಾಂತರಾಗುತ್ತಿರಲು ಆಕಾಶವಾಣಿಯು ‘‘ಸಂರಕ್ಷಿಸುವುದಕ್ಕೆ ಶಕ್ತಿ ಇರುವ ಮನುಷ್ಯನಿಗೆ ದುಃಖಕ್ಕಿಂತಲೂ ದಯೆಯೇ ಶ್ರೇಷ್ಠವು’’ ಎಂದಿತು.

ಆದನ್ನು ಆಚಾರ್ಯರು ಕೇಳಿ ‘‘ತ್ರಿಜಗದ್ರಕ್ಷಣ ಸಾಮರ್ಥ್ಯವುಳ್ಳವರಿಗೆ ಆದು ಸತ್ಯವು’’ ಎನ್ನಲು ಆ ಮೃತಪುತ್ರನು ನಿದ್ರೆಯಿಂದ ಎದ್ದವನಂತೆ ಎದ್ದನು.

ಅನಂತರ ಆಚಾರ್ಯರು ಅವರಿಂದ ಸ್ತುತಿಸಲ್ಪಟ್ಟವರಾಗಿ, ಮೂಕಾಂಬಾದೇವಾಲಯಕ್ಕೆ ಹೋಗಿ ದೇವಿಯನ್ನು ಆರಾಧಿಸಿ ಶ್ರೀ ಚಕ್ರವಂ ಸ್ಥಾಪಿಸಿ ಅನಂತರ ಶ್ರೀ ಬಲಿ ಸಂಜ್ಞಕವಾದ ಅಗ್ರಹಾರಕ್ಕೆ ಸಶಿಷ್ಯರಾಗಿ ಬಂದರು.

ಅಲ್ಲಿಗೆ ದಿವಾಕರನೆಂಬ ಬ್ರಾಹ್ಮಣನು ಮೂಕನಾದ ತನ್ನ ಮಗನನ್ನು ಕರೆದುಕೊಂಡುಬಂದು ಆಚಾರ್ಯರಿಗೆ ವಂದಿಸಿ ‘‘ಸ್ವಾಮಿ! ನನ್ನ ಮಗನು ಜನ್ಮಾರಭ್ಯದಿಂದ ಮೂಕನಹಾಗೆ ಇದಾನೆ. ವಿಪ್ರತ್ವಕ್ಕೆ ಭಂಗಬರುವುದೆಂದು ಸಕಾಲದಲ್ಲಿಯೇ ಉಪನಯನ ಮಾಡಿದೆನು. ಹುಡುಗರು ಆಟಕ್ಕೊಸ್ಕರ ಗದ್ದಲಮಾಡಿಕೊಂಡು ಹೋದರೂ, ನನ್ನ ಮಗನು ಹೋಗುವುದಿಲ್ಲ. ಹುಡುಗರು ಮೂರ್ಖನಾದ ಇವನನ್ನು ನೋಡಿ ಹೊಡೆದರೂ ಇವನು ಕೋಪವನ್ನು ಹೊಂದುವುದಿಲ್ಲ. ಯಾವಾಗಲಾದರೂ ತನ್ನ ಮನಸ್ಸು ಬಂದಾಗ ಊಟಮಾಡುವನೇ ಹೊರ್ತು ನಿತ್ಯವೂ ಊಟಮಾಡುವುದಿಲ್ಲ. ಸ್ವೇಚ್ಛಾವಿಹಾರಮಾಡುತ್ತಾನೆ; ಯಾವಮಾತನ್ನೂ ಆಡುವುದಿಲ್ಲ’’ ಎನ್ನಲು ಆಚಾರ್ಯರು ‘‘ನೀನು

ಯಾರು ? ಯಾರಮಗನು ? ನಿನ್ನ ಹೆಸರೇನು ? ನಿನ್ನ ಜಾತಿ ಕುಲ ಗೋತ್ರಗಳಾವವು ಯಾಕೆ ಜಡನಂತಿರುವಿ ?'' ಎಂದು ಆ ಬಾಲಕನನ್ನು ಕೇಳಿದರು.

ಅದಕ್ಕೆ ಆ ಬಾಲನು '' ಸ್ವಾಮಿ ! ನಾನು ಮನುಷ್ಯನಲ್ಲ; ದೇವ, ಯಕ್ಷ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರರಲ್ಲಿ ಒಬ್ಬನೂ ಅಲ್ಲ. ಬ್ರಹ್ಮಚಾರೀ, ಗೃಹಸ್ಥನೂ ವಾನಪ್ರಸ್ಥನೂ, ಸನ್ಯಾಸಿಯೂ ಅಲ್ಲ ' ಅಹಂಬ್ರಹ್ಮಾಸ್ಮಿ ' ಎಂಬ ಅದ್ವೈತತತ್ತ್ವವೆ ನಾನು '' ಎಂದನು.

ಅವನ ಉತ್ತರವನ್ನು ಕೇಳಿ ಆಚಾರ್ಯರು ಸಂತೋಷಪಟ್ಟು ' ನಿನ್ನ ಮಗನ ಸನ್ಯಾಸಕ್ಕೆ ಅರ್ಹನು ' ಎಂದು ಅವನ ತಂದೆಗೆ ಹೇಳಿ ಅವನಿಗೆ ಸನ್ಯಾಸವಂ ಕೊಟ್ಟು ಅದ್ವೈತತತ್ತ್ವವನ್ನು ಕರದಲ್ಲಿರುವ ಆ ಮಲಕ (ನೆಲ್ಲಿಕಾಯಿ) ದಂತೆ ತೋರಿಸಿದ್ದರಿಂ ಅವನಿಗೆ ' ಹಸ್ತಾಮಲಕ ' ನೆಂಬ ನಾಮಧೇಯವನ್ನಿಟ್ಟು ಭಾಷ್ಯೋಪದೇಶವಂ ಮಾಡುತ್ತಿದ್ದರು.

ಹೀಗಿರಲು ಒಂದುದಿನ, ವಿಶ್ವನಾಥಾಧ್ವರಿಯ ಪುತ್ರನಾದ ಕಳಾನಾಥನು ಬಂದು ಆಚಾರ್ಯರನ್ನು —

* '' ವಿದಿತಾಖಿಲಶಾಸ್ತ್ರಸುಧಾಜಲಧೇ
ಮಹತೋಪನಿಷತ್ಕಥಿತಾರ್ಥನಿಧೇ |
ಹೃದಯೇ ಕಲಯೇ ವಿಮಲಂ ಚರಣಮ್
ಭವ ಶಂಕರದೇಶಿಕ ಮೇ ಶರಣಮ್ || ೧ ||

ಕರುಣಾವರುಣಾಲಯ ಪಾಲಯ ಮಾಮ್
ಭವಸಾಗರದುಃಖವಿದೂನಹೃದಮ್ |
ರಹಿತಾಖಿಲದರ್ಶನತತ್ತ್ವವಿದಮ್
ಭವ ಶಂಕರದೇಶಿಕ ಮೇ ಶರಣಮ್ || ೨ ||

ಭವತಾ ಜನತಾ ಸುಹಿತಾ ಭವಿತಾ
ನಿಜಬೋಧವಿಚಾರಣಚಾರುಮತೇ |
ಕಲಯೇಶ್ವರಜೀವವಿವೇಕವಿದಮ್
ಭವ ಶಂಕರದೇಶಿಕ ಮೇ ಶರಣಮ್ || ೩ ||

---

* ಸದ್ಗುರು ಭಕ್ತರು ಈ ಸ್ತೋತ್ರವನ್ನು ನಿತ್ಯಪಾರಾಯಣದಲ್ಲಿಡುವುದು ಶ್ರೇಯಸ್ಕರವು.

ಭವ ಏವ ಭವಾನಿತಿ ಮೇ ನಿತರಾಮ್
ಸಮಜಾಯತ ಚೇತಸಿ ಕೌತುಕಿತಾ |
ಮಮ ವಾರಯ ಮೋಹಮಹಾಜಲಧಿಮ್
ಭವ ಶಂಕರದೇಶಿಕ ಮೇ ಶರಣಮ್ || ೪ ||

ಸುಕೃತೇ s ಧಿಕೃತೇ ಬಹುಧಾ ಭವತೋ
ಭವಿತಾ ಪದದರ್ಶನಲಾಲಸತಾ |
ಅತಿದೀನಮಿಮಂ ಪರಿಪಾಲಯ ಮಾಮ್
ಭವ ಶಂಕರದೇಶಿಕ ಮೇ ಶರಣಮ್ || ೫ ||

ಜಗತೀಮವಿತುಂ ಕಲಿತಾಕೃತಯೋ
ವಿಚರಂತಿ ಮಹಾಮಹಸಶ್ಚಲತಃ |
ಅಹಿಮಾಂಶುರಿವಾತ್ರವಿಭಾಸಿ ಪುರಃ
ಭವ ಶಂಕರದೇಶಿಕ ಮೇ ಶರಣಮ್ || ೬ ||

ಗುರುಪುಂಗವ ಪುಂಗವಕೇತನಕೇ
ಸಮತಾ ಮಯತಾಂ ನ ಹಿ ಕೋಪಿ ಸುಧೀಃ |
ಶರಣಾಗತವತ್ಸಲ ತತ್ತ್ವನಿಧೇ
ಭವ ಶಂಕರದೇಶಿಕ ಮೇ ಶರಣಮ್ || ೭ ||

ವಿದಿತಾ ನ ಮಯಾ ವಿಶದೈಕಕಲಾ
ನ ಚ ಕಿಂ ಜನ ಕಾಂಚನ ಮಸ್ತಿ ಗುರೋ |
ದ್ರುತಮೇವ ವಿಧೇಹಿ ಕೃಪಾಂ ಸಹಜಾಮ್
ಭವ ಶಂಕರದೇಶಿಕ ಮೇ ಶರಣಮ್ || ೮ ||

ಎಂದು ತೋಟಕವೃತ್ತದಿಂದ ಸ್ತುತಿಸಲು ಅವರು ಅವನಿಗೆ ಪ್ರಸನ್ನರಾಗಿ, ಸನ್ಯಾಸವನ್ನು ಕೊಟ್ಟು, ತೋಟಕಾಚಾರ್ಯನೆಂಬ ಹೆಸರಿನಿಂದ ಶಿಷ್ಯನನ್ನಾಗಿ ಮಾಡಿಕೊಂಡರು.

ಅನಂತರ ಆಚಾರ್ಯರು ಸಕಲ ಶಿಷ್ಯರಿಂದಲೂ ಕೂಡಿ, ವಿಭಾಂಡಕಋಷಿಯು ತಪಸ್ಸುಮಾಡಿ ಋಷ್ಯಶೃಂಗಮುನಿಯಂ ಪಡೆದು ತಾನು ಮಲ್ಲಿಕಾರ್ಜುನ ಲಿಂಗದೊಳೈಕ್ಯವಾದ ಪುಣ್ಯಕ್ಷೇತ್ರವೂ, ಜಂತುಗಳಿಗೆ ವಿರೋಧವಿಲ್ಲದ ಸ್ಥಳವೂ, ವರಾಹದಂಷ್ಟ್ರದಿಂದ ಹುಟ್ಟಿದ ತುಂಗಾನದಿಯಿಂದ ಬಳಸಲ್ಪಟ್ಟಿರುವುದೂ ಆದ ಶೃಂಗಗಿರಿಕ್ಷೇತ್ರಕ್ಕೆ

ಬಂದು ಅಲ್ಲಿರುವ ವಿದ್ವಾಂಸರಿಗೆ ತಮ್ಮ ಭಾಷ್ಯಗಳಂ ಪ್ರವಚನ ಮಾಡಿಸಿ, ಅಲ್ಲಿ ಒಂದು ರಮ್ಯವಾದ ಸ್ಥಳದಲ್ಲಿ ಮನೋಹರವಾದ ದೇವಾಲಯವಂ ಕಟ್ಟಿಸಿ, ಒಳ್ಳೆಯ ಸುಮುಹೂರ್ತದಲ್ಲಿ ಮಂತ್ರಶಾಸ್ತ್ರೋಕ್ತಪ್ರಕಾರವಾಗಿ ಬೀಜಾಕ್ಷರಗಳಿಂದ ಕೂಡಿದ ಶ್ರೀ ಚಕ್ರವಂ ಬರೆದು ಅಲ್ಲಿ ಶಾರದೆಯನ್ನು ಪ್ರತಿಷ್ಠೆಮಾಡಿ, ಆಕೆಯನ್ನನೇಕವಿಧವಾಗಿ ಪ್ರಾರ್ಥಿಸಿ, ವ್ಯಾಖ್ಯಾನ ಸಿಹ್ಮಾಸನ ಪ್ರತಿಷ್ಠಾನಂತರದಲ್ಲಿ, ದಕ್ಷಿಣಾಮ್ನಾಯ ಜಗದ್ಗುರು ಶ್ರೀಮಠದ ಶಾರದಾ ಪೀಠದಲ್ಲಿ ಸುರೇಶ್ವರಾಚಾರ್ಯರನ್ನು ಜಗದ್ಗುರುಪೀಠ ಪಟ್ಟಾಭಿಷಿಕ್ತರನ್ನಾಗಿ ಮಾಡಿ, ಶ್ರೀಮಠದ ಕಾರ್ಯನಿರ್ವಹಣಕ್ಕಾಗಿ ಶೃಂಗಗಿರಿ ಭಟ್ಟನೆಂಬ ಮಹಾ ಭೂತನನ್ನು ನಿಯಮಿಸಿದರು.

ವೆಕಮವಲ್ಲರೀ

ಗುರುರ್ಬ್ರಹ್ಮವಿದ್ಯಾಪ್ರಚಾರಾಯ ಶಿಷ್ಯೈಃ |
ಪ್ರಬಂಧಾಕ್ ಕೃತಾಕ್ ವೀಕ್ಷ್ಯ ಸಂಪ್ರಾಪ್ಯ ಮೋದಮ್ ||
ಸುರೇಶಾಯ ಚಾದಾದನುಜ್ಞಾಂ ಕಯೋಶ್ಚಿತ್ |
ತ್ರಯೀಶಿಷ್ಯಯೋಃ ಕರ್ತುಕಾಮಾಯಟೀಕಾಮ್ ||

ಬಳಿಕೊಂದುದಿನ ಸುರೇಶ್ವರಾಚಾರ್ಯರು ಆಚಾರ್ಯರಲ್ಲಿಗೆ ಹೋಗಿ ನಮಸ್ಕರಿಸಿ, ‘‘ನಾನು ಭಾಷ್ಯಗಳಿಗೆ ವಾರ್ತಿಕವನ್ನು ರಚಿಸಬೇಕೆಂದಿದೇನೆ; ಅಪ್ಪಣೆಯಾಗಬೇಕು’’ ಎಂದು ಪ್ರಾರ್ಥಿಸಲು ಆಚಾರ್ಯರು ಹಾಗೆಯೇ ಮಾಡೆಂದರು.

ಇದನ್ನು ತಿಳಿದ ಚಿತ್ಸುಖರೇ ಮೊದಲಾದವರು ಆಚಾರ್ಯರ ಸಮೀಪಕ್ಕೆ ಹೋಗಿ ‘‘ಸುರೇಶ್ವರರು ಕರ್ಮವಾದಿಗಳಷ್ಟೆ. ಈಗ ಅವರು ಮಾಡುವ ವೃತ್ತಿಗ್ರಂಥವು ‘ಜ್ಞಾನಪರವಾಗದೇ ಕರ್ಮಪರವೆಲ್ಲಾಗುವುದು?’ ಎಂಬ ಶಂಕೆಯಿರುವುದು. ಆದರಿಂದ ವಿಷ್ಣ್ವವತಾರಿಯಾದ ಪದ್ಮಪಾದನನ್ನು ವಾರ್ತಿಕರಚನೆಮಾಡುವಂತೆ ಹೇಳಬಹುದು’’ ಎಂದರು.—ಇಷ್ಟರಲ್ಲಿ ಪದ್ಮಪಾದಮುನಿಯು ಬಂದು ‘‘ಹಸ್ತಾಮಲಕ್ಕೆನ್ನನ್ನು ಭಾಷ್ಯಗಳಿಗೆ ವಾರ್ತಿಕವನ್ನು ಮಾಡುವಂತೆ ಹೇಳಬಹುದು’’ ಎಂದನು.

ಅದನ್ನು ಕೇಳಿ ಆಚಾರ್ಯರು ,, ಬಂದಾನೊಂದುಕಾಲದಲ್ಲಿ ಓರ್ವಸ್ತ್ರೀಯು ತನ್ನ ಎಳೆಯ ಹುಡುಗನನ್ನು ನೋಡಿಕೊಳ್ಳುತ್ತಿರುವಂತೆ ಯಮುನಾನದಿಯ ದಡದಮೇಲೆ ಕುಳಿತಿದ್ದ ಒಬ್ಬ ಯೋಗಿಯ ವಶಕ್ಕೆ ಕೊಟ್ಟು ತಾನು ತನ್ನ ಗೆಳತಿಯರೊಡನೆ ಎಲ್ಲಿಗೋ ಹೋಗಿ ಬರುವಷ್ಟರಲ್ಲಿ ತನ್ನ ಮಗನು ಮೃತನಾಗಿರುವುದನ್ನು ನೋಡಿ ಆಕೆಯು ವ್ಯಸನಾಕ್ರಾಂತಳಾಗುತ್ತಿರಲು ಆ ಯೋಗಿಯು ಪರಕಾಯಪ್ರವೇಶವಿದ್ಯಾಬಲದಿಂದ ತನ್ನ ಆತ್ಮವನ್ನು ಆ ಮಗುವಿನ ದೇಹದೊಳಕ್ಕೆ ನುಗ್ಗಿಸಿದ ಪ್ರಯುಕ್ತ ಅವಳ ಮಗುವು ನಿದ್ರೆಯಿಂದೆದ್ದವನಂತೆ ಎದ್ದು ಪ್ರಸಿದ್ಧನಾದೀ ಹಸ್ತಾಮಲಕಾಚಾರ್ಯನಾಗಿರುವನು ; ಇವನು ಸಕಲ ಶಾಸ್ತ್ರಜ್ಞನಾದರೂ ಅವಿಚ್ಛಿನ್ನ ಸಮಾಧಿನಿಷ್ಠನಾಗಿರುವುದರಿಂದ ಅವನು ವೃತ್ತಿಯ ಅರಿಯನೆಗೆ ಅರ್ಹನಲ್ಲ. ಸನಂದನನು ಭಾಷ್ಯಕ್ಕೊಂದು ವ್ಯಾಖ್ಯಾನವಂ ಬರೆಯಲಿ ,, ಎಂದು ಹೇಳಿ ,, ನೀನು ವಾರ್ತಿಕವಂ ಮಾಡಬೇಡ ; ನಿನ್ನ ಸಿದ್ಧಾಂತಜ್ಞಾನಪ್ರಕಾಶಕಗಳಾದ ಸ್ವತಂತ್ರಗ್ರಂಥಗಳಂ ರಚಿಸು ,, ಎಂದು ಸುರೇಶ್ವರರಿಗೆ ರಹಸ್ಯದಲ್ಲಿ ಹೇಳಲು ಅವರು ಅದರಂತೆ ' ನೈಷ್ಕರ್ಮ್ಯಸಿದ್ಧಿ ' ಯೆಂಬ ಸ್ವತಂತ್ರಗ್ರಂಥವನ್ನು ರಚಿಸಿ ಗುರುಗಳಿಗರ್ಪಿಸಲು ಅವರು ಮತ್ತು ಶಿಷ್ಯರೂ ಅದನ್ನು ನೋಡಿ ಸಂತುಷ್ಟರಾದರು. ಬಳಿಕ ಸುರೇಶ್ವರರು ,, ಈ ಭಾಷ್ಯಕ್ಕೆ ಇನ್ನು ಯಾರು ವಾರ್ತಿಕವನ್ನು ಬರೆದರೂ ಅದು ಪ್ರಚಾರಕ್ಕೆ ಬಾರದೇಯೋಗಲಿ ,, ಎಂದು ಶಾಪವಿತ್ತರು.

ಅನಂತರ ಶಂಕರದೇಶಿಕರು ,, ನನ್ನದು ಯಜುಶ್ಶಾಖೆ ; ನಿನ್ನದು ಕಣ್ವಶಾಖೆ ; ಆ ಇರ್ವರ ಭಾಷ್ಯಕ್ಕೂ ' ವಿವರಣ, ವಾರ್ತಿಕ ' ಗಳೆಂಬ ಗ್ರಂಥಗಳನ್ನು ರಚಿಸು ,, ಎಂದು ಸುರೇಶ್ವರರಿಗೆ ಹೇಳಲು ಅವರು ಅದರಂತೆ ಗ್ರಂಥಗಳಂ ರಚಿಸಿ ಆಚಾರ್ಯರಿಗರ್ಪಿಸಿದರು.

ಪದ್ಮಪಾದರು ಆಚಾರ್ಯರ ಅಪ್ಪಣೆಯಂತೆಯೇ ಭಾಷ್ಯಕ್ಕೆ ಎರಡು ಭಾಗಗಳುಳ್ಳ ಟೀಕೆಯಂ ಬರೆದರು. ಅದರಲ್ಲಿ ಪೂರ್ವಭಾಗವು ಪಂಚಪಾದಿಕೆಯೆಂತಲೂ ಉತ್ತರ ಭಾಗವು ವೃತ್ತಿಯೆಂತಲೂ ಹೆಸರುಹೊಂದಿ ವಿಜಯಡಿಂಡಿಮವೆನಿಸಿದವು.

ಆಚಾರ್ಯರು ಎರಡು ಭಾಗಗಳನ್ನೂ ಕೇಳಿ ಪೂರ್ವಭಾಗವಾದ ಪಂಚಪಾದಿಕೆಯೇ ಜೆನ್ನಾಗಿದೆ ; ಮತ್ತು ಅದೇ ಪ್ರಪಂಚದಲ್ಲಿ ಪ್ರಖ್ಯಾತವಾಗಿ ನಿಲ್ಲುವುದು. ಮುಂದೆ ನೀನು ವಾಚಸ್ಪತಿಯೆಂಬ ಹೆಸರಿನಿಂದ ಭೂಮಿಯಲ್ಲವತರಿಸಿ ನನ್ನ ಭಾಷ್ಯಕ್ಕೆ ಟೀಕೆಯನ್ನು ರಚಿಸುವೆ ; ಅದು ಶಾಶ್ವತವಾಗಿ ನಿಲ್ಲುವುದು ,, ಎಂದು ಹೇಳಿದರು.

ಬಳಿಕ ದೇಶಿಕರು ಉಳಿದ ತಮ್ಮ ಶಿಷ್ಯರಂ ಕರೆದು ,, ನಿಮ್ಮ ನಿಮ್ಮ ಯೋಗ್ಯತಾನುಸಾರವಾಗಿ ಅದ್ವೈತಗ್ರಂಥಗಳಂ ರಚಿಸಿರಿ ,, ಎಂದಾಜ್ಞಾಪಿಸಲು ಅವರು ಅದರಂತೆ ಗ್ರಂಥಗಳಂ ರಚಿಸಿ ಗುರುವಿಗರ್ಪಿಸಿದರು.

ಈ ಪ್ರಕಾರವಾಗಿ ಆಚಾರ್ಯರು ಜ್ಞಾನಮಾರ್ಗಪ್ರಚಾರಮಾಡುತ್ತಿದ್ದರು.

ಏಕಾದಶವಲ್ಲರೀ

ಪ್ರಾಜ್ಞೋ ऽಸ್ಮಿ ತೀರ್ಥಯಾತ್ರಾಮಟತಿ ತದನು ಸ ಸ್ವಾಜ್ಞಯಾ ಪದ್ಮಪಾದೇ
ಪ್ರಾದುರ್ಭೂತೋ ಜನನ್ಯಾಃ ಸ್ಮೃತಿಮನುವಿದಧತ್ ಸಂಸ್ಥಿತಾಯಾಃ ಕ್ರಿಯಾಸ್ತಾಃ॥
ತದ್ಗ್ರಾಮಾಣಾಂಶ್ಚ ಶಪ್ತ್ವಾ ಸಮುಚಿತವಜನಾನಧ್ವನೀನಾನಥಾ ऽಯಂ
ಗ್ರನ್ಥಂ ಪ್ರಾಚೀಕಟತ್ಕೇರಳವರಮಹಿಭೃತ್ಪದ್ಮಪಾದ ಪ್ರಣೀತಾಂ ॥

ಅನಂತರ ಪದ್ಮಪಾದರು ಆಚಾರ್ಯರನ್ನು ಕುರಿತು ‘‘ಸ್ವಾಮಿ ತೀರ್ಥಯುಕ್ತಗಳಾದ ದೇಶಗಳನ್ನು ನೋಡಬೇಕೆಂದಿಚ್ಛೆಯುಂಟಾಗಿದೆ; ಅನುಜ್ಞೆಯಾಗಬೇಕು’’ ಎಂದು ಪ್ರಾರ್ಥಿಸಲು ಆಚಾರ್ಯರು ‘‘ಗುರುಗಳ ಸಮೀಪದಲ್ಲಿ ಮಾಡಿರುವ ವಾಸವೇ ಕ್ಷೇತ್ರವಾಸವು, ಅವರ ಪಾದೋದಕವೇ ತೀರ್ಥವು; ಗುರೂಪದೇಶದಿಂದ ಹೊಂದಲ್ಪಟ್ಟ ಆತ್ಮದೃಷ್ಟಿಯೇ ಸಕಲ ದೇವತಾ ದರ್ಶನಾದಿಗಳು’’ ಎಂದು ಹೇಳಿ ಅವನ ಮನಸ್ಸು ತೀರ್ಥಯಾತ್ರೆಯಮೇಲಿರುವುದನ್ನು ತಿಳಿದು ಪ್ರಾರಬ್ಧಕರ್ಮಗಳನ್ನು ಅನುಭವಿಸಿಯೇ ತೀರಿಸಬೇಕೆಂಬ ಅನೇಕ ಉಪದೇಶವಂ ಮಾಡಿ ಬೀಳ್ಕೊಟ್ಟರು.

ಇತ್ತ ಆಚಾರ್ಯರು ಸುರೇಶ್ವರಾದಿಗಳೊಡನೆ ಇರುತ್ತಾ ತಾಯಿಯಾದ ಆರ್ಯಾಂಬೆಯ ಸ್ಮರಣೆಯನ್ನು ಆತ್ಮಯೋಗಸಾಮರ್ಥ್ಯದಿಂದ ತಿಳಿದು, ಈ ವಿಷಯವನ್ನು ಶಿಷ್ಯರಿಗೆ ತಿಳಿಸಿ ಅಂತರಿಕ್ಷ ಮಾರ್ಗದಿಂದ ಬಹು ಜಾಗ್ರತೆಯಾಗಿ ತಾಯಿಯ ಸಾನ್ನಿಧ್ಯವನ್ನು ಹೊಂದಿದರು.

ಆಗ ಆರ್ಯಾಂಬೆಯು ತಾನು ಪೂರ್ಣಾನದಿಯಲ್ಲಿ ಸ್ನಾನಮಾಡಬೇಕೆಂದೂ, ಹೋಗಲು ಶಕ್ತಿಇಲ್ಲವೆಂದೂ ಹೇಳಲು ಆಚಾರ್ಯರು, ತಮ್ಮ ಮಹಿಮೆಯಿಂದ ಆ ನದಿಯನ್ನು ತಮ್ಮ ಮನೆಯ ಸಮೀಪಕ್ಕೆ ಕರೆದುಕೊಂಡುಬಂದರು.

ಇಷ್ಟರಲ್ಲಿಯೇ ಆರ್ಯಾಂಬೆಯು ಮೃತಳಾಗಲು ಆಚಾರ್ಯರು ತಾಯಿಗೆ ಅಂತ್ಯಕರ್ಮವನ್ನು ತಾವೇ ಮಾಡಬೇಕೆಂದು ಯೋಚಿಸಿ ತಮ್ಮ ಬಂಧುಗಳನ್ನು ಕರೆಯಲು ಅವರು ಯತಿಗೆ ಕರ್ಮಾಧಿಕಾರವಿಲ್ಲದಕಾರಣ, ತಾವೊಬ್ಬರೂ ಬರುವುದಿಲ್ಲವೆಂದು ಹೇಳಿದ್ದಲ್ಲದೇ ತಮ್ಮ ಮನೆಗಳಿಂದ ಬೆಂಕಿಯನ್ನು ಕೂಡ ಕೊಡಲಿಲ್ಲ.

ಇದನ್ನು ನೋಡಿ ಆಚಾರ್ಯರು ತಮ್ಮ ಬಲಗೈಯಲ್ಲಿ ಅಗ್ನಿಯಂ ಮಥಿಸಿ ತಾಯಿಯು ವಾಸವಾಗಿದ್ದ ಮನೆಗೇ ಅಗ್ನಿಪ್ರತಿಷ್ಠಾಪನೆಯಂ ಮಾಡಿ, ಅನಂತರ ಆ ಅಗ್ರಹಾರದವರನ್ನು ‘‘ಇಲ್ಲಿಂದ ಮುಂದೆ ನೀವು ವೇದಬಾಹ್ಯರಾಗಿ ಯತಿಗಳಿಗೆ,

ಭಿಕ್ಷೆ ಕೊಡಲು ಅಯೋಗ್ಯರಾಗಿರಿ; ನಿಮ್ಮ ಹಿತ್ತಲುಗಳೇ ಸ್ಮಶಾನಗಳಾಗಿರಲಿ'' ಎಂದು ಶಪಿಸಿ, ತಾಯಿಗೆ ಮುಕ್ತಿಯಾಗುವಂತೆ ದೈವಾನುಗ್ರಹಮಾಡಿದ್ದರಿಂದ ಅವಳು ಮುಕ್ತಳಾದಳು.*

ಆಚಾರ್ಯರ ವಚನವು ಅಮೋಘವಾದ್ದರಿಂದ ಕಾಲಟ್ಯಗ್ರಹಾರದವರ ಆಚಾರವು ಆಚಾರ್ಯರ ಶಾಪದಂತೆ ನೆಲೆಗೊಂಡಿತು.†

ಅತ್ತ ಪದ್ಮಪಾದರು ಕಾಳಹಸ್ತೀಶ್ವರನನ್ನು ಸೇವಿಸಿ, ಸುವರ್ಣಮುಖಿಯಲ್ಲಿ ಸ್ನಾನಮಾಡಿ, ಕಂಚಿಗೆ ಬಂದು ದೇವರ ಸೇವೆಯಂ ಮಾಡಿ, ಅಲ್ಲಿಂದ ಚಿದಂಬರಕ್ಕೆ ಹೋಗಿ ನಟರಾಜನನ್ನು ಸ್ತುತಿಸಿ, ಅಲ್ಲಿ ಶಿವಗಂಗಾ ತೀರ್ಥವೆಂಬ ತೀರ್ಥವನ್ನು ನಿರ್ಮಿಸಿ, ರಾಮೇಶ್ವರಕ್ಕೆ ಹೊರಟು ದಾರಿಯಲ್ಲಿ ಸಿಕ್ಕಿದ, ಪೂರ್ವಾಶ್ರಮದ ಸೋದರ ಮಾವನಾದ ಭಟ್ಟಪಾದರ ಶಿಷ್ಯನಿಂದ ' ಆದಿನ ಅಲ್ಲಿಯೇ ಇದ್ದು ಭಿಕ್ಷೆಯಂ ಸ್ವೀಕರಿಸಬೇಕು.' ಎಂದು ಬಲಾತ್ಕರಿಸಲ್ಪಟ್ಟವರಾಗಿ, ಅಲ್ಲಿಯೇ ನಿಂತು, ಸ್ವರಚಿತಗಳಾದ ಗ್ರಂಥಗಳನ್ನು ನೋಡಿ ವಾದಕ್ಕೆ ಬಂದ ಸೋದರಮಾವನನ್ನು ಸೋಲಿಸಲವನು ' ಪದ್ಮಪಾದನ ಗ್ರಂಥಗಳನ್ನು ಹೇಗಾದರೂ ನಾಶಮಾಡಬೇಕು' ಎಂದು ಯೋಚಿಸುತ್ತಿದ್ದು, ದೈವಯೋಗದಿಂದ, ಪದ್ಮಪಾದರು ಗ್ರಂಥಗಳನ್ನು ಅಲ್ಲಿಯೇ ಇಟ್ಟು, ' ತೀರ್ಥಯಾತ್ರೆ ಮಾಡಿಕೊಂಡು ಬರುವಾಗ ತೆಗೆದುಕೊಂಡು ಹೋಗುತ್ತೇನೆ, ಎಂದು ಹೇಳಿ ರಾಮೇಶ್ವರಕ್ಕೆ ಹೊರಟು ತೀರ್ಥಯಾತ್ರೆಯಂಮಾಡಿ, ಅಲ್ಲಿನ ಜನರಿಗೆ ಅದ್ವೈತತತ್ತ್ವವನ್ನು ಪ ದೇಶಿಸಿ ಹಿಂತಿರುಗಿ ಸೋದರಮಾವನ ಬಳಿಗೆ ಬರುವಾಗ್ಯೆ, ಅವನು ತಾನು ಅಪವಾದಕ್ಕೆ ಸಿಕ್ಕದ ಹಾಗೆ ಪುಸ್ತಕಗಳನ್ನಿಟ್ಟಿದ್ದ ಮನೆಗೆ ಬೆಂಕಿಯನ್ನು ಹೊತ್ತಿಸಿ ಎಲ್ಲವನ್ನೂ ಭಸ್ಮಮಾಡಿ, ಪದ್ಮಪಾದರ ಎದುರಿಗೆ ನನ್ನ ಮನೆ ಸುಟ್ಟುಹೋದುದಕ್ಕಿಂತ ಸುಟ್ಟು ಹೋದ ನಿನ್ನ ಪುಸ್ತಕಗಳಿಗೆ ಬಹಳವಾಗಿ ವ್ಯಸನಪಡುತ್ತೇನೆಂದು ಹೇಳಿದ ಸೋದರ ಮಾವನ ಮಾತಿಗೆ ಅನುತಾಪಗೊಂಡರೂ, ಧೈರ್ಯದಿಂದ ಪುನಃ' ಆ ಗ್ರಂಥಗಳಂ ರಚಿಸು

---

*'' ಆಹ ! ಯತಿಗೆ ಕರ್ಮಾಧಿಕಾರವೆತ್ತಣದು, ಆಚಾರ್ಯರಿಂದ ಮಾಡಲ್ಪಟ್ಟ ಮಾತೃವಿನ ಅಂತ್ಯಕರ್ಮವು ಅಶಾಸ್ತ್ರೀಯವಲ್ಲವೇ '' ಎಂಬ ಸಂದೇಹವು ವಾಚಕರ ಮನಸ್ಸಿನಲ್ಲುತ್ಪನ್ನವಾಗಬಹುದು.

ಪರಶುರಾಮನು ಮಾತೃವನ್ನು ತಂದೆಯ ಆಜ್ಞೆಯಿಂದ ಕೊಂದರೂ ಹೇಗೆ ದೋಷವನ್ನು ಹೊಂದಲಿಲ್ಲವೋ ಹಾಗೆಯೇ ಸನ್ಯಾಸಕಾಲದಲ್ಲಿ ಶಂಕರರು ಮಾಡಿದ್ದ ವಾಗ್ದಾನದಿಂದಲೂ, ದೇಹಾಂತ್ಯದಲ್ಲಿ ಆಕೆಯು ಅಪೇಕ್ಷಿಸಿದ್ದನ್ನು ನೆರವೇರಿಸಿ ಮಾತೃವಿನ ಋಣವಂ ಪರಿಹಸಿಕೊಳ್ಳುವುದು ಧರ್ಮವಾದ್ದರಿಂದಲೂ ದೇಶಿಕರು ಮಾಡಿದ್ದು ಸಶಾಸ್ತ್ರೀಯವಲ್ಲದೇ ಅಶಾಸ್ತ್ರೀಯವಲ್ಲವು.

†ಆ ಶಾಪವು ಬ್ರಹ್ಮೀಭೂತರಾದ, ಶ್ರೀ ಶ್ರೀಂಗೇರಿ ಪೀಠಾಧ್ಯಕ್ಷರಾಗಿದ್ದ ಶ್ರೀ ಸಚ್ಚಿದಾನಂದ ಶಿವಾಭಿನವ ವಿದ್ಯಾನೃಸಿಂಹಭಾರತೀ ಸ್ವಾಮಿಗಳಿಂದ ವಿಮೋಚನೆ ಮಾಡಲ್ಪಟ್ಟಿತು.

ವೆನೆನ್ನಲು, ಸೋದರಮಾವನು ಅಸೂಯೆಂದ ಪದ್ಮಪಾದರಿಗೆ ಭಿಕ್ಷಾನ್ನದಲ್ಲಿ ಮದ್ದು ಹಾಕಿ ಬುದ್ಧಿಯು ಕೆಡುವಂತೆ ಮಾಡಿದನು.

ಅನಂತರ ಪದ್ಮಪಾದರು ಅದೇ ಚಿಂತೆಯಿಂದ ಕೃಶರಾಗಿ ಕೇರಳದೇಶದ ಬಳಿ ಮಹಾಸುರಾಯದಲ್ಲಿದ್ದ ಗುರುಗಳ ಬಳಿಗೆ ಬಂದು, ತಮ್ಮ ಸಂಕಟವನ್ನು ತಿಳಿಸಲವರು 'ನಿನಗೆ ಹೀಗಾಗುವುದೆಂದು ನಾನು ಸುರೇಶ್ವರರಿಗೆ ಮೊದಲೇ ತಿಳಿಸಿದ್ದೆ; ಕರ್ಮಗತಿಯನ್ನು ಮೀರಲು ಯಾರುತಾನೇ ಶಕ್ತರು? ಶೃಂಗಗಿರಿಯಲ್ಲಿ ನಾವು ಕೇಳಿದ್ದಷ್ಟು ನಿನ್ನ ಗ್ರಂಥವನ್ನು ಹೇಳುವೆವು' ಎಂದು ಹೇಳಿ ಪಂಚಪಾದಿಕೆಯಂ ಬರೆಯಿಸಲು ಪದ್ಮಪಾದರು ಅಷ್ಟಕ್ಕೇ ತೃಪ್ತರಾದರು.

ಇದಾದಮೇಲೆ ಕೇರಳದೇಶದ ರಾಜನು ಗುರುದರ್ಶನಕ್ಕೆ ಬರಲು ಶಂಕರರು 'ನೀನು ಬರೆದಿದ್ದ ಮೂರು ನಾಟಕಗಳೂ ಪ್ರಚಾರಕ್ಕೆ ಬಂದಿವೆಯೋ' ಎನ್ನಲು, ಅವು ಕಾರಣಾಂತರದಿಂದ ಸುಟ್ಟುಹೋದವು' ಎಂದು ವ್ಯಸನದಿಂದ ನಿರೂಪಿಸಲು 'ಶಂಕರದೇಶಿಕರು ತಾವು ಕೇಳಿದ್ದಷ್ಟು ಭಾಗವನ್ನು ಈಗ ಬರೆಯಿಸುವೆವು' ಎಂದು ಹೇಳಿ, ತಾವು ಕೇಳಿದ್ದಷ್ಟು ಭಾಗವನ್ನು ಆಗ ಬರೆಯಿಸಿ ಕಳುಹಿಸಿದರು.

ದ್ವಾದಶವಲ್ಲರೀ

ಅಥಾಚಾರ್ಯಃಶಿಷ್ಯೈರಪಿಸಹಸುಧನ್ವಕ್ಷಿತಿಭೃತಾ
ಕಥಾವಾದ್ಯೈರ್ಯುಕ್ತೈರ್ನಿಗಮನಗಸೋಪಾನಪಥಿಕೈಃ |
ಪ್ರಥಾಭಾಜಶ್ಯಾಕ್ತಕ್ಷಪಣಕಪಾಲ್ಯಾದಿವಿಮತಾ-
ಕಥಾಶೇಷೀಕೃತ್ಯಾದ್ವಯಮತಮುಪಾಬ್ರಹ್ಮಯದಯೋ ||

ಆಚಾರ್ಯಕೃತದಿಗ್ವಿಜಯವರ್ಣನವು.

ಅನಂತರ ಶ್ರೀಮಚ್ಛಂಕರಭಗವತ್ಪಾದರು, ದಿಗ್ವಿಜಯವಂ ಮಾಡಬೇಕೆಂದು "ಪದ್ಮಪಾದಾಚಾರ್ಯರು, ಹಸ್ತಾಮಲಕಾಚಾರ್ಯರು, ತೋಟಕಾಚಾರ್ಯರು, ಸಮಿತ್ಪಾಣ್ಯಾಚಾರ್ಯರು, ಜ್ಞಾನಕಂದಾ

ಚಾರ್ಯರು, ಚಿದ್ವಿಲಾಸಾಚಾರ್ಯರು, ವಿಷ್ಣುಗುಪ್ತಾಚಾರ್ಯರು, ಶುದ್ಧಕೀರ್ತ್ಯಾಚಾರ್ಯರು, ಭಾನುಮರೀಚ್ಯಾಚಾರ್ಯರು, ಕೃಷ್ಣದರ್ಶನಾಚಾರ್ಯರು, ಬುದ್ಧಿಸೃಧ್ಯಾಚಾರ್ಯರು, ವಿರಿಂಚಿ ಪಾದಾಚಾರ್ಯರು, ಆನಂದಗಿರ್ಯಾಚಾರ್ಯರು, ಬಿತ್ಸುಖಾಚಾರ್ಯರು, ಶುದ್ಧಾಂತಾಚಾರ್ಯರು, ಮುನೀಶ್ವರಾಚಾರ್ಯರು, ಪರಮತಕಾಲಾನಲಾಚಾರ್ಯರು, ದಿವಾಕರಾಚಾರ್ಯರು, ಲಕ್ಷ್ಮಣಾಚಾರ್ಯರು, ತ್ರಿಪುರಕುಮಾರಾಚಾರ್ಯರು, ಗಿರಿಜಾಕುಮಾರಾಚಾರ್ಯರು, ಬಟುಕನಾಥಾಚಾರ್ಯರು, ಶುದ್ಧಾನಂದಗಿರ್ಯಾಚಾರ್ಯರು, ಧೀಮದಾಚಾರ್ಯರು'' ಇತ್ಯಾದಿ ಶಿಷ್ಯರಿಂದ ಕೂಡಿ ಸುಧನ್ವರಾಜನಿಂದ ಪಿಂಬಾಲಿಸಲ್ಪಡುತ್ತಾ ಮೊದಲು ಸೇತುವಿನ ಕಡೆ ಹೊರಟರು.

' ದಾರಿಯಲ್ಲಿ ಆಚಾರ್ಯರು ಮಧ್ಯಾರ್ಜುನಕ್ಷೇತ್ರಕ್ಕೆ ಬಂದು ಮಧ್ಯಾರ್ಜುನೇಶ್ವರನನ್ನು ಪೂಜಿಸಿ '' ಸ್ವಾಮಿನಾ ! ನೀನು ಸರ್ವಜ್ಞನಾದ್ದರಿಂದ ನಿಗಮಾದಿ ತಾತ್ಪರ್ಯಗೋಚರವಾದದ್ದು, ದ್ವೈತವೇ ? ಅಥವಾ ಅದ್ವೈತವೇ ?'' ಎಂದು ಪ್ರಾರ್ಥಿಸಲು, ಈಶ್ವರನು ಮಧ್ಯಾರ್ಜುನೇಶಲಿಂಗದಿಂದ ಸಾಕಾರವಾಗಿ ದರ್ಶನವನ್ನು ಕೊಟ್ಟು ತನ್ನ ಬಲಗೈಯನ್ನು ಮೇಲಕ್ಕೆತ್ತಿ ಗಂಭೀರವಾದ ಮಾತಿನಿಂದ '' ಸತ್ಯಮದ್ವೈತಂ'' ಎಂದು ಮೂರುಸಲ ಹೇಳಿ ಅಂತರ್ಹಿತನಾದನು.

ಈ ಮಹದ್ವ್ಯಾಪಾರವನ್ನು ನೋಡುತ್ತಿದ್ದ ಜನರಿಗೆ ಬಹಳವಾದ ಆಶ್ಚರ್ಯವಾಯಿತು.

ಅನಂತರ ಆ ದೇಶದಲ್ಲಿದ್ದವರೂ ಮತ್ತು ಆ ದೇವರ ಭಕ್ತರೂ ಶ್ರೀ ಶಂಕರನನ್ನೇ ಸದ್ಗುರುವನ್ನಾಗಿ ಮಾಡಿಕೊಂಡು (ಪಂಚ ಉಮಾ, ಗಣಪತಿ, ಈಶ್ವರ, ಸೂರ್ಯ, ಅಚ್ಯುತ,) ಪೂಜಾರತರಾಗಿಯೂ, ಪ್ರಾತಸ್ನಾನಾದಿಗಳಿಂದ ವಿಶುದ್ಧರಾಗಿಯೂ, ಪಂಚಯಜ್ಞಪರಾಯಣರಾಗಿಯೂ, ಶ್ರುತ್ಯುಕ್ತಕರ್ಮಾನುಯಾಯಿಗಳಾಗಿಯೂ, ಶುದ್ಧಾದ್ವೈತಪರಾಯಣರಾಗಿಯೂ, ಆದರು.

ಹೀಗೆ ಆ ದೇಶದವರನ್ನು ಅದ್ವೈತಿಗಳನ್ನಾಗಿ ಮಾಡಿ ಪ್ರಮಥಗಣಯುಕ್ತನಾದ ಈಶ್ವರನಂತೆ ಆಚಾರ್ಯರು ಶಿಷ್ಯಸಹಿತರಾಗಿ ರಾಮೇಶ್ವರಕ್ಕೆ ಹೋದರು.

ಶಾಕ್ತಮತಖಂಡನವು.

ಆಚಾರ್ಯರು ಅಲ್ಲಿರುವಾಗ್ಯೆ ಗಿರಿಜಾರ್ಚಾರತರಾದ ಕೆಲವರು ಬಂದು ಆಚಾರ್ಯರೆದುರಿಗೆ ವಾದಕ್ಕೆ ನಿಲ್ಲಲು ಆಚಾರ್ಯರು ಅವರನ್ನು ಶ್ರುತ್ಯುಕ್ತಪ್ರಮಾಣಗಳಿಂದ ಗೆದ್ದು ಅವರನ್ನು ಅದ್ವೈತಿಗಳನ್ನಾಗಿ ಮಾಡಿದರು.

ಅನಂತರ ಶಾರದೋಪಾಸನೆಯಲ್ಲಿ ಆಸಕ್ತರಾದ ಕೆಲವರು ಪುಸ್ತ, ಪುಂಡ್ರಕಬಿಷ್ಟಿ ಶರಾಗಿ ಬಂದು ಆಚಾರ್ಯರನ್ನು ಕುರಿತು ‘‘ ಸ್ವಾಮಿ ! ವೇದಕ್ಕೆ ನಿತ್ಯತ್ವವಿರುವುದರಿಂದ ಶಾರದೆಯೂ ನಿತ್ಯರೂಪಿಣಿಯು; ಅವಳೇ ಲೋಕಕ್ಕೆಲ್ಲಾ ಕಾರಣಭೂತಳು; ‘ ಪ್ರಣೋ ದೇವೀ ಸರಸ್ವತೀ ’ ಎಂಬ ಶ್ರುತಿಯಂತೆ ಅವಳಿಂದಲೇ ಬುದ್ಧಿಜ್ಞಾನಗಳು ಕೊಡಲ್ಪಡಬೇಕು; ಸಕಲ ಗುಣಗಳಿಂದ ಕೂಡಿರುವ ಅವಳು ಮುಕ್ತ್ಯಂಗಳಿಂದಲೂ ಸೇವಿಸಲ್ಪಡಲು ಅರ್ಹಳು. ಆದ್ದರಿಂದ ನೀವೂ ಅವಳ ಉಪಾಸನೆಯನ್ನು ಮಾಡಿ ’’ ಎನ್ನಲು ಆಚಾರ್ಯರು ‘‘ ಎಲೈ ಜನರೇ ! ಕಂಠತಾಲ್ವಾದಿಗಳ ಸಂಗಮದಿಂದ ಹುಟ್ಟಿದ ವೇದಕ್ಕೆ ನಿತ್ಯತ್ವವು ಹೇಗೆ ? ವರ್ಣಮಾತ್ರಕ್ಕೊ ಅಥವಾ ವರ್ಣ ಸಂತತಿಗೋ ನಿತ್ಯತ್ವವೇ ಹೊರ್ತು ವೇದಕ್ಕೆ ನಿತ್ಯತ್ವವಿಲ್ಲ ; ಭಗವಾ ಸಹಸ್ರರಶ್ಮಿಯು, ಸೃಷ್ಟಿಕಾಲ ಲ್ಲಿ ಮಹರ್ಷಿಗಳಿಗೆ ‘ ಅಂಗಸ ಹಿತವಾದ ವೇದಕ್ಕೆ ಯುಗಾಂತ್ಯದಲ್ಲಿ ಪ್ರಳಯವು ಎಂದು ಹೇಳಿರುವನು ’ ಎಂದು ಸೂರ್ಯಸಿದ್ಧಾಂತದಲ್ಲಿದೆ. ಸೂರ್ಯನಿಂದ ಪ್ರಳಯವನ್ನು ಹೊಂದಿದ ಶಾರ ದೆಗೆ ನಿತ್ಯತ್ವವು ಹೇಗೆ ? ಆದ್ದ ಂದ ನಿತ್ಯನಾದ ಪರಬ್ರಹ್ಮನಿಂದ ಮೋಕ್ಷ ಬರುವುದಲ್ಲದೆ ಬೇರೆ ಅಲ್ಲ ’’ ಎಂದು ಅವರಿಗೆ ಬೋಧಿಸಿ, ಅವರನ್ನೆಲ್ಲಾ ಪಂಡಾಯತನ ಪೂಜಾರತ ರಾದ ಅಪ್ಪೈಯ್ಯದೀಕ್ಷಿತಗಳನ್ನಾಗಿ ಮಾಡಿ ವಾದಕ್ಕೆ ನಿಂತ ವಾಮಾಚಾರರರನ್ನು ಶ್ರುತ್ಯುಕ್ತಪ್ರ ಮಾಣಗಳಿಂದ ಸೋಲಿಸಿ, ಅವರಿಗೆಲ್ಲಾ ಅಪ್ಪೈಯ್ಯದೀಕ್ಷಿತವಾನವಂ ಮಾಡಿಸಿ, ಶ್ರೀರಾಮ ನಿಂದ ಪ್ರತಿಷ್ಠಿತವಾದ ರಾಮೇಶ್ವರಲಿಂಗವನ್ನು ಗಂಗಾಜಲದಿಂದ ಅಭಿಷೇಕವಂಮಾಡಿ, ಕಮಲ, ಬಿಲ್ವಪತ್ರಾದಿಗಳಿಂದ ಸ್ವಾಮಿಯನ್ನು ಪೂಜಿಸಿ, ಪಾಂಡ್ಯರನ್ನೂ ಚೋಳರ ನ್ನೂ, ದ್ರವಿಡರನ್ನೂ, ಸ್ವಾಧೀನಮಾಡಿಕೊಂಡು, ಹಸ್ತಿಪರ್ವತಕ್ಕೆ ಕಟಿಮೇಖಲಾಭೂತ ವಾದ ಕಾಂಚೀನಗರಕ್ಕೆ ಪ್ರಯಾಣಮಾಡಿದರು.

ಶ್ರೀಚಕ್ರಸ್ಥಾಪನೆ.

ಆಚಾರ್ಯರು ಕಂಚಿಯನ್ನು ತಲಪಿದಮೇಲೆ ಸಶಿಷ್ಯರಾಗಿ ಒಂದು ಜಗುಲಿಯ ಮೇಲೆ ಕುಳಿತಿರಲು, ಆ ಮನೆಯ ಯಜಮಾನನು ಬಂದು ‘‘ ಸ್ವಾಮಿ ! ಸಾಯಂಕಾಲ ದಲ್ಲಿ ಇಲ್ಲಿರಬೇಡಿ. ಏಕೆಂದರೆ ಈ ಊರಿನ ಅಧಿದೇವತೆಯಾದ ಕಾಮಾಕ್ಷಿಯು ಅತಿ ಕ್ರೂರಳು ; ಸಾಯಂಕಾಲವಾದಮೇಲೆ ಆಕೆಯು ಬೀದಿಯನ್ನೆಲ್ಲಾ ಸುತ್ತಿ ಸಿಕ್ಕಿದವ ರನ್ನು ತಿಂದುಬಿಡುತ್ತಾಳೆ ; ಆದ್ದರಿಂದ ತಾವು ಎಲ್ಲಿಯಾದರೂ ದಯಮಾಡಿ ’’ ಎಂದು ಹೇಳಿ ಹೊರಟುಹೋದನು.

ಆದಿನ ಸಾಯಂಕಾಲವಾಗುತ್ತಲೂ, ಆಚಾರ್ಯರು ಸ್ವಕರ್ಮಾನಂತರ ಶಿಷ್ಯರ ನ್ನೆಲ್ಲಾ ಮಲಗಿಕೊಳ್ಳುವಂತೆ ಹೇಳಿ ತಾವು ಓರ್ವರೇ ಎಚ್ಚರವಾಗಿ ಕುಳಿತಿದ್ದರು ;

ಸುಮಾರು ಅರ್ಧರಾತ್ರಿಯ ಸಮಯದಲ್ಲಿ ದೇವಿಯು ಬಹಳ ಆರ್ಭಟವನ್ನು ಮಾಡಿ ಕೊಂಡು ಬಂದು ಜಗುಲಿಯಮೇಲಿದ್ದ ಆಚಾರ್ಯರನ್ನು ನೋಡದೆ ಹೊರಟಳು. ಆಗ ಆಚಾರ್ಯರು ಆವಳ ಹಿಂದೆಯೇ ಹೊರಟರು.

ದೇವಿಯು ಊರನ್ನೆಲ್ಲಾ ಸುತ್ತಿ ಎಲ್ಲಿಯೂ ಯಾರನ್ನೂ ಕಾಣದೆ ದೇವಾಲ ಯದ ಹೊರಬಾಗಿಲಿನಲ್ಲಿ ನಿಂತಳು.

ಆಗ ಶಂಕರರು ಆಕೆಗೆ ನಮಸ್ಕರಿಸಿ ನಿಲ್ಲಲು ಆಕೆಯು ಆಚಾರ್ಯರನ್ನು "ನೀನು ಯಾರು? ಏಕೆಬಂದೆ? ನಿನ್ನನ್ನಾರುಬರಬೇಳಿದರು?" ಎನ್ನಲು ದೇಶಿಕರು "ಮಾತಃ! ನಾನು ನಿನ್ನ ಮಗನು; ಇಲ್ಲಿಗೆ ನಾನಾಗಿಯೇ ಬಂದೆನು; ಲೋಕರಕ್ಷಕಳಾದ ನಿನಗೆ ಪ್ರಜಾಪೀಡೆಯು ಯುಕ್ತವಲ್ಲ;" ಎಂದರು.

ಅದಕ್ಕೆ ದೇವಿಯು ಸ್ವಲ್ಪ ಶಾಂತಳಾಗಿ "ಎಲೈ, ನೀನು ಹೇಳುವುದು ಸತ್ಯ; ಆದರೆ ಈ ಊರಿನವರು ನನಗೆ ಸಂಪೂರ್ಣಾಹಾರವನ್ನು ಕೊಡರು" ಎನ್ನಲು, ಶಂಕ ರರು "ಅಮ್ಮಾ! ನೀನು ಜನಗಳಿಂದ ಬೇಕಾದಷ್ಟು ಆಹಾರವನ್ನು ತರಿಸಿಕೊಂಡು ತೃಪ್ತಳಾಗಬೇಕೇ ವಿನಹಾ ಹೀಗೆ ಪ್ರಜಾಪೀಡೆಮಾಡಕೂಡದು" ಎಂದು ಹೇಳಿ, ಪೀಠ ದಮೇಲೆ ಹೋಗಿ ನಿಂತ ದೇವಿಯ ಪಾದದ ಸಮೀಪದಲ್ಲಿದ್ದ ಕುಂಕುಮವನ್ನು ಚಿಲ್ಲಿ ಶ್ರೀ ಚಕ್ರವಂ ಬರೆದು ಹಿಂತಿರಿಗಿ ಬಂದರು. ಮರುದಿನ ಆ ಆಗ್ರಹಾರಿಕರು ಆಚಾರ್ಯರಿಗೆ ವಂದಿಸಿ ರಾತ್ರಿ ನಡೆದ ವಿಷಯವನ್ನು ತಿಳಿದು ಆಚಾರ್ಯರಿಗೆ ವಂದಿಸಿದರು. ಅನಂತರ ಆಚಾರ್ಯರು ಬಂದು ಶಿಲೆಯಮೇಲೆ ಶ್ರೀ ಚಕ್ರವನ್ನು ಕೆತ್ತಿಸಿ ಅದನ್ನು ದೇವಿಯ ಪಾದದ ಕೆಳಗೆ ಸ್ಥಾಪಿಸಿದರು.

ಶೈವಮತಖಂಡನವು.

ಕಾಂಚಿಯಲ್ಲಿ ಆಚಾರ್ಯರು ಎರಡು ತಿಂಗಳು ಇರುತ್ತಿರಲು ಅವರ ಸಮೀಪಕ್ಕೆ ಅರ್ಧೋನ್ಮೀಲಿತದೃಗ್ಗೋಪಿಗಳೂ, ಲಿಂಗಾಂಕಿತಭುಜದ್ವಯರೂ ಆದ ಶೈವರು ತಲೆಯಲ್ಲಿ ತ್ರಿಶೂ ಲವನ್ನೂ, ಲಿಂಗವನ್ನೂ ಇಟ್ಟುಕೊಂಡು ಹೃದಯ, ನಾಭಿ ಮುಂತಾದ ಸ್ಥಳಗಳಲ್ಲೆಲ್ಲಾ ಲಿಂಗದಿಂದ ಚಿಹ್ನಿತರಾಗಿಬಂದು "ಸ್ವಾಮಿನಾ! 'ಋತಂಸತ್ಯಂ ಪರಂಬ್ರಹ್ಮ..... ವಿಶ್ವರೂಪಾಯವೈನಮಃ' ಮತ್ತು 'ದ್ಯೌರ್ಮೂರ್ಧಾನಂ..... ಶರಣಮಹಂ ಪ್ರಪದ್ಯೇ' ಇತ್ಯಾದಿ ಶ್ರುತಿವಾಕ್ಯಗಳಲ್ಲಿ ಹೇಳಿರುವಂತೆ ಈಶ್ವರನಲ್ಲಿ ಭಕ್ತಿಯುಳ್ಳವರಾಗಿ ದ್ದರೆ, ಅವರಿಗೆ ಶಿವಲೋಕಪ್ರಾಪ್ತಿಯಾಗುತ್ತದೆ; ಮತ್ತು ಎಲೈ ಯತಿಯೇ! ಈಶ್ವ ರನು ದೂರ್ವಾಸನನ್ನು ಕುರಿತು 'ಪರಾತ್ಪರನೂ, ಏಕಾಕ್ಷರರೂಪಿಯೂ ಆದ ನಾನೊ

ಬ್ಬನೇ ಬ್ರಹ್ಮವಿಷ್ಣುಗಳಿಗೂ ಮತ್ತು ಲೋಕಗಳಿಗೂ ಕಾರಣಭೂತನು ; ಜಗತ್ಸಂಹಾರ ಕಾರಿಣಿಯಾದ ಶಕ್ತಿಯು ಮದಿಚ್ಛಾರೂಪಿಣಿಯು ; ನನ್ನಿಂದಲೇ ಸೃಷ್ಟಿಮಾಡಲ್ಪಟ್ಟ ಆ ಶಕ್ತಿಯು ನನ್ನಿಂದಲೇ ನಾಶವನ್ನು ಹೊಂದಿ ಪುನಃ ನನ್ನಿಂದಲೇ ಸೃಷ್ಟಿಸಲ್ಪಡುತ್ತಾಳೆ ; ಅವ್ಯಯರಾದ ಏಕಾದಶರುದ್ರರೂ, ನನ್ನಿಂದಲೇ ಸೃಷ್ಟಿಸಲ್ಪಟ್ಟರು ; ಸೃಷ್ಟಿಕರ್ತನನ್ನು ರಾಜಸಗುಣಯುಕ್ತನನ್ನಾಗಿಯೂ, ರಕ್ಷಕನನ್ನು ಸಾತ್ವಿಕಗುಣಯುಕ್ತನನ್ನಾಗಿಯೂ, ನಾಶಕನನ್ನು ತಮೋಗುಣಯುಕ್ತನನ್ನಾಗಿಯೂ ಸೃಷ್ಟಿಸಿದೆನು ; ಅವರೇ ಬ್ರಹ್ಮ ವಿಷ್ಣು ಮಹೇಶ್ವರರು ' ಎಂದು ಮೊದಲಾಗಿ ಹೇಳಿದ್ದಾನೆ. ರುದ್ರಪೂಜಾಸಕ್ತರೂ, ರುದ್ರಜಪಮಾಡತಕ್ಕವರೂ, ಪಂಡಾಕ್ಷರೀಜಪರತರೂ, ರುದ್ರಾಕ್ಷಿಗಳಿಂದಲಂಕೃತರಾದ ಅಂಗಗಳುಳ್ಳವರೂ ಮತ್ತು ವಿಭೂತಿಯಿಂದ ಬಳಿಯಲ್ಪಟ್ಟ ದೇಹಗಳುಳ್ಳವರೂ ಆದ ಜನರು ಶಿವಲೋಕಕ್ಕೆ ಹೋಗುತ್ತಾರೆ ; ಇವಲ್ಲದೇ ' ಸತ್ಯಂ ಜ್ಞಾನಮನಂತಂ ' ಇತ್ಯಾದಿ ಶ್ರುತಿವಾಕ್ಯಗಳಿಂದಲೂ ಈಶ್ವರನು ಹೇಳಲ್ಪಟ್ಟಿದ್ದಾನೆ ; ಅವನು ತನ್ನ ತೇಜಸ್ಸನ್ನು ಸೂರ್ಯಾಕಾರದಿಂದ ಸೃಷ್ಟಿಸಿದನು. ; ಕ್ಲೇಶದಾಯಕನಾದ ತಮಸ್ಸನ್ನೂ ಅವನೇ ಸೃಷ್ಟಿಸಿದನು ; ' ನತತ್ರಸೂರ್ಯೋಭಾತಿನ ಚಂದ್ರತಾರಕಂ ' ಇತ್ಯಾದಿ ಶ್ರುತಿವಾಕ್ಯಗಳಿಂದ ಸೂರ್ಯಾದಿಮಂಡಲಗಳೂ ಈಶ ತೇಜಸ್ಸಿಲ್ಲದೆ ಸ್ವಯಂ ಪ್ರಕಾಶಿಸಲಾರವು; ಆದ್ದರಿಂದ ನೀವೂ ನಮ್ಮಂತೆ ಚಿಹ್ನಧಾರಣೆಯಿಂದ ಮಾಡಿಕೊಂಡು ಈಶ್ವರನನ್ನು ಉಪಾಸನೆ ಮಾಡಿ '' ಎಂದರು.

ಹೀಗೆ ಹೇಳಲ್ಪಟ್ಟ ಆಚಾರ್ಯರು ,, ಎಲೈ ಮೂಢರೇ ! ಒಬ್ಬ ದೇವನೇ ಬ್ರಹ್ಮರೂಪದಿಂದ ಸೃಷ್ಟಿಸಿ, ವಿಷ್ಣುರೂಪದಿಂದ ರಕ್ಷಿಸಿ ರುದ್ರರೂಪದಿಂದ ಪ್ರಳಯವಂ ಮಾಡುತ್ತಾನೆ. ನಾಭಿಯಮೇಲುಭಾಗದಲ್ಲಿ ಸೋಮಪರೂ, ನಾಭಿಯ ಕೆಳಭಾಗದಲ್ಲಿ ಅಸೋಮಪರೂ ಆದ ದೇವತೆಗಳು ಇವಾರೆ. ವೇದವೇದಾಂತಪಾರಗನಾದ ಬ್ರಾಹ್ಮಣನ, ಶಿಖಾ, ಶಿರ, ಲಲಾಟ, ಕಿವಿ. ಮೂಗು, ಕಪೋಲ, ಜಿಹ್ವಾ, ಓಷ್ಠ, ಚಿಬುಕ, ಕಂಠ, ಅಂಸದ್ವಯ, ಭುಜದ್ವಂದ್ವ, ಬಾಹುಯುಗ್ಮ, ಹಸ್ತಯುಗ, ವಕ್ಷಸ್ಸು, ನಾಭಿ, ಕಟಿ, ಲಿಂಗ, ವೃಷಣ, ಊರು, ಜಾನುಕ, ಗುಲ್ಫದ್ವಯ, ಪಾದಯುಗ್ಮ, ಇವುಗಳನ್ನು ನಾನೇ ಮೊದಲಾದ ದೇವತೆಗಳೂ, ಪಿತೃಗಳೂ, ಮುನಿಗಳೂ, ಆಶ್ರಯಿಸಿಕೊಂಡು, ಸ್ನಾನಾದ್ಯಾಹಾರಮಿಶ್ರಿತಗಳಾದ ನಿತ್ಯಕರ್ಮಗಳಿಂದ ತೃಪ್ತರಾಗುತ್ತೇವೆ. ಎಂದು ಬ್ರಹ್ಮನು ಆರುಣಕೇತುವಿಗೆ ಹೇಳಿದ್ದಾನೆ. ' ಬ್ರಾಹ್ಮಣನ ದೇಹದಲ್ಲಿ ಸಕಲ ದೇವತೆಗಳು ವಾಸಿಸುತ್ತಾರೆ ' ಎಂದು ಶ್ರುತಿವಾಕ್ಯವು ಬೋಧಿಸಿದರೂ, ದೇಹಕ್ಕೆ ತಾಪನಮಾಡಿದರೆ ಶೀರ್ಷಾದಿವಾಸಿಗಳಾದ ದೇವತೆಗಳು ಇವನನ್ನು ಶಪಿಸಿ ಓಡಿಹೋಗುತ್ತಾರೆ; ವ್ಯಾಧಿಯಿಲ್ಲದೆ ಕರ್ಮಯೋಗ್ಯವಾದ ವಿಶ್ರಾಂತದೇಹದಲ್ಲಿ ಚಿನ್ಹೆಯನ್ನು ನೋಡಿದರೆ ಲೋಕೇಶ್ವರ

ನಾದ ಸೂರ್ಯನನ್ನು ನೋಡಬೇಕು; ಅಥವಾ ಮಡುವಿಗೆ ಬೀಳಬೇಕು; ಸಮಸ್ತ ಪ್ರಾಣಿಗಳಲ್ಲಿಯೂ ಆಶರೀರನಾಗಿಯೂ, ಅನಸ್ಥಾರೂಪಗಳಾದ ಸ್ಥಾವರಪದಾರ್ಥಗಳಲ್ಲಿಯೂ, ಇರತಕ್ಕ ಮಹತ್ತಾದ ನಿತ್ಯವಾದ ಬ್ರಹ್ಮವಸ್ತುವನ್ನು ತಿಳಿದ ಮನುಷ್ಯನು ದುಃಖಿಸಲಾರನು. ಆದ್ದರಿಂದ ಪರಮಾತ್ಮ ವಿದ್ಯೆಯಲ್ಲಿ ಪಂಡಿತನಾದ ಗುರುವನ್ನು ಹೊಂದಿ, ಆ ಗುರುವಿನ ಕೃಪಾಕಟಾಕ್ಷದಿಂದ ಭೇದವಿಲ್ಲದವಾದವೆಂಬ ಅಮೃತವಂ ಕುಡಿದು ತೃಪ್ತರಾಗಿ'' ಎಂದುಪದೇಶಿಸಲು, ಆನರೆಲ್ಲಾ ಆಚಾರ್ಯರನ್ನು ಪೂಜಿಸಿ, ಅವರ ಪಾದೋದಕವನ್ನು ಸೇವಿಸಿ, ಅವರಿಂದುಪದಿಷ್ಟವಾದ ಆಚಾರಾನುಯಾಯಿಗಳಾಗಿ ಆಧ್ವೈತಿಗಳಾದರು.

ಲಿಂಗಧಾರಿಮತ ಭಂಜನವು.

ಆನಂತರ ಲಿಂಗಚಿಹ್ನಿತರೂ, ವಿಭೂತಿರುದ್ರಾಕ್ಷಿಧಾರಿಗಳೂ ಆದ ಕೆಲವರು ಬಂದು ''ಮಾಯಾವೇಷಧಾರಿಯಾದ ನೀನು ಯಾರು? ಪ್ರಾಮಾಣ್ಯದೊಡನೆ ಈ ಮತವನ್ನು ಖಂಡಿಸಿ ಹೊರಡಲುದ್ಯುಕ್ತನಾಗಿರುವ ನೀನು ವಂಚಕನೇ ಸರಿ; 'ಬ್ರಾಹ್ಮಣ್ಯಕ್ಕಿಂತಲೂ ವೈಷ್ಣವ್ಯವು ಶ್ರೇಷ್ಠವು; ವೈಷ್ಣವ್ಯಕ್ಕಿಂತ ಶೈವವು ಶ್ರೇಷ್ಠವು' ಎಂದು ಬ್ರಹ್ಮನು ನಾರದನಿಗೆ ಹೇಳಿದ್ದಾನೆ; ಆದ್ದರಿಂದ ಆರೂಢಪತನವು ನಿನ್ನಿಂದ ಏಕೆ ಮಾಡಲ್ಪಟ್ಟಿತು? 'ನಮಸ್ತೇ' ಎಂಬ ವೇದವಾಕ್ಯದಿಂದ ಮಹೇಶ್ವರನು ಸ್ತುತ್ಯನೇಸರಿ; 'ಸರ್ವಾನನ ಶಿರೋಗ್ರೀವಃ ಸರ್ವಭೂತಗುಹಾಶಯಃ | ಸರ್ವವ್ಯಾಪೀಸ ಭಗವಾಂಸ್ತ ಸ್ಮಾತ್ಸರ್ವಗತಶ್ಶಿವಃ' ಎಂದು ಶ್ವೇತಾಶ್ವತರೋಪನಿಷತ್ತಿನಲ್ಲಿದೆ. ಮಹೇಶ್ವರನ ತೇಜಸ್ಸಿನಿಂದ ಹರಿ, ಬ್ರಹ್ಮಾ ಮೊದಲಾದವರು ಉತ್ಪನ್ನರಾಗುತ್ತಾರೆ; 'ಆ ಈಶ್ವರನು ಧ್ಯೇಯನು' ಎಂಬ ವಿಷಯದಲ್ಲಿ ನಿನಗೆ ಋಷಿಗಣವೂ; 'ಜ್ಞಾನಪ್ರದನು' ಎಂಬ ವಿಷಯದಲ್ಲಿ ಶುಕಋಷಿಯೂ; 'ಸಕಲರಿಂದಲೂ ವೇದ್ಯನು' ಎಂಬ ವಿಷಯದಲ್ಲಿ ವೇದಗಳೂ, 'ತನ್ನ ಭಕ್ತರ ಶತ್ರುಗಳನಾಶಕನು' ಎಂಬಲ್ಲಿ ಕೃತಾಂತಾದಿಗಳೂ, 'ನಿತ್ಯನು' ಎಂಬ ವಿಷಯದಲ್ಲಿ, ಬ್ರಹ್ಮನ ತಲೆಯನ್ನು ಮಾಲೆಯುತೆ ಧರಿಸಿರೋಣವೂ, 'ಶೂನ್ಯನು' ಎಂಬ ವಿಷಯದಲ್ಲಿ ವರಾಹರೂಪಿಯಾದ ವಿಷ್ಣುವೂ, ಹಂಸರೂಪಿಯಾದ ಬ್ರಹ್ಮನೂ ಸಾಕ್ಷಿಗಳು; ಇತ್ಯಾದಿ ಶ್ರುತಿವಾಕ್ಯಗಳಿಂದ ಈಶ್ವರನಲ್ಲಿ ಜಗತ್ಕಾರಣತ್ವವು ಸಿದ್ಧವಾಗಿದೆ; ಕೋಟಿ ಜನ್ಮಾರ್ಜಿತವಾದ ಪುಣ್ಯದಿಂದ ಶಿವನಲ್ಲಿ ಭಕ್ತಿಯುಂಟಾಗುತ್ತದೆ. ಲಿಂಗದಿಂದ ಅಂಕಿತವಾದ ದೇಹವುಳ್ಳವನಾಗಿ ರುದ್ರಾಕ್ಷಿ ವಿಭೂತಿಗಳಂ ಧರಿಸಿ ರುದ್ರಾಧ್ಯಾಯಜಪಮಾಡುವವನು ಸರ್ವ ಪಾಪವಿನಿರ್ಮುಕ್ತನಾಗಿ ಶಿವಲೋಕಕ್ಕೆ ಹೋಗು

ತ್ತಾನೆ. ಕಳ್ಳತನವನ್ನು ಮಾಡಿ, ಗುರುಪತ್ನಿಯ ಸಂಗಡ ಕ್ರೀಡಿಸಿ, ಹೆಂಡವನ್ನು ಕುಡಿದು, ಬ್ರಹ್ಮಹತ್ಯೆಯನ್ನಾಚರಿಸಿ, ದೇಹಕ್ಕೆಲ್ಲಾ ಭಸ್ಮಧಾರಣೆಮಾಡಿ, ಭಸ್ಮಶಯ್ಯೆಯಲ್ಲಿ ಮಲಗಿ ರುದ್ರಾಧ್ಯಾಯಪಾರಾಯಣಮಾಡಿದರೆ ಅವನು ಮೇಲೆಹೇಳಿದ ಸಕಲ ಪಾಪಗಳಿಂದಲೂ ವಿನಿರ್ಮುಕ್ತನಾಗುತ್ತಾನೆ. 'ಆತಪ್ತತನೂರ್ನತದಾಮೋಶ್ನುತೆ' ಎಂಬ ವೇದವಾಕ್ಯದಂತೆ ಮುಮುಕ್ಷುಗಳಿಗೆ ಲಿಂಗಾಂಕನವೂ ಅತ್ಯಾವಶ್ಯಕವು." ಎಂದು ಹೇಳಲು

ಆಚಾರ್ಯರು "ಪಾ! ಇಲ್ಲಿ ಕೃಚ್ಛ್ರಚಾಂದ್ರಾಯಣಾದಿ ವ್ರತಗಳಿಂದ ತಪ್ತವಾದ ದೇಹವಲ್ಲದೇ ಮಿಕ್ಕಿಯಿಂದ ತಪ್ತವಾದ ದೇಹವಲ್ಲ; ಎಂದು ಬೃಹನ್ನಾರದೀಯದಲ್ಲಿ ಹೇಳಿದೆ. ಲಿಂಗಾಂಕಿತವಾದ ಅಥವಾ ಶಂಖಚಕ್ರಾಂಕಿತವಾದ ದೇಹವನ್ನು ನೋಡಿದ ಮಾತ್ರದಲ್ಲಿ ಸ್ನಾನಮಾಡಬೇಕು; ಅಥವಾ ಸೂರ್ಯದರ್ಶನಮಾಡಬೇಕು. ಹಾಗೆ ಮುದ್ರಾಂಕನವನ್ನು ಮಾಡಿಕೊಂಡು ಜೀವಚ್ಛವದಂತಿರುವನು ಶೂದ್ರನಂತೆ ಬಿಡಲ್ಪಡಬೇಕು. ಅವನಿಗೆ ಕೊಡಲ್ಪಟ್ಟ ಹವ್ಯಕವ್ಯಾದಿಗಳು ವ್ಯರ್ಥಗಳಾಗುತ್ತವೆ. ಅನ್ನವುಮಂ ತ್ರಾಭಿಮಂತ್ರಿತವಾದರೂ ಆಂಧನನ ದರ್ಶನದಿಂದ ಬಿಡಲ್ಪಡಬೇಕು. ಶೂದ್ರನಿಂದಲಾದರೂ ಊಟಮಾಡಬಹುದು; ಮುದ್ರಾಂಕಿತವಾದ ತನುವುಳ್ಳವನಿಂದ ಊಟಮಾಡಕೂಡದು, ಎಂದು ಬೃಹನ್ನಾರದೀಯದಲ್ಲಿದೆ. ಪೂರ್ವದಲ್ಲಿ ಗಾಯತ್ರಿಗೂ ಬ್ರಾಹ್ಮಣರಿಗೂ ವಾದ ನಡೆಯಿತು; ಆಗ ಗಾಯತ್ರಿಯು ನೀವು ಕಲಿಯುಗದಲ್ಲಿ ಪಾಷಂಡರೂ, ವೇದೋಕ್ತಕರ್ಮಹೀನರೂ, ತಾಂತ್ರಿಕರೂ, ಆಗಿರೆಂದು ಕೋಪದಿಂದ ಶಪಿಸಿದಳು. ಅದರಂತೆ ಕಲಿಯುಗಪ್ರಾಪ್ತವಾಗಲಾಗಿ ಅವರೆಲ್ಲಾ ವೇದಾರ್ಥಹೀನರೂ, ಪಾಷಂಡರೂ, ಲಿಂಗಚಕ್ರಾದಿಚಿಹ್ನಿತರೂ, ಜ್ಞಾನಕರ್ಮಪದಭ್ರಷ್ಟರೂ, ಕಾಮಕ್ರೋಧಾದಿಪೀಡಿತರೂ, ದುರಾತ್ಮರೂ, ಸತ್ಯಧರ್ಮವರ್ಜಿತರೂ, ಮತ್ತು ಶಾಪಭಾಗಿಗಳೂ, ಆದ ದ್ವಿಜಾಧಮರಾಗಿ ಹುಟ್ಟುತ್ತಾರೆ. ಕಲಿಯುಗದಲ್ಲಿ ಮೂರುಸಾವಿರ ವರ್ಷಗಳು ಕಳೆದನಂತರದಲ್ಲಿ ಸತ್ಯಧರ್ಮಪರಾಯಣರಾಗಿಯೂ, ಅಸ್ಮೃತಾಥಾರ್ಥಾನುಚಿಂತಕರೂ ಆಗಿ ಶಾಪವಿನಿರ್ಮುಕ್ತರಾಗುತ್ತಾರೆ, ಎಂದು ಮಾರ್ಕಂಡೇಯಪುರಾಣದಲ್ಲಿ ಹೇಳಲ್ಪಟ್ಟಿದೆ. ಪರಬ್ರಹ್ಮರೂಪಿಯಾದ ಈಶ್ವರನ ಪೂಜೆಯನ್ನು ಮಾಡಬೇಕೆಂದು ಶ್ರುತಿಯಲ್ಲಿ ಹೇಳಲ್ಪಟ್ಟಿದೆ. ಅದನ್ನು ತಿರಸ್ಕರಿಸಲು ಯಾರಿಗೂ ಸಾಧ್ಯವಿಲ್ಲ. ವಿಭೂತಿ, ರುದ್ರಾಕ್ಷಿಗಳ ಧಾರಣೆಯು ಮನುಷ್ಯರಿಂದ ಮಾಡಲ್ಪಡಬೇಕು; ಆದರೆ ಲಿಂಗಾದ್ಯಂಕನಗಳನ್ನು ಮಾತ್ರ ಮಾಡಕೂಡದು" ಹೀಗೆ ಆಚಾರ್ಯರು ಅವರಿಗುಪದೇಶಿಸಿ ಅವರ ಸಂದೇಹಗಳನ್ನೆಲ್ಲಾ ಶ್ರುತ್ಯುಕ್ತಪ್ರಮಾಣಗಳಿಂದ ನಿವೃತ್ತಮಾಡಲು ಅವರು ತಮ್ಮ ಚಿಹ್ನೆಗಳನ್ನೆಲ್ಲಾ ತ್ಯಜಿಸಿ ಆಚಾರ್ಯರ ಶಿಷ್ಯರಾಗಿ ವೇದೋಕ್ತಕರ್ಮಾನುಯಾಯಿಗಳಾದರು.

ವೈಷ್ಣವಮತಖಂಡನವು.

ಅನಂತರ ಶಂಕರಭಗವತ್ಪಾದರು ಅನಂತಶಯನಕ್ಕೆ ಹೋಗಿ, ಅಲ್ಲಿದ್ದ ರಾಮರಾಜನಿಂದ ವಂದಿಸಲ್ಪಟ್ಟು, ಅಲ್ಲಿ ತಮ್ಮ ಗ್ರಂಥಗಳನ್ನು ಪ್ರಚಾರಮಾಡುತ್ತಿರಲು, ವೈಷ್ಣವಾಚಾರತತ್ಪರರೂ, ಶಂಖ, ಚಕ್ರ, ಗದಾ, ಶಾರ್ಙ್ಗಚಿಹ್ನೆಗಳಿಂದ ಪರಿಚಿಹ್ನಿತರೂ, ತುಲಸೀ ಮತ್ತು ತುಲಸೀಮಣಿಗಳ ಮಾಲೆಗಳನ್ನು ಧರಿಸಿರುವವರೂ, ಹರಿನಾಮಗಳನ್ನು ಜಪಿಸುತ್ತಿರುವರೂ, ಗೋಪೀಚಂದನದಿಂದ ಲೇಪಿಸಲ್ಪಟ್ಟ ದೇಹವುಳ್ಳವರೂ, ಕರ್ಣಗಳಲ್ಲಿ ತುಳಸೀಪತ್ರವನ್ನು ಧರಿಸಿ ಅಂಗಾರತಿಲಕವನ್ನು ಇಟ್ಟುಕೊಂಡವರೂ ಆದ ವಿಷ್ಣುಶರ್ಮ, ಪದ್ಮನಾಭ, ಕೃಷ್ಣದ್ವೈಪಾಯನ, ವ್ಯಾಸದಾಸ, ವರದಾಚಾರ್ಯ ಎಂಬ ವೈಖಾನಸಾಗಮದಕ್ಷರೂ, ಪಾಂಚರಾತ್ರಾಗಮತತ್ಪರರೂ, ವೇದಮಾರ್ಗವನ್ನು ಅಪಲಾಪಿಸುವುದರಲ್ಲಿ ಸಮರ್ಥರೂ ಆದವರಾಗಿ ಬಂದು ದೇಶಿಕೇಂದ್ರರನ್ನು ಕುರಿತು ,, ಎಲೈ ಯತಿಗಳೇ ! ಪ್ರಪಂಚದಲ್ಲಿ ಭೇದವೇಸತ್ಯವು; ವಿಷ್ಣುವೆ ಶ್ರೇಷ್ಠನಾದ ಸ್ವಾಮಿಯು; ವೈಷ್ಣವಮತವಿನಾ ಉಳಿದ ಮತಗಳೆಲ್ಲಾ ಮೋಸವನ್ನುಂಟುಮಾಡುತ್ತವೆ; ಜಗತ್ತ್ರಯವು ಮಹಾವಿಷ್ಣುವಿನಿಂದ ಉತ್ಪನ್ನವಾಗಿ ಅವನಿಂದಲೇ ರಕ್ಷಿತವಾಗಿದೆ; ಸಂಸಾರವೆಂಬ ಸರ್ಪದಿಂದ ದಷ್ಟನಾದವನು ' ಕೃಷ್ಣಃ ' ಎಂಬ ಭೇಷಜರೂಪವಾದ ಮಂತ್ರವನ್ನು ಜಪ್ಪರಿಸಿದರೆ ಮೋಕ್ಷವನ್ನು ಹೊಂದುತ್ತಾನೆ; ಮಕ್ಕಳು ತಾಯಿಯನ್ನು ಆಶ್ರಯಿಸಿ ಹೇಗೆ ಬೆಳೆಯುತ್ತವೆಯೋ ಹಾಗೆಯೇ ವೈಷ್ಣವಮಂತ್ರವನ್ನು ಆಶ್ರಯಿಸಿ ಜನಗಳೆಲ್ಲಾ ಇದ್ದಾರೆ ; ವಿಷ್ಣುಭಕ್ತಿಇಲ್ಲದವರಿಗೆ ವೇದಗಳಿಂದೇನು ? ಶಾಸ್ತ್ರಗಳಿಂದೇನು ? ತೀರ್ಥಸೇವೆಯಿಂದೇನು ? ತಪಸ್ಸುಗಳಿಂದೇನು ?ಯಾಗಾದಿಗಳಿಂದೇನು ಪ್ರಯೋಜನವು ? ಭಕ್ತಿಯೇ ಮೋಕ್ಷಪ್ರದವು; ಭಕ್ತಿಯೇ ಫಲದಾಯಕವು; ಭಕ್ತ್ಯೆಯೇ ಮೊಡ್ಡದು; ಆದ್ದರಿಂದ ಎಲೈ ಯತಿಗಳೇ ! ನಮ್ಮ ಮತವನ್ನಾಶ್ರಯಿಸಿ '' ಎನ್ನಲು

ಶಂಕರರು ,, ವಿಷ್ಣುಶರ್ಮಾದಿಗಳೇ ! ಯಜ್ಞಾದಿಕರ್ಮಗಳನ್ನು ತ್ಯಜಿಸಿ ಭಕ್ತಿಯನ್ನು ಅಪೇಕ್ಷಿಸುವಿರಿ ; ಭಿನ್ನರನಪವಾದ ದ್ವೈತಭಕ್ತಿಯಿಂದ ಸಂಸಾರವು ವೃದ್ಧಿಹೊಂದುತ್ತದೆ. ಅಭಿನ್ನರೂಪವಾದ ಅದ್ವೈತಭಕ್ತಿಯಿಂದ ಮೋಕ್ಷಉಂಟಾಗುತ್ತದ್ದಿದ್ವೈತರೂಪವಾದ ಭಕ್ತಿಯು ಕ್ಲೇಶದಾಯಕವು; ಅಚಲವಾದ ಅದ್ವೈತಭಕ್ತಿಯು ಸುಖದಾಯಕವು; ಆದ್ದರಿಂದ ಸರ್ವಸಿದ್ಧಿದಾಯಕವಾದ ಅದ್ವೈತಭಕ್ತಿಯನ್ನು ಆಶ್ರಯಿಸಬೇಕು; ಆ ಭಕ್ತಿಯಿಂದ ಚಿತ್ತವು ಶುದ್ಧವಾಗುತ್ತದೆ; ಚಿತ್ತಶುದ್ಧಿಯಿಂದ ಜ್ಞಾನವುಂಟಾಗುತ್ತದೆ; ಆ ಜ್ಞಾನದಿಂದಲೇ ಮೋಕ್ಷಬರುವುದಲ್ಲದೇ ಕಲ್ಪಕೋಟಿಶತಗಳಿಂದಲೂ ಬರಲಾರದು; ಹರಿಯು ರೂಪವನ್ನೇ ಶಂಭುವು ಧರಿಸಿರುತ್ತಾನೆ ; ಶಂಭುರೂಪವನ್ನೇ ಹರಿಯು ಧರಿಸಿರುತ್ತಾನೆ; ಅವರಿಬ್ಬರಿಗೂ ಸ್ವಲ್ಪವೂ ಭೇದವೇಇಲ್ಲ ; ಯಾವನು ಭೇದ

ವನ್ನು ಮಾಡುವನೋ ಅವನು ದೋಷಭಾಗಿಯಾಗುತ್ತಾನೆ; ಪರಬ್ರಹ್ಮದಿಂದ ಅಭಿನ್ನ ನಾದ ತನ್ನನ್ನು ಭಿನ್ನನನ್ನಾಗಿ ಯಾವನು ತಿಳಿಯುವನೋ ಅವನು ಸಾಕ್ಷಾದ್ಬ್ರ ಹ್ಮಘಾತುಕನು; ಅಜ್ಞಾನಸಾಗರನುಗ್ನರಾದ ಪಾಪಿಗಳು ಮಾತ್ರ ಭೇದವನ್ನು ಎಣಿ ಸುವರು; ಯುಗಾಂತ್ಯದಲ್ಲಿ ಹರಿಯೇ ರುದ್ರರೂಪದಿಂದ ಸಕಲ ಜಗತ್ತನ್ನೂ ನಾಶ ಮಾಡುವನು; ಆ ರುದ್ರನೇ ಬ್ರಹ್ಮರೂಪದಿಂದ ಪುನಃ ಸಕಲ ಜಗತ್ತನ್ನೂ ಸೃಷ್ಟಿಸಿ ವಿಷ್ಣುರೂಪದಿಂದ ರಕ್ಷಿಸುತ್ತಾನೆ. ಆದ್ದರಿಂದ ಬ್ರಹ್ಮ, ವಿಷ್ಣು, ಮಹೇಶ್ವರರೆಂಬ ಭೇದವಿಲ್ಲ; ಪರಬ್ರಹ್ಮರೂಪಿಯಾದ ಆ ಶಿವನೇ ಎಲ್ಲರಿಗೂ ಗುರುವು; ಆ ಶಿವನೇ ಜೀವನು; ಶಿವನೇ ಪ್ರಾಣಿಗಳಿಗೆ ಬಂಧವು; ಶಿವನೇ ಪ್ರಾಣಿಗಳ ಆತ್ಮನು; ಶಿವನೇ ದೇವನು; ಆ ಶಿವನಿಗಿಂತ ಬೇರೆಯಾದದ್ದು ಯಾವುದೂ ಇಲ್ಲ; ಬ್ರಹ್ಮ, ವಿಷ್ಣು, ಮಹೇಶ್ವರರಲ್ಲಿ ಯಾವನು ಭೇದವನ್ನು ಎಣಿಸುವನೋ ಅವನು ಚಂದ್ರತಾರಕಗಳಿ ರುವವರಿವಿಗೂ ನರಕಯಾತನೆಯನ್ನನುಭವಿಸುವನು; ಯಾವನು ಸ್ವಕರ್ಮವನ್ನು ತ್ಯಜಿ ಸಿ ಭಕ್ತಿಮಾತ್ರದಿಂದಲೇ ಜೀವಿಸುವನೋ ಅವನ ವಿಷಯದಲ್ಲಿ ವಿಷ್ಣುವು ತೃಪ್ತಿ ಯಾಗುವುದಿಲ್ಲ; ಏಕೆಂದರೆ ವಿಷ್ಣುವು ಆಚಾರದಿಂದ ಪೂಜಿಸಲ್ಪಡತಕ್ಕವನು; ಸ್ವಧರ್ಮ ಹೀನರಿಗೆ ಭಕ್ತಿಯೂ ಕೂಡ ದುಃಖಪ್ರದವು; ಶುಭಕ್ತನೇ ಆಗಲಿ ಶರಭಕ್ತನೇ ಆಗಲೀ ಸ್ವಾಶ್ರಮಾಚಾರವನ್ನು ತ್ಯಜಿಸಿದರೆ ಅವನು ಭ್ರಷ್ಟನಾಗುವುದರಲ್ಲಿ ಸಂದೇಹವಿಲ್ಲ; ಪರಬ್ರಹ್ಮನು ಸೃಷ್ಟಿಸಮಯದಲ್ಲಿ ತನ್ನ ವಾಮಭಾಗದಿಂದ ವಿಷ್ಣುವನ್ನು ಸೃಷ್ಟಿಸಿದನು; ತನ್ನ ಬಲಭಾಗದಿಂದ ಬ್ರಹ್ಮನನ್ನೂ, ತನ್ನ ಹೃದಯದಿಂದ ರುದ್ರನನ್ನೂ ಸೃಷ್ಟಿಸಿದನು; ಆ ಬ್ರಹ್ಮನಿಗೆ ಪ್ರಾಣಿಘಾದಗಳಿಲ್ಲ; ಅವನಿಗೆ ಜನನಮರಣಗಳಿಲ್ಲ; ಅವನು ಎಲ್ಲರ ಹೃದ ಯದಲ್ಲಿದಾನೆ; ಅವನಿಗೆ ಆಕಾರವಿಲ್ಲ; ಕಣ್ಣುಕಿವಿಗಳಿಲ್ಲ; ಇಷ್ಟಾದರೂ ಅವನು ನಾವಾಡುವುದನ್ನು ಕೇಳುತ್ತಲೂ ಮಾಡುವುದನ್ನು ನೋಡುತ್ತಲೂ ಇರುತ್ತಾನೆ; ಸೂಕ್ಷ್ಮದರ್ಶಿಗಳಾದ ಋಷಿಗಳು ಮಾತ್ರ ಆತ್ಮಾನುವರ್ತಿಯಾದ ಆ ಬ್ರಹ್ಮನನ್ನು ನೋಡುತ್ತಾರೆ; ಆದ್ದರಿಂದ ಬ್ರಹ್ಮಸದೃಶವಾದ ಈ ನಮ್ಮ ದೇಹಾದಿಗಳಿಗೆ ಚಿಹ್ನಕಲ್ಪನ ವು ಹೇಗೆ? ಅದನ್ನು ಧರಿಸಿದರೆ ಜ್ಞಾನವುಳ್ಳವನೂ ಮುಕ್ತಿಯುಳ್ಳವನೂ ಹೇಗೆ ಆಗು ತ್ತಾನೆ? ಮನುಜನು ವೇದೋಕ್ತಕರ್ಮಗಳನ್ನು ಆಚರಿಸುತ್ತಾ ಕ್ರಮವಾಗಿ ಜ್ಞಾನ ವನ್ನೂ ಅನಂತರ ಮೋಕ್ಷವನ್ನೂ ಹೊಂದುತ್ತಾನೆ; ನಿತ್ಯಕರ್ಮಪರಿತ್ಯಾಗದಿಂದ ನರನು ಪತಿತನಾಗುತ್ತಾನೆ; ಶಂಖಚಕ್ರಾಂಕಿತವಾದ ದೇಹವನ್ನು ನೋಡಿದ ಕೂಡಲೇ ಸ್ನಾನಮಾಡಬೇಕು; ಅಂತಹವನನ್ನು ಮಾತಿನಿಂದಲೂ ಅರ್ಚಿಸಕೂಡದು; ಜೀವಚ್ಛವ ದಂತಿರುವ ಅವನು ಶೂದ್ರನಂತೆ ಬಿಡಲ್ಪಡತಕ್ಕವನು; ಅವನಿಗೆ ಕೊಡಲ್ಪಟ್ಟ ಹವ್ಯ ಕವ್ಯಗಳು ವ್ಯರ್ಥವಾಗುತ್ತವೆ; ಅವನು ವೇದೋಕ್ತ ಕರ್ಮಾನುಯಾಯಿಯಾದರೂ

ಜಕ್ಕ, ಲಿಂಗಾದಿಧಾರಣಮಾತ್ರದಿಂದ ಸದ್ಯಃಪತಿತನಾಗುತ್ತಾನೆ; ಆದ್ದರಿಂದ ಶ್ರುತಿ ಸ್ಮೃತಿವಿರುದ್ಧವಾದ ಶಂಖಚಕ್ರಾದಿಧಾರಣವು ಅಯೋಗ್ಯವು'' ಎಂದು ಹೇಳಿ, '' ನೀವೇ ರಕ್ಷಕರು'' ಎಂದು ಬಂದ ಅವರಿಗೆ ಸ್ಮೃತ್ಯುಕ್ತವಿಧಾನದಿಂದ ಪ್ರಾಯಶ್ಚಿತ್ತ ವಮಾಡಿಸಿ ಅವರನ್ನೆಲ್ಲಾ ಆಪ್ರೈತಮತಾನುಯಾಯಿಗಳನ್ನಾಗಿ ಮಾಡಿದರು.

ಚತುರ್ಮುಖಮತನಿರಸನವು.

ಅನಂತರ ಶಂಕರದೇಶಿಕರು ಸುಬ್ರಹ್ಮಣ್ಯಕ್ಷೇತ್ರಕ್ಕೆ ಹೋದರು. ಆಗ ಅಲ್ಲಿನವರಾದ ಕೆಲವರು ಬ್ರಹ್ಮೋಪಾಸಕರು ಬಂದು '' ಎಲ್ಲೈ ಯತಿಯೇ! 'ಹಿರಣ್ಯಗರ್ಭಸ್ಸಮವರ್ತತಾಗ್ರೇ.....ವಿಧೇಮ' ಇತ್ಯಾದಿ ವೇದವಾಕ್ಯದಿಂದ ಬ್ರಹ್ಮನೇ ಸಕಲಕ್ಕೂ ಕರ್ತನು; ಮತ್ತು ಪಾಲಕನೂ ಇವನೇ. ಇದಲ್ಲದೇ ಯಾವನು ಕರ್ತನೆಂದು ಹೇಳಲ್ಪಟ್ಟಿದ್ದಾನೋ ಅಂತಹ ಬ್ರಹ್ಮನೇ ಆನಂದದಾಯಕನೆಂದು ಹೇಳಲ್ಪಟ್ಟಿದ್ದಾನೆ; ಆ ಪ್ರಭುವು ಸಕಲ ಜಗತ್ತನ್ನೂ ಸೃಷ್ಟಿಸಿ ಸರ್ವಾತ್ಮನೆಂದು ಕೀರ್ತಿಗೊಂಡಿದ್ದಾನೆ; 'ತದೈಕ್ಷತ' ಇತ್ಯಾದಿ ಶ್ರುತಿವಾಕ್ಯಗಳಿಂದ ಅವನೇ ತನ್ನ ಭುಜಗಳಿಂದ ವಿಷ್ಣು ಮತ್ತು ಈಶ್ವರನನ್ನು ಸೃಷ್ಟಿಸಿದನೆಂದು ತಿಳಿಯಬರುತ್ತದೆ; ಬ್ರಹ್ಮನಿಂದ ಸೃಷ್ಟಿಸಲ್ಪಟ್ಟ ಸಕಲ ಲೋಕವೂ ಅವನ ಕುಕ್ಷಿಯನ್ನೇ ಕುರಿತು ಹೋಗುತ್ತದೆ; ಮೋಕ್ಷವೂ, ಆ ಬ್ರಹ್ಮನಿಂದಲ್ಲದೇ ಬೇರೆ ಯಾರಿಂದಲೂ, ಬರಲಾರದು; ಆದ್ದರಿಂದ ನೀವೂ ನಮ್ಮಂತೆ ಕೂರ್ಚಕ ಮಂಡಲುಧಾರಿಗಳಾದ ಜ್ಞಾನನಿಷ್ಠರಾಗಿ ಮೋಕ್ಷವನ್ನು ಪೊಂದಿ'' ಎಂದು ಹೇಳಲು,

ಶಂಕರಭಗವತ್ಪಾದರು '' ಎಲೈ ಮೂಢರೇ! 'ಬ್ರಹ್ಮಾದಿಭೂತಗಳು ಯಾವಕಾರಣದಿಂದ ಆಗುತ್ತಾರೆ ಎಂಬುದನ್ನು ತಿಳಿ' ಎಂಬ ಶ್ರುತಿಯಿಂದ ಬ್ರಹ್ಮನನ್ನು ತಿಳಿಯುವುದು ಮುಖ್ಯಕಾರಣವು; ಮೋಕ್ಷಕ್ಕೆ ವೇದಾಂತವಾಕ್ಯಶ್ರವಣಾದಿಗಳು ಯಾವಾಗಲೂ ಮಾಡತಕ್ಕದ್ದು. ಲಯವು ಮೋಕ್ಷವೆಂದು ಹೇಳಲ್ಪಟ್ಟಿಲ್ಲ; ಕಾರ್ಯಬ್ರಹ್ಮನ ಸೇವೆಯಿಂದ ಸುಷುಪ್ತಿತುಲ್ಯನಾದ ಪರಮಾತ್ಮನು ಹೊಂದಲ್ಪಡಲಾರನು. ಆದ್ದರಿಂದ ನಿಮ್ಮ ಗುರುತುಗಳನ್ನು ಬಿಟ್ಟು, ಗುರುಮುಖದಿಂದ ಆತ್ಮಬೋಧೆಯನ್ನು ಕಲಿಯಬೇಕು'' ಎಂದು ಇವೇ ಮೊದಲಾಗಿ ಹೇಳಲು ಅವರೆಲ್ಲಾ ಆಚಾರ್ಯರ ಶಿಷ್ಯರಾಗಿ ಅದ್ವೈತಾಧ್ಯಯನತತ್ಪರರಾದರು.

ಅಗ್ನಿಮತಭಂಜನವು.

ಅನಂತರ ಅಗ್ನ್ಯುಪಾಸಕರಾದ ಕೆಲವರು ಬಂದು ಆಚಾರ್ಯರನ್ನು ಕುರಿತು '' ಸ್ವಾಮಿ! 'ಅಗ್ನಿರಗ್ರೇಪ್ರಥಮೋದೇವತಾನಾಂ' ಎಂಬ ಶ್ರುತಿಯಿಂದ ಅಗ್ನಿಯೇದೇ

ವತೆಗಳಲ್ಲೆಲ್ಲಾ ಮೊದಲನೆಯವನು; ಏಸ್ಫುಲಿಂಗಾತ್ಮಕವಾದ ಮಣಿಗಳನ್ನು ಧರಿಸಿ ಅಗ್ನ್ಯುಪಾಸನೆ ಮಾಡಿದರೆ ಮೋಕ್ಷವು ಕರಗತವಾಗುತ್ತದೆ; ಆದ್ದರಿಂದ ಅಗ್ನಿಯು ಬ್ರಾಹ್ಮಣರೆಲ್ಲರಿಂದಲೂ ಸೇವಿಸಲ್ಪಡಲರ್ಹನು " ಎಂದು ಹೇಳಲು,—

ಶಂಕರರು " ಎಲೈ ' ಅಗ್ನಿಯು ದೇವತೆಗಳಲ್ಲಿ ಆವಮನೆಂತಲೂ, ವಿಷ್ಣುವು ಪರಮನೆಂತಲೂ, ಇತರ ದೇವತೆಗಳು ಮಧ್ಯಮರೆಂದೂ, ಹೇಳಲ್ಪಟ್ಟಿದ್ದಾರೆ; ಹಾಗೆಯೇ ಅಗ್ನಿಯು ದೇವತೆಗಳಿಗೆ ಅವರ ಭಾಗಗಳನ್ನು ಕೊಡುವ ಕರ್ಮದೇವತೆಯು; ಆ ದ್ದರಿಂದ ನೀವು ವಹ್ನ್ಯಧೀನವಾದ ಕರ್ಮಗಳನ್ನು ಮಾಡುತ್ತಲೂ, ವಿಷ್ಣುವನ್ನು ಪೂಜಿಸುತ್ತಲೂ, ಅದ್ವೈತಮತಾನುಯಾಯಿಗಳಾಗಿರಿ " ಎಂದು ಉಪದೇಶಿಸಲು—ಅವರೆಲ್ಲರೂ, ಆಚಾರ್ಯರಿಗೆ ನಮಸ್ಕರಿಸಿ ಪಂಚಾಯತನ ಪೂಜಾರತರಾದ ಅದ್ವೈತಿಗಳಾದರು.

ರವಿಮತ ದೂರೀಕರಣವು.

ತರುವಾಯ, ಪಣಿಯಲ್ಲಿ ರಕ್ತಚಂದನವನ್ನೂ, ಕತ್ತಿನಲ್ಲಿ ರಕ್ತವುಷ್ಪವನ್ನೂ ಧರಿಸಿದ್ದ ದಿವಾಕರನೇ ಮೊದಲಾದವರು ಬಂದು " ಸ್ವಾಮೀ! ' ಸೂರ್ಯ ಆತ್ಮಾ ಜಗತಸ್ತಸ್ಥುಷಶ್ಚ ' ಎಂಬ ಶ್ರುತಿಯಿಂದ ಸೂರ್ಯನಲ್ಲಿ ಬ್ರಹ್ಮತ್ವವು ಸಿದ್ಧವಾಗಿದೆ; ಕೆಲವರು ರಕ್ತಗಂಧವನ್ನೂ, ರಕ್ತಪುಷ್ಪಮಾಲೆಗಳನ್ನೂ ಧರಿಸಿ ಪ್ರಕಾಶಿಸುತ್ತಲಿರುವ ಬ್ರಹ್ಮರೂಪಿಯಾದ ಸೂರ್ಯಮಂಡಲವನ್ನೂ, ಕೆಲವರು ಜಗಲ್ಲಯರೂಪಿಯೂ, ಆಕಾಶ ಮಧ್ಯಸ್ಥನೂ, ಆದ ಸೂರ್ಯನನ್ನೂ ಕೆಲವರು ಅಸ್ತಮಯಕಾಲದ ಸೂರ್ಯನನ್ನೂ, ಕೆಲವರು ಹಿರಣ್ಯಶ್ಮಶ್ರುಕೇಶಯುಕ್ತವಾದ ಮಂಡಲದಲ್ಲಿ ಕ್ಷಣಮಾತ್ರ ವ್ರತಧಾರಿಗಳಾಗಿಯೂ, ಇನ್ನು ಕೆಲವರು ಸೂರ್ಯನನ್ನು ಸೋಡಿ ಅವನನ್ನು ಅರ್ಘ್ಯಪಾದ್ಯಾಚಮನಾದಿಗಳಿಂದ ಪೂಜಿಸಿ ಅನಂತರ ಭೋಜನಮಾಡತಕ್ಕವರಾಗಿಯೂ, ಮತ್ತೆ ಕೆಲವರು ಹಣೆಯಲ್ಲಿಯೂ, ಭುಜದ್ವಯಗಳಲ್ಲಿಯೂ, ಮತ್ತು ವಕ್ಷಸ್ಥಲದಲ್ಲಿಯೂ ಮಂಡಲದಿಂದ ಚಿಹ್ನಿತರಾಗಿಯೂ ಸೂರ್ಯನನ್ನು ಆರಾಧಿಸುತ್ತಾರೆ. ಈ ಉಪಾಸಕರಿಗೆಲ್ಲಾ ಪ್ರತ್ಯೇಕವಾದ ಮಂತ್ರವು ಉಕ್ತವಾಗಿದೆ; ' ಆದಿತ್ಯಾನಾಮಹಂವಿಷ್ಣುರ್ಜ್ಯೋತಿಷಾಂ ರವಿರಂಶುಮಾನ್ ' ಎಂದು ಶ್ರೀಕೃಷ್ಣನು ಹೇಳಿದ್ದಾನೆ; ಬ್ರಹ್ಮಾದಿದೇವತೆಗಳೆಲ್ಲರೂ, ಸೂರ್ಯನಿಂದಲೇ ಉತ್ಪನ್ನರಾಗಿದ್ದಾರೆ; ಆದ್ದರಿಂದ ಮೋಕ್ಷಾಪೇಕ್ಷಿಗಳಾದ ಸಕಲರಿಂದಲೂ ಸೂರ್ಯನು ಪೂಜಿಸಲ್ಪಡಬೇಕು " ಎಂದರು.

ಅದಕ್ಕೆ ಶಂಕರದೇಶಿಕರು " ಎಲೈ ಮೂಢರಾದ ದಿವಾಕರಾದಿಗಳೇ! ' ಜಕ್ಷ್ಣೋ ಸ್ಫುರ್ಯೋ ಅಜಾಯತ ' ಇತ್ಯಾದಿ ಶ್ರುತಿವಾಕ್ಯಗಳಿಂದ ಸೂರ್ಯನಿಗೆ ಅನಿತ್ಯತ್ವವು ಹೇಳ

ಲ್ಪಟ್ಟಿದೆ; ತರ್ಕಸಿದ್ಧಾಂತಪ್ರಕಾರವಾಗಿ ಅನಿತ್ಯವಾದ ವಸ್ತುವಿನಲ್ಲಿ ಬ್ರಹ್ಮತ್ವವು ಹೇಗೆ ಹೇಳಲ್ಪಡುತ್ತದೆ? ಸೂರ್ಯಪರಗಳೂ, ಬ್ರಹ್ಮಬೋಧಕಗಳೂ ಆದ ಶ್ರುತಿವಾಕ್ಯಗಳು, ಜಗದೀಶಾಜ್ಞೆಯಿಂದ ಸೂರ್ಯನು ಪ್ರಕಾಶಿಸುತ್ತಾನೆ' ಎಂಬ ಅರ್ಥವನ್ನು ಸ್ಪಷ್ಟಗೊಳಿಸುತ್ತವೆ; ಸೂರ್ಯಾದಿಗಳಿಗೆ ಜ್ಯೋತಿಶಾಸ್ತ್ರದಲ್ಲಿಯೂ ಅನಿತ್ಯತ್ವವು ಸಿದ್ಧವಾಗಿದೆ; ಆದ್ದರಿಂದ ಪಾಷಂಡಚಿಹ್ನೆಗಳನ್ನು ಬಿಟ್ಟು ಶುದ್ಧವಾದ ಅದ್ವೈತಬೋಧೆಯಿಂದ ಶುದ್ಧರಾಗಿ ಮುಕ್ತಿಯನ್ನು ಹೊಂದಿ" ಎಂದುಪದೇಶಿಸಲು ಅವರೆಲ್ಲಾ ಆಚಾರ್ಯರಿಗೆ ವಂದಿಸಿ ಅವರ ಶಿಷ್ಯರಾದರು.

ಅನಂತರ ಶಂಕರಭಗವತ್ಪಾದಪೂಜ್ಯರು, ವಾಯವ್ಯದಿಗ್ಜಯಾಪೇಕ್ಷೆಯಿಂದ ಆ ದಿಕ್ಕಿಗೆ ಮೂರು ಸಹಸ್ರ ಮಂದಿ ಮುಖ್ಯಶಿಷ್ಯರುಗಳಿಂದ ಪಿಂಬಾಲಿಸಲ್ಪಡುತ್ತಾ ಹೊರಟರು.

ಆ ಶಿಷ್ಯರಲ್ಲಿ ಕೆಲವರು ಆಚಾರ್ಯರನ್ನು ಬೀಸಣಿಗೆಗಳಿಂದಲೂ, ಕೆಲವರು ಶುಭೋಕ್ತಿಗಳಿಂದಲೂ, ಕೆಲವರು ಶಂಖನಾದದಿಂದಲೂ, ಕೆಲವರು ವಾದ್ಯವಿಶೇಷಗಳಿಂದಲೂ, ಕೆಲವರು ಘಂಟಾನಾದದಿಂದಲೂ, ಕೆಲವರು ಕೈಜಪ್ಪಾಳೆಗಳಿಂದಲೂ, ಸೇವಿಸುತ್ತಾ ಹೊರಟರು.

ಶಂಕರರು ದಾರಿಯಲ್ಲಿ ಸಿಕ್ಕಿದ ಊರುಗಳಲ್ಲಿದ್ದ ಕುಮತಸ್ಥರಾದ ಬ್ರಾಹ್ಮಣರನ್ನು ಸೋಲಿಸುತ್ತಾ ಅನಂತರ ಗಣವರಪುರನೆಂಬ ಸ್ಥಳಕ್ಕೆ ಬಂದು, ಅಲ್ಲಿರುವ ಕೌಮುದೀನದಿಯಲ್ಲಿ ಸ್ನಾನಾದಿಗಳಂ ಮಾಡಿ ವಿಘ್ನೇಶ್ವರನನ್ನು ಪೂಜಿಸುತ್ತಾ ಬಹಳ ಕಾಲವಿದ್ದರು. ಪದ್ಮಪಾದಾದಿಗಳುಪಂಚಪೂಜಾತರರಾಗಿ ಪರಪಕ್ಷಭೇದನೋತ್ಸುಕಮಾನಸರಾಗಿದ್ದರು.

ಇತರ ಶಿಷ್ಯರು, ಆಚಾರ್ಯರಿಗೂ, ಪದ್ಮಪಾದಾದಿಗಳಿಗೂ ಭಿಕ್ಷೆಯನ್ನಿಯುತ್ತಲೂ, ಸಾಯಂಕಾಲದ ಹೊತ್ತಿನಲ್ಲಿ ಗುರುಗಳಿಗೆ ದ್ವಾದಶನಮಸ್ಕಾರಗಳನ್ನು ಸಮರ್ಪಿಸುತ್ತಲೂ, ಡಕ್ಕಾ, ತಾಳ, ನೃತ್ಯ ಇವುಗಳಿಂದ ಸ್ತುತಿಸುತ್ತಲೂ ಇದ್ದರು.

ಗಾಣಪತ್ಯಮತ ಭಂಜನವು.

ಅನಂತರ ಆಚಾರ್ಯರು ಗಣವರಪುರಕ್ಕೆ ಹೋಗಿ, ಅಲ್ಲಿರುವ ಗಂಧವತೀನದಿಯಲ್ಲಿ ಸ್ನಾನಮಾಡಿ ಗಣಪತಿಯನ್ನು ಸೇವಿಸುತ್ತಾ ಎಂಟುದಿನಗಳು ಇರಲು; ಧುಂಡಿರಾಜ ಮತ್ತು ವೀರವಿಘ್ನೇಶರೆಂದು ಹೆಸರುಳ್ಳ ಇಬ್ಬರು ಬಂದು "ಎಲೈ, ಯತಿಯೇ! ನಿನ್ನ ಮತವು ನೋಡುವುದಕ್ಕೂ ಕೇಳುವುದಕ್ಕೂ ಸಮಾಚೀನವಾಗಿಲ್ಲ; ಬ್ರಹ್ಮಕೈವಲ್ಯವನ್ನು

ಬೋಧಿಸುವ ಅದ್ವೈತವು ಆಕಾಶದಂತೆ ಆಧಾರವಿಲ್ಲದೇ ಇದೆ; ಮನಸ್ಸು, ವಾಕ್ಕು, ವೃತ್ತಿಗಳಿಗೆ ಅಗೋಚರವಾದದ್ದು; ಇಂತಹ ಅದ್ವೈತವಿದ್ಯೆಯು ಖಪುಷ್ಪದಂತೆ ಮುಮುಕ್ಷುಗಳಿಂದ ಧ್ಯಾನಮಾಡಲ್ಪಡುವುದಕ್ಕೆ ಹೇಗೆ ಯೋಗ್ಯವು; ಆದ್ದರಿಂದ ನಮ್ಮ ಮತವೇ ಉತ್ಕೃಷ್ಟವು; ನಮ್ಮ ಮತಕ್ಕೆ ಗಣಪತಿಯೇ ಒಡೆಯನು; ಅವನೇ ಬ್ರಹ್ಮ, ವಿಷ್ಣು ಮಹೇಶ್ವರರೇ ಮೊದಲಾದ ಗಣಗಳಿಗೂ ಒಡೆಯನು; ಅವನು ವಾಲ್ಮೀಕಿ, ವ್ಯಾಸರೇ ಮೊದಲಾದವರುಗಳಿಗಿಂತ ' ಕಮಿಂಕೇವೀನಾಮುಪನುಶ್ರವಸ್ತಮನು' '' ಎಂಬ ಶ್ರುತಿಯಂತೆ, ಶ್ರೇಷ್ಠನು; ಸಕಲ ವಿದ್ಯಾದಾಯಕರುಗಳಲ್ಲಿ ಇವನೇ ಶ್ರೇಷ್ಠನು; ಬ್ರಹ್ಮನೇ ಮೊದಲಾದ ಸೃಷ್ಟಿಕರ್ತರಿಗೂ ಗಣಪತಿಯೇ ಕಾರಣನು; ಅಂತಹ ಗಣಪತಿಯನ್ನು ಸೇವಿಸಿದರೆ ಮೋಕ್ಷ ಬರುತ್ತದೆ'' ಎನ್ನಲು—

ಶಂಕರರು '' ಎಲ್ಲೆ, ಮೂಢಮತಿಗಳಾದ ಛಂಡಿವಿಘ್ನೇಶ್ವರರೇ! ಬ್ರಹ್ಮಾದಿಗಳಿಗೆ ಗಣಪತಿಯೇ ಮೂಲಕಾರಣನೆಂದು ಹೇಳಲ್ಪಟ್ಟಿತಲ್ಲವೇ? ಪಾರ್ವತಿಯ ಅಂಗಮಲದಿಂದ ಜಾತನಾದ ಗಣಪತಿಗೆ ಜಗತ್ಕಾರಣತ್ವವು ಹೇಗೆ ಯಾವನಿಗೆ ಈಶ್ವರನು ತಂದೆಯೋ ಅಂತಹ ಈಶ್ವರನಿಗೆ ಈ ಗಣಪತಿಯು ಹೇಗೆ ತಂದೆಯಾವಾನು? ಬ್ರಹ್ಮನೇ ಮೊದಲಾದ ದೇವತೆಗಳಿಗೆ ಪರಬ್ರಹ್ಮವೇ ಕಾರಣವು; ಆ ಬ್ರಹ್ಮವಸ್ತುವಿಲ್ಲದೇ ಜರಾಜರ ರೂಪವಾದೀ ಪ್ರಪಂಚವೇ ಇಲ್ಲ; ಈ ಗಣಪತಿಯು ಹೇಗೆ ಉತ್ಪನ್ನನಾದನೋ ಹಾಗೆಯೇ ನಾಶವನ್ನೂ ಹೊಂದುತ್ತಾನೆ; ಆದ್ದರಿಂದ ನಿನ್ನ ದೇಹದಲ್ಲಿ ಅಂಕನಗಳ ಧರಿಸುವಿಕೆಯು ನಿರಾಧಾರವಾದದ್ದು; ಗಜಾನನನು, ಮಹಾತ್ಮನೂ, ಸಕಲ ದೇವತೆಗಳಿಂದಲೂ ಪೂಜಿಸಲ್ಪಡಲು ಯೋಗ್ಯನಾಗಿದ್ದರೂ, ಈಶ್ವರನಿಂದ ಉತ್ಪನ್ನನಾದಕಾರಣ ಜಗತ್ಕರ್ತೃತ್ವವನ್ನು ಅವನಲ್ಲಿ ಹೇಳುವುದು ಸರಿಯಲ್ಲ'' ಎನ್ನಲು, ಅವರೆಲ್ಲರೂ ತಮ್ಮ ಚಿಹ್ನೆಗಳನ್ನು ಬಿಟ್ಟು, ಆಚಾರ್ಯರಿಗೆ ವಂದಿಸಿ ಅವರ ಶಿಷ್ಯರಾಗಿ ಅವರ ಜೊತೆಯಲ್ಲಿಯೇ ಹೊರಟರು.

ಅನಂತರ ಆಚಾರ್ಯರು ಅಲ್ಲಿಗೆ ಬಂದ ಆಂಧ್ರರನ್ನು ಸ್ವಸೇವಾರತರನ್ನಾಗಿಮಾಡಿ, ವೆಂಕಟಾಚಲೇಶ್ವರರನ್ನು ವಂದಿಸಿ ಕಾಳಹಸ್ತಿಗೆ ಬಂದು ಕ್ರಕಚಕೈಶಿಕಾದಿಘೈರವ ಮತದವರನ್ನು ನಿಗ್ರಹಿಸಿ, ಆಯುಧಧಾರಿಗಳಾಗಿ ಬಂದವರನ್ನು ಸುಧನ್ವರಾಯನಿಂದ ನಾಶಮಾಡಿಸಿ, ಅಲ್ಲಿಂದ ವಿದರ್ಭದೇಶಕ್ಕೆ ಹೋಗಿ, ವಾದಿಗಳನ್ನು ಜಯಿಸಿ, ಕರ್ಣಾಟದೇಶಕ್ಕೆ ಹೋಗಬೇಕೆಂದಿದ್ದರು.

ಆಗ ಅಲ್ಲಿಗೆ ಓರ್ಮಕ್ರಕಚನೆಂಬ ಕಾಪಾಲಿಕನು, ಮದ್ಯದಿಂದ ಪೂರಿತವಾದ ಒಂದು ನರಕಪಾಲವಂ ತಿನಿಸುಕೊಂಡು ವಿಭೂತಿರುದ್ರಾಕ್ಷಿಮಾಲೆಗಳಿಂದಲಂಕೃತ

ರಾದ ಶಂಕರಾಚಾರ್ಯರನ್ನು ಕುರಿತು ‘‘ಎಲ್ಲೆ, ಬ್ರಾಹ್ಮಣನೇ! ನಿನ್ನನ್ನು ನೋಡಿದರೆ ಶಿವಪೂಜಾಧುರಂಧರನಂತೆ ಕಾಣುವಿ; ಆದರೆ ನೀನು ನನ್ನಂತೆ ಕಪಾಲವಂ ಮಾತ್ರ ಧರಿಸಿಲ್ಲ; ಕಪಾಲವನ್ನು ಧರಿಸದಿದ್ದರೆ ಶಿವನು ತೃಪ್ತನಾಗುವುದಿಲ್ಲವೆಂದು ನೀನರಿಯೆಯೊ? ಇನ್ನುಮೇಲಾದರೂ, ನರಕಪಾಲವಂ ಧರಿಸಿ ದೇವರನ್ನು ತೃಪ್ತಿಗೊಳಿಸು’’ ಎಂದನು.

ಅದನ್ನು ಕೇಳಿ ಆಚಾರ್ಯರು ಕೋಪದಿಂದ ಆಸನವನ್ನು ತಮ್ಮ ಗುಂಪಿನ ದೆಸೆಯಿಂದ ಬಹಿಸ್ಕಾರವನ್ನು ಮಾಡಲು, ಆ ಕ್ರಕಚನು ಇದರಿಂದ ಕ್ರುದ್ಧನಾಗಿ ಹೊರಕ್ಕೆ ಹೋಗಿ ತನ್ನ ಶಿಷ್ಯರಾದ ಲಕ್ಷಾಂತರಮಂದಿಗಳಿಂ ಸಹಿತನಾಗಿ ಯುದ್ಧಕ್ಕೆ ಬಂದನು.

ಆಗ ಸುಧನ್ವರಾಯನು ಧನುರ್ಬಾಣಧರನಾಗಿ ಯುದ್ಧಕ್ಕೆ ನಿಂತನು.

ಆದರೂ ಕಾಪಾಲಿಕರು ಬ್ರಾಹ್ಮಣರಮೇಲೆ ನುಗ್ಗಿಬಂದರು. ಅದನ್ನು ನೋಡಿ ಶಂಕರಭಗವತ್ಪಾದರು ಕೋಪದಿಂದ ‘‘ಹಾ’’ ಎನ್ನಲು ಅವರೆಲ್ಲರೂ ಭಸ್ಮೀಕೃತರಾದರು.

ತನ್ನ ಶಿಷ್ಯರೆಲ್ಲಾ ನಾಶವಾದದ್ದನ್ನು ಕಂಡು ಕ್ರಕಚನು ತನ್ನ ಕೈಲಿದ್ದ ಕಪಾಲದ ಮಧ್ಯದಲ್ಲಿ ಅರ್ಘವನ್ನು ಪಾನಮಾಡಿ ಕಪಾಲಿಭೈರವನನ್ನು ಧ್ಯಾನಿಸಲು, ಭೈರವನು ಕೂಡಲೇ ಪ್ರತ್ಯಕ್ಷನಾದ್ದನ್ನು ನೋಡಿ ಕ್ರಕಚನು ‘‘ನಿನ್ನ ಭಕ್ತಜನದ್ರೋಹಿಯಾದ ಇವನನ್ನು ಕೊಲ್ಲು’’ ಎನ್ನಲು ನನ್ನವತಾರರೂಪಿಯಾದ ಶ್ರೀಶಂಕರನಲ್ಲಿ ಹೇಗೆ ಅಪರಾಧವನ್ನಾಚರಿಸುವಿ?’’ ಎಂದು ಕೋಪಗೊಂಡವನಾಗಿ ಆ ಕ್ರಕಚನನ್ನೇ ಸಂಹರಿಸಿ ಅಂತರ್ಹಿತನಾದನು.

ಅನಂತರ ಕೌಪೀನಮಾತ್ರಧಾರಿಯಾದ ಒಬ್ಬ ಕ್ಷಪಣಕನು, ಒಂದು ಕೈನಲ್ಲಿ ಗೋಲಯಂತ್ರವನ್ನೂ, ಮತ್ತೊಂದರಲ್ಲಿ ತುರೀಯಂತ್ರವನ್ನೂ ಧರಿಸಿದವನಾಗಿ ಬಂದು ಆಚಾರ್ಯರನ್ನು ಕುರಿತು ‘‘ಸ್ವಾಮಿ! ಅತ್ಯಂತ ಆಶ್ಚರ್ಯಕರವೂ ಶುಭದಾಯಕವೂ, ಆದ ನನ್ನ ಮಾತನ್ನು ಕೇಳಿ; ಪೂರ್ಣಸನುಯನೆಂದು ಹೆಸರುಳ್ಳ ನಾನು ಕಾಲಪ್ರವರ್ತಕನಾದ ಸೂರ್ಯನನ್ನು ಈ ಯಂತ್ರಗಳಿಂದ ಬಂಧಿಸಿ ತ್ರಿಲೋಕಗಳಲ್ಲಿಯೂ ನಡೆಯುವ ಶುಭಾಶುಭಗಳನ್ನು ತಿಳಿಯುತ್ತೇನೆ; ನಾನು ಯಾವುದನ್ನು ಒಳ್ಳೆಯದೆಂದು ನಂಬಿರುವೆನೋ ಅದನ್ನು ತಪ್ಪಿಸಲು ಕಾಲನೂ ಸಮರ್ಥನಲ್ಲನು; ಆದ್ದರಿಂದ ಕಾಲಜ್ಞಾನದಿಂದ ಜ್ಞಾನವನ್ನು ಸಂಪಾದಿಸಿ ತನ್ಮೂಲಕ ಮೋಕ್ಷವನ್ನು ಹೊಂದಬೇಕಲ್ಲದೆ ಬೇರೆ ಇಲ್ಲ.’’ ಎಂದನು.

ಅದಕ್ಕೆ ಶಂಕರರು ‘‘ನಿನ್ನಿಂದ ಜೆನ್ನಾಗಿ ಹೇಳಲ್ಪಟ್ಟಿತು ; ನೀನು ನನ್ನ ಸಮೀಪದಲ್ಲಿಯೇ ಇರು ; ಪರೀಕ್ಷಾಸಮಯಬಂದಾಗ ನಿನ್ನನ್ನು ಕೇಳುತ್ತೇನೆ’’ ಎನ್ನಲು—

ಅವನು ಹಾಗೆಯೇ ಆಗಲೆಂದು ಒಪ್ಪಿ ಅವರ ಸಮೀಪದಲ್ಲಿದ್ದನು.

ಅನಂತರ ಶಂಕರರು ಶಂಬಲನೆಂಬ ಬೌದ್ಧಮತವಾದಿಯನ್ನೂ, ಮಲ್ಲಾರಿಮತೋಪಾಸಕರನ್ನೂ, ವಿಷ್ಣುಕ್ಷೇತ್ರ ಮತಾನುಯಾಯಿಗಳನ್ನೂ, ಮನ್ಮಥ ಭಕ್ತರನ್ನೂ, ಕುಬೇರೋಪಾಸಕರನ್ನೂ, ಇಂದ್ರಭಕ್ತರನ್ನೂ, ಯಮೋಪಾಸಕರನ್ನೂ, ಪ್ರಯಾಗದಲ್ಲಿದ್ದ ವರುಣೋಪಾಸಕರನ್ನೂ, ಶೂನ್ಯಮತವಾದಿಯನ್ನೂ, ಪರಾಶೋಪಾಸಕರನ್ನೂ, ಸಾಂಖ್ಯಮತಾನುಯಾಯಿಗಳನ್ನೂ, ಕಾಪಿಲಮತಾನುಯಾಯಿಗಳನ್ನೂ, ಸುಧೀರಶಿವರೆಂಬ ಅಣುಕಮತದವರನ್ನೂ, ಭರಣನೇ ಮೊದಲಾದ ಚಂಡೋಪಾಸಕರನ್ನೂ. ಮತ್ತು ಭೌಮೋದಿಗ್ರಹೋಪಾಸಕರನ್ನೂ, ಸೋಲಿಸಿದಮೇಲೆ, ಮೇಲೆ ಹೇಳಲ್ಪಟ್ಟ ಕ್ಷಪಣಕನು ಆಚಾರ್ಯರನ್ನು ವಂದಿಸಿ ಸ್ವಾಮಿ ? ನಿಮ್ಮ ಅಧೀನದಲ್ಲಿಯೇ ನನಗೆ ಆರು ತಿಂಗಳು ಕಾಲವು ಕಳೆದುಹೋಯಿತು ; ಕಾಲಬ್ರಹ್ಮಬೋಧಕವಾದ ನನ್ನ ಮತವನ್ನು ನೀವು ಆಶ್ರಯಿಸಿ ಮುಕ್ತರಾಗಿ’’ ಎನ್ನಲು—

ಆಚಾರ್ಯರು ‘ಈ ಕಾಲವು ಸಂವತ್ಸರವಾಯಿತು’ ಎಂಬ ಶ್ರುತಿಯಿಂದ ಕಾಲಕ್ಕೆ ನಿತ್ಯತ್ವವು ಹೇಗೆ? ಆದ್ದರಿಂದ ಎಲ್ಲೆ, ಮೂಢನೇ! ನಿನ್ನ ಕುಬುದ್ಧಿಯನ್ನು ಬಿಟ್ಟು, ಶುದ್ಧಾದ್ವೈತಮತವನ್ನು ಆಶ್ರಯಿಸಿ ಮುಕ್ತನಾಗು ಎನ್ನಲು—

ಅವನು, ಆಚಾರ್ಯರಿಗೆ ನಮಸ್ಕರಿಸಿ ಅದ್ವಯಬ್ರಹ್ಮದಲ್ಲಿ ಅನುರಕ್ತನಾದನು,

ಮಲ್ಲಾರಿಮತಖಂಡನವು.

ಅನಂತರ ಆಚಾರ್ಯರು ಅಸುಮಲ್ಲಪುರಕ್ಕೆ ಹೋಗಿ ಅಲ್ಲಿ ಇಪ್ಪತ್ತೊಂದು ದಿನ ಇದ್ದು, ಅಲ್ಲಿನವರನ್ನು ‘ನೀವು ಪ್ರಭಾತಾದಿಕಾಲದಲ್ಲಿ ಮಾಡುವ ಕಾರ್ಯವನ್ನು ತಿಳಿಸಿ, ಎನ್ನಲು, ಅವರು ‘‘ಸ್ವಾಮಿ! ನಾವು. ಮಲ್ಲಾಸುರನನ್ನು ಸಂಹರಿಸಿ ಮಲ್ಲಾರಿಯೆಂದು ಪ್ರಸಿದ್ಧನಾದ ಆ ಸ್ವಾಮಿಯನ್ನೂ, ಅವನವಾಹನವಾದ ಶುನಕವನ್ನೂ, ತ್ರಿಕಾಲದಲ್ಲಿಯೂ ನೃತ್ಯವಾದ್ಯಾದಿಗಳಿಂದ ಪೂಜಿಸಿ, ಕತ್ತಿನಲ್ಲಿ ವರಾಟಕ (ಕವಡೆ) ಗಳನ್ನು ಧರಿಸಿ ಸ್ವಾಮಿಯನ್ನು ಪ್ರಸನ್ನನಾಗಿ ಮಾಡಿಕೊಂಡಿದ್ದೇವೆ; ಆ ಸ್ವಾಮಿಯ ಕಟಾಕ್ಷದಿಂದ ಸುಖಸಾಗರಗಳು ಅಭಿವೃದ್ಧಿಯಾಗುವುವು; ಇದಲ್ಲದೆ ಅವನವಾಹನಕ್ಕೆ ವೇದದಲ್ಲಿ ‘ಶ್ವಭ್ಯಶ್ವಪತಿಭ್ಯಶ್ಚವೋನಮಃ’ ಎಂದು ಮಹಿಮೆಯು ಹೇಳಲ್ಪಟ್ಟಿದೆ; ನಾವು ನಿಮಗೆ ಉತ್ತಮಗಳಾದ ವರಾಟಕಗಳನ್ನು ಕೊಡುತ್ತೇವೆ; ನೀವೂ ಅದನ್ನು ಧರಿಸಿ ನಮ್ಮಂತೆ ಮುಕ್ತಿಯಂ ಪಡೆಯಿರಿ’’ ಎಂದರು.

ಅದಕ್ಕೆ ದೇಶಿಕರು ,, ಏಕಮೇವಾದ್ವಿತೀಯಂ ಬ್ರಹ್ಮ ' ಎಂಬಂತೆ ನಿತ್ಯಸ್ವರೂಪನಾದ ಪರಮಾತ್ಮನು ಓರ್ವನೇ; ಅವನಿಂದಲೇ ತ್ರಿಮೂರ್ತಿಗಳೂ ಹುಟ್ಟುತ್ತಾರೆ. ಮತ್ತು ಲಯಹೊಂದುತ್ತಾರೆ ಕಲೆಗಳಿಗೆ ಏಕಲೆಗಳು ಹೇಗೋಹಾಗೆಯೇ ಆ ತ್ರಿಮೂರ್ತಿಗಳಿಂದಲೂ ಉತ್ಪನ್ನರಾದವರಿದಾರೆ; ರುದ್ರನಲ್ಲಿ ಏಕಾದಶರುದ್ರರೆಂದು ಪ್ರಸಿದ್ಧರಾದ ಹನ್ನೊಂದುಜನ ಅಂಶಭೂತರುಂಟು; ಪರಬ್ರಹ್ಮನಿಗಿರುವ ಶಕ್ತಿಯು ತ್ರಿಮೂರ್ತಿಗಳಿಗೆ ಹೇಗಿಲ್ಲವೋ ಹಾಗೆಯೇ ತ್ರಿಮೂರ್ತಿಗಳಿಗಿರುವ ಶಕ್ತಿಯು, ತದಂಶೀಯರಿಗಿಲ್ಲವು; ಆದ್ದರಿಂದ ನಿಮ್ಮ ಮಲ್ಲಾರಿಗೆ ಅಷ್ಟು ಪ್ರಾಶಸ್ತ್ಯವು ಹೇಗೆ ಬಂದೀತು ? ಶ್ವವೇಷವನ್ನು ಧರಿಸುವುದು; ನಿತ್ಯಕರ್ಮವನ್ನು ಬಿಡುವುದು; ತ್ರಿಕಾಲದಲ್ಲಿಯೂ ನಾಟ್ಯಾಸಕ್ತರಾಗಿರುವುದು; ಇತ್ಯಾದಿ ಬ್ರಾಹ್ಮಣ್ಯ ವಿಘಾತಕಗಳಾದ ಕರ್ಮಾಚರಣೆಯುಳ್ಳ ನಿಮ್ಮ ಮುಖಾವಲೋಕನದಿಂದ ಸೂರ್ಯದರ್ಶನವನ್ನು ಮಾಡಬೇಕು '' ಎಂದು ಹೇಳಿ, ನಮಸ್ಕರಿಸಿ ಕ್ಷಮಾಪಣೆಯಂ ಬೇಡಿದ ಅವರುಗಳಲ್ಲಾ ಪ್ರಾಯಶ್ಚಿತ್ತವಂ ಮಾಡಿಸಿ ಅವರನ್ನೆಲ್ಲಾ ಶುದ್ಧಾದ್ವೈತಿಗಳಾದ ಬ್ರಾಹ್ಮಣರನ್ನಾಗಿ ಮಾಡಿದರು.

ಅನಂತರ ಆಚಾರ್ಯರು, ಉದಯನಾದಿ ನ್ಯಾಯವಾದಿಗಳನ್ನೂ, ತಪ್ತಮುದ್ರಾಧಾರಿಗಳಾದ ವೈಷ್ಣವರನ್ನೂ, ಲಿಂಗಧಾರಿಗಳಾದ ಶೈವರನ್ನೂ, ವಾಮಾಚಾರಪ್ರವಿಷ್ಟರಾದ ಶಾಕ್ತರನ್ನೂ, ರಕ್ತಗಂಧಾರ್ಚನೆಯನ್ನು ಮಾಡುತ್ತಿದ್ದ ಸೌರರನ್ನೂ, ನರಬಲಿಯಂ ಸಮರ್ಪಿಸುವ ಕಾಪಾಲಿಕರನ್ನೂ, ಉಚ್ಛಿಷ್ಟಭಕ್ಷಕರಾದ ಗಾಣಾಪತ್ಯರನ್ನೂ ವಾದದಲ್ಲಿ ಸೋಲಿಸಿ, ಸಪ್ರಮಾಣವಾಗಿ ಅನುಭವನಿದರ್ಶನವಂ ತೋರಿಸಿ ಎಲ್ಲರನ್ನೂ ವಶಪಡಿಸಿಕೊಂಡರು.

ಇಲ್ಲಿಂದ ಆಚಾರ್ಯರು ' ಯಮಂಯ ಯಜ್ಞೋಗಚ್ಛತಿ ' ಎಂದು ಹೇಳಿ ವಾದಕ್ಕೆಬಂದ ಕಾಮಕರ್ಮನೇ ಮೊದಲಾದ ಯಮೋಪಾಸಕರನ್ನೂ, ಇಂದ್ರಾದ್ಯಷ್ಟದಿಕ್ಪಾಲಕೋಪಾಸಕರನ್ನೂ, ಸಾಂಖ್ಯಮತೋದ್ಭವರಾದ ಪ್ರಧಾನವಾದಿಯೇ ಮೊದಲಾದವರನ್ನೂ, ಪಿತೃದೇವತೋಪಾಸಕರಾದ ಶಂಖಪಾದನೇ ಮೊದಲಾದವರನ್ನೂ ಮತ್ತು ಬೇತಾಳೋಪಾಸಕರನ್ನೂ ಸೋಲಿಸಿ ಪಶ್ಚಿಮದೇಶಕ್ಕೆ ಹೋದರು.

ಆಚಾರ್ಯರು ಅಲ್ಲಿ ಶಿಷ್ಯರಿಗೆ ಭಾಷ್ಯಪ್ರವಚನ ಮಾಡಿಸುತ್ತಿದ್ದ ಸಮಯದಲ್ಲಿ ಹರದತ್ತನೆಂಬುವನು ಬಂದು ಶೈವಸೂತ್ರಭಾಷ್ಯಕರ್ತನೂ, ಸ್ವಗುರುವೂ, ಆದ ನೀಲಕಂಠನನ್ನು ಪ್ರಶಂಸಮಾಡಲು ಆಚಾರ್ಯರು ಆ ನೀಲಕಂಠನನ್ನು ವಾದದಲ್ಲಿ ಸೋಲಿಸಲು

ಅವನು ತನ್ನ ಭಾಷ್ಯವನ್ನು ಬಿಟ್ಟು ಹರದತ್ತನೇ ಮೊದಲಾದ ಶಿಷ್ಯರೊಡನೆ ಶರಣಾಗತನಾದನು.

ಅಲ್ಲಿಂದ ಆಚಾರ್ಯರು ಸೌರಾಷ್ಟ್ರಕ್ಕೆ ಹೋಗಿ, ಆಲ್ಲಿದ್ದ ದುರ್ಮತದವರನ್ನು ಸೋಲಿಸಿ, ದ್ವಾರಕೆಗೆ ಬಂದು ಪಾಂಚರಾತ್ರರನ್ನೂ, ಅವರ ಗುರುವಾದ ಭಟ್ಟಭಾಸ್ಕರನ್ನೂ ವಾದದಲ್ಲಿ ಗೆದ್ದು ಅವಂತಿಗೆ ಹೋಗಿ ಅಲ್ಲಿದ್ದ ಬಾಣನೇ ಮೊದಲಾದವರನ್ನು ತಮ್ಮ ವಜ್ರಾಯುಧದಂತಿರುವ ಸಪ್ರಾಮಾಣ್ಯಗಳಾದ ವಾಕ್ಸಮೂಹಗಳಿಂದ ಹತಗರ್ವರನ್ನಾಗಿಮಾಡಿ ಸ್ವಭಾಷ್ಯವಂ ಖಂಡಿಸಬೇಕೆಂದು ಬಂದ ಶ್ರೀಹರ್ಷನೇ ಮೊದಲಾದವರನ್ನು ಸೋಲಿಸಿ, ಅನಂತರ ದರದ, ಭರತ, ಶೂರಸೇನ, ಕುರು, ಪಾಂಚಾಲದೇಶಗಳಲ್ಲಿದ್ದ ವಾದಿಗಳಂ ನಿರ್ಗರ್ವಿಗಳನ್ನಾಗಿಮಾಡಿ, ಅಲ್ಲಿಂದ ಕಾಮರೂಪಕ್ಕೆ ಹೋಗಿ ಶಾಕ್ತಭಾಷ್ಯಕರ್ತನಾದ ಅಭಿನವಗುಪ್ತನಂ ಗೆದ್ದು, ಗೌಡಪದದೇಶಕ್ಕೆ ಹೋಗಿ ಮುರಾರಿಮಿಶ್ರರಂ ಸೋಲಿಸಿ, ಯುದ್ಧಕ್ಕೆಬಂದ ಬೌದ್ಧರನ್ನೂ, ನ್ಯಾಯಸಿದ್ಧಾಂತಜ್ಞಾನದಿಂದಲೇ ಮೋಕ್ಷ ಬರುವುದೆಂದು ಹೇಳುತ್ತಿದ್ದ ಗೌತಮ ಮತಾನು ಸಿದ್ಧಾಂತಜ್ಞಾನಯಾಯಿಗಳಾದ ತಾರ್ಕಿಕರನ್ನೂ, ಕೇವಲ ಜ್ಞಾನದಿಂದಲೇ ಮೋಕ್ಷ ಬರುವುದೆಂದು ವಾದಿಸುತ್ತಿದ್ದ ಕಾಪಿಲಮತಾನುಯಾಯಿಗಳನ್ನೂ, ಶಬ್ದಬ್ರಹ್ಮವಾದಿಗಳಾದ ಪಾತಂಜಲ ಮತಾನುಯಾಯಿಗಳನ್ನೂ, ಮತ್ತು ವೈಶೇಷಿಕ ಮತಾವಲಂಬಿಗಳನ್ನೂ ವಾದದಲ್ಲಿ ಗೆದ್ದು ಅದ್ವೈತಸ್ಥಾಪನೆಯಂಗೈದರು.

ಆವರಿವಿಗೆ ಈ ಭರತಖಂಡದಲ್ಲಿದ್ದಲ್ಲ ದುರ್ಮತಗಳು ಶಾಂತವಾಗಿ ಅಡಗಿದವು ವಾದದಲ್ಲಿ ಸೋತ ಪಂಡಿತರು ವಿಧೇಯರಾದರು. ಮಹಿಮೆಯನ್ನು ಕಂಡ ಭಕ್ತರು ಸೇವಿಸುತ್ತಾ ಬಂದರು. ಮೂರ್ಖರಾಗಿ ಹಠದಿಂದ ಜಗಳಕ್ಕೆ ನಿಂತವರು ರಾಜನಿಗ್ರಹದಿಂದ ಸತ್ವಗುಣವನ್ನು ಅನುಸರಿಸಿದರು. ಮೋಸತನದಿಂದ ಗುರುಗಳನ್ನು ದ್ವೇಷಿಸಿದವರು ಆಚಾರ್ಯರ ತಪಃಶಕ್ತಿಯಿಂದ ನಷ್ಟರಾದರು. ಕೋಟ್ಯಾನುಕೋಟಿ ಬ್ರಾಹ್ಮಣರು ದುರಾಚಾರಗಳಂ ಬಿಟ್ಟು ವೈದಿಕಮತವನ್ನನುಸರಿಸಿ ಪಂಚಾಯತನ ಪೂಜಾರತರಾಗಿ ಆತ್ಮಭೇದಾನುಸಂಧಾನದಿಂದ ಪರಮೇಶ್ವರನನ್ನು ಕರ್ಮಮಾರ್ಗಪ್ರಕಾರನೇ ಆರಾಧಿಸುತ್ತಾ ಭಕ್ತಿಯೋಗ, ಕರ್ಮಯೋಗ, ಹಠಯೋಗ, ಸಾಂಖ್ಯಯೋಗ, ಮುಂತಾದ ಸರ್ವಮಾರ್ಗದಲ್ಲಿಯೂ ದೋಷಮಾರ್ಗವಂ ಬಿಟ್ಟು, ಶ್ರುತಿಯುಕ್ತವಾದ ಬ್ರಹ್ಮಾತ್ಮೈಕ್ಯಾನುಸಂಧಾನದಿಂದಲೇ ಪ್ರವರ್ತಿಸುತ್ತ, ಸರ್ವ ಮಾರ್ಗವನ್ನೂ ಜ್ಞಾನದಲ್ಲಿ ಮುಗಿಯಿಸಿ, ಕಾಮಕ್ರೋಧಾದಿಗಳಂ ತ್ಯಜಿಸಿ ಅಸ್ತೇಯಾಹಿಂಸಾಸತ್ಯ ಶೌಚದಯಾದಿ ಷಡ್ಗುಣಗಳಂ ಪಡೆದು ತಪಸ್ವಿಗಳಾಗಿ ಪೂಜ್ಯರೆನಿಸಿದರು. ಬ್ರಾಹ್ಮಣರೆಲ್ಲರೂ ಪರಮಾದ್ವೈತ

ಮತಾನುಯಾಯಿಗಳಾಗಿದ್ದರು. ಉಳಿದವರೆಲ್ಲರೂ ಶಂಕರಚರಣಸೇವಾಧುರೀಣರೆನಿಸಿದರು. ಈ ಪ್ರಕಾರವಾಗಿ ಆಚಾರ್ಯರು ಆಸೇತುಹಿಮಾಚಲದಮಧ್ಯದಲ್ಲಿರುವ ಕರ್ಮಭೂಮಿಯಲ್ಲಿ ಪ್ರಧಾನಮಲ್ಲನಿಬರ್ಹಣನ್ಯಾಯದಿಂದ ೬೫೨೦ ಮಂದಿಗಳನ್ನು ವಾದದಲ್ಲಿ ಸೋಲಿಸಿದರು. ಆಗ ಕರ್ಮಯೋಗ್ಯವಾದೀಭರತಖಂಡವು ಜ್ಞಾನಮಯವಾಗಿತ್ತು. ಹೀಗೆ ಪರಮಾತ್ಮನು ಭೂಮಿಯಲ್ಲಿ ಮನುಷ್ಯಾವತಾರವಂಗೈದು ಜನಗಳ ಮನಸ್ಸಿನಲ್ಲಿ ಅಡಗಿದ್ದ ಅಜ್ಞಾನಾಂಧಕಾರವನ್ನು ಜ್ಞಾನವೆಂಬಸೂರ್ಯನ ಬೆಳಕಿನಿಂದ ಹತ್ತೀರಾಶಿಗೆ ಬಿದ್ದ ಬೆಂಕಿಯಂತೆ ತೊಲಗಿಸಿದನು. ಅವರ ಶಿಷ್ಯರೂ ಮಾನವರ ದೇಹದಲ್ಲಿ ಜ್ಞಾನರತ್ನಾಪಹಾರಕ್ಕೊಸ್ಕರ ಅಡಗಿದ್ದ ಕಾಮ, ಕ್ರೋಧಾದಿತಸ್ಕರರನ್ನು ತಮ್ಮ ಸದುಕ್ತಿಸದುಪದೇಶಗಳೆಂಬ ತೀಕ್ಷ್ಣಗಳಾದ ನಖಗಳಿಂದ ತಿವಿದು ಧ್ವಂಸಮಾಡಿ, ಜ್ಞಾನಮಾರ್ಗಪ್ರತಿಷ್ಠಾಪನೆಯಂಗೈದರು.

ತ್ರಯೋದಶವಲ್ಲರೀ.

ಭಗಂಧರಾರ್ತಿಭಂಗಮೇತ್ಯ ಪದ್ಮಪಾದತೋ ಗುರುಃ
ನಿಕೃತ್ತ ದುರ್ಮತಸ್ತು ಗೌಡಪಾದಮುತ್ತರೈರ್ಯುತಮ್ ।
ವಿಧಾಯ ವಾಗ್ವಿಜಶ್ವ ಪೀಠಸಂಸ್ಥಿತಸ್ಸುರೇಶ್ವರಮ್
ಬದರ್ಯವನ್ಯುಪಾಂತಮಾವ ತತ್ರಸನ್ನಿವೇಶ್ಯಜ ॥

ಶಂಕರಾಚಾರ್ಯರು ಹಿಂದೆ ಅಭಿನವಗುಪ್ತನೆಂಬ ಶಕ್ತ್ಯುಪಾಸಕ (ಮಂತ್ರವಾದಿ) ನನ್ನು ಸೋಲಿಸಿದ್ದರಷ್ಟೆ; ಅವನು ಆಚಾರ್ಯರ ಶಿಷ್ಯನಾಗಿ ಅವರ ಜೊತೆಯಲ್ಲಿಯೇ ಇದ್ದು ದಿಗ್ವಿಜಯಾನಂತರ ಅಭಿಚಾರ ಪ್ರಯೋಗಮಾಡಿದನು. ಇದರಿಂದ ಆಚಾರ್ಯರಿಗೆ ಭಗಂದರವೆಂಬ ಜಾಡ್ಯವು ಬಂತು. ಈ ವಿಷಯವು ಆಚಾರ್ಯರ ಶಾಟಿಯನ್ನು ಒಗೆಯುತ್ತಿದ್ದ ತೋಟಕಾಚಾರ್ಯರಿಗೆ ತಿಳಿಯಲು ಅವರು ಆಚಾರ್ಯರಿಗೆ ತಿಳಿಸಿದರು.

ಅದಕ್ಕೆ ಆಚಾರ್ಯರು ಈ ಕರ್ಮವ್ಯಾಧಿಗೆ ಚಿಕಿತ್ಸೆಯು ಬೇಡವೆನ್ನಲು ತೋಟಕರೇ ಮೊದಲಾದ ಶಿಷ್ಯರು ಅನೇಕ ರಾಜವೈದ್ಯರನ್ನು ಕರೆತಂದರೂ ರೋಗವು ಪರಿಹಾರವಾಗಲಿಲ್ಲ.

ಆಗ ಶಿಷ್ಯರು " ಈ ಚಾಡ್ಯಪರಿಹಾರವಾಗುವಂತೆ ಏನಾದರೂ ಮಾಡಬೇಕು " ಎಂದು ಆಚಾರ್ಯರನ್ನು ನಿರ್ಬಂಧದಿಂದ ಪ್ರಾರ್ಥಿಸಲು, ಆಚಾರ್ಯರು ಅವರ ನಿರ್ಬಂಧವನ್ನು ಸಹಿಸಲಾರದೇ ಮಹಾದೇವಸಂ ಪ್ರಾರ್ಥಿಸಲಾದೇವದೇವನಾಜ್ಞೆಯಿಂದ ಅಶ್ವಿನೀದೇವತೆಗಳು ದ್ವಿಜವೇಷದಿಂದ ಆಚಾರ್ಯರವರ ಸಮೀಪಕ್ಕೆ ಬಂದು " ಎಲ್ಲೈ, ಯತಿಯೆ! ನಿನ್ನ ಈ ರೋಗವು ಅನ್ಯರಕೃತ್ಯದಿಂದ ಉತ್ಪನ್ನವಾದ ಕಾರಣ ಚಿಕಿತ್ಸೆಮಾಡಲಶಕ್ಯವು " ಎಂದು ಹೇಳಿ ಹೊರಟುಹೋದರು.

ಅನಂತರ ಕೋಪವನ್ನು ಹೊಂದಿದ ಪದ್ಮಪಾದರು, ಶತ್ರುಗಳ ವಿಷಯದಲ್ಲಿಯೂ ದಯಾರ್ದ್ರಹೃದಯವುಳ್ಳ ಗುರುಗಳಿಂದ ತಡೆಯಲ್ಪಟ್ಟರೂ, ತಮ್ಮ ಗುರುವಿನ ರೋಗನಾಶಕ್ಕೆ ಇನ್ನೊಂದು ಮಂತ್ರವನ್ನು ಜಪಿಸಲು ಅದರಿಂದ ಅಭಿನವಗುಪ್ತನೂ ನಾಶವಾದನು; ಆಚಾರ್ಯರ ರೋಗವೂ ನಾಶವಾಯಿತು.

ಬಳಿಕ ಸ್ವಸ್ಥರಾದ ಶಂಕರರು, ಒಂದುದಿನ ಸಾಯಂಕಾಲ ಗಂಗಾನದಿಯ ಮರಳಿನಮೇಲೆ ಬ್ರಹ್ಮಾನುಸಂಧಾನವನ್ನು ಮಾಡುತ್ತಿರಲು ಅವರ ಗುರುಗಳಾದ ಗೌಡಪಾದರು ಬಂದು ಆಚಾರ್ಯರಿಗೆ ದರ್ಶನವಿತ್ತು, ಆಚಾರ್ಯರ ಧಾಷ್ಟ್ಯಾದಿಗಳನ್ನು ನೋಡಿ ಸಂತೋಷಪಟ್ಟು ಮುಂದರಿದರು.

ಅನಂತರ ಶಂಕರರು ಜಂಬೂದ್ವೀಪದ ಭರತಖಂಡದಲ್ಲಿ, ಕಾಶ್ಮೀರದಲ್ಲಿರುವ, ಸರ್ವಜ್ಞಶಾರದಾಪೀಠವನ್ನಾರೋಹಿಸಿದೇ, ಅಲ್ಲಿನವರ ಪ್ರಶ್ನೆಗಳಿಗೆ ಸದುತ್ತರವನ್ನಿತ್ತು ಸರ್ವಜ್ಞಪೀಠವಿರುವ ಶಾರದಾಸದನದ ಬಾಗಿಲುಗಳನ್ನು ತೆರೆಯಿಸದೇ ಸರ್ವಜ್ಞತ್ವವು ಬರುವುದಿಲ್ಲವೆಂದು ಕೇಳಿ ಸಶಿಷ್ಯರಾಗಿ ಅಲ್ಲಿಗೆ ಹೊರಟು, ದಕ್ಷಿಣದ್ವಾರವನ್ನು ಸೇರಿ ಸಕಲ ಮತವಾದಿಗಳನ್ನೂ ಸೋಲಿಸಿ ಒಳಗೆ ಪ್ರವೇಶಿಸಿ, ಸನಂದನನ ಹಸ್ತವನ್ನು ಹಿಡಿದುಕೊಂಡು ಸರ್ವಜ್ಞಪೀಠವನ್ನು ಹತ್ತಲುದ್ಯುಕ್ತರಾದ್ದನ್ನು ಕಂಡು ಆಶರೀರವಾಣಿಯು " ಎಲ್ಲೈ, ಯತಿಯೇ! ನಿನಗೆ ಸರ್ವಜ್ಞತ್ವವಿಲ್ಲದಿದ್ದರೆ ಬ್ರಹ್ಮಾವತಾರಿಯಾದ ಮಂಡನಮಿಶ್ರನು ನಿನಗೆ ಹೇಗೆ ಶಿಷ್ಯನಾಗುತ್ತಿದ್ದನು? ಈ ಪೀಠವನ್ನು ಹತ್ತಲು ಸರ್ವಜ್ಞತ್ವ ವೊಂದೇಕಾರಣವಲ್ಲ. ಏಕೆಂದರೆ ಶುದ್ಧತ್ವವೂ ಬೇಕು; ಕಲಾರಹಸ್ಯವನ್ನು ತಿಳಿಯಲಿಚ್ಛಿಸಿದ ನೀನು ಸ್ತ್ರೀಸಂಭೋಗವನ್ನು ಮಾಡಿದ್ದರಿಂದ ನೀನು ಹೇಗೆ ಶುದ್ಧನು?" ಎನ್ನಲು ಶಂಕರರು " ಮಾತಃ! ನಾನು ಅಮರುಕರಾಯನ ದೇಹದಿಂದ ಹೋಗಿ ಕಲಾಶಾಸ್ತ್ರವನ್ನು ಕಲಿತೆನೇ ಹೊರತು ಯತಿಯ ದೇಹದಿಂದಲ್ಲ; ಆದ್ದರಿಂದ ನಾನು ಹೇಗೆ ಅಶುದ್ಧನು" ಎಂದರು.

ಆಗ ಶಾರದೆಯು ಏನೂ ಉತ್ತರವನ್ನು ಕೊಡದಿರಲು ಶಂಕರದೇಶಿಕರು ಸರ್ವಜ್ಞಪೀಠವನ್ನು ಅಧಿರೋಹಿಸಿ ಗಾರ್ಗ್ಯ, ಕಪೋಲ ಮುಂತಾದವರಿಂದ ಯಾಜ್ಞವಲ್ಕ್ಯರು ಸೇವಿಸಲ್ಪಟ್ಟಂತೆ, ಶಾರದಾ ಮತ್ತು ವಿದ್ವಾಂಸರುಗಳಿಂದ ಪೂಜಿಸಲ್ಪಟ್ಟರು.

ಆಗ ಇಂದ್ರಾದಿ ದೇವತೆಗಳು ಆಚಾರ್ಯರ ತಲೆಯಮೇಲೆ ಕಲ್ಪವೃಕ್ಷದ ಪುಷ್ಪಗಳಿಂದ ವೃಷ್ಟಿಯನ್ನು ಸುರಿಸಿ ಸಂತೋಷದಿಂದ ಸ್ವಲೋಕಾಭಿಮುಖರಾದರು.

ಬಳಿಕ ಶಂಕರದೇಶಿಕರು ತಮ್ಮ ಭಾಷ್ಯಕ್ಕೆ ಚಾಲ್ಲನರಾಜ್ಯಪಟ್ಟಾಭಿಷೇಕವಂ ಮಾಡಿ ಜಗದ್ಗುರುತ್ವವನ್ನು ವಹಿಸಿ ಸುರೇಶ್ವರರೇ ಮೊದಲಾದ ಕೆಲವರು ಶಿಷ್ಯರನ್ನು ಶೃಂಗಗಿರಿಯಲ್ಲಿ ಇರುವಂತೆ ಹೇಳಿದರು.

ಇವರ ಮಹಿಮೆಯನ್ನು ಕೇಳಿದ ಚಾಲ್ಲನಿಗಳೂ, ರಾಜರೂ, ಸಂಘಪತಿಗಳೂ ಮೊದಲಾದವರು ಬಂದು "ಸ್ವಾಮಿ! ಲೋಕದಲ್ಲಿ ವರ್ಣಾಶ್ರಮ ಧರ್ಮ ಕೆಡದಂತೆಯೂ, ಧರ್ಮಬ್ರಹ್ಮ ನಿರ್ಮಾಣಶಾಸ್ತ್ರಗಳು ನೆಲಗೊಂಡಿರುವಂತೆಯೂ, ಆಸೇತುಹಿಮಾಚಲಪರ್ಯಂತರವಾದ ಈ ಭರತಖಂಡದಲ್ಲಿ ಸದಾಚಾರವಿಚಾರದಿಂದ ಧರ್ಮವಂ ಪರಿಪಾಲಿಸುತ್ತಿರುವಂತೆ ತಮ್ಮ ಶಿಷ್ಯರನ್ನು ಮತಾಧಿಪತಿಗಳನ್ನಾಗಿ ಏರ್ಪಡಿಸಿ ಲೋಕವೆಲ್ಲವೂ ತದಾಜ್ಞಾನುಸಾರ ಇರುವಂತೆ ಮಾಡಬೇಕು," ಎಂದು ಪ್ರಾರ್ಥಿಸಿದರು.

ಶಂಕರದೇಶಿಕರು ಆ ಪ್ರಕಾರವೇ ಪೂರ್ವದಿಕ್ಕಿನಲ್ಲಿರುವ ಜಗನ್ನಾಥದಲ್ಲಿ ಭೋಗವರ್ಧನವೆಂಬ ಮಠವನ್ನು ನಿರ್ಮಿಸಿ, ಅಲ್ಲಿಗೆ ಪದ್ಮಪಾದರನ್ನು ಅಧೀಶ್ವರನ್ನಾಗಿ ಮಾಡಿ ಪಶ್ಚಿಮದಿಕ್ಕಿನಲ್ಲಿರುವ ದ್ವಾರಕೆಯಲ್ಲಿ ಒಂದು ಮಠವನ್ನು ನಿರ್ಮಿಸಿ ಅಲ್ಲಿಗೆ ಹಸ್ತಾಮಲಕರನ್ನು ಒಡೆಯರನ್ನಾಗಿಮಾಡಿ, ಉತ್ತರದಿಕ್ಕಿನಲ್ಲಿ ಬದರಿಕಾಶ್ರಮದಲ್ಲಿ ಒಂದು ಮಠವನ್ನು ನಿರ್ಮಿಸಿ ತೋಟಕರನ್ನು ಅಲ್ಲಿಗೆ ಅಧೀಶ್ವರನ್ನಾಗಿಮಾಡಿ, ಅನಂತರ ನಿಜಯೋಗಶಕ್ತಿಯಿಂದ ಕೈಲಾಸಕ್ಕೆ ಹೋಗಿ, ಚಂದ್ರಮೌಳೀಶ್ವರ ದಿವ್ಯಲಿಂಗವನ್ನೂ, ರತ್ನಗರ್ಭಗಣಪತಿಯನ್ನೂ, ದೇವಿಸೌಂದರ್ಯಲಹರ್ಯಾದಿಗಳನ್ನೂ, ಸುರೇಶ್ವರರುಗೆ ಕೊಟ್ಟು ನಿಜಶಿಷ್ಯರಿಗೆ ಸಾಕ್ಷಾತ್ಮಾನುಸಂಧಾನರಹಸ್ಯವನ್ನು ಉಪದೇಶಿಸುತ್ತಾ ಇದ್ದರು.

ಅನಂತರ ಸುರೇಶ್ವರರು ಶಂಕರರ ಇಷ್ಟಾನುಸಾರ ತೈತ್ತಿರೀಯ ಬೃಹದಾರಣ್ಯಕಾದಿ ಭಾಷ್ಯಗಳಿಗೆ ವಾರ್ತಿಕವನ್ನೂ, ದಕ್ಷಿಣಾಮೂರ್ತಿಸ್ತೋತ್ರಕ್ಕೆ ಮಾನಸೋಲ್ಲಾಸವೆಂಬ ವಾರ್ತಿಕವನ್ನೂ, ರಚಿಸಿದರು.

ಬಳಿಕ ಶಂಕರದೇಶಿಕರು ಬದರಿಕಾಶ್ರಮಕ್ಕೆ ಹೋಗಿ ಅಲ್ಲಿ ಕೆಲವು ದಿನಗಳಿದ್ದು ಅಲ್ಲಿದ್ದ ಪಾತಂಜಲಶಾಸ್ತ್ರನಿಷ್ಣರಾದ ಕೆಲವರಿಗೆ ತಮ್ಮ ಭಾಷ್ಯವನ್ನು ಉಪದೇಶಿಸುತ್ತಿದ್ದರು.

ಹೀಗೆ ಕಲಿಕಲ್ಮಷಘ್ನಗಳೂ ಶುಭಗಳೂ, ಆದ ಚರಿತ್ರೆಗಳಿಂದ ಪ್ರಕಾಶಿಸುತ್ತಲಿರುವ ಕೀರ್ತಿರಾಶಿಯುಳ್ಳ ಶಂಕರಾವತಾರಿಗಳಾದ ಶಂಕರರಿಗೆ ದ್ವಾತ್ರಿಂಶದಬ್ದಗಳು ಕಳೆದವು.

ಬಳಿಕ ಶಂಕರರು ಸಶಿಷ್ಯರಾಗಿ ಕೇದಾರಕ್ಕೆ ಹೋಗಿ, ಅಲ್ಲಿನ ಶೀತದಿಂದ ಶಿಷ್ಯರೆಲ್ಲರೂ ಪೀಡಿತರಾಗುತ್ತಿರುವುದನ್ನು ನೋಡಿ, ಮಹಾದೇವನನ್ನು ಉಷ್ಣೋದಕವನ್ನು ಕೊಡಬೇಕೆಂದು ಪ್ರಾರ್ಥಿಸಿದರು.

ಚಂದ್ರಶೇಖರನು ಯತಿರಾಜರಾದ ಶಂಕರರಿಂದ ಹೀಗೆ ಸ್ತುತಿಸಲ್ಪಟ್ಟು ಕೂಡಲೇ ಉಷ್ಣೋದಕಪ್ರವಾಹವುಳ್ಳ ಒಂದು ನದಿಯನ್ನು ತನ್ನಪದಾರವಿಂದದ ಬೆನೆಯಿಂದ ಸೃಷ್ಟಿಸಿದನು. (ಅದು ಈಗಲೂ ಹಿಮಾಲಯದಲ್ಲಿ ಪ್ರಸಿದ್ಧವಾಗಿದೆ.)

ಅನಂತರ ಹೀಗೆ ದೇವಕಾರ್ಯವನ್ನು ಮಾಡಿದ ಈಶ್ವರಾವತಾರಿಗಳಾದ ಶಂಕರದೇಶಿಕರಲ್ಲಿಗೆ, ಬ್ರಹ್ಮೇಂದ್ರಾದಿ ಸುರಮುಖ್ಯರು, ಮಹರ್ಷಿಗಳು, ಪ್ರಸಿದ್ಧರು ತಿವರುಗಳೆಂದ ಸಹಿತರಾಗಿಬಂದು, ಯತಿನೇಷಧಾರಿಯಾದ ತ ಸ್ವಾಮಿಯಂ ಸ್ತುತಿಸಿ "ಎಲೈ ಸ್ವಾಮಿಯೇ! ನೀನೇ ಸರ್ವಕಾರಣನು; ಪ್ರಪಂಚರಕ್ಷಣೆಗೋಸ್ಕರವೇ ಹಾಲಾಹಲವೆಂಬ ವಿಷವನ್ನು ಧರಿಸಿದ್ದೀಯೇ; ಕಾಮನನ್ನು ದಹಿಸಿರುವಿ; ತ್ರಿಪುರವನ್ನು ನಾಶಮಾಡಿರುವಿ; ಜಗದುತ್ಪತ್ತಿಕಾರಣನಾದ ತ್ರಿನಯನನೇ ನೀನಾಗಿದ್ದೀಯೆ; ಈಗ ವೇದಮರ್ಯಾದೆಯನ್ನುದ್ಧರಿಸಲು ಅವತರಿಸಿದ್ದೀಯೆ. ಈಗ ನಿನ್ನ ಕಾರ್ಯವು ಸಂಪೂರ್ಣವಾದಕಾರಣ ನಮ್ಮ ಸುಖಕ್ಕೋಸ್ಕರ ಸ್ವರ್ಗಕ್ಕೆ ಬರಬೇಕು" ಎಂದು ಪ್ರಾರ್ಥಿಸಿದರು.

ಹೀಗೆ ಬ್ರಹ್ಮೇಂದ್ರೋಪೇಂದ್ರ ದೇವರ್ಷಿ ಪ್ರಮುಖರುಗಳಿಂದ ಪ್ರಾರ್ಥಿಸಲ್ಪಟ್ಟ ಶಂಕರರು, ಬ್ರಹ್ಮನಿಂದ ಕೊಡಲ್ಪಟ್ಟ ಹಸ್ತವನ್ನು ಪಿಡಿದುಕೊಂಡು ಶ್ರೇಷ್ಠವಾದ ನಂದಿಯನ್ನು ಹತ್ತಿ ಪ್ರಕಟವಾಗಿರುವ ಸುಜಟಾಜೂಟಗಳೂ, ಚಂದ್ರನೂ ಉಳ್ಳವರಾಗಿ ಋಷಿಗಳಿಂದ ಸ್ತುತಿಸಲ್ಪಡುತ್ತಾ ಸಶರೀರನಾಗಿ ಕೈಲಾಸವನ್ನು ಸೇರಿದರು.

ಭದ್ರಂ! ಶುಭಂ!! ಮಂಗಳಂ!!!

ಜಯತು ಜಯತು ಜೀವೋಬ್ರಹ್ಮರೂಪಶ್ಚಿದಾತ್ಮಾ
ಜಯತು ಜಯತು ಭಾಷ್ಯಂತಾಂಕರಂಭೂಸುರೇಷು|
ಜಯತು ಜಯತು ನಿತ್ಯಂತತ್ತ್ವಮಸ್ಯಾದಿವಾಕ್ಯಮ್
ಜಯತು ಜಯತು ಶುದ್ಧಾದ್ವೈತಮಾ ಚಂದ್ರತಾರಮ್ ||

ಓಂ ತತ್ಸತ್.

ಸಂಪೂರ್ಣಮ್.

ಶ್ರೀ ಶೃಂಗಗಿರಿ ವಿದ್ಯಾಧರ್ಮಪೀಠದಲ್ಲಿದ್ದ ಶಂಕರಾಚಾರ್ಯರೇ ಆದಿಯಾದ ಗುರುಪರಂಪರಾ.

(೧) ಮಹಾದೇವಃ = ಸದಾಶಿವಃ = ಚಿದಾನಂದಃ, (೨) ಮಹಾವಿಷ್ಣುಃ, (೩) ಚತುರಾನನಃ, (೪) ವಸಿಷ್ಠಃ, (೫) ಶಕ್ತಿಃ, (೬) ಪರಾಶರಃ, (೭) ವ್ಯಾಸಃ, (೮) ಶುಕಃ, (೯) ಗೌಡಪಾದಃ, (೧೦) ಗೋವಿಂದಭಗವಾನ್;

ಗುರುಗಳ ಹೆಸರು.			ಜನ್ಮದಿವಸ್ಸು.
೧೧. ಶ್ರೀ ಶಂಕರಾಚಾರ್ಯರು	...	...	೩೨ ವರುಷಗಳು.
೧೨. ಶ್ರೀ ಸುರೇಶ್ವರಾಚಾರ್ಯರು	...	...	೭೨೫ ,,
			ಸನ್ಯಸ್ತರಾಗಿದ್ದ ಕಾಲ.
೧೩. ಬೋಧಘನಾಚಾರ್ಯರು	...	...	೨೦೦ ವರುಷಗಳು.
೧೪. ಜ್ಞಾನಘನಾಚಾರ್ಯರು	...	...	೬೪ ,,
೧೫. ಜ್ಞಾನೋತ್ತಮಶಿವಾಚಾರ್ಯರು	...	...	೪೮ ,,
೧೬. ಜ್ಞಾನಗಿರ್ಯಾಚಾರ್ಯರು	...	...	೬೯ ,,
೧೭. ಸಿದ್ಧಗಿರ್ಯಾಚಾರ್ಯರು	...	...	೬೨ ,,
೧೮. ಈಶ್ವರತೀರ್ಥರು[1]	...	...	೪೯ ,,
೧೯. ನರಸಿಂಹತೀರ್ಥರು	...	...	೬೩ ,,
೨೦. ವಿದ್ಯಾತೀರ್ಥರು–ವಿದ್ಯಾಶಂಕರರು		...	೧೦೫ ,,
೨೧. ಭಾರತೀ ಕೃಷ್ಣತೀರ್ಥರು	...	...	೫೨ ,,
೨೨. ವಿದ್ಯಾರಣ್ಯರು[2]	...	...	೫೫ ,,
೨೩. ಚಂದ್ರಶೇಖರಭಾರತೀ[3]	...	...	೨೧ ,,
೨೪. ನರಸಿಂಹಭಾರತೀ	...	...	೨೧ ,,

---

1 ತ್ರಿವೇಣೀಸಂಗಮೀತೀರ್ಥೇ। ತತ್ತ್ವಮಸ್ಯಾದಿಲಕ್ಷಣೇ ॥
ಸ್ನಾಯಾತ್ತತ್ತ್ವತೀರ್ಥಭಾವೇನ । ತೀರ್ಥನಾಮಾಸಉಚ್ಯತೇ ॥೧॥

2. ಅರಣ್ಯೇಸಂಸ್ಥಿತೋನಿತ್ಯಂ । ಆನಂದೇನಂದನೇವನೇ ॥
ತ್ಯಕ್ತ್ವಾಸರ್ವಮಿದಂವಿಶ್ವಂ । ಅರಣ್ಯಃಪರಿಕೀರ್ತ್ಯತೇ ॥೨॥

3. ವಿದ್ಯಾಭಾರೇಣ ಸಂಪೂರ್ಣಃ । ಸರ್ವಭಾರಂಪರಿತ್ಯಜ್ಯ ॥
ದುಃಖಭಾರಂನಜಾನಾತಿ । ಭಾರತೀಪರಿಕೀರ್ತ್ಯತೇ ॥೩॥

೨೫.	ಪುರುಷೋತ್ತಮಭಾರತೀ ...	...	೪೨ ವರುಷಗಳು.
೨೬.	ಶಂಕರಾನಂದಃ ...	...	೨೬ ,,
೨೭.	ಚಂದ್ರಶೇಖರಭಾರತೀ ...	...	೧೫ ,,
೨೮.	ನರಸಿಂಹಭಾರತೀ ...	...	೧೫ ,,
೨೯.	ಪುರುಷೋತ್ತಮಭಾರತೀ ...	...	೪೫ ,,
೩೦.	ರಾಮಚಂದ್ರಭಾರತೀ ...	...	೫೨ ,,
೩೧.	ನರಸಿಂಹಭಾರತೀ ...	...	೧೬ ,,
೩೨.	ನರಸಿಂಹಭಾರತೀ ...	...	೧೩ ,,
೩೩.	ಇಮ್ಮಡೀ ನರಸಿಂಹಭಾರತೀ ...	...	೨೩ ,,
೩೪.	ಅಭಿನವ ನರಸಿಂಹಭಾರತೀ ...	...	೨೩ ,,
೩೫.	ಸಚ್ಚಿದಾನಂದ ಭಾರತೀ	...	೪೧ ,,
೩೬.	ನರಸಿಂಹಭಾರತೀ ...	...	೪೨ ,,
೩೭.	ಸಚ್ಚಿದಾನಂದಭಾರತೀ ...	...	೩೬ ,,
೩೮.	ಅಭಿನವ ಸಚ್ಚಿದಾನಂದಃ ...	...	೨೬ ,,
೩೯.	ನೃಸಿಂಹಭಾರತೀ ...	...	೩ ,,
೪೦.	ಸಚ್ಚಿದಾನಂದಭಾರತೀ ...	...	೪೩ ,,
೪೧.	ಅಭಿನವ ಸಚ್ಚಿದಾನಂದಃ ...	...	೪ ,,
೪೨.	ನರಸಿಂಹಭಾರತೀ ...	...	೪೨ ,,
೪೩.	ಸಚ್ಚಿದಾನಂದ ಶಿವಾಭಿನವ ವಿದ್ಯಾ ನರಸಿಂಹಭಾರತೀ ...		೪೬ ,,
೪೪.	ಚಂದ್ರಶೇಖರಭಾರತೀ ...	...	

ಕಾದಂಬರೀಸಂಗ್ರಹ ಗ್ರಂಥಮಾಲಾ ನಂ. ೨೮.

ಕರ್ನಾಟಕ ಸಾಹಿತ್ಯಪರಿಷತ್ತು

(ಸಾಮಾಜಿಕರೊಬ್ಬರಿಂದ)

PRINTED BY
B. V. NARASIMHAIYENGAR
AT THE
ROYAL PRESS, MYSORE
1916

ಕಾದಂಬರೀ ಸಂಗ್ರಹ.

(ತಿಳಿಗನ್ನಡ ಮಾಸಪತ್ರಿಕೆ.)

ವಾರ್ಷಿಕಚಂದಾ 1-4-0.

ಈ ಪತ್ರಿಕೆಯು ನಾಲ್ಕು ವರ್ಷದಿಂದ ಅವಿಚ್ಛಿನ್ನವಾಗಿ ಪ್ರಕಟವಾಗುತ್ತಿರುವುದು. ವಿಧವಿಧ ನಾಟಕ, ಕಾದಂಬರಿ, ಪದ್ಯ, ಉಪನ್ಯಾಸಗಳು ಇದರಲ್ಲಿ ಮುದ್ರಣವಾಗುತ್ತಿರುವುವು. ಭಾಷಾಭಿಮಾನಿಗಳಾದ ಕನ್ನಡಿಗರ ಪ್ರೋತ್ಸಾಹವು ಬೇಕಾಗಿದೆ.

ವಿಳಾಸ :— ಕಾದಂಬರೀಸಂಗ್ರಹ,
ಮೈಸೂರು.

ಕರ್ನಾಟಕಸಾಹಿತ್ಯ ಪರಿಷತ್ತು.



ನಿಬಂಧನೆಗಳಲ್ಲಿ ಮಾಡಬಹುದಾಗಿರುವ ತಿದ್ದುಪಡಿಗಳು.

(ಸಾಮಾಜಿಕರೊಬ್ಬರಿಂದ.)

ಕನ್ನಡಿಗರಾದ ನಮ್ಮ ಪೂರ್ವಪುಣ್ಯದಿಂದಲೂ ಹಿರಿಯರ ಆಶೀರ್ವಾದಬಲದಿದಲೂ, ದೀರ್ಘಕಾಲಾನಂತರದಲ್ಲಿಯಾದರೂ, ನಾವು ನಮ್ಮ ದೇಶಭಾಷಾಭಿಮಾನ ವಿಷಯದಲ್ಲಿ ಜಾಗರೂಕರಾಗಿ 'ಮೈಸೂರು ಸಂಪದಭ್ಯುದಯ ಸಮಾಜ''ದವರ ಪ್ರೋತ್ಸಾಹದಿಂದ ಕಳೆದ ೧೯೧೫ನೇ ವರ್ಷದ ಮೇತಿಂಗಳಲ್ಲಿ ಬೆಂಗಳೂರು ಪಟ್ಟಣದಲ್ಲಿ ಸಮ್ಮೇಳನ ಸೇರಿ 'ಕರ್ಣಾಟಕಸಾಹಿತ್ಯ ಪರಿಷತ್ತು' ಎಂಬ ಸಂಸ್ಥಾಪನೆಯನ್ನು ಹೊರಡಿಸಿದ ಸಂಗತಿಯು ಜನಜನಿತವಾಗಿ ಸರ್ವರಿಗೂ ತಿಳಿದೇ ಇರುವುದಲ್ಲವೇ! ಈಚೆಗೆ ಆ ಸಮ್ಮೇಳನದಲ್ಲಿ ಮಾಡಲಾದ ನಿರ್ಣಯಗಳೂ, ಪರಿಷತ್ತಿನ ನಿಬಂಧನೆಗಳೂ ಮುಂತಾ ಮುಖ್ಯ ವಿಷಯಗಳನ್ನೊಳಕೊಂಡ ವರದಿಯು (Report) ಉಭಯ ಭಾಷೆಗಳಲ್ಲಿಯೂ ಅಚ್ಚಾಗಿ ಸಾಮಾಜಿಕರ ಕೈಗೆ ಬಂದಿರುವುದು. ಕರ್ಣಾಟದೇಶದ ಹಲವು ಭಾಗಗಳಿಂದ ಪರಸ್ಪರ ಪರಿಚಯವಿಲ್ಲದ ಹಲವು ದೊಡ್ಡ ಮನುಷ್ಯರು ಮೊದಲಲ್ಲಿಯೇ ಯಾವತ್ತೂ ಸಾಧಕ ಬಾಧಕಕಾರಣಗಳನ್ನು ಸೂಕ್ಷ್ಮವಾಗಿ ಆಲೋಚಿಸದೆ—'ಹೇಗಾದರೂ ಒಂದು ಬಾರಿಗೆ ಪರಿಷತ್ತು ಹೊರಡಲಿ; ಮುಂದೆ ನೋಡೋಣ!' ವೆಂದು ಅತ್ಯವಸರದಿಂದ ಮಾಡಿದ ಇಂಥ ಈ ನಿಬಂಧನೆಗಳೊಳಗೆ ಕೆಲಕೆಲವು ನ್ಯೂನತೆಗಳಿದ್ದರೆ ಅದೊಂದು ವಿಶೇಷವಲ್ಲ; ಅವು ತಿದ್ದಲ್ಪಡಲು ಬಾರದಂಥವುಗಳೂ ಅಲ್ಲ. ಆದರೆ, ಈ ಮುಂದೆ ಸಹ ಸದಸ್ಯರು ಒಟ್ಟುಗೂಡುವ ಸಂದರ್ಭವು ವರ್ಷದಲ್ಲಿ ಎರಡು ಮೂರು ದಿನ ಮಾತ್ರವೇ ಆದುದರಿಂದಲೂ, ಬರುವ ಸೂಚನೆಗಳನ್ನೆಲ್ಲ ಸಭಿಕರು ಶಾಂತಚಿತ್ತರಾಗಿ ಆಗಲೇ ವಿಮರ್ಶಿಸಿ ನಿಬಂಧನೆಗಳನ್ನು ತಕ್ಕಂತೆ ತಿದ್ದುಪಡಿಮಾಡುವುದು ಪ್ರಾಯಃ ದುಸ್ಸಾಧ್ಯವಾದುದರಿಂದಲೂ, ಆತ ಏವ ಇಂಥ ಸೂಚನೆಗಳನ್ನು ಸ್ವಲ್ಪ ಮುಂದಾಗಿಯೇ ಪರಿಷತ್ತಿನ ಹಿತಚಿಂತಕರ ಸನ್ನಿಧಿಯಲ್ಲಿಟ್ಟು ಕೂಲಂಕಷವಾದ ಚರ್ಚೆಗೆ ಅವಕಾಶಕೊಡುವುದು ಯುಕ್ತವೆಂದು ನನಗೆ ತೋರಿ ನನ್ನ ಮಿತ್ರರು ಕೂಡ ಈರೀತಿ ಮಾಡುವಂತೆ ಪ್ರೋತ್ಸಾಹಿಸಿದುದರಿಂದಲೂ, ನನ್ನ ಮನಸ್ಸಿಗೆ ಹೊಳೆದ ಬೇರೆ ಬೇರೆ ಸೂಚನೆಗಳನ್ನು ಈ

ಕೆಳಗೆ ಕೊಟ್ಟಿರುವೆನು. ಇವನ್ನೆಲ್ಲ ಆಯಾ ಪ್ರಾಂತದ ಸಭಾಸದರು ತಮ್ಮ ತಮ್ಮ ಸೀಮೆಯ ಪ್ರಮುಖವಾದ ಪತ್ರಗಳಲ್ಲಿ ನಿರ್ಮಾತ್ಸರ್ಯದಿಂದ ಚರ್ಚಿಸಿ, ಪರಿಷತ್ತಿನ ಕಾಲದಲ್ಲಿ ಮುಂದೆ ಬರಬಹುದಾದ ಸೂಚನೆಗಳಿಗೆ ನಿರರ್ಥಕವಾದ ಕಾಲಯಾಪನೆಯಾಗದಂತೆ ಯೋಗ್ಯತಾನುಗುಣವಾಗಿ ಮತಗಳನ್ನು ಕೊಡಲು ಸಾಧ್ಯಪಡಿಸಬೇಕೆಂಬುದೇ ಈ ಲೇಖನವನ್ನು ಬರೆದುದರ ಮುಖ್ಯೋದ್ದೇಶವಾಗಿದೆ.

೧ ನೆಯ ನಿಬಂಧನೆಯು ಪರಿಷತ್ತಿನ ಹೆಸರನ್ನೂ, ೨ ನೆಯದು ಅದು ಇರತಕ್ಕ ಮುಖ್ಯಸ್ಥಳವನ್ನೂ ಹೇಳುವುದು. ಇವೆರಡೂ ನಿರಾಕ್ಷೇಪಕರಗಳಾಗಿವೆ.

೩ ನೆಯ ನಿಬಂಧನೆಯು ಪರಿಷತ್ತಿನ ಉದ್ದೇಶವನ್ನು ಸಂಗ್ರಹವಾಗಿ ನಿರೂಪಿಸುವುದು. ಮತ್ತು ಅದನ್ನು ನೆರವೇರಿಸಲು ಒಟ್ಟು ೧೩ ಮಾರ್ಗಗಳನ್ನು ಹೇಳಿದೆ. ಆದರೆ ಸಮ್ಮೇಳನದ ಅನೇ ನಿರ್ಣಯರೂಪವಾಗಿ ಗೊತ್ತಾದದ್ದು ' ಕರ್ಣಾಟಕದ ಬೇರೆ ಬೇರೆ ಭಾಗಗಳಲ್ಲಿ ಕ.ಸಾ. ಪರಿಷತ್ತಿನ ಶಾಖೆಗಳನ್ನು ಸ್ಥಾಪಿಸಿ, ಸಮಾನೋದ್ದೇಶಗಳಿಗಾಗಿ ಏರ್ಪಟ್ಟ ಬೇರೆಬೇರೆ ಸಭೆಗಳನ್ನು ಪರಿಷತ್ತಿಗೆ ಜೋಡಿಸುವುದು (Affiliate) " ಎಂಬುದನ್ನೂ ೧೧ ನೆಯ ಮಾರ್ಗವೆಂದು ಹೇಳಿರುವ ಅಂಶಕ್ಕೆ ಸೇರಿಸಿ ಅದನ್ನು ವಿಸ್ತಾರಪಡಿಸುವುದು ಅಯುಕ್ತವಾಗಲಾರದೆಂದು ನನಗೆ ತೋರುತ್ತಿದೆ. ಇನ್ನು ಕನ್ನಡ ಸಾಹಿತ್ಯವನ್ನೂ ಭಾಷೆಯನ್ನೂ ಉನ್ನತಿಗೆ ತರುವುದಿಷ್ಟೇ ನಮ್ಮ ಪರಿಷತ್ತಿನ ಮಹೋದ್ದೇಶವೆಂದು ನಾನು ತಿಳಿಯುವುದಿಲ್ಲ. 'ಭಾರತೀಯ ಸಾಹಿತ್ಯ ಕಲಾಶಾಸ್ತ್ರರೂಪವಾಗಿ ವ್ಯಕ್ತವಾಗಿರುವ ಸರ್ವವಿಧವಾದ ಆರ್ಯಸಂಸ್ಕೃತಿ (Culture) ಯನ್ನು ಕರ್ಣಾಟಭಾಷಾ ಮೂಲವಾಗಿ ವಿಕಾಸಗೊಳಿಸಿ ಸಮಸ್ತೋಪಾಯಗಳಿಂದ ಕನ್ನಡಿಗರ ಅಭ್ಯುದಯವನ್ನು ಸಾಧಿಸುವುದೇ ಕರ್ಣಾಟಕಸಾಹಿತ್ಯಪರಿಷತ್ತಿನ ಉದ್ದೇಶ" ವೆಂದು ಈಗಲಿನ ಮಾತುಗಳಿಗೆ ಬದಲಾಗಿ ಹಾಕಿದರೆ ಹೆನ್ನಾಗಿರಬಹುದೆಂದು ನನಗೆ ತೋರುತ್ತಿದೆ. ಹೀಗೆ ಮಾಡಿದೆವಾದರೆ, ನಾಟಕಗಳು, ಹರಿಕೀರ್ತನೆಗಳು, ಚಿತ್ರಲೇಖನ, ಗಾನ ಮುಂತಾದವುಗಳು ಕೂಡ ನಮ್ಮ ಉದ್ದೇಶಕ್ಕೆ ವಿಸಂಗತವಲ್ಲವಾದುದುಂದ ಅವು ಕೂಡ ಈ ಅರ್ಥವಿವರಣೆಯೊಳಗೆ ಬರುವುದಕ್ಕೆ ಅವಕಾಶವಾಗುವುದು.

೪ ನೆಯ ನಿಬಂಧನೆಯು ಪರಿಷತ್ತಿನ ಘಟನೆಯೆನ್ನು ಕುರಿತು ಹೇಳುವುದು. ಪರಿಷತ್ತಿಗೆ ಸಂಬಂಧಪಟ್ಟವರನ್ನು ಪೋಷಕರು (Patrons), ಉಪಪೋಷಕರು (Vice patrons), ಪ್ರದಾತೃಗಳು (Donors), ಆಶ್ರಯದಾತರು (Supporters), ಆಜೀವಸದ್ಯರು (Life-members), ಒಂದನೆಯ ಮತ್ತು ಎರಡನೆಯ

ತರಗತಿಯ ಸಾಧಾರಣ ಸಭ್ಯರು (Ordinary members of the 1st & 2nd classes), ಮತ್ತು ಗೌರವಾರ್ಥಸಭ್ಯರು (Honorary members), ಎಂಬ ಏಳುತರಗತಿಗಳಾಗಿ ವಿಂಗಡಿಸಿಯಿದೆ. ಇವರಲ್ಲಿ ಪೋಷಕೋಪಪೋಷಕರಿಗೆ ಧನಕ್ಲಪ್ತಿಯನ್ನು ಹೇಳದೆ, ೧ ಸಾವಿರ ರೂಪಾಯಿ ಕೊಡತಕ್ಕವರು ಪ್ರದಾತೃಗಳೆಂದೂ, ೫೦೦ ರೂಪಾಯಿ ಕೊಡತಕ್ಕವರು ಆಶ್ರಯದಾತರೆಂದೂ ಹೇಳಿದೆ. ಕ್ಲಪ್ತಿ ಹೇಳದ ಮೊದಲನೆಯ ಎರಡು ವರ್ಗದವರನ್ನು ಮಹಾಪೋಷಕರು (Grand Patrons) ಮತ್ತು ಪೋಷಕರು (Patrons) ಎಂಬುದಾಗಿ ಹೆಸರು ಬದಲಾಯಿಸಿ, ೧೦೦೦ ರೂಪಾಯಿ ಕೊಡತಕ್ಕವರನ್ನು ಉಪಪೋಷಕರೆಂದೂ, ೫೦೦ ರೂ. ಕೊಡುವವರನ್ನು ಆಶ್ರಯದಾತರೆಂದೂ, ೨೫೦ ರೂ. ಕೊಡತಕ್ಕವರನ್ನು ಒಂದು ಹೊಸವರ್ಗವಾಗಿ ಏರ್ಪಡಿಸಿ ಪ್ರೋತ್ಸಾಪಕರೆಂದೂ ಕರೆದರೆ ಅಧಿಕಸಮಂಜಸವಾಗಬಹುದು. ಹಾಗೆಯೇ ಈಗ ಇರುವ ಆಜೀವಸಭ್ಯರ ಒಂದೇ ವರ್ಗದ ಬದಲಾಗಿ ಸಾಧಾರಣಸಭ್ಯರ ಎರಡು ವರ್ಗಗಳಿಗೆ ಸರಿಹೋಗುವಂತೆ ೧೦೦ ರೂ. ಕೊಡತಕ್ಕವರನ್ನು ಮೊದಲನೆಯ ವರ್ಗದ ಆಜೀವಸಭ್ಯರೆಂದೂ ೫೦ ರೂ. ಯವರನ್ನು ಎರಡನೆಯ ವರ್ಗದ ಆಜೀವಸಭ್ಯರೆಂದೂ ನಿಬಂಧಿಸಿದೆವಾದರೆ ಪಲವು ವಿಧವಾದ ಅನುಕೂಲತೆಗಳನ್ನು ಕೊಟ್ಟಂತಾಗುವುದು. ಹಾಗೆಯೇ ಸಾಧಾರಣಸಭ್ಯರ ಎರಡು ತರಗತಿಗಳಿಗೂ ಗೊತ್ತುಪಡಿಸಿದ ವಾರ್ಷಿಕ ವರ್ಗಣಿಯು ಅತ್ಯಧಿಕವಾಯಿತೆಂದು ನಾನು ಅಭಿಪ್ರಾಯಪಡುವೆನು. ೧೦೦ ರೂ. ಗೆ ವರ್ಷಕ್ಕೆ ೬ ರಂತೆ ಬಡ್ಡಿಯೆಣಿಸಿ ಮೊದಲನೆಯ ವರ್ಗದವರಿಗೆ ವರ್ಷಕ್ಕೆ ಆರುರೂಪಾಯನ್ನೂ ಎರಡನೆಯ ವರ್ಗದವರಿಗೆ ಮೂರು ರೂಪಾಯನ್ನೂ ಏರ್ಪಡಿಸುವುದು ಯುಕ್ತವೆಂದು ನನಗೆ ತೋರುತ್ತಿದೆ.*

ಈ ತಿದ್ದುಪಡಿಗಳನ್ನು ಮಾಡಿದೆವಾದರೆ ೫೦೦ ರೂಪಾಯಿಯ ಪ್ರೋತ್ಸಾಹಕರಿಂದ ಹುಟ್ಟುವ ೫೦ ರೂ. ಯ ಆಜೀವಸಭಾಸದರ ವರ್ಗಕ್ಕೆ ಇಳಿಯಬೇಕಾಗಿರುವ ಈಗಿನ ಆಭಾಸವು ಕಳೆದು ತೋದಂತಾಗುವುದು.

* ಆಂಧ್ರಸಾಹಿತ್ಯಪರಿಷತ್ತಿನವರು ೫ ಸಾವಿರ ರೂ. ಕೊಡುವವರನ್ನು ಉದ್ಧಾರಕ (Patrons) ರೆಂದೂ, ೧ ಸಾವಿರ ಕೊಡುವವರನ್ನು ಪೋಷಕ (Supporters) ರೆಂದೂ, ೧೦೦ ರೂ. ಕೊಡುವವರನ್ನು ಯಾವಜ್ಜೀವಸಭ್ಯ (Life members) ರೆಂದೂ, ವರ್ಷಕ್ಕೆ ೬ ರೂ. ಕೊಡುವವರನ್ನು ಸಾಧಾರಣಸಭ್ಯರೆಂದೂ ಕರೆಯುವರು. ಇವರೆಲ್ಲರಿಗೂ ಆಂಧ್ರಸಾಹಿತ್ಯ (ಮಾಸ) ಪತ್ರಿಕೆಯು ಉಚಿತವಾಗಿಯೇ ದೊರೆಯುವುದು. ಮಹಾರಾಷ್ಟ್ರಸಾಹಿತ್ಯಪರಿಷತ್ತಿನ ನಿಬಂಧನೆಗಳು ಇನ್ನೂ ಕ್ರಮವಾಗಿ ಏರ್ಪಟ್ಟಂತೆ ತೋರಲಿಲ್ಲ. ಇವರು ೧೦೦ ರೂ ಕೊಡುವವರನ್ನು ಆಜೀವ ಸಭ್ಯರೆಂದೂ ವರ್ಷಕ್ಕೆ ೩ ರೂ. ಕೊಡುವವರನ್ನು ಸಾಧಾರಣಸಭ್ಯರೆಂದೂ ಪ್ರಕೃತದ ಮಟ್ಟಿಗೆ ಗೊತ್ತುಪಡಿಸಿರುವರು. ಇವರಲ್ಲಿ ಮಹಾರಾಷ್ಟ್ರ ಸಾಹಿತ್ಯಪತ್ರಿಕೆಗೆ ವರ್ಷಕ್ಕೊಂದು ರೂಪಾಯಿಕೊಡಬೇಕಾಗಿದೆ.

೫ ನೆಯ ನಿಬಂಧನೆಯಲ್ಲಿ ''ಎರಡನೆಯ ವರ್ಗದ ಸಾಧಾರಣಸಭ್ಯರು ಹೊರತು ಮಿಕ್ಕ ಸಭ್ಯರೆಲ್ಲರಿಗೂ ಪರಿಷತ್ತಿನ ಸಾಮಾನ್ಯಸಭೆಗಳಲ್ಲಿ ತಮ್ಮ ಅಭಿಮತವನ್ನು ತಿಳಿಸುವ ಸ್ವಾತಂತ್ರ್ಯವಿರತಕ್ಕುದು; ಮತ್ತು ಪರಿಷತ್ತಿನಿಂದ ಪ್ರಕಟವಾಗುವ ಗ್ರಂಥಗಳ ಮತ್ತು ಪತ್ರಿಕೆಗಳ ಒಂದೊಂದು ಪ್ರತಿಯು ಅವರಿಗೆ ಉಚಿತವಾಗಿ ದೊರೆಯತಕ್ಕುದು'' ಎಂದು ಹೇಳಿದೆ. ಇದರಲ್ಲಿ ಎರಡನೆಯ ವರ್ಗದವರನ್ನು ವಿನಾಯಿಸಿರುವ ಮಟ್ಟಿಗೆ ಈ ನಿಬಂಧನೆಯನ್ನು ತಿದ್ದಿಕೊಳ್ಳಬೇಕಾಗಿದೆ. ಅವರ ವಾರ್ಷಿಕ ವರ್ಗಣಿಯನ್ನೂ ೩ ರೂ.ಗೆ ಇಳಿಸಿ ಮತಾಧಿಕಾರವನ್ನೂ ಪುಸ್ತಕಾದಿಗಳನ್ನು ಪಡೆಯುವ ಸ್ವಾತಂತ್ರ್ಯವನ್ನೂ ಕೊಡ ಅವರಿಗೆ ಕೊಡಬೇಕೆಂದು ನಾನು ಹೇಳುವುದು ಕೆಲವರಿಗೆ ವಿಪರೀತ ಸೂಚನೆಯಾಗಿ ತೋರಬಹುದು. ಆದರೆ ನಮ್ಮ ದೇಶದಮಟ್ಟಿಗೆ ದಾರಿದ್ರ್ಯವನ್ನೂ ಒಂದು ಅಪರಾಧವಾಗಿ ನಾವು ತಿಳಿಯತಕ್ಕುದಲ್ಲ. ಇದಲ್ಲದೆ ಯಾವ ತರಗತಿಯ ಸಭ್ಯರಲ್ಲಿಯೂ ಬಲು ಸೊತ್ತ ಭಾಗದವರು ಬೆಂಗಳೂರಿನ ಹೊರಗಿರುವವರಾಗಿ ಅವರಿಗೆ ಪರಿಷತ್ತಿನಿಂದ ಅಚ್ಚಾದ ಪುಸ್ತಕಪತ್ರಿಕಾದಿಗಳನ್ನು ಪಡೆಯುವ ಮತ್ತು ಸಂಶೋಧನದ ಕಾಲದಲ್ಲಿ ಮತ (Vote) ಕೊಡುವುದಕ್ಕಿಂತ ಹೆಚ್ಚಿನ ಯಾವ ಸ್ವಯೋಜನವೂ ದೊರೆಯುವಂತಿಲ್ಲವೆಂಬುದನ್ನು ಈ ಸಂದರ್ಭದಲ್ಲಿ ಮರೆಯತಕ್ಕುದಲ್ಲ. ಆದುದರಿಂದ ಪತ್ರಿಕೆಯನ್ನು ಮಟ್ಟಿಗೆ ಸಮಸ್ತ ವರ್ಗದವರಿಗೂ ಉಚಿತವಾಗಿ ಕೊಟ್ಟು ಪುಸ್ತಕಗಳ ವಿಷಯದಲ್ಲಿ ಸಂದರ್ಭಾನುಸಾರ ಪರಿಶೀಲಿಸಲು ಕಾರ್ಯನಿರ್ವಾಹಕರಿಗೆ ಅಧಿಕಾರ ಕೊಡುವುದು ಯುಕ್ತವಾಗಿದೆ. ಇನ್ನು, ಬೆಂಗಳೂರಿನಲ್ಲಿಯೇ ಇರುವ ಪುಸ್ತಕಾಲಯದ ಪ್ರಯೋಜನವನ್ನೂ ಪಡೆಯುವ ಸದಸ್ಯರ ಸಂಗತಿಯಲ್ಲಿ ಬೇಕಾದರೆ ಸ್ಥಳೀಯ ವರ್ಗಣಿಯಾಗಿ ವರ್ಷಕ್ಕೆ ೧ರೂ. ಯಂತೆ ಹೆಚ್ಚಾಗಿ ಪಡೆಯಬಹುದು. ಇತರ ಸದಸ್ಯರು ಕೂಡ ತಮ್ಮ ತಮ್ಮ ಪಟ್ಟಣಗಳಲ್ಲಿ ಉಪಶಾಖೆಗಳನ್ನು ತೆರೆದಿರುವಾಗ ಆಯಾ ಶಾಖೆಯ ಪೋಷಣೆಗಾಗಿ ಇದೇ ಮೇರೆಗೆ ೧ರೂ. ಸ್ಥಳೀಯ ವರ್ಗಣಿಯನ್ನು ಕೊಡತಕ್ಕುದೆಂದು ನಿಬಂಧಿಸಬಹುದು.

ಹಾಗೆಯೇ, ೨ ನೆಯ ವರ್ಗದ ಸಭ್ಯರಿಗೆ ಮತಾಧಿಕಾರವು ಏತಕ್ಕೆ ಇರಬಾರದೆಂಬುದೂ ಆಲೋಚಿಸತಕ್ಕ ಒಂದು ವಿಷಯವಾಗಿದೆ. ಅವರು ಕೊಡುವ ವರ್ಗಣಿಯು ಕಡಿಮೆಯೆಂಬ ಒಂದೇಕಾರಣದಿಂದ ಅವರನ್ನು ಈ ರೀತಿಯಾಗಿ ನಡೆಯಿಸಿಕೊಳ್ಳುವುದು ಎಷ್ಟು ಮಾತ್ರಕ್ಕೂ ಯೋಗ್ಯವಲ್ಲವೆಂದು ನಾನು ಭಾವಿಸುವೆನು. ಸಾಮಾನ್ಯವಾಗಿ ಈ ವರ್ಗಕ್ಕೆ ವಿದ್ಯಾರ್ಥಿಗಳೂ ಅನುಭವ ಕಡಿಮೆಯಾಗಿರುವ ತರುಣರೂ ಇತರ ಸ್ವಲ್ಪ ಆದಾಯವುಳ್ಳ ಜನರೂ ಸೇರುವರಾದುದರಿಂದಲೂ ಈ ವರ್ಗದವರ ಸಂಖ್ಯೆಯೇ

ಹೆಚ್ಚಾಗಿ ತನ್ಮೂಲಕ ಪರಿಷತ್ತು ಏನಾದರೂ ಅನಿಷ್ಟಮಾರ್ಗ (ಉದಾಹರಣೆಯಾಗಿ, ರಾಜಕೀಯ ಅಥವಾ ಸಾಮಾಜಿಕ ಕಲಹ) ದಲ್ಲಿ ಪ್ರವರ್ತಿಸಬಹುದೆಂಬ ಒಂದು ಭಯವು ಕೆಲವರ ಮನಸ್ಸನ್ನು ಬಾಧಿಸುತ್ತಿದ್ದರೂ ಇರಬಹುದು. ಪರಂತು ಕೇವಲ ಸಾಹಿತ್ಯವರ್ಧನಕ್ಕಾಗಿಯೇ ಹುಟ್ಟಿರುವ ಪರಿಷತ್ತಿನಲ್ಲಿ ಬಹುಶಃ ಇಂಥ ಗತಿಯಕ್ಕೆ ಅವ ಕಾಶವೇ ಇರಲಾರದು. ಒಂದು ವೇಳೆಗೆ ಇದೆಯೆಂದು ಯಾರಾದರೂ ವಾದಿಸುವು ದಾದರೆ ಅದನ್ನು ಪರಿಹರಿಸುವುದಕ್ಕಾಗಿ ೧ ನೇ ನಿಬಂಧನೆಗೆ 'ಪರಿಷತ್ತಿಗೆ ರಾಜಕೀಯ ಮತ್ತು ಮತ ವಿಷಯಗಳಲ್ಲಿ ಯಾವ ಸಂಬಂಧವೂ ಇರಲಾಗದು (It shall be non-political and non-sectarian in character)' ಎಂಬ ಪಾತುಗ ಳನ್ನು ಸೇರಿಸಬಹುದು. ಹಾಗೆಯೇ ಕಾರ್ಯನಿರ್ವಾಹಕ ಮಂಡಲದಲ್ಲಿ ಆ ವರ್ಗದ ಪ್ರತಿ ನಿಧಿಗಳ ಸಂಖ್ಯೆಯನ್ನು ಇಷ್ಟೆಂದು ಕ್ಲುಪ್ತಪಡಿಸಿ, ಸಮ್ಮೇಳನದ ಮುಂದೆ ಬರತಕ್ಕ ಯಾ ವತ್ತು ನಿರ್ಣಯಗಳು ಮೊದಲು ಕಾರ್ಯನಿರ್ವಾಹಕ ಮಂಡಲದಲ್ಲಿ ಅಂಗೀಕರಿಸಲ್ಪಡತ ಕ್ಕುದು' ಎಂಬುದಾಗಿಯೂ ನಿಬಂಧಿಸಬಹುದು. ಹೀಗೆ ಮಾಡಿದರೆ ತರುವಾಯ ಯಾವ ಭಯಕ್ಕೂ ಅವಕಾಶವಿರುವುದಿಲ್ಲ. ಆದರೆ ಆ ವರ್ಗದ ಸದಸ್ಯರಿಗೆ ಶಾಶ್ವತಾಂಗವಾಗಿ ಮತಾಧಿಕಾರವಿರಹಿತರನ್ನಾಗಿ ಮಾಡುವುದು ಪಾತ್ರ ಮಪತ್ತರವಾದ ದೋಷವೆಂದು ನನಗೆ ತೋರುತ್ತದೆ.

೭ ನೇ ನಿಬಂಧನೆಯಲ್ಲಿ ೨ ನೇ ವರ್ಗದ ಸದಸ್ಯರಿಗೆ ಪರಿಷತ್ಪತ್ರಿಕೆಯು ಉಚಿತ ವಾಗಿ ದೊರೆಯತಕ್ಕುದೆಂದು ಹೇಳಿರುವುದು. ೫೫ ನೇ ನಿಬಂಧನೆಯಲ್ಲಿ ೨ ನೇ ವರ್ಗದ ವರ ವಿನಾ ಉಳಿದವರಿಗೆ ಮಾತ್ರ ದೊರೆಯತಕ್ಕುದೆಂದು ಹೇಳಿದೆ; ಹೀಗೆ ಇನ್ನೆರಡೂ ಒಂದಕ್ಕೊಂದು ವಿರುದ್ಧಗಳಾಗಿವೆ. ಇದನ್ನು ಸರಿಪಡಿಸಿಕೊಳ್ಳುವುದು ಅಗತ್ಯವು. ಇನ್ನು ಪರಿಷತ್ಪತ್ರಿಕೆಯ ವಿಷಯವನ್ನು ತಿದ್ದಿಕೊಂಡ ಬಳಿಕ ೫೫ ನೇ ನಿಬಂಧನೆಯಲ್ಲಿ ಹೇಳಿದುದೇ ೭ ನೆಯದರಲ್ಲಿಯೂ ಬರುವುದರಿಂದ ಪುನರುಕ್ತಿ ದೋಷವನ್ನು ಹೋಗಗೊಳಿಸುವುದಕ್ಕಾಗಿ ಇವುಗಳೊಳಗೆ ಒಂದನ್ನು ಬಿಟ್ಟುಬಿಡಬೇಕಾಗುವುದು.

೭ ನೇ, ೮ ನೇ ಮತ್ತು ೯ ನೆಯ ನಿಬಂಧನೆಗಳಲ್ಲಿ ಕಾರ್ಯನಿರ್ವಾಹಕಮಂಡ ಲಿಯವರು ಪರಿಷತ್ತಿನ ಆಡಳಿತೆ ನಡೆಯಿಸತಕ್ಕುದೆಂದೂ ಆ ಮಂಡಲದಲ್ಲಿ ಅಧ್ಯಕ್ಷ, ಉಪಾಧ್ಯಕ್ಷ, ಕಾರ್ಯದರ್ಶಿ ಮತ್ತು ಕೋಶಾಧ್ಯಕ್ಷರ ವಿನಾ ೩೦ ಮಂದಿ (ಒಟ್ಟು ೩೪) ಸದಸ್ಯರಿರ ಬೇಕೆಂದೂ ಅವರನ್ನು ಆರಿಸುವ ಕ್ರಮವು ಯಾವುದೆಂದೂ ಹೇಳಿದೆ. ಇದರಲ್ಲಿ ನಾನು ಸೂಚಿಸತಕ್ಕ ತಿದ್ದುಪಡೆಗಳು ಹಲವಿವೆ:—

(೧) ಒನೇ ಮತ್ತು ಲ ನೇ ನಿಬಂಧನೆಗಳನ್ನು ಒಂದೇ ನಿಬಂಧನೆಯಾಗಿ ಏರ್ಪಡಿಸಬಹುದು.

(೨) ಕಾರ್ಯನಿರ್ವಾಹಕಮಂಡಲಿಗೆ Executive Committee ಎಂಬ ಇಂಗ್ಲೀಷ್ ಹೆಸರಿನ ಬದಲಾಗಿ ಆಂಧ್ರಪರಿಷತ್ತಿನಂತೆಯೇ Senatus ಎಂಬ ಹೆಸರು ಕೊಟ್ಟರೆ ಕಿವಿಗೆ ಗಂಭೀರವಾಗಿಯು- ಪರಿಷತ್ತೆಂಬ ಮಾತಿಗೆ ಅನುಗುಣವಾಗಿಯೂ ಇರುವುದು.

(೩) ಅಧ್ಯಕ್ಷ (President) ರನ್ನೇ ಕಾರ್ಯನಿರ್ವಾಹಕಮಂಡಲಿಯ ಮುಖ್ಯರನ್ನಾಗಿ ಮಾಡುವುದಕ್ಕೆ ಬದಲಾಗಿ ಆ ಉದ್ಯೋಗದ ಬಹುಮಾನವು ಇತರ ಭಾಗಗಳ ದೊಡ್ಡ ಮನುಷ್ಯರಿಗೂ ದೊರೆಯಲು ಅವಕಾಶವಾಗುವಂತೆ, ಕಾರ್ಯನಿರ್ವಾಹಕಮಂಡಲಿಯ ಅಗ್ರಾಸನಾಧಿಪತಿಯಾಗಿ (chairman of the senatus) ಬೇರೊಬ್ಬರನ್ನು ನಿಯಮಿಸಿ, ಅಧ್ಯಕ್ಷರನ್ನು ಮುಂದೆ ಹೇಳುವ ಮೇರೆಗೆ ಅಸಾಧಾರಣಸಭ್ಯರನ್ನಾಗಿ ಇಟ್ಟುಕೊಳ್ಳಬಹುದು. ಇಂಥ ಅಗ್ರಾಸನಾಧಿಪತಿಗಳು ಬೆಂಗಳೂರಿನವರೇ ಆಗಿರಬೇಕೆಂಬುದನ್ನು ಪ್ರತ್ಯೇಕವಾಗಿ ನಾನು ಹೇಳಬೇಕಾದುದಿಲ್ಲ. ಆಯಾ ಸಮ್ಮೇಳನದ ಅಧ್ಯಕ್ಷರೇ ಮುಂದಿನ ಸಮ್ಮೇಳನದ ಪರ್ಯಂತ ಪರಿಷತ್ತಿನ ಅಧ್ಯಕ್ಷರಾಗಿದ್ದರೆ ಚೆನ್ನಾಗಿರುವುದು.

(೪) ಕಾ.ನಿ. ಮಂಡಲಿಯ ಸದಸ್ಯರ ಒಟ್ಟು ಸಂಖ್ಯೆಯನ್ನು ೫೦ ಕ್ಕೆ ಏರಿಸಬಹುದು. ಮತ್ತು ಇವರ ವಿನಾ ಮಹಾಪೋಷಕರೂ, ಪೋಷಕರೂ ಮೇಲೆ ಸೂಚಿಸಿದ (ನಡೆಯುವ ವರ್ಷದ ಮತ್ತು ಹಿಂದಿನ ವರ್ಷಗಳ) ಅಧ್ಯಕ್ಷರೂ ಆದರ ಯಾವಜ್ಜೀವ ಅಸಾಧಾರಣ ಸಭಾಸದ (extraordinary members) ರಾಗಿರಬೇಕೆಂದು ಏರ್ಪಡಿಸಬಹುದು.

*(೫) ಉಪಾಧ್ಯಕ್ಷರ ಸಂಖ್ಯೆಯ ಪರಮಾವಧಿಯು ೫ ಯೆಂದೂ, ಕಾರ್ಯದರ್ಶಿಗಳಿಗೂ ಕೋಶಾಧ್ಯಕ್ಷರಿಗೂ ಒಬ್ಬೊಬ್ಬರು ಜಂಟಿಯಾಗಿ (joint) ಆಥವಾ ಸಹಾಯಕ (Assistant) ರಾಗಿ ಇರಬಹುದೆಂದೂ, ಅಂತು ಉದ್ಯೋಗಪ್ರಯುಕ್ತ (Ex-officio) ಸದಸ್ಯರ ಸಂಖ್ಯೆಯ ಪರಮಾವಧಿಯು ೧೦ರವರೆಗೆ ಇರಬಹುದೆಂದೂ ಏರ್ಪಡಿಸಬಹುದು. ಬೇರೆಬೇರೆ ಪ್ರಾಂತ್ಯಗಳಲ್ಲಿಯ ದೊಡ್ಡ ಮನುಷ್ಯರಿಗೆ ಪರಿಷತ್ತಿನ ಬೇರೆ ಯಾವ ಅಧಿಕಾರವೂ ಲಭಿಸುವಂತಿಲ್ಲವಾದುದರಿಂದ ಅವರನ್ನು ಗೌರವಿಸುವುದಕ್ಕಾಗಿ ಉಪಾಧ್ಯಕ್ಷರ ಸಂಖ್ಯೆಯನ್ನು ಹೆಚ್ಚಿಸುವುದು ಅಗತ್ಯವಾಗಿದೆ. ಆದರೆ ಯಾವುದೊಂದು ಪ್ರಾಂತ್ಯದಿಂದ ಕನಿಷ್ಠಪಕ್ಷ ೨೫ ಮಂದಿ ಸಭಾಸದರಾದರೂ ಇಲ್ಲದೆ ಅವರಿಗೆ ಆ ಪ್ರಾಂತ್ಯದ ಬಗ್ಗೆ ಉಪಾಧ್ಯಕ್ಷರನ್ನಾರಿಸಲು ಬಿಡದಿರಬಹುದು.

---

* ತೆಲುಗು ಸಾ. ಪರಿಷತ್ತಿಗೆ ಕಾರ್ಯದರ್ಶಿಗಳು ಮೂವರೂ ಕೋಶಾಧ್ಯಕ್ಷರಿಬ್ಬರೂ ಇರುವರು ಮರಾಟೀ ಸಾ. ಪರಿಷತ್ತಿಗೆ ಉಪಾಧ್ಯಕ್ಷರೈವರೂ ಕಾರ್ಯದರ್ಶಿಗಳಿಬ್ಬರೂ ಕೋಶಾಧ್ಯಕ್ಷರೊಬ್ಬರೂ ಇರುವರು.

(೬) ನಲವತ್ತು ಸ್ಥಾನಗಳನ್ನು ಸಭಾಸದರು ಆಯ್ದುಕೊಳ್ಳುವುದಕ್ಕಾಗಿ ಇಟ್ಟುಕೊಳ್ಳಬಹುದು.

ಈ ವಿಷಯವನ್ನು ಒಂದಿಷ್ಟು ಸೂಕ್ಷ್ಮವಾಗಿ ಪರೀಕ್ಷಿಸಬೇಕಾಗಿದೆ. ಇಂಥ ಪ್ರಾಂತ್ಯದಿಂದ ಇಷ್ಟೇ ಪ್ರತಿನಿಧಿಗಳು ಕಾರ್ಯನಿರ್ವಾಹಕಮಂಡಲಿಯಲ್ಲಿರಬೇಕೆಂದು ಕಳೆದ ಸಮ್ಮೇಳನದಲ್ಲಿ ಗೊತ್ತು ಪಡಿಸಿದಾಗ ಯಾವ ಪ್ರಾಂತ್ಯದಿಂದಲೂ ಸಭಾಸದರಿರಲಿಲ್ಲವಷ್ಟೇ ಅಲ್ಲದೆ, ಎಲ್ಲಿಂದ ಎಷ್ಟುಮಂದಿ ಪರಿಷತ್ತಿಗೆ ಸೇರಬಹುದೆಂಬುದೂ ತಿಳಿದಿರಲಿಲ್ಲ. ಇಂಥ ಸ್ಥಿತಿಯಲ್ಲಿ ಆಗ ಮಾಡಿದ ಕ್ರಮವೇ ಚೆನ್ನಾಗಿತ್ತೆನ್ನಬಹುದು. ಆದರೆ ಈಗ ಆಯಾ ಪ್ರಾಂತ್ಯದ ಸಭಿಕರಿಷ್ಟೇ ಜನರುವರೆಂದು ತಿಳಿದಿರುವುದರಿಂದ ಬರೀ (Province) ಸೀಮಾನುಸಾರವಾಗಿ ಪ್ರತಿನಿಧಿಗಳನ್ನು ಆಯ್ದುಕೊಳ್ಳುವುದಕ್ಕಿಂತ ಬೇರೊಂದು ರೀತಿಯಾಗಿ ಆರಿಸುವುದು ಯುಕ್ತವೆಂದು ನನಗೆ ತೋರುತ್ತಿದೆ. ಆದುದರಿಂದ ಈ ಕೆಳಗಿನಂತೆ ನಿಬಂಧಿಸಿದರೆ ಅನುಕೂಲವಾಗಬಹುದು:—

(i) ೨೦ ಮಂದಿಯನ್ನು ಆಯಾ ಪ್ರಾಂತ್ಯದ ಸದಸ್ಯರ ಪ್ರಮಾಣಾನುಸಾರವಾಗಿ ಆರಿಸುವುದು. ಉದಾಹರಣೆಯಾಗಿ, ಎಲ್ಲಾ ವರ್ಗಗಳು ಸೇರಿ ಒಟ್ಟು ೪೦೦ ಸಭಿಕರಿದ್ದು ಅವರಲ್ಲಿ ೨೦೦ ಮಂದಿ ಮೈಸೂರಿನವರೂ ೧೦೦ ಬೊಂಬಾಯಿಯವರೂ, ೭೫ ಮದ್ರಾಸಿನವರೂ, ೨೫ ಕೊಡಗಿನವರೂ ಇದ್ದರೆ ಕ್ರಮವಾಗಿ ಮೈಸೂರಿಗೆ ೧೦, ಬೊಂಬಾಯಿಗೆ ೫, ಮದ್ರಾಸಿಗೆ ೪, ಕೊಡಗಿಗೆ ಒಂದರಂತೆ ಪ್ರತಿನಿಧಿಗಳನ್ನು ಕೊಡಬೇಕಾಗುವುದು. ಈ ಪ್ರಮಾಣವನ್ನು ಆಯಾ ಚುನಾವಣೆಯ ಕಾಲದಲ್ಲಿರುವ ಸಭಾಸದರ ಸಂಖ್ಯೆಗೆ ಸರಿಪಡಿಸಿಕೊಳ್ಳಬೇಕು. ಬೊಂಬಾಯಿಯ ದೇಶೀಯ ಸಂಸ್ಥಾನಗಳನ್ನು ಪ್ರತ್ಯೇಕವಾಗಿ ಗಣಿಸಬೇಕಾದ ಆವಶ್ಯಕತೆ ತೋರಲಿಲ್ಲ.

(ii) ಉಳಿದ ೨೦ ಮಂದಿ ಪ್ರತಿನಿಧಿಗಳನ್ನು ದೇಶಭೇದವಿಲ್ಲದೆ ಆಯಾ ವರ್ಗಗಳಿಗೆ ಹಂಚಿಹಾಕಬಹುದು. ಉದಾಹರಣೆಯಾಗಿ, ನಾನು ಹಿಂದೆಕೊಟ್ಟ ವರ್ಗೀಕರಣವು ಅಂಗೀಕರಿಸಲ್ಪಟ್ಟ ಪಕ್ಷದಲ್ಲಿ, ಉಪಪೋಷಕ, ಆಶ್ರಯದಾತ, ಪ್ರೋತ್ಸಾಹಕ ರೆಂಬ ಈ ಮೂರು ವರ್ಗಗಳಿಂದ ಒಬ್ಬರು ಅಥವಾ ಇಬ್ಬರು, ಒಂದನೇ ವರ್ಗದ ಆಜೀವಸಭಾಸದರಿಂದ ೫ ಜನರು, ಎರಡನೇ ವರ್ಗದ ಆಜೀವ ಸಭ್ಯರಿಂದ ೪ ಜನರು, ೧ ನೇ ವರ್ಗದ ಸಾಮಾನ್ಯ ಸಭಾಸದರಿಂದ ಮೂವರು, ೨ ನೇ ವರ್ಗದ ಸಾಮಾನ್ಯ ಸಭಾಸದರಿಂದ ಇಬ್ಬರು, ಮತ್ತು ಇದುವರೆಗೆ ಆಯ್ದುಕೊಳ್ಳಲಾದ ಅಧಿಕಾರಿಗಳೂ ಕಾರ್ಯನಿರ್ವಾಹಕ ಸಭಿಕರೂ ಒಟ್ಟಾಗಿ ಆಯ್ದುಕೊಳ್ಳುವ ೪ ಅಥವಾ ೫ ಜನರು—ಹೀಗೆ ೨೦ ಜನರನ್ನು ಆರಿಸಿಕೊಳ್ಳಬಹುದು. ಈ ಕೊನೆಗೆ ಹೇಳಿದ ೪ ಅಥವಾ ೫ ಮಂದಿಯನ್ನು ಕಾರ್ಯನಿರ್ವಾಹಕರೇ ಆಯ್ದುಕೊಳ್ಳುವ ಕ್ರಮದ ಮೂಲವಾಗಿ,

ಸಾಮಾನ್ಯವಾಗಿ ಜುನಾವಣೆಗಳಲ್ಲಿ ದುರಾಗ್ರಹವೇ ಮುಂತಾದುವುಗಳ ದೆಸೆಯಿಂದ ಉಂಟಾಗಬಹುದಾದ ಯಾವ್ಯವಾದರೂ ಅಕ್ರಮಗಳನ್ನು ಪರಿಹರಿಸಲು ಅವಕಾಶ ದೊರೆ ತಂತಾಗುವುದು. ಜುನಾವಣೆಯ ಮಟ್ಟಿಗೆ ಗೌರವಾರ್ಥ (Honorary) ಸಭಾಸದ ರನ್ನು ಮೇಲಿನ ಯಾವುದಾದರೊಂದು ವರ್ಗದವರೆಂದು ತಿಳಿಯತಕ್ಕದ್ದು.

(೭) ಕಾರ್ಯನಿರ್ವಾಹಕ ಮಂಡಲಿಯ ಸದಸ್ಯರು ೩ ವರ್ಷಗಳ ಕಾಲ ತಮ್ಮ ತಮ್ಮ ಸ್ಥಾನಗಳನ್ನು ವಹಿಸಿರಬೇಕೆಂದು ಸ್ಪಷ್ಟಪಡಿಸಬಹುದು. ಇದರ ಮಧ್ಯೆ ತೆರ ವಾಗುವ (Vacancies) ಸ್ಥಳಗಳನ್ನು ಕಾ. ನಿ. ಮಂಡಲಿಯವರೇ ತುಂಬಿಸಿ ಮುಂದಿನ ವಾರ್ಷಿಕ ಸಭೆಯ ಪರ್ಯಂತ ಊರ್ಜಿತವಿಡಬೇಕೆಂದು ಉಪನಿಬಂಧನೆಗಳಲ್ಲಿ ಹೇಳಿರುವುದನ್ನು ತೆಗೆದು ನಿಬಂಧನೆಗಳಲ್ಲಿಯೇ ಸಮಾವೇಶಗೊಳಿಸಬಹುದು.

೧೦ ನೇ ನಿಬಂಧನೆ.—ಇದರಲ್ಲಿ ಅಯಾ ಕಾಲದಲ್ಲಿ ನೆರೆದ ಕಾ. ನಿ. ಸಭಿಕರ ಬಹುಮತದಂತೆ ವರ್ತಿಸತಕ್ಕುದೆಂದು ಮಾತ್ರ ಹೇಳಿದೆ. ಆದರೆ ಮುಖ್ಯವಾದ ಕೆಲವು ವಿಷಯಗಳಲ್ಲಿ ಯಾವತ್ತು ಕಾರ್ಯನಿರ್ವಾಹಕರ ಮತಗಳನ್ನು ಪಡೆಯುವಂತೆ,—ಉದಾ ಹರಣೆಯಾಗಿ, *(a)* ತೆರವಾದ ಕಾ. ಸದಸ್ಯರ ಸ್ಥಳಗಳನ್ನು ತಾತ್ಕಾಲಿಕವಾಗಿ ತುಂಬಿ ಕೊಳ್ಳುವ ಸಂದರ್ಭದಲ್ಲಿ, *(b)* ಯಾವುದೊಂದು ನಿಬಂಧನೆಯ ಅರ್ಥದ ವಿಷಯದಲ್ಲಿ ಮತಭೇದವುಂಟಾದಾಗ, *(c)* ವಾರ್ಷಿಕ ಮಹಾಸಭೆಗಾಗಿ ಯಾರಾದರೂ ಸೂಚನೆಗ ಳನ್ನು ಕಳುಹಿಸಿರುತ್ತ ಅವನ್ನು ಆ ಮಹಾಸಭೆಗೆ ತರಬೇಕೇ, ಬೇಡವೇ ? ಎಂಬುದನ್ನು ನಿರ್ಣಯಿಸುವಾಗ, ಕಾರ್ಯನಿರ್ವಾಹಕಸಭ್ಯರೆಲ್ಲರ ಅಭಿಪ್ರಾಯವನ್ನು ಪಡೆಯುವುದು ಉತ್ತಮವೆಂದು ನನಗೆ ತೋರುತ್ತಿದೆ. ಮೊದಲಲ್ಲಿ, ಕಾರ್ಯನಿರ್ವಾಹಕರ ಬಳಿಗೆ ಕಳುಹಿ ಸಿದ ಪ್ರತಿಸೂಚನೆಯನ್ನೂ ಅವರು ಅಗತ್ಯವಾಗಿ ಮಹಾಸಭೆಗೆ ತರಬೇಕೆ ? ಅಥವಾ ತಮ್ಮ ವಿವೇಕ ಬುದ್ಧಿಯನ್ನು ಪಯೋಗಿಸಿ ಹಾಗೆ ತಾರದೆ ಬಹುಮತದಿಂದ ತಮ್ಮ ಸಭೆಯಲ್ಲಿಯೆ ತಳ್ಳಿಬಿಡಬಹುದೇ ? ಎಂಬ ವಿಷಯವನ್ನು ಈ ಸಂದರ್ಭದಲ್ಲಿ ಸ್ಪಷ್ಟಪಡಿ ಸುವುದು ಅಗತ್ಯವಾಗಿದೆ.

೧೧ ನೆಯ ನಿಬಂಧನೆಯನ್ನು ಸಂಪೂರ್ಣವಾಗಿ ತೆಗೆದುಬಿಡತಕ್ಕದ್ದು.

೧೨ ನೆಯ ನಿಬಂಧನೆಯನ್ನು ೭, ೮ ನೇ ನಿಬಂಧನೆಗಳನ್ನು ಸೇರಿಸಿ ಉಂಟಾ ಗುವ ಹೊಸ ನಿಬಂಧನೆಯಲ್ಲಿ ಸಮಾವೇಶಗೊಳಿಸಬಹುದು. ಮತ್ತು ಸಾಮಾನ್ಯತಃ ಕನಿಷ್ಠಪಕ್ಷ ಮೂರು ತಿಂಗಳಿಗೊಂದುಬಾರಿ ಸೇರಬೇಕಾಗಿದ್ದರೂ ೧೦ ಕ್ಕೆ ಕಡಿಮೆ ಯಿಲ್ಲದಷ್ಟು ಕಾರ್ಯನಿರ್ವಾಹಕ ಸಭಿಕರು ಅಪೇಕ್ಷಿಸಲಾಗಿ, ಆ ಅಪೇಕ್ಷೆಯು ತಲು ಪಿದ ೧೫ ದಿನದೊಳಗಾಗಿ ತಪ್ಪದೆ ಸಭೆ ಸೇರತಕ್ಕುದೆಂದು ಕೂಡ ಅದಕ್ಕೆ ಹೆಚ್ಚಾಗಿ ಸೇರಿ ಸಬಹುದು.

೧೩ ನೇ ನಿಬಂಧನೆ:—ಕಾ. ನಿ. ಮಂಡಲಿಯ ಒಟ್ಟು ಸಂಖ್ಯೆ ೫೦ ಎಂದು ಗೊತ್ತಾದಪಕ್ಷದಲ್ಲಿ ಕನಿಷ್ಠಸಂಖ್ಯೆಯನ್ನು ಹತ್ತಕ್ಕೆ ಏರಿಸಬಹುದು. ಮತ್ತು ಇವರಲ್ಲಿ ೬ ಜನರಾದರೂ ಅಧಿಕಾರಿಗಳಲ್ಲದವರಾಗಿರಬೇಕೆಂದು ಏರ್ಪಡಿಸಬಹುದು. ಅಸಾಧಾರಣ (Extraordinary) ಸಭ್ಯರನ್ನು ಕನಿಷ್ಠಸಂಖ್ಯೆಯಲ್ಲಿ ಗಣಿಸದಿರಬಹುದು.

೧೫ ನೇ ನಿಬಂಧನೆಗೂ ೧ ನೇ ಉಪನಿಬಂಧನೆಗೂ ಏನು ಭೇದವೆಂದು ಲಕ್ಷ್ಯದಲ್ಲಿ ಬರುವುದಿಲ್ಲ. ಭೇದವಿಲ್ಲವೆಂದಾದರೆ ಉಪನಿಬಂಧನೆಯನ್ನು ನಿಬಂಧನೆಯಲ್ಲಿಯೇ ಸೇರಿಸಿ ಬಿಡಬಹುದು.

೧೭ ನೇ ನಿಬಂಧನೆಯಲ್ಲಿ 'No applicant for Honorary membership' ಎಂದರೆ "ಸನ್ಮಾನಿತ ಸದಸ್ಯತ್ವಕ್ಕೆ ಮನುವೆ ಮಾಡುವ ಯಾವನಾದರೂ," ಎಂಬ ಮಾತುಗಳು ಇಂಗ್ಲಿಷ್‌ಪ್ರತಿಯಲ್ಲಿವೆ. ಈ ಬಹುಮಾನದ ಪದವಿಯನ್ನು ಮನುವೆಮಾಡಿ ಪಡೆಯತಕ್ಕದ್ದೇ ಅಲ್ಲವೆಂದು ನಾನು ಗ್ರಹಿಸುವೆನು. ಕನ್ನಡಪತ್ರಿಕೆಯಲ್ಲಿ ಆ ಮಾತುಗಳಿಲ್ಲವಾದುದುಂದ ಇಂಗ್ಲಿಷ್‌ಪ್ರತಿಯನ್ನು ತಿದ್ದಿಕೊಳ್ಳಬೇಕಾಗಿದೆ. ಇದಲ್ಲದೆ ಇಂಥ ಸೂಚನೆಯು ಮೊತ್ತಮೊದಲು ಕಾರ್ಯನಿರ್ವಾಹಕರ ಬಳಿಗೆ ಬಂದು ಅವರ ಒಪ್ಪಿಗೆಯಿಂದ ಮಹಾಸಭೆಯಲ್ಲಿ ಬಂದರೆ ಚೆನ್ನಾಗಿರುವುದೆಂದು ನನಗೆ ತೋರುತ್ತಿದೆ.

೨೨ ನೆಯ ನಿಬಂಧನೆಯಲ್ಲಿ 'ಅಧ್ಯಕ್ಷರ' ಎಂಬ ಪದದ ಬದಲಾಗಿ 'ಆಗ್ರಾಸನಾಧಿಪತಿಗಳ' ಎಂಬ ಮಾತನ್ನು ಹಾಕಬಹುದು. ನಾನು ಈ ಹಿಂದೆ ಮಾಡಿದ ಸೂಚನೆಯನ್ನು ಅಂಗೀಕರಿಸಿದ ಪಕ್ಷದಲ್ಲಿ ಇದು ಅಗತ್ಯವಾಗುವುದು.

೨೭ ನೇ ನಿಬಂಧನೆ:—(ಕನ್ನಡಪ್ರತಿಯಲ್ಲಿ ಇದನ್ನು ೨೮ ನೆಯದಾಗಿ ಕಾಣಿಸಿದೆ ಮತ್ತು ನಿಜವಾದ ೨೮ ನೇ ನಿಬಂಧನೆಯು ಕೈತಪ್ಪಿನಿಂದ ಬಿಟ್ಟುಹೋಗಿದೆ). ಸಭ್ಯರುಗಳು ದೇಶದ ದೂರದೂರವಾದ ಭಾಗಗಳಲ್ಲಿ ವಸಿಸತಕ್ಕವರಾದುದುಂದ ಪರಿಷತ್ತಿನ ಸಾಮಾನ್ಯ (General) ಸಭೆಗಳ ನೋಟೀಸುಗಳನ್ನು ಒಟ್ಟೀ ೧ ತಿಂಗಳ ಮುಂಚೆ ಕೊಟ್ಟರೆ ಸಾಕಾಗಲಾರದೆಂದು ತೋರುತ್ತದೆ. ಮುಖ್ಯವಾಗಿ, ನಿಬಂಧನೆಗಳಲ್ಲಿ ಆಗಬೇಕಾದ ಬದಲಾವಣೆಗಳನ್ನು ಆ ನೋಟೀಸು ತಲುಪಿದಂದಿನಿಂದ ೧ ವಾರದೊಳಗಾಗಿ ಕಳುಹಿಸಬೇಕೆಂದು ೨೮ ನೇ ನಿಬಂಧನೆಯಲ್ಲಿ ಹೇಳಿರುವ ಅವಕಾಶವು, ವಿರಾಮವಾಗಿ ಕುಳಿತು ಆಲೋಚಿಸಿ ಬರೆಯುವುದಕ್ಕೆ ಕಡಿಮೆಯೆಂದು ಹೇಳಬೇಕಾಗಿದೆ. ಸಾಮಾನ್ಯ ಸಭೆಯ ನೋಟೀಸನ್ನು ೬ ವಾರಗಳಿಗೆ ಮುಂಚೆ ಕೊಟ್ಟು ಸೂಚನೆಗಳನ್ನು ೪ ವಾರಗಳಿಗೆ ಮುಂಚೆ ಬರಮಾಡಿಕೊಂಡು ಅವನ್ನು ಪುನಃ ೩ ವಾರಗಳಿಗೆ ಮುಂಚೆ ಸದಸ್ಯ

ರಿಗೆ ಕಳುಹಿಸಿ ಬೇರೆ ಏನಾದರೂ ತಿದ್ದುಪಡಿಯ (Amendments) ಸೂಚನೆಗಳಿದ್ದರೆ ಅವನ್ನು ೨ ವಾರಗಳಿಗೆ ಮುಂಚೆ ಬರಮಾಡಿಕೊಂಡು, ಕೊನೆಯ ಕಾರ್ಯಕ್ರಮ ಪತ್ರಿಕೆ (Agenda paper) ಯನ್ನು ಒಂದು ವಾರಕ್ಕೆ ಮುಂಚಿತವಾಗಿ ಪ್ರಕಟಪಡಿಸಿದರೆ ಸರ್ವರಿಗೂ ತುಂಬ ಅನುಕೂಲವಾಗಬಹುದೆಂದು ನೆನಸುವೆನು.

೩೧ ನೇ ನಿರ್ಣಯದಿಂದ 'ತಮ್ಮ ಅಭಿಮತವನ್ನು ಸೂಚಿಸುವ ಹಕ್ಕುಳ್ಳ' (Entitled to vote for it) ಎಂಬ ಶಬ್ದಗಳನ್ನು ತೆಗೆದುಹಾಕತಕ್ಕದ್ದು. ಇದು ೫೫ ನೇ ನಿಬಂಧನೆಯಲ್ಲಿ ಮಾಡುವ ತಿದ್ದುಪಡಿಗೆ ಅನುಗುಣವಾಗಿ ಆಗತಕ್ಕುದಾಗಿದೆ.

ಹೀಗೆ ಪ್ರಕೃತದ ನಿಬಂಧನೆಗಳಲ್ಲಿ ಆಗಬೇಕೆಂದು ನನಗೆ ತೋರಿದ ಕೆಲಕೆಲವು ತಿದ್ದುಪಡಿಗಳನ್ನು ಸೂಚಿಸಿದಂತಾಯಿತು. ಈಗಳಿನ್ನು ಅವುಗಳಲ್ಲಿ ಕಂಡು ಬಾರದಿರುವುವುಗಳಾಗಿಯೂ ಸೂತನವಾಗಿ ಏರ್ಪಡಿಸಲು ತಕ್ಕುವಾಗಿಯೂ ಇರುವ ಕೆಲವು ಸೂಚನೆಗಳನ್ನು ಇದರಡಿ ಕೊಡುವೆನು :—

(a). ಮೈಸೂರು ಸರ್ಕಾರದ ಸಂಪದಭ್ಯುದಯ ಸಮಾಜದವರ ಪ್ರೋತ್ಸಾಹವೇ ನಮ್ಮ ಪರಿಷತ್ತಿನ ಜನನಕ್ಕೆ ಹೇತುವಾಗಿರುವುದಷ್ಟೆ! ಆದುದರಿಂದ ಈ ಸಂಗತಿಯು ನಿರಂತರವಾಗಿ ನಮ್ಮ ನೆನಪಿನಲ್ಲಿ ನಿಲ್ಲುವಂತೆ ಆ ಸರ್ಕಾರವನ್ನೇ ಆಗಲೀ ಸಮಾಜವನ್ನೇ ಆಗಲಿ ನಮ್ಮ ಪರಿಷತ್ತಿನ ಪ್ರತಿಷ್ಠಾಪಕರೆಂದು ಕಾಣಿಸುವುದು ನಮ್ಮ ಕರ್ತವ್ಯವಾಗಿದೆಯೆಂದು ನಾನು ಭಾವಿಸುವೆನು. ಆಂಧ್ರಸಾಹಿತ್ಯಪರಿಷತ್ತಿನವರು, ಉದಾರವಾಗಿ ಧನಸಹಾಯಮಾಡಿ ಆ ಪರಿಷತ್ತಿನ ಸ್ಥಾಪನೆಗೆ ಕಾರಣಭೂತರಾದ ಪಿಠಾವುರದ ಮತ್ತು ವೇಂಕಟಗಿರಿಯ ರಾಜರುಗಳನ್ನು ತಮ್ಮ ಪ್ರತಿಷ್ಠಾಪಕರೆಂದು ಏರ್ಪಡಿಸಿರುವರು.

(b). ಒಂದು ದೇಶದ ಸಾಹಿತ್ಯ ಅಥವಾ ವೈಜ್ಞಾನಿಕ ಪರಿಷತ್ತುಗಳ ಸದಸ್ಯರುಗಳು, ಬೇರೆಬೇರೆ ದೇಶಗಳಲ್ಲಿ ಅದೇ ವಿಷಯವಾದ ಪರಿಷತ್ತುಗಳ ಸದಸ್ಯರಾಗಿದ್ದು ಗಣ್ಯರಾಗಿರುವ ಕೆಲಕೆಲವು ದೊಡ್ಡ ಮನುಷ್ಯರನ್ನು 'Corresponding members ಎಂಬದಾಗಿ ಗೌರವಿಸುವ ಪದ್ಧತಿಯು ಪಾಶ್ಚಿಮಾತ್ಯರಾಜ್ಯಗಳಲ್ಲಿರುವುದು. ಇದರ ಮೂಲಕವಾಗಿ ಒಂದು ದೇಶದ ಪರಿಷತ್ತಿನವರು ಮಾಡಿದ ಅಭಿವೃದ್ಧಿಯು ಉಳಿದ ದೇಶದವರಿಗೆ ಅಂಥಾ ಸದಸ್ಯರ ಮೂಲವಾಗಿ ತಿಳಿಯುವುದಕ್ಕೆ ಅವಕಾಶವಾಗುವುದು. ವಿಶೇಷವಾಗಿ, Corresponding members ಆಗಿರುವವರಿಗೆ ಆ ಗೌರವವು ಯಾವ ದೇಶದವರಿಂದ ಪ್ರಾಪ್ತವಾಗಿರುವುದೋ ಆ ದೇಶದ ಭಾಷೆ ತಿಳಿಯದೆ ಇರುವು

ದಿಲ್ಲ. ಇಂಥ ಏರ್ಪಾಡು ಅತ್ಯಾವಶ್ಯಕವೆಂದು ಪ್ರತ್ಯೇಕವಾಗಿ ಹೇಳಬೇಕಾದುದಿಲ್ಲ. ಆದುದರಿಂದ ಕನ್ನಡವನ್ನು ಬಲ್ಲವರಾಗಿಯೂ ತಮ್ಮತಮ್ಮ ಭಾಷೆಗಳಲ್ಲಿ ಪ್ರವೀಣರಾಗಿಯೂ ಇರುವ ಕೆಲಕೆಲವು ದೊಡ್ಡಮನುಷ್ಯರನ್ನು ವರ್ಗಣಿಯಿಲ್ಲದೆ ನಮ್ಮ ಪರಿಷತ್ತಿನ Corresponding ಮೆಂಬರಾಗಿ ನಿಯಮಿಸಿದರೆ ತಸ್ಮೂಲಕ ನಮಗೆ ತುಂಬ ಸಹಾಯವಾಗುವಂತಿದೆ. ಇಂಥವರನ್ನು ನಾವು ವಿಶೇಷ (Special) ಸಭ್ಯರೆಂಬ ಪ್ರತ್ಯೇಕವರ್ಗವಾಗಿ ಇಟ್ಟುಕೊಳ್ಳಬಹುದು. ಪ್ರಕೃತದಲ್ಲಿ ತಮಿಳು, ತೆಲುಗು, ಮಲೆಯಾಳ ಮರಾಟೀ, ಭಾಷೆಗಳ ಮಟ್ಟಿಗಾದರೂ ಇಂಥ ವಿದ್ವಾಂಸರು ನಮಗೆ ಸಿಕ್ಕುವುದಕ್ಕೆ ಆತಂಕವಾಗಲಾರದೆಂದು ತೋರುತ್ತದೆ. ಕಳೆದ ನವೆಂಬರು ೨೦ ನೇ ತಾರೀಖಿನ ದಿನ ನಡೆದ ಕಾರ್ಯನಿರ್ವಾಹಕ ಸಭೆಯವರು ಗ್ರಂಥಾಭಿವೃದ್ಧಿ ಉಪಸಭೆಯ ರಿಪೋರ್ಟಿನ ಮೇಲಿಂದ ನಿರ್ಧರಿಸಿದ ೪ ನೆಯ ವಿಷಯಕ್ಕೂ ಇದರಿಂದ ಬಹು ಸಹಾಯವಾಗುವುದು.

(c). ಕಾರ್ಯನಿರ್ವಾಹಕಮಂಡಲಿಯಲ್ಲಿ ಸಮಸ್ತ ಭಾಗಗಳ ಪ್ರತಿನಿಧಿಗಳೂ ಇರುವರಾದರೂ, ಇವರೆಲ್ಲ ಮಂಡಲಿಯು ಪ್ರತಿ ಸಭೆಗೆ ಬರುವುದು ಕೇವಲ ಅಸಾಧ್ಯವೆಂಬುದು ಸ್ಪಷ್ಟವಾಗಿದೆ. ಹೀಗಾದುದರಿಂದ ಬೆಂಗಳೂರಿನಲ್ಲಿರುವ ೮–೧೦ ಜನ ದೊಡ್ಡಮನುಷ್ಯರು ಮಾತ್ರ ಸೇರಿ ಮಾಡುವ ನಿರ್ಣಯಗಳು ಕಾರ್ಯತಃ ಮಂಡಲಿಯ ನಿರ್ಣಯಗಳಾಗಿ ನಿಲ್ಲುವ ಸಂಭವವಿರುವುದು. ಇದರ ನೆನೆಯಿಂದ ಯಾವ ಕೆಡುಕೂ ಆಗಲಾರದು ನಿಜವಾದರೂ ಮಂಡಲಿಯ ಯಾವತ್ತು ಸದಸ್ಯರ (ಪತ್ರಮುಖೇನ) ಅಭಿಪ್ರಾಯ ಪಡೆದು ನಿರ್ಣಯಿಸತಕ್ಕುದೆಂದು ಮುಖ್ಯವಾದ ಕೆಲಕೆಲವು ವಿಷಯಗಳನ್ನು ನಿಬಂಧನೆಗಳಿಂದಲೇ ಪ್ರತ್ಯೇಕಿಸಿಡುವುದು ಉತ್ತಮವೆಂದು ಭಾವಿಸುವೆನು. ಹೀಗೆ ಮಾಡಿದರೆ ಉಳಿದವರ ಕಾರ್ಯನಿರ್ವಾಹಕ ಸದಸ್ಯತ್ವವು ಕೇವಲ ಗೌರವಾರ್ಥ ಮಾತ್ರವಾಗದೆ ಅವರ ಆಲೋಚನೆಯ ಪ್ರಯೋಜನವು ಕೂಡ ಪರಿಷತ್ತಿಗೆ ದೊರೆತಂತಾಗುವುದು.

(d). ಪ್ರತಿ ವಿಷಯದಲ್ಲಿಯೂ ಪ್ರತಿ ಬಾರಿಯೂ ಕಾರ್ಯದರ್ಶಿಯೇ ತೊಡಲಾದ ಉದ್ಯೋಗಸ್ಥರು ಮೇಲ್ಪಟ್ಟವರ ಅನುಜ್ಞೆಯನ್ನು ಪಡೆಯುವುದೆಂದರೆ ಅನವಶ್ಯವಾದ ಕಾಲವಿಳಂಬವಾಗುವುದು. ಹೀಗಾದುದರಿಂದ ಸಂದರ್ಭಾನುಸಾರವಾಗಿ ಬಂದ ವಿಷಯಗಳನ್ನು ತೀರ್ಮಾನಗೊಳಿಸಿ ಸುಮ್ಮನಾಗದೆ ಕಾರ್ಯನಿರ್ವಾಹಕ ಮಂಡಲಿಯವರು ಅವುಗಳ ತತ್ತ್ವವನ್ನು ಗ್ರಹಿಸಿ ಅವುಗಳಿಂದಲೇ ಸಾಮಾನ್ಯಕ್ರಮಗಳನ್ನು ಏರ್ಪಡಿಸಿ, ಮುಂದೆ ಕಾರ್ಯದರ್ಶಿಯು ತದನುಸಾರವಾಗಿ ಕೂಡಲೇ ವರ್ತಿಸುವಂತೆ ಅನುಕೂ

ಲಪಡಿಸಿ ಕೊಟ್ಟರೆ ಎಷ್ಟೋ ಮೇಲುಂಟು. ಇಂಥ ಕ್ರಮವು 'Standing orders' ಎಂದರೆ ಕಾಯಂ ಹುಕುಮುಗಳೆಂಬ ಹೆಸರುಂದ ಸರ್ಕಾರದಲ್ಲಿಯೂ ಸಲುವಳಿಯಲ್ಲಿದೆ.

(e). ಕಳೆದ ನವೆಂಬರು ೨೦ ನೇ ತಾರೀಖಿನ ದಿನ ನಡೆದ ಕಾರ್ಯನಿರ್ವಾಹಕರ ಸಭೆಯಲ್ಲಿ ಒಂದು ವಿಶೇಷವು ಜರಗಿತು. 'ಪರಿಷತ್ತು ಪ್ರಶಸ್ತಿಯನ್ನು ಪಡೆದುಕೊಳ್ಳುವುದಕ್ಕೆ ಮುಂಚೆ.....ಸಮ್ಮೇಳನದಲ್ಲಿ ಆದ ನಿರ್ಣಯಗಳ ವಿಷಯದಲ್ಲಿ ಕಾರ್ಯಗಳನ್ನು ನಡೆಯಿಸುವುದು ಅಷ್ಟು ಫಲಕಾರಿಯಾದುದಲ್ಲವೆಂದು ಕಾಣುವುದರಿಂದ ಸದ್ಯದಲ್ಲಿ ಈ ವಿಷಯವನ್ನು ಮನ್ನಾ ಮಾಡಬಹುದು' ಎಂದು ಕಾ. ನಿ. ಸದಸ್ಯರು ನಿರ್ಣಯಿಸಿದರು. ಪರಿಷತ್ತಿನ ಪರವು ವಿಶೇಷವುಗಳೂ ಪೂರ್ವಾಪರಜ್ಞರೂ ಆದ ದೊಡ್ಡ ಮನುಷ್ಯರು ಮಾಡಿದ ಈ ನಿರ್ಣಯವು ಯುಕ್ತವಾದುದೇ ಎಂದು ಜೆನ್ನಾಗಿ ಆಲೋಚಿಸಿ ನೋಡಿದವರಿಗೆ ಗೋಚರಿಸದಿರದು. ತಥಾಪಿ, ಸಮ್ಮೇಳನದಲ್ಲಿ ಆದ ನಿರ್ಣಯವನ್ನು ಸಮ್ಮೇಳನದವರಿಂದಲೇ ನೇಮಿಸಲ್ಪಟ್ಟವರಾದ ಕಾರ್ಯನಿರ್ವಾಹಕ ಮಂಡಲಿಯವರು ಈ ರೀತಿ ತಳ್ಳಿಬಿಡಲು ಸ್ವತಂತ್ರರೇ? ಇದು ನ್ಯಾಯಸಮ್ಮತವೇ? ಎಂದು ಕೆಲವರು ಆಕ್ಷೇಪಿಸಲೂಬಹುದು. ಸೂಕ್ಷ್ಮವಾಗಿ ಆಲೋಚಿಸಿದರೆ, ಇದು ನ್ಯಾಯಸಮ್ಮತವಲ್ಲವೆಂದು ಕೂಡ ಹೇಳಬಹುದು. ಆದರೆ ಸಮ್ಮೇಳನವು ಪರಿಷತ್ತಿನ ಪರವಾಗಿ ನಡೆಯತಕ್ಕುದು; ಆದರಲ್ಲಿ ಪರಿಷತ್ತಿನ ಸದಸ್ಯರಿಗೆ ಮಾತ್ರವಲ್ಲದೆ ಇತರರಿಗೂ ಪ್ರವೇಶಿಸಲು ಅವಕಾಶವಿರುವುದು. ೨-೩ ದಿನದ ಹಬ್ಬದಲ್ಲಿ, ಉತ್ಸಾಹವೇ ಅಧಿಕವಾಗಿರಬಹುದಾದ ಸಮ್ಮೇಳನದ ಸಭೆಯಲ್ಲಿ ಆದ ಪ್ರತಿ ನಿರ್ಣಯವನ್ನು ಸ್ಥಿರವಾದ ಪರಿಷತ್ತಿನ ಕಾರ್ಯನಿರ್ವಾಹಕರು ನೆರವೇರಿಸಲು ಎಷ್ಟುಮಟ್ಟಿಗೆ ಬದ್ಧರೆಂಬ ಇನ್ನೊಂದು ಪ್ರಸಕ್ತಿಯೂ ಆಲೋಚಿಸತಕ್ಕುದಾಗಿದೆ. ಆದರೆ ಸಮ್ಮೇಳನದ ಯಾವ ನಿರ್ಣಯವೂ ಕಾ.ನಿ. ರನ್ನು ಬದ್ಧಪಡಿಸಲಾರದೆನ್ನುವುದಾದರೆ ಸಮ್ಮೇಳನವನ್ನು ನಡೆಯಿಸುವುದರಿಂದ ಯಾವ ಪ್ರಯೋಜನವೂ ಉಂಟಾದ ಹಾಗಾಗಲಾರದು. ಆದುದರಿಂದ ಉಭಯಪಕ್ಷದವರಿಗೂ ಅಸಮಾಧಾನವಾಗದಂತೆ ಒಂದು ಮಧ್ಯಮಾರ್ಗವನ್ನು ಗೊತ್ತುಪಡಿಸುವುದು ಅಗತ್ಯವು. ಸಮ್ಮೇಳನದಲ್ಲಿ ಆದ ಯಾವುದೊಂದು ನಿರ್ಣಯವು ಕಾರಣಾಂತರಗಳಿಂದ ನೆರವೇರಿಸಬಹುದುವುದಿಲ್ಲವೆಂದು ಸಮಸ್ತ ಕಾರ್ಯನಿರ್ವಾಹಕರೂ ಬಹುಮತದಿಂದ ಅಭಿಪ್ರಾಯಪಟ್ಟಲ್ಲಿ, ಪುನಃ ಅದೇ ನಿರ್ಣಯವು ಮುಂದಿನ ಸಮ್ಮೇಳನದಲ್ಲಿ ಆಗುವತನಕ ಅದನ್ನು ತಡೆದಿಡಬಹುದೆಂದು ಒಂದು ನಿಬಂಧನೆಯನ್ನು ಏರ್ಪಡಿಸಿದರೆ ಈ ಅಡಚಣೆಯು ದೂರವಾಗಬಹುದೆಂದು ನನಗೆ ತೋರುತ್ತಿದೆ.

(f). ಕಳೆದ ಸಮ್ಮೇಳನವು ಕೂಡಿದ ಕಾಲದಲ್ಲಿ 'ಬೊಂಬಾಯಿ, ಮದ್ರಾಸು, ಹೈದರಾಬಾದು ಮತ್ತು ಕೊಡಗು ಪ್ರಾಂತ್ಯಗಳಲ್ಲಿ ಕರ್ಣಾಟಕ ಸಾಹಿತ್ಯ ಪರಿಷತ್ತಿಗೆ ಶಾಖೆ (branches) ಗಳಿರಬೇಕು; ಮತ್ತು ಈ ಪರಿಷತ್ತಿನ ಉದ್ದೇಶಗಳನ್ನೇ ಇಟ್ಟು

ಕೊಂಡು ಕೆಲಸಮಾಡುವ ಇತರ ಸಂಘಗಳನ್ನು ತನ್ನ ಜತೆಗೆ ಸೇರಿಸಿಕೊಳ್ಳುವುದಕ್ಕೆ (to affiliate) ಕ. ಸಾ. ಪರಿಷತ್ತಿಗೆ ಅಧಿಕಾರವಿರಬೇಕು'' ಎಂಬುದಾಗಿ ಒಂದು ನಿರ್ಣಯವು ಮಾಡಲ್ಪಟ್ಟಿದ್ದಿತು. ಪರಿಷತ್ತಿನ ವರ್ತಮಾನಸ್ಥಿತಿಯಲ್ಲಿ ಈ ಭಾಗದಲ್ಲಿ ಯಾವ ಕೆಲಸವೂ ಆಗುವಂತಿಲ್ಲವಾದರೂ ಕರ್ಣಾಟಸಾಹಿತ್ಯಾಭಿರುಚಿಯೂ ಸಭ್ಯತೆಯೂ ಜನರಲ್ಲಿ ವಿಸ್ತರಿಸಲು ಇದೇ ಮುಖ್ಯ ಉಪಾಯವಾದಪ್ರಯುಕ್ತ, ಒಂದಲ್ಲ ಒಂದು ದಿನ, ಆದಷ್ಟು ತ್ವರೆಯಾಗಿ, ಈ ಕಾರ್ಯವನ್ನು ಪರಿಷತ್ತಿನವರು ಕೈಕೊಳ್ಳಲೇಬೇಕಾಗಿರುವುದು. ತಥಾಪಿ, ಜೆನ್ನಾಗಿ ಆಲೋಚಿಸಿ ನೋಡಿದರೆ, ಇದರಷ್ಟು ಪ್ರಯಾಸಕರವಾದ ಕೆಲಸವು ಬೇರೊಂದಿಲ್ಲವೆಂಬುದು ಕೂಡ ತೋರುವಾರದಿರದು. ಶಾಖಾಸಂಘವೆಂದರೇನು? ಸ್ವೀಕೃತ (Affiliated) ಸಂಘವೆಂದರೇನು?–ಈ ಭೇದವು ಮೊದಲು ಸ್ಪಷ್ಟವಾಗಿ ತಿಳಿಯಬೇಕು. ಇವಕ್ಕೂ ಪರಿಷತ್ತಿಗೂ ಇರುವ ಪರಸ್ಪರ ಸಂಬಂಧವು ಗೊತ್ತಾಗಬೇಕು. ಶಾಖೆಗಳ ಅಥವಾ ಸ್ವೀಕೃತ ಸಂಘಗಳ ಒಳ ಆಡಳಿತೆಯ (Internal management) ಲ್ಲಿ ಪರಿಷತ್ತಿನವರು ಎಷ್ಟುಮಟ್ಟಿಗೆ ಕೈಹಾಕಬಹುದು? ಪರಿಷತ್ತಿನ ಮೇಲ್ವಿಚಾರಣೆಗೆ ಒಳಪಡಿಸಿಕೊಂಡುದರ ಮೂಲವಾಗಿ ಉಳಿದ ಸಂಘಗಳಿಗೆ ಆಗತಕ್ಕ ಲಾಭವೇನು?–ಇವೇ ಮುಂತಾದ ವಿಷಯಗಳು ನಿರ್ಣಯವಾಗಬೇಕು. ಆಂಧ್ರ ಸಾಹಿತ್ಯ ಪರಿಷತ್ತಿನವರೂ ಇಂಥ ಒಂದು ಉದ್ದೇಶವನಿಟ್ಟುಕೊಂಡಿರುವರು. ಈ ಆಂಧ್ರ ಪರಿಷತ್ತು ನಿರ್ಮಾಣವಾಗಿ ನಾಲ್ಕೈದು ವರ್ಷಗಳ ಕಾಲವು ದಾಟಿಹೋಯಿತಾದರೂ ಈ ಉದ್ದೇಶವನ್ನು ಸಾಧಿಸುವುದಕ್ಕಾಗಿ ಅವರು ಮಾಡಿದ ಪ್ರಯತ್ನಗಳೆಲ್ಲ ಇದುವರೆಗೆ ಕೇವಲ ನಿರರ್ಥಕವಾದಂತೆ ತಿಳಿದುಬರುತ್ತಿದೆ. ಇಷ್ಟಾಗಿ ಸ್ವೀಕೃತ ಸಂಘಗಳಿಂದ ಯಾವ ಸಹಾಯವನ್ನೂ ಅಪೇಕ್ಷಿಸದೆ ಒಂದಿಷ್ಟು ಮೇಲ್ವಿಚಾರಣೆಗೆ ಮಾತ್ರ ಒಳಪಡಿಸಿ ಪ್ರತಿ ವಿಷಯದಲ್ಲಿಯೂ ಅಂಥ ಸಂಘಗಳಿಗೆ ತಾವೇ ಸಹಾಯಮಾಡಲು ಆ ಪರಿಷತ್ತಿನವರು ಸಿದ್ಧರಾಗಿದ್ದರು. ಇದಲ್ಲದೆ, ಮದ್ರಾಸುಆಧಿಪತ್ಯಕ್ಕೊಳಪಟ್ಟ ಆಂಧ್ರರೇ ಬಹು ಪಕ್ಷದವರಾಗಿಯೂ ನಾಗರಿಕತೆಯಲ್ಲಿ ಮುಂದೆಬಂದವರಾಗಿಯೂ ಇದ್ದು ಉಳಿದ ಪ್ರಾಂತ್ಯಗಳವರು ಯಾವ ವಿಷಯದಲ್ಲಿಯೂ ಅವರೊಡನೆ ಸಮಾನಸ್ಕಂಧರೆನ್ನಿಸುವ ಯೋಗ್ಯತೆಯನ್ನುಳ್ಳವರಲ್ಲವಾದುದರಿಂದ, ಎಲ್ಲರೂ ಮದ್ರಾಸಿನ ಆ. ಸಾ. ಪರಿಷತ್ತನ್ನೇ ಮುಖ್ಯವಾಗಿ ತಿಳಿಯಲು ಅಭ್ಯಂತರವಾವುದೂ ಇರಲಿಲ್ಲ.

ಕನ್ನಡಿಗರ ಸ್ಥಿತಿಯೇ ಬೇರೆ. ಕರ್ಣಾಟದೇಶವು ಕೇವಲ ಪ್ರತ್ಯೇಕವಾದ ಅಯಿದು ಭಾಗಗಳಾಗಿ ವರ್ಪಟ್ಟಿದೆ. ಜನಸಂಖ್ಯೆಯಲ್ಲಿಯೂ ಕ್ಷೇತ್ರಫಲದಲ್ಲಿಯೂ ಮೈಸೂರು ಸೀಮೆಯು (ಕೊಡಗು ಬಿಟ್ಟು) ಉಳಿದ ಪ್ರತಿ ಭಾಗಕ್ಕಿಂತ ಸುಮಾರು ಎರಡರಿಂದ ಮೂರುಪಾಲುವರೆಗೂ ದೊಡ್ಡದಾಗಿರುವುದಾದರೂ, ಕರ್ಣಾಟ ಪಾಂಡಿತ್ಯದ ವಿಷಯ

ದಲ್ಲಿಯೂ ಅದು ಮೇಲ್ಗಯ್ಯಾಗಿರುವುದಾದರೂ, ಸಾಮಾನ್ಯತಃ (culture) ಸಭ್ಯತೆಯ ವಿಷಯದಲ್ಲಿ ಮದ್ರಾಸು ಮತ್ತು ಬೊಂಬಾಯಿ ಕರ್ಣಾಟಗಳು ಕೂಡ ಮೈಸೂರಿಗಿಂತ ಸ್ವಲ್ಪವೂ ಹಿಂದಿಲ್ಲವೆನ್ನಬಹುದು. ಸಾಲದುದಕ್ಕೆ ಈಗ ೨೫ ವರ್ಷದಿಂದ ಜೆನ್ನಾಗಿನಡೆದು ಬಂದಿರುವ ಧಾರವಾಡದ ಕರ್ಣಾಟಕ ವಿದ್ಯಾವರ್ಧಕ ಸಂಘವೂ ಒಂದು ಇರುವುದು. ಇದನ್ನು ಪರಿಷತ್ತಿನ ಶಾಖೆಯಾಗಿ ಏರ್ಪಡಿಸುವುದು ಕಷ್ಟ. ಸುಮ್ಮನಿರುವುದು ಅಸಾಧ್ಯ. ಇಂಥ ಪ್ರತಿ ಕೂಲಸ್ಥಿತಿಯಲ್ಲಿ ಶಾಖಾಸಂಘಗಳನ್ನು ಹೇಗೆ ಸ್ಥಾಪಿಸಬೇಕೋ ? ಇತರ ಸಂಘಗಳನ್ನು ಹೇಗೆ ಸ್ವೀಕರಿಸಿಕೊಳ್ಳಬೇಕೋ ?–ಎಂಬ ಪ್ರಶ್ನೆವು ಬಹು ಕುಶಲತೆಯಿಂದ ನಿರ್ಣಯಿಸಲ್ಪಡತಕ್ಕುದೆಂಬುದು ಸಭಿಕರಿಗೆ ತಾನಾಗಿಯೇ ತಿಳಿದು ಬಾರದಿರದು. ಇದಕ್ಕೆ ದೀರ್ಘಾನುಭವವೂ ಪೂರ್ವಾಪರವಿವೇಕವೂ ಬೇಕಾದುದೇ ವಿನಾ ಬರೀ ಭಾಷಾ ಪಾಂಡಿತ್ಯವಲ್ಲ ; ಯಾವ ಭಾಗದವರಿಗೂ ಯಾವ ಪಕ್ಷದವರಿಗೂ ಮನಸ್ಸು ನೋಯದ ಹಾಗೆ ಈ ಕೆಲಸವನ್ನು ನೆರವೇರಿಸಬೇಕಾಗಿದೆ. ಹೀಗಾದುದರಿಂದ ಕಾರ್ಯನಿರ್ವಾಹಕರು ಇದರ ವಿಚಾರವನ್ನು ವಿಳಂಬಿಸದೆ, ಪ್ರತಿ ಭಾಗದಿಂದಲೂ ಪ್ರಮುಖರಾದ ಎರಡು ಮೂರು ಮಂದಿ ದೊಡ್ಡಮನುಷ್ಯರನ್ನು ಸಭಿಕರಾಗಿ ಏರ್ಪಡಿಸಿ ಪರಿಷದಧ್ಯಕ್ಷರಾದ ಶ್ರೀಯುತ ನಂಜುಂಡೈಯ್ಯನವರು ತಾವೇ ಈ ಉಪಸಭೆಯ ಪ್ರವರ್ತಕರಾಗಿ ನಿಂತು, ಈ ದೊಡ್ಡ ಪ್ರಶ್ನವನ್ನು ಸರ್ವಸಮ್ಮತವಾದ ರೀತಿಯಲ್ಲಿ ತೀರಿಸುವುದು ಅಗತ್ಯವಾಗಿದೆ.

"ಸಿರಿಗನ್ನಡಂಗೆಲ್ಗೆ"

ಕಾದಂಬರೀಸಂಗ್ರಹ ಗ್ರಂಥಮಾಲಾ ನಂ 29

ರೋಹಿಣಿ.

ಟಿ. ಕೆ. ನಂಜುಂಡಯ್ಯ

ಬೆಲೆ 4 ಆಣೆ

Price 4 As

ಪೀಠಿಕೆ.

ಇದು ಈಶ್ವರಲೀಲೆಯನ್ನು ವಿಚಿತ್ರಘಟನಾವಳಿಗಳ ಮೂಲಕ ಪ್ರದರ್ಶಿಸುವ ನೀತಿಬೋಧಕವಾದ ಕಾಲ್ಪನಿಕ ಕಾದಂಬರಿಯು ವೀರರಸ ಶಾಂತರಸಗಳೇ ಈ ಗ್ರಂಥದಲ್ಲಿ ಪ್ರಧಾನಗಳಾಗಿವೆ. ಅನೇಕ ಜಮತ್ಕಾರವಾದ ವರ್ಣನೆಗಳೂ ನೀತಿಬೋಧೆಗಳೂ ಅಲ್ಲಲ್ಲಿ ಅಡಕವಾಗಿವೆ. ಇದು ಮುದ್ರಣಕ್ಕೆ ಪ್ರಾರಂಭವಾಗಿ ೩ ವರ್ಷಗಳಾದರೂ ಅನೇಕ ತೊಂದರೆಗಳಿಂದ ಮಧ್ಯಕಾಲದಲ್ಲಿ ನಿಲ್ಲಿಸಲ್ಪಟ್ಟಿದ್ದುದಕ್ಕಾಗಿ ವಿಷಾದಿಸಬೇಕಾಗಿದೆ. ಕಥಾಭಂಗವಾಗಬಾರದೆಂದು ಯೋಚಿಸಿ ಕಾದಂಬರೀಸಂಗ್ರಹ ಮಾಸಪತ್ರಿಕೆಯ ಸಂಪಾದಕರಾದ ಮ|| ಸಿ. ವೆಂಕಟರಮಣಶಾಸ್ತ್ರಿಗಳು, ಈ ರೋಹಿಣಿಯನ್ನು ಅಮೋಘವಾದ ತಮ್ಮ ಮಾಸಪತ್ರಿಕೆಯಲ್ಲಿ ಸಂಪೂರ್ಣವಾಗಿ ಪ್ರಕಟಿಸಿದುದಕ್ಕಾಗಿ ನಾನು ಅವರಿಗೆ ಕೃತಜ್ಞನಾಗಿರುವೆನು. ಗುಣಜ್ಞರು ಈ ಗ್ರಂಥದಲ್ಲಿರುವ ಸುಗುಣಗಳನ್ನು ಸ್ವೀಕರಿಸಿ ಪ್ರೋತ್ಸಾಹಿಸಿ ಮುಂದೆಯೂ ಇಂತಹ ಗ್ರಂಥರಚನೆಗೆ ಅವಕಾಶಗಳನ್ನು ಕಲ್ಪಿಸಿಕೊಡುವರೆಂದು ನಂಬಿದೇನೆ. ಈ ಗ್ರಂಥವನ್ನು ಬರೆಯುವ ಕಾಲದಲ್ಲಿ ಮೈಸೂರು ಮಹಾರಾಣಿಯವರ ಕಾಲೇಜು ಅ|| ಮಾಸ್ಟರಾಗಿದ್ದು, ಸದ್ಯಃ ತುಮಕೂರು ಎಂಪ್ರೆಸ್ ಗರ್ಲ್ಸ್ ಹೈಸ್ಕೂಲಿನ ಸಹಾಯೋಪಾಧ್ಯಾಯರಾಗಿರುವ ಮ|| ನಾರಾಯಣಶಾಸ್ತ್ರಿಗಳು ಬಹಳ ಸಹಾಯಮಾಡಿರುವುದರಿಂದ ಅವರಿಗೆ ನಾನು ಕೃತಜ್ಞನಾಗಿದೇನೆ.

ಮೈಸೂರು
1916 ನೇ ಆಗಸ್ಟ್.

ಟಿ. ಕೆ. ನಂಜುಂಡಯ್ಯ,

ರೋಹಿಣಿ

ಪ್ರಥಮಲ ಹರಿ.
ದಿಕ್ಕಿಲ್ಲದ ಮಗು.

ಹಿಮಗಾಲದಲ್ಲೊಂದುದಿನ ಕರುಣಾಕರನು ಕಲ್ಯಾಣನಗರದಲ್ಲಿದ್ದ ತನ್ನ ಅಕ್ಕನನ್ನು ನೋಡಲು ಅಶ್ವಾರೂಢನಾಗಿ ಹೊರಟನು. ಆಗ ಸಂಧ್ಯಾ ಕಾಲವಾಗಿದ್ದಿತು. ಹಿಮವು ಅವಿರಳವಾಗಿ ಸುರಿಯುತ್ತಿದ್ದಿತು. ಹಿಮದ ಸರ್ವ ವ್ಯಾಪಕತೆಯಿಂದ, ಇದು ಮಾರ್ಗ, ಇದು ಹಳ್ಳ, ಇದು ದಿಣ್ಣೆ, ಇದು ಮೈದಾನವೆಂಬುದೊಂದೂ ಗೋಚರವಾಗುತ್ತಿರಲಿಲ್ಲ. ಆದರೆ ಕರುಣಾಕರನ ಅಶ್ವವು ಎಂತಹ ಮಾರ್ಗದಲ್ಲಿ ಹೋಗುವುದಕ್ಕೂ ಅಂಜುತ್ತಿರಲಿಲ್ಲ. ಈ ಅಶ್ವದ ಬಲದಿಂದಲೇ ಮಾರ್ಗವು ದುರ್ಗಮವೆಂದು ಸಹ ಲಕ್ಷಿಸದೆ ಕರುಣಾಕರನು ಸೋದರಿಯನ್ನು ನೋಡಲು ಹೊರಟಿದ್ದನು. ಅಶ್ವವು ಸ ಬುದ್ಧಿ ಕೌಶಲದಿಂದ ಅನೇಕ ಕಷ್ಟಗಳನ್ನನುಭವಿಸುತ್ತಾ ಮಾರ್ಗ ಕ್ರಮಣ ಮಾಡತೊಡಗಿತು. ಅಷ್ಟರಲ್ಲೇ ಅಂಧಕಾರವು ಸರ್ವತ್ರವ್ಯಾಪಿಸಿತು. ಇಂತಹ ರಾತ್ರಿಯಲ್ಲಿ—ನಿಬಿಡವಾದ ಹಿಮವರ್ಷಣದಲ್ಲಿ—ಕುದುರೆಯು ಕಲ್ಯಾಣ ನಗರದ ಉದ್ಯಾನವೊಂದರ ಸಮೀಪದಲ್ಲಿ ಬರುತ್ತಿರುವಾಗ ಕರುಣಾಕರನಿಗೆ ಒಂದು ಶಿಶುವಿನ ರೋದನ ಧ್ವನಿಯು ಕೇಳಿಸಿತು. ತಕ್ಷಣವೇ ಅವನು ಅಶ್ವದಿಂದಿಳಿದು ಆಲಿಸಿ ಕೇಳಲು ಪ್ರಚಂಡಮಾರುತರವವಲ್ಲದೆ ಮತ್ತೇನೂ ಕೇಳಲಿಲ್ಲ. ಪುನಹ ಕುದುರೆಯನ್ನು ಹತ್ತಿ ಮುಂದುವರಿಯುತ್ತಿರುವಲ್ಲಿ ಕುದುರೆಯು ಥಟ್ಟನೆ ಬಂದುಕಡೆ ನಿಂತು ಬಿಟ್ಟಿತು. ಏನು ಮಾಡಿದರೂ ಮುಂದರಿಯಲೇ ಇಲ್ಲ. ಆಗ ಕರುಣಾಕರನು ಪುನಹ ಇಳಿದು ಸುತ್ತಲೂ ನೋಡಿದನಾದರೂ ಆ ಕತ್ತಲೆಯಲ್ಲೇನೂ ಕಾಣಬರಲಿಲ್ಲ. ಆದರೂ ಬಿಡದೇ ಶೋಧಿಸತೊಡಗಲು ಕುದುರೆಯ ಮುಂಗಡೆ ಹಿಮವ್ಯಾಪ್ತವಾದೊಂದು ಪ್ರದೇಶದಲ್ಲಿ ಏನೋ ಬಿದ್ದಿರುವಂತೆ ಬೋಧೆಯಾಯಿತು. ಕರುಣಾಕರನು ಪರಿಶೀಲಿಸಲು ಅವನಿಗೊಂದು ಎಳೆಯ ಮಗುವು ದೃಗ್ಗೋಚರವಾಯಿತು. ಅವನು ಅದನ್ನು ಎರಡು ಕೈಗಳಿಂದಲೂ ಎತ್ತಿ ನೋಡಲು ಜೀವವಿರುವುದೆಂದು ತಿಳಿಯಿತು.

ಮಗುವು ಮೆಲ್ಲನೆ ಅಳುತ್ತಿತ್ತು. ಕರುಣಾಕರನು ದುಃಖದಿಂದ—" ಅಯ್ಯೋ! ಪಾಪ" ಯಾರೋ ಈ ಶಿಶುವನ್ನು ಬಡತನದಿಂದಲೋ ಆಥವಾ ಇನ್ಯಾವ ಕಾರಣದಿಂದಲೋ ಹಿಮಾವೃತವಾದ—ನರಸಂಚಾರರಹಿತವಾದ ಇಂತಹ ಪ್ರದೇಶದಲ್ಲಿ ಹಾಕಿ ಹೋಗಿರುವರು. ಆಹ!! ಎಂತಹ ನಿಘೃರ್ಣರು ಎಂದು ಹೇಳಿಕೊಂಡು ಸುತ್ತುಮುತ್ತಲೂ ನೋಡಲು ಯಾರ ಧ್ವನಿಯೂ ಕೇಳಿಸಲಿಲ್ಲ. ಮತ್ತು ಯಾವ ಮನುಷ್ಯನೂ ಸಿಕ್ಕಲಿಲ್ಲ. ಆಗ ಅವನು ಈ ಮಗುವನ್ನು ಇಲ್ಲಿ ಯಾರು ಹಾಕಿಹೋಗಿರುವರೋ ಅಂತಹರ ಶೋಕ ನಿವಾರಣೆಗಾಗಿ ಈ ಶಿಶುವನ್ನು ಸಂರಕ್ಷಿಸುವೆನೆಂದು ಘಟ್ಟಿಯಾಗಿ ಹೇಳಿ ಆ ಮಗುವಿಗೆ ತನ್ನ ಪಂಚೆಯನ್ನು ಹೊದ್ದಿಸಿ ಬೆಚ್ಚಗೆ ಮಾಡಿ ಕುದುರೆಯ ಮೇಲೆ ಹತ್ತಿ ಮಗುವನ್ನು ಜೋಪಾನವಾಗಿ ಎತ್ತಿಕೊಂಡು ತನ್ನ ಅಕ್ಕನ ಊರಿಗೆ ಹೋಗುವುದನ್ನು ನಿಲ್ಲಿಸಿ ಹಿಂತಿರುಗಿ ತನ್ನ ಮನೆಗೇ ಬಂದುಬಿಟ್ಟನು.

ಇವನ ಬರುವಿಕೆಯನ್ನೇ ನಿರೀಕ್ಷಿಸುತ್ತಿದ್ದ ಅವನ ತಮ್ಮ ದಯಾಕರನು ಬೇಗ ಬಂದು ಕುದುರೆಯನ್ನು ಹಿಡಿದುಕೊಂಡನು. ಕರುಣಾಕರನು ಕುದುರೆಯ ಮೇಲೆ ಕುಳಿತಿದ್ದಂತೆಯೇ ಮಗುವನ್ನು ತೆಗೆದು ದಯಾಕರನ ಕೈಯಲ್ಲಿ ಕೊಟ್ಟನು.

ದಯಾಕರನು ಅದನ್ನು ನೋಡಿ, ಅಣ್ಣಾ! ಈ ಮಗುವು ಎಲ್ಲಿ ಸಿಕ್ಕಿತು? ಇದನ್ನು ಕಾಪಾಡತಕ್ಕವರು ಯಾರು? ಇದರ ವೃತ್ತಾಂತವೇನು? " ಎಂಬಿವೇ ಮೊದಲಾದ ಪ್ರಶ್ನೆಗಳನ್ನು ಮಾಡಲು ಕರುಣಾಕರನು, ನಮ್ಮನ್ನು ಹೊರತು ಸಂರಕ್ಷಿಸತಕ್ಕವರು ಮತ್ತಾರು? ಎಂದು ಹೇಳಿ, " ಆ ಮಗುವನ್ನು ಬೆಳಕಿನ ಕಡೆಗೆ ತೆಗೆದುಕೊಂಡು ಬಾ" ಎಂದನು. ದಯಾಕರನು ಬೆಳಕಿನಲ್ಲಿ ಕ್ಷಣಕಾಲ ಮಗುವನ್ನು ಚೆನ್ನಾಗಿ ನೋಡಿ " ಆಹಾ? ಇದೆಂತಹ ಸುಂದರವಾದ ಹೆಣ್ಣುಕೂಸು! ಇದರ ಕಣ್ಣುಗಳು ಎಷ್ಟು ರಮ್ಯವಾಗಿವೆ! ಆಗಲೇ ಇದು ಸುತ್ತುಮತ್ತಲೂ ನೋಡಿ ಹೇಗೆ ನಗುವುದು! ಪ್ರಾಯಶಃ ಇದಕ್ಕೆ ಹತ್ತು ಹನ್ನೊಂದು ತಿಂಗಳಿರಬಹುದು. ಅಯ್ಯೋ ಪಾಪ! ತುಂಬ ಹಸಿದಿರಬಹುದು. ಸ್ವಲ್ಪ ಹಾಲನ್ನು ಕುಡಿ

ಸೋಣ ! ಎಂಬದಾಗಿ ಹೇಳಿ ಹಾಲನ್ನು ಬಿಸಿ ಮಾಡಿ ಮಗುವಿಗೆ ಕುಡಿಸಿದನು. ಮಗುವು ಮೆಲ್ಲಗೆ ಕುಡಿಯಲಾರಂಭಿಸಿತು. ಅಷ್ಟರಲ್ಲಿ ಹಿಮುದಲ್ಲಿ ತೊಯ್ದು ನಡುಗುತ್ತಲಿದ್ದ ಕರುಣಾಕರನು ಬೆಂಕಿಯನ್ನು ಕಾಸಿಕೊಳ್ಳುತ್ತಾ ದಯಾಕರನನ್ನು ಕುರಿತು ತನಗೆ ಮಗುವು ಸಿಕ್ಕಿದ ಸಂಗತಿಯೆನ್ನು ವಿಸ್ತಾರವಾಗಿ ಹೇಳಿದನು. ದಯಾಕರನು ಈ ಮಾತುಗಳನ್ನು ಕೇಳಿ ಬಹು ಕೋಪಗೊಂಡು—" ಇಂತಹ ಸುಂದರವಾದ ಮಗುವನ್ನು ಹಿಮುದಲ್ಲಿ ಹಾಕಿ ಹೋದವರೆಂತಹ ಕ್ರೂರಾತ್ಮರೋ ! ಆಹಾ ! ಇಂಥವರೂ ಈ ಲೋಕದಲ್ಲಿ ಇರುವರೇ ? ಅಯ್ಯೋ, ನೀವು ಆ ಮಾರ್ಗವಾಗಿ ಪ್ರಯಾಣಮಾಡದೆ ಇದ್ದರೆ ಈ ಕೂಸಿನ ಗತಿ ಏನಾಗುತ್ತಿತ್ತೋ ? ಇಂಥ ಮಗುವನ್ನು ಅದರ ಮಾತಾಪಿತೃಗಳೇ ಈ ರೀತಿ ತ್ಯಜಿಸಿದ್ದ ಪಕ್ಷದಲ್ಲಿ ವಿಚಾರಣೆ ಇಲ್ಲದೆ ಅವರನ್ನು ಗಲ್ಲಿಗೆ ಹಾಕಬೇಕು ". ಎಂದು ಹೇಳಿ ಮಗುವಿಗೆ ಬೆಚ್ಚಗೆ ಹೊದ್ದಿಸಿದನು. ಇದನ್ನು ಕೇಳಿ ಶಾಂತನಾದ ಕರುಣಾಕರನು—" ದಯಾಕರನೇ ! ಸಜ್ಜನರಿಗೆ ಪರನಿಂದೆಯು ಯೋಗ್ಯವಾದ ದ್ದಲ್ಲ. ಆ ರೀತಿ ದೂಷಿಸುವುದು ಮಹಾ ಪಾತಕವು. ಆದರೆ ಯಾವ ಕಾರಣದಿಂದ ಮಗುವನ್ನು ಹಿಮುದಲ್ಲಿ ಹಾಕಿ ಹೋದರೋ ಅದನ್ನು ವಿಮರ್ಶಿಸದೆ ಅವರನ್ನು ನೀಚರು, ಘಾತುಕರು, ಕ್ರೂರಾತ್ಮರು, ಎಂದು ನಾವು ನಿಂದಿಸುವುದು ಕೂಡ ನ್ಯಾಯವಲ್ಲ" ಎಂದು ಹೇಳಿದನು.

ಅದಕ್ಕೆ ದಯಾಕರನು—ಈ ಶಿಶುವು ಯಾರದೋ ತಿಳಿಯಲಿಲ್ಲ. ಮೈಮೇಲಿನ ಬಟ್ಟೆಗಳಾದರೋ ಬಹು ಶುಭ್ರವಾಗಿವೆ. ಆದರೂ 'ಅವು ಅಷ್ಟು ಬೆಲೆಯುಳ್ಳವುಗಳಲ್ಲ. ಅದಿರಲಿ. ಇದಕ್ಕೆ ಏನು ಹೆಸರಿಡೋಣ ? ಎಂದು ಕೇಳಿದನು. ಅದಕ್ಕೆ ದಯಾರ್ದ್ರಹೃದಯನಾದ ಕರುಣಾಕರನು ಪಂಚಾಂಗವನ್ನು ತೆಗೆದುನೋಡಿ " ಆ ಮಗುವು ದೊರೆತ ದಿವಸವು ರೋಹಿಣೀನಕ್ಷತ್ರ ಯುಕ್ತವಾದ್ದರಿಂದಲೂ, ಬಹು ಸುಂದರವಾದ್ದರಿಂದಲೂ, ರೋಹಿಣಿಯೆಂದೇ ನಾಮಕರಣವನ್ನು ಮಾಡೋಣ ಎಂದು ಹೇಳಿದನು. ಅದನ್ನು ದಯಾಕರನು ಒಪ್ಪಿ ಮಗುವಿಗೆ ರೋಹಿಣಿಯೆಂದೇ ನಾಮಕರಣವನ್ನು ಮಾಡಿ ಆ ರೋಹಿಣೀನಕ್ಷತ್ರಾಧಿದೇವತೆಯೇ ಇದನ್ನು ಕಾಪಾಡಲಿ ಎಂದು ಆಶೀರ್ವದಿಸಿ ಮಗುವಿಗೆ ಬೆಚ್ಚಗೆ ಹೊದಿಸಿ ಮಲಗಿಸಿದನು.

ಕೂಡಲೇ ಮಗುವಿಗೆ ನಿದ್ರೆಯೂ ಬಂದಿತು. ಅನಂತರ ಸಹೋದರರಿಬ್ಬರೂ ಭೋಜನವನ್ನು ಮಾಡಿ ಮಲಗಿದರು. ಕೂಡಲೇ ಪರೋಪಕಾರ ಬುದ್ಧಿಯು ಇದೇ ರೀತಿ ಕೊನೆಯವರಿಗೂ ಇವರಲ್ಲಿ ಸ್ಥಾಯಿಯಾಗಿ ಇರುವುದೋ ಇಲ್ಲವೋ ಎಂಬುದನ್ನು ಪರೀಕ್ಷೆ ಮಾಡುವಂತೆ ನಿದ್ರೆಯು ತ್ವರಿತವಾಗಿ ಬಂದಿತು. ನೋಡಿರಿ! ಪಾಠಕರೇ! ವಿಧಿವಿಲಾಸವು ಎಂತಿರುವುದು? ಸ್ವಲ್ಪಕಾಲದ ಮುಂಚೆ ಹಿಮದಲ್ಲಿ ಬಿದ್ದು ಮರಣೋನ್ಮುಖವಾಗಿದ್ದ ಮಗುವು ಈಗ ಹೇಗೆ ಸುಖವಾಗಿ ನಿದ್ರಿಸುತ್ತಿರುವುದು? ಕರುಣಾಕರ! ನೀನೇ ಧನ್ಯ! ನಿನ್ನಂತಹ ಕರುಣಾಶಾಲಿಗಳು ಜಗತ್ತಿನಲ್ಲಿ ಅತಿ ವಿರಳರಲ್ಲವೇ?

ವ್ಯತ್ಯಯಲಹರಿ.

ಬಡತನ

ವೈರುದಿನ ಬೆಳಿಗ್ಗೆ ಆ ಮಗುವಿನ ವದಂತಿಯು ಅಂದರೆ ಕರುಣಾಕರನ ಶಪಥವೂ ಮಗುವಿಗೆ ರೋಹಿಣಿ ಎಂದು ನಾಮಕರಣ ಮಾಡಿದ್ದೂ ಊರಲ್ಲೆಲ್ಲಾ ವ್ಯಾಪಿಸಿತು. ಮಗುವು ದೊರೆತ ಕಾಡಿನಲ್ಲಿ ಬಂದು ಗುಡಿಸಲು ಹಾಕಿಕೊಂಡು ಒಬ್ಬ ಕೃಷಿಕನು ವಾಸಮಾಡುತಲಿದ್ದನು. ಅವನು ಕರುಣಾಕರನ ಹೊಲದ ಕಾವಲುಗಾರನು. ಆ ದಿನ ರಾತ್ರಿ ನಿದ್ರಿತನಾಗಿದ್ದಾಗ ಬಾಗಲಿಗೆ ಏನೋ ಬಡಿದಂತೆ ಬಹಳ ಗಟ್ಟಿಯಾದ ಶಬ್ದವಾಯಿತು. ರೈತನು ಅದನ್ನು ಕೇಳಿ ಮೇಲಕ್ಕೆದ್ದನು. ಆ ಸಮಯದಲ್ಲಿ ಅವನ ಕಿವಿಗೆ ಒಂದು ರೋದನಧ್ವನಿಯು ಕೇಳಿಬಂದಿತು. ಆದನ್ನು ಕೇಳಿಒಹುಭಯಪಟ್ಟು ಬಾಗಿಲನ್ನು ತೆಗೆಯದೆ ಭದ್ರವಾಗಿ ಹಾಕಿಕೊಂಡು ನಿದ್ರೆಮಾಡತೊಡಗಿದನು. ಮಾರನೆಯ ದಿನ ಪ್ರಾತಃಕಾಲ ಬಾಗಿಲನ್ನು ತೆಗೆದು ನೋಡಲು ಒಬ್ಬ ಸಿಪಾಯಿಯು ಬಿದ್ದಿದ್ದನು. ಇದನ್ನು ರೈತನು ಕಂಡು ಭಯಪಟ್ಟು ಈ ಸಂಗತಿಯನ್ನು ತನ್ನ ಯಜಮಾನನಾದ ಕರುಣಾಕರನಿಗೆ ತಿಳಿಸಿದನು. ಕರುಣಾಕರನು ಇದನ್ನು ಕೇಳಿ ಆ ಸಿಪಾಯಿಯ ಮೂಲಕ ಈ ಮಗುವಿನ

ಸಮಾಚಾರವು ಏನಾದರೂ ತಿಳಿಯಬಹುದೆಂದು ಊಹಿಸಿ ರೈತನ ಜೊತೆಯಲ್ಲಿಯೇ ಬಂದನು. ನೋಡಲಾಗಿ ಸಿಪಾಯಿಯುಮೃತನಾಗಿದ್ದನು. ಅವನ ದೇಹವನ್ನೆಲ್ಲಾ ಶೋಧಿಸಲಾಗಿ ಒಂದು ಕಾಗದವು ಸಿಕ್ಕಿತು. ಅದರಲ್ಲಿ ಹೀಗೆ ಬರೆದಿತ್ತು—

ಯುದ್ಧದಲ್ಲಿ ಮರಣೋನ್ಮುಖನಾದೊಬ್ಬನು ಈ ಮಗುವನ್ನು ನನಗೆ ಸಾಕುವುದಕ್ಕಾಗಿ ಕೊಟ್ಟನು. ನಾನು ವೃದ್ಧನಾದ್ದರಿಂದ ನನ್ನ ಸ್ವಳವನ್ನು ಸೇರಬೇಕೆಂದು ಇದ್ದ ನೌಕರಿಯನ್ನು ಬಿಟ್ಟು ಮಗುವನ್ನು ಜತೆಯಲ್ಲಿ ಕರೆದುಕೊಂಡು ಬರುವಾಗ ಮಾರ್ಗದಲ್ಲಿ ಹಸಿವು, ಒಳಲಿಕೆ, ಆಯಾಸ, ಚಳಿ, ಮುಂತಾದುವುಗಳನ್ನು ಸಹಿಸಲಾರದೆ ಈಕುಟೀರವನ್ನು ಕಂಡು ಇಲ್ಲಿಯಾದರೂ ಸ್ವಲ್ಪ ಸಹಾಯದೊರಕೀತೆಂದು ಯೋಚಿಸಿ ಕೂಗಿದೆನು. ಅತ್ತೆನು. ಗೋಳಾಡಿದೆನು. ಏನು ಮಾಡಿದರೂ ಕುಟೀರದ ಬಾಗಿಲು ತೆಗೆಯಲ್ಪಡಲಿಲ್ಲ. ಅದ್ದರಿಂದ ಇಲ್ಲಿ ಬಿದ್ದು ಪ್ರಾಣಬಿಡುವ ಅವಸ್ಥೆಗೆ ಬಂದೆನು" ಎಂದು ಬರೆದಿತ್ತು.

ಕರುಣಾಕರನು ನೋಡಿ ವಿಸ್ಮಯಾವಿಷ್ಟನಾಗಿ ಮಗುವಿನ ನಿಜವಾದ ಸಂಗತಿಯೇನೋ ಗೊತ್ತಾಗಲಿಲ್ಲ. ಬಹುಶಃ ಈ ಮಗುವು ಆ ಸಿಪಾಯಿಯದೇ ಎಂದು ಊಹಿಸಿ ಅತಿ ಪ್ರೇಮದಿಂದ ಸಾಕುತ್ತಾ ಬಂದನು. ರೋಹಿಣಿಯೂ ಕೂಡ ತನ್ನ ಸಾಕು ತಂದೆಯಲ್ಲಿ ಅತ್ಯಂತ ವಿಶ್ವಾಸಯುಳ್ಳವಳಾಗಿಯೂ ವಿಶ್ವಾಸವುಳ್ಳವಳಾಗಿಯೂ ಇದ್ದುದೂ ಅಲ್ಲದೆ ಆ ಪಟ್ಟಣದ ನಿವಾಸಿಗಳೆಲ್ಲರ ಪ್ರೀತಿಗೂ ಪಾತ್ರಳಾಗಿದ್ದಳು. ಹೀಗೆ ರೋಹಿಣಿಯು ಶುಕ್ಲ ಪಕ್ಷದ ಚಂದ್ರಮನಂತೆ ವೃದ್ಧಿಹೊಂದುತ್ತಾ ಮನೆಯ ಕೆಲಸಗಳನ್ನು ಮಾಡಿಕೊಂಡು ತನ್ನ ಸಾಕುತಂದೆಯ ಮತ್ತು ದಯಾಕರನ ಶುಶ್ರೂಷೆಯನ್ನೂ ಮಾಡಿಕೊಂಡು ಎಲ್ಲರಿಗೂ ಬಹಳ ಅಚ್ಚುಮೆಚ್ಚಾಗಿದ್ದಳು. ಹೀಗೆ ಹನ್ನೆರಡು ವರ್ಷಗಳು ಕಳೆದವು.

ಒಂದು ದಿನ ಕರುಣಾಕರನು ರೋಹಿಣಿಯನ್ನು ಕುರಿತು "ಅಮ್ಮಾ ಮಗುವೇ! ಕಲ್ಯಾಣನಗರದಲ್ಲಿರುವ ನಮ್ಮ ಸಹೋದರಿ ಕರುಣಾಂಬಿಗೆ ನೇಹದಲ್ಲಿ ಬಹಳ ಅಲಸ್ಯವೆಂದು ಸಮಾಚಾರ ಬಂದಿದೆ. ಅವಳು ಮುದುಕಿ!

ವಯಸ್ಸಾಯಿತು. ಏನುತಾನೇ ಮಾಡಿಯಾಳು? ಕೆಲವು ಕಾಲದ ನಂತರ ನಿನಗೂ ನಿನ್ನನ್ನು ಅವಳ ಸಮೀಪಕ್ಕೆ ಕಳುಹಿಸಬೇಕೆಂಬ ಇಚ್ಛೆ ಇದೆ. ನಿನ್ನ ಅದೃಷ್ಟದಿಂದ ಆಕೆಗೆ ಆರೋಗ್ಯವಾಗಬೇಕು. ಎಂದು ಹೇಳಿದನು. ಅದಕ್ಕೆ ರೋಹಿಣಿಯು ಕರುಣಾಕರನನ್ನು ಕುರಿತು ಅಪ್ಪಾ! ತಮ್ಮ ಇಷ್ಟದಂತೆಯೇ ನಡೆಯಲು ಸಂತುಷ್ಟಚಿತ್ತಳಾಗಿರುವೆನು. ತಮ್ಮ ಸಹೋದರಿಯರಾದ ಕರುಣಾಂಬೆಯರ ಸೇವೆಯನ್ನು ಮನಃಪೂರ್ವಕವಾಗಿ ಮಾಡುವೆನಾದರೂ ತಮ್ಮನ್ನು ಅಗಲಿ ಹೇಗಿರಲಿ" ಎಂದಳು.

ಅದನ್ನು ಕೇಳಿ ಕರುಣಾಕರನು ಮಗುವೇ! "ನಾನೇ ಜಾಗ್ರತೆಯಾಗಿ ಬಂದು ನಿನ್ನನ್ನು ಕರೆದುಕೊಂಡು ಬರುವೆನು. ನಾನು ಬಂದು ಕರೆದ ಹೊರ್ತು ನೀನು ಮತ್ತಾರ ಸಂಗಡಲೂ ಬರಕೂಡದು" ಎಂದು ಹೇಳಿದನು.

ರೋಹಿಣಿಯು ಆತನ ಮನೋಭಿಪ್ರಾಯವನ್ನು ತಿಳಿಯದೆ ಇದ್ದುದರಿಂದ ಸಂತೋಷದಿಂದ ಪ್ರಯಾಣಸನ್ನದ್ಧಳಾದಳು. ತಂದೆ ಮಗಳಿಬ್ಬರೂ ಪ್ರಯಾಣಮಾಡಿ ಪೂರ್ವದಲ್ಲಿ ಈ ಮಗುವು ಬಿದ್ದಿದ್ದ ಸ್ಥಳವನ್ನು ಕಂಡು ಕರುಣಾಕರನು—"ರೋಹಿಣಿ ಈಗ ಹನ್ನೆರಡು ವರ್ಷಗಳ ಮುಂಚೆ ನೀನು ಈ ಪ್ರದೇಶದಲ್ಲಿ ಬಿದ್ದಿದ್ದೆ" ಎಂದು ಆ ಪ್ರದೇಶವನ್ನು ತೋರಿಸಿದನು. ಅದನ್ನು ಕೇಳಿ ರೋಹಿಣಿಯು ಆ ಪ್ರದೇಶದಲ್ಲಿ ನಿಂತು ಭಗವಂತನ ವ್ಯಾಪಾರವನ್ನು ಕುರಿತು ಆತನನ್ನು ಸ್ತೋತ್ರ ಮಾಡಿದಳು. ಅನಂತರ ಕರುಣಾಕರನ ಕಡೆಗೆ ತಿರುಗಿ ಗದ್ಗದಧ್ವನಿಯಿಂದ ಎಲೈ ತಂದೆಯೇ! "ಈಗ್ಗೆ ಹನ್ನೆರಡು ವರ್ಷಗಳ ಹಿಂದೆ ಈಶ್ವರಾನುಗ್ರಹದಿಂದ ನೀನು ನನ್ನನ್ನು ಕಂಡು ಕಾಪಾಡಿದೆ. ಮತ್ತು ಈಗಲೂ ಕಾಪಾಡುತ್ತಲಿರುವಿ. ನನ್ನ ಸಂರಕ್ಷಣೆಗೋಸ್ಕರ ಜಗದೀಶ್ವರನು ನಿನ್ನನ್ನು ಹೇಗೆ ಕಳುಹಿಸಿದನೋ ಹಾಗೆಯೇ ನಾನು ಈಗ ಮಾಡತಕ್ಕ ಪ್ರಾರ್ಥನೆಯನ್ನು ಕೇಳಿ ಅತನು ನೀನು ಮಾಡಿದ ಉಪಕಾರಕ್ಕೋಸ್ಕರ ದೀರ್ಘಾಯುಸ್ಸನ್ನು ಕೊಟ್ಟು ನಮ್ಮೆಲ್ಲರನ್ನೂ ಸಂರಕ್ಷಿಸಲಿ" ಎಂದು ಪ್ರಾರ್ಥಿಸುತ್ತೇನೆ ಎಂದಳು.

ಈ ಮಾತನ್ನು ಕೇಳಿ ಕರುಣಾಕರನ ಮನಸ್ಸು ಕರಗಿತು. ಆಕೆಯ ತಲೆಯ ಮೇಲೆ ಕೈಯನ್ನಿಟ್ಟು "ಸಕಲ ಪ್ರಾಣಿಗಳನ್ನೂ ಸಂರಕ್ಷಿಸತಕ್ಕವನು ಈಶ್ವರನು. ಆತನ ಸಂಕಲ್ಪಕ್ಕೆ ವಿರೋಧವಾಗಿ ಯಾವುದೂ ನಡೆಯಲಾರದು. ಆತನ ಚಿತ್ತವಿದ್ದಂತೆ ಆಗಲಿ. ನನ್ನ ಆಯುರ್ಮಿತಿ ಎಷ್ಟಿದರೂ ಇರಲಿ. ನಾನೇನೋ ನನ್ನ ಜೀವಮಾನವನ್ನೆಲ್ಲಾ ಭಗವಂತನ ಸೇವೆಯಲ್ಲಿಯೇ ಕಳೆಯಬೇಕೆಂದು ದೃಢ ಪ್ರತಿಜ್ಞೆಯನ್ನು ಮಾಡಿದೇನೆ. ಬಂದುವೇಳೆ ನಾನೇನಾದರೂ ಅಕಾಲಮೃತ್ಯುವಿಗೆ ತುತ್ತಾದರೂ ನಮ್ಮ ಕರುಣಾಂಬೆಯು ನಿನ್ನನ್ನು ಕಾಪಾಡದಿರಳು.

ನಾನು ನಿನಗೆ ವಿದ್ಯೆಯನ್ನು ಕಲಿಸಲಿಲ್ಲ. ಧನವನ್ನು ಕೊಡಲು ಧನಿಕನಾಗಿಲ್ಲ. ಆದರೂ ಈಶ್ವರನಲ್ಲಿ ಭಕ್ತಿಯನ್ನೂ ವಿಶ್ವಾಸವನ್ನೂ ಉಂಟುಮಾಡಿರುವೆನು. ನೀನು ಸುಗುಣಿಯು. ವಿಧೇಯಳು. ಸತ್ಯವ್ರತೆಳು. ನೀನು ಪರಮೇಶ್ವರನನ್ನು ಮಾತ್ರ ಯಾವಾಗಲೂ ಮರೆಯಬೇಡ; ಆತನ ಅನುಗ್ರಹವಿಲ್ಲದೆ ಯಾವ ಪ್ರಾಣಿಯೂ ಭೂಮಿಯಲ್ಲಿ ಬಂದು ನಿಮಿಷವಾದರೂ ಜೀವಿಸಲಾರದು. ಆತನಿಗೆ ಸಮ್ಮತವಾದ ಕೆಲಸವನ್ನೇ ಮಾಡು. ಒಬ್ಬರ ಮನಸ್ಸಿಗೂ ವ್ಯಥೆಯುಂಟಾಗತಕ್ಕ ಮಾತನ್ನು ಆಡಬೇಡ. ಉಪಕಾರಿಯಾಗಿರು. ದೇವರು ನಿನಗೆ ಒಳ್ಳೆಯದನ್ನು ಮಾಡುವನು. ಋಣಾನುಬಂಧವಿದ್ದರೆ ಈ ಲೋಕದಲ್ಲಿ ಇನ್ನೊಂದಾವರ್ತಿ ಒಬ್ಬರನ್ನೊಬ್ಬರು ನೋಡುವೆವು. ಇಲ್ಲದಿದ್ದರೆ ಜಗದೀಶನ ಸನ್ನಿಧಿಯಲ್ಲಿ ನೋಡಲು ಯಾವ ಅಡ್ಡಿಯೂ ಇಲ್ಲ. ಎಂದು ಬುದ್ಧಿ ಹೇಳಿ ಮಗಳನ್ನು ಕಲ್ಯಾಣಪುರಕ್ಕೆ ಸೇರಿಸಿ ಕರುಣಾಂಬೆಯೊಡನೆ ಸಂಗತಿಯೆಲ್ಲವನ್ನೂ ತಿಳಿಸಿ ಕರುಣಾಕರನು ಪುತ್ರೀವಿರಹ ವ್ಯಸನದಿಂದಕೂಡಿ ಆ ದೇಶದ ರಾಜಧಾನಿಯಾದ ಸುವರ್ಣಪುರಕ್ಕೆ ಪ್ರಯಾಣ ಮಾಡಿದನು.

ಪಾಠಕಮಹಾಶಯರೇ ! ದೈವಘಟನೆಯು ವಿಚಿತ್ರವಾದುದು. ಆಹಾ ! ರೋಹಿಣಿಯು ಎಲ್ಲಿ ಹುಟ್ಟಿದಳು ! ಎಲ್ಲಿ ಬೆಳೆದಳು ! ಈಗ ಎಲ್ಲಿರುವಳು ? ಕರುಣಾಕರನಿಗೆ ತನ್ನ ಸಾಕುಮಗಳನ್ನು ತನ್ನ ಸಹೋದರಿಯ ಮನೆಗೆ ಕಳುಹಿಸುವಾಗ್ಯೆ ಉಂಟಾದ ದುಃಖವೇ ಇಂತಿರುವಲ್ಲಿ ಸ್ವಂತ ಹೆಣ್ಣುಮಕ್ಕಳನ್ನು ಪ್ರೀತಿಯಿಂದ ಸಲಹಿ ಮದುವೆ ಮುಂತಾದುವುಗಳನ್ನು ನಡಿಸಿ

ಪತಿಯ ಮನೆಗೆ ಕಳುಹಿಸತಕ್ಕ ಕಾಲದಲ್ಲಿ ಉಂಟಾಗತಕ್ಕ ತಾಯಿತಂದೆಗಳ ವ್ಯಥೆಯು ಎಷ್ಟೋ ಅದನ್ನು ವರ್ಣಿಸಲು ಶಕ್ಯವಲ್ಲ. ಅದನ್ನು ಪ್ರಾಜ್ಞರಾದ ಅನುಭವೈಕವೇದ್ಯರಾದ ಪಾಠಕರಿಗೇ ಬಿಟ್ಟಿರುವೆವು. ಇನ್ನು ಮುಂದೆ ಕರುಣಾಂಬೆಯು ಯಾರು ? ಎಂಬುದನ್ನು ವಿಚಾರ ಮಾಡುವ.

ತೃತೀಯಲಹರಿ.

ವಿದ್ಯಾಭ್ಯಾಸ.

ಕರುಣಾಂಬೆಯು ಒಬ್ಬ ಬಾಲವಿತಂತುವು. ಆಕೆಯು ಸುವರ್ಣಪುರದ ಪುರಾಧ್ಯಕ್ಷನ ಮೂರನೆಯ ಪತ್ನಿಯು. ಪುರಾಧ್ಯಕ್ಷನು ಬಹು ದ್ರವ್ಯವನ್ನೂ, ಯಶಸ್ಸನ್ನೂ, ಸಂಪಾದಿಸಿ ಮೃತಪಟ್ಟನು. ಕೂಡಲೇ ಅತನ ಪ್ರಥಮ ದ್ವಿತೀಯ ಪತ್ನಿಯರ ಪುತ್ರರು ಕರುಣಾಂಬೆಗೆ ಮಾಸಾಶನವನ್ನು ಕೊಟ್ಟು ಕಳುಹಿಸಿಬಿಟ್ಟರು.

ಕರುಣಾಂಬೆಯು ಸುವರ್ಣಪುರದಲ್ಲಿ ವಾಸಿಸಲು ಲಜ್ಜಿತಳಾಗಿ ಕಲ್ಯಾಣಪುರಕ್ಕೆ ಬಂದು ವಾಸಮಾಡಲಾರಂಭಿಸಿದಳು: ಈಕೆಯು ಸುಗುಣಿ ಸದಾಚಾರಸಂಪನ್ನಳು. ಯಾವಾಗಲೂ ಸತ್ಕಾಲಕ್ಷೇಪದಲ್ಲೇ ಕಾಲಯಾಪನೆ ಮಾಡುತ್ತಾ ವಿದ್ಯಾವತಿಯಾಗಿದ್ದುದರಿಂದ ಅನೇಕಗ್ರಂಥಗಳನ್ನು ಪಠನ ಮಾಡಿ ಅದರಿಂದ ತಿಳಿದು ಬಂದ ನೀತಿ ಮಾರ್ಗದಲ್ಲೇ ಸಂಚರಿಸುತ್ತ ಇತರರಿಗೂ ಸನ್ಮಾರ್ಗವನ್ನು ಬೋಧಿಸುತ್ತ ತಪಸ್ವಿಯಂತೆ ಇದ್ದಳು.

ರೋಹಿಣಿಯು ಬಂದ ಸ್ವಲ್ಪ ದಿನಗಳಲ್ಲಿಯೇ ಕರುಣಾಂಬೆಗೆ ಪೂರ್ಣವಾಗಿ ದೇಹಾರೋಗ್ಯವುಂಟಾಯಿತು. ಮನೆಯ ಕೆಲಸಗಳನ್ನು ಎಂದಿನಂತೆ ಮಾಡತೊಡಗಿದಳು. ಆಗ ರೋಹಿಣಿಯೂ ಕೂಡ ತನ್ನ ಪ್ರೇಮದ ಸೋದರತ್ತೆಯ ಸಂಗಡ ಕೆಲಸ ಮಾಡಲುದ್ಯುಕ್ತಳಾದಳು. ಕರುಣಾಂಬೆಯು ಬಹು ಸಂತೋಷಪಟ್ಟು ವಿರಾಮಕಾಲದಲ್ಲೆಲ್ಲಾ ಕಸೂತಿ ಮೊದಲಾದ ಕೈ ಕೆಲಸಗಳನ್ನು ಅಭ್ಯಾಸ ಮಾಡಲಾರಂಭಿಸಿದಳು. ಚತುರೆಯಾದ ರೋಹಿಣಿಯು ಬಹು ಶೀಘ್ರದಲ್ಲಿಯೇ ಕರಕೌಶಲ ವಿದ್ಯೆಗಳಲ್ಲಿ ನಿಪುಣೆಯಾದಳು. ಇದನ್ನು ನೋಡಿದ ಕರುಣಾಂಬೆಯು ರೋಹಿಣಿಗೆ

ವಿದ್ಯಾಭ್ಯಾಸ ಮಾಡಿಸುವುದು ಉತ್ತಮವೆಂದು ಯೋಚಿಸಿ ಒಂದು ದಿವಸ ಮನೆಯ ಕೆಲಸಗಳನ್ನೆಲ್ಲಾ ಮುಗಿಸಿ ವಿರಾಮದಲ್ಲಿರುವಾಗ ರೋಹಿಣಿಯನ್ನು ಕರೆದಳು. ಕೂಡಲೆ ರೋಹಿಣಿಯು ಸಮೀಪಕ್ಕೆ ಬಂದು ನಿಂತು ಏನು ಅತ್ತೆಮ್ಮ ! ಕರೆದಿ ಎಂದು ಕೇಳಿದಳು. ಕರುಣಾಂಬೆಯು ನಿನ್ನನ್ನು ನಾಳೆಯಿಂದ ಪಾಠಶಾಲೆಗೆ ಕಳುಹಬೇಕೆಂದಿರುವೆನು ಎಂದಳು.

ರೋ—ಅದೇತಕ್ಕೆ ?

ಕ—ವಿದ್ಯಾಭ್ಯಾಸಮಾಡುವುದಕ್ಕೆ.

ರೋ—ಮನೆ ಕೆಲಸಗಳನ್ನು ಮಾಡಿಕೊಂಡಿರುವ ಸ್ತ್ರೀಯರಿಗೆ ಓದುಬರಹವೇ ತಕ್ಕೆ ? ನಾವೇನು ಪುರುಷರಂತೆ ನ್ಯಾಯಸ್ಥಾನಗಳಲ್ಲೂ, ಪಾಠಶಾಲೆಗಳಲ್ಲೂ ಕೆಲಸ ಮಾಡಬೇಕೆ ?

ಕ—ಪುರುಷರೇ ವಿದ್ಯೆಯನ್ನು ಕಲಿಯಬೇಕೆಂದೂ ಸ್ತ್ರೀಯರು ಕಲಿಯಬಾರದೆಂದೂ ಜಗದೀಶನ ಸಿದ್ಧಾಂತವಲ್ಲ. ವಿದ್ಯಾಧಿದೇವತೆಯಾದ ಸರಸ್ವತಿಯೇ ಸ್ತ್ರೀಯಲ್ಲವೆ ?

ರೋ—ಅಷ್ಟುಮಾತ್ರಕ್ಕೇ ಸ್ತ್ರೀಯರು ವಿದ್ಯೆಯನ್ನು ಕಲಿಯಬೇಕೋ ?

ಕ—ಅಲ್ಲ. ಆದರಿಂದ ಪತಿಭಕ್ತಿ, ಪೂತಾತ್ಮಿತೃಭಕ್ತಿ, ದೈವಭಕ್ತಿ, ರಾಜಭಕ್ತಿ, ಗುರುಹಿರಿಯರಲ್ಲಿ ಭಕ್ತಿ, ಭೂತದಯೆ, ಇವೆಲ್ಲವೂ ಉಂಟಾಗುವುವು.

ಕ—ಇನ್ನೂ ಇದೆ. ಮುಖ್ಯವಾಗಿ ತಾಯಿಯೇ ಮಕ್ಕಳನ್ನು ಪೋಷಿಸಬೇಕಾದುದರಿಂದಲೂ, ತಾಯಿಯ ಒಳಿಯಲ್ಲಿಯೇ ಮಕ್ಕಳು ತಮ್ಮ ಬಾಲ್ಯಾವಸ್ಥೆಯನ್ನು ಕಳೆಯಬೇಕಾಗಿರುವುದರಿಂದಲೂ, ಸ್ತ್ರೀಯರೆಲ್ಲರೂ ವಿದ್ಯಾವತಿಯರಾಗಿದ್ದರೆ ಒಳ್ಳೆಯದಲ್ಲವೆ ?

ರೋ—ಹಾಗಿದ್ದರೆ ಪೂರ್ವಕಾಲದಲ್ಲಿ ಯಾರಾದರೂ ವಿದ್ಯಾವತಿಯರಾಗಿದ್ದರೋ ?

ಕ—ಅನೇಕ ಮಹಿಳೆಯರು ವಿದ್ಯಾವತಿಯರಾಗಿದ್ದರು. ಅತ್ರಿವಂಶದಲ್ಲಿ ಹುಟ್ಟಿದ ವಿಶ್ವವರೆ, ಅಗಸ್ತ್ಯರ ಪತ್ನಿ ಲೋಪಾಮುದ್ರೆ, ಯಾಜ್ಞವಲ್ಕ್ಯರ ಪತ್ನಿ ಮೈತ್ರೇಯಿ, ಇವರಲ್ಲದೆ ದೇವಹೂತಿ, ಸಂಗಮಿತೆ, ಏನೆ, ಶಕುಂತಲೆ, ರುಕ್ಮಿಣಿ, ಸತ್ಯಭಾಮೆ, ಚಂದ್ರಮತಿ ಮೊದಲಾದವರು ವಿದ್ಯಾಸಿಧಿಗಳಾಗಿದ್ದರು.

ರೋ—ಈಗ ಇವರಲ್ಲಿ ಯಾರಾದರೂ ಇರುವರೋ ?

ಕ—ಇಲ್ಲ. ಇವರುಗಳೆಲ್ಲಾ ಪೂರ್ವಯುಗಗಳಲ್ಲಿ ಇದ್ದ ಮಹಿಳೆಯರು.

ರೋ—ಯಾಗಾದರೆ ಈ ಯುಗದಲ್ಲಿ ಯಾರೂ ಇಲ್ಲವೆ?

ಕ—ಭಾರತಿ, ಲೀಲಾವತಿ, ಸರೋಜಿನಿ, ಸುಬಾಲೆ, ಸೂರ್ಯವತಿ, ಶೀಲವತಿ ಮೊದಲಾದವರು ಈ ಯುಗದವರು. ಇವರೂ ಕೂಡ ಪರಲೋಕಯಾತ್ರೆಯನ್ನು ಮಾಡಿದ್ದರೂ, ಅವರಿಂದ ರಚಿಸಲ್ಪಟ್ಟ ಅನೇಕ ಗ್ರಂಥಗಳು ಅವರ ಪ್ರಸಿದ್ಧಿಗೆ ಕಾರಣವಾಗಿವೆ.

ರೋ—ಅತ್ತೆಮ್ಮ! ಅವುಗಳಾವುವು.

ಕ—ಪೂರ್ವಯುಗದ ಮಹಿಳೆಯರು ರಚಿಸಿರತಕ್ಕ ಗ್ರಂಥಗಳನ್ನು ಹೇಳಲೋ? ಅಥವಾ ಈ ಯುಗದ ಮಹಿಳೆಯರಿಂದ ರಚಿಸಲ್ಪಟ್ಟ ಗ್ರಂಥಗಳನ್ನು ಹೇಳಲೋ?

ರೋ—ಎಲ್ಲವನ್ನೂ ಹೇಳೆ.

ಕ—ವಿಶ್ವವರೆಯು ಋಗ್ವೇದದ ಐದನೆ ಮಂಡಲದಲ್ಲಿ 28 ನೆಯ ಸೂಕ್ತವನ್ನೂ, ಲೋಪಾಮುದ್ರಾದೇವಿಯು ಋಗ್ವೇದದಲ್ಲಿ 179 ನೆಯ ಸೂಕ್ತವನ್ನೂ ರಚಿಸುವರು. ಮೈತ್ರೇಯಿಯು ಮಿತ್ರರಾಜನ ವೇದಪಾಠಶಾಲೆಯದಲ್ಲಿ ಉಪಾಧ್ಯಾಯಿನಿಯಾಗಿದ್ದಳು, ದೇವಹೂತಿ ಯೆಂಬುವಳು ಕಪಿಲಮುನಿಯ ತಾಯಿಯು. ಈಕೆಯೇ ಮೊದಲು ತನ್ನ ಮಗನಿಗೆ ವಿದ್ಯಾಭ್ಯಾಸವನ್ನು ಮಾಡಿಸಿ ದರ್ಶನಶಾಸ್ತ್ರವನ್ನು ಪ್ರಚುರಪಡಿಸುವುದಕ್ಕೆ ಉತ್ತೇಜನ ಕೊಟ್ಟಳು. ಸಂಗಮಿತೆಯು ಸಿಂಹಳದ್ವೀಪಕ್ಕೆ ಹೋಗಿ ಬೌದ್ಧ ಮತಧರ್ಮಗಳನ್ನು ಬೋಧಿಸಿ ಅನೇಕರು ಬೌದ್ಧಮತವನ್ನವಲಂಬಿಸುವಂತೆ ಮಾಡಿದಳು. ವಿಕ್ರಮಾದಿತ್ಯರಾಯನ ಸಭೆಯ ಮಹಾಪಂಡಿತನೊಬ್ಬನ ಕುವರಿಯಾದ ಖನೆಯು ಜ್ಯೋತಿಷಶಾಸ್ತ್ರವನ್ನು ಅಭ್ಯಾಸಮಾಡಿ ಲೋಕೋಪಕಾರಮಾಡಿರುವಳು. ಶಕುಂತಲಾದೇವಿಯು ರಾಜನಾದ ದುಷ್ಯಂತಮಹಾರಾಜನಿಗೆ ಬರೆದ ಪತ್ರಿಕೆಯಿಂದಲೇ ಅಕೆಯು ವಿದ್ಯಾವತಿಯಾಗಿದ್ದಳೆಂಬುದು ವ್ಯಕ್ತಪಡಿಸುವುದು. ರುಕ್ಮಿಣೀದೇವಿಯು ತನ್ನ ತಂದೆಯು ತನ್ನನ್ನು ದುಷ್ಟನಾದ ಶಿಶುಪಾಲನಿಗೆ ಕೊಟ್ಟು ವಿವಾಹವನ್ನು ಮಾಡಬೇಕೆಂದಿದ್ದ ಸಂಗತಿಯನ್ನು ಪತ್ರಮುಖೇನ ಬ್ರಾಹ್ಮಣನ ಮೂಲಕ ಶ್ರೀಕೃಷ್ಣಪರಮಾತ್ಮನಿಗೆ ತಿಳಿಸಲಿಲ್ಲವೆ? ಸತ್ಯಭಾಮೆ, ಚಂದ್ರಮತಿ ಮೊದಲಾದವರೂ ಕೂಡ ಹೀಗೆಯೇ.

ಕಲಿಯುಗದಲ್ಲಾದರೋ ಮಂಡಮಿಶ್ರನ ಪತ್ನಿಯಾದ ಭಾರತೀದೇವಿಯು ತನ್ನ ಗಂಡನಿಗೂ ಶ್ರೀಮಚ್ಛಂಕರಭಗವತ್ಪಾದಾಚಾರ್ಯರವರಿಗೂ ನಡೆದ ವಾದದಲ್ಲಿ ಮಾಧ್ಯಸ್ಥವನ್ನು ವಹಿಸಿರಲಿಲ್ಲವೆ? ಭಾಸ್ಕರಾಚಾರ್ಯರವರ ಕುವರಿಯಾದ ಲೀಲಾವತಿಯು ಗಣಿತಶಾಸ್ತ್ರದಲ್ಲಿ ನಿಪುಣೆಯಾಗಿ ಲೀಲಾವತಿಯೆಂಬ ಗ್ರಂಥವನ್ನು ರಚಿಸಿರುವಳು. ಹೀಗೆಯೇ ಎಷ್ಟೋಮಂದಿ ಮಹಿಳೆಯರು ವಿದ್ಯಾವತಿಯರಾಗಿದ್ದರು.

ರೋ—ಅವರಂತೆಯೇ ನಾವೂ ಅಭ್ಯಾಸಮಾಡಲು ಆಗುವುದೇ ? ಏನೋ ಸ್ವಲ್ಪ ಓದುಬರಹವನ್ನು ಕಲಿತರೆ ಸಾಲದೆ ?

ಕ—ಹಾಗಾದರೆ ನೀನು ನಾಳೆಯಿಂದ ಪಾಠಶಾಲೆಗೆ ಹೋಗುವಿಯೋ ?

ರೋ—ಸ್ವಲ್ಪ ಕಲಿಯುವುದಕ್ಕೂ ಕೂಡ ಪಾಠಶಾಲೆಗೇ ಹೋಗಬೇಕೆ ? ಮನೆಯಲ್ಲಿ ಓದುಕೊಳ್ಳಲಾಗುವುದಿಲ್ಲವೆ ?

ಕ—ಪಾಠಶಾಲೆಯಲ್ಲಿರತಕ್ಕ ಅನುಕೂಲಗಳು ಮನೆಯಲ್ಲಿಲ್ಲದ್ದರಿಂದ ಸುಲಭವಾಗಿಯೂ ಜಾಗ್ರತೆಯಾಗಿಯೂ ಕಲಿಯಲು ಅವಕಾಶವಿಲ್ಲ.

ರೋ—ಪಾಠಶಾಲೆಯಲ್ಲಿರತಕ್ಕ ಅನುಕೂಲಗಳೇನು ?

ಕ—ಸರ್ಕಾರದವರು ಯೋಗ್ಯರಾದ ಉಪಾಧ್ಯಾಯರನ್ನು ನಿಯಮಿಸಿ ಸುಲಭವಾಗಿ ವಿದ್ಯೆಯನ್ನು ಕಲಿಸಲು ಅನುಕೂಲವಾದ ಸಲಕರಣೆಗಳನ್ನು ಕಲ್ಪಿಸಿರುವರು. ಅಲ್ಲದೆ ಅನೇಕರು ಅಲ್ಲಿ ವಿದ್ಯಾಭ್ಯಾಸಮಾಡುತ್ತಿರುವರು. ಆದುದರಿಂದ ಅಮೂಲ್ಯವಾದ ವಿದ್ಯೆಯನ್ನು ಕಲಿಯಲು ಪಾಠಶಾಲೆಗೆ ಹೋಗುವುದು ಒಳ್ಳೆಯದು.

ರೋ—ವಿದ್ಯೆಯು ಅಮೂಲ್ಯವಾದದ್ದೆಂದು ಹೇಳಿಬೆಯಲ್ಲ. ಅದು ಹೇಗೆ ?

ಕ—ಅದನ್ನು ವಿವರಿಸಿ ಹೇಳಬೇಕಾದರೆ ಅನೇಕ ದಿನಗಳು ಬಿಡಿಯುವುವು.

ರೋ—ಅತ್ತೆಮ್ಮ ! ಜರ್ಜಿಸಿದುದಕ್ಕಾಗಿ ಆಜ್ಞಳಾದ ನನ್ನ ತಪ್ಪನ್ನು ಕ್ಷಮಿಸಬೇಕು. ಎಂದು ನಮಸ್ಕಾರಮಾಡಿದಳು. ಅದನ್ನು ನೋಡಿ ಕರುಣಾಂಬೆಯು ಮಗೂ ! ರೋಹಿಣಿ ! ನೀನು ತಿಳಿದುಕೊಳ್ಳುವುದಕ್ಕಾಗಿ ಇಷ್ಟು ವಿಚಾರ ಮಾಡಿದುದು ಬಹಳ ಒಳ್ಳೆಯದೇಆಯಿತು. ಎಂದು ಹೇಳಿ ಆಕೆಯನ್ನು ಆಲಂಗಿಸಿದಳು ಮತ್ತೆ ರೋಹಿಣಿಯನ್ನು ಕುರಿತು ಮಗೂ ! ನೀನು ನಾಳೆಯಿಂದ ಪಾಠಶಾಲೆಗೆ ಹೋಗುವಿಯೋ ?ಎಂದು ಪ್ರಶ್ನಿಸಲು ರೋಹಿಣಿಯು ಬಹು ನಮ್ರತೆಯಿಂದ ಅತ್ತೆ ! ತಂದೆಯು ಇದುವರೆಗೆ ನನ್ನನ್ನು ಶಾಲೆಗೇತಕ್ಕೆ ಕಳುಹಿಸಲಿಲ್ಲ ಎಂದು ಕೇಳಿದಳು.

ಕ—ಮಗೂ ! ನಿಮ್ಮ ತಂದೆಯು ಇದ್ದ ಊರು ಬಹಳ ಸಣ್ಣದು. ಅಲ್ಲಿ ಪಾಠಶಾಲೆಯಿಲ್ಲ.

ಕರುಣಾಂಬೆಯ ಮಾತಿನಂತೆ ರೋಹಿಣಿಯು ಮಾರನೆಯದಿನದಿಂದ ಪಾಠಶಾಲೆಗೆ ಹೋಗಲಾರಂಭಿಸಿದಳು.

ಲೋಕದಲ್ಲಿ ತಿಳಿಯದವನಿಗೆ ಸುಲಭವಾಗಿ ತಿಳಿಸಬಹುದು. ತಿಳಿದವನಿಗೆ ಇನ್ನೂ ಸುಲಭವಾಗಿ ತಿಳಿಸಬಹುದು. ತಿಳಿದೂ ತಿಳಿಯದ ಮೂರ್ಖನಿಗೆ ತಿಳಿಸಲು ಬ್ರಹ್ಮನಿಗೂ ಕೂಡ ಅಸಾಧ್ಯವು. ಎಂಬ ಭರ್ತೃಹರಿಯ ನುಡಿಯಂತೆ ನಮ್ಮ ರೋಹಿ

ಣಿಗೆ ತೀಸುವುದು ಅತಿ ಸುಲಭ. ಅವಳಾದರೋ ಅತಿ ಚತುರೆ, ಕುಶಲಮತಿ, ಇಂಥವಳಿಗೆ ಜಾಗ್ರತೆಯಾಗಿ ವಿದ್ಯೆಯು ಒರಲು ಅಭ್ಯಂತರವೇನಿರುವುದು ! ಆವಳು ಶಾಲೆಗೆ ಹೋದ ಸ್ವಲ್ಪ ಕಾಲದಲ್ಲಿಯೇ ಓದಿ ಬರೆವುದರಲ್ಲೂ ಗಣಿತದಲ್ಲೂ ಬುದ್ಧಿಮತಿಯಾದಳು. ಆಗ ಸುಂದರಯಾದ ರೋಹಿಣಿಗೆ 16 ವರ್ಷಗಳು ತುಂಬಿದವು. ಕರುಣಾಂಬೆಯು ಅವಳ ಸೌಂದರ್ಯವನ್ನೂ ಅವಳ ಜಾಣ್ಮೆಯನ್ನು ನೋಡಿ ಹಿಗ್ಗುತಲಿದ್ದಳು. ವಾಚಕರೇ ಇನ್ನು ಕರುಣಾಕರ ದಯಾಕರ ವೃತ್ತಾಂತವನ್ನು ವಿವರಿಸುವೆವು ಇತ್ತಬನ್ನಿ.

ಚತುರ್ಥಲಹರಿ.

ಲೋಕದಲ್ಲಿ ರಸಿಕಜನರು ಸಾಮಾನ್ಯವಾಗಿ ಪಚ್ಚಕರ್ಪೂರ ಮುಂತಾದ ವಾಸನಾದ್ರವ್ಯಗಳಿಂದ ಮಿಶ್ರಿತವಾದ ದಿವ್ಯಸುಗಂಧಾನುಲೇಪನದಲ್ಲಿಯೂ ವಿವಿಧ ವಿಹಾರಗಳಲ್ಲಿಯೂ, ನವನವಪದಾರ್ಥದರ್ಶನದಲ್ಲೂ ಉತ್ಸುಕರಾಗಿರುವರೇ ವಿನಾ —ದುಃಖಕಷ್ಟಗಳನ್ನ ಸುಳಿವಿಸಲಾರರು. ಜಳಗಾಲಪ್ರಾಪ್ತವಾದರೆ ರಾತ್ರಿಕಾಲದಲ್ಲಿ ಕಂಬಳಿಗಳನ್ನು ಹೊದೆದುಕೊಳ್ಳುವುದರಲ್ಲಿಯೂ, ಬನಾತಿನ ಅಂಗಿಗಳನ್ನು ತೊಟ್ಟುಕೊಳ್ಳುವುದರಲ್ಲಿಯೂ, ಕಸ್ತೂರಿಯ ಜಲದಿಂದ ಸುವಾಸಿತವಾದ ಆಡಿಕೆಯೂ, ಹಂದ್ರಬಿ ಬದಂತೆ ಘಳಘಳಿಸುವ ವೀಳೆಯದೆಲೆಯೂ, ಶುಭ್ರವಾದ ಸುಣ್ಣವೂ ಇವುಗಳಿಂದ ರಂಜಿತವಾಗಿ ಕಾಂತಾಕರದಿಂದ ಅರ್ಪಿತವಾದ ತಾಂಬೂಲವನ್ನು ಸೇವಿಸುವುದರಲ್ಲಿ ಆಸಕ್ತರಾಗಿಯೂ, ಧೂಪವಿಲ್ಲದೆ ಜ್ವಲಿಸುವ ಕೆಂಜಗಳಿಂದ ತುಂಬಿರುವ ಅಗ್ಗಿಷ್ಟಿಕೆಯ ಸೇವನೆಯಲ್ಲಿಯೂ, ವಿಶಾಲವಾದ ವಟವೃಕ್ಷಚ್ಛಾಯೆಯಲ್ಲಿ ವಿಹರಿಸುವುದರಲ್ಲಿಯೂ, ಶುಭ್ರವಾದ ಜಲದಲ್ಲಿ ಸ್ನಾನಮಾಡುವುದರಲ್ಲಿಯೂ, ವಿನೋದವ್ಯಾಪಾರಗಳಲ್ಲಿಯೂ ಆಶೆಯುಳ್ಳವರಾಗಿರುವರು. ಆ ಕಾಲದಲ್ಲಿ ಪಕ್ಷಿಗಳು ತಮ್ಮತಮ್ಮ ಗೂಡುಗಳಿಂದ ವಿಶೇಷವಾಗಿ ಹೊರಗೆ ಹೊರಡದೆ ತಮ್ಮತಮ್ಮ ಮರಿಗಳನ್ನು ರೆಕ್ಕೆಗಳಲ್ಲಿ ಮುಚ್ಚಿಕ್ಕೊಂಡಿರುವುವು. ಗದ್ದೆಗಳಲ್ಲಿ ಭತ್ತದ ಪೈರುಗಳು ಸುವರ್ಣವರ್ಣದ ತೆನೆಗಳಿಂದ ಭೂಮಿಗೆ ಬಾಗಿರುವುವು. ವಸಂತಕಾಲದಲ್ಲಿ ಪಥಿಕರ ಶ್ರಮಪರಿಹಾರಕ್ಕಾಗಿ ಧರ್ಮಾತ್ಮರಿಂದ ಇಡಲ್ಪಟ್ಟಿದ್ದ ಅರವಟ್ಟಿಗೆಗಳು ಈಗ ಶೂನ್ಯವಾಗಿರುವುವು. ಉಷಃಕಾಲದಲ್ಲೆದ್ದು ನದಿಯಲ್ಲಿ ಸ್ನಾನಮಾಡಿ ಮೇಲಕ್ಕೆ ಬರುವ ತಾಪಸರ ತುಟಿಗಳು ಶೀತದಿಂದ ಗಡಗಡನೆ ನಡುಗುವುದನ್ನು ನೋಡಿದರೆ ಇಂತಹ ಉಪದ್ರವಕರವಾದ ಈ ಕಾಲವು ಶೀಘ್ರವಾಗಿ ತೊಲಗಿಹೋಗಲಿ ಎಂದು ಶಪಿಸುವಂತೆ ತಾಣುವುವು. ಪೃಕ್ಷಗಳನ್ನು ನೋಡಿದರೆ ಸದ್ಗುರುವಿನಂತಿರುವ

ವಾಯುವಿನ ಸಹಾಯದಿಂದ ಸಂಚಿತಕರ್ಮಗಳಂತಿರುವ ಎಲ್ಲಾ ಪತ್ರಗಳನ್ನೂ ದೂರ ಮಾಡಿ ನಿರ್ಲಿಪ್ತನಂತೆ ನಿರ್ವಾಣವನ್ನು ಹೊಂದಿದಂತೆ ತೋರುವುವು. ಮೃಗಗಳು ಕಾಡಿನಲ್ಲಿ ಬೆಳೆದಿರುವ ತೃಣಗಳನ್ನು ಯಥೇಚ್ಛವಾಗಿ ಉಪಯೋಗಿಸಿಕೊಂಡು ತೃಪ್ತಾಶಾಬದ್ಧರಾಗಿರುವ ಕೃಪಣರ ಲೋಭದಂತೆ ನಿರಂಕುಶಗಳಾಗಿದ್ದವು. ಕೋಗಿಲೆಗಳು ಈ ಕಾಲವು ತೊಲಗಿ ವಸಂತಕಾಲವು ಬಂದು ವೃಕ್ಷಗಳೆಲ್ಲವೂ ಚಿಗುರುವವರೆಗೂ ತಾವು ಅಧರಸ್ಪಂದ ಮಾಡಬಾರದೆಂದು ನಿಯಮವನ್ನು ಮಾಡಿಕೊಂಡಿರುವಂತೆ ಮೌನವಾಗಿದ್ದವು. ಕಾಗೆಗಳು ತಮ್ಮ ಗೂಡಿನಲ್ಲಿ ತಮ್ಮ ತತ್ತಿಗಳೊಡನೆ ಕೋಗಿಲೆಗಳು ತಂದು ಇಟ್ಟ ಮೊಟ್ಟೆಗಳನ್ನೂ ಕೂಡ ತಮ್ಮವುಗಳೇ ಎಂಬ ಭ್ರಾಂತಿಯಿಂದ ಅವುಗಳಮೇಲೆ ಕುಳಿತು ಪ್ರೀತಿಯಿಂದ ಮರಿಗಳನ್ನು ಮಾಡುತಲಿದ್ದವು. ದರಿದ್ರರ ಗೃಹಗಳ ಭಿತ್ತಿಗಳಲ್ಲಿರುವ ತಿಗುಣೆಗಳು ಮೊದಲು ಮನುಷ್ಯರ ಶರೀರಗಳನ್ನು ಕಚ್ಚಿ ರಕ್ತಪಾನವಮಾಡುತ್ತಿದ್ದ ದುರ್ಗುಣವನ್ನು ಬಿಟ್ಟು ಸಜ್ಜನರ ಹಾಗೆ ಪರಿಪಿಂಸೆಯನ್ನು ಮಾಡದೆ ಮುನ್ನ ಮಾಡಿದ ಪಾಪವು ಕಳೆಯಲಿ ಎಂದು ಉಪವಾಸವ್ರತದಿಂದ ಕೃಶವಾಗಿವೆಯೋ ಎಂಬಂತೆ ಚರ್ಮಮಾತ್ರದಿಂದ ಪ್ರಾಣವನ್ನಿಟ್ಟುಕ್ಕೊಂಡಿರುವುವು. ಲೋಕಕ್ಕೆಲ್ಲಾ ತೇಜಸ್ಸನ್ನೂ ಔಷ್ಣ್ಯವನ್ನೂ ದಯಪಾಲಿಸತಕ್ಕ ಸೂರ್ಯದೇವನು ಸೌಮ್ಯನಾಗಿ ಹಿಮಕರನಂತಿರುವನು. ಸಂಚಾರಕ್ಕೆ ಮಧ್ಯಾಹ್ನವೇಳೆಯು ಅತಿ ರಮ್ಯವಾಗಿರುವುದು. ನಿಶೆಯಲ್ಲಿ ನಿಶಾಕಾಂತನು ಹಿಮಾವೃತನಾಗಿ ಕಳೆಗುಂದಿರುವನು. ಪಡುವಣ ಗಾಳಿಯು ಶೀತಲವಾಗಿ ಬೀಸುತಲಿರುವುದು. ಧರಣಿಯು ಎಲ್ಲಿನೋಡಿದರೂ ಪೈರುಪಚ್ಚೆಗಳಿಂದ ತುಂಬಿತುಳುಕಿ ಆಹ್ಲಾದಕರವಾಗಿರುವುದು. ಚಾಡಿಕಾರರ ಮಾತಿಗೆ ಕಿವಿಗೊಡುವ ಪೃಥ್ವೀಪಾಲನ ಸಿರಿಯಂತೆಯೂ ಉತ್ತಮವಾದ ಸ್ತ್ರೀಪುರುಷರ ಕೋಪದಂತೆಯೂ ಹಗಲು ಬೇಗ ತೊಲಗುತಲಿರುವುದು. ಕ್ಷಿತಿಪತಿಲ್ಲರೂ ತಮ್ಮ ಸೈರಿಗಳಮೇಲೆ ಜತುರಂಗಸೇನಾಸಮೇತರಾಗಿ ಕದನಕ್ಕೆ ತೆರಳುವರು. ವಿಪಿನಗಳಲ್ಲಿ ಹಸ್ತಿಗಳು ಜಳಯನ್ನು ತಾಳಲಾರದೆ ತಮ್ಮತಮ್ಮ ಸೊಂಡಲುಗಳನ್ನು ಬಾಯಲ್ಲಿ ಮುಚ್ಚಿಕೊಂಡು ಶೀತಳವಾದ ಜಲವನ್ನು ನೀರಡಿಕೆಯಾವಾಗ್ಯೂ ಕುಡಿಯಲಾರದೆ ಬಳಲುತಲಿರುವುವು. ವನಾವಳಿಗಳು ಪೂಗಳೆಲ್ಲದೆ ಮಲಗಿ ನಿದ್ರೆಹೋಗುತ್ತಿವೆಯೋ ಎಂಬಂತಿರುವುವು.

ಇಂತಹ ಶೈತ್ಯಕಾಲದಲ್ಲಿ ಒಂದಾನೊಂದು ದಿನ ಸಚ್ಚಿದಾನಂದನು ಅಗ್ನಿಷ್ಟಿಕೆಯಲ್ಲಿ ಬೆಂಕಿಯನ್ನು ಕಾಯಿಸಿಕೊಳ್ಳುತಲಿದ್ದನು. ಈತನ ವಾಸಸ್ಥಳವು ಸುವರ್ಣಪುರಕ್ಕೆ ಅನತಿದೂರದಲ್ಲಿರುವ ಪದ್ಮಪುರ ಎಂಬುವುದೊಂದು ಸಣ್ಣ ಗ್ರಾಮ. ಈತನು ಪೂರ್ವದಲ್ಲಿ ಕೇರಳದೇಶದವನು. ಬಾಲ್ಯದಲ್ಲಿಯೇ ಮಾತಾಪಿತೃಗಳ ಏಯೋಗವನ್ನು

ಹೊಂದಿ ಕಡುತರವಾದ ಕಷ್ಟಗಳನ್ನನುಭವಿಸಿ ಕೊನೆಗೆ ಈ ಪದ್ಮಪುರಗ್ರಾಮಕ್ಕೆ ಬಂದು ಅಲ್ಲಿಯ ಜನರ ಅನುರಾಗಕ್ಕೆ ಪಾತ್ರನಾಗಿ ಅಲ್ಲಿ ವಾಸಿಸುತ್ತಿದ್ದನು. ಈತನು ವೇದಾಧ್ಯಯನ ಸಂಪನ್ನನು. ಸದಾಚಾರಶೀಲನು. ಕರ್ಮಠನು. ದಾನಶೀಲನು. ಸತ್ಯವಂತನು. ಬಹು ದರಿದ್ರಾವಸ್ಥೆಯಲ್ಲಿದ್ದ ಈತನು ಬಹುದಿವಸದಮೇಲೆ ಸತ್ಕುಲಪ್ರಸೂತೆಯೂ, ಸದಾಚಾರಸಂಪನ್ನಳೂ, ರೂಪವತಿಯೂ ಆದ ವಿಮಲಾಂಬೆಯೆಂಬ ಕನ್ಯಾರತ್ನವನ್ನು ವಿವಾಹಮಾಡಿಕೊಂಡು ಗೃಹಸ್ಥನಾಗಿ ಆ ಗ್ರಾಮದ ಜನರಿಂದ ಲಭಿಸಿದ ದ್ರವ್ಯದಿಂದಲೇ ಕಾಲಯಾಪನೆಮಾಡುತಲಿದ್ದನು. ಬಹುದಿವಸವಾದಾಗ್ಯೂ ಈ ದಂಪತಿಗಳಿಗೆ ಸಂತಾನವುಂಟಾಗಲಿಲ್ಲ. ಇದು ತಮ್ಮ ಪೂರ್ವಾರ್ಜಿತಪಾಪವೆಂದೂಹಿಸಿ ಇದಕ್ಕೆ ಪುಣ್ಯತೀರ್ಥಸ್ನಾನ, ಮತ್ತು ಭಗವತ್ಸೇವೆಯೇ ಪರಿಹಾರವೆಂದು ಯೋಚಿಸಿ ಸಕಲ ಪುಣ್ಯತೀರ್ಥಗಳಲ್ಲಿಯೂ ಮಿಂದು ಸಕಲ ಕ್ಷೇತ್ರಗಳಲ್ಲಿಯೂ ಭಗವಂತನ ಪಾದಸೇವೆಯನ್ನು ಪರಮಭಕ್ತಿಯಿಂದ ಮಾಡತೊಡಗಿದರು, ಕೂಡಲೆ ಮಾಡಿದ್ದ ದುಷ್ಕೃತ್ಯಗಳು ತೊಲಗಿದವೋ ಎಂಬಂತೆ ವಿಮಲಾಂಬೆಯು ಈರ್ವರು ಪುತ್ರರನ್ನೂ ಓರ್ವ ಪುತ್ರಿಯನ್ನೂ ಪಡೆದು ಮಕ್ಕಳ ಆಟಪಾಟಗಳನ್ನು ನೋಡುವೆಯೇ ಸ್ವಾಮಿ ಪಾದಾರವಿಂದವನ್ನು ಸೇರಿದಳು. ಪತ್ನಿವಿಯೋಗನಾದ ಸಚ್ಚಿದಾನಂದನು ಮಕ್ಕಳ ಅಭಿವೃದ್ಧಿಯನ್ನೇ ಮುಖ್ಯವಾಗಿಟ್ಟುಕೊಂಡು ಪತ್ನಿಯ ದುಃಖವನ್ನು ತೊರೆದು ಜೇಷ್ಠ ಪುತ್ರನಿಗೆ ಕರುಣಾಕರನೆಂದೂ ಕನಿಷ್ಠನಿಗೆ ದಯಾಕರನೆಂದೂ ಕುವರಿಗೆ ಕರುಣಾಂಬೆಯೆಂದೂ ನಾಮಕರಣಗಳನ್ನು ಮಾಡಿ ಮಾತೃವಿಯೋಗರಾದ ಮಕ್ಕಳಿಗೆಸದಂತೆ ಸಂರಕ್ಷಿಸುತ್ತಲಿದ್ದನು. ತಾನು ದರಿದ್ರನಾಗಿದ್ದಾಗ್ಯೂ ತನ್ನ ಇಬ್ಬರು ಮಕ್ಕಳನ್ನೂ ಒಂದೇಸಮನಾಗಿ ವಿದ್ಯಾವಂತರನ್ನಾಗಿ ಮಾಡಬೇಕೆಂಬ ಕುತೂಹಲವು ಇವನಿಗೆ ಬಹಳವಾಗಿದ್ದಿತಾದರೂ ದ್ರವ್ಯಸಹಾಯವಿಲ್ಲದ್ದರಿಂದ ಚಿಂತಾಬ್ಧಿಯಲ್ಲಿ ಮುಳುಗಿದ್ದನು.

ಇತ್ತ ಸುವರ್ಣಪುರದ ಪುರಾಧ್ಯಕ್ಷನ ದ್ವಿತೀಯಪತ್ನಿಯು ಲೋಕಾಂತರವನ್ನೈದಿದಳು. ಸೌಂದರ್ಯ, ಸುಗುಣ, ವಿವೇಕದಲ್ಲಿ ಬುದ್ಧಿಮತಿಯಾಗಿ ಕರುಣಾಂಬೆಯು ಹೆಚ್ಚು ಹುಣ ಇರುವುದನ್ನು ಆ ಪುರಾಧ್ಯಕ್ಷನು ಕೇಳಿ ತನಗೆ ಆ ಕನ್ಯೆಯನ್ನು ಕೊಟ್ಟರೆ ಬಹಳವಾಗಿ ಧನ ಕೊಡುವುದಾಗಿ ಹೇಳಿಸಿದನು. ಇದನ್ನು ಕೇಳಿ ಸಚ್ಚಿದಾನಂದನು ಬಹು ದುಃಖಿತನಾಗಿ ಮನಸ್ಸಿನಲ್ಲಿ ಇಷ್ಟವಿಲ್ಲದಿದ್ದರೂ ತನ್ನ ಗಂಡಮಕ್ಕಳ ವಿದ್ಯಾಭಿವೃದ್ಧಿಗೋಸ್ಕರವಾದರೂ ಇದು ಒಂದುಪಕ್ಷ ಅನುಕೂಲವೆಂದೂ ಯೋಚಿಸಿ ಮಗಳನ್ನು ಕೊಡಲೊಪ್ಪಿದನು. ಬಹಳ ವಿಜೃಂಭಣೆಯಿಂದ ಕರುಣಾಂಬೆಗೂ ಸುವರ್ಣಪುರದ ಪುರಾಧ್ಯಕ್ಷನಿಗೂ ವಿವಾಹವು ನೆರವೇರಿತು. ಸಚ್ಚಿದಾನಂದನಿಗೆ ಅಪಾರವಾದ ದ್ರವ್ಯವೂ ಲಭಿಸಿತು.

ಎಲೌ! ಲಕ್ಷ್ಮೀದೇವಿಯೇ! ನಿನ್ನ ಅನುಗ್ರಹವೊಂದಿದ್ದರೆ ಎಂಥವನಾದರೂ ಸತ್ಕುಲಪ್ರಸೂತನೂ, ರೂಪವಂತನೂ, ವಿದ್ಯಾವಂತನೂ, ವಾಚಾಳಿಯೂ, ಸದ್ಗುಣಿಯೂ, ಆಗುವನು. ನಿನ್ನ ಕಟಾಕ್ಷಮಾತ್ರದಿಂದಲೇ ಎಲ್ಲ ಜನರೂ ಮಿತ್ರರೂ, ಬಂಧುಗಳೂ, ಆಗುವರು; ನೀನು ಮಾಡಬಾರದ ಕೆಲಸಗಳನ್ನೂ ಕೂಡ ಮಾಡಿಸಿಬಿಡುವೆ. ಇಷ್ಟೇ ಅಲ್ಲ. ನೀನು ಮಾತಾಪಿತೃಗಳನ್ನೂ, ಭ್ರಾತೃಗಳನ್ನೂ, ಬಂಧು, ಮಿತ್ರರನ್ನೂ ಕ್ಷಣಮಾತ್ರದಲ್ಲೇ ಅಗಲಿಸುವೆ. ಪುನಃ ಸೇರಿಸುವೆ. ಹೇ! ಧನಮಾತೆ! ನಿನ್ನ ಶಕ್ತಿಯು ಅಪಾರವಾದುದು. ನೀನು ವಿಮುಖಳಾದರೆ ಅಗ್ನಿ ಸಾಕ್ಷಿಯಾಗಿಯೂ, ಪಾಣಿಗ್ರಹಣಮಾಡಿಕೊಂಡು ಅರ್ಧಾಂಗಿಯೆನ್ನಿಸಿಕೊಂಡಿರುವ ಸತಿಯೂ ಕೂಡ ಜರಿಯುವಳು! ಮುಖ್ಯವಾಗಿ ಲೋಕವೆಲ್ಲವೂ ನಿನ್ನ ದಯದಿಂದಲೇ ನಿಂತಿರುವುದು. ನೀನು ಮುನಿದರೆ ಲೋಕವೇ ನಾಶವಾಗುವುದು. ಹೇ! ಜಂಜಲಸ್ವರೂಪಳೇ ನಿನಗೆ ಅನೇಕ ನಮಸ್ಕಾರಗಳಿರಲಿ! ನಮ್ಮನ್ನು ಅನುಗ್ರಹಿಸು. ಪ್ರಕೃತಸಚ್ಚಿದಾನಂದನೂ ಕೂಡ ನಿನ್ನ ಕಟಾಕ್ಷಸಂಪಾದನೆಗಾಗಿ ಮಾತೃನಿರ್ವಿಶೇಷನಾದ ತನ್ನ ಮುದ್ದುಕುವರಿಯನ್ನು ವೃದ್ಧನೂ, ಪುತ್ರವಂತನೂ, ಪರಲೋಕಪ್ರಯಾಣೋನ್ಮುಖನೂ ಆದ ಸುವರ್ಣಪುರಾಧ್ಯಕ್ಷನಿಗೆ ಕೊಟ್ಟು ವಿವಾಹಮಾಡಿದನು.

ಈ ದ್ರವ್ಯದಿಂದ ಸಚ್ಚಿದಾನಂದನು ತನ್ನ ಪುತ್ರರೀರ್ವರಿಗೂ ವಿದ್ಯಾಭ್ಯಾಸಮಾಡಿಸತೊಡಗಿದನು. ಕೆಲ ಕಾಲದಲ್ಲಿಯೇ ಸಕಲವಿದ್ಯಾಪಾರಂಗತರೂ, ಯೌವನಸ್ಥರೂ, ದೃಢಾಂಗರೂ ಆದ ಪುತ್ರರನ್ನು ನೋಡಿ ತಂದೆಯು ಸಂತೋಷಾಬ್ಧಿಯಲ್ಲಿ ಮುಳುಗಿ ಇಂತು ಆಲೋಚಿಸಿದನು. ನನಗೆ ವೃದ್ಧಾಪ್ಯವು ಸನ್ನಿಹಿತವಾಗುತ್ತಾ ಬಂತು. ತನ್ನ ಪುತ್ರರೀರ್ವರಿಗೂ ಸತ್ಕುಲಪ್ರಸೂತೆಯರಾದ ಕನ್ಯಾರತ್ನಗಳನ್ನು ತಂದು ವಿವಾಹವನ್ನು ನೆರವೇರಿಸಿದರೆ ತನ್ನ ವಂಶವು ಆಚಂದ್ರಾರ್ಕಸ್ಥಾಯಿಯಾಗಿ ನಿಲ್ಲುವುದೆಂದು ಭಾವಿಸಿ ಅನುರೂಪರಾದ ಕನ್ಯೆಯರನ್ನು ವಿಚಾರಮಾಡಲುಪಕ್ರಮಿಸಿದನು. ಇದನ್ನು ಅರಿತ ಕನ್ಯಾಪಿತೃಗಳನೇಕರು ಯೌವನಸ್ಥರೂ ರೂಪವಂತರೂ, ವಿದ್ಯಾವಂತರೂ, ಸದ್ಗುಣಶೀಲರೂ, ಆದ ಕರುಣಾಕರ, ದಯಾಕರರಿಗೆ ಹೆಣ್ಣುಕೊಡಲು ನಾನುತಾನೆಂದು ಮೇಲಾಡಲಾರಂಭಿಸಿದರು. ಪಾಠಕರೇ! ಕನ್ಯಾಸಂಖ್ಯೆಯು ಅತ್ಯಧಿಕವಾಗಿರುವ ಈ ಕಾಲದಲ್ಲಿ ಕನ್ಯೆಯಪಿತನು ವರಪಿತನ ಸನ್ನಿಧಿಯಲ್ಲಿ ತನ್ನ ಕನ್ಯಾಪಿತೃತ್ವವನ್ನು ಹೋಗಲಾಡಿಸಿಕೊಡಬೇಕೆಂದು ಬಹು ನಮ್ರಭಾವದಿಂದ ಬೇಡಿಕೊಂಡರೆ ಆಗ, ವರಪಿತನ ಅಹಂಕಾರವನ್ನೂ ಔದಾಸೀನ್ಯವನ್ನೂ ವರ್ಣಿಸುವುದು ಅಸಾಧ್ಯವೇಸರಿ. ಮತ್ತು ವರದಕ್ಷಿಣೆ, ವಿವಾಹದ ವೆಚ್ಚ, ವರನಮುಂದಿನ ವಿದ್ಯಾಭ್ಯಾಸದ ವೆಚ್ಚ ಇವುಗಳೆಲ್ಲವನ್ನೂ ವಹಿಸಿ

ಕೊಂಡರೆ ತಮ್ಮ ಕನ್ಯೆಯನ್ನು ತಂದುಕೊಳ್ಳುವೆನೆಂಬುದೇ ಮೊದಲಾದ ವಾಗ್ದಾನ ದಿಂದ ದುದ್ರನಾದ ಕನ್ಯಾಪಿತನನ್ನು ಮೊಹಿಯುವುದೂ, ಈ ಮೂಲಕ ಸುಯೋಧನರ ರಿಲ್ಲದೆ ಹೋಗಲು, ಕುರೂಪಿಯೋ ವೃದ್ಧನೋ ಆದ ಆವನಾದರೊಬ್ಬನಿಗೆ ಕನ್ಯಾದಾ ನಮಾಡುವುದೂ ವಿಶೇಷಪ್ರಚಾರವಾಗಿ ಹೋಗಿದೆ. ಪಾತಕಬಂಧೋ! ಇದೇಕಾರಣ ದಿಂದಲೇ ಅಲ್ಲವೆ, ಸ್ನೇಹಲತೆಯು ತನ್ನ ಪ್ರಾಣಬಲಿಯನ್ನಿತ್ತು ಲೋಕದಲ್ಲಿ ಯಶಃ ಕಾಯದಿಂದ ವಿರಾಜಿತಳಾಗಿರುವಳು.

ಇಂತು ಈಗಣಕಾಲದಲ್ಲಿ ಎಷ್ಟೋ ಕನ್ಯಾಪಿತರರನ್ನು ಸುಲಿದು ಅನೇಕ ಮಹ ನೀಯರು ದೊಡ್ಡ ಮನುಷ್ಯರಾಗಿರುವರು.

ವಿವಾಹಸ್ಯತ್ತಾಂತವನ್ನರಿತ ವಿರಕ್ತರಾದ ಕರುಣಾಕರ, ದಯಾಕರರು ತಮ್ಮ ಜನಕನೆಡೆಗೈದಿ ನಮಸ್ಕರಿಸಿ ವಿನಯಪೂರ್ವಕವಾಗಿ ಇಂತು ವಿಜ್ಞಾಪಿಸಿಕೊಂಡರು. ಲೋಕದಲ್ಲಿ ಪರೋಪಕಾರವೇ ಶ್ಲಾಘ್ಯವಾದ ಗುಣವೆಂದೂ ಆದನ್ನನುವರ್ತಿಸಿ ತಾವು ಆಮರಣಾಂತವಾಗಿ ಪರೋಪಕಾರ ನಿರತರಾಗಿಯೇ ಇದ್ದು ಈ ಕಳೇಬರವನ್ನು ತ್ಯಜಿಸ ಬೇಕೆಂದೂ ಧೃಢಸಂಕಲ್ಪರಾಗಿರುವೆವು. ಪ್ರಕೃತದಲ್ಲಿ ತಾವೇನೋ ನಮಗೆ ವಿವಾಹ ಮಾಡಲುದ್ಯುಕ್ತರಾಗಿರುವಿರಿ. ದಯವಿಟ್ಟು ಅದನ್ನು ಮನ್ನಿಸಬೇಕು; ಎಂದ ಮಕ್ಕಳ ನುಡಿಗಳನ್ನಾಲಿಸಿ ಸಚ್ಚಿದಾನಂದನು ಆಪ್ಪಾ ಮಕ್ಕಳಾ! ವಿವಾಹಿತರಾದರೆ ನಿಮಗೆ ಆಗತಕ್ಕ ತೊಂದರೆಗಳೇನು? ಎಂದು ಕೇಳಿದನು.

ಮಕ್ಕಳು—ಅನೇಕವಿವೆ. ಅವುಗಳನ್ನೆಲ್ಲಾ ಸನ್ನಿಧಿಯಲ್ಲಿ ವಿಜ್ಞಾಪಿಸಲು ಭೀತ ರಾಗಿರುವೆವು.

ತಂದೆ—ಚಿಂತೆಯಿಲ್ಲ. ನಿರ್ಭಯರಾಗಿ ಹೇಳಬಹುದು.

ಮಕ್ಕಳು—ಅಸ್ಥಿ, ಮಾಂಸ, ಚರ್ಮ, ಇವೇ ಕೋಟೆಯಾಗಿಯೂ; ರಕ್ತ, ಕೀವು, ಇವುಗಳೇ ಕಂದಕವಾಗಿಯೂ ಇರುವ ಈ ಅಸಹ್ಯಕರವಾದ ಶರೀರಸೌಖ್ಯ ಕ್ಕೋಸ್ಕರ ನಾವು ವಿವಾಹ ಮಾಡಿಕೊಳ್ಳಬೇಕೆ?

ತಂದೆ—ಇದು ಎಲ್ಲರಿಗೂ ತಿಳಿದಿರತಕ್ಕ ವಿಷಯವೆ ಎಲ್ಲರೂ ನಿಮ್ಮಂತೆಯೇ ಅಭಿಪ್ರಾಯಪಡುವರೆ?

ಮಕ್ಕಳು—ಲೋಕದಲ್ಲಿರುವ ಪಟ್ಟಣಗಳ ಕೋಟೆಗಳಿಗೆಲ್ಲಾ ಸಾಧಾರಣ ವಾಗಿ ನಾಲ್ಕುದಿಕ್ಕುಗಳಲ್ಲೂ ನಾಲ್ಕು ಬಾಗಿಲುಗಳಿರುವುವು. ಈ ಶರೀರವೆಂಬವೆಂಬ ಕೋಟೆ ಗಾದರೋ ಒಂಭತ್ತು ದ್ವಾರವಿರುವುದು. ಅಸಹ್ಯಕರವಾದ ಇಂತಹ ದ್ವಾರಗಳನ್ನುಳ್ಳ ಈ ಶರೀರಸುಖಕ್ಕೋಸ್ಕರ ವಿವಾಹಿತರಾಗಬಹುದೆ?

ತಂದೆ—ಈ ವಯಸ್ಸಿನಲ್ಲಿ ನೀವು ಇಷ್ಟು ಜಿಗುಪ್ಸೆಯನ್ನು ಹೊಂದಬಾರದು. ನನ್ನ ಸಂತೋಷಕ್ಕಾದರೂ ನೀವು ವಿವಾಹವನ್ನು ಮಾಡಿಕೊಳ್ಳಲೇಬೇಕು. ನೀವು ಧನಿಕರಲ್ಲದಿದ್ದರೂ ಅವಾರವಾದ ವಿದ್ಯೆಯೆಂಬ ಧನವನ್ನು ಆರ್ಜಿಸಿರುವಿರಿ.

ಮಕ್ಕಳು—ಒನಕನೇ, ತಾವು ಅಪ್ಪಣೆಕೊಡಿಸುವುದು ಯುಕ್ತವೇನವಿ. ನಾವು ಬ್ರಹ್ಮಚರ್ಯದಿಂದಲೇ ಇದ್ದು, ಪರೋಪಕಾರವನ್ನು ಮಾಡಿ ತನ್ಮೂಲಕ ಲಭಿಸತಕ್ಕ ಪುಣ್ಯದಿಂದ ಸದ್ಗತಿಯನ್ನು ಪಡೆಯಬೇಕೆಂದಿರುವೆವು.

ತಂದೆ—ವಿವಾಹಿತರಾದರೆ ಅದು ಆಗುವುದಿಲ್ಲವೋ?

ಮಕ್ಕಳು—ಬಹಳ ಕಷ್ಟ.

ತಂದೆ—ಅದು ಹೇಗೆ?

ಮಕ್ಕಳು—ಅರಿಕೆಮಾಡುವೆವು; ಸಾವಧಾನದಿಂದ ಬಾಲಿಸಬೇಕು.

ಕೋಮಲವಾಗಿ ಬೆಳೆದಿರುವ ಪುರುಷನೆಂಬ ವೃಕ್ಷಕ್ಕೆ ಸ್ತ್ರೀಯೆಂಬ ಲತೆಯು ಸುತ್ತಿಕೊಂಡು ಮಕ್ಕಳೆಂಬ ಪುಷ್ಪಗಳು ಆ ಲತೆಯಲ್ಲಿ ಬಿಡುವುವು. ಈ ಮಕ್ಕಳ ಇಂಪಾದ ಮಾತುಗಳೇ ಆ ಪುಷ್ಪಗಳ ಪಾಸನೆಯು; ಇವರ ಆಘ್ರಾಣದಿಂದ ವೃಕ್ಷವೆಂಬ ಪುರುಷನ ಪರವಶನಾಗಿ ಸೀಲನಲ್ಲಿ ಸಮಾಗಿ ವಾಸಮಾಡುವ ವಿಾನು ಮಾಂಸದಾಲೆಗೆ ಸಿಕ್ಕಿ ನರಳುವಾಗ ಆತ್ಮೆ, ಪೂವ, ಭಾವ, ಮೊದಲಾದವರ ದುರ್ಯೋಧನೆಯಿಂದ ಮಾಡಬಾರದ ಕೆಲಸಗಳನ್ನು ಮಾಡಿ ಪಾಪಿಷ್ಠನಾಗಿ ಈ ಲೋಕದಲ್ಲಿ ಜೀವಿಸಿರುವುದಕ್ಕಿಂತಲೂ ಚಿರಬ್ರಹ್ಮಚಾರಿಯಾಗಿಯೋ ಪರೋಪಕಾರ ನಿರತನಾಗಿದ್ದು ಈ ದೇಹತ್ಯಾಗಮಾಡುವುದು ಉತ್ತಮವಲ್ಲವೆ?

ಇದನ್ನಾಲಿಸಿದ ಸಚ್ಚಿದಾನಂದನು ತನ್ನ ಮಕ್ಕಳ ಅಭಿಪ್ರಾಯವು ಯುಕ್ತವಾಗಿದ್ದಾಗ್ಯೂ ತನ್ನ ವಂಶವು ಅಂಕುರಿಸದೆ ಇಲ್ಲಿಗೇ ನಿಲ್ಲುವುದೆಂಬ ಮನೋವ್ಯಥೆಯನ್ನು ಹೊಂದಿದವನಾಗಿ ಆ ವ್ಯಥೆಯಿಂದ ಸ್ವಲ್ಪಕಾಲದಲ್ಲಿಯೇ ಇಹಲೋಕವಂ ಬಿಟ್ಟನು. ಅನಂತರ ಉಳಿದವರು ಕರುಣಾಕರ, ದಯಾಕರರ್ವರೆ. ಪಾಚಕರೆ! ಮುಂದೆ ರೋಹಿಣಿಯ ವಿಚಾರವೇನು? ಎಂಬುದನ್ನು ವಿವರಿಸುವ!

ಪಂಚಮಲಹರಿ.

ರೋಹಿಣಿಯು ಸಕಲಸದ್ವ್ಯವಹಾರಂಗತಳಾಗಿಯೂ ವಿವೇಕಿಯಾಗಿಯೂ ಇರುವುದನ್ನು ಕರುಣಾಂಬೆಯು ನೋಡಿ ಅನುರೂಪನೂ, ಗುಣವಂತನೂ, ಪ್ರಾಪ್ತವಯಸ್ಕನೂ, ವಿದ್ಯಾವಂತನೂ ಆದ ವರನಿಗೆ ಕೊಟ್ಟು ವಿವಾಹವಂ ನೆರವೇರಿಸಬೇಕೆಂದು ಉದ್ದೇಶಿಸಿ ಈ ವಿಚಾರವನ್ನು ತನ್ನ ಸಹೋದರನಾದ ಕರುಣಾಕರನಿಗೆ ತಿಳಿಸುವುದು ಉತ್ತಮವೆಂದು ಯೋಚಿಸಿ ಸುವರ್ಣಪುರಕ್ಕೆ ಕಾಗದವನ್ನು ಬರೆದಳು ಆದರ ಒಕ್ಕಣಿಕೆಯು ಹೀಗೆ ಇದ್ದಿತು.

ಪ್ರಿಯಸಹೋದರನೇ!

ನೀನು ರೋಹಿಣಿಯನ್ನು ಇಲ್ಲಿ ಬಿಟ್ಟು ಬಹು ದಿನಗಳಾದಾಗ್ಯೂ ಅವಳನ್ನು ನೋಡಲು ಬಂದಾವರ್ತಿಯಾದರೂ ಬರಲಿಲ್ಲ. ಕಾಗದವನ್ನು ಸಹ ಬರೆಯಲಿಲ್ಲ. ಬಹುಶಃ ನೀನು ಯಾವುದೋ ಒಂದು ಪರೋಪಕಾರಕಾರ್ಯದಲ್ಲಿ ನಿರತನಾಗಿರಬಹುದು. ಚಿಂತೆಯಿಲ್ಲ. ಪ್ರಕೃತ ರೋಹಿಣಿಗೆ ವಿವಾಹಕಾಲವುಪಾಯುತ್ತಾ ಬಂದಿತು. ಇನ್ನು ಮೇಲೆ ಸಾವಕಾಶಮಾಡುವುದು ಯುಕ್ತವಾಗಿಲ್ಲ. ರೋಹಿಣಿ ಅನುರೂಪನಾವ ವರನನ್ನು ಗೊತ್ತುಮಾಡಿ ಬರೆಯಬೇಕಲ್ಲದೆ ಕೂಡಲೆ ಇಲ್ಲಿಗೆ ಬರಬೇಕೆಂದು ಪ್ರಾರ್ಥಿಸುವ,

ಕಲ್ಯಾಣಪುರ. } ನಿನ್ನ
ಪ್ರಿಯಸಹೋದರಿ ಕರುಣಾಂಬೆ.

ಈ ರೀತಿ ಬರೆದು ಅಂಚೆಗೆಹಾಕಿದಳು. ಯಥಾಕಾಲದಲ್ಲಿ ಅದು ಕರುಣಾಕರನ ಹಸ್ತಗತವಾಯಿತು. ಆದರೆ ಆಗ ಕರುಣಾಕರನು ಬರಲು ಅವಕಾಶವಾಗಲಿಲ್ಲ.

ಹೀಗೆ ಎರಡುದಿನಗಳು ಕಳೆದವು. ಮೂರನೆಯದಿನ ರೋಹಿಣಿಯು ಮನೆಕೆಲಸಗಳನ್ನೆಲ್ಲಾ ನೆರವೇರಿಸಿ ಅನಂತರ ಬೀದಿಯಂಚಿಗೆ ಬಂದಳು. ಆಗ ಅವಳಿಗೆ ಯಾವದೋ ಒಂದು ಶಬ್ದವು ಗಟ್ಟಿಯಾಗಿ ಕೇಳಿಸಿತು. ಇದೇ ಇರಬಹುದೆಂದು ಅದನ್ನೇ ಆಲೈಸುತ್ತಲಿರುವಾಗ ಶಬ್ದವು ಇನ್ನೂ ಹೆಚ್ಚಾಗಿ ಕೇಳುತ್ತಾ ಬಂತು. ಅಲ್ಲಿಯೇ ಕಂಭಮೋಪಾದಿಯಲ್ಲಿ ನಿಂತುಬಿಟ್ಟಳು. ಕರುಣಾಂಬೆಯು ರೋಹಿಣಿಯು ಹೀಗೆ ಸ್ತಂಭೀಭೂತಳಾಗಿರುವುದನ್ನು ನೋಡಿ ಅವಳನ್ನು ಕುರಿತು ರೋಹಿಣಿ, ಏನುಯೋಚಿಸುತ್ತಲಿರುವೆ? ಎಂದಳು.

ರೋ---ಅತ್ತೆಯವರೆ! ಏನೋ ಒಂದು ಶಬ್ದವು ಕೇಳುತ್ತಲಿರುವುದು. ಅದು ಏನಾಗಿರಬಹುದು?

ಕ—ಇದು ಗುಡುಗಿರಬಹುದು. ನಡಿ ಒಳಗೆ ಹೋಗೋಣ.

ರೋ—ಅತ್ತೆಮ್ಮ ಇದು ಗುಡುಗಿನಶಬ್ದವಲ್ಲ. ಫಿರಂಗಿಯ ಶಬ್ದದಂತೆ ತೋರುತ್ತದೆ. ಚೆನ್ನಾಗಿ ಆಲೈಸಿರಿ!

ಕ—ಇದ್ದರೂಇರಬಹುದು. ಸುವರ್ಣಾಪುರದಲ್ಲಿ ಏನೋ ಉತ್ಸವವಿರಬಹುದು. ಆದಕ್ಕಾಗಿ ಸಂತೋಷಸೂಚಕವಾದ ಫಿರಂಗಿಗಳು ಹಾರುತ್ತಿರುವುವು. ಅದನ್ನೇನುಕೇಳುವುದು. ನಡಿ ಒಳಕ್ಕೆಹೋಗೋಣ.

ರೋ—ಉತ್ಸವವಾದರೆ ಇಷ್ಟೊಂದು ಫಿರಂಗಿಗಳನ್ನೇಕೆ ಹಾರಿಸುವದು? ಬಹಳ ಯೊತ್ತಿನಿಂದಲೂ ಹಾರುತಲೇ ಇರುವುದು.

ಕ—ಬಹುಶಃ ಈ ದಿನ ಸುವರ್ಣಾಪುರಾಧೀಶನ ಪರ್ವಾಂತಿಯಾಗಿರಬಹುದು.

ರೋ—ಅಲ್ಲ. ಅತ್ತೆಮ್ಮ ಇದನ್ನು ಕೇಳಿದಾಗಿನಿಂದಲೂ ನನ್ನ ಮನಸ್ಸು ಏಕೋ ಕಳವಳಪಡುತಲಿರುವುದು. ನನ್ನ ತಂದೆಯು ಇಲ್ಲಿಗೆ ನನ್ನನ್ನು ಕಳುಹಿಸುವಾಗ್ಗೆ ತಾನೇ ಬಂದು ಕರೆದುಕೊಂಡುಹೋಗುವೆನು. ಯುದ್ಧಾನುಬಂಧವಿದ್ದರೆ ಇನ್ನೊಂದಾವರ್ತಿ ಈ ಲೋಕದಲ್ಲಿ ನೋಡುವೆವು ಇಲ್ಲದಿದ್ದರೆ ಜಗದೀಶನ ಸನ್ನಿಧಿಯಲ್ಲಿ ನೋಡಲು ಯಾವ ಅಡ್ಡಿಯೂ ಇಲ್ಲವೆಂದು ಹೇಳಿದ್ದನು. ಅದನ್ನು ಸ್ಮರಿಸಿಕೊಂಡರೆ ನನ್ನ ಮನೋವ್ಯಥೆಯು ಇನ್ನೂ ಹೆಚ್ಚುವುದು. ಅದಕ್ಕೆನುಪಾತವಾಗಿಯೇ ಸುವರ್ಣಾಪುರದ ಕಡೆಯಿಂದಲೇ ಫಿರಂಗಿಗಳ ಶಬ್ದವು ಹೆಚ್ಚಾಗಿ ಕೇಳುತ್ತಲಿರುವುದು. ಇಷ್ಟಲ್ಲದೆ ತಂದೆಯು ಬಹಳದಿನಗಳಿಂದ ಇಲ್ಲಿಗೆ ಬರಲಿಲ್ಲ. ಯೋಚಿಸಿಸೋದಿನದೆ ಆತನಿಗೇನೋ ವಿಪತ್ತು ಸಂಭವಿಸಿರಬಹುದು ಎಂದು ಅತ್ತೆಯು.

ಕ—ರೋಹಿಣೀ! ಇನೇನು ನೀನು ಹೀಗೆ ಅಳುವೆ? ಕರುಣಾಕರನಿಗೆ ಪತ್ರ ಬರೆದಿರುವೆನು. ಬಂದರೂ ಬರಬಹುದು. ಇಲ್ಲವಾದರೆ ಉತ್ತರವಾದರೂ ಬರವುದು. ನಡಿ. ಒಳಕ್ಕೆಹೋಗೋಣ.

ರೋಹಿಣಿಯು, ನಿಂತಿದ್ದ ಸ್ಥಳವನ್ನು ಬಿಟ್ಟು ಜರಸಲೇಇಲ್ಲ. ಅಷ್ಟರಲ್ಲಿಯೇ ಒಬ್ಬ ರಾಹುತನು ಒಮ್ಮೆಲೆಗೆಂದು ಕುದುರೆಯನ್ನು ಓಡಿಸಿಕೊಂಡು ಬಂದು ರೋಹಿಣಿಯೆದುರಿಗೆ ನಿಂತು ಕರುಣಾಂಬೆಯೆರು ಎಲ್ಲಿ? ಎಂದು ಕೇಳಲು ರೋಹಿಣಿಯು, ಅತ್ತೆಮ್ಮ! ಒಬ್ಬ ರಾಹುತನು ತಮ್ಮನ್ನು ನೋಡಬೇಕೆಂದು ಬಂದಿರುವನು ಎಂದು ಹೇಳಿದಳು.

ಕರುಣಾಂಬೆಯು ಕೊಡಲೆ ಬಂದಳು. ರಾಯುತನು ಕಾಗದವನ್ನು ಕೊಟ್ಟು ಹೀಗೆ ಬೇಡಿದನು. ಸುವರ್ಣಪುರ ಅವಂತಿಪುರದವರಿಬ್ಬರಿಗೂ ಬಲು ಘೋರವಾದ ಯುದ್ಧವು ನಡೆಯುತಲಿರುವುದು. ಯುದ್ಧದಲ್ಲಿ ಗಾಯಪಟ್ಟು ಏಟುತಿಂದ ಸೈನಿಕರನ್ನು ಕರುಣಾಕರ, ದಯಾಕರರು ಉಪಚರಿಸುತಲಿರುವರು. ನಾನು ತಲೆತಪ್ಪಿಸಿಕೊಂಡು ಬರುವುದೇ ದುಸ್ತರವಾಯಿತು. ಕರುಣಾಕರನು ಈ ಕಾಗದವನ್ನು ತಮಗೆ ಕೊಡುವಂತೆ ಆಜ್ಞೆಮಾಡಿದ್ದಾನೆ ಎಂದು ಹೇಳಿ ಅದನ್ನು ಆಕೆಯ ಕೈಗೆ ಕೊಟ್ಟನು.

ಕರುಣಾಂಬೆಯು ಕಾಗದವನ್ನು ತೆಗೆದುಕೊಂಡು ನೋಡಿದಳು. ಅದರಲ್ಲಿ ಹೀಗೆ ಬರೆದಿತ್ತು.

ಪ್ರಿಯಸಹೋದರಿ!

ನಿನ್ನ ಕಾಗದವು ಬಂದು ತಲುಪಿತು. ವಿಷಯಗಳು ಕ್ಷಿಪ್ರದಲ್ಲೇ ನಡೆಯತಕ್ಕವುಗಳಾಗಿದ್ದರೂ, ನಡೆಸಲು ಅನಕಾರಣವಿಲ್ಲವಾಗಿದೆ ಯಾವುದಕ್ಕೂ ಕಾಲವೊದಗಬೇಕು. ರೋಹಿಣಿಯು ಎಲ್ಲಿ ಇದ್ದಾಳು? ಏಲ್ಲಿ ಬೆಳೆದಳು? ಈಗ ಎಲ್ಲಿರುವಳು? ಯೋಚಿಸಿದರೆ ಹೀಗೆಯೇ ಅವಳು ನಿರಂತರವೂ ಸುಖವಾಗಿರುವಳೆಂಬ ಪೂರ್ಣ ಭರವಸೆಯುಂಟು. ನಾನೇನೋ ಪರೋಪಕಾರವಲ್ಲಿಯೇ ಈ ನಶ್ವರವಾದ ದೇಹವನ್ನು ತ್ಯಾಗಮಾಡುವೆನೆಂಬುದು ಮೊದಲೇ ನಿಶ್ಚಯವಾಗಿದೆ. ನೀನಾದರು ಎಲ್ಲರಿಗೂ ತಕ್ಕಂತೆ ನಡೆದುಕೊಳ್ಳುವುದಾಗಲಿ.

ಸುವರ್ಣಪುರ ಇತಿ ಪ್ರಿಯಸಹೋದರ
ಕರುಣಾಕರ.

ಇದನ್ನು ನೋಡಿ ಕರುಣಾಂಬೆಯು ಭಯಭ್ರಾಂತಳಾಗಿ ನಡುಗಲಾರಂಭಿಸಿದಳು. ಅದರಲ್ಲೂ ದಯಾಕರನ ವಿಷಯವೇ ಇಲ್ಲ. ಇಂತು ಸಹೋದರವತ್ಸಲೆಯಾದ ಕರುಣಾಂಬೆಯು ವ್ಯಥೆಪಡುವುದನ್ನು ನೋಡಿ ಬಂದಿದ್ದ ಸವಾರನು, ಸುಮ್ಮನೆ ವ್ಯಥೆಪಟ್ಟರೆ ಫಲವೇನು? ನಿಮ್ಮ ಸಹೋದರ ಬಂಧುಗಳಾರಾದರೂ ಸುವರ್ಣಪುರದಲ್ಲಿರುವರೋ? ಎಂದು ಕೇಳಿದನು.

ಕರುಣಾಂಬೆ—ಇದ್ದಾರೆನು?

ಸವಾರ—ಇಂತಹಕಾಲದಲ್ಲಿ ಅವರಿಗೆ ಸಹಾಯಮಾಡದಿರುವುದುಂಟೆ?

ಕ—ನಾವು ಮಾಡುವ ಸಹಾಯವೇನು?

ಸವಾರ—ಶತ್ರುಗಳ ಕೈಗೆ ಸಿಕ್ಕದಂತೆ ತಪ್ಪಿಸುವುದು ಅಥವಾ ಸಿಕ್ಕಿ ಏಟು ತಿಂದು ಗಾಯಪಟ್ಟವರನ್ನು ಉಪಚರಿಸುವುದು.

ಕ—ಇವು ಸ್ತ್ರೀಯರಾದ ನಮ್ಮಿಂದ ಸಾಧ್ಯವೆ?

ಸವಾರ—ಪರೋಪಕಾರ ಮಾಡುವುದಕ್ಕೆ ಸ್ತ್ರೀಯರಾದರೇನು? ಪುರುಷರಾದರೇನು?

ಕ—ಇರಲಿ, ವಿಪತ್ಕಾಲದಲ್ಲಿ ನೀನು ನಿನ್ನ ಬಂಧುಗಳನ್ನೂ, ಮಿತ್ರರನ್ನೂ ಇಷ್ಟರನ್ನೂ, ಆಪ್ತರನ್ನೂ ಬಿಟ್ಟು ಇಲ್ಲಿಗೆ ಏತಕ್ಕೆ ಬಂದೆ?

ಸವಾರ— ಪರೋಪಕಾರಪರಾಯಣನಾದ ಕರುಣಾಕರನ ಆಜ್ಞೆಯಂತೆ ನಾ ಬಂದಿರುವೆನೇ ಏನಹ ಮತ್ತೆ ಬೇರೆಯಲ್ಲ.

ಕ—ಹಾಗಿದ್ದರೆ ಕರುಣಾಕರ, ದಯಾಕರರು ಅಲ್ಲಿ ಏನುಮಾಡುತಲಿರುವರು

ಸವಾರ—ಸುವರ್ಣಪುರದವರಿಗೂ, ಅವಂತಿಪುರದವರಿಗೂ ನಡೆಯುತಲಿರುವ ಯುದ್ಧದಲ್ಲಿ ಘಾಯಪಟ್ಟ ಸೈನಿಕರನ್ನು ವೈದ್ಯಶಾಲೆಗೆ ಸಾಗಿಸಿ ಅಲ್ಲಿ ಉಪಚರಿಸುವುದೂ, ಮರಣೋನ್ಮುಖರಾಗಿರುವವರು ತಮ್ಮ ಪುತ್ರಮಿತ್ರಕಳತ್ರಾದಿಗಳಿಗೆ ಅಂತ್ಯದಲ್ಲಿ ಹೇಳುವ ಮಾತುಗಳನ್ನು ಬರೆದುಕೊಳ್ಳುವುದೂ ಇವೇ ಮೊದಲಾದ ಕಾರ್ಯಗಳಲ್ಲಿ ಸ್ವಲ್ಪಸ್ವಲ್ಪ ಬೇಸರಪಡುತಿರುವರು.

ಕ—ಇಷ್ಟು ದಿನಗಳೂ ಇಲ್ಲದ ಯುದ್ಧಕ್ಕೆ ಈಗ ಕಾರಣವೇನು?

ಸವಾರ—ಸುವರ್ಣಪುರದವರಿಗೂ, ಅವಂತಿಪುರದವರಿಗೂ ಬಹುದಿನಗಳಿಂದ ದ್ವೇಷವಿರ್ದಿತು. ಇದಕ್ಕಾಗಿ ಅವಂತಿಪುರದವರು ಸುವರ್ಣಪುರದವರನ್ನು ಜಯಿಸಲೆಂದು ಅನೇಕಾವರ್ತಿ ಪ್ರಯತ್ನಪಟ್ಟಾಗ್ಯೂ ಉಪಯೋಗವಾಗಲಿಲ್ಲ.

ಕ—ಯಾಗಾದರೆ ಈಗ ಜಯಿಸಿದವರು ಅವಂತಿಪುರದವರೇ?

ಸವಾರ—ಸಂದೇಹವೇನು? ಜಯಲಕ್ಷ್ಮಿಯೂ ಐಶ್ವರ್ಯಲಕ್ಷ್ಮಿಯೂ ಜಪಲೆಯೆರು. ಈ ಹೊತ್ತು ಇದ್ದಕಡೆ ನಾಳೆ ಇರುವುದಿಲ್ಲ. ನಾಳೆ ಇದ್ದಕಡೆ ನಾಡಿ ಇರುವುದಿಲ್ಲ. ಆದರೆ ನಿರ್ಭಾಗ್ಯಲಕ್ಷ್ಮಿಯು ಒಂದಾವರ್ತಿ ಬಂದರೆ ತೊಲಗಲು ಬಹಕಾಲವೇಕು. ಮತ್ತು ತೊಲಗಿಸಲು ಬಹು ಪ್ರಯತ್ನವೇಕು. ಆದರಂತೆಯೇ ಅವ ವುರದವರೂ ಬಹು ಪ್ರಯತ್ನಮಾಡಿ ಕೊನೆಗೆ ಜಯಲಕ್ಷ್ಮಿಯನ್ನು ಹೊಂದಿದರು.

ಕ—ಇನ್ನು ಮುಂದೆ ಸುವರ್ಣಪುರದವರಿಗೂ, ಪ್ರಜೆಗಳಿಗೂ ಏನುಗತಿ?

ಸವಾರ—ಯುದ್ಧದಲ್ಲಿ ಪ್ರತಿಷ್ಠಿಸಿ ನಿಂತವರೆಲ್ಲರೂ ಯಮಪುರವನ್ನು ಕೆಲವರು ಕಾರಾಗಾರವನ್ನೂ ಸೇರಿದರು.

ಕ—ಅಯ್ಯೋ! ಸುವರ್ಣಪುರದವರ ಗತಿಯು ಈ ಸ್ಥಿತಿಗೆ ಬಂತೆ?

ಸಚಿವ—ಯಾವ ಸ್ಥಿತಿಗೂ ಬರಲಿಲ್ಲ. ಪ್ರಜೆಗಳಿಗೆ ಯಾವ ವಿಧದಲ್ಲೂ ತೊಂದರೆಯನ್ನುಂಟುಮಾಡಕೂಡದೆಂದು ಅವಂತೀಶನು ಕಟ್ಟಪ್ಪಣೆ ಮಾಡಿರುವನು.

ಕ—ಹಾಗಾದರೆ ಆಸ್ಥಾಂದುಮಂದಿ ಯಮಪಾಲಯವನ್ನೂ, ಕಾರಾಗಾರವನ್ನೂ ಸೇರುದುದೇಕೆ?

ಸಚಿವ—ಜನ್ಮಸ್ವಭೃತಿ ಆ ಧೊರೆಯು ಉಪ್ಪನ್ನೇ ತಿಂದು ಕಷ್ಟಕಾಲದಲ್ಲಿ ಸಹಾಯಮಾಡದೆ ಇರಲು ಸೈನಿಕರ ಮನಸ್ಸೊಪ್ಪದೆ ರಣಕ್ಕೆ ನಿಂತರು. ಪ್ರಜೆಗಳಾದರೋ ದೇಶವಾತ್ಸಲ್ಯದಿಂದಲೂ, ತಮ್ಮನ್ನು ಮಕ್ಕಳಿಗಿಂತಲೂ ಅತಿಶಯವಾಗಿ ಕಾಪಾಡಿದ ಧೊರೆಗೆ ಸಹಾಯಸಾಧನೆ ಇರಬಾರದೆಂಬ ಉನ್ಮೇಶದಿಂದಲೂ ಅವಂತೀಶನಿಗೆ ಪ್ರತಿಭಟಿಸಿದರು.

ಕ—ಇಂತಪುದರಲ್ಲಿ ಯುದ್ಧಕ್ಕೇಕೆ ನಿಂತನು?

ಸಚಿವ—ತನ್ನ ಪೂರ್ವಿಕರ ಹೆಸರು ಶಾಶ್ವತವಾಗಿ ನಿಂತು ಅವರ ಕೋರಿಕೆಯು ನೆರವೇರಲೆಂಬುವಾಗಿ.

ಕ—ಹಾಗಾದರೆ ನಾವು ಈಗ ಏನುಮಾಡಬೇಕು?

ಸಚಿವ—ತಮ್ಮಿಷ್ಟದಂತೆ ಆಚರಿಸಬಹುದು ಎಂದು ಹೇಳಿ ಸಚಿವನು ಉತ್ತರವನ್ನು ನಿರೀಕ್ಷಿಸದೆ ಕುದುರೆಯನ್ನೇರಿಕೊಂಡು ಸುವರ್ಣಪುರದ ಕಡೆಗೆ ಹೊರಟು ಹೋದನು.

ಪೆಸ್ಟಲಜ್ಜಿ.

ಸೂರ್ಯನು ಅಸ್ತಾಚಲಪ್ರಾಣಿಯಾಗಿದ್ದನು. ಪಕ್ಷಿಗಳು ಗೂಡುಗಳನ್ನು ಸೇರುತಲಿದ್ದವು. ಮೆಲ್ಲನೆ ನಿಶೆಯು ತನ್ನ ರಾಜ್ಯಭಾರವನ್ನು ಆರಂಭಿಸಿದಳು. ಒಂದೆರಡು ನಕ್ಷತ್ರಗಳು ಅಲ್ಲಲ್ಲಿ ಮಿಣುಗುತಲಿದ್ದುವು. ಮಿಮಕರನು ಲೋಕಕ್ಕೆ ಶಾಂತಿ ಸುಖವನ್ನುಂಟುಮಾಡಲು ಪೂರ್ವದಿಗ್ವಾಗಿಲದಲ್ಲಿ ಉದಯಿಸಿದನು. ಆಹಾ! ಇಂತಹ ಆಹ್ಲಾದಕರವಾದ ಸಮಯದಲ್ಲಿ ಲೋಕವೆಲ್ಲವೂ ನಿದ್ರೆಯಲ್ಲಿ ಮುಳುಗಿರುವುದು.

ಆದರೆ ರೋಹಿಣಿಯುಮಾತ್ರ ರೋದಿಸುತ್ತಲೇ ಇರುವಳು. ಕರುಣಾಂಬೆಯು ಇದನ್ನು ನೋಡಿ ರೋಹಿಣಿ! ಏತಕ್ಕೆ ರೋದಿಸುವೆ? ಈಗ ಸುವರ್ಣಪುರಕ್ಕೆ ಪ್ರಯಾಣಮಾಡುವ ಸಮಯವು ಸರಿಯಾಗಿಲ್ಲ. ಬೆಳಗಾಗುತ್ತಲೇ ಸುವರ್ಣಪುರಕ್ಕೆ ಹೋಗೋಣ ಎಂದು ಸಮಾಧಾನ ಮಾಡಿದಳು. ವಾಚಕರೇ! ರೋಹಿಣಿಯು ಏತಕ್ಕೆ ರೋದಿಸಿದಳು ಬಲ್ಲಿರಾ? ಲೋಕದಲ್ಲಿ ಹೆತ್ತ ತಂಬೆ, ಅನ್ನ ಹಾಕಿದವನೂ, ವಿದ್ಯೆ ಹೇಳಿದವನೂ, ಆಪತ್ಕಾಲದಲ್ಲಿ ಸಹಾಯಮಾಡಿದವನೂ, ಮಂತ್ರೋಪದೇಶ ಮಾಡಿದವನೂ ಇವರೈವರೂ ತಂದೆಯ ಸಮಾನರು. ಇದನ್ನು ರೋಹಿಣಿ ಆತನಳು. ಅಲ್ಲದೆ ತನ್ನ ಸಾಕು ತಂದೆಯಾದ ಕರುಣಾಕರನಲ್ಲಿ ಬಹು ವಿಶ್ವಾಸ ಇಟ್ಟಿದಳು. ಇಂತಹ ತಂದೆಯನ್ನು ಈ ಕಷ್ಟಕಾಲದಲ್ಲಿ ನೋಡಲೆ ಹೇಗಿರುವಳು?

ಕರುಣಾಂಬೆಯ ಸಮಾಧಾನ ವಚನಗಳು ಎಷ್ಟಾದರೂ ಪ್ರಯೋಜನವಾಗಲಿಲ್ಲ. ಇವರ ದುಃಖವನ್ನು ನಿವಾರಣೆ ಮಾಡುವುದಕ್ಕಾಗಿ ಲೋಕರಂಜಕನಾದ ಭಾನುವೂ ಪ್ರಕಾಶಿಸಿದನು. ಕೂಡಲೆ ರೋಹಿಣಿಯು ಕರುಣಾಂಬೆಯೊಡನೆ ಸುವರ್ಣಪುರಕ್ಕೆ ಹೊರಟಳು. ಪಟ್ಟಣಪ್ರವೇಶವನಾಯುವಲ್ಲಿ ಒಬ್ಬ ಮನುಷ್ಯನು ಬಂದು ಇವರುಗಳನ್ನು ತಡೆದು "ನೀವು ಯಾರು? ಎಲ್ಲಿಗೆ ಹೋಗುತ್ತೀರಿ"? ಎಂದು ಕೇಳಿದನು. ಅದಕ್ಕೆ ರೋಹಿಣಿಯು "ನಾವು ಎಲ್ಲಿಗೆ ಹೋದರೆ ನಿನಗೇನು? ದಾರಿಯನ್ನು ಬಿಟ್ಟು ತೊಲಗು," ಅಂದಳು. ಆ ಮನುಷ್ಯನು ಅಕೆಯ ಸೌಂದರ್ಯವನ್ನು ನೋಡಿ ಆಶ್ಚರ್ಯಪಟ್ಟು ಕೂಡಲೆ ಆಗ್ರಹಪೂರ್ವಕವಾಗಿ ಬಂದು ಸೀರೆಯಿಂದ ಕಟ್ಟಿದ್ದ ಗಂಟನ್ನು ಪಿಡಿದುಕೊಂಡು ಇನ್ನೊಂದು ಕೈಯಿಂದ ಅಕೆಯನ್ನು ಹೊರೆಯಬೇಕೆಂದು ಯತ್ನಿಸಿದನು. ಅಷ್ಟರಲ್ಲೇ ಅಕೆಯು ಅಬಲೆಯೆಂದು ಗೊತ್ತಾಯಿತು. ಹೊರೆಯಬೇಕೆಂದು ಎತ್ತಿದ್ದ ಕೈಯನ್ನು ಹಾಗೆಯೇ ಕೆಳಕ್ಕೆ ಇಳಿಸಿ ಸೌಮ್ಯವಚನಗಳಿಂದ "ನೀನು ಯಾರಮ್ಮ? ಈಕೆಯು ಯಾರು? ಎಲ್ಲಿಗೆ ಹೋಗುತ್ತೀರಿ"? ಎಂದು ಕೇಳಿದನು. ಅದಕ್ಕೆ ಅಕೆಯು "ಅದರ ಯೋಚನೆ ನಿನಗೇತಕ್ಕೆ? ನನಗೆ ಬಹಳ ಕೆಲಸವಿದೆ. ನನಗೆ ಅಡ್ಡಿಮಾಡಬೇಡ. ದಯವಿಟ್ಟು ನನ್ನನ್ನು ಬಿಳಕ್ಕೆ ಬಿಡು" ಎಂಬವಾಗಿ ಹೇಳಿದಳು. ಆ ಮನುಷ್ಯನು "ಈ ರಾಜಧಾನಿಯನ್ನು ಅವಂತಿ ದೇಶದವರು ಆಕ್ರಮಿಸಿಕೊಂಡಿದಾರೆ ಎಂಬ ವಿಷಯವು ನಿನಗೆ ತಿಳಿದಿರಲಾರದು. ನೀವು ಈಕೆಯು ಸಹಿತ ಈ ರಾಜಧಾನಿಯನ್ನು ಪ್ರವೇಶಿಸಿದಕೂಡಲೇ ನಿನಗೆ ಅನೇಕ ತೊಂದರೆಗಳು ಸಂಭವಿಸುವುವು. ಒಂದುನೇಳೆ ನಿನ್ನ ಕಾರಣಕ್ಕಾಗಿ ಕೊಡ ಬಾನಿ ಬರಬಹುದು. ನೀವು ಈ ರಾಜಧಾನಿಗೆ ಪ್ರವೇಶಮಾಡುವುದು ಉಚಿತವಾಗಿಯೂ ಉಚಿತವಲ್ಲ" ಎಂದು ಹೇಳಿದನು

ರೋಹಿಣಿಯು —“ಅಯ್ಯೋ! ಈ ವಿಷಯವು ನಮಗೆ ಮೊದಲೇ ತಿಳಿದಿತ್ತು. ಆದರೂ ನೀನು ಈಗ ಪುನಃ ಆ ವಿಷಯವನ್ನೇ ವಿಶದವಾಗಿ ತಿಳಿಸಿದುದಕ್ಕೆ ನಾನು ಬಹಳ ಕೃತಜ್ಞಳಾಗಿದ್ದೇನೆ. ಆದರೆ ಈ ರಾಜಧಾನಿಯಲ್ಲಿ ಅತ್ಯಾವಶ್ಯಕವಾದ ಒಂದು ಕಾರ್ಯವು ಇರುವುದರಿಂದ ಎಷ್ಟು ಕಷ್ಟಗಳು ಪ್ರಾಪ್ತವಾದರೂ ಅನುಭವಿಸಿಕೊಂಡು ಪ್ರವೇಶಿಸಬೇಕು. ನನಗೆ ಮರಣಭಯವಿಲ್ಲ. ಕಾರಾಗೃಹಭಯವಿಲ್ಲ. ಇಂತಹ ಸಮಯದಲ್ಲಿ ನೀನು ಅಡ್ಡಿಮಾಡಬೇಡ” ಎಂದು ಬಾಲಬಾರಿಗೂ ಪ್ರಾರ್ಥಿಸಿದಳು.

ಆ ಮನುಷ್ಯನು ನಿನಗೆ ಕಾರಾಗೃಹ ಪ್ರಾಪ್ತಿಯಾದರೆ ಏನುಮಾಡುವೆ?

ರೋ—ಅನುಭವಿಸುವೆನು.

ಮನುಷ್ಯ—ಅಂತಹ ಕೆಟ್ಟನೇನು ನಿನಗೆ ಬಂದಿರುವುದು?

ರೋ —ನಮ್ಮ ನಾಳು ತಂದೆಯಾದ ಕರುಣಾಕರನು ಈ ಯುದ್ಧದಲ್ಲಿ ಏಟು ತಿಂದು ಗಾಯಪಟ್ಟ ಸೈನಿಕರನ್ನು ಉಪಚರಿಸುವುದರಲ್ಲಿ ನಿರತನಾಗಿರುವನು. ಅತನನ್ನು ನಾನು ನೋಡಿಬೇಕಾಗಿರುವೆನು.

ಇದನ್ನು ನೋಡಿ ಆ ಮನುಷ್ಯನು ಏನ್ಮನಸ್ಕನಾಗಿ “ನಾನೇನೋ ಬಗೆದೆ ಬಡುವೆನು. ದೇವರು ಹೇಗಿರಿಸಿದಂತೆ ಆಗಲಿ; ನಿನ್ನನ್ನು ದೇವರು ರಕ್ಷಿಸಲಿ” ಎಂದು ಹೇಳಿ ಸ್ವಲ್ಪ ದೂರ ನಿಂತನು.

ರೋಹಿಣಿ, ಕರುಣಾಂಬೆಯರು ಪ್ರವೇಶಮಾಡಿ ಉದ್ಯಾನವನವನ್ನು ಸೇರಿದರು. ಆಹಾ! ಕಾಲವು ಯಾರೀತಿಯಲ್ಲಾದುವುದಿಲ್ಲ. ಚಕ್ರದೋಪಾದಿಯಲ್ಲಿ ತಿರುಗುತ್ತಲೇ ಇರುವುದು. ಈಗ ಸ್ವಲ್ಪ ದಿನಗಳಿಗೆ ಮುಂಚೆ ಪ್ರೇಕ್ಷಕರಿಗೆ ದುಃಖನಿವಾರಣೆಯನ್ನು ಮಾಡಿ, ಸಂತೋಷವನ್ನು ಉಂಟುಮಾಡುತ್ತಿದ್ದ ಸಸಿಗಳೂ, ಬಳ್ಳಿಗಳೂ, ವೃಕ್ಷಗಳೂ, ಕೃತಕಾಜಲಗಳೂ, ಏಕಾಂತಕ್ಕಾಗಿ ಏರ್ಪಡಿಸಿದ್ದ ಆಸನಗಳೂ ಸಮ ಶೂನ್ಯವಾಗಿರುವುವು. ಹಾವಸೆಗಳೆಂಬ ಕೊದಲುಗಳಿಂದಲೂ, ತಾವರೆ ಎಂಬ ಮುಖದಿಂದಲೂ, ಮೀನುಗಳೆಂಬ ಕಣ್ಣುಗಳಿಂದಲೂ, ದಡದಲ್ಲಿರುವ ಮಾವಿನ ಮರದ ಚಿಗುರುಗಳೆಂಬ ಚಂದ್ರಗಾವಿಯ ಪಲ್ಲವದಿಂದಲೂ, ಸಂಪಿಗೆ ಹೂವೆಂಬ ಮೂಗಿನಿಂದಲೂ, ನೆಳೆ ಎಂಬ ಸೊಂಟದಿಂದಲೂ, ಕುಮುದಪುಷ್ಪಗಳೆಂಬ ಮುಗುಳುನಗೆಯಿಂದಲೂ, ಕುಂದವೆಂಬ ಹಲ್ಲುಗಳಿಂದಲೂ, ನಿರ್ಮಲೋದಕವೆಂಬ ಲಾವಣ್ಯದಿಂದಲೂ ಕೂಡಿ ರಮಣೀಯವಾಗಿದ್ದ ಸರಸ್ಸುಗಳು ಕಾಂತಿಹೀನವಾಗಿರುವುವು. ಅವರು ಇವೆಲ್ಲವನ್ನೂ ಅವಲೋಕಿಸುತ್ತ ಮುಂದಕ್ಕೆ ತೆರಳಿದರು. ಅಷ್ಟರಲ್ಲೇ ಮತ್ತೊಬ್ಬ ಸೈನ್ಯಾಧಿಕಾರಿಯು ಬಂದು ಇಬ್ಬರನ್ನೂ ತಡೆದು “ನೀವು ಯಾರು? ಎಲ್ಲಿಗೆ ಹೋಗುವಿರಿ?” ಎಂದು ಪ್ರಶ್ನೆ

ಮಾಡಲು ಅಷ್ಟುಹೊತ್ತಿಗೆ ಎಲ್ಲಿಂದಲೊ ಒಂದು ಪಿರಂಗಿಯ ಗುಂಡು ರೋಹಿಣಿಯ ಕೈಯನ್ನು ಸವರಿಕೊಂಡು ಹೋಯಿತು. ಮತ್ತ ಅನೇಕ ಜನ ಸಿಪಾಯಿಗಳು ಬಂದು ಇವರನ್ನು ಸುತ್ತಿಕ್ಕೊಂಡರು. ಅಷ್ಟರಲ್ಲೆ ಈ ಸಮಾಚಾರವು ಸೈನ್ಯಾಧಿಪತಿಗೂ ತಿಳಿಯಿತು. ಆ ಸಮಯದಲ್ಲಿ ಅತನು ಅಲ್ಲಿಗೆ ಬಂದು ಬಾರಮ್ಮ ಹುಡುಗಿ! ನನ್ನೊಡನೆ! ಎಂದು ಕರೆದನು ಆ ಸಮಯದಲ್ಲಿ ರೋಹಿಣಿಯು " ತನ್ನ ಸುತ್ತಮುತ್ತಲೂ ಸುತ್ತಿಕೊಂಡಿರುವ ಜನರು ತನ್ನನ್ನು ಹಿಂಸೆಮಾಡುತಲಿದಾರೆ ಅದನ್ನು ತಪ್ಪಿಸಿಕೊಡಬೇಕು. ನಾನು ಯಾರಿಗೂ ತೊಂದರೆಯನ್ನು ಕೊಡುವುದಕ್ಕೆ ಬಂದವಳಲ್ಲ. ನಾನು ಸಹಾಯವಿಲ್ಲದ ಅಬಲೆ ಕಾರ್ಯಾಂತರವಾಗಿ ಈ ಯುದ್ಧರಂಗಕ್ಕೆ ಬಂದಿರುವೆನು. ಆದ್ದರಿಂದ ನನ್ನ ಗೋಜಿಗೆ ಬರದಂತೆ ಈ ಸಿಪಾಯಿಗಳಿಗೆ ಕಟ್ಟಪ್ಪಣೆಯನ್ನು ಮಾಡಬೇಕೆಂದು" ಪ್ರಾರ್ಥಿಸಿದಳು. ಅದಕ್ಕೆ ಅತನು ಈ ಪಟ್ಟಣವನ್ನು ನೀವುಗಳು ಪ್ರವೇಶಮಾಡುವುದಕ್ಕೆ ಮುಂಚೆಯೆ, " ನೀವು ಪ್ರವೇಶಮಾಡಬೇಡಿ ಹಾಗೆ ಪ್ರವೇಶಮಾಡಿದರೆ ತೊಂದರೆ ಯುಂಟಾಗುವುದು" ಎಂದು ಯಾರು ಎಚ್ಚರಿಸಲಿಲ್ಲವೆ? ಅದನ್ನು ನೀವು ಲಕ್ಷಿಸದೆ ಹೇಗೆ ಪುರಪ್ರವೇಶಮಾಡಿದಿರಿ? ಈಗ ಸಿಪಾಯಿಗಳು ಹಿಂಸಿಸುವರು. ಅವನ್ನು ತಪ್ಪಿಸಬೇಕೆಂದು ಹೇಳುವಿರಿ? ಬಂದದ್ದನ್ನೆಲ್ಲಾ ಅನುಭವಿಸಿಯೇ ತೀರಬೇಕು. ಎಂದು ಆಕೆಗೆ ತಿಳಿಸಿ ನಿಂತಿರುವ ಸಿಪಾಯಿಗಳನ್ನು ಕರೆದು ನೀವು ಅವರ ಗೋಜಿಗೆ ಹೋಗಬೇಡಿ ನಿಮ್ಮ ಕೆಲಸಗಳಲ್ಲಿ ನಿರತರಾಗಿ ಎಂದಪ್ಪಣೆ ಮಾಡಿದನು.

ನಂತರ ರೋಹಿಣಿಯ ಕಡೆಗೆ ತಿರುಗಿ ನೀನು ಯಾರು? ಈಕೆಯು ಯಾರು? ನಿನ್ನ ಹೆಸರೇನು? ಈಕೆಯ ಹೆಸರೇನು? ಈಕೆಗೆ ನೀನು ಏನುಆಗಬೇಕು? ನೀವು ಇಲ್ಲಿಗೆ ಬರಲು ಕಾರಣವೇನು? ಎಂಬೀ ಅಂಶಗಳನ್ನು ನಿರ್ವಂಚನೆಯಾಗಿ ತಿಳಿಸಬೇಕು ಎಂದು ದಕ್ಕೆ ರೋಹಿಣಿಯು ಆ ಸೈನ್ಯಾಧಿಪತಿಯನ್ನು ಕುರಿತು ನನ್ನ ಹೆಸರು ರೋಹಿಣಿ ಈಕೆಯ ಹೆಸರು ಕರುಣಾಂಬೆ ಈಕೆಯು ಪೂರ್ವದಲ್ಲಿ ಈ ಪುರಾಧ್ಯಕ್ಷನಾಗಿದ್ದವನ ಪತ್ನಿಯು ನಿನ್ನೆಯದಿವಸ ನನ್ನ ಸಾಕುತಂದೆಯಾದ ಕರುಣಾಕರನು ಈ ಯುದ್ಧದ ಸಂಗತಿಯನ್ನು ಸವಾರನ ಮೂಲಕ ನಮಿಗೆ ತಿಳಿಸಿದನು. ಆತನನ್ನು ಇಂತಹ ಕಷ್ಟ ಕಾಲದಲ್ಲಿ ಖಂಡಿತವಾಗಿಯೂ ನೋಡಲೇಬೇಕೆಂಬ ಕುತೂಹಲದಿಂದ ಈ ತೊಂದರೆಗಳನ್ನೆಲ್ಲಾ ಅನುಭವಿಸಿಕೊಂಡು ಬಂದೆವು. ಆತನನ್ನು ನೋಡಲು ಸಾವಕಾಶವಾಗುವುದು. ಜಾಗ್ರತೆಯಾಗಿ ಅಪ್ಪಣೆ ಕೊಡಿ ಎಂದು ಹೊರಡಲುದ್ಯುಕ್ತಳಾದಳು.

ಸೇನಾಪತಿಯು ಈಕೆಯ ಧೈರ್ಯವನ್ನೂ, ಪಿತೃವಾತ್ಸಲ್ಯವನ್ನೂ, ನೋಡಿ ಆನಂದಭರಿತನಾದಾಗ್ಗೂ ಅದನ್ನು ತೋರ್ಪಡಿಸದೆ ಕರುಣಾಕರನು ನಿನಗೆ ಹೇಗೆ ಸಾಕು

ತಂದೆಯು ? ಆತನಿಗಾಗಿ ನೀನು ಹೋಗಿ ಕಾರಾಗಾರವನ್ನು ಸೇರುವುದು ಯುಕ್ತವಲ್ಲ ಎಂದು ಸಾರಿ ಹೇಳುತ್ತಿದ್ದರೂ ರೋಹಿಣಿಯೂ ಕೂಡ ಸೇನಾಪತಿಯೇ ! ಲೋಕದಲ್ಲಿ ಹೆತ್ತತಂದೆ, ವಿದ್ಯೆಹೇಳಿದವನು, ಆಪತ್ಕಾಲದಲ್ಲಿ ಸಹಾಯಮಾಡಿದವನು, ಒಪ್ಪತ್ತು ಊಟಕ್ಕಿಕ್ಕಿದವನು, ಹೆಣ್ಣುಕೊಟ್ಟು ಮನೆಯನ್ನು ಉದ್ಧಾರಮಾಡಿದವನು ಇವರೆಲ್ಲರೂ ಪಿತೃಗಳು. ಮರಣೋನ್ಮುಖನಾಗಿ ಹಿಮದಲ್ಲಿ ಬಿದ್ದಿದ್ದ ನನ್ನನ್ನು ಕರತಂದು ಸಾಕಿ ಸಲಹಿ ಕಷ್ಟಪಟ್ಟ ಕರುಣಾಕರನು ಇಂತಹ ಯುದ್ಧದಲ್ಲಿ ಏನಾದನೆಂಬುದನ್ನು ಸಹ ನೋಡದೆ ಇರಲು ನಾನೇನು ಅಂತಹ ಕೃತಘ್ನಳಲ್ಲ. ಇದು ನಿನ್ನಂಥ ಪ್ರಾಜ್ಞನಾದ ಮನುಷ್ಯನು ತಿಳಿಯದ ವಿಷಯವಲ್ಲ ಎಂದು ಹೇಳಿ ಪ್ರತ್ಯುತ್ತರವನ್ನು ನಿರೀಕ್ಷಿಸದೆಯೇ ರೋಹಿಣಿಯು ಕರುಣಾಂಬೆಯ ಸಹಿತವಾಗಿ ಪುರವನ್ನು ಪ್ರವೇಶಿಸಿದಳು.

ರೋಹಿಣಿಯು ಲಕ್ಷ್ಯಮಾಡದೆ ಪ್ರವೇಶಿಸಿದ್ದನ್ನು ಸೇನಾಧಿಕಾರಿಯು ಜಕ್ರವರ್ತಿಯವರಿಗೆ ಅರಿಕೆಮಾಡಿದನು. ಜಕ್ರವರ್ತಿಯು ಕೂಡ ಈಕೆಯ ಧೈರ್ಯ, ಸ್ಥೈರ್ಯ, ಪಿತೃವಾತ್ಸಲ್ಯ ಇವುಗಳನ್ನು ಕೇಳಿ ಆಶ್ಚರ್ಯಭರಿತನಾಗಿ ಆಕೆಯನ್ನು ನೋಡಲು ಕುತೂಹಲಪಟ್ಟು ಸೈನ್ಯಾಧಿಕಾರಿಯನ್ನು ಕುರಿತು ಆಕೆಯೊಬ್ಬಳೇ ಪ್ರವೇಶಿಸಿರುವಳೇ ? ಅಥವಾ ಮತ್ತಾರಾದರೂ ಜೊತೆಯಲ್ಲಿ ಬಂದಿರುವರೆ ? ಎಂದು ಪ್ರಶ್ನಿಸಲು ಸೇನಾಧಿಕಾರಿಯು ತಾನು ಆಕೆಯನ್ನು ಕಂಡುದು ಮೊದಲ್ಗೊಂಡು ಸನ್ನಿಧಿಗೆ ಬರುವವರಿಗೆ ನಡೆದ ಸಮಾಚಾರವನ್ನು ಅರಿಕೆ ಮಾಡಿದನು. ಇದನ್ನೆಲ್ಲಾ ಸಾವಧಾನದಿಂದ ಕೇಳಿದ ಜಕ್ರವರ್ತಿಯು ಆಕೆಗೇನೂ ತೊಂದರೆ ಕೊಡದೆ ತನ್ನ ಬಳಿಗೆ ಕರತರಬೇಕೆಂದು ಸೇನಾಧಿಕಾರಿಗೆ ಆಜ್ಞಾಪಿಸಿದನು.

ಇತ್ತ ರೋಹಿಣಿಯು ಕರುಣಾಂಬೆಯೊಡನೆ ಯುದ್ಧರಂಗದಲ್ಲಿ ತನ್ನ ಸಾಕುತಂದೆಯಾದ ಕರುಣಾಕರನನ್ನು ಹುಡುಕುತ್ತ ಅನೇಕ ಶವಗಳನ್ನು ತುಳಿಯುತ್ತಲೂ ದಾಟುತ್ತಲೂ, ಮರಣಸಂಕಟದಿಂದ ನರಳುತ್ತಿರುವ ಅನೇಕ ಯೋಧರನ್ನು ನೋಡಿ ಕನಿಕರಪಡುತ್ತಲೂ, ಬಹುದೂರ ಅಲೆದಾಗ್ಯೂ ಕರುಣಾಕರ, ದಯಾಕರರ ಸುಳಿವೇ ತಿಳಿಯಲಿಲ್ಲ. ಅಷ್ಟರಲ್ಲೆ ಸೂರ್ಯದೇವನು ಅಸ್ತಂಗತವಾದನು. ರಣಾಂಗದಲ್ಲಿ ನಾಯಿನರಿಗಳು, ಗೂಬೆಗಳು, ಭೂತಪ್ರೇತ ಪಿಶಾಚಾದಿಗಳು ತಮ್ಮ ಬಳಗಗಳೊಳಗೊಂಡು ಶುಭಶೋಭನಾದಿಗಳನ್ನು ಮಾಡುತ್ತ ಅನೇಕವಿಧವಾದ ಭೋಜನಗಳಿಂದ ಉಪಚರಿಸುತ್ತ ತೃಪ್ತಿಹೊಂದಿ ಬೊಬ್ಬಿಡುತ್ತಲಿದ್ದುವು. ಅಂಧಕಾರ—ಅದರಲ್ಲೂ ಈ ಘೋರಭೀಕರವಾದ ಶಬ್ದ ಇವುಗಳ ನಡುವೆ ಸಂಚರಿಸುತ್ತಿರುವ ರೋಹಿಣಿಯ ಮನಸ್ಸಿನ ರೀತಿಯನ್ನು ಪಾಠಕಮಹಾಶಯರೇ ಊಹಿಸಿಕೊಳ್ಳಲಿ.

ಚಕ್ರವರ್ತಿಯ ಅಪ್ಪಣೆಯಂತೆ ಸೇನಾಧಿಪತಿಯು ನಾಲ್ಕುಕಡೆಗೂ ತನ್ನ ಸೇವಕರನ್ನು ರೋಹಿಣಿಯನ್ನು ಹುಡುಕುವುದಕ್ಕೆ ಅಟ್ಟಿದನು. ಎಷ್ಟು ಹುಡುಕಿದಾಗ್ಯೂ ರೋಹಿಣಿಯ ಮತ್ತು ಕರುಣಾಲಂಬೆಯರ ಸುಳಿವೇ ಗೊತ್ತಾಗಲಿಲ್ಲ. ಮುಂದೆ ಮಾಡತಕ್ಕ ಕೆಲಸದ ಯೋಜನೆಯಲ್ಲಿ ಎಲ್ಲರೂ ಕುಳಿತಿರುವಾಗ ಅಲ್ಲಿಗೆ ಸೇನಾಧಿಪತಿಯು ಬಂದನು.

ರಾತ್ರಿಯಲ್ಲಿ ಹೊದ್ದುಕೊಂಡಿದ್ದ ಕಪ್ಪು ಶಾಲನ್ನು ದೂರ ಬಿಸಾಟು ಪೂರ್ವದಿಶಾದೇವಿಯು ಶುಭ್ರವಸ್ತ್ರವನ್ನು ಪರಿಧಾನಮಾಡಿಕೊಳ್ಳುತ್ತಿರುವಳು. ನಿಬಿಡವೃಕ್ಷಗಳೊಳಗಿಂದ ಒಂದೆರಡು ಪಕ್ಷಿಗಳ ಮಂಜುಳರವವು ಕಿವಿಗೆ ಕೇಳಿಬರುತ್ತಿರುವುದು. ಸೂರ್ಯೋದಯಕ್ಕೆ ಇನ್ನೂ ಎಷ್ಟೋ ಅವಕಾಶವಿದ್ದಿತು. ಪಕ್ಷಿಸಮೂಹವು ಇನ್ನೂ ತಮ್ಮತಮ್ಮ ಗೂಡುಗಳಿಂದ ಹೊರಬಿದ್ದಿರಲಿಲ್ಲ. ಶೀತಲವಾದ ಮಂದಮಾರುತನು ತನ್ನ ಮಹತ್ವವನ್ನು ತೋರ್ಪಡಿಸುತ್ತಿರುವನು. ಪ್ರಾತಃಕಾಲದ ಶೀತವಾಯುವಿನ ಮಹತ್ವವನ್ನು ಎಷ್ಟು ಬಣ್ಣಿಸಿದರೂ ಸ್ವಲ್ಪವೇ ಸರಿ! ಎಷ್ಟು ಶೀತಲ, ಸುಗಂದ, ಮನಸ್ಸಿಗೆ ಎಷ್ಟೊಂದು ಆಹ್ಲಾದಕರ, ಇದರ ಸುಖಕರಸ್ಪರ್ಶದಿಂದ ಸರ್ವಾಂಗವೂ ಅಮೃತರಸದಿಂದ ಅಭಿಷಿಕ್ತವಾದಂತೆ ಭಾಸವಾಗುತ್ತಲಿದೆ, ಅಂತಃಕರಣವು ಸುಪ್ರಸನ್ನವಾಗಿ ಉಲ್ಲಸಿತವಾಗುತ್ತದೆ. ಸೃಷ್ಟಿದೇವತೆಯ ಈ ಕಾಲದ ಸ್ವರೂಪವು ಎಷ್ಟು ಮಧುರ! ಎಷ್ಟು ಕೋಮಲವಾದ ಆನಂದವನ್ನು ಕೊಡುವಂತಹದು! ಈ ಮಾಧುರ್ಯದ ಅಥವಾ ಕೋಮಲತೆಯ ಅನುಭವವನ್ನು ಸ್ವತಃ ಅನುಭವಿಸಿದ ಹೊರತು ಬರಿಯ ವರ್ಣನೆಯಿಂದ ವ್ಯಕ್ತಪಡಿಸಲು ಅಶಕ್ಯವು. ದಿನಮಣಿಯು ಸ್ವಲ್ಪಸ್ವಲ್ಪವಾಗಿ ತನ್ನ ಮುಖಮಂಡಲದ ಕಾಂತಿಯನ್ನು ಪ್ರಪಂಚಕ್ಕೆ ತೋರ್ಪಡಿಸಹತ್ತಿದನು. ಪಕ್ಷಿಗಳೆಲ್ಲವೂ ಆಹಾರಾರ್ಥವಾಗಿ ಹಾರಿಹೋಗುತ್ತಿರುವುವು. ಪತಿಸಮ್ಮುಖದಿಂದ ಎದ್ದು ಗೃಹಿಣಿಯರು ತಮ್ಮತಮ್ಮ ಗೃಹಕಾರ್ಯನಿರತರಾಗಿರುವರು. ಕೆಲಸವಿಲ್ಲದ ಸೋಮಾರಿಗಳು ಇನ್ನೂ ಹಾಸಿಗೆಯಮೇಲೆ ಮಲಗಿಕೊಂಡು ಮುಸುಕುಗಳನ್ನು ಬಲವಾಗಿ ಎಳೆದುಕೊಳ್ಳುತ್ತಿರುವರು. ಸಣ್ಣ ಮಕ್ಕಳು ತಮ್ಮ ಮಾತೆಯರನ್ನು ಪೀಡಿಸಿ ತಿಂಡಿಯನ್ನು ಇಸುಕೊಂಡು ತಿನ್ನುತ್ತಾ ತಮ್ಮತಮ್ಮ ಕಪ್ಪುಹಲಿಗೆಗಳೊಂದಿಗೆ ಪಾಠಶಾಲೆಗೆ ಹೋಗುತ್ತಿರುವರು. ಹೀಗಿರುವಲ್ಲಿ ಸೇನಾಪತಿಯು ತನ್ನ ಸೇವಕರನ್ನು ಈಗ ಇನ್ನೊಂದು ಬಾರಿ ಹುಡುಕಿ ಎಲ್ಲಿದ್ದಾಗ್ಯೂ ಆ ಹುಡುಗಿಯನ್ನು ಕರತರಬೇಕೆಂತಲೂ ಹಾಗೆ ಕರತರದೆ ತಪ್ಪಿದಲ್ಲಿ ಚಕ್ರವರ್ತಿಯ ಎದುರಿನಲ್ಲಿ ಅಪಮಾನ ಹೊಂದಬೇಕಾಗುತ್ತದೆಂಬುದಾಗಿಯೂ ಹೇಳಿ ಅವರನ್ನೆಲ್ಲಾ ಕಳುಹಿಸಿ ತಾನೂ ಮಂದಿರದಿಂದ ಹೊರಟನು.

ರೋಹಿಣಿಯು ತನ್ನ ಅತ್ತೆಯೊಡನೆ ರಾತ್ರಿಯೆಲ್ಲಾ ಭಯದಿಂದಲೂ, ಕರುಣಾಕರ, ದಯಾಕರರು ಸಿಗಲಿಲ್ಲವೆಂಬ ವ್ಯಸನದಿಂದಲೂ, ಕಲ್ಯಾಣಪುರದಿಂದ ನಡೆದು ಬಂದುದರಿಂದುಂಟಾದ ಆಯಾಸದಿಂದಲೂ, ಮುಂದಕ್ಕೆ ಒಂದು ಹೆಜ್ಜೆಯನ್ನಾದರೂ ಇಡುವುದಕ್ಕೆ ಆಗದೆ ಹೋಗಲು ಅಲ್ಲಿಯೇ ಕುಳಿತುಬಿಟ್ಟಳು. ಭೃತ್ಯರಲ್ಲಿ ಒಬ್ಬನು ಇವರಿಬ್ಬರನ್ನೂ ದೂರದಿಂದಲೇ ನೋಡಿ ಶವದುರ್ಗಂಧವಾದ ರಣಾಂಗದಲ್ಲಿ ಹೀಗೆ ಯೋಚನಾಪರಳಾಗಿ ಕುಳಿತಿರುವ ಯುವತಿ ಯಾರು? ಇವರು ಯಾವ ಕಾರ್ಯಾರ್ಥವಾಗಿ ಕುಳಿತಿರಬಹುದು? ನಮ್ಮ ಸೇನಾಪತಿಯು ಕರತರಬೇಕೆಂದು ಆಜ್ಞಾಪಿಸಿದ್ದು ಇವರನ್ನೇ ಇರಬಹುದೆ? ಹಾಗೆ ಇವರೇ ನಾವು ಹುಡುಕುವ ವ್ಯಕ್ತಿಯಾದಲ್ಲಿ ನನ್ನ ಅದೃಷ್ಟಕ್ಕೆ ಎಣೆಯೇ ಇಲ್ಲ ಎಂದು ತನ್ನಲ್ಲಿತಾನೇ ಆಲೋಚಿಸುತ್ತಾ ಅವರಿಬ್ಬರ ಬಳಿಗೆ ಹೋಗಿ ತಾಯಿ! ತಾವು ಯಾರು? ಇಲ್ಲಿಗೆ ಯಾತಕ್ಕಾಗಿ ಬಂದಿರುವಿರಿ? ಎಂದು ಕೇಳಲು ರೋಹಿಣಿಯು ನಾವು ಯಾರಾದರೇನು? ನಿನಗೆ ತಿಳಿದಿದ್ದರೆ ಕರುಣಾಕರ ದಯಾಕರರ ಸಮಾಚಾರವನ್ನು ತಿಳಿಸು ಇಲ್ಲವಾದರೆ ನಿನ್ನ ದಾರಿಯನ್ನು ಹಿಡಿದುಕೊಂಡು ಹೊರಡಬಹುದು. ನಮ್ಮ ವೃತ್ತಾಂತವನ್ನು ತಿಳಿಸುವುದಕ್ಕೆ ಮುಂಚಿತವಾಗಿ ಕರುಣಾಕರ ದಯಾಕರರ ಸಮಾಚಾರವನ್ನು ತಿಳಿಯಲು ನಮ್ಮ ಮನಸ್ಸು ಬಾಧಿಸುತ್ತಿರುವುದು. ಎಂದು ಹೇಳಿದಳು ಈ ಮಾತುಗಳನ್ನು ಕೇಳಿದ ಭೃತ್ಯನು ತನ್ನ ಸೇನಾಪತಿಬಳಿಗೆ ಹೋಗಿ ಅಲ್ಲಿ ನಡೆದ ವಿಷ್ಯವಾನಗಳನ್ನು ಆದ್ಯಂತವಾಗಿ ತಿಳಿಸಿದನು. ಕೂಡಲೇ ಸೇನಾಪತಿಯು ಭೃತ್ಯನ ಜೊತೆಯಲ್ಲಿ ಆ ವನಿತೆಯರಿಬ್ಬರಿದ್ದ ಸ್ಥಳಕ್ಕೆ ಹೊರಟನು. ಪೂರ್ವಪರಿಚಿತನಾದ ಸೇನಾಪತಿಯನ್ನು ನೋಡಿ ಕರುಣಾಂಬೆಯು ಅವನ ಬರುವಿಕೆಗೆ ಕಾರಣವನ್ನು ಕೇಳಿದಳು. ಅದಕ್ಕೆ ಸೇನಾಪತಿಯು ಚಕ್ರವರ್ತಿಸಾರ್ವಭೌಮರು ತಮ್ಮನ್ನು ಅವರ ವಿಚಾರಕ್ಕೆ ಕರತರುವಂತೆ ಆಜ್ಞಾಪಿಸಿರುವರು. ಅದೇ ಪ್ರಕಾರ ನಿಮ್ಮನ್ನು ಹುಡುಕುವುದಕ್ಕೋಸ್ಕರ ಅನೇಕ ಸೇವಕರನ್ನು ಕಳುಹಿಸಿ ಕಡೆಗೆ ಈ ಭೃತ್ಯನಿಂದ ತಮ್ಮ ಸಮಾಚಾರವನ್ನು ತಿಳಿದು ನಾನೇ ಬಂದಿರುವೆನು. ಜಾಗ್ರತೆಯಾಗಿ ತಾವು ಹೊರಟರೆ ತಮ್ಮನ್ನು ಚಕ್ರವರ್ತಿಸಾರ್ವಭೌಮರವರ ಸನ್ನಿಧಿಗೆ ಕರದುಕೊಂಡು ಹೋಗುವೆನು ಎಂದು ಬಹು ನಮ್ರಭಾವದಿಂದ ಹೇಳಲು, ರೋಹಿಣಿ ಮತ್ತು ಕರುಣಾಂಬೆಯರು ತಮ್ಮನ್ನು ಚಕ್ರವರ್ತಿಯು ಕರೆಸಲು ಕಾರಣವೇನಿರಬಹುದು? ರಣಾಂಗಕ್ಕೆ ಪ್ರವೇಶಿಸಿದ ಸಂಗತಿಯನ್ನು ತಿಳಿದು ತನ್ನ ಅಪ್ಪಣೆಗೆ ವಿರುದ್ಧವಾಗಿ ನಡೆದಿರಬಹುದೆಂದು ಶಾಸನಮಾಡಲೇನಾದರೂ ಕರೆಸಿರುವನೋ? ಹೇಗಿದ್ದರೂ ಹೋಗಿಯೇತೀರಬೇಕು. ಅವರ ಬಲಾತ್ಕಾರದಿಂದ ನಾವು ಹೋಗುವುದಕ್ಕಿಂತಲೂ, ಮರ್ಯಾದೆಯಾಗಿ ನಾವೇ

ಹೋಗುವುದು ಉತ್ತಮ. ಆದರೆ ನಾನೇನೋ ವೃದ್ಧಳು ರೋಹಿಣಿಯು ಯೌವನಾರಂಭದಲ್ಲಿರುವಳು. ಅಲ್ಲದೆ ಅಸಾಧಾರಣರೂಪವತಿಯು. ಜಗದೀಶ್ವರನು ಹಿಂದೆ ಅನಾಥಳಾಗಿದ್ದ ರೋಹಿಣಿಯನ್ನು ಕಾಪಾಡಿದಂತೆ ಈಗಲೂ ಪಾಲಿಸುವುದರಲ್ಲಿ ಸಂಶಯವೇನಿರುವುದು ಎಂದು ಮನಸ್ಸಿನಲ್ಲಿ ಯೋಚಿಸುತ್ತಾ ಸೇನಾಪತಿಯೊಡನೆ ಹೊರಟಳು. ಎಲ್ಲರೂ ರಣಾಂಗಣವನ್ನು ಬಿಟ್ಟು ಒಂದು ಬಯಲಿಗೆ ಬಂದರು. ಅಲ್ಲಿ ಒಂದು ನದಿಯು ಹರಿಯುತ್ತಿತ್ತು. ತಪೋನಿಧಿಗಳಾದ ಬ್ರಾಹ್ಮಣರು ಲೋಕಕಲ್ಯಾಣಾರ್ಥವಾಗಿ ಸಂಚಾರ ಮಾಡಿಕೊಂಡು ಅಸ್ತಾಚಲಶಿಖರದಮೇಲೆ ವಿಶ್ರಮಿಸಿಕೊಂಡ ಸೂರ್ಯನಾರಾಯಣನಿಗೆ ಸೀತೋಪಚಾರಮಾಡಲೆಸಸಗಿರುವಂತೆ ಅರ್ಘ್ಯಗಳನ್ನು ಕೊಡುತ್ತಲಿರುವರು. ಸುವಾಸಿನಿಯರು ತುರುಬಿನಲ್ಲಿ ಹೂ ಮುಡಿದು ತಾಂಬೂಲವನ್ನು ಸವಿಯುತ್ತಾ ಥಳಥಳಿಸುವ ಕೊಡಗಳನ್ನು ತೆಗೆದುಕೊಂಡು ದಂಡೆಯಮೇಲೆ ಕುಳಿತು ಪರಸ್ಪರ ವಿನೋದ ಹಾಸ್ಯಾಸ್ಪದವಾದ ಮಾತುಗಳನ್ನಾಡುತ್ತಿರುವರು. ಇದನ್ನು ನೋಡಿದರೆ ಸುರಾಂಗನೆಯರು, ಗಂಗೆಯ ಸುಧಾಮಯ ಸಲಿಲಕ್ಕಿಂತಲೂ ಈ ನದಿಯ ನೀರು ಹೆಚ್ಚು ಸವಿಯಾಗಿ ಕಂಡುಬಂದುದರಿಂದ ಸುವರ್ಣಕಲಶಗಳನ್ನು ತಂದು ಈ ನೀರನ್ನು ಒಯ್ಯುವರೋ ಎಂಬಂತೆ ಕಾಣುತ್ತಿತ್ತು. ರೋಹಿಣಿ ಕರುಣಾಂಬೆಯರು ಈ ಸೃಷ್ಟಿವೈಭವನನ್ನೂ ಕೂಡ ನೋಡದೆ ಸೇನಾಪತಿಯ ಹಿಂದೆ ಸಾಗಿದರು. ಒಂದು ರಮ್ಯವಾದ ವನಸಿಕ್ಕಿತು. ಸಂತಸವಾಗಿ ಹರಿಯುವ ಹಳ್ಳವು ನಾಗಮುರಿಯಂತೆ ಈ ಉದ್ಯಾನದಲ್ಲಿ ಹಾಯ್ದುಹೋಗಿದ್ದುದರಿಂದ ಅದು ಬಹು ರಮಣೀಯವಾಗಿದ್ದಿತು. ಹೀಗೆ ಮುಂದೆ ಎರಡು ಮಗ್ಗುಲಿಗೂ ವಿಧವಿಧವಾಗಿ ಗಿಡಗಳು ಹಾಕಲ್ಪಟ್ಟಿದ್ದವು. ಸ್ವಲ್ಪ ದೂರದಲ್ಲಿ ಒಂದು ರಮಣೀಯವಾದ ಸೌಧವು ಕಾಣಿಸುತ್ತಿತ್ತು. ಸೌಧದಿಂದ ವನವನ್ನು ಸೇರಲು ನಾಲ್ಕು ಹಾದಿಗಳಿದ್ದುವು. ಅಲ್ಲಲ್ಲಿ ವೃಕ್ಷವಾಟಿಕೆಗಳಿದ್ದು ಅವುಗಳ ಮಧ್ಯದಲ್ಲಿ ವಿಶ್ರಾಂತಿಗಾಗಿ ಹಲಗೆಯ ಮತ್ತು ಕಬ್ಬಿಣದ ಆಸನಗಳನ್ನು ಹಾಕಿದ್ದರು. ಉಪವನದಿಂದ ಮಂದಿರಕ್ಕೆ ಹೋಗುವುದಕ್ಕೆ ಕೆಂಪುಮಣ್ಣು ಮರಳುಸೇರಿಸಿ ಅದರಿಂದ ಮಾಡಿದ್ದ ಪ್ರಶಸ್ತವಾದ ಮಾರ್ಗ. ಎದುರಿಗೆ ಮೂರು ಅಂತಸ್ತಿನ ಮಹಡಿಯ ಮನೆ. ಅದಕ್ಕೆ ಹತ್ತುವುದಕ್ಕೆ ಅಮೃತಶಿಲೆಯಿಂದ ನಿರ್ಮಿತವಾದ ಮೆಟ್ಲುಗಳು. ಮನೆಯ ಮುಂಭಾಗದಲ್ಲಿ ಉಭಯಪಾರ್ಶ್ವದಲ್ಲಿಯೂ ಪಹರೆಯವರು ಇರುವುದಕ್ಕೆ ಮನೆಗಳು. ಮಹಡಿಯಮೇಲೆ ಸುಂದರವಾದ ನೆಲಕ್ಕೆ ಚಿತ್ರಮಯವಾದ ರತ್ನಗಂಬಳಿಯನ್ನು ಹಾಸಿದ್ದರು. ಮಧ್ಯಭಾಗದಲ್ಲಿ ಒಳ್ಳೆಯ ನುಣುಪಾದ ಕರೀ ಹಲಗೆಯ ವಿಸ್ತಾರವಾದ ದುಂಡುಮೇಜವಿದ್ದಿತು. ಅದರ ಸುತ್ತಲೂ ನಾಲ್ಕಾರು ಕುರ್ಚಿಗಳಿದ್ದುವು. ಗೋಡೆಗಳನ್ನು ನಾನಾವಿಧವಾದ ಸುಂದರ

ವಾದ ಚಿತ್ರಪಟಗಳಿಂದ ಅಲಂಕರಿಸಿದ್ದರು. ಈ ಗೃಹವು ಮೊದಲು ಸುವರ್ಣಪುರಾಧೀಶ್ವರನ ಬೇಸಿಗೆಯಕಾಲದ ಆರಾಮಮಂದಿರವಾಗಿದ್ದಿತು. ಅವಂತೀಶನು ಆ ರಾಜ್ಯವನ್ನು ತನ್ನ ಕೈವಶಮಾಡಿಕೊಂಡತೊಡಲೇ ಪಟ್ಟಣದ ನಾನಾ ಭಾಗಗಳಲ್ಲಿಯೂ ಯುದ್ಧದಲ್ಲಿ ಮೃತಪಟ್ಟವರ ದೇಹಗಳು ನಾರುತ್ತಾ ಕೊಳೆತು ದುರ್ಗಂಧಗಳನ್ನು ದೆಸೆ ದೆಸೆಗೂ ಬೀರುತ್ತಿದ್ದುದರಿಂದ ಆ ದುರ್ಗಂಧವನ್ನು ಸಹಿಸಲಾರದೆ ಈ ಮಂದಿರದಲ್ಲೇ ವಾಸಿಸುತ್ತಿದ್ದನು.

ಸೇನಾಪತಿಯು ರೋಹಿಣಿ ಕರುಣಾಂಬೆಯರೊಂದಿಗೆ ಆ ಮಂದಿರಕ್ಕೆ ಪ್ರವೇಶಿಸಿದನು. ದಿವಾನಖಾನೆಯಲ್ಲಿ ಆರಾಮಕುರ್ಚಿಯಮೇಲೆ ಸುಖಾಸೀನನಾಗಿದ್ದ ಅವಂತೀಶ್ವರನಿಗೆ ರೋಹಿಣಿ ಕರುಣಾಂಬೆಯರನ್ನು ತಾನು ಹುಡುಕಿಸಿ ಕರತಂದಿರುವೆನೆಂದು ವಿಜ್ಞಾಪಿಸಿಕೊಂಡು ಆ ಯುವತಿಯರಿಬ್ಬರನ್ನೂ ದಿವಾನಖಾನೆಯಲ್ಲಿಯೇ ಬಿಟ್ಟು ತಾನು ಹೊರಟು ಹೋದನು. ಆ ಅವಂತೀಶನು, ಮೌನದಿಂದ ತಲೆವಾಗಿ ರೋಹಿಣಿ ಕರುಣಾಂಬೆಯರನ್ನು ಕುರಿತು ನೀವು ಯಾರೆಂದು ಪ್ರಶ್ನೆಮಾಡಲು ಯಾವ ಉತ್ತರವೂ ಬರಲಿಲ್ಲ.

ಅವಂತೀಶ:—ಎಲೌ ಸುಂದರಿಯರೆ ಏತಕ್ಕೆ ಮೌನವನ್ನು ಧರಿಸಿರುವಿರಿ? ನನ್ನನ್ನು ನಿಮ್ಮ ಸಹೋದರನೆಂದು ನಂಬಿ ನಿಮ್ಮ ವೃತ್ತಾಂತವನ್ನ ತಿಳಿಸಿರಿ.

ಕರುಣಾಂಬೆ:—ಭೂಮೀಶ್ವರನೆ! ನಾನು ಸುವರ್ಣಪುರಾಧೀಶ್ವರನ ತೃತೀಯ ಪತ್ನಿಯು. ಈಕೆಯು ನನ್ನ ಸೋದರಪಾಲಿತ ಪುತ್ರಿ.

ಅವಂತೀಶ:—ಹಾಗಾದರೆ ನಿಮ್ಮ ಸೋದರರು ಯಾರು?

ಕರುಣಾಂಬೆ:—ಆ ಪರೋಪಕಾರಶಿಖಾಮಣಿಗಳು ತಮಗೂ, ಸುವರ್ಣಪುರಾಧೀಶ್ವರನಿಗೂ, ನಡೆದ ಯುದ್ಧರಂಗದಲ್ಲಿ ಘಾಯಪಟ್ಟು ಮರಣೋನ್ಮುಖರಾಗುವವರ ಸಹಾಯಕರಾಗಿ ಇಲ್ಲಿ ಇರುವರೆಂದು ತಿಳಿದು, ಬಂದೆವು.

ಅವಂತೀಶ:—ಹಾಗಾದರೆ ನೀವು ಕರುಣಾಕರ, ದಯಾಕರರ ಸಹೋದರಿಯರೊ?

ಕರುಣಾಂಬೆ:—ಹೌದು, ಮಹಾಪ್ರಭು!

ಅವಂತೀಶ:—ನಿಮ್ಮ ಬಳಿಯಲ್ಲಿ ನಿಂತಿರುವ ಈ ಸುಂದರೀಮಣಿಯು ಕರುಣಾಕರರ, ದಯಾಕರರ ಸಾಕುಮಗಳೆಂದು ಹೇಳಿದರಷ್ಟೆ? ಅದು ಹೇಗೆ?

ಕರುಣಾಂಬೆಯು ಅವಂತೀಶನೊಡನೆ ರೋಹಿಣಿಯು ಶಿಶುವಾಗಿದ್ದಾಗಿನಿಂದಲೂ ಅವಳ ಚರಿತ್ರೆಯನ್ನು ಸವಿಸ್ತಾರವಾಗಿ ವಿಜ್ಞಾಪಿಸಿಕ್ಕೊಂಡಳು. ಇದನ್ನು ಕೇಳಿದ ಕೂಡಲೇ ಅವಂತೀಶನು ತುಂಬಾ ವ್ಯಸನಾಕ್ರಾಂತನಾಗಿ ರೋಹಿಣಿ ಕರುಣಾಂಬೆಯರ ಕಡೆಗೆ ತಿರುಗಿ

ಎಲೌ ! ಭಾತೃವಾತ್ಸಲರಾದ ರಮಣಿಯರೆ ? ನೀವು ಯಾವವಿಧವಾದ ಯೋಚನೆಯನ್ನೂ ಮಾಡದಿರಿ ! ಕರುಣಾಕರ ದಯಾಕರರೀರ್ವರನ್ನೂ ಈ ದಿನ ಸಂಧ್ಯಾಕಾಲದೊಳಗಾಗಿ ಎಲ್ಲಿದ್ದರೂ ಹುಡುಕಿಸಿ ತಮ್ಮ ಬಳಿಗೆ ಬರಮಾಡುವೆನು ಎಂದು ಹೇಳಿ ರೋಹಿಣಿಯನ್ನು ಕಣ್ಣುತುಂಬ ನೋಡಿ ಆನಂದಪರವಶನಾಗಿ ಸೈನ್ಯಾಧಿಕಾರಿಯನ್ನು ಕುರಿತು ಈ ಯುವತಿಯರಿಬ್ಬರನ್ನೂ ಕರದುಕ್ಕೊಂಡು ಹೋಗಿ ಅವರಿಗಾಗಿ ಬೇರೆಯೊಂದು ಕೊಠಡಿಯನ್ನು ತೆರವುಮಾಡಿಕೊಡಬೇಕು. ಮತ್ತು ಇವರ ಉಪಚಾರಗಳನ್ನು ನೀನೇ ಸಾಕ್ಷಾತ್ತಾಗಿ ನೋಡಿಕೊಳ್ಳಬೇಕೆಂದು ಆಜ್ಞೆಯಿತ್ತು ಭೋಜನಶಾಲೆಯನ್ನು ಹೊಕ್ಕನು.

ಭೋಜನಾಲಯದಲ್ಲಿ ಪದ್ಧತಿಗನುಸಾರವಾಗಿ ಎಲ್ಲವೂ ಸಿದ್ಧವಾಗಿದ್ದಿತು. ರಾಜಬಂಧುಗಳೂ, ಮಂತ್ರಿಗಳೂ, ಸೇನಾಧಿಕಾರಿಗಳೂ ಇತರ ಅಧಿಕಾರಿಗಳೂ ತಮ್ಮ ತಮ್ಮ ನಿಯಮಿತಸ್ಥಳಗಳಲ್ಲಿ ಕುಳಿತರು. ಎಲ್ಲರೂ ಭುಂಜಿಸಿದರು. ಆದರೆ ಚಕ್ರವರ್ತಿಯು ಮಾತ್ರ ನಿತ್ಯವೂ ಇದ್ದಂತೆ ಇರದೆ ಯಾರಜೊತೆಯಲ್ಲಿಯೂ ಮಾತನ್ನಾಡದೆ ಸುಮ್ಮನೆ ಯಾವುದೋ ಯೋಚನೆಯಲ್ಲಿ ಮಗ್ನನಾಗಿದ್ದುದನ್ನು ಕಂಡು ಉಳಿದವರೆಲ್ಲರೂ ಚಕಿತರಾದರು. ಆದರೆ ಕಾರಣವನ್ನು ಕೇಳಲು ಯಾರಿಗೆತಾನೇ ಧೈರ್ಯ. ಯಾರೊಬ್ಬರೂ ಯಾವ ಪ್ರಸ್ತಾಪವನ್ನೂ ಮಾಡಲಿಲ್ಲ. ಸೇನಾಪತಿಯು ರೋಹಿಣಿ, ಕರುಣಾಂಬೆಯರನ್ನು ಕರದುಕ್ಕೊಂಡು ಬಂದುಬಿಟ್ಟ ಸಂಗತಿ ವಿನಹ ಮತ್ಯಾವದನ್ನೂ ಅರಿಯನು.

ಸಪ್ತಮಲಹರಿ.

ಚಿಂತೆಗೂ ಚಿತೆಗೂ ಒಂದು ಬಿಂದು ಮಾತ್ರ ವ್ಯತ್ಯಾಸವಿರುವಾದರೂ ಮೊದಲನೆಯದು ನಿರ್ಜೀವ ವಸ್ತುಗಳನ್ನೂ ಎರಡನೆಯದು ಸಜೀವ ವಸ್ತುಗಳನ್ನೂ ದಹಿಸಿಬಿಡುವುದು. ಲೋಕದಲ್ಲಿ ಎಲ್ಲಾ ರೋಗಗಳಿಗೂ ಔಷಧಗಳೂ ಚಿಕಿತ್ಸೆಗಳೂ ಉಂಟು. ಆದರೆ ಈ ಚಿಂತಾರೋಗಕ್ಕೆ ಯಾವ ಔಷಧವೂ ಚಿಕಿತ್ಸೆಯೂ ದೇವಲೋಕದ ವೈದ್ಯ ಶಿರೋಮಣಿಗಳಾದ ಅಶ್ವನೀದೇವತೆಗಳೂ ಕೂಡ ಕಂಡುಹಿಡಿದ ಹಾಗೆ ಕಾಣಬರಲಿಲ್ಲ.

ಮತ್ತೆ ಮಾನುಷನ್ಮೆದ್ಯರ ಪಾಡೇನು. ಈ ರೋಗವು ಒಂದಾವರ್ತಿ ಆಕ್ರಮಣಮಾಡಿ ದರೆ ತನ್ನ ಇಷ್ಟಾಪೂರ್ತಿಯಾದಮೊರತು ಕದಲುವುದೇ ಇಲ್ಲ.

ಪಾತಕ ಮಹಾಶಯರೆ! ಚಿಂತೆಗಳು ಹಲವು ತರಗಳಾಗಿರುವುವು. ನವವಧು ವಿಗೆ ಪತಿಯಚಿಂತೆ. ಅಪುತ್ರನಿಗೆ ಪುತ್ರನಚಿಂತೆ. ಬ್ರಹ್ಮಚಾರಿಗೆ ವಿವಾಹಚಿಂತೆ. ಕುರು ಬನಿಗೆ ಕುರಿಯಚಿಂತೆ, ಲುಬ್ಧನಿಗೆ ಧನದಚಿಂತೆ, ಗೌಳಿಗನಿಗೆ ಆಕಳಚಿಂತೆ, ಬೇಡನಿಗೆ ಮೃಗಗಳಚಿಂತೆ, ಬೆಸ್ತನಿಗೆ ಮೀನಿನಚಿಂತೆ, ರೋಗಿಗೆ ಮರಣದಚಿಂತೆ, ದರಿದ್ರನಿಗೆ ಸಾಲ ದಚಿಂತೆ, ವೇಶ್ಯಗೆ ಧನಿಕಪ್ರಿಯಏಟನಚಿಂತೆ, ದೇವತೆಗಳಿಗೆ ಭೂಲೋಕದಚಿಂತೆ, ಮಕ್ಕಳಿಗೆ ತಿಂಡಿಯಚಿಂತೆ, ರೈಲ್ವೆಯವರಿಗೆ ಪ್ರಯಾಣಿಕರಚಿಂತೆ, ವಿಧುರನಿಗೆ ಪತ್ನಿಯ ಚಿಂತೆ, ವಿತಂತುವಿಗೆ ಪತಿಯಚಿಂತೆ ಹೀಗೆ ಇರುವುವು.

ಇವೆಲ್ಲಕ್ಕಿಂತ ಪ್ರಬಲವೂ ದುಸ್ಸಹವೂ ಆದ ಚಿಂತೆಯೊಂದು ಇರುವುದು. ಲೋಕದಲ್ಲಿ ‘‘ ಅಪುತ್ರಸ್ಯ ಗತಿರ್ನಾಸ್ತಿ ’’ ಎಂಬ ಶ್ರುತಿಯಂತೆ ಮಕ್ಕಳಿಲ್ಲದವನಿಗೆ ಗತಿಇ ಲ್ಲವೆಂಬುದೇನೋ ನಿಜ. ಮಕ್ಕಳಲ್ಲಿ ಎರಡು ವಿಧವೆಂಬುದು ಸರ್ವಸಾಮಾನ್ಯವಾದ ವಿಷಯ ಅದರಲ್ಲಿ ಮೊದಲನೇಯದು ಗಂಡುಮಕ್ಕಳ ವಿಷಯವನ್ನು ನೋಡೋಣ. ಇವ ರಲ್ಲಿ ಹುಟ್ಟಿದಕೂಡಲೇ ಸಾಯುವರು ಕೆಲವರು. ಮಧ್ಯಕಾಲದಲ್ಲಿ ಸಾಯುವರು ಕೆಲ ವರು. ಬಹುದಿನಗಳವರಿಗೆ ಬದುಕಿ ಬಾಳಿ ದೇಹವನ್ನಿಡುವರು ಕೆಲವರು. ಇದು ಮೃತಪ ಡುವರ ಸಂಗತಿಯು. ಇನ್ನು ಜೀವಿತಪುತ್ರರ ಸಂಗತಿಯನ್ನು ನೋಡುವ ಬಾಲ್ಯದಲ್ಲಿ ಮಾತಾಪಿತೃಗಳಿಂದ ಪೋಷಿತರಾಗಿ ವರ್ಣಾಶ್ರಮಧರ್ಮಕ್ಕನುಸಾರವಾದ ಕರ್ಮಗ ಳನ್ನೂ ಯೌವನಾವಸ್ಥೆಯನ್ನೂ ಹೊಂದಿಸಿ, ತನ್ನನ್ನು ಹೊತ್ತು, ಹೆತ್ತು, ಸಾಕಿ, ಸಲಹಿ, ವಿದ್ಯಾಭ್ಯಾಸಮಾಡಿಸಿದ ಮಾತಾಪಿತೃಗಳ ಇಷ್ಟಾನುಸಾರವಾಗಿ ನಡೆದು ಬಾಳುವವನು ಸುಪುತ್ರನೆನ್ನಿಸಿಕೊಂಡು ತಾನು ಸಂತೋಷವಾಗಿದ್ದು ತನ್ನ ಮಾತಾಪಿತೃ ಗಳನ್ನು ಆನಂದಾಬ್ಧಿಯಲ್ಲಿ ಮುಳುಗಿಸುವನು. ಇಂಥವರು ದುಷ್ಪುತ್ರರಾದರೆ ಅವರು ಲೋಕಕಂಟಕರಾಗಿ ಮಾತಾಪಿತೃಗಳಿಗೆ ಶೂಲಪ್ರಯರಾಗಿ ತಾವೂ ದುಃಖಪಟ್ಟು ಅವ ರನ್ನು ಚಿಂತಾಸಾಗರದಲ್ಲಿ ಯಾವಜ್ಜೀವವ ಮುಳುಗಿರುವಂತೆ ಮಾಡಿ ತಾವೂ ಕಷ್ಟಪ ಡುವರು. ಎಂತಹ ದುಷ್ಪುತ್ರರಾದರೂ, ಹೊತ್ತು, ಹೆತ್ತು, ಸಾಕಿ, ಸಲಹಿದ, ಮಾತಾ ಪಿತೃಗಳು ತಮ್ಮ ಪುತ್ರರು ಎಲ್ಲಿಯಾದರೂ ಸುಖವಾಗಿರಲಿ! ಎನ್ನುವರೇ ವಿನಹ ಅವರಿಗೆ ಯಾವ ವಿಧದಲ್ಲಿಯೂ ಕೇಡನ್ನು ಹಾರೈಸರು.

ಅವಂತೀಶನು ಭೋಜನಾಲಯದಿಂದ ತನ್ನ ಕೆರುಮನೆಗೆ ಹೋಗಿ ಒಂದು ವೇತ್ರಾಸನದಮೇಲೆ ಕುಳಿತು ಕಣ್ಣೀರು ಸುರಿಸುತ್ತಾ ರಾತ್ರಿಯನ್ನೆಲ್ಲಾ ಕಳೆದನು. ಸೂರ್ಯೋದಯಾತ್ಪೂರ್ವವೇ ಪ್ರತಿದಿನವೂ ಎದ್ದು ಗಾಳಿಸವಾರಿಹೊರಡುತ್ತಿದ್ದ ಚಕ್ರವರ್ತಿಯು ಸೂರ್ಯೋದಯವಾಗಿ ಎರಡುಗಳಿಗೆಯಾದರೂ ಕೆರುಮನೆಯಿಂದ ಹೊರಗೆ ಬಾರದಿದ್ದುದನ್ನು ನೋಡಿ ಮಂತ್ರಿ ಮೊದಲಾದವರು ಕಳವಳಗೊಂಡರು. ಮುಖ್ಯಾಮಾತ್ಯನು ಚಕ್ರವರ್ತಿಯ ಕೆರುಮನೆಯ ಬಳಿಗೆ ಬಂದು ಬಾಗಿಲಸಂದಿನಲ್ಲಿ ನೋಡಲು, ರಾಜನು ಒಂದು ಆರಾಮವೇತ್ರಾಸನದಮೇಲೆ ಕುಳಿತು ಕೆನ್ನೆಯಮೇಲೆ ಕೈಯನ್ನಿಟ್ಟುಕೊಂಡು ಏನನ್ನೊ ಯೋಚಿಸುತ್ತಿದ್ದುದನ್ನು ಕಂಡನು. ರಾಜನ ಪ್ರಕೃತಸ್ಥಿತಿಯನ್ನು ನೋಡಿ ಮುಖ್ಯಾಮಾತ್ಯನಿಗೂ ದಾರಿ ತೋರದೆಹೋಯಿತು. ರಾಜನು ಏತಕ್ಕೆ ಈರೀತಿ ಶೋಕಿಸುತ್ತಿರುವನೆಂಬುದಕ್ಕೆ ಕಾರಣವನ್ನು ಎಷ್ಟು ಯೋಚಿಸಿದರೂ ಕಂಡುಹಿಡಿಯಲಾರದೆಹೋದನು. ಕಡೆಗೆ ತನ್ನಲ್ಲಿತಾನೆ ,, ರೋಹಿಣಿಯನ್ನು ನೋಡಿದ ದಿನದಿಂದಲೂ, ರಾಜನ ಸ್ಥಿತಿಯು ವಸ್ತುತಃಸರಿಯಾಗಿಲ್ಲವು. ಆಕೆಯ ರೂಪು, ಲಾವಣ್ಯ, ಬುದ್ಧಿ ಶಕ್ತಿ ಮೊದಲಾದುವುಗಳಿಗೆ ಪರವಶನಾಗದ ಮನುಷ್ಯನು ಪಾಮರನೇ ಸರಿ! ಹಾಗಿರುವಾಗ್ಗೆ ನಮ್ಮ ಚಕ್ರವರ್ತಿಯು ಆಕೆಯನ್ನು ನೋಡಿ ಮೋಹಿಸಿರಬಹುದೆಂದು ಯೋಚಿಸಿದರೆ ಅದು ಸುಳ್ಳಾಗಲಾರದು. ಏಕೆಂದರೆ ಆಕೆಯು ಅವಿವಾಹಿತಳು, ಯೌವ್ವನವತಿಯು, ರೂಪವತಿಯು, ಮತ್ತು ವಿದ್ಯಾವತಿ, ಚಕ್ರವರ್ತಿಯೂ ಕೂಡ ರಾಜ್ಯಕಾರ್ಯದಲ್ಲಿ ನಿಪುಣನು. ಯುವಕನು. ರೂಪಿನಲ್ಲಿ ಅನಂಗನನ್ನೂ ಮರೆಸುವನು. ಈತನ ರಾಜ್ಯಸ್ಥಿತಿಯು ಹೇಗಿರುವುದೆಂದರೆ:—

ಬಡತನವು ಸ್ತ್ರೀಯರ ನಡುವಿನಲ್ಲಿಯೂ, ಮಾಂದ್ಯವು ಆವರ ನಡೆಯಲ್ಲಿಯೂ, ಕಠಿಣತ್ವವು ಆವರ ಎದೆಯಲ್ಲಿಯೂ, ಚಾಂಚಲ್ಯವು ಆವರ ಕಡೆಗಣ್ಣಿನ ನೋಟದಲ್ಲಿಯೂ, ಕುಟಿಲತ್ವವು ಆವರ ಗುಂಗುರುಕೂದಲುಗಳಲ್ಲಿಯೂ ಕಂಡುಬರುತ್ತಿರುವುದೇ ಹೊರತು ಜನರಲ್ಲಿ ಹುಡುಕಿದರೂ ಸಿಗುವುದಿಲ್ಲ. ಈ ವಿಧವಾದ ಬಿಕ್ಕಟ್ಟಿನಲ್ಲಿ ರಾಜ್ಯಭಾರಮಾಡುತ್ತಲಿರುವ ಸಾರ್ವಭೌಮನು ಒಬ್ಬ ಸ್ತ್ರೀಗೆ ಸೋತುದು ಆಶ್ಚರ್ಯವಲ್ಲವೆ? ಹೇ ಮನಸ್ಸೇ! ನಿನ್ನ ನಿರ್ಧಾರವೇ ನಿರ್ಧಾರ! ನಿನ್ನ ನಿಶ್ಚಯವೇ ನಿಶ್ಚಯ! ನಿನ್ನ ನ್ಯಾಯವೇ ನ್ಯಾಯ! ನಿನಗೆ ತಕ್ಕಹಾಗೆ ನಿನ್ನ ಸ್ನೇಹಿತರೀರ್ವರೂ (ಕೆವಿ, ಕಣ್ಣ) ಸಹಾಯಮಾಡುವರು. ಭಗವಂತನ ನಿಯಾಮಕವಿದ್ದಂತೆಆಗಲಿ ಎಂದು ಯೋಚಿಸುತ್ತಾ, ಚಕ್ರವರ್ತಿ ಸಾರ್ವಭೌಮರಿಗೆ ಜಯವಾಗಲಿ'' ಎಂದು ನಮ್ರಭಾವದಿಂದ ಹೇಳಿದನು. ರಾಜನು ಝಗ್ಗನೆ ತನ್ನ ಪೀಠದಿಂದ ಎದ್ದು ಮುಖ್ಯಾಮಾತ್ಯನನ್ನು ಬಳಿಗೆ ಬರಹೇಳಿದನು.

ಮಂತ್ರಿಯು ಉಚಿತಸ್ಥಾನದಲ್ಲಿ ಕುಳಿತುಕೊಂಡಮೇಲೆ ರಾಜನು ತನ್ನ ಪ್ರಕೃತಸ್ಥಿತಿಗೆ ಕಾರಣವನ್ನು ಹೇಳದೆ ಬೇರೆ ಯಾವವೋ ಒಂದೆರಡು ವಿಷಯಗಳನ್ನು ಪ್ರಸ್ತಾಪಿಸುತ್ತಿದ್ದು ತನಗೆ ಸ್ವಲ್ಪ ಅಸ್ವಸ್ಥತೆಯುಂಟಾಗಿರುತ್ತದೆಯೆಂತಲೂ ತನ್ನಿಂದ ನಿರ್ವಹಿಸಲ್ಪಡಬೇಕಾದ ಯಾವತ್ತು ಕಾರ್ಯವನ್ನೂ ಮಂತ್ರಿಯೇ ಸ್ವಲ್ಪಕಾಲದವರೆಗೆ ನಡೆಸಬೇಕೆಂದೂ ಆತನಿಗೆ ಹೇಳಿ ಕಳುಹಿಸಿ ತಾನು ಹುಚ್ಚನಂತೆ ಆ ಕಿರುಮನೆಯ ಒಂದುಕಡೆಯಿಂದ ಮತ್ತೊಂದುಕಡೆಗೆ ಶತಪಥ ಸುತ್ತುತ್ತಾ ಇದ್ದನು.

ಅಷ್ಟಮಲಹರಿ.

ದಿವಾಕರನ ಪುತ್ರನಾದ ಶನೀಶ್ವರನ ದೆಶೆಯಲ್ಲಿರತಕ್ಕ ಯಾವ ಮನುಷ್ಯನಾದರೂ ದುಃಖ, ಅಪಮಾನ, ಅಪಯಶಸ್ಸು, ಋಣ, ದಾರಿದ್ರ್ಯ, ಇವುಗಳಿಂದ ಕಷ್ಟನಷ್ಟಗಳಿಗೆ ಗುರಿಯಾಗಬೇಕಲ್ಲದೆ ಸುಖವನ್ನನುಭವಿಸುವ ಸಂಭವವು ಇಲ್ಲವೆಂದೇ ಹೇಳಿದರೆ ಅದು ಅತಿಶಯೋಕ್ತಿಯಾಗಲಾರದು. ಅದರಲ್ಲೂ ಈ ಮಹಾರಾಯನು ಜನ್ಮ, ದ್ವಿತೀಯಾ, ಚತುರ್ಥ, ಪಂಜಮ, ಸಪ್ತಮ, ಅಷ್ಟಮ, ದ್ವಾದಶ ಈ ಏಳು ಸ್ಥಾನಗಳಲ್ಲಿದ್ದರೆ ಹೇಳಬೇಕಾದ್ದೇಇಲ್ಲ.

ಇತ್ತ ರಾಜ್ಯಭ್ರಷ್ಟನಾಗಿ ಓಡಿಹೋಗಿ ಕಾಡಿನಲ್ಲಿ ತಲೆತಪ್ಪಿಸಿಕೊಂಡು ತಿರುಗಾಡುತ್ತಿದ್ದ ಸುವರ್ಣಪುರಾಧೀಶ್ವರನು ಒಂದೆರಡುತಿಂಗಳುಕಾಲ ಗೆಡ್ಡೆಗೆಣಸುಗಳನ್ನುತಿಂದು ಒಂದೇಮನಸ್ಸಿನಿಂದ ಈಶ್ವರನನ್ನು ಧ್ಯಾನಿಸುತ್ತಿದ್ದನು. ಈತನ ಧ್ಯಾನದಿಂದ ಈಶ್ವರನು ಪ್ರತ್ಯಕ್ಷನಾದನೋ ಎನ್ನುವಹಾಗೆ ಸುವರ್ಣಪುರಾಧೀಶನಿಗೆ ಸ್ವಲ್ಪ ದೂರದಲ್ಲಿ ಒಂದು ದೇವಸ್ಥಾನವು ಕಾಣಿಸಿತು. ಆ ದೇವಸ್ಥಾನವುಕಟ್ಟಲ್ಪಟ್ಟು ಬಹುಕಾಲವಾಗಿದ್ದಿತು. ಅದರ ಪ್ರಾಕಾರದ ಗೋಡೆಗಳೆಲ್ಲವೂ ಬಿರುಕುಬಿಟ್ಟು ಆಲ ಮತ್ತು ಅರಳಿಗಿಡಗಳಿಗೆ ಆವಾಸಸ್ಥಾನವಾಗಿದ್ದುವು. ದೇವಸ್ಥಾನದ ಪ್ರಾಂಗಣದಲ್ಲಿ ಒಂದು ದೊಡ್ಡ ಕೈಸಾಲೆ. ಮತ್ತು ಸುತ್ತಲೂ ಕಲ್ಲಿನಿಂದ ಕಟ್ಟಲ್ಪಟ್ಟ ಸಣ್ಣಸಣ್ಣ ಮಂಟಪಗಳು. ಅವುಗಳಲ್ಲಿ ಪ್ರತಿಯೊಂದರಲ್ಲಿಯೂ, ಒಂದೊಂದು ಲಿಂಗ ಮತ್ತು ಬಸವ. ಜಗದಂಬೆಯ ದೇವಸ್ಥಾನದ ಮುಂದುಗಡೆ ಪಾರಿಜಾತ, ಮತ್ತು ಒಂದು ಸಂಪಗೆಯ ವೃಕ್ಷವು ಬಹಳ ಎತ್ತರವಾಗಿ ಬೆಳೆದು

ತಮ್ಮಲ್ಲಿ ಬಿಟ್ಟ ಪುಷ್ಪಗಳ ರೇಖುಗಳನ್ನೆಲ್ಲಾ ಶ್ರೀ ಜಗದಂಬೆಯಮೇಲೆ ಉದುರಿಸುತ್ತಿದ್ದುವು. ಈಶ್ವರನ ದೇವಸ್ಥಾನದ ಮುಂದುಗಡೆಯಲ್ಲಿ ಒಂದು ದೊಡ್ಡ ಬಿಲ್ವಪತ್ರೆಯ ಗಿಡವಿದ್ದಿತು, ದೇವಸ್ಥಾನದ ಹೊರಗಡೆ ಎಡಭಾಗದಲ್ಲಿ ಅನೇಕ ಬೇಲ ಮತ್ತು ಹಲಸಿನಮರಗಳು ಅನೇಕ ಮುಳ್ಳುಗಿಡಗಳಿಂದ ಆವೃತವಾಗಿದ್ದುವು. ಒಂದು ಸಣ್ಣ ನದಿಯು ದೇವಸ್ಥಾನವನ್ನು ಸುತ್ತುಗಟ್ಟಿಕೊಂಡು ನಿದಾನವಾಗಿ ಪ್ರವಹಿಸುತ್ತಿದ್ದಿತು. ಸುವರ್ಣಪುರಾಧೀಶನು ಅಲ್ಲಿ ಹರಿಯುತ್ತಿದ್ದ ನದಿಯ ಶೋಭೆಯನ್ನೂ ದೇವಸ್ಥಾನವನ್ನೂ ತನ್ನ ಮನಸ್ಸಿನಲ್ಲೇ ವರ್ಣನೆಮಾಡುತ್ತಾ ದೇವಸ್ಥಾನದ ಸುತ್ತಲೂ ಸ್ವಲ್ಪ ಹೊತ್ತು ಆಲೆದಾಡುತ್ತಾ ಅಲ್ಲಿ ಒಂದು ಹಲಸಿನಮರದಲ್ಲಿ ಪಕ್ವವಾಗಿ ಬಿರುಕುಬಿಟ್ಟಿದ್ದ ಒಂದು ಹಲಸಿನ ಹಣ್ಣನ್ನು ಕೊಯ್ದುತಂದು ನದಿಯದಡದಲ್ಲಿಟ್ಟು ತಾನು ಉಟ್ಟು ತೊಟ್ಟಿದ್ದ ಬಟ್ಟೆಗಳನ್ನೆಲ್ಲಾ ಒಗೆದು ಒಣಗಿಸಿಕೊಂಡು ತನ್ನ ನಿತ್ಯಕರ್ಮಗಳನ್ನು ತೀರಿಸಿಕೊಂಡು ದೇವಸ್ಥಾನದ ಒಳಕ್ಕೆಹೋಗಿ ದೇವರಸಾನ್ನಿಧ್ಯದಲ್ಲಿನಿಂತು ಒಂದೇಮನಸ್ಸಿನಿಂದ ದೇವರನ್ನು ಧ್ಯಾನಮಾಡಿ ತಾನು ತಂದಿದ್ದ ಹಣ್ಣನ್ನು ದೇವರಮುಂದೆ ಇರಿಸಿ ನಮಸ್ಕಾರಮಾಡಿ ಹಣ್ಣನ್ನು ತೆಗೆದುಕೊಂಡು ಕೈಸಾಲೆಯಲ್ಲಿ ಕುಳಿತುಕೊಂಡು ಹಣ್ಣನ್ನೂ ಸಿಪ್ಪೆಯನ್ನೂ ಬೇರೆಬೇರೆಮಾಡಿ ತಾನು ತಿನ್ನಬೇಕೆಂದಿರುವಷ್ಟರಲ್ಲಿಯೇ ತನ್ನೆದುರಿಗೆ ಒಬ್ಬ ಮುದಿಬ್ರಾಹ್ಮಣನನ್ನು ಕಂಡು ಆತನಿಗೆ ದಂಡಪ್ರಣಾಮವನ್ನು ಮಾಡಿ ಹಲಸಿನ ಹಣ್ಣಿನಲ್ಲಿ ಅರ್ಧಭಾಗವನ್ನು ಆತನಿಗೆಕೊಟ್ಟು ತಾನೂ ತಿಂದನು. ಮುದಿಬ್ರಾಹ್ಮಣನು ಸುವರ್ಣಪುರಾಧೀಶನ ವೃತ್ತಾಂತವನ್ನೆಲ್ಲವನ್ನೂ ಸಮಗ್ರವಾಗಿ ಕೇಳಿ "ಎಲೈ ಅರಸೇ! ಇಲ್ಲಿಗೆ 8 ಮೈಲಿ ದೂರದಲ್ಲಿ ಜಯಪುರಿಯಲ್ಲಿ ಭೀಮರಾಜನೆಂಬುವನು ರಾಜ್ಯಭಾರಮಾಡುತ್ತಿರುವನು. ನೀನು ಆತನಬಳಿಗೆ ಈದಿವಸವೇ ಹೊರಟು ನಿನ್ನ ವೃತ್ತಾಂತವನ್ನೆಲ್ಲವನ್ನೂ ತಿಳಿಸು. ಆತನು ನಿನಗೆ ಸಹಾಯಮಾಡುವನು. ಜಾಗ್ರತೆಯಲ್ಲಿಯೇ ನಿನಗೆ ಮಂಗಳವುಂಟಾಗಲಿ" ಎಂದು ಹರಸಿ ಎಲ್ಲಿಯೋ ಹೊರಟು ಹೋದನು.

ವಿಪ್ರವಾಕ್ಯದಂತೆ ಸುವರ್ಣಪುರಾಧೀಶನು ತಕ್ಷಣವೇ ಹೊರಟು ಸಂಧ್ಯಾಕಾಲಕ್ಕೆಸರಿಯಾಗಿ ಜಯಪುರಿಗೆ ಶೇರಿದನು. ನಿತ್ಯಪದ್ಧತಿಗನುಸಾರವಾಗಿ ಭೀಮರಾಜನು ದರ್ಬಾರನ್ನು ತೀರಿಸಿಕೊಂಡು ಊಟಕ್ಕೆ ಹೋಗುತ್ತಿರುವ ಹೊತ್ತಿಗೆ ಸರಿಯಾಗಿ ದೂತನೊಬ್ಬನು, "ಯಾರೋ ಒಬ್ಬರು ತಮ್ಮ ದರ್ಶನಾರ್ಥವಾಗಿ ಬಂದಿರುವರು" ಎಂದು ವಿಜ್ಞಾಪಿಸಿಕೊಂಡನು. ರಾಜನು ತಕ್ಷಣವೇ ಆತನನ್ನು ಕರೆದುಕೊಂಡು ಬರುವಂತೆ ಆಜ್ಞೆಯಿತ್ತು ಅಲ್ಲಿಯೇ ಇದ್ದ ವೇತ್ರಾಸನದಮೇಲೆ ಕುಳಿತುಕೊಂಡು ಬಂದಿರತಕ್ಕವರು ಯಾರಿರಬಹುದೆಂದು ಯೋಚಿಸುತ್ತಿರುವಷ್ಟರಲ್ಲಿಯೇ ದೂತರನಡುವೆ ಇದ್ದ

ವ್ಯಕ್ತಿಯು " ಭೀಮಮಹಾರಾಜರಿಗೆ ಜಯವಾಗಲಿ " ಎಂದು ಸಾರಿದನು. ವ್ಯಕ್ತಿಯನ್ನು ಕಂಡಕೂಡಲೆ ಭೀಮರಾಜನ ಮನಸ್ಸಿನಲ್ಲಿ ಯಾವುದೋ ಒಂದುವಿಧ ಸಂತೋಷವು ಉತ್ಪನ್ನವಾಯಿತು. ಆದರೆ ಅದಕ್ಕೆ ಸರಿಯಾದ ಕಾರಣವನ್ನು ಕಂಡುಹಿಡಿಯಲಾರದೆ ಹೋದನು. ವ್ಯಕ್ತಿಗೆ ಕುಳಿತುಕೊಳ್ಳಲು ಒಂದು ಆಸನವನ್ನು ತೋರಿಸಿ ಅತನ ಸ್ಥಿತಿ ಗತಿಗಳನ್ನು ವಿಚಾರಿಸಲು ಆ ವ್ಯಕ್ತಿಯು ಸುವರ್ಣಪುರಾಧೀಶ್ವರನೆಂದು ತಿಳಿದುಬಂದ ಕೂಡಲೆ ಭೀಮರಾಜನು ಆತನಿಗೆ ದಂಡಪ್ರಣಾಮವನ್ನು ಮಾಡಿ, " ಪ್ರಭುವೇ ! ತಪ್ಪನ್ನು ಮನ್ನಿಸಬೇಕು ನನ್ನನ್ನು ಪರೀಕ್ಷಿಸಬೇಕೆಂತಲೋ, ಅಥವಾ ಇನ್ನಾವಕಾರಣದಿಂದಲೋ ತಾವು ಇಲ್ಲಿಗೆ ಏಕಾಕಿಯಾಗಿ ಬಂದಿರುವುದನ್ನು ನೋಡಿದರೆ ನನ್ನ ಮನಸ್ಸಿಗೆ ತುಂಬಾ ಆನುಮಾನವಾಗುತ್ತದೆ. ಬಾಲಕನಮೇಲೆ ಕೃಪೆ ಯಿಟ್ಟು ತಮ್ಮ ಆಗಮನಕ್ಕೆ ಕಾರಣ ವನ್ನು ವಿಶದವಾಗಿ ತಿಳಿಸಬೇಕಲ್ಲದೆ ನನ್ನಿಂದಾಗಬೇಕಾದ ಕಾರ್ಯವೇನಾದರೂ ಇದ್ದಲ್ಲಿ ಅದನ್ನು ಮಾಡಲು ಅಪ್ಪಣೆಯನ್ನೂ ದಯಪಾಲಿಸಬೇಕೆಂದು " ಬೇಡಿಕೊಂಡನು. ಅದಕ್ಕೆ ಸುವರ್ಣಪುರಾಧೀಶ್ವರನು ತನ್ನ ವೃತ್ತಾಂತವನ್ನೆಲ್ಲ ಆದ್ಯಂತವಾಗಿ ತಿಳಿಸಲು ಭೀಮ ರಾಜನು ಸುವರ್ಣಪುರಾಧೀಶ್ವರನಿಗೆ ಊಟ ಉಪಚಾರಗಳನ್ನು ಮಾಡಿಸಿ ಮಾರನೆಯ ದಿವಸದ ದರ್ಬಾರದಲ್ಲಿ ತನ್ನ ಮಂತ್ರಿಸೇನಾನಾಯಕರುಗಳಿಗೆ ಸೈನ್ಯವನ್ನು ಸಜ್ಜುಗೊಳಿಸ ಬೇಕೆಂದು ಕಟ್ಟಪ್ಪಣೆಮಾಡಿದನು. ಮಾರನೆಯದಿವಸ ಚತುರಂಗ ಸೈನ್ಯಸನ್ನೀತವಾಗಿ ಸುವರ್ಣಪುರಾಧೀಶ್ವರನೂ, ಭೀಮರಾಜನೂ ಹೊರಟು ಅವಂತೀಶನು ಆಕ್ರಮಿಸಿ ಕೊಂಡಿದ್ದ ಕೋಟೆಗೆ ಮುತ್ತಿಗೇಪಾಕಿ ಕ್ಷಣಕಾಲದಲ್ಲೇ ವಶಪಡಿಸಿಕ್ಕೊಂಡು ತಮ್ಮ ಧ್ವಜಪತಾಕವನ್ನು ಎತ್ತಿಕಟ್ಟಿದರು.

ಹತಾತ್ತಾಗಿ ಶತ್ರುಗಳು ಕೋಟೆಯನ್ನು ಮುತ್ತಿದುದನ್ನು ಕೇಳಿ ಅವಂತೀಶನು ಗಾಬರಿಬಿದ್ದನು. ಆಗ ತಾನೇ ಯುದ್ಧಮಾಡಿ ತುಂಬಾ ನಷ್ಟಪಟ್ಟಿದ್ದುದರಿಂದಲೂ, ಯಾವುದೋ ಒಂದು ಚಿಂತೆಯಿಂದ ಕೊರಗುತ್ತಿದ್ದುದರಿಂದಲೂ, ಅವಂತೀಶನು ಕೌಲು ಮಾಡಿಕೊಳ್ಳಲುದ್ಯುಕ್ತನಾದನು.

ಏತನ್ಮಧ್ಯೆ ಅವಂತೀಶನು ರೋಹಿಣಿ ಮತ್ತು ಕರುಣಾಂಬೆಯರನ್ನು ತನ್ನ ಕಿರು ಮನೆಗೆ ಕರೆಯಿಸಿ ರೋಹಿಣಿಯು ಕರುಣಾಕರನಿಗೆ ಸಿಕ್ಕಿದ ವಿವರವನ್ನೆಲ್ಲಾ ಮತ್ತೊಂದು ಸಲಕೇಳಿ ಕರುಣಾಂಬೆಯನ್ನು ಕುರಿತು, " ಎಲೆ ತಾಯೆ, ಈ ಹುಡುಗಿಯೊಡನೆ ನಿಮಗೆ ಕಾಗದ ವೊಂದುಸಿಕ್ಕಿತೆಂದು ನೀವು ಹೇಳಿದಿರಷ್ಟೆ ? ದಯಮಾಡಿ ಆ ಕಾಗದ ವನ್ನು ನೋಡಲು ಕೊಡುವಿರಾ ?" ಎಂದು ಕೇಳಲು ರೋಹಿಣಿಯು ತನ್ನ ಜೇಬಿನ ಲ್ಲಿಟ್ಟುಕೊಂಡಿದ್ದ ಚೀಟಿಯನ್ನು ಅವಂತೀಶನಿಗೆ ಕೊಟ್ಟಳು.

ಅವಂತೀಶನು ಕಾಗದವನ್ನು ಮತ್ತೆಮತ್ತೆ ಓದಿನೋಡಿ ಕಿರುಮನೆಯಲ್ಲಿದ್ದ ತನ್ನ ಚಿಕ್ಕಪೆಟ್ಟಿಗೆಯೊಳಗಿನಿಂದ ಬೇರೆ ಇನ್ನೊಂದು ಕಾಗದವನ್ನು ತೆಗೆದು ನೋಡಲು, ಆದರ ಬರವಣಿಗೆಯೂ, ರೋಹಿಣಿಯುಕೊಟ್ಟ ಕಾಗದದ ಬರವಣಿಗೆಯೂ, ಒಂದೇ ಆಗಿತ್ತು. ಅವಂತೀಶನು ತನ್ನ ಪೆಟ್ಟಿಗೆಯಿಂದ ತೆಗೆದ ಕಾಗದವನ್ನು ರೋಹಿಣಿಯಕೈಗೆ ಕೊಟ್ಟು ಓದ ಹೇಳಿದನು. ರೋಹಿಯು ಓದಿದಳು. ಅದರಲ್ಲಿ ಹೀಗೆ ಬರೆದಿತ್ತು :—

ಚಕ್ರವರ್ತಿಸಾರ್ವಭೌಮರಿಗೆ

ತಮಿಗೂ ಮತ್ತು ಸುವರ್ಣಪುರದವರಿಗೂ ನಡೆಯುತ್ತಿರುವ ಈ ಪ್ರಾಥಮಿಕ ಯುದ್ಧದಲ್ಲಿ ತಾವು ಸೋತು ಓಡಿಹೋಗುತ್ತಿದ್ದಾಗ ತಮ್ಮ ಪ್ರೀತಿಪಾತ್ರಳಾದ ಅಹಲ್ಯೆಯನ್ನು ಹೊರಕ್ಕೆ ಕರೆದುಕೊಂಡುಬರುವುದು ಬಹಳ ದುಸ್ತರವಾಯಿತು. ನಾನು ಹೊಟ್ಟೆಗಿಲ್ಲದೆ ಕಲ್ಯಾಣನಗರದಬಳಿ ಉದ್ಯಾನವನದಲ್ಲಿ ರೂಪುಮರೆಸಿಕೊಂಡಿರುತ್ತೇನೆ. ತಮ್ಮ ಪುತ್ರಿ ಅಹಲ್ಯೆಯನ್ನೇಲೆ ಕೈಯಿಟ್ಟು ಜಾಗ್ರತೆ ಬಂದು ಆ ಮಗುವನ್ನು ಕರದುಕೊಂಡು ಹೋಗಬೇಕು. ಸಾವಕಾಶಮಾಡಕೂಡದು. ಭಳಿ ಮಳೆ ಗಾಳಿಗಳ ಬಡಿತಕ್ಕೆಸಿಕ್ಕಿ ನರಳುತ್ತಿರುವೆನು.

ರಾಮಲಾಲ್, 1 ನೇ ಪಟಾಲಂ.

ಕಾಗದವನ್ನು ಓದಿಕೊಂಡು ಅದನ್ನು ಅವಂತೀಶನಿಗೆ ಹಿಂದಿರುಗಿಕೊಟ್ಟುಬಿಟ್ಟಳು. ಅವಂತೀಶನು ಕರುಣಾಂಬೆಯಕಡೆಗೆ ತಿರುಗಿ "ಎಲಾ ತಾಯೆ! ಈ ರೋಹಿಣಿಯನ್ನು ನೋಡಿದರೆ ನನ್ನ ಪ್ರೀತಿಪುತ್ರಿ ಆ ಅಹಲ್ಯೆಯ ಜ್ಞಾಪಕವು ಪದೇಪದೇಬರುತ್ತಿರುವುದು. ಆ ಅಹಲ್ಯೆಯ ಕತ್ತಿನಲ್ಲಿದ್ದ ತಾಯತದೊಳಗೆ ಕೆಲವು ವಿಪ್ರವಾಕ್ಯಗಳನ್ನು ಬರಸಿ ಕಟ್ಟಿದ್ದೆನು. ರೋಹಿಣಿಯ ಕತ್ತಿನಲ್ಲಿರತಕ್ಕ ತಾಯಿತಿಯೊಳಗೇನಿದೆ. ಅದನ್ನು ತಾವು ಕಟ್ಟಿದಿರಾ? ಇಲ್ಲದಿದ್ದರೆ ಅದರೊಳಗೇನಿರುತ್ತದೆಂದು ತಾವು ದಯವಿಟ್ಟು ತಿಳಿಸಿದರೆ ನನ್ನ ಅನುಮಾನವು ಸುಳ್ಳೋ ಅಥವಾ ದಿಟವೆ? ಎಂಬುದು ವ್ಯಕ್ತವಾಗುತ್ತದೆ" ಎನ್ನಲು ಕರುಣಾಂಬೆಯು ರೋಹಿಣಿಯ ಕತ್ತಿನೊಳಗಿದ್ದ ತಾಯತಿಯನ್ನು ಬಿಚ್ಚಿ ತೆಗೆದು ಅದರೊಳಗಿದ್ದ ಸಣ್ಣ ಚೀಟಿಯನ್ನು ತೆಗೆಯಲು ಅವಂತೀಶನು ಹೇಳಿದ್ದಂತೆಯೇ ಕೆಲವು ವಿಪ್ರವಾಕ್ಯಗಳು ಅದರಲ್ಲಿ ಬರೆಯಲ್ಪಟ್ಟಿದ್ದಿತು. ಅದನ್ನು ನೋಡಿದ ತಕ್ಷಣದಲ್ಲಿಯೇ ಅವಂತೀಶನು ರೋಹಿಣಿಯನ್ನು ತಬ್ಬಿಕೊಂಡು ಮುದ್ದಾಡುವುದಕ್ಕೆ ಮೊದಲುಮಾಡಿದನು. ಕರುಣಾಂಬೆಗಂತೂ ಎಲ್ಲವೂ ಸ್ಪಷ್ಟಭಾಸವಾಗಿದ್ದಿತು.

———

ಇತ್ತಕಡೆ ಭೀಮರಾಜನೂ, ಸುವರ್ಣಪುರಾಧೀಶ್ವರನೂ ಕೋಟಿಗಳನ್ನೆಲ್ಲಾ ಸ್ವಾಧೀನಪಡಿಸಿಕೊಂಡು ಜಯಭೇರಿ ಹೊಡೆಸುತ್ತಿರುವಾಗ ಅವಂತೀಶನ ಮುಖ್ಯ ಮಂತ್ರಿಯು ಸುವರ್ಣಪುರಾಧ್ಯಕ್ಷನ ಬಳಿಗೆ ಒಬ್ಬ ರಾಜದೂತನ ಕೈಯಲ್ಲಿ ತಾವು ಕೌಲುಮಾಡಿಕೊಂಡು ಅವರವರ ರಾಜ್ಯಗಳನ್ನು ಅವರವರಿಗೇ ಕೊಟ್ಟು ಪರಸ್ಪರ ಸ್ನೇಹಿತರಾಗಿ ವರ್ತಿಸಲು ಅಭಿಪ್ರಾಯಪಟ್ಟಿರುವುದನ್ನು ಹೇಳಿಕಳುಹಿಸಲು ಅದೇಪ್ರಕಾರ ಕೌಲಿಗೆ ಸುವರ್ಣಪುರಾಧೀಶನು ಒಪ್ಪಿ ಯುದ್ಧವನ್ನು ನಿಲ್ಲಿಸಿಬಿಡುವಂತೆ ಸೈನಿಕರಿಗೆ ಆಜ್ಞೆಯಿತ್ತನು. ಮಾರನೆಯದಿನ ಅವಂತೀಶನು ಎಲ್ಲರಿಗೂ ರಾಜಯೋಗ್ಯವಾದ ಔತನವನ್ನು ಮಾಡಿಸಿ ಔತಣವಾದಮೇಲೆ ಸಭೆಯಲ್ಲಿ ನೆರೆದಿದ್ದ ಅನೇಕ ರಾಜರುಗಳು, ಪಂಡಿತರು ಮೊದಲಾದವರೆದುರಿಗೆ ತನ್ನ ಪುತ್ರಿಯು ತನಗೆ ಲಭಿಸಿದ ವಿಷಯವನ್ನು ತಿಳಿಸಿ ಅದಕ್ಕಾಗಿ ದೇವರನ್ನು ಕೊಂಡಾಡಿ ಸಭೆಯನ್ನು ಮುಕ್ತಾಯಮಾಡಿದನು. ಮತ್ತು ಮೊದಲೇ ತನ್ನ ಚಾರರೆಲ್ಲರಿಗೂ ಆಜ್ಞೆಮಾಡಿದ್ದಂತೆ ಎಲ್ಲರೂ ಹುಡುಕಿ ಕರುಣಾಕರ ದಯಾಕರರನ್ನು ಆಹೊತ್ತಿಗೆ ಸರಿಯಾಗಿ ಕರೆದುಕೊಂಡುಬರಲು ಅವರಿಬ್ಬರನ್ನೂ ರೋಹಿಣಿ ಕರುಣಾಂಬೆಯರನ್ನೂ ಸುವರ್ಣಪುರಾಧ್ಯಕ್ಷ, ಭೀಮರಾಜರನ್ನೂ ಮೊದಲೇ ಆಣಿಮಾಡಿದ್ದ ಒಂದು ಚಿಕ್ಕಮನೆಗೆ ಕರೆದುಕೊಂಡುಹೋಗಿ ಎಲ್ಲರೆದುರಿಗೂ ತನ್ನ ಮಗಳು ಅಹಲ್ಯೆಯು ಪುನಃ ಲಭಿಸಿದ ಸಂಗತಿಯನ್ನು ತಿಳಿಸಿದನು. ಎಲ್ಲರ ಕ್ಷೇಮ ಸಮಾಚಾರಗಳೂ ವಿಚಾರಿಸಲ್ಪಟ್ಟನಂತರ ಭೀಮರಾಜನು ಸುವರ್ಣಪುರಾಧ್ಯಕ್ಷನ ಜ್ಯೇಷ್ಠಪುತ್ರನೆಂದೂ, ರೋಹಿಣಿಯು ಅವಂತೀಶನ ಪುತ್ರಿಯೆಂದೂ ಗೊತ್ತಾದ ಬಳಿಕ ರೋಹಿಣಿಯನ್ನು ಭೀಮರಾಜನಿಗೆ ಕೊಟ್ಟು ವಿವಾಹಮಾಡಲು ಪ್ರಶಸ್ತವಾದ ಶುಭ ಲಗ್ನವನ್ನು ಗೊತ್ತುಮಾಡಿಸಿದರು. ಗೊತ್ತಾದ ದಿವಸ ಮದುವೆಯೂ ಆಗಿಹೋಯಿತು. ಕರುಣಾಕರನು ಅವಂತೀಶನ ಆಸ್ಥಾನದಲ್ಲಿ ಪ್ರಧಾನಮಂತ್ರಿಪ್ರವರನಾದನು. ದಯಾಕರನನ್ನು ಭೀಮರಾಜನು ತನ್ನಬಳಿ ಮಂತ್ರಿಯನ್ನಾಗಿ ನೇಮಕಮಾಡಿಕೊಂಡನು.

ಪಾಠಕಮಹಾಶಯ! ಅವಂತೀಶನಿಗೆ ರೋಹಿಣಿಯ ಗುರುತನ್ನು ಮಾಡಿಕೊಟ್ಟ ಸುವರ್ಣಪುರಾಧ್ಯಕ್ಷನಿಗೆ ಭೀಮರಾಜನ ಸಂಬಂಧವು ಹೇಗೆ ಲಭಿಸಿತೆಂದು ಕೇಳಬಹುದು. ಭೀಮರಾಜನ ಜನನಕಾಲದಲ್ಲಿ ಈತನ ಮಲತಾಯಿಯು ತನ್ನ ಸಂತಾನಕ್ಕೆ ಮುಂದಕ್ಕೆ ಪಟ್ಟಕಟ್ಟುವ ಸಂಭವವು ತಪ್ಪಿಹೋಗಬಹುದೆಂಬ ಸಂಶಯದಿಂದ ಭೀಮು

ರಾಜನನ್ನು ಒಂದು ತೊಟ್ಟಿಲಿನಲ್ಲಿ ಮಲಗಿಸಿ ಎಲ್ಲಿಯೋ ಒಂದು ಹೊಳೆಯಲ್ಲಿ ಬಿಟ್ಟು ಬರುವಂತೆ ತನ್ನ ಕಡೆ ಆಳುಗಳಿಗೆ ತಿಳಿಸಿ ಅವರಿಗೆ ಬಹಳವಾಗಿ ಹಣವನ್ನು ಕೊಟ್ಟಿದ್ದಳು. ಅವರು ಅದರಂತೆಯೇ ಹೊಳೆಯಲ್ಲಿ ಬಿಟ್ಟುಬಂದಿದ್ದರು. ಒಂದು ದಿವಸ ಭೀಮರಾಜನ ಸಾಕುತಂದೆಯು ಕಾಡಿಗೆ ಬೇಟೆಮಾಡಲು ಹೋಗಿದ್ದು ತುಂಬಾ ದಣುವಾಗಿದ್ದುದರಿಂದ ಹೊಳೆಯಬಳಿಗೆ ಬಂದು ನೀರನ್ನು ಕುಡಿದು ತನ್ನ ತೃಷೆಯನ್ನು ನೀಗಿಕೊಳ್ಳುವಷ್ಟರ ಲ್ಲಿಯೇ ನದಿಯ ಪ್ರವಾಹದ ಮಧ್ಯದಲ್ಲಿ ತೇಲಿಕೊಂಡು ಬರುತ್ತಿದ್ದ ತೊಟ್ಟಿಲನ್ನು ನೋಡಿ ಅದೇನೋ ಒಂದು ವಿಶೇಷವಿರಬಹುದೆಂದು ಊಹಿಸಿ ತನ್ನ ಬಳಿಯಲ್ಲಿದ್ದ ಅಂಬಿಗರಿಗೆ ತೊಟ್ಟಿಲನ್ನು ತರುವಂತೆ ಆಜ್ಞಾಪಿಸಲು ಅವರು ಆಜ್ಞೆಯನ್ನು ಶಿರಸಾವಹಿಸಿ ಈಜು ಬಿದ್ದು ತೊಟ್ಟಿಲನ್ನೂ ಮತ್ತು ಅದರಲ್ಲಿದ್ದ ತೇಜೋವಂತನಾದ ಮಗುವನ್ನೂ ಸುರಕ್ಷಿತವಾಗಿ ದಡಕ್ಕೆ ತಂದು ದೊರೆಗೆ ಅರ್ಪಿಸಿದರು. ತನಿಗೆ ಮಕ್ಕಳಿಲ್ಲದೆ ಇದ್ದುದರಿಂದ ಭಗವಂತನು ಕರುಣಿಸಿ ದಯಪಾಲಿಸಿದ ಮಗುವನ್ನು ತನ್ನ ಮಗನೆಂದೇ ಭಾವಿಸಿ ಊರ ನ್ನೆಲ್ಲಾ ತೋರಣ ಮೇಲ್ಕಟ್ಟುಗಳಿಂದ ಅಲಂಕಾರಮಾಡಿಸಿ ಬಹಳ ವಿಜೃಂಭಣೆಯಿಂದ ಪುತ್ರೋತ್ಸವವನ್ನು ಮಾಡಿಕೊಂಡನು. ಭೀಮರಾಜನಿಗೆ ಕ್ಲಿಪ್ತಕಾಲದಲ್ಲಿ ವಿದ್ಯಾಭ್ಯಾ ಸಮಾಡಿಸಿ ಸ್ವಲ್ಪಕಾಲದಲ್ಲೇ ಸಕಲವಿದ್ಯಾಪಾರಂಗತನನ್ನಾಗಿ ಮಾಡಿಸಿ ಆತನಿಗೆ ರಾಜ್ಯಭಾರವನ್ನು ವಹಿಸಿ ತಾನು ಪರಲೋಕವನ್ನೈದಿದನು.

ಭೀಮರಾಜನನ್ನು ಹೊಳೆಯಲ್ಲಿ ಹಾಕುವಂತೆ ಅಪ್ಪಣೆಮಾಡಿದ ಆತನ ಮಲ ತಾಯಿಯು ತನ್ನ ಪ್ರಾಣೋತ್ಕ್ರಮಣಕಾಲದಲ್ಲಿ ತಾನುಮಾಡಿದ ಈ ಘೋರಕೃತ್ಯ ವನ್ನೊಪ್ಪಿಕ್ಕೊಂಡು ಪ್ರಾಣಬಿಟ್ಟಳು.

ಭೀಮರಾಜನ ಸಾಕುತಂದೆಯು ಈತನು ತನಗೆ ಹೇಗೆ ಸಿಕ್ಕಿದನೆಂಬುದನ್ನು ಬರೆ ಸಿಟ್ಟಿದ್ದು ತಾನು ಪ್ರಾಣಬಿಡುವಾಗ ಭೀಮರಾಜನನ್ನು ಹತ್ತಿರಕ್ಕೆ ಕರೆಯಿಸಿ ಎಲ್ಲಾ ವಿಷಯವನ್ನೂ ಆತನಿಗೆ ಸಾಂಗವಾಗಿ ತಿಳಿಸಿದ್ದನು. ಅದೇ ಪ್ರಸ್ತಾಪವು ಅವಂತೀಶನ ಕಿರುಮನೆಯಲ್ಲಿ ಬರಲು ಕಡೆಗೆ ಸುವರ್ಣಪುರಾಧ್ಯಕ್ಷನಿಗೂ ಭೀಮರಾಜನಿಗೂ ಇದ್ದ ಸಂಬಂಧವು ವ್ಯಕ್ತವಾಯಿತು.

ಈ ರೀತಿ ಸುವರ್ಣಪುರ, ಅವಂತಿಪುರದವರಿಬ್ಬರಿಗೂ ಅನ್ಯೋನ್ಯ ಬಾಂಧವ್ಯ ಬೆಳೆ ದುದರಿಂದ ಒಬ್ಬರೊಬ್ಬರಿಗೆ ಆಗಾಗ್ಗೆ ನಡೆಯುತ್ತಿದ್ದ ಕಲಹವು ತಪ್ಪಿ ಉಭಯಪಕ್ಷ ದವರೂ ಸೌಖ್ಯವಾಗಿದ್ದರು.

ಸಂಪೂರ್ಣಂ.

PRINTED AT THE ROYAL PRESS, MYSORE—1916.

ಕಾದಂಬರೀಸಂಗ್ರಹ ಗ್ರಂಥಮಾಲೆಯಲ್ಲಿ ಪ್ರಕಟವಾಗಿರುವ ನವೀನ ಗ್ರಂಥಗಳು.

1	ಮೃತ್ಯುಪರೀಕ್ಷೆ	0–2–0	16	ನೀತಿಬೋಧಿನಿ	0–2–0
2	ದೇವಾನುಗ್ರಹ	0–1–6	17	ಹರಿಣಾಕ್ಷಿ	0–1–0
3	ಏನೋ ಆಗಿಹೋಯಿತು	0–1–0	18	ಕ್ಷಾತ್ರತೇಜ	0–6–0
4	ವಿಲಕ್ಷಣ ದೈವಘಟನೆ	0–4–0	19	ಬಿಲ್ಲುಗಾರ ಮಲ್ಲ	0–1–6
5	ಸೌದಾಮಿನಿ	0–5–0	20	ರಾಮಭುಜಂಗ	0–1–6
6	ಸುಮನೋರಮಾ	0–2–0	21	ವಿಶಾಲಾಕ್ಷಿ	0–12–0
7	ಕುಮಾರಭೀಮಸಿಂಹ	0–1–0	22	ಕಮಲಕುಮಾರಿ	0–9–0
8	ಬೃಂದಾವನ	0–2–0	23	ಜ್ಯೋತಿಶ್ಶಾಸ್ತ್ರ	0–1–0
9	ಮಾಲಿನೀ	0–2–0	24	ಇಂದ್ರಿಕಾವಿಜಯ	0–3–0
10	ಪ್ರೇಮಪಿಪಾಸೆ	0–2–0	25	ನನ್ನಸಂಸಾರ	0–5–0
11	ಸುಲೋಚನಾ	0–3–0	26	ಮಧುಸೂದನ	0–4–0
12	ಸದಾಹಾರವಿವೇಚನೆ	0–2–0	27	ಶಂಕರಕಥಾಸಾರ	0–8–0
13	ವಿನೋದಚಂದ್ರ	0–2–0	28	ವಿನಾಯಕವಿಜಯ	0–6–0
14	ಡಕಾಯಿತಿ	0–1–6	29	ರೋಹಿಣಿ	0–4–0
15	ಕರಾವಲಂಬಸ್ತವ	0–1–0	30	ಸೊಬಗಿನಬಳ್ಳಿ	0–2–0

ಇದೇ ಮಾಸಪತ್ರಿಕೆಯ ವಾರ್ಷಿಕಚಂದಾ ಅಂಚೇವೆಚ್ಚದೊಡನೆ 1–4–0 ಹೊಸಹೊಸ ಗ್ರಂಥಗಳು ಪ್ರತಿತಿಂಗಳೂ ತಪ್ಪದೆ ಪ್ರಕಟವಾಗುತ್ತಿವೆ. ಪ್ರತಿಯೊಬ್ಬ ಕನ್ನಡಿಗರೂ ಈ ಮಾಸಪತ್ರಿಕೆಯನ್ನು ತರಿಸಲೇ ಬೇಕು.

ನಮ್ಮ ವಿಳಾಸ:—ಸಿ, ವೆಂಕಟರಮಣಶಾಸ್ತ್ರಿ

ಎಡಿಟರ್:—ಕಾದಂಬರೀಸಂಗ್ರಹ

ಮೈಸೂರು.

ಕಾದಂಬರೀಸಂಗ್ರಹ ಗ್ರಂಥಮಾಲಾ ನಂಬರು ೩೦

ವಿನಾಯಕವಿಜಯ

ವೆಂಕಟಸುಬ್ಬಯ್ಯ,

ಬೆಲೆ ೬ ಆಣೆ. *Price 6 As.*

ರಾಯಲ್ ಪ್ರೆಸ್, ಮೈಸೂರು
1916

ಪೀಠಿಕೆ.

ಸ್ಕಾಂದಪುರಾಣಾಂತರ್ಗತವಾಗಿರುವ ಈ ಗಣಪತಿಯ ಮಹಿಮೆಯಲ್ಲಿ 24 ಅಧ್ಯಾಯಗಳಿರುವುವು. ಇದುವರೆಗೂ ಈ ಗಣಪತಿಯ ಮಹಿಮೆಯು ಕನ್ನಡದಲ್ಲಿ ಪದ್ಯ ರೂಪವಾಗಿ ಪ್ರಕಟವಾದಂತೆ ಕಾಣಿಸಲಿಲ್ಲ. ಈಗ ಗಣಪತಿಯನ್ನು ಸರ್ವರೂ ಕಾರ್ಯಾರಂಭದಲ್ಲಿಯೇ ಆರ್ಚಿಸುತ್ತಿರುವುದು ಸುಪ್ರಸಿದ್ಧವಾಗಿದೆ. ಹೀಗೆ ಆದಿಪೂಜ್ಯನಾದ ವಿನಾಯಕನ ಅವತಾರ ಕಥೆಯನ್ನು ಸರ್ವರೂ ತಿಳಿಯಬೇಕಾದುದು ಬಹಳ ಅವಶ್ಯಕವಾದ ಕಾರಣ ಇದನ್ನು ಕನ್ನಡದಲ್ಲಿ ಬರೆದೆನು. ಪ್ರಕಾಶಕ್ಕೆ ಅವಕಾಶವಿಲ್ಲದೆ ಬಹಳ ದಿನ ಹಿಂದಲೂ ಹಾಗೆಯೇ ಇದ್ದ ಈ ಗ್ರಂಥವನ್ನು ಮೊದಲು ಮೈಸೂರು ನಾರ್ಮಲ್ ಸ್ಕೂಲಿನಲ್ಲಿ ನಮಗೆ ಕನ್ನಡ ಗ್ರಂಥವನ್ನು ಬೋಧಿಸುತ್ತಿದ್ದು, ಪ್ರಕೃತದಲ್ಲಿ ಮದ್ರಾಸ್ ಗೌರ್ನಮೆಂಟ್ ಕನ್ನಡ ಟ್ರಾನ್ಸ್‌ಲೇಟರಾಗಿರುವ ಮ|| ರಾ|| ಬಿ. ರಾಮರಾವ್ M. A. L. L. B. ಯವರು ದಯವಿಟ್ಟು ಪರಾಂಬರಿಸಿ ನನಗಾಗಿ ತೊಂದರೆಯನ್ನು ತೆಗೆದುಕೊಂಡು ಅರ್ಧಭಾಗವನ್ನು ಪ್ರಕಾಶಕ್ಕೆ ಬರುವಂತೆ ಅವಕಾಶ ಮಾಡಿಕೊಟ್ಟರಲ್ಲದೆ, ಈ ಪುಸ್ತಕಕ್ಕೆ ವಿನಾಯಕವಿಜಯವೆಂಬ ಹೆಸರನ್ನು ಇಟ್ಟು ಕೊಟ್ಟಿದ್ದಾರೆ. ಅದಕ್ಕಾಗಿ ಆ ಮಹನೀಯರಿಗೆ ಬಹಳ ಕೃತಜ್ಞನಾಗಿರುವೆನು.

ಈ ಪುಸ್ತಕ ಮುಂಚೆ ಈ ಗ್ರಂಥವನ್ನು ಆಮೂಲಾಗ್ರವಾಗಿ ನೋಡಿ ಪರಿಶೋಧಿಸಿದ ಮ|| ರಾ|| ಆರ್ ಶ್ರೀನಿವಾಸರಾಯರ ಸಹಾಯವು ಚಿರಸ್ಮರಣೀಯವಾಗಿರುವುದು.

ಮೊದಲಿಂದಲೂ ನನ್ನ ಮೇಲೆ ಪೂರ್ಣವಿಶ್ವಾಸವನ್ನಿಟ್ಟುಪದೇಶಿಸಿದ ತ್ಯಾಗರಾಜ ಗೊಂಡ್ಲು ಎ. ವಿ. ಸ್ಕೂಲ್ ಸಂಸ್ಕೃತಪಂಡಿತರಾದ ವೇ|| ಬ್ರ|| ಶ್ರೀ|| ಕೃಷ್ಣಮೂರ್ತಾಚಾರ್ಯರ ಅಮೋಘವಾದ ಅನುಗ್ರಹವೇ ಸಕಲ ಶ್ರೇಯಸ್ಸಿಗೂ ಕಾರಣವಾಗಿರುವುದೆಂದು ತಿಳಿಸಲು ಸಂತುಷ್ಟನಾಗಿರುತ್ತೇನೆ. ಇದನ್ನು ತಮ್ಮ ಅಮೋಘವಾದ ಕಾದಂಬರಿ ಸಂಗ್ರಹ ಮಾಸಪತ್ರಿಕೆಯಲ್ಲಿ ಪ್ರಕಟಿಸಿ ಸಹಾಯಮಾಡಿದ ವೇ || ಚಾ || ವೆಂಕಟರಮಣಶಾಸ್ತ್ರಿಗಳಿಗೆ ನಾನು ಕೃತಜ್ಞನಾಗಿದೇನೆ. ಕನ್ನಡಭಾಷಾಭಿಮಾನಿಗಳೆಲ್ಲರೂ ಇದಕ್ಕುತ್ತೇಜನವನ್ನಿತ್ತು ಪ್ರೋತ್ಸಾಹಿಸುವರೆಂದು ನಂಬಿರುವ ತಮ್ಮ ವಿಧೇಯನಾದ

ಆನೇಕಲ್
ತಾ|| 10–8–1916

ವೆಂಕಟಸುಬ್ಬಯ್ಯ
ಮುಖ್ಯೋಪಾಧ್ಯಾಯ,
ಆನೇಕಲ್, ಕರ್ಣಾಟಕಪಾಠಶಾಲಾ.

ಕಂ|| ಗುರುವೇ ಬೊಮ್ಮಂಗುರುವೇ|
ವರವಿಷ್ಣುವೆ ನಿಪ್ಪ ನಾಗುರುವುಮಾಪತಿಯೈ ||
ಗುರುವೇ ಸಾಕ್ಷಾದಜನ್ಯೆ|
ಪಿರಿದಾಗುರುಚರಣ ಕೇಗಳಾನತನಪ್ಪೆಂ || ೧ ||

ಮೆರೆವುದೊ ಮೈಸೂರ್ನಾಡೋಳ್
ವರಶಿವಗಂಗಾಭಿಧಾನ ಯಾತ್ರಾಸ್ಥಲಮೇಂ ||
ಕರೆವರ್ ದಕ್ಷಿಣಕಾಶೀ|
ಪುರಮೆಂದವನೀಧ್ರಮಂಕಕುದ್ಗಿರಿಯೆಂಬರ್ || ೨ ||

ಇದರೆಡೆಯೊಳ್ಪಾವನ ಮೆನ|
ಲದುವೆ ಪುರಂ ತ್ಯಾಮಗೊಂಡ್ಲ ವೆಂಬಾಪೆಸರಿಂ ||
ಪದದೇಂ ಮೆರೆಗುಮೊ ಸುಜನಾ|
ಸ್ಪದಮಾಗಿರ್ಪುದು ಸಮಸ್ತವಸುಸಂಜಯದಿಂ || ೩ ||

ವ|| ಆಪುರದೋಳ್
ಶ್ರೀಕಂಠೇಶ್ವರ ಭಕುತಂ |
ಶ್ರೀಕಂಠಾಹ್ವಯ ಮಹೀಸುರಂ ಛಂದೋಗಂ ||
ಶ್ರೀಕರ ವಾಸಿಷ್ಠಾನ್ವಯ|
ನಾಕರುಣಾಕರನದೆಂತು ಮೆರೆದನೊಜಸದಿಂ || ೪

ಪಿರಿದುಂ ವ್ರತನಿಯಮದೊಳಂ|
ಪರಮೌದಾರ್ಯಂಗಳೊಳಗೆ ಪಾಸಟಿಯಿಲ್ಲಂ ||
ನೆರೆಮೆರೆವಾತನ ತನಯಂ |
ವರನಂಜುಂಡಯ್ಯ ನೆಂಬ ಭೂಸುರನೆಸೆವಂ || ೫ ||

ವರನಂಜುಂಡಯ್ಯಸುತಂ|
ವರಗುರುಚರಣಾರವಿಂದಮಧುರೋಲಂಬಂ ||
ಬರೆದಂ ವೇಂಕಟಸುಬ್ಬಂ|
ವರವಿಘ್ನೇಶ್ವರ ಚರಿತ್ರಮಂ ಷಟ್ಪದಿಯೊಳ್ || ೬|

ಶ್ರೀಃ.

ಶ್ರೀಗುರುಭ್ಯೋನಮಃ

ವಿನಾಯಕ ವಿಜಯ

ವೆಂಬ

ಬೆನಕನ ಮುರಿಂವಿ

ಸೂ॥ ಸುತನ ವಿಜ್ಞಾಪನವನಾಲಿಸಿ ।
ಒತದಿಶಂಕರನೊರೆದನಜಂಗಗೆ ।
ವಿತತಸಿದ್ಧಿಪ್ರದನ ವಿಘ್ನೇಶ್ವರನಚರಿತವನು ।

ಭಾ॥ ಷ॥ ಗರುಡಗಮನಂಗೆರಗುತಲಿತಾಂ । ನರಗೆ ವಂದಿಸಿ ಪರಮಪುರುಷಗೆ ।
ಪಿರಿದುಮೂಜೆಯನೆಸಗಿ ವಾಣಿಯಜರಣಕಭಿನಮಿಸಿ ॥
ಭರದೆತಾಪಸಕುಲವಿಭೂಷಿತ । ವರದವೇದವ್ಯಾಸಗರ್ಚಿಸಿ ।
ಧರೆಯೊಳಲ್ಲಂ ಬಳಿಕೆವಿಜಯವನೊರೆಯೆಲೇಸಹುದು ॥ ೧ ॥

ಶಂಭು ! ಶಂಕರ ! ಪರಮದೇವನೆ ! । ಜಂಭಭೇದಿವಿರಂಚಿವಿನುತನೆ ।
ದಂಭರಹಿತನೆ ! ನನಗೆ ಕೃಪೆಯಿಂದೊರೆದಸತ್ಕಥೆಯಾ ॥
ಸಂಭವಂಗಳ ಕೇಳ್ವುಚಿತ್ತಂ । ಸಂಭೃತಾನಂದದೊಳುತಾವಿ ।
ಸ್ರಂಭವಾಂತಿಹುದೆಂದುಪೇಳ್ದನುಶಿವಗೆಷಣ್ಮುಖನು ॥ ೨ ॥

ದುರಿತರಾಶಿಯನೋಡಿಸುತ್ತಿಹ । ಪರಮಪಾವನಶಾಕ್ತಶಾಂಕರ ।
ವರಗತಿಪ್ರದಶೈವವೈಷ್ಣವ ಸತ್ಕಥಾವಳಿಯ ॥
ಕರಮೆಕೇಳ್ದೆನು ಧರೆಯೊಳಧುರಂ । ಪರಮಪುರುಷಾರ್ಥಂಗಳಕ್ಕುಂ ।
ನರರಕಿಲ್ಬಿಷಮೆಲ್ಲಮೋಡಿಕುಮೆಂದು ಪೇಳಿದನು ॥ ೩ ॥

ಪರಮಶಂಭುವೆ ! ಚಿತ್ತಮೆನ್ನಯ । ವರಗಣೇಶನ ವಿವಿಧಚರ್ಯವ ।
ನರಿಯಲಾಶಿಸುತಿಹುದು ಪೇಳಾವರಗಣೇಶ್ವರನು ॥
ಧರೆಯೊಳಾಜರಿಸಿರ್ದಕೃತ್ಯವ । ಭರದೊಳಾಲಿಸಿ ಜೀವಕೋಟಿಯು ।
ದುರಿತವಾರ್ಧಿಯದಾಂಟಿಸಾಗಲಿ ನಿನ್ನ ಪಾದವನು ॥ ೪ ॥

ಎಂದು ಪೇಳ್ದಾನುಡಿಯನಾಲಿಸಿ | ಕಂದ ಪೇಳ್ವೆನು ಕೇಳುಸಂತಸ |
ದಿಂದ ಜೆನಕನು ಪಿಂದೆಗೆಯ್ದವತಾರಸಂಭ್ರಮವ ||

ಇಂದುಕಲೆಯೋಲಾಶ್ರೋತೃಜ್ಞಂವಾ | ನಂದವನು ತಾಂ ಮಾಳ್ಪುದದರಿಂ |
ಸುಂದರಾಂಗನೆ ! ಸಾವಧಾನದೊಳಾಲಿಸೀಕಥೆಯ ॥ ೫ ॥

ಅಯಿ, ನಿರ್ಗುಣ ನಿರ್ವಿಕಲ್ಪನು | ಪರಮಪಾವನ ಚಿತ್ಸ್ವರೂಪನು |
ಪರಸಮಾಶ್ರಿತಸತ್ವನೀಶನು ಭಕ್ತಪರವಶನು ||

ಗುರುಸಹಸ್ರಕ ವೇದವೇದ್ಯನು | ಪರಮತಾನೆನೆ ವಿಷ್ಣುಶಂಕರ |
ಸುರವರಾರ್ಚಿತನಾಗಿ ಮೆರೆವನು ಮೂರುಶೋಕದೊಳು ॥ ೬ ॥

ಪ್ರಳಯಕಾಲದೊಳೊಮ್ಮೆಲೋಕಂ | ಜಲದೊಳಳ್ದಿರೆ ಮುಂದೆನೋಡು |
ತ್ತಳುಕುತಲಿಚಿದ್ರೂಪಧರನಾದೇವನೆರ್ದೆಯೊಳಗೆ ||

ತಳೆದುಳಿಯವನಿದೇನು ಚಿತ್ರವ | ಮಿಳೆಯೊಳಿರ್ಪವಸುಗಳೆಲ್ಲಂ |
ತೊಳಗಿತೋರ್ಕುಂಭಿನ್ನ ಮಾಗದೆ ಲೋಕದಲ್ಲಿನಗೆ ॥ ೭ ॥

ಒರ್ವನಿರ್ಪುದುತಕ್ಕುದಲ್ತದು | ಸರ್ವವಿಧದಿಂತನ್ನೊಳಂಜಿಕೆ |
ಪುಟ್ಟುತೀಗಳೆ ಚಿತ್ರಕೆಂದಿಂತವನುಚಿಂತಿಸುತೆ ||

ಒರ್ವನಿರ್ಮಮನೇಕನಾಗಿಯು | ಪೊರ್ಮೆ ಜನಿಪೆನೆನುತ್ತೆ ಜನಿಯಿಸಿ |
ನೂರ್ಮೆ ಸತ್ವರಜಸ್ತಮೋಗುಣದಿಂದರಂಜಿಸಿದ ॥ ೮ ॥

ಹರಿಯುಮಿಶಾನುಮಬ್ಜಜಾತನು | ಮಿರದೆಮೂರುಂಗುಣದೊಳೊಗೆದರು |
ನೆರೆರಜೋಗುಣಕಂದುಸಂದುದು ಜೊಮ್ಮವೆಸರಳೆಯೊಳ್ ||

ಪುದುದಾಗಮ ಶಾಸ್ತ್ರವೇದಗ | ಳೊರೆದನಾತಗೆ ದೇವದೇವನು |
ಹರಿಸದಿಂದಲೆವೇದಶಾಸ್ತ್ರಪುರಾಣಪಾತಗಳ ॥ ೯ ॥

ತಿಳಿಸಿ ತತ್ವವಪಿಡಿಗೆನೇವನು | ಬಳಿಕ ಸೃಷ್ಟಿಸೆನುತ್ತೆ ಪೇಳಲು |
ಜಳಜಪುತ್ರನು ಮರಿತೆಗೆಯ್ದೆನೆನುತ್ತಮಾಣತಿಯ ||

ತಳೆದುತಲೆಯೊಳ್ಸೃಷ್ಟಿಕಾರ್ಯಕೆ | ಫಳಿಲನಾಪಿದ ಕರವ ಪಸರಿಸೆ |
ಬಳಿಕೆಬಂದುವು ವಿಘ್ನನಿವಹಗಳಾಗಳೇನೆಂಬೆ ॥ ೧೦ ॥

ಕೆಲದೊಳೊರ್ವನು ಪಿಡಿಯಸೆಳೆದನು | ತಲೆಯ ಕೂದಲನೊರ್ವನೆಳೆದನು |
ಪಲರುಭೀಕರಮಾಗೆ ನಾನಾವಿಧದೆ ಕೂಗಿದರು ||

ಕೆಲರು ದುಂದುಭಿನಾದಮೆಂಬೊಲ್ | ಕೆಲದೆ ಕೈಹಪ್ಪಾಳೆಗೈದರು |
ಪಲವನುಡಿಯಲದೇನುಚಾರಸವಾರ್ತೆಯಿಲ್ಲವನ ॥ ೧೧ ॥

ಎಡರನೆಸಗುತೆಕಂಡುಕಾಣದೊ | ಲಡಗಿಕೊಳ್ಳುವಭೂತರಾಶಿಯ |
ನಡಿಗಡಿಗೆ ಕಾದುತ್ತೆ ಬೆದರುತೆಚಿಂತೆಯೊಂದಿದನು ||

ಬಿಡದೆಸತ್ಕನೆ ಬಾಧೆಗೆಯ್ವುವು | ತೊಡಕಿದೇತಕೆ ? ದೇವನಾಜ್ಞೆಯು |
ಮುಡುಗುವಂತಾಯಿತ್ಕಾಗಳೇನೆಂದೊರೆವೆನೀಪರಿಯ || ೧೨ ||

ಆರುತೊಡಕನೆಬಿಡಿಸೆಶಕ್ತರ | ದಾರುಕನಗೆಸಹಾಯವಪ್ಪರು |
ದಾರಿ ತೋರಿಸಿ ಸೃಷ್ಟಿಸೆಂದೊರೆದಜನುಮೈಗರೆದ ||

ಬೇರೆ ದಾರಿಯ ಕಾಣೆನೆಂದಿಗೆ | ಬಾರಿಸಲ್ಕುಹುದದನೊರೆದೊಡೀ |
ಧಾರುಣಿಯೊಳಾಜರಿಸಿ ಸೌಖ್ಯದೊಳಿರ್ದಿನೆಂದೊರೆದ || ೧೩ ||

ಪರಮಚಿನ್ಮಯರೂಪ ದೇವನ | ನಿರದೆಚಿಂತಿಸೆ ಕಂಜಜಾತನು |
ಪರಮಭಕ್ತ್ಯಿಯೊಳಾಗಕಂಡನು ಪರಮವಸ್ತುವನು ||

ಚರಣಕೆರಗುತೆ ಪೇಳ್ದನಾತಗೆ | ಗುರುವೆ ! ನಿಮ್ಮಾಜ್ಞಾನುಸಾರದೆ |
ಧರೆಯಸೃಷ್ಟಿಯಗೆಯ್ದೆನಲ್ಲದೆ ಬೇಳ್ದುದಿನ್ನೇನು || ೧೪ ||

ಬಿಡದೆಮಾಳ್ಪುವು ಭೂತರಾತಿಗ | ಳಿಡರ ಸೃಷ್ಟಿಗಿನ್ನೆ ಸಾಹಸ |
ವಡಗಿತೆಲ್ಲವು ವಿಘ್ನರಾಶಿಯನೆಲ್ಲ ಪರಿಹರಿಸು ||

ಪಿಡಿದಕಾರ್ಯದ ವಿಘ್ನವೆಲ್ಲವ | ತೊಡೆಯೆ ಸೋತುವು ವೇದಶಾಸ್ತ್ರಂ |
ತಡವಮಾಡಲ್ಕೆನ್ನನೀಪರಿನುಂಗೆ ಯುತ್ತಿಪ್ಪವು || ೧೫ ||

ಎಂದು ನುಡಿದಾನುಡಿಯಲಾಲಿಸು | ತಂದುವೇವನು ಸುತಗೆದಯೆಯಿಂ |
ಬಂದು ಬೇಳ್ದನು ಬಿದಿಗುಪಾಯವ ವಿಘ್ನವಾರಣೆಯ ||

ಕಂದಕೇಳೈವಕ್ರತುಂಜಪ | ನಿಂದು ಮಂತ್ರದೆ ಜಾಪಿಸಿಲ್ಲಿಯೆ |
ಬೆಂದುಪೋಪುವು ವಿಘ್ನವಿಸರಗಳೆಂದುಪಾರಿದನು || ೧೬ ||

ಇದುವೆ ಮಂತ್ರವು ಸಿದ್ಧಿದಾಯಕ | ವಿದುವೆಮೂಲವು ಕಾರ್ಯದಾದಿಗೆ |
ಪದೆದು ಪಲಸುತೆ ಸೃಷ್ಟಿಕಾರ್ಯವ ಬಳಿಕಮಾಚರಿಸು ||

ಬಿದಿಯೆ ! ಬೇಳ್ದೆನು ನಿನಗೆಸಾಮಜ | ವದನ ಮಂತ್ರದಸಾರವಿದನಾಂ |
ಮುದದೆ ನೀಂಕೈಗೊಳ್ಳುದೆಂದೆನೆಹರುಷವ್ಯೆದಿದನು || ೧೭ ||

ಪರಮಮಂತ್ರವನಂತರಂಗದೊ | ಳರುಳುಪೊಳ್ತರೆಯೊಳಗೆಪರಿಸುತೆ |
ತೊರೆದುನಿದ್ರಾಭೋಜನಂಗಳೆನಜನುಸೇಮದೊಳು ||

ನಿರುತದಿಂದಲಿ ನಮಿಸಿಗಣಪನ | ಚರಣಪಂಕಜಕೆರಗುತಿರ್ದನು |
ವರುಷ ಹನ್ನೆರಡಾಗೆ ಮಂತ್ರವನಂತುಜಾಪಿಸಿದ || ೧೮ ||

ನೆನೆದಮಾತ್ರಕೆ ವಕ್ರತುಂಡನು | ಮನದೆಮುದವನುತಾಳ್ದು ಭಕ್ತನ |
ಮನಕೆ ಸಂತಸಗೈದನಾಗಳೆ ಭಕ್ತವತ್ಸಲನು ||
ವಿನುತ ಮಹಿಮನುಮಾತ್ಮರೂಪವ | ನನಿತನಜನಿಗೆ ತೋರ್ದಿಗೊಡುತಿರೆ |
ತನುಜ ! ಪಕ್ಕದೊಳಿರ್ದುನೋಡಿದೆನದನೆಪೇಳುವೆನು || ೧೯ ||
ರಕ್ತವರ್ಣನ ಸಿಂಧುರಾಸ್ಯನ | ರಕ್ತನೇತ್ರನ ಚಂದ್ರಕೋಟಿ |
ವ್ಯಕ್ತತೇಜನ, ಸೂರ್ಯಕೋಟಿಸಮಾನಭಾಸನನು ||
ಭಕ್ತನುಗ್ರದರೂಪದಂದವ | ಮುಕ್ತಲೋಜನನಾಗಿ ಕಂಡನು |
ತ್ಯಕ್ತಧೈರ್ಯನು ಜಪವಮಾಣತೆ ಮುಚ್ಚಿಯೆಯ್ದಿದನು || ೨೦ ||
ಕೆಲದೊಳೊದವಿದಕಾಂತಿರಾಶಿಯ | ನಲಘುವಿಕ್ರಮನಂದುನೋಡುತೆ |
ಭಲದೊಳೆದ್ದನು. ಸಾವಧಾನದೊಳಿಷ್ಟದೇವತೆಯ ||
ಬಲದತೇಜೋರೂಪವನುಕಂಡಲುಗದಿರ್ದನು. ವಿಧಿಯು ಕೈಮುಗಿ |
ದಲಸನಾಗದೆ, ಧೈರ್ಯದಿಂದಲೆನಿಂದುನುತಿಸಿದನು || ೨೧ ||
ಜಯಜಯಾನಂದ ಸ್ವರೂಪನೆ ! | ಜಯಜಯ ಧರಾಧಾರಭೂತನೆ ! |
ಜಯ ಸುಸತ್ಯಾತ್ಮಕನೆ ! ನಿತ್ಯನೆ ! ನಿನಗೆನಮಿಸುವೆನು ||
ಭಯನಿವಾರಕ ! ದೇವದೇವನೆ ! ನಿಯತನೀಪರಿಹರನುವಿಧಿಯ್ಮೆ |
ಜಯವ ಪೇಳ್ದೆನು ಮತ್ತೆನಂದಿಪೆನೆಂದುಬೆಸಗೊಂಡ || ೨೨ ||
ಪರಮ ದೇವನು ಕೇಳ್ದು ಭಕ್ತನ | ವಿರಿದುನುತಿಯನವಂಗೆನಿಜಸಂ |
ದರುಶನಂಗಳನಿತ್ತು ಸೃಷ್ಟಿವಿಘಾತವನು ಕೇಳಿ ||
ಕರುಣದಿಂದಲಿ ತನ್ನ ಭಕ್ತನಿ | ಗೊರೆದನಜನಿಗೆ ದೇವದೇವನು |
ಧರಿಣಿಗೇಳ್ಗೆಯ ಮಾಳ್ಪವರಿಯಿಂ ಕುವರ ಸಂತಸದೆ || ೨೩ ||
ಆರಮಂತ್ರವ ನೀನು ನೆನೆದೆಯ | ದಾರುಮಂತ್ರವ ನಿನಗೆ ಪೇಳ್ದರೊ |
ಸಾರವಹದೇವೇಶನಾತನಯೋಗಮಾರ್ಗದೊಳು ||
ಪಾರುತಿರ್ಪರೊಸನಕಮೊದಲಹ | ಭೂರಿಮುನಿಗಳು ವಕ್ರತುಂಡನು |
ಧೀರನಾನೆಯ್ತಂದೆ ನಿನ್ನಿಷ್ಟವನುಸಲಿಸುವೆನು || ೨೪ ||
ನನ್ನ ಕರೆವರು ವಕ್ರಮುಖನೆನು | ತಿನ್ನು ಲೋಕದ ವಸ್ತುವೆಲ್ಲವು |
ನನ್ನ ರೂಪವು ಪೇಳ್ವುದೇನೈ ನಾನೆ ಜಗವೆನಿಪೆ ||
ನನ್ನಿಯ್ಮೆ ಕೇಳೆಂಬ ದೇವನ | ಸನ್ನುತಾಲಾಪವನು ಕೇಳುತೆ |
ತನ್ನ ಚಿತ್ತದೊಳಾಂತುಮುದವನು ಬಿದಿಯು ಬೇಡಿದನು || ೨೫ ||

ಎನಗೆ ಮರುಕವ ತೋರಿದೊಡೆಧ | ನ್ಯನಹೆನಾಲಿಸುವಕ್ರತುಂಡನೆ |
ಯೆನಗೆ ಜಗವನು ಸೃಜಿಸಲೀವುದು ಪರಮಶಕ್ತಿಯನು ||

ಮನದೆ ನಿಶ್ಚಲಮಾದಭಕ್ತಿಯು | ಮೆನಗೆನೆಲಗೊಳಿಪಂತೆತವಪದ |
ವನಜಯುಗಳದೆ ಮಾಳ್ಪುದೆಂದೆನೆವರವಬೇಡಿದನು || ೨೬ ||

ಪರಮದೇವನು ಕರುಣಿಸಿದಸ | ದ್ವರವನಾಂತನು ಬಳಿಕಮಣಿದನು |
ಚರಣಕಿತ್ತನು ತನ್ನ ಮಾನಸಪುತ್ರಿಯರನವಗೆ ||

ಭರದೆಸಿದ್ಧಿ ಸುಬುದ್ಧಿಯೆಂಬರ | ನಿರದೆಪತಿಕರಿಸುತ್ತ ಬೊಮ್ಮಗೆ |
ಹರಿಸಿನಡೆದನು ತನ್ನ ಲೋಕಕೆ ಕನ್ನೆಯೊಡವೆರದು || ೨೭ ||

ಬಳಿಕ ಬೊಮ್ಮನು ತನ್ನ ಲೋಕದ | ಬಳಿಗೆ ಪೋದನು ಮೇಣ್ತರಾಜರ |
ಗಳನು ನಿರ್ಮಿಸಿ ವಿವಿಧ ಸೃಷ್ಟಿಯ ಮಾಡಿ ಮುಗಿಸಿದನು ||

ತಿಳಿದನಾಪರಮಾತ್ಮದಯೆಯಿಂ | ದಿಳೆಯ ಸೃಷ್ಟಿಯ ವಿಘ್ನಮೆಲ್ಲವು |
ಕಳೆದುಪೋಯ್ತಾಸಿಂದು ಮಾಣ್ಬೆನುಬಗೆಯ ಬೇನೆಯನು || ೨೮ ||

ಎಂದು ಮನನೊಳೆ ಬಗೆದನಾತನು | ಸ್ಕಂದ! ನೀಕೇಳೆಂದು ಶಂಕರ |
ನಂದು ನುಡಿಯಲು ಕೇಳಿಕುತುಕವನಾಂತುಭಕುತಿಯಲಿ ||

ವಂದಿಸುತೆ ಬೇಡಿದನು ಪರನನು | ನಿಂದೆಗಣಪಗೆ ವಕ್ರತುಂಡನು |
ಮೆಂದು ನಾಮವಪೆಹಗೆಬಂದುಪೊಹದನಪೆಸಸೆಂದ || ೨೯ ||

ಹರನು ಪುತ್ರನ ನುಡಿಯನಾಲಿಸಿ | ಯೊರೆದನೀಪರಿ ಸುತನೆ! ಕೇಳಾ |
ದರದೆ, ಕಾರ್ಯದೊಳೆಶರುವಕ್ರನೆನಿಕ್ಕುವಿಾಜಗದೆ ||

ವಿರಿದುವಕ್ರವತುಂಡದಿಂದಲಿ | ಪರಿವಕೆತದಿಂದಾಗಲೋಕದೆ |
ಕರೆದರಾತನ ವಕ್ರತುಂಡಾಹ್ವಯದೆ ಸೂರಿಗಳು || ೩೦ ||

ಹರಿಯೆ! ಸತ್ಪದೆ ನೀನು ಪಾಲಿಸು | ಧರೆಯನೆಲ್ಲವ ವಿವಿಧಯತ್ನದೆ |
ಹರನು ಪೊರೆಯಲು ನೆರೆತಸೋಗುಣಮಾಂತುಲೋಕವನು ||

ಭರದೊಳೆಂದನುವಕ್ರತುಂಡನು | ಪರಮರೂಪನು ಮೂರ್ತಿಮೂರಕೆ |
ದೊರೆಯುಮಾತನ ನ್ಮೆಮೆಯರಿವೊಡೆಲೋಕಕಸದಳವು || ೩೧ ||

ಸ್ವಸ್ತಿನಿಜಯವನಿತ್ತು ಮೆರೆವುದು | ಶಸ್ತಸತ್ಕಥೆಯಿದನುಧರೆಯೊಳು |
ನಿಸ್ತುಲಾಂತಃಕರಣವಾಲಿಪೆಜನದಕಾರ್ಯಗಳ ||

ವಿಸ್ತೃತಪ್ರತಿಬಂಧಗಳ್ವಿ | ಧ್ವಸ್ತಮಪ್ಪುವು ಹಸ್ತದಲ್ಲಿಸ |
ಮಸ್ತ ವಾಂಛೆಗಳೆರ್ಪುಮೆಂದಾತ್ಮಜಗೆಪೇಳೆದನು || ೩೨ ||

ಇಲ್ಲಿಗೆ ಸ್ಕಾಂದಪುರಾಣದಲ್ಲಿ ಮೊದಲನೆಯದಾದ ವಕ್ರತುಂಡಾವತಾರ ವರ್ಣನವೆಂಬ
ಪ್ರಥಮ ಪ್ರಕರಣವು ಮುಗಿದುದು.

ಎರಡನೆಯ ಪ್ರಕರಣವು.

ಸೂ|| ಆಲಿಸಿರ್ದೇನು ವಕ್ರತುಂಡಕ |
ಫಾಲಹರಿಯನು ನಿನ್ನ ವೊಗದೆಕ |
ಪಾಲಿಯಿನ್ನುರೆ ಪೇಳು ಚಿಂತಾಮಣಿಯ ಕಥೆಯೆಂದ ||

ಸುತನ ಮಾತನು ಕೇಳ್ದು ಗೌರೀ | ಪತಿಯು ಚಿಂತಾಮಣಿಯ ಪಾವನ |
ಕತೆಯ, ದುರಿತವಿನಾಶಹೇತುವನಾಗಳಾಗುಪಗೆ ||

ಹಿತದೆ ಪೇಳ್ವನು ಕೇಳು! ತನುಜನೆ! | ವಿತತಮಾದೀಕಥೆಯ ನೊರೆವೆನು |
ಸತತಭಕ್ತಿಯೊಳಾಲಿಸೆಂದನು ಪೂರ್ವವೃತ್ತವನು || ೧ ||

ತಮಿಳನಾಡೊಳು ಪಿಂತೆಮಿಪೋ | ತ್ತಮನೆನಿಸಿಪ್ಪಭಿಜಿನ್ಮಹೀಪತಿ |
ಯಮಿತಧರ್ಮದೆತಿರೆಯನೊರೆದನು ವೇದಮಾರ್ಗದೊಳು ||

ಕ್ರಮದೆನಿಯಮವ ನಿತ್ಯನೆಸಗುವ | ನಮಿತವೈದುಂಬನ್ನನೆಸಗುವ |
ನಮರ ಪೂಜೆಯೊಳತಿಘಸೇವೆಯೊಳವನುತೊಡಗಿರ್ದ || ೨ ||

ಸುರಪಮಾನ್ಯನು ಸತ್ಯವಿಕ್ರಮ | ನಿರದೆ ಶಾಸ್ತ್ರಜ್ಞಾನಪೂರ್ಣನು |
ವರಯಶೋಭೂಷಿತನು ಮೂಲೋಕದೊಳುವಿಖ್ಯಾತ ||

ಭರಿತಕೋಶನು ಧನದಮಿತ್ರನು | ಹರಿಯಕಿಂಕರನಾಗಿ ಕಾಯ್ವನು |
ಕರಿತುರಗರಥಪತ್ತಿಪರಿವೃತನಾಗಿರಾಷ್ಟ್ರವನು || ೩ ||

ಅವನ ಪಟ್ಟದರಾಣಿ ಹದಿಬದೆ | ಭುವನದೊಳ್ಪಾಪ್ಯಾಖ್ಯನಿಯೈ |
ಧವಮನೋಹಾಲ್ದಿನಿಯು, ಸೌಶೀಲ್ಯಾದಿಗುಣಭರಿತೆ ||

ಭವದೊಳಿಂದೇಕೆಮಗೆಸುತನಂ | ಭವಮದೊದಗದೊ ಕಾಣೆನೆನುತಲಿ |
ತವಕಗೊಳ್ಳುತೆ ಬಗೆಯೊಳಿಂತಾಲೋಚಿಸುತ್ತಿರಲು || ೪ ||

ಒಂದು ದಿನ ಮಾರಾಯನರಸಿಯ | ಜಂದದಾನನವನ್ನು ನಿರುಕಿಸಿ |
ಸುಂದರಾಂಗಿಯೆ ವದನಮೇತಕೆ ಬಾಡಿಕುಂದಿಹುದು ||

ಸಂದಧನಕನಕಾದಿವಸ್ತ್ರಗ | ಳಿಂದೆ ಭೂಷಣವಿಂದೆಸೊಗಸೊಳು |
ನಿಂದುನಲಿವಂದೇಕೆ? ಕೊರಗುನೆಮೆನಲು ಪೇಳಿದಳು || ೫ ||

ಏನನೊರೆವೆನುನಾಥ! ಚಿಂತೆಯ | ನೇನನಿತ್ತುದು ಪುಣ್ಯಕರ್ಮವ |
ದೇನನಿತ್ತುವು ಫಲವನೆಮಗಾದೇವಕಾರ್ಯಗಳು ||

ನೀನು ಮಾಡಿದ ನಿಯಮವೇನಾ | ಯ್ತಾನುಗೈದಾದಾನಮಾನಗ |
ಳೇನುಮೊಂದುಂ ಪುತ್ರಸಂಪದವಿಲ್ಲವಲಿಲ್ಲೊಡೆಯ || ೬ ||

ಎಂದು ನುಡಿದಾಮಾತಕೇಳುತೆ | ಹಿಂದೆ ನಾವೇಗೆಯ್ವುದರಿಂ |
ದಿಂದು ಪುತ್ರರು ಪುಟ್ಟರೆಮ್ಮಯಹಿಂಸೆಯ ನುಡಿದೇನು ||
ಕುಂದದೈಸಿರಿನಾಳ್ಗಳಿಂದೇಂ | ಸಂದಜನ್ಮದಿನೇಂಪ್ರಯೋಜನ |
ಮೆಂದುಬಗೆದುಪಯೋಗಮಿಲ್ಲೆನುತಿರ್ಪರಾಡಿದರು || ೭ ||

ಬಳಿಕರಾಯನು ಪುತ್ರಕಾಮದೊ | ಳಿಳೆಯಹೊರೆಯನು ದಂಡಕೋಶವ |
ನಿಳಿಸಿ ಮಂತ್ರಿಯ ಪೆಗಲಮೇಲಕ್ಕವರನನುಸರಿಸಿ ||
ಎಳೆಯಳೊಂದಿಗೆ ರಭಸನೇರುತೆ | ಪೊಳಲಪಾರ್ವರ ಹರಿಕೆಯೆಲ್ಲವ |
ತಳೆದು ವಿಪಿನಕೆ ತಪವಗೆಯ್ಯಲು ಪುರದೆಹೊರವಂಟ || ೮ ||

ಪಿಂತೆಬಪ್ಪಾನಾಗುಕರನು | ಸಂತಯಿಟ್ಟನುಬಳಿಕಲಿಲಗೊಂ |
ಡುಂತೆ ನೀಯಂ ಪೊಳಲಸಾರ್ಪುದೆನುತ್ತೈಸೇಯಿಸಿದ ||
ಪಿಂತಿರುಂಗುಲು ಜನವು ನೃಪತಾ | ನಂತು ಪಾದಿಯೊಳತ್ತಪೋದನು |
ಚಿಂತೆಯಿಂದಲಿ ದೇಶದೇಶವ ನಲೆದುತೊಳಲಿದನು || ೯ ||

ಆರಸಿವೆರಸುತಲರಸಬನದೊಳು | ತಿರುಗಿಕಂಡನು ವೇದಘೋಷದೆ |
ಮೆರೆವಮೌನಿಯ ಪರ್ಣಶಾಲೆಯನಗ್ನಿಹೋತ್ರವನು ||
ತರುಸಮೂಹವೆ ಮೃಗದಬಳಗದೆ | ಮೆರೆವಪಾರ್ವರ ಪರ್ಣಶಾಲೆಯ |
ನಿರುಕಿಸುತ್ತಲಿನಲಿದನಾತ್ಮದೊಳಾಮಹೀಧವನು || ೧೦ ||

ಮಡದಿಯೊಡನಾರಾಯ, ಮೌನಿಗೆ | ಬಿಡದೆಪೊಡಮಡೆ ಕಂಡುಕಿತ್ತಡಿ |
ಯೊಡನೆನಿರುಕಿಸಿ, ಬಾಹ್ಯವೃತ್ತಿಯನಾಂತು ಮುನಿಪತಿಯು ||
ಒಡನೆಕುರುಪನು ನೋಡಿಯಾಗಳೆ | ಪೊಡವಿಯಾಣ್ಮನೆನುತ್ತೆಯೋಚಿಸಿ ||
ಯೊಡೆಯ ನೀ ನಾರಿಲ್ಲಗೇಕೆಯ್ತಂದೆ ಪೇಳೆಂದ || ೧೧ ||

ನುಡಿಯಕೇಳ್ದುಂನೆಲವಮುಟ್ಟಿರೆ | ಮುಡಿಯು ರಾಯನ, ನೋಡಿಮುನಿಪನು |
ಪಡಿಯನಾಡನದೇತಕೆಂದವನರಿದುಯೋಗದಲಿ ||
ಪೊಡವಿಯಾಣ್ಮನದುಗುಡವರಿದಂ | ದೊಡೆಯ ನೀನೇಳೆಂದು ಬೇಗನೆ |
ನುಡಿದನಾತಗೆ ಮಗನುಜನಿಪನು ನಿಮ್ಮಪೆಸನೇನು || ೧೨ ||

ಎಂಬ ನುಡಿಯನು ಕೇಳ್ದುನೃಪಮುಖ | ಬಿಂಬವಂದಾನಂದಲಹರಿಯ |
ನಿಂಬಿನಿಂದಲಿಸೂಸೆ, ಮುನಿಯನುನಮಿಸಿ ಪೇಳೆದನು ||
ಜಂಭವೈರಿಸುಮಾನ್ಯನಿನ್ನನೆ | ನಂಪೆದೆನು ನಿನ್ನುಕ್ತಿಸತ್ಯವಿ |
ದೆಂಬಿಗುಣವತಿಯಾಕೆ ನಾನಗ್ಗಳಿಪ್ಪೆನುತ್ತೊರೆದ || ೧೩ ||

ಎನಗೆ ತನುಜರಡೆಂತುಪುಟ್ಟುವ । ರೆನುತನುಗ್ರಹದಿಂದೆ ಪೇಳ್ದುದು ।
ನಿನಗೆ ನಾನಭಿವಂದಿಪೆನುಗಡ ನಿನ್ನನುಡಿ ನಿಜವು ॥
ಮುನಿಗಳಾಡಿದ ಮಾತಿಗೇಗಳು । ಹನನ ಬಾರದೆನುತ್ತ್ರರಾಯನು ।
ಮನದೆ ಮೆಚ್ಚಿದ ಪರಿಯನೇನೆಂದೊರೆವೆ ಕೇಳೆಂದ ॥ ೧೪ ॥
ನರಪ ಕೇಳೈ ಸಿಂಧುತಟದೊಳು । ಸರಸಿಯೊಂದಿಹುದಮಲತೋಯದೆ ।
ಮೆರೆಗುಮಲ್ಲಯೆ ಕಂದಮೂಲಸುಪುಷ್ಪಸಮಿಧೆಗಳು ॥
ದೊರೆಗುಮಲ್ಲಿಗೆ ನೀನು ಪೋಪುದು । ಚರಿಸುಜಪವನು ಮಾಡುಹೋಮವ ।
ತರುಣಿಪೂಜಾದ್ರವ್ಯಮೊದಗಿಸಿ ನಿನ್ನ ಸೇವಿಸಲಿ ॥ ೧೫ ॥
ಅರಸ ಕೇಳೈ ಮಾಸನಾಲ್ಕರೊ । ಳಿರದೆ ನಿಯಮವ ನೀನು ನಡೆಯಿಸಿ ।
ವುರವನಾಂಪುದು ಬಳಿಕಮಲ್ಲಂ ಮಡದಿಯೊಡಗೂಡಿ ॥
ತೆರಳಿ ರಾಜ್ಯವ ಪಾಲಿಸುತ್ತಿರು । ತರಳನುದಿಪನು ನಿಮಗೆ ನಿಜದಿಂ
ದರಸಕೇಳ್ವುದೆನುತ್ತ್ರಿಪೇಳಲ್ಮುನಿಯನುತಿಸಿದನು ॥ ೧೬ ॥
ಬಳಿಕರಸು ಸತಿವೆರಸಿಮುನಿಪದ । ನಳಿನಯುಗಳಕೆನಮಿಸಿ ನಡೆದನು ।
ನಳಿನಲೋಚನೆಯೊಡನೆ ಸಂಭ್ರಮದಿಂದಪಲ್ಲವಲಕೆ ॥
ಕೊಳದೊಳರಸನು ಮಿಂದುಹೋಮಾ । ವಳಿಯ ಜಪಗಳನಾತನಾಜ್ಞೆಯ ।
ತಳೆದು ಮಾಡಿದ ನೆಲ್ಲ ಕೃತ್ಯವನೃಪತಿನಲವಿಂದ ॥ ೧೭ ॥
ಆಸರೋವರದಂಚಿನೊಳ್ತಾ । ನಾಸರಸ್ವತಿವೆರಸುಜೊಮ್ಮನು ।
ವಾಸಮಿರ್ದನು ವಾಣಿಯಿಂದಲಿ ಸೇವೆಕೈಕೊಂಡು ॥
ಆಸರಸ್ವತಿಬಜ್ಜೆಗಾದ್ಯೆಯು । ಭಾಸುರಾಂಗಿಯು, ಕಾಂತಿರಾಶಿವೊ ।
ಲಾಸುಮಾನಿನಿಯಂದಮೊರೆವೊಡೆಸಾಧ್ಯಮಿಲ್ಲೆನಗೆ ॥ ೧೮ ॥
ಸುದತಿಯಾಕಜಭರಕೆಸೋಲಲು । ಮೊದಲು ಜಮರಿಯು ಕಡವಪಿಂತೆಗೆ ।
ದದುವೆ ಕಾರಣದಿಂದ ನಾಣ್ಚಿಯೆಬನವಸಾರಿದುದು ॥
ವದನದಂದಕೆ ಸೋಲ್ತುಗಗನಕೆ । ಬಿದುವುಪಾರಿದನಂತೆ ಜಲ್ವೆಯ ।
ಪದದಗತಿಯನು ಪಡೆಯಲಂಜೆಯು ಜಲವಸೇರಿದುದು ॥ ೧೯ ॥
ದನಿಯನೊಂದಲ್ಪಿಕವು ಸುದತಿಯ । ಬನದೊಳಿರ್ಪುದು ಜರಣಸಾಮ್ಯಕೆ ।
ವನಜಮಾಶಿಸಿಜಲದೆ ನಿಂದೇಂಜಪವಮಾಡುವುದೋ ॥
ಘನದ ತೇಜದೊಳಿಂತುಮೆರೆಯುವ । ಳನಘಸುದತಿಯನೇಹವಾಂತುರೆ ।
ತನುವಿಗುಣವತಿತರಲು ಪೋಪಳು ಗೆಪ್ಪೆಗೆಳಸುಗಳ ॥ ೨೦ ॥

ಪಲವುಕಾಲಂ ಕಳೆಯೆ ವಾಣಿಯು| ಜಲಜಪುತ್ರನ ತೊಡೆಯನೇರುತೆ|
ಸಲಿಗೆಯಿಂದಲಿವಸನಮಿಲ್ಲದೆ ಸಿತಗೆಶಂಕೆಸದೆ ||

ಕೆಲದೆಕುಳ್ಳಿರೆ ಜಪದಕೊನೆಯೊಳು| ನಲಿದುನೋಡಿದನಜನುವಾಣಿಯ|
ನಲುಪಮತಿಯಿಂದಾತನಾಕೆಯಮೇಲೆ ಮೋಹಿಸಿದ || ೨೧ ||

ಮನದೊಳಜನುವಿಮೋಹಾಂತನು| ಮನಸಿಜಾರ್ತಿಯ ನೊಂದಿತಾ ಕಾ|
ಮಿನಿಯಸಿಟ್ಟಿಸಿಬಾಕೆ ರಂಭೆಯೊರತಿಯೊ ದೇವತೆಯೊ ||

ಎನತುತಪವನು ಕೆಡಿಸಲಿಂದ್ರನು| ಮನದೆಯೋಚಿಸಿ ಕಳುಪಿಶಚಿಯನು|
ಬಿನದಗೈವನೋ ನಾಗಕನ್ನೆಯೊ ಯಿವಳೆ ರೋಹಿಣಿಯೊ || ೨೨ ||

ಇವಳು ವಿದ್ಯಾಧರಿಯೊ ಗುಹ್ಯೆಯೊ| ಇವಳು ಯಕ್ಷಿಯೊ ಯಾತುಧಾನೆಯೊ|
ಇವಳು ಲಕುಮಿಯೊ ಹರಿಯಮಾಯೆಯು ಬಂದು ಮೋಹಿಪುದೊ ||

ಬವಣೆಯೇನಿದೆನುತ್ತೆ ಬೊಮ್ಮನು| ತವೆ ವಿಮೂರ್ಛಿತೆನಾಗೆ ಕಾಮದೊ|
ಳವನ ಮೆಯ್ಯಿಂ ಜಾರ್ದಪಸನವಕಂಜು ಸರಸತಿಯು || ೨೩ ||

ಬಿದಿಯೆ ಧರಿಯಿಸು ಬೇಗಬಬ್ಬೆಯ| ನೆದೆಗೆ ಶಾಂತಿಯ ಬೇಗವೊಂದಿಸು|
ವಿದಿತ ತತ್ಪಗೆ ತಕ್ಕುದಲ್ಲವಿದೆಂಬ ನುಡಿಗೇಳೆ ||

ಸುದತಿಯೆನ್ನಯವಾಂಛಿತಾರ್ಥವ| ನೊದವಿಸೀ ಗಳೆನಿಪ್ಪನುಡಿಯನು|
ಬಿದಿಯ ವದನದೆ ಕೇಳಿವಾಣಿಯುನ್ಮಸನವೆಯ್ದಿದಳು || ೨೪ ||

ಮುನ್ನ ಮಾಡಿದ ಪಾಪಕರ್ಮವ| ನೆನ್ನಬಿಡುವುದೆ ಶಾಸ್ತ್ರಗಣ ಸಂ|
ಪನ್ನದರಿವುಂ ಪೋಯ್ತು ಪತಪಮಾ ಸಬಾಧಗಳು ||

ಸೊನ್ನೆಯಾದುವು ಸೈಸಲಾರೆನು| ಮುನ್ನ ಮೋಡುವುದೊಳ್ಳಿತೆನ್ನುತೆ|
ಕನ್ನೆಶಾಪಕಪಿದು ಬಗೆಯೊಸು ಚಿಂತೆಯೊಂದಿದಳು || ೨೫ ||

ಎಲ್ಲಿ ವಿಜ್ಞಾನಾಧ್ವರಿವರಸೆ| ಎಲ್ಲಿ ಕಾಮಾಂಧಂಗೆರಸೆಯೊಳ|
ದೆಲ್ಲಿ ನಾಚಿಕೆಯಿಲ್ಲುಮೆಂದೆನೆ ನುಡಿದಳಜಸೊಡನೆ ||

ಬಲ್ಲೆನಿಸಗಾನಣುಗಿ ಮೇಣ್ನೀ| ನೆಲ್ಲ ವಿಧದೊಳು ತಂದೆಯಾಗಿಹೆ|
ಬಲ್ಲರೀ ವಿಧಮಾಗಿಯಾಡರೆನುತ್ತೆ ಪೇಳಿದಳು || ೨೬ ||

ನಿಜದ ರೂಪವನೆನೆದು ನೋಪೈ| ಯಜನೆ ಬಗೆಯನು ಬಿನಿಸುಸಲ್ಲದು|
ಸುಜನವಂದಿತ ಕೇಳು ನೀನೆನೆ ಕಾಮಪರವಶನು ||

ಅಜನು ವಾಣಿಯ ಮಾತಕೇಳದೆ| ಕುಜನು ಮತಿಯನು ದೂರಗೆಯ್ಯದೆ|
ಬೊಜಗನೆಂಬಾ ದುಷ್ಟನಾಮಕೆ ತಾನು ಗುರಿಯಾದ || ೨೭ ||

ದುಷ್ಟಮನವನು ಕಂಡು ಜೊಮ್ಮನಶಿಷ್ಟೆ! ವಾಣಿಯು ಬಗೆಯೊಳಂಜಿವಿ|
ಶಿಷ್ಟಗಣದೊಡನಿರ್ದ ಶಕ್ರನ ನಿಕಟಕೆಯ್ದಿದಳು ||
ವಿಷ್ಟರಾನ್ವಿತನಾಗಿ ಧಾತನ| ನಿಷ್ಟದಾಲಯೊಳವಳನಿಂತೆಯೆ|
ಭ್ರಷ್ಟನಾಗುತೆಬಂದು ಕಾಣದೆ ನೋಡು ಮುರಳಿದನು || ೨೮ ||

ಇಂದ್ರನೇರಿಸಿ ಪೀತಕೆಜನನು| ರುಂದ್ರನಾಗಿಯೆ ತಿರವ ಬಾಗಿಸು|
ತಿಂದ್ರಿಯಾಶ್ವಕೆ ಸೋಲೆಜೊಮ್ಮನು ಸುರರು ನಡುಗಿದರು ||
ಇಂದ್ರನಿಂದೆಮ್ಮಿಂದ.ದೈತೇ| ಯೇಂದ್ರರೆಮ್ಮಯ ವಸುವಳಳ್ಳರೊ|
ತಂದ್ರಮುಳಿದೆಂದಜನ ಕೇಳಲು ಮಾತನಿಂದಿರ್ದ || ೨೯ ||

ಸುರರೊಳೋರೋರ್ಕ್ರಮತಮಗೆ| ಸಿರಮಿಸುತ್ತಂ ಕರಣಹಯವನು|
ತೊರೆವುದಸದಳಮುರಾಕ್ಷಸಮನುಜ ಹೊದಲಹರು ||
ತೊರೆವುದೇಗಳ್ಕಷ್ಟಮೆಂಬರು| ತರಳಮನನನು ಬಿಗಿದುಗೆಲ್ವೊಡೆ|
ಪರವಸ್ಯೆದುವನಲ್ಲ ಜದೊರ್ಮದೆ ನರತಮೋರುವನು || ೩೦ ||

ಕರಣಮಿವುಗಳ್ಬೇಗ ಸೆಕೆಪುವು| ನಿರಿದು ವಿದ್ವಾಂಸರ್ಕಳುಂತಾಂ ||
ಪೊರದು ತಪ್ಪಾಜಿದಿಯೊಳೆಂದನು ಕೇಳು ಪರಮಾತ್ಮ ||
ಕರಣಗಣದೊಳು ನಾನೆ ಮನವಮೆ| ನಿರದೆ ಯೆಂಜೇನುಡಿಯನಾಲಿಸಿ|
ತೆರಳಿದುಚಿತನಾಗಿ ಲೋಕಿಸಿ ತಾನು ಗೋಳಿಟ್ಟ || ೩೧ ||

ಚಾರೆತೇಜವು ಜದಿಯ ಸರಸಿಯ| ವಾರಿಭಾಗದೆ ಪಡಲಸೆಯೊಳು|
ಸೇರೆ ಗಂಗಾಸಾಗರಂಗಳ ಸಂಗಮಂಗಳೊಳು ||
ವಾರಿಜಾಸನನಲ್ಲಿ ಬೀರ್ಕವ| ವಾಲಯೊಳ್ಕಳೆದಲ್ಲಮಿಂದನು|
ವಾರಿಜಾಕ್ಷನ ನೆನೆದು ತನ್ನಯ ಲೋಕಕೆಯ್ದಿದನು ||

ಸ್ಕಾಂದಪುರಾಣಾಂತರ್ಗತಮಾಗ ಜಿನಾಯಕನಿಗಯದೊಳ್ ಚಿಂತಾಮಣ್ಯುಪಾಖ್ಯಾನವೆಂಬ
ಎರಡನೆಯ ಪ್ರಕರಣಂ ಸಮಾಪ್ತಂ.

ಮೂರನೆಯ ಪ್ರಕರಣವು.

ಸೂ॥ ಮುನಿಯಹರಿಕೆಯೊಳಾಮುಖೀಪತಿ
ತನಯನೊಗೆದನು ನಿಮಳಪಕ್ರಮ।
ನನಘಬಲಸಂಪನ್ನನುಗಣಾಭಿದನು ಭೂಮಿಪಗೆ॥

ಇತ್ತಲಭಿಜಿನ್ನಾಮಭೂಮಿಪ। ನುತ್ತಮಸಪೋವರಕೆ ಮಾಯ।
ಲ್ಗೆತ್ತುಪರ್ವದೆ ಪತ್ನಿವೆರಸಿಯೆ ಪೋಗಿಮುಳುಗಿದನು॥
ಬಿತ್ತರದೆ ನೀರಡಿಸಿಗುಣವತಿ। ಚಿತ್ತತಾಪದೆ ಸೇವೆಯೊಳಗಗ।
ಳುತ್ತಮಾಂಬುವ ನೀಂಟಿದಳ್ಪಚಸಂಭ್ರಮಂಗಳಲಿ ॥ ೧ ॥

ಸರಸಿಜಾಸನತೇಜವಾಗಳೆ। ತರುಣಿಯುದರಕೆ ನೀರಿನೊಡನೆಯೆ।
ಭರದೆಸೇರಲ್ಕಾಕೆ ಗರ್ಭಿಣಿಯಾದಳೀನೆಂಬೆ॥
ಪರಿಯೆನಾಲ್ಕುಂ ಮಾಸಮಿಹುದು। ದೊರೆಯುತವಸಿಯ ನುಡಿಯನೆನೆಯುತೆ।
ತರುಣಿವೆರಸಾಮುನಿಯ ನುಚಿಸುತೆ ಕೃಶಕೆ ಪೊಡಮಟ್ಟ ॥ ೨ ॥

ತಡವಮಾಡದೆ ಪೊಳಲಬನಗಳು। ಬಿಡದೆಲಂಕರಿಸಲ್ಕೆ ಪೊಳಲನು।
ನಡೆದರರಸನ ಸಮ್ಮುಖಕ್ಕೆ ಸಡಿಲರು ಪುರೋಹಿತರು॥
ಪೊಡವಿಪಾಲಂಗೆರಗಿ ಕೈಮುಗಿ। ದೊರೆಯಸೀಪೊಯ್ತಂದ ಕತದಿಂ।
ಕಡುಸನಾಥರು ನಾವು, ಪೊಳಲಂ ಪುಗುವುದೆಂದೆನಲು ॥ ೩ ॥

ಆರಸನಾನೆಯನೇರಿಪೊಕ್ಕನು। ಭರದೊಳರಸಿಯು ವಿಬಿಕೆಯೇರಲು।
ಪುರವನಿರ್ವರು ಸೇರ್ದುಮುದದೊಳು ಜನವನೊಲಿಸಿದರು॥
ತಿರೆಯಧರ್ಮದೆ ನೃಪನು ಕಾಯ್ದನು। ತರುಣಿಯೊಬತು ತಿಂಗಳಾಗಲು।
ವರಸುಪುತ್ರನ ಪೆತ್ತಳಾಕೆಯು ಶುಭಮುಹೂರ್ತದಲಿ ॥ ೪ ॥

ಬಳಿಕ ಪತ್ತುಂ ದಿನವು ಕಳೆಯಲು। ಬಳಗದಿನೊಡಗೊಂಡರಸು ತನುಜಂ।
ಗಿಳೆಯನಾಥನು ನಾಮಕರಣವನೈದನುತ್ಸವದೆ॥
ವಿಳಸಿತಾಕ್ಷರನಾಮಸುಗುಣಾ। ವಳಿಯುವಿಮಲಂ ಮೆರೆವಕಾರಣ।
ದಿಳೆಯೊಳಾದುದು ಶಿಶುಗೆ ಗಣನೆಂಬಾಖ್ಯೆ ಸಂತಸದೆ ॥ ೫ ॥

ದಿನದಿನಕ್ಕಾ ಮಗುವು ಬಳೆದುದು| ತನುವಬಣ್ಣವು ಘನವಪೋಲ್ತುದು|
ವಿನುತವಿಕ್ರಮನೆನುತಗೆಯ್ತುದೆ ತಂದೆತಿಳಿದಿರ್ದ ||
ಬನದತಾಳೆಯ ತರುವನಾದೊಡ| ಮನುವಿನಿಂದಲಿ ಕಿಳ್ತುನಲಿವನು|
ಜನಸಮೂಹವ ತುರಗ ಗಜಗಳನವನು ಶಿಕ್ಷಿಪನು || ೬ ||
ಸ್ನಾನದೇವಾರ್ಚನೆಯ ಶಾಸ್ತ್ರವಿ| ಧಾನದಿಂದಲಿ ಹೋಮಜಪಗಳ|
ಮೌನಮುದ್ರೆಯೊಳೆಸಗಿ ಶಿಷ್ಟಾಚಾರಯುತನಾದ ||
ಜ್ಞಾನವಂತಗೆ ಗಣಗೆ ರಾಷ್ಟ್ರವ| ಧೀನವಾದುದು ನೂರುಯೋಜನ|
ವೇನುಲೆಕ್ಕವೊ ? ಗಣನು ಚಿಗಿಯುತೆ ಪಿಡಿವನಾಶಶಿಯ || ೭ ||
ಇರಲು ಕಾಲಾಂತರದೊಳಲ್ಲಿಗೆ| ಕರಿಯುಮದವೇರ್ದೊಂದು ಮೆಯ್ತರೆ|
ಪುರದದಾರಿಗೆ ಬಂಧಮೊಗಲು ಗಣನು ತಾಕಂಡು ||
ಕರದಮುಷ್ಟಿಗಳಿಂದ ಘಾತಿಸೆ| ಕರಿಯನಾ ಗಜಕಾಗದೇಹದೆ|
ಪರಿಯೆಕೆನ್ನೀರ್ಪೊನಲು ಮಲ್ಲಿಂದಡವಿಗೋಡಿದುದು || ೮ ||
ಪುರದಜನರಿಗೆ ಚೋದ್ಯವಾದುದು| ತರಳತಪವನುಗೆಯ್ಯೆಚಿಂತಿಸಿ|
ಗುರುವಿನಾಣತಿಯಾಂತು ಪೋದನೆ ಬನಕೆತೆರಳಿದನು ||
ಹರನ ಪಂಚಾಕ್ಷರವ ಜಪಿಸುತ| ನಿರಶನವ್ರತದಿಂದ ತಯುತಂ|
ವರುಷನಿರ್ದನು ಚರಣಮೇಕದೊಳಬ್ಜದಶಕದೊಳು || ೯ ||
ಎಲರ ಭಕ್ಷಿಸಿಪತ್ತುವರ್ಷವು| ಜಲವಕುಡಿದಿಪ್ಪತ್ತುವರ್ಷವು|
ಬಲದೆಶೀತೋಷ್ಣಾದಿ ಸಮನನೆಕಳೆದವಬುದಗಳು ||
ಜಲಜದಿಂದಲಿ ಶಿವನಪೂಜಿಸಿ| ಫಲಗಳಿಂದಲಿ ತರ್ಪಿಸಿಯತಿಥಿಯ|
ಕೆಲತಪಂಗಳಮಾಡಲವನೇಂಚೆಂದದಿಂದೆಸೆವ || ೧೦ ||
ತೊರೆದು ವೈರವ ಸಿಂಹ ಗಜಗಳು| ನೆರೆದುವಾಕಳು ಪುಲಿಯಸೇರದು|
ದುರಗನಕುಲಗಳಾಡುತಿರ್ದುವು ತಪದಮೈಮೆಯಲಿ ||
ಕರದಬಿಸುಪನು ಕಡಿಮೆಗೆಯ್ಯನು| ತರಣಿ ದಿವಿಷದರವನತೇಜೋ|
ಭರದೆ ತಪಿಸುತೆ ನಡುಗಿನಿಚ್ಚದೆ ಭಯಪಸ್ಯೆದಿದರು || ೧೧ ||
ಅಜನಪಟ್ಟವನಿವನು ಸಾರ್ವನೊ| ನಿಜದೆಸುರಪ ಸ್ಥಾನವಾಂಪನೊ|
ಭುಜಗಭೂಷಣ ಹರನತಪದೊಳಗೊಲಿಪನೀತೆರದೆ ||
ಭುಜಿಸದರ್ಪನು ಸೊಗವನೆಂದೆನು| ತಜನಕೂಡುತೆ ದೇವಗಡಣವು|
ಭುಜಿಸಿ ಭಯವನು ಶಿವನಲೋಕಕೆ ಪೋದರಂದವರು || ೧೨ ||

ಆಲ್ಲಿ ಶಂಕರ ಚರಣಕಮಲವ| ನೆಲ್ಲರೀಕ್ಷಿಸಿ ನಮಿಸಿತಮ್ಮಯೆ|
ತಲ್ಲಣಂಗಳ ಹೇಳಿಕೊಂಡರು ಭಯದೆ ಮೊರೆಯಿಟ್ಟು ||
ಎಲ್ಲರೊಡೆಯನೆ ಕೇಳುನಿನ್ನನು| ಮೆಲ್ಲನೊಲಿಸಲು ಬಂದುಮಾನಿಸ|
ನಿಲ್ಲಿತಪವನು ಗೆಯ್ದು ತಪಿಪನು ನಮ್ಮನೀಸಲಯು || ೧೩ ||
ಕಂದಕೇಳ್ಸಿ ದೇವನಾ ಕೇ| ಳ್ದಂದೆ ನಡೆದೆನು ತವಸಿಯಿರ್ದೆಡೆ|
ಗೊಂದುನಿಮಿಷದೊಳಮರರಲ್ಲಿಯೆ ನಿಂದರಾಪೊಳ್ತು ||
ಬಂದು ಜಪಸರವಾಂತ ಬಕುತನ| ಜಂದದೊಡಲಿನ ಕೃಶತೆಯಾಕ್ಷಿಸಿ|
ಬಂಧುರೋಕ್ತಿಯೊಳೆಂದನಾಗಳೆ ಭಕ್ತಿಭೂಷಣಗೆ || ೧೪ ||
ಸುತನೆ ! ಸುಸ್ಥಿರವಾದಭಕ್ತಿಗೆ| ವಿತತವರವನು ಕೊಡುವತವಕದೆ|
ಹಿತದೆ ಬಂದಿಯೆನಾನು ನೋಡೆನೆನಲಿದು ಕಿಂಕರನು ||
ವ್ರತಕೆಮೆಚ್ಚಿರ್ದ್ದೆನ್ನ ವರದಾ| ತೃತೆಯನಾಲಿಸಿ ಜರಣಕೆರಗುತೆ|
ನುತಿಸಿವರವನು ಬೇಡೆನಿಂದವನೊಡನೆ ಪೇಳಿದೆನು || ೧೫ ||
ಗಣನು ಕೈಮುಗಿದೆಂದನೀಪರಿ ಗಣಪಜನಕನೆ! ನಿನ್ನ ಕಂಡೀ|
ಕ್ಷಣಯುಗಗಳೇಂ ಧನ್ಯನೂದುವೊಬನ್ಮಕರ್ಮಗಳು ||
ಗುಣಕೆ ಬಂದುವಿವೆಂದು ಬೇಗನೆ ಗಣನು ನುತಿಸಿದನಾಗಶಂಭುವೆ! |
ಫಣಿವಿಭೂಷಣ ಭುವನಕರ್ತನೆ! ನಿನಗೆ ನಮಿಸುವೆನು || ೧೬ ||
ಹರನೆ! ಭಕ್ತಾಭೀಷ್ಟವರದನೆ| ಗುರುವೆ ! ಯೋಗಿಧ್ಯಾನಗಮ್ಯನೆ |
ಕರುಮಫಲದನೆ ! ಭುಕ್ತಿಮುಕ್ತಿಪ್ರದನೆ ! ನಮಿಸುವೆನು ||
ದೊರಕದಿರ್ದಪಿ ಮನಕೆಮಾತಿಗೆ | ಪರಮಬೊಮ್ಮನೆ ನೀನು ನಿತ್ಯನು |
ಸುರಪಮಾನ್ಯನೆನುತ್ತ ಕೀರ್ತಿಸಿ ವರವಬೇಡಿದನು || ೧೭ ||
ಕೇಳುದೇವನೆ ! ನೀನು ನೆರೆಕರು| ಣಾಳುವಾದೊಡೆ, ನಿನ್ನ ಚರಣಾ|
ಬ್ಜಾಳಿಯೊಳಗಾಭಕ್ತಿರಸವನು ಕೊಡುವುದೆನಗೆನುತ ||
ಭಾಳಲೋಚನ ನಾನು ಕೇಳ್ದು ಕೈ| ಪಾಳುವಾಗಿ ತಥಾಸ್ತುವೆಂದೆನೆ|
ಪೇಳಿಭೂಪಗೆ ವರವನಿತ್ತಪೆನೆಂದು ಪೇಳಿದೆನು || ೧೮ ||
ಮೂರುಲೋಕವ ಸೆಳೆವಶಕ್ತಿಯ| ನೀರಸಾತಳದಲ್ಲಿ ಕೊಟ್ಟನು|
ವಾರಿಜಾಸನಮುಖರು ನಿನ್ನನು ಪಧಿಸಲಳವಲ್ಲ ||
ಶೂರರುಂ ನಿನಗಂಜಿ ಯುದ್ಧದೆ| ದೂರದಿಂದಲೆ ಶರಣರಹರೊಲ್|
ಸಾರಶಕ್ತಿಯನಿತ್ತು ನಾನೀ ಲೋಕಕೆಯ್ತಂದೆ || ೧೯ ||

ಮರಳಿಪೋದನು ಗಣನುನಿಲಯಕೆ| ಹರುಷದಿಂದಲಿ ಸುತನನೋಡಲು|
ಚಿರದೆತವಕಿಪ ತಾಯಿತಂದೆಯನವನು ವಂದಿಸಲು ||
ಭರದೆ ತಳ್ಕೈಸಿದರು ವೃದ್ಧರು| ತರಳನಾಗಳ್ಚನದೊಳಾದಾ|
ಚರಿಯವೆಲ್ಲವನೊಂದು ಬಿಡದೆಮುನರ್ಗಿ ಪೇಳಿದನು || ೨೦ ||
ಸುತನ ಶಿರವನು ಪಿತನುಮೂಸಿದ| ನತುಳತರ ಸಂಮೋದವಾಂತನು|
ವಿತತಹರ್ಷವನೆಲ್ಲರೊಂದುತೆ ಪೊಗಳಿಪಾಡಿದರು ||
ಪಿತನು ಮಗನನು ಕರೆದುತಳ್ಕೈ| ಸುತಲಿಪೇಳಿದ ನವಗೆಸೂಕ್ತಿಯ|
ಹಿತದೊಳೊರೆನೆಂಸುಸುತನೆ! ಕೇಳೆಂದೀಶತಾನೊರೆದ || ೨೧ ||
ಅರಿವುಬಿಜ್ಞೆಯು ತಪವು ಜಪಗಳು| ಪಿರಿದುಶೌರ್ಯವು ಕುಲವುತಾಮಿವು|
ಮೆರೆಗು ನಿನ್ನಿಂದಖಿಲಮೆಂಬಂತಣುಗ ನಿನ್ನೊಳಗೆ||
ತರಳನದರಿಂ ಪಿರಿದು ರಾಜ್ಯದ| ಹೊರೆಯನಿಳಿಸುವೆ ನಿನ್ನೊಳೆನುತವ|
ನೊರೆದು ಮಂತ್ರಿಯಕೂಡೆ ಯೋಚಿಸಿತವಕದಲ್ಲಿರ್ದ || ೨೨ ||
ಪ್ರಕೃತಿಸಮ್ಮತಿಯಿಂದ ಕಾರ್ಯವ| ಸುಕೃಪೆಯಿಂದಲಿ ಮಾಡಿಯೊದಗಿಸೆ|
ಸುಕೃತಿಯಭಿಜಿದ್ಭೂಮಿ ಪೋತ್ತಮನಿಡಿಸಿ ಲಗ್ನವನು ||
ಪ್ರಕೃತನೈಭವಸೊಕೆಸೆ ಮಗನಿಗೆ| ಪ್ರಕೃತಿನೆರಸಿಯೆ ಪಟ್ಟಗಟ್ಟುತ|
ಭೃಕುಟಿವಿಭ್ರಮದಿಂದ ಮೆಲ್ಲರ ತಾನು ಮೆಚ್ಚಿಸಿದ || ೨೩ ||
ಪಟ್ಟಗಟ್ಟಿದ ಬಳಿಕ ರಾಯನು| ನೆಟ್ಟನಡವಿಗೆ ಸತಿಯೊಡನೆ ಪೊರ|
ಮಟ್ಟನಾಗಳೆ ಮುಕ್ತಿಗಾತಿಸಿ ನೃಪಶಿರೋಮಣಿಯು ||
ದಿಟ್ಟದಾಳ್ತನಗೆಯ್ಮೆಗಳ ಮಂ| ದಟ್ಟಿನೊಳಾತ್ಮಗಣಿಸದಿತರರ|
ತೊಟ್ಟನಾಳ್ತನಗಳನು ಪಡೆದನು ಗಣಮುಖೀಪತಿಯು || ೨೪ ||
ಕೆಲರು ಗಣನನೆ ಸೇವಿಸಿರ್ದರು| ನೆಲದೆತವಕದೆ ಧಾಳಿಯಿಟ್ಟನು|
ನಿಲದೆರಾಯನು ಶತ್ರುರಾಷ್ಟರಮೇಲೆ ದಳವೆರಸಿ ||
ಬಲುದಿನಂಗಳಿಸೊಲಿಸುತಿರ್ದರು| ಬಲಿಯು ವಿಶ್ವಜಿತಾಖ್ಯನುಂ ಮೇ|
ಣೊಲುಮೆಯಿಂ ಗುಣವಂತನುಂ ಪ್ರಮಥಾಖ್ಯನಾಗ್ರಂಣಿ || ೨೫ ||
ತೆರಳಿ ನಾಲ್ವರು ದಳದೆಸಚಿವರು| ದೊರೆಗೆ ಹರ್ಷವನೊದವಿಸುತ್ತಲಿ|
ತರಲು ಪೇಳಿದರಸ್ತ್ರಶಸ್ತ್ರವ ಬೇಗ ಪರಿಜನಕೆ ||
ತರತರದ ಶಸ್ತ್ರಾಸ್ತ್ರಗಳ ತಾವ್| ಭರದೆಪಿಡಿದರು ಕೆಲರುಯೋಧರು|
ಕರಿಯಮೇಲೆತ್ತಿಟ್ಟರಾಗಳೆ ಕೈದುಗಳನವರು || ೨೬ ||

ದಳವುಸುತ್ತಲ್ ಗಣನಬಳಸಿರೆ| ಬಳಬಿಬೆರಸುತೆ ಜೈತ್ರಯಾತ್ರೆಗೆ|
ಘಳಿಲನಾಗಳೆ ನೂರುಯೋಜನದೆಡೆಯನಾವರಿಸಿ ||
ದಳವು ನಾಲ್ಕುಂ ಕಡೆಯೊಳಿವನನು| ಬಳಸಿ ನಡೆದುದು ಮುಚ್ಚಿತವನೀ|
ತಳವ, ಸೈನ್ಯದ ವಾದ್ಯಶಬ್ದಕ್ಕೊಡೆದುದೆಗ್ಗಿಸೆಯು || ೨೬ ||
ಕೆಲದೊಳೆಡದೊಳ್ಯಾಲಪಾಣಿಯು| ಬಲದೆ ಸುಲಭನು ಸೈನ್ಯಮಧ್ಯದೆ|
ಕಲೆತುಗಣನಿರೆ ಬಳಿಕ ತಾರಾಮಂಡಲಾಂತರದೆ ||
ನೆಲಸಿ ಕಣ್ಗೊಳಿವೋಷಧೀಶನ| ಕಲೆಯಪಳಿವಂತಿರ್ದ ನೀ ಭೂ|
ತಲದೊಳಿವರ್ಗಾ ಯುದ್ಧವೀರರನೆಲ್ಲ ಸೋಲಿಸಿದ || ೨೯ ||
ಶರಣುವೊಕ್ಕಾ ನೃಪರ ಪೊರೆದನು| ಗರುವವಿಲ್ಲದ ನೃಪರ ತೊರೆದನು|
ತಿರೆಯೊಳಿವರ್ಗಾ ಭೂಪರೆಲ್ಲರ ಜಯಿಸಿಕೊಳುಗೊಳದೆ ||
ತಿರಯನೆಲ್ಲವಗೆಲಿದು ತಾಸಿರ| ಲರಸು ಕುವರರು ಶಾಂತರಾಗದೆ|
ಮರಳಿ ಯುದ್ಧೋದ್ಯಮದತೀಂಟಿಯೊಳಿರ್ದರಾ ಭಟರು || ೨೯ ||

ಇಂತುಸ್ಕಾಂದಸ್ಥರಾಣಾಂತರ್ಗತವಾದ ವಿನಾಯಕ ವಿಜಯದೊಳ್ ಚಿಂತಾಮಣ್ಯುಪಾಖ್ಯಾನವೆಂಬ
ಮೂರನೆಯ ಪ್ರಕರಣವು ಮುಗಿದುದು.

ನಾಲ್ಕನೆಯ ಪ್ರಕರಣ.

ಸೂ|| ಹರಿಯಹಯವನು ಮುನಿಯಮಣಿಯನು
ನರಪನಾಗಣಕಿತ್ತು ಕೊಂಡೆಂ|
ತೆರದೆಮೆರೆದನೊ ಮೂರುಲೋಕದೊಳಾರುಮಿಲ್ಲೆನುತ||

ಇಂತುರಾಯನು ಮಹಿಯನೆಲ್ಲವ| ನಿಂತೆಗೆಲ್ದಾಬಳಿಕ ಚಿತ್ತದೆ
ಚಿಂತಿಸುತ್ತಲಿ ದೇವಲೋಕದ ಗೆಲವನಾಶಿಸಿದ ||
ಪಿಂತೆಮಂತ್ರಿಗಳೊಪ್ಪೆವಿಬುಧರ| ನಿಂತು ಗೆಲ್ಲಲು ಬೇಗನಡೆದುದ
ನಂತಸೇನೆಯು ಶರವಿಡಿದೇಂ ಗಗನಕೋಡಿದುದೊ? || ೧ ||
ಸುರರಬನದೊಳು ಕಂಜುಕುದುರೆಯ| ನರಸನಾಗಳೆ ಬಲುಮೆಯಿಂದಲಿ|
ಹರಿಯನಾಂತೇರಿದನು ಸುರಮಾತಲಿಯೊಡನೆತಾನು ||
ಸುರಪನಲ್ಲಿಗೆ ಪೋಗಿದೈತ್ಯನ| ಕರುಪವೆಲ್ಲವ ಪೇಳಲಿಂದ್ರನು|
ಕೆರಳಿಗಜವನುಪತ್ತಿಸುರಗಣದೊಡನೆ ಪೊರಮಟ್ಟ || ೨ ||

ಸುರಪನಶ್ವವಪತ್ತಿಕರದೊಳು| ಶರವಬಿಲ್ಲನಾಂತು ತೇಜದೊ|
ಳಿರದೆಕೆಂಡವ ಕಾರ್ಯನೇತ್ರದೆ ಭೀಕರದೆಸೆರೆದ ||
ತೆರಳಿಕಂಡಾಗಣವನಿಂದ್ರನು| ಕರಮೆಗೆಲ್ಪದು ಸಾಧ್ಯಮಲ್ಲೆಂ|
ದೊರೆದು ಸಾಮೋಪಾಯದಿಂದಲಿ ಕೇಳ್ದನಶ್ವವನು || ೩ ||
ಅದನುಕೇಳ್ದಾ ಗಣನುಬಳಿಯಿಂ| ಮದಿಸಿಗಾನೆಯ ನೀಯೆತೇಜಿಯ|
ನಿದನು ನೀಡುವೆನೆಂದುನುಡಿದನು ವಿಬುಧಪತಿಗವನು ||
ತ್ರಿದಶರಾಲಿಸಿ ಗಣನನೊಡಿಯನು| ಸದೆಯೆ ಪೋಗಲು ಕೋಪದೊಳಸುರ|
ನೊದರೆ ಶರಗಳನವರು ಭೀತಿಯೊಳೋಪೆ ದೆಸೆದೆಸೆಗೆ || ೪ ||
ಕರಿಯನೇರಿದ ಹರಿಗೆಪೇಳ್ದನು| ಸುರಪನೀನಘಬುಳ್ಳನಪ್ಪೊಡೆ|
ತುರುಗವಂಪಿಡಿ ಮತ್ತಮೈರಾವತವ ತೊರೆಯೆಂದ ||
ಕರಿಯಮೇಲಿಂದಿಳಿದು ಸುರಪನು| ನಿರಿದುನೀತಿಯಮಾರ್ಗಬಿಡದಪ್ಪೊ|
ಲಿರದೆ ಸಮಿತಿಗೆ ವಜ್ರಕರನಾಗುತ್ತೆ ತೆರಳಿದನು || ೫||
ಸದೆಯಲಿಂದ್ರನು ಪಮಿಯೊಳಾಗಣ| ನೊದಬಿಬಿದ್ದನು ಮುಜ್ಜಿಪೋದನು|
ವಿದಿತವಿಕ್ರಮನಂತೆ ದಣಿವನುನೀಗಿ ಜೇತರಿಸಿ ||
ತ್ರಿದಶಪತಿಯನು ಶರದಿಹೊಡೆಯು| ತ್ತ್ರಿದಸಪಮಿಯನೆ ನೆಲಕೆಕೆಡಹಲು|
ಬೆದರಿಶಕ್ರನು ತೊರೆದುಖಡ್ಗವ ಮುಷ್ಟಿಯಿಂತಿಪಿದ || ೬ ||
ಮುಷ್ಟಿಯಿಂದಲೆ ಗಣನು ಶಕ್ರನ| ನಪ್ಪಳಲ್ಲಯೆ ಹೊಡೆಯಲಾಗಳಾ|
ಪಿಷ್ಟಗಾತ್ರನುಮಾಗಿ ಶಕ್ರನು ಮುಜ್ಜಿಯಂತಾಗೆ ||
ತುಷ್ಟನಾಗಣಸೊರೆದನಿಂದ್ರಂ| ಗಿಷ್ಟಗುಂದಲಿ ನಿನಗೆ ಕೊಟ್ಟೆನು|
ವಿಷ್ಟಪತ್ರಯದಾಧಿಪತ್ಯವನೆಂದು ಬಿಸುಡವನು || ೭ ||
ಎನ್ನ ರಾಜ್ಯವನಾಳುವೆನು ನಾಂ| ನಿನ್ನ ರಾಜ್ಯವನಾಳು ನೀನೆಸೆ|
ಬನ್ನಮಾಂತುದು ಹರಿಹರ ಬ್ರಹ್ಮಾದಿ ಸುರನಿಜಯ ||
ಸನ್ನುತಾಧಿಪಗಣನು ಸುರಗಣ| ದುನ್ನತಿಕ್ಕೆಯ ತೊಡೆದು ಜಯದೊಳು|
ತನ್ನಪತ್ತನದೆಡೆಗೆ ನಡೆದನು ಪಡೆನೆರಸಿಕೂಡೆ || ೮ ||
ಅಣುಗನೆಯ್ತಹ ಸುದ್ದಿಯಾಲಿಸಿ| ಗಣನಗೆಲ್ಲಕೆ ತಂದೆತಾಯ್ಗಿರು|
ತಣಿದು, ಶಕ್ರನು ಸೆರೆಯೆನೊಂದಿಯೆ ಮುಕ್ತನಾದನೆನೆ ||
ಗಣನತಳ್ಕಿಸಿಪರಿಸಿ ನಲಿಸಲು| ತಣಿದರೆಲ್ಲರು ಜಯಕೆ ಬಳಿಕಾ|
ಗಣನು ಧರ್ಮದೊಳಾಳ್ದು ಧರೆಯನು ಮೆಚ್ಚಪೋಷಿಸಿದ || ೯ ||

ನೀಲಜೀಲವನುಟ್ಟು, ತಲೆಯೊಳು| ನೀಲಪಟವಂ ಪೊದೆಯೆ ಭರದಿಂ|
ನೀಲಛತ್ರವ ಭಟರು ಪಿಡಿದರು ಬೇಂಟೆಯವಸರವೆ ||

ನೀಲಹಯವನು ಪತ್ತಿಗಣನಾ| ನೀಲಮಾಲೆಯ ಧರಿಸಿ ಸೊಗಯಿಸಿ |
ನೀಲಬಾಣ ಸುನೀಲಚೇಟಕ ನೀಲಧನುವಿಂದ || ೧೦ ||

ಮೆರೆವಭೂಪನು ಶಕ್ತಿಶರವನು| ಧರಿಸಿಗೋಧಾತನು ವೃತಾಂಗುಳಿ|
ಯಿರಲು ಸೇವಕರವನ ಸುತ್ತಲುನೆರೆದು ಬನದೆಡೆಗೆ ||

ತೆರಳಲಲ್ಲಿಯೆ ಗಣನದೃಷ್ಟಿಗೆ| ಪಿರಿದುಕಾಣಿಕೆಯಾಯ್ತು ಮೃಗಗಳ್|
ಚರರು ಮಿಗಗಳಕೊಂದು ತಮ್ಮಯನೆಲೆಗೆ ಕೊಂಡೊಯ್ಯೆ || ೧೧ ||

ಭರದೆ ತಮತಮಗವರು ಸಾಗಿಸೆ| ಯರಸಮಿಗವನು ಮರಸೆಹೆಚ್ಚಿಯ|
ಕುರುಪಬಿಡದೆಯ್ತಂದು ಮಾರ್ಗದಪರ್ಣಶಾಲೆಯನು ||

ಪರಿಕಿಸುತ್ತಂ ಭೃತ್ಯರೊಡನವ| ನಿರದೆಪೊಕ್ಕನು ನೊಂದರವರುಂ|
ಸರದೆಮಿಂದರು ತಿಂದರಲ್ಲಿಯ ಗೆಡ್ಡೆಗೆಳಸುಗಳ || ೧೨ ||

ತಿಂಬಜನಗಳನೋಡಿ ಮುನಿಗಳ| ಡಿಂಭರೋಡಿದರತ್ತ ಗುರುಚರ|
ಣಾಂಬುಜಕ್ಕಂಪೇಳೆ, ಕೇಳ್ದಾ ನುಡಿಯನಾಕಪಿಲ ||

ಇಂಬಿನಿಂದುಪಚರಿಸಿ ಗುಣನಿಧಿ| ಯಂಬಳಿಕಬರವೇಳ್ವುದೀಯೆಡೆ|
ಗೆಂಬಮಾತಂಕೇಳ್ದು ನಡೆದರು ಶಿಷ್ಯರವನೆಡೆಗೆ || || ೧೩ ||

ಬಂದುಬೆಸಗೊಳೆಛಾತ್ರರರಸನ,| ಸುಂದರಾಂಗನೆ ! ಕಪಿಲಮುನಿಪನು|
ಬಂದು ಪೋವುದುನೀಂ ಕುಟೀರಕೆನುತ್ತೆ ಕಳುಪಿದನು ||

ಬಂದೆವದರಿಂದೆಮ್ಮೊಡನೆ ಬಾ| ರೆಂದುನುಡಿಯಲು ಕೇಳ್ದುಕಪಿಲನ|
ಸಂದರುಶನವಬಯಸಿ ರಾಯನುಪೋದನವರೊಡನೆ || ೧೪ ||

ನೃಪನು ಬಂದನೆನುತ್ತೆ ಗುರುವಿಗ| ರುಪಲು ಶಿಷ್ಯಾವಳಿಯು, ಕಪಿಲನ|
ನೃಪನು ನೋಡುತೆ ಮನದೊಳಾತೇಜಕ್ಕೆ ಬೆರಗಾಗಿ ||

ಕೃಪೆಗೆನಿಧಿಯಾದಿವನು ದಿವಸಾ| ಧಿಪನಪರಿಯಿಂದೀಪ್ಯನಾಗಿಹ|
ನುಪಮೆಗಸದಳವೆದೆಯೊಳೀಮಣಿ ಮೆರೆವುದೆಂದವನು || ೧೫ ||

ಪರಮಭಕ್ತಿಯೊಳೆರಗೆಯೋಗಿಗೆ| ಹರಸಿಕಪಿಲನು ನುಡಿದನರಸಗೆ|
ಭರದೆನೀನಾರಿಲ್ಲಿಗೇಕೆಯ್ತಂದೆ ಪೆಸರೇನು ||

ಒರೆವುದೆಂದೆನೆ ದೈತ್ಯನಾಲಿಸಿ| ತಿರೆಯೊಳಾಂಗಣ ದೈತ್ಯನೆನಿಪೆನು|
ಸರಿದೆನಡವಿಗೆ ಬೇಂಟೆಯಾಡುತ ದಣಿದೆನಡುವಗಲು || ೧೬ ||

ಕಂಡೆನಾಶ್ರಮಮುದನು ಫಲಗಳ| ನುಂಡೆನಾಲೋಕಿಸಿದೆ ನಿನ್ನನು|
ಮಂಡೆಯಿಂದಲಿವಂಗಿದೆ ನೀವೈದು ಗಮನದಲಿ ಮನುತೆಯು ||
ಅಂಡಲೆವನಿಚಿಸೆ ನೃನಿಕಲುಕೆ| ಮಂಡಲಾಧಿಪ ಪೋಪೆಸೆಂದನ|
ಖಂಡವಿಕ್ರಮನದಕೆ ಕೊಲಿಸನು ನಾಮಧೇಯವನೆಂಬನೆ || ೧೬ ||
ದಾನವೇಂದ್ರನೆ ಕೇಳು ? ಬಳಿಕೊಳ| ಸೋಗುಸೊಂದುಂ ಪ್ರಾಣಿಗಳ್ಪಸಿ|
ವಾನದಿರ್ವ ಭುಜಿಸಿಪ್ಪೋಕ್ಕದು ಪುಲಕೆ ನೀಸೆಚಂ ||
ಸೇನೆಸರಸಿಯತಬಿಯೊಳಿರ್ಪರ್ಗ| ಳ್ಳಿಯುಳಿದಾಂಭುಜಿಸಲಾರೆನು|
ಮೌನಿಯೆನಗಾಜ್ಞಾಪಿಸೆಂಬನು ಪೋಗಲಾಗನೊಚ್ಚನೆ || ೧೮ ||
ಎನುತನುದಿದಾಗಣಬಿಯಳು| ಮುದಿಯು ತಿರಿದಾಬಳಿಕೆ ರಾಯನೆ|
ನಿನತಸೈನ್ಯವನಿತ್ತ ಕರೆಯಿಂಸೆನೀಗ ನಿಮಿಷದಿಂ ||
ಎನುತ ಮುನಿಸಂಕೇತವಾದಾಂ| ತಾಳು ಬಿಸ್ಸರು ಪೋಗಿಸೇನೆಯ|
ಮನೆಯಸೊಯ್ಯಲು ಮುಂಬಯು ಬಂಚಲಾಗುಂಬು ಪಿಸಗೊಂಡ || ೧೯ ||
ಸುತನೆ ! ಚಿಂತಾಮಣಿಯನುಯಿಪೊ| ಪತರಣಂಗಳ ಕೇಳ್ದುಸೇನೆಯು|
ಹಿಕದೆಷಡ್ರಸದಿಂದ ನಾನಾಬಗೆಯ ಭೋಜ್ಯಗಳಿ ||
ವಿತತಮುದುದ್ಯಮುಗ್ಧಸಖ್ಯಳ| ಪ್ರಿಯಲಾಪವಿನದನ್ನಪಾನದ|
ವಿತರಣಾದಿಗಳಿಂದ ತಣಿದುಣು ಬಲು ಮಿಗದು || ೨೦ ||
ಗಣನವಾಯಿಸಿ ತಿಂದುಬೇಗನು| ನುಂಡನಾಳಿಗೆಣನು ಸೊಗದಿಂ|
ದಣುವನಾರಿಸಿಕೊಂಡೆ ಪೆಣೆ ! ನೀನು ಬಂದಾಲ ||
ತ್ರಣಕೆನಾವೈನ್ಯ ಮಾಹಾಸಂ| ಪ್ರಿಯಿಸಿ ಸಿಂಗಳ್ಪೀನು ಮುನಿಯೊಳು|
ಗುಣಿಯೆ ! ಸೃಷ್ಟಿಯೆ ಕೊಟ್ಟಿಯಾ ಪೆಣ್ಣಿಕೆ || ೨೧ ||
ನಿನಗೆ ಮಣಿಯುವಪೃಥ್ವಿಪ್ಪ| ಮಾಡ್ಲಾ ಮುನಿಯೆಂಗಳಿ|
ಮನೆಗೆ ಪೋಪೆನೆಸಿಪ್ಪ ಪ್ರಸನ್ನ ಮಾಡಲಾಗಿ ||
ಮುನಿಯು ಕೇಳ್ದನು ಸಗಳ ಮಿಸ್ಸಿ| ಮಾ ಮೈನಾಗಿಂದನು ನೀಡೆನು|
ಮನಸೊಳಾತಿಸಯೋಪಮೆಂಬನು ಮೈನಾಥಂಗೆ || ೨೨ ||
ಸುರವಿರೋಧಿಯುಕೇಳ್ದು ಮುನಿಯನ| ಮಂಬೊಲಾರ್ಯಾಮಣಿಯನಾಗಳೆ|
ಭರದೆನೆಕೆಯಲ್ಮನಿಯು ಕೇಳ್ದನು ಕರೆಯಿಪಿಸೊಡನೆ ||
ದುರುಳಕೇಳ್ಮೂಗವಗೆಲಾ| ಗರುಬದೆನ್ನೊಳೆ ನೀಸುಸೆಣಸುವೆ|
ಭರದೆತಪ್ಪದು ನಿನಗೆ ಸಾವೆಂದವನು ಶಪಿಸಿದನು || ೨೩ ||

ಮುಂದೆ ಜನಿಸುವನೊರ್ವನಾಗಳ್| ಮುಂದಮತಿನೀನೆನ್ನ ಸಮ್ಮತಿ|
ಯೊಂದದೆಯೆಮಣಿಯಿದನು ಬಲ್ಪಿಂದುಯ್ಪ ಕಾರಣನೆ ||
ಬಂದಿಗೆಯ್ವುತ್ತಂತೆ ಕೊಲ್ವನು| ಬಂದುದೀಗವಸಾನಕಾಲವ|
ದಿಂದುದುಷ್ಪನೆ ! ನಿಲ್ಲ ಬೇಡೈದಿಸೆನಾನೆಂದ || ೨೪ ||
ಒರೆಯೆ ಮುಪನು ಕೇಳ್ದನಡುಗುತ| ಮರಳಿಪೋದನು ಬಳಿಕತನ್ನಯ|
ಪುರಕೆಗಣನಾಶಾಪಶಲ್ಯವನೊಂದಿ ಮನಸೊಳಗೆ ||
ಗುರುವಿನಂಘ್ರಿಗೆನಮಿಸಿಪರ್ಯವ| ನರುಹಿಮಂತ್ರಿಗಳೊಡನೆ ಸೇರುತೆ|
ತಿರೆಯಪಾಲಿಸು ತಂದು ಚಿಂತಾಮಣಿಯ ಭೋಗಗಳ || ೨೫ ||
ಪಡೆದುಭೋಗಿಸಿಜನಕೆತಾತಂಕ| ಪೊಸತೆಕಾಕೋದರದವಿಷವನು|
ಬಿಡದೆಪೋಗಿಸಿಬಳಿಕಮಣಿಯಿಂ ಪ್ರಥಿತತಾನಾಗಿ ||
ಪೊಡವಿಯೊಡೆಯನು ಗಣನು ದೈತ್ಯರ| ಗಡಣವಾಣ್ಮನು ಲೋಕಮೂರನು|
ನಡುಗಿಸುತ್ತುರೆಪಡೆದುಬಯಕನು ಬಗಟನೆನಿಪ || ೨೬ ||

ಇಲ್ಲಿಗೆ ಸ್ಕಾಂದಪುರಾಣಾಂತರ್ಗತಮಾದ ವಿನಾಯಕ ವಿಜಯವೆಂಬ ಚಿಂತಾಮಣ್ಯುಪಾಖ್ಯಾನಮೆಂಬ ನಾಲ್ಕನೆಯ ಪ್ರಕರಣವು ಮುಗಿದುದು.

ಐದನೆಯ ಪ್ರಕರಣವು.

ಸೂ || ದುರುಳದೈತ್ಯನ ಕೊಲ್ವಬೆಯೊಳು,
ಪರಮಕಪಿಲನು ಜಪದಗೆಯ್ಯಲು|
ಕರಿಯಮೊಗವೊಳು ಜನಿಸಿಗಣಗಳು ಸಾರಲಾಲೆಯಲಿ ||

ಗಣನುಮಣಿಯನುಕೊಂಡುಪೋಗಲು| ಗುಣವಿಭೂಷಣ ಕಪಿಲನಿತ್ತಲು|
ಗಣನಮರಣಕೆ ಕಾರಣಂಗಳ ಚಿಂತೆಗೆಂತೆಸಿದ ||
ಫೃಣವಿಹೀನನಕೊಲ್ವ ತೆರನೇ| ನುಣಿಸೆಗೈಯಲೆ ಕೃತ್ಯಫಲವನು|
ಜಣದೊಳೆಂದವನೊರೆಯೆಬಂದನು ಮೂಷಿಮುನಿಯೆ || ೧ ||
ಅದುಸುತೇಜವುರವಿಯಮುನುಡಿದು| ಪದುಮಜಾಮಂಡಲದಸುತ್ತಲು|
ಪದೆದುಪತ್ತುಂದಿನೆಗೆಪಸರಿಸಿತದುನೆ ಜಗರನೊಸಲು ||
ಪದದೆತುಳಿದುದು ಫಣಿಯಲ್ಲಿಂದಿಗೆ| ನದುಳಿಯಿಗ್ಗಿತು ಜಗದಖಂಡವೊ|
ಳದಕೆಸಿಲ್ಕಿತು ಕಪಿಲನು, ಯೋಗಿರಿಯಮುಂದೆ ನರ್ತಿಸಲು || ೨ ||

ತರುಣಿವೇಷವಧರಿಸಿ ತೇಜವು| ಜರಿಸೆಮುಂಗಡೆಯೊಳಗೆ ಕಪಿಲನು|
ಪಿರಿದುಮೆಲ್ಲಿಡೆಯೊಳಗೆ ಕಾಣುವ ಮಾಯೆಗಂಜುತ್ತ ||
ನಿರುಕಿಸಿರ್ದುದಿದೇನು ? ಚಿಂತಿಸೆ| ದೊರಕಿತೇನಿದು ? ಮೆಂದುತನ್ನೊಳೆ|
ಭರದೆಚಿಂತಾಕ್ರಾಂತನಾಗಲು ಮಾಯೆಪೇಳಿದಳು || ೩ ||
ಮುನಿಪಕೇಳೈಪಿಂತೆದೈತ್ಯನು| ನೆನೆದುಜಪವನು ಮಾಡಿಶಿವನಾ|
ದನುವರಂಗಳಪಡೆದು ತರಿದನುಮೂರುಲೋಕವನು ||
ಬೆನಕನಲ್ಲದೆ ಗಣನವಧಿಸಲು| ತನಗೆಸಾಧ್ಯವದಲ್ತು ಮಿಕ್ಕಾ|
ವಿನುತಸುರರಿಗೆ ನಿಜವು ಕೇಳೈಜತಿಯೆ ! ಪೇಳುವೆನು || ೪ ||
ಜಗವನೆಲ್ಲವ ಪಡೆದನವನೇ| ಜಗವನೆಲ್ಲವ ಪೊರೆವನವನೇ|
ಜಗವನೆಲ್ಲವ ಕೊಲ್ವನಾತನು ಪುಸಿಯೆಮಾತಲ್ಲ ||
ಮಿಗಿಲುಬೆನಕನು ಪುಟ್ಟಿಬೇಗನೆ| ಮುಗಿಸಿಕೊಂಬನು ದೈತ್ಯಗಣವನು|
ಜಗದೊಳಾರ್ಗಂಸಾಧ್ಯಮಿಲ್ಲೆನು ತೊರೆದಳಾ ಮಾಯೆ || ೫ ||
ಅದನುಕೇಳ್ದಾಮುನಿಯು ಒನಪಿಯೆ ! | ಮದನುತೂಲಕೊಸೆದು ನೀಂ ಪೇ |
ಳ್ವುದುವಿನಾಯಕನೆಸಗೆ ಜಗದೊಳು ಜನ್ಮವೆತ್ತುವನು ||
ಸದಯೆ ! ಪೇಳೆನೆಮಾಯೆ ನುಡಿದಳು| ಮುದದೆನೇನಿಸೆ ನೀನು ಬೆನಕನ|
ಹೃದಯಪದ್ಮದೆ, ನಿನ್ನ ಮನೆಯೊಳಗವನು ಪುಟ್ಟುವನು || ೬ ||
ಎಂದಮಾಯೆಯ ವಚನಸಾರವ| ನಂದುಸವಿದನು ಮುನಿಯು ನುಡಿನೀ|
ಮಿಂದು ಬೆನಕನುಪುಟ್ಟಿ ಹೇತುವನೆನಗೆ ಬೆಸಗೀಗ ||
ಸಂದಭಕ್ತ್ಯಾದರದೆ ನೇನಿಯ| ನಿಂದುನೂಳ್ಪಿನೆನುತ್ತೆಬೆಸಗೊಸೆ|
ಮಂದಹಾಸದೆ ಮಾಯೆಮಂತ್ರವ ಪೇಳ್ದಳಾಮುನಿಗೆ || ೭ ||
ಮಂತ್ರವಿದು ಬಲುಸಿದ್ಧಿದಾಯಕ| ಮಂತ್ರಕೃತನೇ ! ಜಪಿಸುಮೌನದೆ|
ಮಂತ್ರವರವನು ನೀನು ಮೋಂಕಾರಾದಿಯಂಮನದೆ ||
ಮಂತ್ರವನು ಪದಿನೆಂಟುಲಕ್ಷದೆ| ಮಂತ್ರಿಸೈವಿಧಿಯಿಂ ದಶಾಂಶದ|
ಮಂತ್ರಭಾಗದೆ ಹೋಮಮಾಡಿ ದಶಾಂಶದಿಂತರ್ಪಿಸು || ೮ ||
ಇರಿಸುಪಗಲಿರುಳಿಂದರಲ್ಲಿಯೆ| ನೆರೆಸಮಾಹಿತನಾಗಿ ಕುಂಡಾಂ|
ತರದೊಳೊಗೆವನು ನಾಲ್ಕುಬಾಹುವಿನಿಂದಲಾಬೆನಕ ||
ಧರಿಸಿದಿವ್ಯಾಂಬರವಭೂಷಣ| ವಿರದೆಸಿಂಹಾರೂಢನಾಗುತೆ|
ಮೊಗೆಗಳಿದ್ದಿಸುಬುದ್ಧಿಯಮುದೆನೆ ಪಿಡಿಸುಪಸನ್ನವದನ || ೯ ||

ಪಿಡಿದುಕರದೊಳು ಮೋದಕಂಗಳ| ಬಿಡದೆಕಮಲವ ಪುಷ್ಪಮಾಲೆಯೆ|
ಮುಡಿದುಜನಿಯಿಸಿಬಂದು ನಿನ್ನಿಷ್ಟವನು ಸಲಿಸುವನು ||
ಜಡಿದುಕೊಲ್ಲನು ತಾನುಗಣನನು| ಬಿಡದೆಚಿಂತಾಮಣಿಯ ಬೇಗನೆ|
ಬಿಡಿಸಿಕೊಡುವನೆನುತ್ತೆ ಮಾಯೆಯುಸೇಳೆ ಮೈಗರೆಯೆ || ೧೦ ||
ಮಾಯೆಯೊರೆದುದನೆಲ್ಲವನು ತಾ| ನಾಯದಿಂದಲಿ ಮಾಡಿದನು ಮುನಿ|
ರಾಯನೊಂದೇದಿನದೆ ಹೋಮಜಪಂಗಳೆಲ್ಲವನು ||
ಮಾಯೆಯಾಡಿದರೀತಿಯಿಂದೆ ವಿ| ನಾಯಕಾಖ್ಯನು ಕುಂಡಮಧ್ಯದೊ|
ಳಾಯತಾಕ್ಷನುಜನಿಸಿ ಮೆರೆದನು ಬೀರಿಸಂತಸವ || ೧೧ ||
ನೋಡಿ ಮುನಿಪನು ಬೆನಕನಂದವ| ಬೇಡಿ ಯಾನತನಾಗಿ ವಂದಿಸಿ|
ಜೋಡಿಸುತೆ ಕರಯುಗವ ಜಗದಿದು ಧನ್ಯನಾಮಿತ್ತೆಂದು ||
ಮಾಡಿದೀಜಪಕಾಯ್ದುಫಲವುಂ| ರೂಢಿಯಿಂದಲಿ ಪಾಪವೆಲ್ಲವು|
ಮೋಡಿಪೋದುವು ನಿನ್ನ ಪೂರ್ವಜರೇಸುಸುಕೃತಿಗಳೊ || ೧೨ ||
ಪರಮಗಣಪನೆ ಚಿನ್ಮಯರೂಪನೆ| ನೆರೆಗುಣಾತಿಗ ಮೂರುಲೋಕಕ|
ಮುರುನಿದಾನನೆ, ನೀಡುಭಕ್ತಿಯ ನೆಸಗಿನಿನ್ನಡಿಯ ||
ಕರುಣಿಸೆಂದೆನೆ ತಾಮನಾಲಯ ಕ| ನೊರೆದನೆಲೆ ಕೇಳ್ಬಹಳಜನ್ಮದ|
ವರ ಫಲಂಗಳ ನೊಂದೆಜನ್ಮದೊಳೆತ್ತೆನಾಪುಟ್ಟಿ || ೧೩ ||
ಪುರುಳು ಬೇರುಂಟಾನುಮೊಗೆಯಲು| ಧರೆಯೊಳಾಸ್ಥಾಹಾಸ್ಪಧಾದಿಯ|
ಕರುಮವೆಲ್ಲ ಮುಚ್ಚಂಗೆ ಮೂಜಗದೊಳವಂಗಣನ ||
ಗರುವದುಂದಿ ಸೇನವಿಪ್ರರ| ನಿರದೆ ಹಿಂಸಿಪನದಕೆದೈತ್ಯನೆ|
ತರುದು ಮಣಿಯನು ತಂದುಕೊಡುವೆನು ಭರನೆಕೇಳೆಂದ || ೧೪ ||
ಎನುತ ಕಪಿಲಗೆ ಬೆನಕಬೀಳಿದ| ನೆನುತನಿಶ್ವೇಶ್ವರನ ಕಥೆಯನು|
ತನುಜಗುಹನಿಗೆ ಜಂದ್ರಶೇಖರನಂದು ಪೇಳಿದನು ||
ಘನವಕಪಿಲನ ಪೃತ್ಯವೆಲ್ಲವ| ನನುಸುಪ್ತೀ ಕಥೆಯನೆಲ್ಲವ|
ಮನನಭಕ್ತಿಯೊಳಾಲಿಪರ್ಗಿದುಸಿದ್ಧಿದಾಯಕವು || ೧೫ ||

ಇಂತುಸ್ಕಾಂದಪುರಾಣಾಂತರ್ಗತಮಾದ ವಿನಾಯಕವಿಜಯದೊಳ್ ಚಿಂತಾಮಣ್ಯುಪಾಖ್ಯಾನವೆಂಬ
ಐದನೆಯ ಪ್ರಕರಣವು ಮುಗಿದುದು.

ಆರನೆಯ ಪ್ರಕರಣ.

ಸೂ ॥ ಹರನೆ ! ಬಿನಕನು ದೈತ್ಯಗಣನನು
ಕೆರಳಿಕೊಂಬಾಪರಿಯನೆಲ್ಲವ
ನಿರದೆಬಿತ್ತರಿಸೆಂದ ಗುಹನಿಗೆ ಗಿರಿಶನೊಲುವೆಯಲಿ ॥

ಇರಲು ಕೋಣಪನೊತ್ಮೆಸಾಧಸ್ಸ| ಕರದ ಸಿಬಿಣವ ಕಂಡನೆಲ್ಲಕೆ|
ಪಿರಿದು ಭಯವನು ತನ್ನನಾಶಕೆ ಹೇತುವಾದುದನು ॥
ಭರದೊಳೆಲ್ಲರನೆದ್ದು ಕರೆಯಿಸೆ| ತರಳರಿರ್ವರು ಪಿತನು ಮಂತ್ರಿಗ|
ಳಿರನೆ ಭಟರೈತಂದರಿರುಳೊಳ್ಗಣನಿಕೇತನಕೆ ॥ ೧ ॥
ಪಿರಿದು ಚಿಂತಾಭರದಿನನನಿರೆ| ಶಿರವಬಾಗಿಸಿ ಮೌನದಿಂದಲಿ|
ನಿಲುಕಿಸುತ್ತಂ ನುಡಿದನೋಲಗದಲ್ಲಿ ಗುಣವಂತ ॥
ದೊರೆಯೆ ನಿನ್ನಯ ಮೊಗಕೆಕುಂದನು| ದೊರೆಕಿಪೀವ್ಯಥೆಯೇತಕಿರುಳೊಳು
ಕರೆದುದೇತಕೆ? ನಮ್ಮನೆಲ್ಲರ ನಿಂದು ಪೇಳೆಂದ ॥ ೨ ॥
ಬಳಿಕ ಸುತನನು ಕಂಡುತಂದೆಯು| ಬಳವಳಂಗೊಂಡೊಡನೆ ಮೊಗವಿದು|
ಕಳೆಯನುಳಿದಿಹುದೇಕೆ? ಚಿಂತೆಯದೇಕೆ? ನುಡಿಸುತನೆ ॥
ಘಳಿಲನೆಂಬಾ ಮಾತನಾಲಿಸಿ| ಬಳವಗುಂದುತರಾಯನೊಬ್ಬನೆ|
ಗಳಿತಶುಭದಾ ಸ್ವಪ್ನದಂದನನುಡಿದನೋಲಗದಿ ॥ ೩ ॥
ದಳವನೊಡಗೊಂಡೊರ್ವಚೌಭುಜ| ಗಳಲಿಮೆರೆಯುತ ರದೆಸರಶುವ|
ಜಳಜವೆರಡನು ಪಿಡಿದು ಮೌನಿನಸನೇತಮೆಯ್ತಂದು ॥
ದಳವನೆಲ್ಲವತಿಂದು ಮೌನಿಯ| ಬಳದಜೋದನನಿಂಬುದ ಪೆಸೆದನು|
ಬಳಿಕಮೆನ್ನಯಶಿರವು ಶರದಿಂದೆರಡುಪೋಳಾಯ್ತು ॥ ೪ ॥
ಕನಸನೀಪರಿಕಂಡು ಕರೆದೆನು| ಘನದನಿಶೆಯೊಳ್ನಿಮಗೆ ಪೇಳ|
ಲ್ಕೆನಲು ಕೇಳ್ದಂ ಪ್ರಮಥನೊರೆದನು ಬೇಗ್ಗೃಪತಿಯೊಳು ॥
ಜನಪದೇವಾಸುರನತೋರಗ| ಜನವ ಶ್ಚಿಹೆ ಭಯಪದೇತಕೆ|
ನಿನಗೆ, ಪೇಳ್ವುದೆಯುಕ್ತ ಪೇಳೆದನರಸಗಾಪ್ರಮಥ ॥ ೫ ॥
ಪ್ರಮಥನಾಡಿದನುತಿಯನಾಲಿಸಿ| ಸುಮತಿಯಾಗ್ರಂಥಾಖ್ಯಸಭೆಯೊಳ|
ಗಮಮಕರ್ವವು ಸೂಕ್ಷ್ಮವಿದ್ಯೋಪೆಯಶುಶ್ರುತಿಶ್ರುತಿದೊಳಗೆ ॥

ನನುದಫಲವನುತೋರ್ಪುದೊಂದೆ ಜ| ನುಮದೊಳೆಲ್ಲಿಯೆ ಬೇಗಮೆಂದೆನು|
ತವಲವಕಾನಿಗಳೊರೆವುಳಿಯೊಳ್ಕೀಳುಪುಸಿಯಲ್ಲ ॥ ೬ ॥
ಅದುವೆಕಾರಣಮೇಕೆತಂದ್ಯೆ| ಯದುವೆಮಣಿಯನು ಕಮಲನತ್ತಣ|
ನದರಸೋಂಕಿನಫಲವು ತಪ್ಪುದದೆಂದು ಜಿನ್ನೈಸೆ ॥
ಮುದನೆವಿಶ್ವಜಿತೆಂಬನೊರೆದನು| ಮೊದಲು ಕಾರ್ಯಾಕಾರ್ಯದರಿವಿ|
ಲ್ಲದುನಾಳ್ದನಕೃತ್ಯದರಿವಿಲ್ಲದನೆ! ಕೇಳೆಂದ ॥ ೭ ॥
ಪದೆದುನೋಡಂಪ್ಪಾಪಕರ್ಷನ| ನದನುಮತರರಮರ್ಮನೇಗಳ್|
ಗದಿಪನೀತನಪೇಡಿಜನುನುವು ನಿಷ್ಪ್ರಯೋಜನವು ॥
ಬುಧನುಮಾದೊಡಮೇನೊ ? ರಾಯನೆ! ಸದಯನಾಗಿಹೆನೀನು ಬಲಿಯುಮಿ|
ರವೆಸಮರ್ಥನು ನಿಸ್ಸಪತ್ನನು ವಿಜಿತಸುರಪತಿಯು ॥ ೮ ॥
ಅರಸನಿನಗಾರಿಂದಿಭಯಮಾ| ನರನತಿಕ್ಷಿಸೆ ನೀನು ಯೋಚಿಪು|
ದಿರದೆಚಿಂತೆಯ ಬಲ್ಲೆನಮ್ರಿಯ ತೊರೆದುಯತ್ನಿಪುದು ॥
ಕೊರಗದೇಜನೆವಿಶ್ವಜಿತುವೇ| ಳ್ದರಲುವಾಪಿನಿಯೆಲ್ಲವಾಗಳೆ|
ನೆರೆದುನಡೆಯಲಿ ಮುನಿಯದಂದಿಸೆಯೆಂದು ಗಣನುಡಿದ ॥ ೯ ॥
ಸುತನಮಾತಿಗೆತಂದೆಕೋಪಿ| ಮತಿವಿಹೀನನೆ! ದೇವಭೂಸುರ|
ತತಿಗವಜ್ಞೆಯಗೈಸಮನ.ಜಾ ಮರಣವೆಯ್ದುವನು ॥
ಕೃತಕಮಲ್ಲದುಸಿವಿಣಮಣಂಗನೆ! ಕೃತಪುದೊಕೃತು ಶುಭವಮಾಳ್ಪುದ|
ಕೃತವನಿಷ್ಪಪಸೀಗುಮುಳ್ಳಿಗೆ ನೀನು ತೆಗಳಿರು ॥ ೧೦ ॥
ವಿರಿದುಬಲವನುಕೊಂಬ್ಬ ಕಳುಪಿಸು| ಪರಹ ಭೂಪತಿಗಳನು ಒಳಿಕಂ|
ವಿರಿದುಬಲಡಾಂತೆಪೋಪ್ರದು ನಿನಗೆಲೇನಲ್ಲೆ ॥
ಗುರುವಜಸವಾಲಿಸುತೆ ಚೈತ್ರನು| ಭರನೆನಮ್ಮಯನುಡಿವೆ.ನಡೆಯಿಪೆ|
ನೆರೆಮೀರವನುಳಿವೆನಾನೆಂದೊರೆದು ಗಣನಡೆದ ॥ ೧೧ ॥
ಇಂತುಪೇಳ್ದಾಗಣನುಸೈನ್ಯದ| ಮಂತೆನಡೆದನು ಕಮಲನಾಶ್ರಮ|
ದಂತಿಕವಸಾರ್ದವನು ಮುನಿಯನು ಕೂಲಲುನಿಶ್ಚಯಿಸಿ ॥
ನಿಂತು ಜೊಮ್ಮಮುಪೂರ್ತದೊಳಗವ| ಸಂತೆ ಶಿಷ್ಯರನೆಸೆವಬನವನು|
ಚಿಂತೆಯೊಂದಿಯೆ ಕವಿಯೆಜೊಬ್ಬಿಲವಾರ್ದುಪೆರ್ಕಳದೆ ॥ ೧೨ ॥
ಅದನು ಕೇಳುತೆ ಶಿಷ್ಯರಾಗಳೆ| ಬೆದರಿನಿರುಕಿಸಿ ಸೇನೆಯೊಡಗೊಂ|
ಡಿದುನೆದೈತ್ಯನು ಬಂದನೆಂದವರೊರೆಯೆ ಕಿತ್ತೊಡಿಗೆ ॥

ಬುಧನೆ! ಕೇಳೈಪದೆದುಪಚೆಯನು| ಮದವಿಯುಕ್ತನು ಗಣಸುಬಂದಪ|
ನಿದನು ಪರಿಕಿಸು? ದುರುಳಸಂಗತಿಸೊಗಮನೋಡಿಪುದು || ೧೩ ||

ನಾವು ಪುಂಜನುತಿಗಳುಪಾಯವ| ನಾವರೀತಿಯೊಳೊರೆಯುಲಾರೆವ|
ದಾವುದರ್ಹವೊ? ಗೈವುದಾಪರಿಯೆಂದು ಬೆಸಸಿದರು ||

ನೋಪನಾಂತಾಗಣನು ಸಿನಿಣದೊ| ಳಾವಪರಿಯಿಂದಬ್ಬಿಸಿರ್ದನೊ|
ದೇವಪಳ್ಳೀಶ್ವರನ ನರ್ಚಪಮುನಿಯ ನೋಡಿದನು || ೧೪ ||

ಮಗನೆ ಕೇಳೈ ಮುನಿಯು ದೈತ್ಯನ| ಮಿಗಿಲುದಳನನು ಕಂಡುಮನದೊಳು|
ಸುಗಿದುಕಂಪಿಸಿಬೇಗ ಪೂಜೆಯ ಮುಗಿಸಿ ಬೆಸಕಸೊಳು ||

ಜಗದೊಡೆಯ ಪರಮಣಿಯ ಕಳ್ದನ| ಜಗನಿಷೇಡಕನಾದ್ವಿಚಾರಿಯ|
ಬಗೆದುಸಂಹರಿಸುತ್ತೆ ವಿಶ್ವಂಭರೆಯಸಲಹುವುದು || ೧೫ ||

ದುಷ್ಟರನು ಸಂಹರಿಸಲಪತರಿ| ಸಿಷ್ಟನನು ಪಾಲಿಪೆಯೆನುತೊರೆಯ|
ಲಿಷ್ಟದಾತನು ಗಣಪನಾಲಿಸಿರೌದ್ರಮುಖನಾಗಿ ||

ಸೃಷ್ಟಿಯನು ನುಂಗುವ ವೊಲವನವ| ಶಿಷ್ಟಮಾಗದತೆರದೆ,ಭಕ್ತಾ|
ಭೀಷ್ಟಮೊಡಿಸೆ ರಣವಗೆಯ್ಯಲು ಗಣಪಚಿಂತಿಸಿದ || ೧೬ ||

ಬೆರೆದುಸಿದ್ಧಿ ಸುಬುದ್ಧಿಯರ್ಕಳಿ| ನುರದೆಸಿಂಗವನೇರಿಗಣಪನು|
ತೆರಳೆಕಾಳಗಕಾಗಸಿದ್ಧಿಯು ನಮಿಸಿಪೇಳಿದಳು ||

ಎರೆಯ! ನಾಂಗಣನೊಡನೆ ಸೆಣಸುನೆ| ನಿರದೆನಿನ್ನಯದಯದೆ ವಿಜಯವು|
ಪಿರಿದುಸವನಿಪುದೆಂದು ನುಡಿಯಲುಕೇಳ್ದುಗಣಪತಿಯು || ೧೭ ||

ಮನದೆಮೆಚ್ಚಿದನವನು ಸಿದ್ಧಿಯ| ಘನಸುಭಾಷಿತಕಾಗಶಕ್ತಿಗ|
ಳನುವಿನಿಂದಲಿ ವಿವಿಧಮಾಗಿಯೆ ಸಿದ್ಧಿಧರಿಸುತ್ತೆ ||

ತೊನೆದುಶರವನು ಕ್ರೂರವದನದೆ| ಮೊನೆಗೆನಿಂದಳ ನೋಡಿಗಣಪನು|
ಮನದೆಹರ್ಷಿಸಿ ಧುರಕೆನಿಲ್ಲೆನೆಸಿದ್ಧಿನಿಲಲಾಗ || ೧೮ ||

ರಾಯಗುವರರು ಕಂಜಜನಕನೆ| ಮಾಯೆಗೆಯ್ವಿವಳನ್ನು ಕೊಲ್ವೆವ|
ನಾಯಸದೊಳೆಂದೆನಲು ಕೇಳ್ದನು ವಿವಿಧಸೈನ್ಯವನು ||

ದಾಯದಿಂಪುಟ್ಟಿಸಿಯೆದಾನವ| ರಾಯಸೈಮೊಗಮೂರುಕಣ್ಣಿಗ|
ವಾಯುವೇಗರ ಪಂಚಪಸ್ತರ ಷಣ್ಮುಖಾದಿಗಳ || ೧೯ ||

ಚತುರಮುಖರೈ ಮೊಗರಮೂಗಾ|ಲ ತರತರದ ದ್ವಾದಶಾಸ್ಯರ|
ವಿತತಮುದ್ಗರಖಡ್ಗಮುಸಲಾಸಿ ಮೊದಲಾದುವನು ||

ನುತಸುತೀಕ್ಷ್ಣಸಿಯನು ಬಾಣವಿ| ತತಿಯಕಾಲತರುಗಳ ಪಿಡಿದಾ|
ಜತುರವಿಕ್ರಮಭಟರ ನಿರ್ಮಿಸಿಯವರೊಳಿಂತೆಂದ || ೨೦ ||

ಧುರದೆ ನಿಮ್ಮಯ ಬಲವ ಪೌರುಷ| ದುರುಬನೀಕ್ಷಿಪೆ ನಿಂದುಕಂಡೂ|
ತಿರಣದೊಳ್ನಿಮಗಡಗಲಿಲ್ಲ ನೆನುತ್ತೆ ನುಡಿಯಲೋಡೆ ||

ಮೊರೆದು ತೊಡೆಗಳ ಬಡಿದು ವೈರಿಯ| ನಿರಿದು ಭೂಮಿಗುರುಳ್ದಿವೀರಭ
ಟರಿದೊಸಿದ್ಧಿಯನು ಮತಿಯೊಂದಿಯೆ ಬಲವ ಮುತ್ತಿದರು || ೨೧ ||

ಕೆಲರು ತಾಂತಾಂ ದ್ವಂದ್ವಯುದ್ಧದೆ| ಕೆಲರು ಮುಷ್ಟಿವಿಘಾತದಿಂದಲೆ|
ನೆಲದೆ ಕಾಯ್ದರು ಬಳಿಕ ಗುಣವಂತಾಖ್ಯನ್ಕೆಕರದೆ ||

ಕೆಲದೆವಿಶ್ವಜಿತಂ ಜತುಷ್ಪದ| ದಲಿಯೆ ತಾಂಗ್ರಂಥಪ್ರಮಥರಂ|
ಸಲೆಯುಮೂಗಣ್ಣಾಗಿ ಯಾರಡಿಯಾಗಿ ಕಾದಿದರು || ೨೨ ||

ವದನ ಪನ್ನೆರಡಾಗೆ ಶೂಲಿಯು| ಮೊದಲು ದಳದೊಳು ನಿಂದು ಶಸ್ತ್ರದೆ|
ಸದೆಯೆ ವೈರಿಗಳೊಡನೆ ಯೊರ್ವರನೊರ್ವರೀಕ್ರಮದೆ ||

ಅಧಟಿನಿಂದಲಿ ಜಯದ ಭಂಗವ| ನಸೊಪದಾತಿಗಳೊಂದಲಿಲ್ಲವು|
ಕುದುರೆಯೊಂಟೆಯ ಕರಿಯಪತ್ತಿಯನೆಲ್ಲ ಮಡುಹಿದರು || ೨೩ ||

ಹರಿದುವಾಗಳೆರಕ್ತನದಿಗಳು| ಧುರದ ನೆಲದಿಂ ನಾಲ್ಕುಕಡೆಯೊಳು|
ಕೆರಿದು ಸಿದ್ಧಿಯ ಸಂಘಕಪಜಯಮಾಗೆರಣದೊಳಗೆ ||

ಕರೆದು ಲಕ್ಷ್ಮಾಹ್ವಯದ ಸುತನನು| ಭರದೊಳೀತನು ಮೊಂದುಶರದಿಂ|
ದಿರಿವನ್ಬೆಲಕ್ಷ್ಮವನು ಕೇಳೆಂಬನಿತೊಳುಬಂದ || ೨೪ ||

ಬರುತ ಬೇಗನೆ ಗಣನ ಬಲವನು| ಭರದೆ ಬಳಸಿದ ನಸುರನಿರ್ವರು|
ತರಳರಾಗಳೆ ಸೆಣಸೆಲಕ್ಷ್ಮನಕೂಡೆ ತೊಡಗಿದರು ||

ಬರಿಸಗಾಲದ ಮೋಡದಂದದೆ| ಶರದ ವರ್ಷವ ಕರೆಯೆಗಗನದ|
ವರೆಗೆ ಶರಗಳ ರಾಶಿಬೀಳಲು ಕವಿದುದೈತಮವು || ೨೫ ||

ನಿರುಕಿಸುತ್ತಂ ಚಿರದೆಲಕ್ಷ್ಮನು| ಶರಗಳೆಲ್ಲವ ಕಡಿದು ವೈರಿಯ|
ಶರವನಿರ್ಕಡಿಮಾಡಿ ಭೂಮಿಯಮೇಲೆ ಕೆಡವಿದನು ||

ನರಪಸೇನೆಯನೆಲ್ಲ ತಾಂಸಂ| ಹರಿಸಿಲಕ್ಷ್ಮನು ಗಣನಸುತರಿ|

ಬ್ಬರನು ಬೆನಕನ ಸನಿಯಕ್ಕೈದಿಸಿ ಜಯವಬೆಸಗೊಂಡ || ೨೬ ||
ಮಡಿದರೆಲ್ಲರು ಗಣನ ಸೈನಿಕ| ರಿಡಿದುಬಂದೆನು ತಂದೆ! ರಣದೊಳು
ಪಿಡಿದುಮಿವರನು, ಗಣನು ಮೊರ್ವನುನಿಂತನಿಂದಿನೊಳು ||
ಬಿಡದೆ ನೀನೇ ಕೊಂದು ಗಣನನು| ಮೊಡರಿಸಮೃತವ ನವಗಮಿಳೆಯೊಳ|
ಗೊಡೆಯದೈತ್ಯನ ಸುತರಿಗವನಿಯ ನೀಡುನೀನೆಂದ || ೨೭ ||

ಇಂತು ಸ್ಕಾಂದಪುರಾಣಾಂತರ್ಗತಮಾದ ವಿನಾಯಕವಿಜಯದೊಳ್ ಚಿಂತಾಮಣ್ಯುಪಾಖ್ಯಾನವೆಂಬ ಆರನೆಯ ಪ್ರಕರಣವು ಮುಗಿದುದು.

ಏಳನೆಯ ಪ್ರಕರಣವು.

ಸೂ || ದುರುಳ ಗಣನನು ಕೊಂದು ಗಣಪನು
ಪರಮಚಿಂತಾಮಣಿಯ ಪೆಸರನು|
ತಿರೆಯೊಳೊಂದಿಯೆ ಮುನಿಯ ಕಪಿಲನಕಾಯ್ದು ನೇನೆಂಬೆ||

ತನುಜ ಕೇಳ್ಕೈ ಸಿದ್ಧಿಪುತ್ರನು| ವಿನುತಲಕ್ಷ್ಮನು ಜಯಿಸಿ ಬಲವನು|
ಜನಪಸೂನುಗಳೆಂದು ಕುವರರ ತಿಳಿದು ಸಲಹಿದನು ||
ಮನದೊಳಂಜಿಕೆಯಾಂತರುಳಿದರು| ಕೊನೆಗೆ ತಾಂಗ್ರಂಥನರಗುವರ|
ಬೆನಕನಲ್ಲಿಗೆ ಲಕ್ಷ್ಮನುಯ್ದನೆನುತ್ತೆ ತಾತಿಳಿದ || ೧ ||

ಶೂಲಪಾಣಿಯು ಸುಲಭರಿಬ್ಬರು| ಕಾಲಬಲದಿಂ ಯುದ್ಧಮಾಡಲು|
ಕೋಲನೆಲ್ಲಂ ಪಿಡಿದು ಪೋದರ್ಗೇನು ಗತಿಯಾಯ್ತೊ ||
ಮೇಲುಗಾಣೆ ವಿಚಾರಿಸವನೀ| ಪಾಲಯೆನುತುಂನುಡಿಯುತಿರಲಾ|
ವೇಳೆಗೊರ್ವನು ಭರದೆ ಬಂದಾ ಗಣಗೆ ಪೇಳಿದನು || ೨ ||

ಅರಸ ಕೇಳ್ಕೈ ನಿನ್ನ ಮಕ್ಕಳು| ಧುರದೆ ಕಾಯ್ದರು ಪಿರಿದು ದಳವನು|
ತಿರೆಗೆಮಲಗಿಸೆ ಘೋರರೂಪನು ಬಂದುದಳವಿಡಿದು ||
ಪುರುಷಪರಿಗಳ ಪಿಡಿದು ನಿಜಬಲ| ಪರಿಸರಕ್ಕವಸೊಯ್ದನಲ್ಲಿಂ|
ಭರಮೊಳೇಗೆಯ್ದುಪರೊ ? ಕಾಣೆನು ದೇವಕೇಳೆಂದ || ೩ ||

ಎಂದು ನುಡಿದನ ಮಾತನಾಲಿಸು| ತಂದು ರಾಯನು ಬಳಲಿಸೊಂದನು|
ಮಿಂದು ಕಣ್ಣೀರೊಳಗೆ ಸುಲಭನೆ ! ಶೂಲಪಾಣಿಗಳೆ ||

ಇಂದು ನೀ ವೇನಾಗಿ ಪೋದಿರಿ| ವೃಂದವೆಲ್ಲವು ಸೋತವಿವುನಿ|
ಮ್ಮಿಂದೆರಣದೊಳ್ನೀವದೆಂತುಟು ಸಂದಿರೆಂದೊರೆದ || ೪ ||

ಮಿಡಿದು ಕಣ್ಣೀರ್ಗಳನು ಗಣನುಂ| ಪೊಡವಿಯಲ್ಲಿರಲಾರೆನಾಂಕೇ|
ಡಡಿಸಿತಿಂತು ಕುಲಕ್ಕೆ ವೀರರು ಮರಣವೈದಿದರು ||

ಉಡುಗಿಪೋಗುವೆವೆನ್ನ ಹರಣ| ಗಳಡಿಗಡಿಗೆ ನಾವೇಗನೆಂದೆನೆ|
ನುಡಿದರಾತಂಗಂದು ಸಚಿವರು ಶಾಂತವಚನವನು || ೫ ||

ತಿರೆಯೊಳಾರೈ ಮರಣವೆಯ್ದದ| ರಿರುವರಧಟಿಂಶತ್ಸುವೀರರ|
ತರಿದು ಮಡಿದಿರಲದಕೆ ಬೀರರುವ್ಯಥೆಯಮಾಣುವರು ||

ಅರಸನೀಂನಾನಿಂದು ಹಗೆಗಳ| ಧುರದೊಳಿದಿರಿಸಿ ಜೀವಿಸಿರ್ದೊಡೆ|
ತರಳರಿರ್ವರ ಬಿಡಿಸಿ ಬರ್ಪೆವೆನುತ್ತ್ತೆ ಬೆಸಸಿದರು || ೬ ||

ಅರಿಪೆ, ಕೇಳ್ದುಂ ಗಣನು ಬಳಿಕಾ| ನಿರದೆ ಭಕ್ಷಿಪೆನೆಲ್ಲ ಮುನಿಗಳ|
ಧರೆಯೊಳೀಗಳೆನುತ್ತೆ ಸೈನ್ಯಕೆ ಪೇಳ್ದು ರಥದೊಡನೆ ||

ತೆರಳೆ ಪಿಂತನೆ ನಾಲ್ಕು ದಳವುಂ| ಬರಲು ಜಣದೊಳ್ಬೆನಕನಲ್ಲಿಗೆ|
ಧರಿಸಿ ಬಂದನು ಪರಶುಕಮಲವ ಕರದೆಮೋದಕವು || ೭ ||

ಕರಚತುಷ್ಟಯದಲ್ಲಿ ಧರಿಸು| ತ್ತಿರದೆ ಸಿದ್ಧಿಸುಬುದ್ಧಿಯೆಂಬರು|
ಮೆರಡುಪಕ್ಕದೊಳಿರಲು ಸಿಂಗವನೇರಿ ಮಕುಟದೊಳು ||

ಮೆರೆವ ತೇಜೋನಿಧಿಯ ವಿಘ್ನೇ| ಶ್ವರನ ಮುನಿಯುಂಸ್ತುತಿಸುತಿರೆತಾ|
ಮಿರದೆ ಕಂಡರು ಗಣನ ಸೇನಾಚರರು ಬೆರಗಾಗಿ || ೮ ||

ಪರಿಕಿಸಿಲ್ಲಂ ನಾವು ಮಿಂದಿನ| ವರೆಗೆ ಪೇಳೆನೆ ಗಣನ ಸೈನ್ಯವು|
ಕೆರಳಿ ದೈತ್ಯನು ಗಣನು ಕಪಿಲನಕೂಡೆ ಬೆಸಸಿದನು ||

ವರಮುನೀಶ್ವರ ಪೇಳು ಬೇಗನೆ| ಪುರುಷನಾವನು ನಿನ್ನ ಸನಿಯದೊ|
ಳಿರುವ ನಿಲ್ಲದೊಡವನಜತೆಯಲಿ ನಿನ್ನ ಕೊಲ್ಲುವೆನು || ೯ ||

ಅರುಮಂದಿಯ ಹಗೆಗಳೊಡನೆಯೆ| ಹಾರಿಯಾಡುವೆ ಹೀನಕರುಣನೆ|
ಯಾರು ಪೇಳ್ಕೆಯಿವನು ? ಲೋಕದ ಜನಕೆ ಕೇಡುಗಳ ||

ಬಾರಿಬಾರಿಗು ಮಾಳ್ಪನಿವನಿಂ| ದಾರಿಯಾಯಿತ್ತಾ ಜಗಳಕಂ|
ಬೀರನೊಡನೆಯೆ ನಿನ್ನ ಕೊಲ್ಲದೆಬಿಡೆನು ದಿಟವೆಂದ || ೧೦ ||

ಎನಲು ಗಣನಾನುಡಿಯಲಾಲಿಸಿ| ಮುನಿಯುಕೋಪದೆ ನುಡಿದನಸುರಗೆ|
ದನುಜ ಪಾಪಗಳೊಡ್ಡಿನುತ್ತಭಿಜಿತನುಗಣನೆಂದು ||
ನಿನಗೆ ಪೆಸರಿಸೆ ನೀನುಗರ್ವದೊ| ಳೆನಿತೊ ಮುನಿಗಳ ಸಾಧುಪುರುಷರ|
ನೆನಿತೊಶಕ್ರಾದ್ಯಮರ ನಿಕರವ ಹಿಂಸೆ ಗೆಯ್ದಿರ್ಪ್ಪ || ೧೧ ||

ಪರಮಶಿವನು ವಿನಾಯಕಾಕೃತಿ| ಧರಿಸಿತಿರೆಯೊಳು ಪುಟ್ಟಿನಿನ್ನ ಯ|
ಶಿರವಖಂಡಿಪನೆಂದು ಮೌನಿಯುನುಡಿಯೆತಾಕೇಳಿ ||
ಕೆರಳಿಗಣತಾಂಕಡಿದು ಪಲ್ಗಳ| ಶರವ ಪಿಡಿದುಂ ಗಣಪಗೆಚ್ಚೊಡೆ|
ಶರವು ಗಣಪನತಲೆಯ ಕೈಕಾಲ್ಗಳನು ಭೇದಿಸಿತು || ೧೨ ||

ಶರದಸೆಟ್ಟಿಗೆ ಬೆನಕ ಮೂರ್ಛಿಸಿ| ಕೆರಳುತೆದ್ದನು ಬಳಿಕಗಣನನು|
ಪರಶುವಿಂಸದೆಬಡಿಯೆರವಿಯನೊಲಿರ್ದ ಪರಶುವದು ||
ಹರಡಿ ದೆಸೆದೆಸೆಯಲ್ಲಿ ಕೀಲಿಯು| ನಿರದೆಮುಸಗಿತು ಪರಶುವಸುರನ|
ಶಿರವಕಡಿದುದು ತಿರೆಯುಕಂಪಿಸಿದತ್ತುಕಡಲೊಡನೆ || ೧೩ ||

ಗಣನು ಬೀಳಲು ನೆಲಕೆದೈತ್ಯರ| ಗಣವು ರೋದಿಸಲಾಗಪಿತನಸು|
ಗಣವತೊರೆದಾ ಸುತನ ಕಂತೊಡನೆಲೆಲೆ ತನುಜಾತ ||
ಗಣನೆ ಮುದಪನನೆಂತು ನೀಬಿ| ಟ್ಟಣುಗ ಮಣಿಗೋಸುಗವದೆಂತುಹ|
ರಣವದೊರೆದೆಯ ದೆತ್ತಪೋದೆಯೋ? ತಡೆಯೆ, ಸಿಟ್ಟಾದೆ || ೧೪ ||

ನಿನ್ನ ತೇಜೋ ಬಲಮದೇನಾ| ಯ್ತಿನ್ನು ಮೂಲೋಕವನು ಗೆಲಿದಾ|
ನಿನ್ನನೇ ಕೊಂದರೆಲೆ ಶಿವವರವೆತ್ತ ಪೋದತ್ತು ||
ನಿನ್ನ ದುಷ್ಕೃತ ಕರ್ಮನುದುವುಂ| ಬೆನ್ನಸಾರ್ದತ್ತಿಂದುವರೆಗಂ|
ಬಿನ್ನ ಮರಿಯರ್ಪಿರಿಯರಿದಿರೊಳೆ ಕಿರಿಯ ರಳೆಯೊಳಗೆ || ೧೫ ||

ಮಗನೆ ಕೇಳೈಮಡಿದ ಪುತ್ರನ| ಸುಗುಣಕೆಲ್ಲರು ಮರುಗೆಯಭಿಜಿತು|
ಬಗೆದು ಮಂತ್ರಿಗ್ರಂಥ ನೊರೆದು ಮಡಿದ ತನುಜನಿಗೆ ||
ಮಿಗಿಲು ಕರ್ಮವಗಣಗೆ ಮಾಡಿಸು| ಜಗದೊಳತ್ತೀಂ ಫಲವನಾಂಪರು|
ದುಗುಡವೇತಕ್ಕೇಳು ರಾಯನೆ ಜಡತೆಯಿಂದೇನು || ೧೬ ||

ಬಳಿಕ ಗಣನಿಗೆ ಮಾಡಿಕರ್ಮವ| ನುಳಿದರೊಡನಭಿಜಿತ್ತು ಬೇಗನೆ|
ಮಿಳಿತನಾಗಿಯೆ ಪೌತ್ರರಂ ಕರೆಯಲ್ಕೆ ರತ್ನನನು ||
ತಳೆದು ಕರದೊಳು ಮಂತ್ರಿವೆರಸುತೆ| ಘಳಿಲನೊಳ್ಪಿನದಲ್ಲಿ ನಡೆದನು|

ತಿಳಿದು ಕಪಿಲವಿನಾಯಕರ್ಕಳ ನೊಲಿಸೆ ಯಿಲೆವನೆಗೆ || ೧೭ ||

ವರಗಜಾಸ್ಯನ ಮುನಿಯ ಕಂಡವ| ರೆರಗಿ ಬಳಿಕ ಭಿಜಿತು ವಿನಾಯಕ ! |
ತಿರೆಯೊಳಿರ್ಪುವಿವೆಲ್ಲ ನಿನ್ನಂಶಗಳೆ ನಿನ್ನನಿವು ||

ಅರಿಯದಿರ್ಪುವು ನಿನಗ ವಜ್ಞೆಯ| ಚರಿಪರೆಗ್ಗರು ಮೊದಲ ಸ್ಟೆಪಿಂ |
ದೊರೆತು ದೀನರ ಜನ್ಮವೆಂಬುದ ನರಿಯರಾ ಖಳರು || ೧೮ ||

ಉನ್ನತಸ್ಥಳ ಮೊಂದಿ ಜನಗಳು| ಮುನ್ನ ಧಃಪತನವನು ಸಾರ್ವರು|
ನಿನ್ನ ಬಾಣಕೆ ಹರಣವಿತ್ತರು ಪರವ ನೊಂದುವರು ||

ನಿನ್ನ ಚರಣಕೆ ಶರಣನಾದೆನು| ನನ್ನಿಯೊಳು ಕೈಪೆಗೆಯ್ವು ದೀಗಳೆ|
ನಿನ್ನ ಕಂಡೆನು ಕಣ್ಗಳಿಂದಲಿ ಯೋಗಿವೃದ್ಧ್ಯೇಯ || ೧೯ ||

ಪರಮ ಬೊಮ್ಮನ ನಿಂದು ನಿರುಕಿಸಿ| ಹರುಷ ಗಡಲೊಳು ಮುಳುಗಿಹೋದೆನು|
ವರಗಣೇಶನೆ ನೀನು ಸದ್ಗತಿ ನೀಡೆ ಕರುಗೊಂಡೆ ||

ದರುಶನಂಗಳು ನಮ್ಮ ಪಾಪವ| ನೊರಸಿ ಕಳೆಯಲಿ ಮಣಿಯನೀಪತಿ|
ಕರಸಿ ವರ್ಚಿಸು ಶೂಲಪಾಣಿಯ ಸುಲಭನಾಮಕರ || ೨೦ ||

ಇರಿಸು ಸುತರನು ಗಣನರಾಜ್ಯದೊ| ಳಿರಲಿತಾಂಗ್ರಂಥಾಖ್ಯ ಸಚಿವನು |
ಮಿರಲಿ ನಿನ್ನಾಲೋಕ ಮಾತ್ರದೆ ಪಡೆಯಲೈಸಿರಿಯ ||

ಕರುಣಿಸೆನಗಂ ಜ್ಞಾನಮಾರ್ಗವ| ಹರಿಸು ದೇಹದಸೆರೆಯ ನಾರ್ಮಗೆ|
ಭರದೊಳೆನುತಂ ಮಣಿಯ ಮುಂದಿಟ್ಟವನು ಬೆಸಗೊಂಡ || ೨೧ ||

ಎಲರುಣಿವ ಸಿರನದನು| ಕೇಳುತ ನಲೆದು ಬಿಟ್ಟನು ಗಣನ ಸುತರನು|
ಕೆಲದೆ ಚಿಂತಾಮಣಿಯ ನಿತ್ತನು ತೆಗೆದು ಕಪಿಲನಿಗೆ ||

ಬಲಗೊಳುತ್ತಿಲಿ ದೇವಗಾತಕ| ಪಿಲನು ಹರ್ಷವನಾಂತು ಬೆನಕನೆ|
ಗೆಲಿದು ದೈತ್ಯನ ಮಣಿಯ ನಿತ್ತಸೆಯಾದ ಕತದಿಂದ || ೨೨ ||

ನಿನಗೆ ಚಿಂತಾ ಮಣಿಯನಾಮವು| ಜನದೊಳಾಗಲಿ ದೇವದೇವನೆ|
ಘನಮಣಿಯನೀಂ ಕೊಂಡು ಧರಿಪುದಿದೆಂದು ಬಿನ್ನೈಸೆ ||

ಮುನಿಯು ಮಭಿಜಿತು ಮಿರ್ವರೊರೆಯಲು| ತನತುಕಂತವೆ ಧರಿಸಿ ಧರೆಯೊಳು|
ವಿನುತ ಚಿಂತಾಮಣಿಯ ನಾಮದೆ ಮೆರೆದನಾಬೆನಕ || ೨೩ ||

ಮುನಿಯ ಮನೆಯೊಳು ಜನಿಸೆವಿಘ್ನೇ| ಶನಿಗೆ ಸಂದುದು ಕಪಿಲನಾಮವು|
ತನಗೆ ಪೂಮಳಿಗರೆದು ವಿಬುಧರು ಸುಮುಖನೆಂದೊರೆಯೆ ||

ಕೊನೆಗೆ ವಿಘ್ನೇಶ್ವರನು ಮೆಂದೇ| ಘನಸುನಾಮವ ಸಾರಿನಡೆದನು|
ಬೆನಕ,ನಗರಕೆ ರಾಜಸಚಿವರು ಸುತರು ತೆರಳಿದರು ॥ ೨೪ ॥

ಕಂದಕೇಳೈ ನಿನಗೆ ಗಣಸ| ತ್ತಂದವನು ಚಿಂತಾಮಣಿಯೆನುತೆ|
ಸಂದಬೆನಕಂ ಪ್ರಥಿತನಾದುದನೊರೆದೆನೀಕಥೆಯ ॥
ಸಂದಭಕ್ತಿಯೊಳಾಲಿಪಾಜನ| ವ್ಯಂದಕಿಷ್ಟವು ಸಿದ್ಧಿಸುವುದೈ|
ಯಿಂದು ಜೂಡನ ಜನುಮವೆರಡಿದು ಕೇಳ್ವಸುಜನರಿಗೆ ॥ ೨೫ ॥

ಇಂತು ಸ್ಕಾಂದಪುರಾಣಾಂತರ್ಗತಮಾದ ವಿನಾಯಕವಿಜಯದೊಳ್ ಚಿಂತಾಮಣ್ಯುಪಾಖ್ಯಾನವೆಂಬ ಏಳನೆಯ ಪ್ರಕರಣವು ಮುಗಿದುದು.

ಎಂಟನೆಯ ಪ್ರಕರಣ.

ಸೂ ॥ ತರಳಕೇಳ್ಕೈ ಶಕ್ರನಿಳೆಯನು
ಚರಿಸಿಯೆಲಿವನೆ ವೊಕ್ಕುಕಪಿಲಗೆ|
ಪರಮಚಿಂತಾಮಣಿಯ ನಿತ್ತನೆನುತ್ತಹರನೊರೆದ||

ಗೊರವವೇಳೆಂತೆಡರುಗೇಡಿಯ| ನಿರವೆ ಕಂಡನು ಮುನಿಯ ಬನದೊಳು|
ಕರಣಗಳ್ಗಾಯತ್ತನಾಗದ ಪರನುಮಣಿಗಾಗಿ ॥
ಪಿರಿದಳಲ್ದಾತಂಗೆರತ್ನಂ| ದೊರಕಿದಂದವಗುಹನುಪೇಳೆನ|
ಲೊರೆದನಾತಗೆ ಶಿವನು ವಿಸ್ತರದಿಂದ ಸತ್ಕಥೆಯ ॥ ೧ ॥

ಕಂದಕೇಳೈ ನಿನಗೆ ಪೇಳ್ವೆನು| ಹಿಂದೆನಡೆದಿತಿಹಾಸವನು ಮೇ|
ಲಿಂದಡಗುವುದು ನಿನ್ನ ಸಂದೆಗವೆಂದು ಪೇಳಿದನು ॥
ಇಂದಿರನು ತಾನೊಮ್ಮೆನಿರ್ಜರ| ವ್ಯಂದದಿಂದಲಿ ಅವನಿತಲಕೆ
ಯ್ತಂದು ಕಂಡನು ಮೆರೆವ ಪರ್ಣಕುಟೀರಕಂಗಳನು ॥ ೨ ॥

ತಿರುಗಿ ಕಪಿಲನ ಪರ್ಣಶಾಲೆಯ| ನಿರುಕಿಸಲ್ಕದು ತರುಸಮೂಹದೆ|
ನೆರಳಿನಿಂದಲಿ ಮಿಗಿಲುಪಣ್ಗಳಿನಂದಮಾಗಿರ್ದೆ ॥
ಕಮಮೆತಿಳಿಗೊಳದಿಂದೆ ಹರಿವೃಕ| ರುರು ಸಮೂಹದೆ ರಾಜಹಂಸದೆ|
ಮೆರೆವ ಕೋಗಿಲಬರ್ಹಿವಾರಾವತದೆ ಕಲರನದೆ ॥ ೩ ॥

ಬಗೆಬಗೆಯ ಕಲೆಗಲ್ಪರಿಂದಲಿ| ಮಿಗಿಲು ತೆಂಗುಲವಂಗ ಕೌಂಗುಬ|
ಳಗಗಳಿಂದಲಿ ಮೆರೆವನಜ್ಞಣಿವೆಣ್ಣಗಾನದೊಳು ||
ಸೊಗಯಿಪಾಕುಂಜಂಗಳಿಂದಲಿ| ಜಗಜಗಿಪ್ಪಾಸುಮದಕಂವಾ|
ಸೊಗಮನೀವುದು ಪರ್ಣಶಾಲೆಯು ಕುಶದೆಸಮಿಧೆಯಲಿ ||೪||

ಹರಿಯು ಬನದಲಿ ಬಳಲಿಪಸಿದುಂ| ತಿರುತಿರುಂಗಿಯೆ ಹಯವನೋಡಿಸಿ|
ಸರದೆಮಿಂದನು ಬೇಗ ಸೈನಿಕರೊಡನೆ ಬಳಿಕಪನು ||
ಸರದತಡಿಯೊಳು ನಿಂದು ನಿತ್ಯದ| ಕರುಮವನು ತಾಂಮಾಡಿಬಳಿಕಂ|
ವರಮುನೀಶ ಸಮಿಾಪಕೊರ್ವನೆ ತೆರಳಿ ಬಳಿಕಲ್ಲಿ ||೫||

ವಿಜಿತ ಕರಣನ ಕೃಶನ ಶೀಲನ? ವಿಜಿತರೋಷನ ಜತಿಯ ಸತ್ವನ|
ವಿಜಿತ ಭೋಗನ ವೇದವೇತ್ತನ ದೇವತಾರ್ಚಕನ ||
ಸುಜನನಾರವಿನುತನ ಛಾತ್ರ| ವ್ರಜಕೆ ವೇದಾಧ್ಯಾಪಕನುಮಂ|
ವಜ್ರಿಕಂಡನು ಕಾಲವೇದ್ಯನ ತ್ರಿಗುಣ ಸಮಯುತನ ||೬||

ಮುಂಗಡೆಯೊಳಗೆ ನಿಂದುತಾಸಾ| ಷ್ಟಾಂಗ ನತಿಯನು ಕಪಿಲಮುನಿಪಗೆ|
ಹಿಂಗದಾಜರಿಸುತ್ತಲಿಂದ್ರನು ಮೌನದಿಂದಿರಲು ||
ಸಂಗಹೀನಂ ಮುನಿಯಯೋಗದ| ಸಂಗವನುಳಿದು ಹರಿಯೆ ! ಬಂದಾ|
ಸಂಗತಿಯ ಪೇಳೊರ್ವ ನಿಲ್ಲಿಗೆ ಬಂದ ಹದನೇನು ||೭||

ಎನಲು ಕಪಿಲನ ನುಡಿಯನಾಲಿಸಿ| ಮನವೆ ನಲಿದನು ಶಕ್ರನಾಗಳೆ|
ಮುನಿಯೆ ! ಸೇನೆಯ ಸರವ ತಡಿಯೊಳು ನಿಲಿಸಿ ನಾನೋರ್ವ ||
ಬನಕೆ ಬಂದೆನು ವಿಪ್ರನಗ್ನಿಯ| ವಿನುತ ನೀಶನ ಮತ್ತೆ ಜಕ್ರಿಯ|
ಘನದ ಬಲ್ಪವ ಪಯನ ನರಳಿಯ ನೋಡಿ ವಂದಿಸದೆ ||೮||

ನಡೆಯಲ್ಕೆಸರಿ ಪೋಪುದೆಂಬಾ| ನುಡಿಯ ಕೇಳಿಹೆನದುವೆ ಕಾರಣ|
ದಡಿಗೆ ನಮಿಸಿದೆ ನಿನ್ನು ಕಂಡೆನು ಪಸಿವು ಮಡೆಗಿದುದು ||
ಮಡಿಯನುಟ್ಟೆನು ಸರದೆ ಪಾಪದ| ಗಡಣವಾಗದುದಿನ್ನು ನೋಡಿದೆ|
ನಡಿಯ ನದರಿಂ ಧನ್ಯನಾದೆನು ದಿಟದೆ ಕಿತ್ತಡಿಯೇ ||೯||

ನಾನು ತೆರಳುವೆ ದೇವನಗರಿಗೆ| ಸೇನೆಯೊಡನೀಗಳೆನ ಗಾಣತಿ|
ಯನು ಕುಡುವುದೆಂದೆನುತ ಬೇಳ್ಪಾ ಹರಿಯವಾಣಿಯನು ||
ಮೌನಿಯಾಲಿಸಿ ಮಧ್ಯದಿನದೊಳ| ದೇನುಕಾರಣ ಪೋಪೆಪಸಿದಿಹ|

ಸೇನೆಯಿಂದಲೆ ನುತ್ತ ದೇವೇಂದ್ರಂಗೆ ಬಿಸಗೊಂಡ || ೧೦ ||

ಕರ್ಮಮಾತ್ರದೆ ಜಪಿಸಿ ಮುನಿಗಳ| ದೊರ್ಮೆನೀನೆಯ್ತ್ತೊರ್ಪೆಯೆನ್ನಯ|
ಧರ್ಮಜಯದಿಂದೋರ್ವನೆಯ್ತ್ತಂದೆ ಗಡತನತನಗೆ ||

ಘರ್ಮಪೀಡಿತಮಾದ ಬಲದಿಂ| ಭರ್ಮಕೆಯ್ತಂ ದೆಲ್ಲರೊಂದಿಯೆ|
ಶರ್ಮವಂಕೊಟ್ಟುತನುಭುಂಜಿಸಿ ನಡೆಯೆ ಸುರಪುರಿಗೆ || ೧೧ ||

ಎನುತ ಶಿಷ್ಯರ ಕಳುಪಿಕಪಿಲನು| ಘನದ ದಳವನು ಕರೆಯಿಸಲುವಾ|
ಹಿನಿಯು ಬಂದಾಮುನಿಯ ಕಂಡಿತು ಭಕ್ತಿಭಾವದಲಿ ||

ಮುನಿಯು ಬಂದಿಹ ದೇವಗಣವನು| ಮನದೆ ಪೂಜಿಸಿಯಜನಜಾನಿಸಿ|
ಜನವನಮೃತದೆ ತೃಪ್ತಿಗೊಳಿಸಿದನಂತು ಸಂತಸದೆ || ೧೨ ||

ತಣಿದುಸುರಪನು ಮುನಿಗೆ ನೀಡುವೆ| ನೆಣಿಸಲಾಗದೆನುತ್ತೆ ಚಿಂತಿಸಿ|
ಮಣಿಯನಿತ್ತಲೆ ಮರುತ! ತರ್ಪುದು ಹೋಗಿನೀನೆನಲು ||

ಅಣಿಯರಂತಾಂಪೋಗಿ ಚಿಂತಾ| ಮಣಿಯ ತಂದೀಯಲದನಾಸುರ|
ಮಣಿಯು ಯೋಗಿಗೆ ನೀಡೆಧರಿಸಿದನಸುಗೆ ಸಾಮ್ಯವೆನೆ || ೧೩ ||

ಧರಿಸಿ ಮಣಿಯನು ಮುನಿಯು ಸುರಪಗೆ| ಪರಿಸಿಯದರಿಂಸಾಸಿರಾದಿ|
ತ್ಯರವೊಲೇನೆಸೆದಿರ್ದನೀಕ್ಷಿಸಿ ಜನವು ಮೆಚ್ಚಿದುದು ||

ಹರಿಯು ಮುನಿಯನು ಕೇಳಿ ತನ್ನಯ| ಪುರಕೆ ತೆರಳಿದ ನಿತ್ತಲಿದನುಂ|
ತಿರೆಯೊಳಾಲಿಸಿ ಪಡೆವರೆಲ್ಲರು ಸುಕೃತರಾಶಿಗಳ || ೧೪ ||

ಇಂತು ಸ್ಕಾಂದಪುರಾಣಾಂತರ್ಗತಮಾದ ವಿನಾಯಕವಿಜಯದೊಳ್ ಚಿಂತಾಮಣ್ಯುಪಾಖ್ಯಾನವೆಂಬ ಎಂಟನೆಯ ಪ್ರಕರಣವು ಮುಗಿದುದು.

ಒಂಭತ್ತನೆಯ ಪ್ರಕರಣವು.

ಸೂ || ಸಾರಮಾಗಿಹ ಸಿದ್ಧಗಣಪನ
ಮೂರನೆಯ ಜನುಮವನು ಕೇಳುಕು|
ಮಾರನೆ ! ಗಜಾಸ್ಯನೆನಿಕರೆದರು ದೇವದೇವನನು||

ದುರುಳಜನ ಸಂಹಾರಕವಿದುಂ| ತಿರೆಯ ಹೊರೆಯೆನು ತಗ್ಗಿಸುವುದ್ಯೈ|
ತರಿಸುವರಿದನು ಕೇಳ್ವರೆಲ್ಲರು ದುಃಖಸಾಗರವ ||

ಹರಡಿಧರ್ಮವ ಭಕ್ತಜನರಿಗೆ| ವರವಿಮುಕ್ತಿಯೆನಿತ್ತು ಸುಜನರ|

ಪೊರೆಗುಮಾಕರಿಮೊಗನಜನ್ಮದ ಕಥೆಯು ಕೇಳ್ವರನು ॥ ೧ ॥

ಸತ್ಯಲೋಕದೊಳಾಕಳೆಸೆ ವಿಧಿ| ಯತ್ಯದುಭುತದ ಕಾಯದನರಂ|
ಪ್ರತ್ಯವತರಿಸಿದನವನ ಮುಖದೊಳಾ ಸಮಯದೊಳಗೆ ||

ಅತ್ಯಧಿಕರಕುತಾಂಗನಾಗಿ| ದರ್ಪತ್ಯತುಲದಿಂ ರೌದ್ರಮುಖನುಂ|
ನಿತ್ಯಮಾತನ ದೇಹಗಂಧದೆ ದೆಸೆಯು ಘಮಘಮಿಸೆ ॥ ೨ ॥

ಬಿದಿಯು ನಿರುಕಿಸಿ ಮನದೊಳಂಜಂತ| ಮಿದಿರೊಳಿರ್ದಿವನೊಡನೆ ಪೇಳ್ದನು |
ಪದುಮಭವನೀನಾರು ಮಿಲ್ಲಿಗೆ ಬಂದಹದನೇನು ||

ಮುದದೆ ತಿಳಿಸೆನೆ ಜೃಂಭಜಾತನು| ಬಿದಿಗೆಪೇಳ್ದನು ನಿನ್ನ ಮೊಗದೊಳೊ|
ಗೆದನು ನಾನು ಜರಾಜರದೊಡೆಯನೇಕೆ ಕೇಳುವೆಯೊ ॥ ೩ ॥

ಕರುಣಿಸೆನಗಂ ರಮ್ಯವಸತಿಯ| ತಿರೆಯೊಳಿಂದೆನಗಜನೆ ನೀನೆನ|
ಲಿರದೆ ನಿನಗಂ ಜಗದೆ ಸಿಂಧುರನೆಂಬ ಪೆಸರಕ್ಕೆ ||

ತಿರೆಯೊಳಾವೆಡೆಯಾದೊಡಿರ್ಪುದು| ನೆರೆ ನಿಜೇಚ್ಛೆಯೊಳಣುಗ ವರಗಳ|
ಭರದೊಳೀವೆನು ಮೂರುಲೋಕದೆ ನೀನೆ ಬಲ್ಲಿದನು ॥ ೪ ॥

ಇಂದ್ರಮೊದಲಹ ದೇವಬೃಂದಗ| ಳಿಂದ ಶಂಕರನಿಂದ ಮಾಧವ|
ನಿಂದ ನೃಪಶರದಿಂದ ಮೆಂದುಂನಿನಗೆ ಸಾವಿಲ್ಲ ||

ಮುಂದೆ ನೀಂ ತಳ್ಕೈಸಿದಂದೇ| ಬೆಂದು ಪೋಪನದಾವನಾದೊಡ|
ಮೆಂದು ಬೊಮ್ಮನು ಕೊಟ್ಟನಾತಗೆ ವರವಮೋಹದೊಳು ॥ ೫ ॥

ಆದಕೆ ಮೆಚ್ಚುತ್ತೆರಗಿ ಬೊಮ್ಮಗೆ| ಸದಯನಾನೇಂ ಧನ್ಯನಾದೆನೊ|
ಮುದದೆ ನೀನೊಲಿದಿರ್ಪೆ ಸವನವಜಪವ ಮಾಣ್ದೆನಗೆ ||

ಬಿದಿಯೆ ! ನಾನಿಂ ಪೋಪೆನೆಂದೆ| ಯ್ದಿದನು ಮಾರ್ಗಾರ್ಧವನು ಸಿಂಧುರ|
ನೆದೆಯೊಳಿಗೆದುದು ಬಿದಿಯು ಬಂಜನೆಗೈದನೆಂಬುದುದು ॥ ೬ ॥

ಪುಸಿಯನುಡಿದೇ ನಟ್ಟಿದನೊಪೊಂ| ಬಸಿರನಂತೇಂ ನಿಜವೊನಾಂ ಪರಿ|
ಕಿಸುವೆನೆಂದಾ ಬೊಮ್ಮನಲ್ಲಿಗೆ ಬಂದುಭುಜಗಳಲಿ ||

ಒಸೆದುತಳ್ಕಿಸಿ ಗರ್ಜಿಸಲ್ಕಾ| ಗಸವು ನಡುಗಿದುದಜನು ಧೈರ್ಯದೆ|
ಮಸಗಿಕೇಳ್ದನದೇಕೆ ದುರ್ಮತಿಯಾಯ್ತು ನಿನಗಿಂತು ॥ ೭ ॥

ನಾನೆ ವರಗಳ ನಿನಗೆ ಕೊಟ್ಟೆನು| ಬೇನೆಯೊಡರಿಪೆಯೆಂದು ಕಾಣೆನು|
ನೀನು ವರಗಳನಿತ್ತ ನನ್ನನೆ ಬಂದೆತಳ್ಕಿಸಲು ||

ಮಾನಹೀನನೆ ನಿನ್ನ ನಿರಿವನು| ತಾನು ಬೆನಕನು ಜನಿಸುತಿಲ್ಲಿಯೆ|
ದೀನಪೋಷಕನೆಂದು ಪೇಳಲು ದುರುಳಗರ್ಜಿಸಿದ|| ॥ ೮ ॥

ವಿಷ್ಪರವ ಬಿಟ್ಟೆದ್ದು ಬೇಗನೆ| ವಿಷ್ಪರಶ್ರವನಲ್ಲಿಗೇಳಲು|
ಕೃಷ್ಟಿಗೊಡೆಯನು ತಾನುಸಿಂಧುರಬೆನ್ನನಟ್ಟಿದನು ||
ದೃಷ್ಟಿಸುತ್ತ ಜನೆರಗಿ ಶೌರಿಗೆ| ನಿಷ್ಠೆಯಿಂದಲಿನುತಿಸೆ ಮುರಹರ|
ನಿಷ್ಪಪುತ್ರನ ಮೊಗದಕುಂದನು ದಿಟ್ಟಿಸುತನುಡಿದ ॥ ೯ ॥

ಏಕೆಚಿಂತಿಪೆಸುತನೆ! ಪೇಳ್ಕೆ| ಸಾಕುಕಡುಸುಯ್ ನಿನ್ನ ಪಿಂದಿ|
ರ್ವಾ ಕುಮಾರಕ ನಾರುಪೇಳೆಂದಾತಬೆಸಗೊಳಲು ||
ನಾಕಜಾಧಿಪನಾನು ಜೃಂಭಿಸ|ಲೀ ಕುಮಾರನು ಚಾರುಗಂಧನು|
ಮಾಕುಮಂಡಲದೊಗೆದು ಪಡೆದನು ಸಿಂಧುರಾಖ್ಯೆಯನು ॥ ೧೦ ॥

ಇವನು ಬೇಡಲು ಸುಂದರಸ್ಥಾ| ನವನು ಕೊಟ್ಪೆನು ಮತ್ತಮಾತಂ|
ಬುವಿಯೊಳಾರನು ತಳ್ಕಿಸಲ್ಕವನಂದು ಸುಟ್ಪಪನು ||
ಕವಿಯದಂತೆಯೆ ಸೋಲಮೇಗಳ್| ದಿವಿಷದರ್ಕಳಿ ನಿಳೆಯನೃಪರಿಂ|
ದಿವಗೆ ಕೊಟ್ಪೆನು ವರವನೆನ್ನುಮನಪ್ಪಲೈತಂದ ॥ ೧೧ ॥

ಅದುವೆಕಾರಣಮಳ್ಕನಾಂತಾಂ| ಪದುಮನಾಭನೆ! ಬಂದೆನಿಲ್ಲಿಗೆ|
ಪದೆದುಕಾವುದು ವರದನಿಜಕಾಂ ಲಕ್ಷ್ಯವಾಗಿಸೆನು ||
ಸದಯಕೇಳೆಂದೊರೆಯೆ ಶೌರಿಯು| ಬಿದಿಯೆಚಿಂತಿಸದಿಂತು ಮೆಲ್ಲವಿ|
ಬುಧಸಮೂಹಕೆ ಭಯವ ಮೂಪ್ಪೀವರವನೇಕೆತ್ತೆ ॥ ೧೨ ॥

ಇದುವರೆಗೆ ಕಂಡಿಲ್ಲ ಕೇಳ್ದಿ| ಲ್ಲದನು ಬೊಮ್ಮನೆ ನಿನ್ನ ನುಡಿಯುಂ|
ತೊದಳು ಮಲ್ಲಿವ ನೆಮ್ಮಯಾಬಲ ಪೌರುಷಂಗಳನು ||
ಪದೆದು ನೋಡಿದನೆಲ್ಲವ ಸುರನು| ಮೊದಲವರದಾಬಲಕೆ ಲೋಕವ|
ನದುರಿಪಂಗಡ! ಶಿವನು ಕರುಣಿಸಲಿವನು ಮಡಿಯುವನು ॥ ೧೩ ॥

ಹರಿಯು ನುಡಿಯಲ್ಕಿಂತು ಸಿಂಧುರ| ನಿರದೆ ಹರಿಯನು ಕರೆಯೆಕೊಳಗೊಳ|
ಕೆರಗದಿರ್ದೊಡೆ ನಿನ್ನ ನೀಬಿದಿಸಹಿತ ದಹಿಸುವೆನು ||
ಮುರನಿಷೂದನ ಕೇಳುನೀನೆನೆ| ನಿರುಕಿಸುತ್ತಿಲೆ ಶಕ್ತಿಹೀನರು|
ನೆರೆನಿರೀಹರು ಬಗೆವೊಡೆಂತುಟುಕಾದಲೆಳಸುವರು ॥ ೧೪ ॥

ಇವನು ಬೊಮ್ಮನು ವೇದಜಡನೈ| ಜವದೆ ಸೃಷ್ಟಿಯ ಮಾಡಿತೊಡಗಿ|
ರ್ಪಿವನು ಶಾಸ್ತ್ರಪುರಾಣವೇದಂಗಳನು ಪಠಿಸುವನು ||
ಬವರಮೇತಕ್ಕೆವಗೆ ಬಗೆವೊಡೆ| ಜವದೆಕೈಲಾಸಕ್ಕೆ ಪೋಪುದು|
ಶಿವನು ಗಿರಿಜಾಯುಕ್ತನಿರ್ಪನು! ಸೆಣಸು ನೀನಲ್ಲಿ || ೧೫ ||

ಹರಿಯನುಡಿಯನು ಕೇಳಿದನುಜನು| ಹರಿಸದಿಂದಲಿ ಬವರ ಮೆಸಗ|
ಲ್ಕಿರದೆ ಪಾರಿದನಂದು ಕೈಲಾಸಾದ್ರಿನಿಕಟಕ್ಕೆ||
ಸುರವಿರೋಧಿಯು ಚಿಗಿದರಭಸಕೆ| ಸುರರು ಮನುಜರು ಯಕ್ಷನಾಗರು|
ಗಿರಿಯುನದಿಗಳು ನಡುಗಿಪೋದುವು ಭಗಣಮುರುಳಿದುದು || ೧೬ ||

ತೆರಳುತಲ್ಲಿಂಜಪವ ಮಾಡುವ| ಹರನಕಂಡನು ನೊಸಲಬೂದಿಯ|
ಕೊರಳರುದ್ರಾಕ್ಷಿಗಳ ವಾಮಾಂಕಸ್ಥೆಯಂಬಿಕೆಯ||
ದುರುಳನಾಹರನಪ್ಪೆ ಮನದೊಳ್| ಭರದೆ ಚಿಂತಿಸಿಯವನ ಮಡದಿಯ|
ನಿರದೆವಾತಾಳಕ್ಕ ಮುಯ್ವೆನೆನುತ್ತೆ ಬರೆಸೆಳದ || ೧೭ ||

ಗಿರಿಜೆಯಾಗಳೆ ನೆಲಕುರುಳ್ದಳು| ಮೊರೆದು ಮೂರ್ಛಿತಳಾಗಿ ನಾಥನೆ|
ದುರಳನೀತನು ಮೆನ್ನಬಲ್ಮೆಯೊಳೀಗ ಸೆಳೆದುಯ್ವಂ ||
ಹರನೆ! ನೋಡಿಯು ಮುಳಕನಿಹೆಯೊ| ತ್ತರಿಸಿ ಮೌನಧ್ಯಾನಗಳ ನೀ|
ಮೆರೆಯಿಸೈ ಭುಜದಳವ ಪರಿಹರಿಸೆನ್ನ ಬಂಧವನು || ೧೮ ||

ಇಲ್ಲದಿರಲಿವನೆನ್ನ ಮುಟ್ಟುತ| ಮಿಲ್ಲಿವಹ್ನಿಗೆ ವಶವನೆಸಪನು|
ಮಿಲ್ಲನೆಂದೆನೆ ಗಿರಿಜೆ, ಗಣಗಳು ಬೇಗಬೊಬ್ಬಿರಿಯೆ ||
ನಿಲ್ಲದಾಂಕಣ್ಗಳನು ತೆರೆಯಲ| ವೆಲ್ಲಗಣಗಳು ನುಡಿದು ವೀಶನೆ|
ಸೊಲ್ಲನಾಲಿಸು? ಜಪವಮಾಣಿನ್ನುಮೆಗೆ ಶೋಕಿಪೆವು || ೧೯ ||

ನಿನ್ನ ಶಕ್ತಿಯತೋರ್ದು ಬೇಗನೆ| ಬನ್ನವಂ ನೀಂ ಹರಿಸು ಶಿವನೆ|
ಮುನ್ನಮೆರಗುವೆವೆನಲು ಕೇಳ್ದೆನು ಗಣದತೋದನವ ||
ಖಿನ್ನನಾಗುತೆ ತಿಳಿದನಾದೊಡೆ| ಬನ್ನನೇಂ ನಿಮಗೆಂದು|
ಲ್ಕಿನ್ನನೋಡಿಯೆ ದುರುಳನುಮೆಯನುಕೊಂಡು ಸಾರಿದನು || ೨೦ ||

ಎನಲು ಕೇಳ್ದಾ ಭೂತಗಣದಾ| ಧ್ವನಿಯ ನಂದಿಯನೇರಿ ಬೇಗನೆ|
ವಿನುತಶೂಲವಡಮರುವನು ಪಿಡಿದೋಡಿ ಪೊಯ್ದಾಡಿ ||
ಜನುಮಜಡೆಯಲ್ಲಿ ಮೊಳು ಮುಡಿಯನು| ದನುಜಕೊಡೆಯಿಪ್ಪ ಪೋಗಡಿರಿಲಾ|
[illegible] ||೨೧||

ಜಾನುಮಧ್ಯದೆ ಪಾರ್ವನೈತಂ| ದೇನುದ್ದೈತ್ಯನೆ! ಸೆಣಸುತಿವನೊಡೆ|
ನೀನು ಗೆಲ್ದೊಡೆಶಿವೆಯ ಕೈಕೊಳ್ಳಿದಕೆ ನಿಮ್ಮೊಳಗೆ ||
ನಾನು ಮಧ್ಯಸ್ಥಾನವಾಂಪೆನು| ಮಾನಿಯೆನ್ನುತೆ ಪರಶುಮಧ್ಯ|
ಸ್ಥಾನದಲ್ಲಿಡೆ ಚಿರದೊಳಿರ್ದರು ಕಾದಿಸೆಣಸಿದೆವು || ೨೨ ||
ಪರಶುಧ್ಹಾವಿಸಿ ಬರುವ ದೈತ್ಯನ| ಗುರದೆ ನಾಂಟುತಲವಗೆ ಹಿಂಸೆಯ|
ಮರೆಯೊಳಾಜರಿಸುತ್ತೆ ಬಲವನವಂಗೆ ತಳ್ಗಿಸಿತು ||
ಮರಳಿ ಪಾರ್ವನು ಶಿವನೆ! ಗೆಲ್ದನು| ದುರುಳ! ದೇವಿಯನಿತ್ತು ಜೀವಿಸು|
ಬಿಡಿದೆ ಶೂಲದಬಾಯ್ಗೆ ಸಿಲ್ಕುತೆ ಸಾಯಬೇಡೆಂದ || ೨೩ ||
ಖಳನು ಕೇಳುತೆ ಭಯದೊಳುಳಿದನು| ಮುಳಿದು ಶಿವೆಯನು ನಾಗಲೋಕ|
ಕ್ಕಿಳಿದು ಪೋದನುಬಳಿಕ ಪಾರ್ವತಿಪಾರ್ವನಂ ನೋಡಿ ||
ಗಳಿಗೆಮಾತ್ರವೆ ನೀನು ದೈತ್ಯನ| ಗೆಲಿದು ತಪ್ಪಿಸಿಸೆರೆಯನೆನಗಂ|
ಬಳಿಕ ಕಾಯ್ದೈನಿನ್ನ ಮನೆಯೆಲ್ಲಿಹುದು ನೀನಾರು || ೨೪ ||
ಎನುತ ಪೇಳ್ದಾಶಿವೆಯ ಮಾತಿಗೆ| ತೊನೆದುಪಾರ್ವನು ತನ್ನ ರೂಪದ|
ಘನತೆಮೆರೆಯಿಸೆ ಗೌರಿಬೆಕ್ಕ ಸಮೆಯಿದ್ದಿ ಬಗೆಯೊಳಗೆ ||
ವಿನತಳಾಗಿಯೆ ನಾಲ್ಕುತೋಳಿನ| ವಿನುತ ಸಿಂಹಾಸೀನ ಸುಮುಖನ|
ಧನುವನಾಂತನ ನೋಡಿ ನಲಿದಿರೆ ಬಳಿಕ ಗಣಪತಿಯು || ೨೫ ||
ಮೇನಕಾತ್ಮಜೆ ಕೇಳಜಾದ್ಯರು| ಮೌನಿಮುಖ್ಯರು ಜಂತುನಿವಹಂ|
ಧ್ಯಾನದಿಂದೆ ವಿರೋಧದಿಂದಲಿ ಭವವದಾಂಟುವರು ||
ನಾನು ಸಿಂಧುರ ದೈತ್ಯಹನನಕೆ| ಮಾನಿನೀಮಣಿ ನಿನ್ನ ಜಠರದೆ|
ಸಾನುರಾಗದೊಳೊಗೆವೆನೆನೆ ನಾವ್ ಬಂದೆವೀಸ್ಥಳಕೆ || ೨೬ ||

ಇಂತು ಸ್ಕಾಂತಪುರಾಣಾಂತರ್ಗತಮಾದ ವಿನಾಯಕ ಮಹಾಮಹಿಮೆಯೊಳ್
ಒಂಭತ್ತನೆಯ ಪ್ರಕರಣವು ಮುಗಿದುದು.

ಹತ್ತನೆಯ ಪ್ರಕರಣ.

ಸೂ|| ಗಿರಿಜೆಯುದರದೊಳಿಗೆದು ದೇವನು
ವರಗಜಾನನನಿರಿದು ದೈತ್ಯನ|
ಸುರರ ಪಾರ್ವರಕಾಯ್ದನೆನ್ನುತೆ ಗುಹಗೆ ಶಿವನೊರೆದ||

ರಸೆಯೊಳೆಲ್ಲರ ದೈತ್ಯನಳಿಸುತೆ| ವಸುಧೆಯೊಡೆಯರ ವೀರಮುಖ್ಯರ|
ಹೊಸೆದು ಬಾಧಿಸಿ ಮತ್ತೆ ಪಾರ್ವರ ವೇದನಿಷ್ಕರನು ||
ಅಸುಗಳೆದು ಪೆಣ್ಗಳನಪಹರಿಸಿ| ವಸತಿಗಗ್ಗಿಯನಿಕ್ಕಿ ಮುರಿದನು|
ಮಸಗಿಯಜ್ಞ–ಮಹೀಜ–ಕಾಸಾರಾದಿಮಂಟಪವ || ೧ ||

ಮುರಿದು, ಸುರರಿಗೆ ಕಳೆಯೆಯಜ್ಞದ| ವರವುರೋಡಾಶವನು ವಿಬುಧರು|
ಸಿರಿದು ಚಿಂತಿಸಿ ಬಿದಿಯ ಸನಿಯಕೆ ಸಾರಿಬೇಗದಲಿ ||
ದುರುಳರಾಕ್ಷಸ ಚಿಷ್ಟೆಯೆಲ್ಲವ| ನೊರೆದು ಲೋಕೇಶಾಜ್ಞೆಯಿಂದಲಿ|
ವರವಿನಾಯಕನಿಷ್ಟದಾತನ ನವರುತುತಿಸಿದರು || ೨ ||
ಮೂರು ಮೂರ್ತಿಯನೋದಿಯೆಲ್ಲಕೆ| ಕಾರಣಂಗಡ; ಪಂಚಭೂತದ|
ಸೂರಚಂದ್ರರ ಋಕ್ಷಗಣಗಳಪತ್ತುದಿಕ್ಕುಗಳ ||
ಘೋರರಾಕ್ಷಸ ಗುಹ್ಯಕರ್ಕಳ| ಧಾರುಣಿಯೊಳಿಹ ಮರ್ತ್ಯಪಶುಗಳ|
ವಾರಕುತ್ಪತ್ತಿಸ್ಥಿತಿಲಯಕೆ ನೀನು ಕಾರಣನು || ೩ ||
ತ್ರಿಗುಣರೂಪನೆ ನಿನಗೆ ನಮಿಸಿವು| ವಿಗುಣನುತಿಪೆವು ನಾವು ವಿಭುವೇ
ಜಗದೆ ಬಕುತರಕಾಯೆ ನಾನಾ ರೂಪವನು ಧರಿಪ ||
ಮಿಗಿಲು ಧರ್ಮಕೆ ಲೋಪಗೆಯ್ಯವ| ವಿಗಡಸಿಂಧುರನಿವನ ನೇತ|
ಕ್ಕೊಗೆಯಿಸಿರ್ದಪೆ? ದೇವ! ಇವನಂ ಕೊಂದು ಸಲಹುವುದು || ೪ ||
ಎಂದು ರೋದಿಪ ದೇವನಿಕರವ| ನಂದು ಕರುಣಿಸಿ ಸಿದ್ಧಗಣಪನ|
ಮಂದಹರ್ಷದೊಳವತರಿಸಿ ಕೈಮುಗಿದ ದೇವರಿಗೆ ||
ಸುಂದರೋಕ್ತಿಯನಿದನು ಭಕ್ತಿಗ| ಳಿಂದ ಪಠಿಸಲು ಪೋವುದೇನೋ
ಬೃಂದಮಿದಕಂ ದುಃಖಶಮನಸ್ತುತಿಯ ಪೆಸರಕ್ಕೆ || ೫ ||
ಪರಮನುತಿಯನು ಚೌತಿದಿನದೊಳು| ಪರಮಭಕ್ತಿಯೊಳೆನ್ನ ಮುಂದೆಯೆ
ಭರದಿ ಪಠಿಪರ ದುಃಖರೋಗಂಗಳನು ತೊಲಗಿಸುವೆ ||
ಕರುಣದಿಂದಲೆ ಕಾಮಿತಾರ್ಥವ| ನಿರದೆಕೊಡುವೆನು ನಾನು ಗೌರಿಯ|
ತರಳನಾಗುತೆ ಪುಟ್ಟಿಕೊಲ್ವೆನು ದೈತ್ಯಸಿಂಧುರನ || ೬ ||
ವರಗಜಾನನನೆಂಬ ನಾಮದೆ| ಮೆರೆವೆನೆಲ್ಲೆಡೆಯಲ್ಲಿ ಬೇಗನೆ|
ದುರುಳ ದೈತ್ಯನಕೊಂದು ನಿಮ್ಮಯ ಪದವನಿತ್ತೆನು ||
ತೆರಳುವುದು ನೀವೆಂದು ಗಣಪತಿ| ಯೊರೆದು ಮೈಗರೆದಲ್ಲಿ ಗಿರಿಜೆಯ|
ಗರುಭಕಿಳಿದನು ಧರಿಸಲವತಾರಾಂತರಂಗಳನು || ೭ ||
ಬಸಿರು ಗಿರಿಜೆಗೆ ಬಳೆಯಲಾನಂ| ದಿಸಿದಳಾಕೆಯ ದೊರ್ಮೆ ಗುಹನೆಹ|
ರಿಸದೊಳೆನ್ನೊಡನಾಗನುಡಿದಳು ಕೇಳು ಶಂಕರನೆ! |
ರಸೆಯ ಬನದೊಳು ಬಗೆಯು ವಿಹರಿಸ| ಲೊಸೆದು ನಿನ್ನೊಡರಯ್ಯಮಾಗಿಹ|
ವಸತಿಯೇರ್ಪಡಿಸೀಗ ಮೆಚ್ಚಿರೆನೀನು ತಿರೆಯೊಳಗೆ || ೮ ||

ಸತಿಯವಾಕ್ಯವ ಕೇಳ್ದುಮೋದಿಸಿ| ಸತಿಯನರ್ಧಾಂಗಕ್ಕೆ ಸೇರಿಸಿ|
ಸುತನೆ! ನಂದಿಯನೇರಿ ನಡೆದೆನು ಧರೆಗೆ ಗಣವೆರಸಿ ||
ಹಿತದೆಬಳಸುತ ರಮ್ಯವಿಪಿನತ| ಗತಿಯಕಾಣದೆ ಬಳಲಿಯೊಂದೆಡೆ|
ವಿತತವಿಪಿನವ ಕಂಡೆನದರಾಪರಿಯ ಪೇಳುವೆನು || ೯ ||

ತರುಸಮೂಹದೆ ಖಗದವಿಸರದೆ ಹರಿತರಕ್ಷುಗಳಿಂದೆ ನಾನಾ|
ಪರಿಯ ಮೃಗಗಣದಿಂದೆ ಕೆರೆಕೊಳಹಳ್ಳಕೊಳ್ಳದಲಿ ||
ಪಿರಿದು ಸಂಪಗೆಜಾಜಿಯಿಂ ಶಾ| ವರೆಮೊದಲಹಸುಪುಷ್ಪವೃಕ್ಷದೆ|
ಪರಭೃತಾದಿಗಳಿಂದೆ ಸೊಗಯಿಸಿದತ್ತುಪೆರ್ಕಳದಿಂ || ೧೦ ||

ಇನಿಯಮಾವಣ್ಣಿಂದೆ ಜಂಬೀ| ರನಿವಹಂಗಳಿನಲ್ಲಿ ಮೆರೆವಾ|
ಘನದ ಸಿರಿಫಲದಿಂದೆ ಜಂಬೂಪನಸ ತರುಗಳಲಿ ||
ವಿನುತ ಜಂದನದಿಂದ ಕಿಂಶುಕ| ಬನವು ತಿಂದುಕ ಕಲ್ಪವೃಕ್ಷದ|
ಬನಗಳಿಂದಲಿ ಮೆರೆವತಾಣದೊಳಿರ್ದಿ ಸತಿಯೊಡನೆ || ೧೧ ||

ಗಣಗಳೆಲ್ಲವು ಗಾನಗೈದುವು| ಕುಣಿದ ರೆಲ್ಲರ್ಘನದ ಬನದೊಳು|
ಗಣಗಳಿಂದಲಿ ಗಿರಿಜೆಯಿಂದಲಿ ಕೂಡಿನಾನಲ್ಲಿ ||
ತಣಿದು, ಸೊಗಯಿಪ ಬಳ್ಕಿವನೆಯೊಳು| ಮುಣುತಲಿರ್ದಿನು ಸೊಗವನಾ ದು|
ರ್ಗುಣಿ ಗಜಾಸುರನೆನ್ನ ಭಕ್ತನು ಮದನು ಮುರಿದಿಟ್ಟ || ೧೨ ||

ಮುಕುತಿಗಾತಿಪ ನಾಗದೈತ್ಯನು| ಬಕುತನಾಗಿಯೆ ನೆನೆದು ಜಾತಿಯ|
ನಿಕಟದಲ್ಲಿಯೆ ಜಪಿಸುನೆನ್ನನೆ ನೋಡಿಕುಂಜವನು ||
ಶಕಲಗೈದನು ಕುವರಕೇಳ್ಕೈ| ಯವಿಳವೆಂದೆನೆ ಕೇಳ್ದುತಾಗುಹ|
ನುಕುತುಕದೊಳೆಂತು ಗಜನಾದನು ನಿನ್ನ ಕಿಂಕರನು || ೧೩ ||

ನೆನೆದನೆಹಗೈತನ್ನ ಜಾತಿಯ| ದನುಜಪಿಂತಣ ಭವದೊಳಾರವ|
ನೆನಗೆ ಪೇಳೆನೆ ಸುತನಮಾತನು ಕೇಳಿಶಂಕರನು ||
ತನುಜಕೇಳ್ಕೈ ಸಾವಧಾನದೆ| ದನುಜನಾತನುಪೂರ್ವಯುಗದೊಳ್|
ಜನಪನಾದನು ಲೋಕಪಾಲಕನಾಗಿ ನೀತಿಯಲಿ || ೧೪ ||

ನಡೆದು ಸರಿಯನು ಸಾರ್ದುರೂಪವ| ಪಡೆದು ಶಾಸ್ತ್ರದೆ ಕೋವಿದನೆನಿಸಿ|
[illegible] ||

ಪೊಡವಿಯಲ್ಲಿ ಮಹೇಶನೆಂಬುವ| ಪೊಡವಿಪಾಲಕನಾಗಿ ಲೋಕದೆ|
ಪಡೆದು ಜಸವಂತನ್ನ ಮನೆಯೊಳ್ಸುಖದೆ ನೆಲಸಿರಲು ॥ ೧೫ ॥

ಗುರುವುಸುರಪುರ ದತ್ತಣಿಂದಲಿ| ಬರಲುಕಂಡನು ಬಳಿಕ ವಿಧಿಯಿಂ|
ಗುರುವನರ್ಚಿಸಲವನು ನಲಿಯುತ ನೃಪನಪೊಗಳಿದನು||

ನರಪನಿನಗೆಣೆವರ್ಪದೊರೆಗಳ್| ತಿರೆಯೊಳೊರ್ವರು ಮಿಲ್ಲಸಗ್ಗದೆ |
ಮೆರೆಗು ನಿನ್ನಯಜಸವು ನೀಂಸುರವಂದ್ಯನಾಗಿರುವೆ ॥ ೧೬ ॥

ಆರಸಕೇಳೆಂದೊರೆಯೆ ಜೀವನು| ನರಪನಾಲಿಸಿ ಗುರುವೆನಿನ್ನ ಯ|
ಹರಿಕೆಸತ್ಯವಿದೆಂದಿಗಕ್ಕುಮೊ ಪೇಳುಗೀಪ್ಪತಿಯೆ ||

ದೊರೆಯನುಡಿಯನು ಕೇಳ್ದುಜೀವನು!ಕರಿಯಜನುಮವ ಪಡೆದು ನೀನವ|
ತರಿಸಲಂದಿನ ಕಾಲಕಂನಿಜ ಮಕ್ಕುಮಾನುಡಿಯು ॥ ೧೭ ॥

ಸ್ಮರನವೈರಿಯು ನಿನಗೆ ಮುಕ್ತಿಯನಿರದೆ ಕೊಡುವನು ಕೇಳೆನುತೊರೆದು|
ಸುರಪುರೋಹಿತನಮರನಗರಿಗೆ ತೆರಳಿಬಳಿಕೆತ್ತ||

ಧರಣಿಪಾಲಕ ನಾಡನಾಳು| ತ್ತಿರೆ ಕೃಪಾನ್ವಿತನಾಗಿ ಮಾರ್ಗದೆ |
ಪೊರಮಡುತ್ತಿರಲೊಮ್ಮೆ ನಾರದಮುನಿಯು ನೋಡಿದನು ॥ ೧೮ ॥

ನಿರುಕಿಸುತ್ತಂ ಗಣನೆಮಾಡದೆ| ತೆರಳೆ ನರಪನು ಮುನಿಯು ಕೋಪಿಸಿ|
ದೊರೆಯೆಗರ್ವದೆ ನಡದೆಯದರಿಂ ನೀನು ಕರಿಯಾಗು||

ಮರಳಿ ಜನ್ಮಾಂತರದೊಳುದಿಸುವೆ| ವರಗಜಾಸುರನೆಂದು ಮೆರೆಯುವೆ|
ಭರದೊಳಾಗಲೆ ಶಿವನಿವಾಸಸ್ಥಾನ ಮಹಿದೆಂದು ॥ ೧೯ ॥

ಮುನಿಯುಶಾಪವ ನಿತ್ತುನಡೆಯ| ಲ್ಕನಿತರೊಳಗೆ ಮಹೇಶರಾಜನು|
ನೆನೆದು ಜೀವನ (1) ದೇವಮುನಿಯಾ ನುಡಿಗೆಬೆರಗಾದ ||

ದಿನವು ಕಳೆಯಲು ಬಳಿಕ ಮರಣವ| ಜನಪನೊಂದಿಯೆ ಬನದಬಳಿಯೊಳ್|
ಜನುಮವಾಂತನು ಪಿಡಿಯ(2)ಬಸಿರೊಳು ಕಂದಕೇಳೆಂದ ॥ ೨೦ ॥

ಕರಿಯರೂಪವತಾಳ್ದು ಮೊಗದೊಳು| ಧರಿಸಿ ಮಾನುಷರೂಪ ಮುಳಿದೆಡೆ |
ಸುರನರೋರಗರಲ್ಲಿ ತನಗೆಣೆಯಿಲ್ಲ ಮೆನೆಮೆರೆದು ||

ತಿರುಗುತೊರ್ಮೆಯೆನತ್ತು ಗುಡಿಯನು| ಮುರಿದನರಿದುಂನೆನೆಯುತಿರ್ದನು|
ಗುರುವ ಮಾತನು ಮೆನ್ನನಿಂತುಂನಾಗದೈತೇಯ ॥ ೨೧ ॥

---

(1) ಬೃಹಸ್ಪತಿ (2) ಹೆಣ್ಣಾನೆ

ಮುರಿಯೆಮಂಡಪವಾಗದೈತ್ಯನು| ಸುರರು ಮನುಜರು ನಾಗ ಯಕ್ಷರು
ನಿರುಕಿಸುತ್ತಲಿ ಭೀತಿಯಾಂತರು ಬಳಿಕ ಪಾರ್ವತಿಯು ||
ದುರುಳನಾಟಕೆ ಹೆದರುತೆನ್ನೊಳು| ಸುರಿದಳೀಶನೆ ಕುಂಜರಾನನ|
ನರಶರೀರವನಾಂತ ನೊರ್ವನು ಮುರಿಯೆಮಂಡಪವ || ೨೨ ||

ಬೆದರಿ ಗಣಗಳು ಪತ್ತುದಿಕ್ಕಿಗೆ| ಜದರಿ ಪೋದುವು ಸಲಹುನೀನೆನೆ|
ಸುದತಿವಾಕ್ಯವ ಕೇಳಿ ಜಪವನು ಮಾಣ್ದು ಪೊರಮಟ್ಟು ||
ಗದರಿ ಮಂಟಪಭಂಜಕಂಗಾಂ| ಹದದ ಶೂಲದೊಳಾಗಳಿರಿಯಲ್
ಮದವಕಾರುತೆ ಕಣ್ಣಮುಚ್ಚುತೆ ಮೃತ್ಯುವಶನಾದ || ೨೩ ||

ತನುವು ಪೋಗೆಶಿವಾಯನಮೊಎಂ| ದೆನುತ ಹರಣವ ಕಳೆದೆನತುಭ!
ಕೆನು ತಿಳಿಡದನು, ಭಕ್ತಹನನಕೆನಾನು ಬಲುನೊಂದು ||
ಮನದ ಬಯಕೆಯ ತಿಳಿಸುಬೇಗನೆ| ಏನುತವರವನು ಕೊಡುವೆನೆಂದೆನೆ|
ನೆನೆದು ಜಾತಿಯಬಳಿಕ ಮುಕ್ತಿಯ ನೀಡುನೀನೆಂದ || ೨೪ ||

ನಿನ್ನ ಹಸ್ತದೆ ಮರಣವಾಂತೆನು| ನಿನ್ನ ದರ್ಶನವಾಯ್ತು ಕೊನೆಯೊಳ್|
ಮುನ್ನ ಗುರುನಾರದರೊರೆದವೊಲು ದಿಟವಿದಾಯ್ತೆಂದ ||
ನನ್ನ ಭಕ್ತನ ನುಡಿಯ ಲಾಲಿಸು| ತಿನ್ನು ನಿನಗಿತ್ತೆನೆತುಪದವಿ|
ಯನ್ನು ತೆರಳೆಂದೊರೆದೆನಲ್ಲಿಂದವನು ಪೊರಮಟ್ಟ || ೨೫ ||

ಖಳದಜರ್ಕವ ಮೊಗವದಿವಿಜರು| ಕಳಚಿಕೊಂಡರು ಸಮ್ಮಹೊದ್ದೆನು|
ಗಳಿಸಿಕೊಂಡೆನು ಕೈತ್ತಿವಾಸನೆನಿಪ್ಪನಾಮವನು ||
ಇಳೆಯೊಳೀಗಲು ಭಕುತನೇಹದೆ| ತಿಳಿದು ಮಾಳ್ಪರು ಮೊಗದ ಪೂಜೆಯ|
ನಿಳಯದಲ್ಲಿಯೆ ನಾನು ಭವರೋಗಕ್ಕೆ ವೈದ್ಯಕನು || ೨೬

ಆದಕೆನಾರ್ದೆನು ವೈದ್ಯನಾಥಾ| ಭಿದವ ನಾನಿದನಸುರನೊರಗಲು|
ಮುದದೆಬಂದುವು ಭೂತಗಣಗಳು ಬಳಿಕಮಂಟಪವ ||
ಪದೆದುನಿರ್ಮಿಸಿ ಬಳಿಕಮಲ್ಲಿಯೆ| ಸುದತಿವೆರಸಿದ್ದನು ಮಹೇಶನೆ|
ನೆದನುಜಾತಿಯ ಧರ್ಮಶೀಲದೆ ಕಂದಕೇಳೆಂದ || ೨೭ ||

ಇಲ್ಲಿಗೆ ಸ್ಕಾಂದಪುರಾಣಾಂತರ್ಗತಮಾದ ವಿನಾಯಕಮಹಾಮಹಿಮೆಯೋಳ್
ಹತ್ತನೆಯಪ್ರಕರಣವು ಮುಗಿದುದು.

ಹನ್ನೊಂದನೆಯ ಪ್ರಕರಣವು.

ಸೂ॥ ಗಿರಿಜೆಯುದರದೆ ಪುಟ್ಟಿಬನಕನು
ವರಗಜಾನನನಾಗಿ ದೈತ್ಯನ ।
ನರದೆಕೊಂದನು ಮೂರುಜಗವನು ತಾನುಪಾಲಿಸಿದ॥

ಸಿಂಧುರಾಖ್ಯನು ತನ್ನ ಮನೆಯೊಳು| ಜಂದದಿಂ ಕುಳಿತೊಮ್ಮೆ ಹೆಮ್ಮೆಯೊ|
ಳಂದು ಕೀರ್ತಿಸುತಿರ್ದ ನಾತಂ ತಾನೆ ನಿಜಗುಣವ ॥
ಇಂದುಬೊಮ್ಮಾಂಡದೊಳು ತನ್ನಯ| ಸಂದಕೀರ್ತಿಯು ಪರಿದುಶೋಭಿಕು|
ಜಂದಿರನ ವೊಲ್ವಿಧಿಯವರವುಂಸುಖದೆ ಲಭಿಸಿದುದು ॥ ೧ ॥

ಸರಸಿಜಾಸನ ವಿಷ್ಣು ಶಿವರನು| ಭರದೆಪುಲ್ಗಿಣಿಗೆಯ್ದೆನೆನಗೆಣೆ|
ತಿರೆಯೊಳಾರೈ ಧನ್ಯರಿರ್ಪರು ಗೆಲ್ದೆಮೂಜಗವ ॥
ಸುರನರೋರಗ ಜಂತುಮುಖದಿಂ| ಮರಣಮಿಲ್ಲೆನಗೆಂಬುವುದತೋಳ್|
ದುರುಳ ನಾಗಸ ನುಡಿಯನೊಂದನು ತಾನುಕೇಳಿದನು ॥ ೨ ॥

ದುರುಳ ನಿನ್ನಂತಾರು ಮರುಳರು| ಧರಣಿಯೊಳ್ಳನ್ನನೆಪೊಗಳಿಕೊ|
ಳ್ವರೆ ? ನಿಜೇಚ್ಛೆಗಳಿಂದೆ ಮಿಥ್ಯಾಲಾಪಮಂಪಿಡೆಲೋ ॥
ಗಿರಿಜೆಯುದರದೆ ನಿನ್ನ ಮರಣಕೆ| ನೆರವೆನಿಪ್ಪಾಗರ್ಭ ಮಿರ್ಕೆನ|
ಲರಿದು ದನುಜನುಕೆರಳಿಪಿಡಿಯಿರಿ ಕೊಲ್ಲಿರೆಂದೊರೆದ ॥ ೩ ॥

ಮೂರುಲೋಕದೊಳೆನ್ನ ಕೊಲ್ವರ| ದಾರುಪುಟ್ಟುವರಿಂದುಪೋಗಿಯೆ|
ಬಾರಿಸೆಂಗಡ ವೊಡೆಯೊಳಿರ್ಪಾ ಗರ್ಭಪಿಂಡವನು ॥
ಕ್ರೂರಬುದ್ಧಿಯನಾಂತು ಗರ್ಜಿಸಿ| ಖಾರಿಕೈಲಾಸಾದ್ರಿನಿಕಟಕೆ|
ಧೀರಕಾಣದೆ ಶಿವೆಯ ನಲೆದನು ಸುತ್ತಿ ಬನಬನವ ॥ ೪ ॥

ತಿರುತಿರುಗಿ ಬನಬನವ ಕೊನೆಯೊಳ್| ಪರಿಯಗೊಡದಾ ಬನದೆ ಮಲಗಿಹ|
ಗಿರಿಜೆಯಂ ಮೇಗಣ್ಣ ನೀಕ್ಷಿಸಿ ಮಾಯೆಯಿಂದವನು ॥
ಮರುತ ರೂಪವಧರಿಸಿ ಪೊಕ್ಕನು| ದರದೊಳಲ್ಲಿಯೆ ನಖದೆ ಖಂಡಿಸಿ|
ಶಿರವ ಕರದೊಳು ಪಿಡಿದು ಬಂದನು ಪೊರಗೆಸಿಂಧೂರ ॥ ೫ ॥

ತೆರಳುತಲ್ಲಿಂ ವಿಂಧ್ಯಪರ್ವತ| ಧರೆಯೊಳಿಗೆಯಲ್ ನನುಜನಾಗಳ್|
ಶಿರವ, ಬಳಿಕಾತಲೆಯು ಬೇಗನೆಪೋಗಿ ನರ್ಮದೆಯ ||
ದುರಿತಕಾನನದವೆಯತೀರದೊ| ಳುರುಳಿ ಬೇಗ ಗಣೇಶಕುಂಡಕೆ,|
ಕರಮೆನರ್ಮದೆಯುಪಲಮೆಲ್ಲಂ ಕುಂಡದುಪಲಗಳು || ೬ ||

ಒಡನೆಕಿಸುಗಲ್ಲಾಗೆಯವುಗಳ್| ಪೊಡವಿಯೊಳ್ಪ್ರಥಿತಂಗಳಾದುವು|
ಬಿಡದೆ ಶೋಣಗಣೇಶ ನಾಮದೆ ಪರಮಪಾವನದೆ ||
ನಡೆದರೀತಿಯ ನಿಯದಿರ್ದೆವು| ಕಡಿದು ಕೃತ್ಯವನೆನೆದು ದೈತ್ಯನ|
ಪೊಡವಿಧರನಾಸುತೆಯು ಮಾನುಂಸುಗಿದೆವೇನೆಂಬೆ || ೭ ||

ತರಳಕೇಳೈ ಬಳಿಕ ರಕ್ಕಸ| ತೆರಳೆ, ತನ್ನಯ ಗೃಹಕೆ. ಬಳಿಕಾಂ|
ಗಿರಿಜೆಪೋಗುವ ಬೆಳ್ಳಿವೆಟ್ಟಕೆ, ದಿನವುತುಂಬಿಹುದು ||
ಕರಮೆನಿನ್ನಯ ಬಯಕೆಸಂದುದು| ತೆರಳು ಮನೆಗೆಂದೇರಿ ನಂದಿಯ|
ಪರಮ ಕೈಲಾಸಕ್ಕೆ ಬಂದೆವು ನಾನು ಗಿರಿಜಾತೆ || ೮ ||

ತರುಣಿಗೊಂಬತು ತಿಂಗಳಾಗಲು| ಮರಳಿಪಿಂತನೆ ಕಂಡಬೆನಕನ|
ಪರಿಯನೀಕ್ಷಿಸಿದಂದಮೊರೆವೆನು ರತ್ನಸಿಂಹಾಸನ ||
ಮೆರೆವಚೌಭುಜನಷ್ಟಶಕ್ತಿಯ| ಧರನಸೈಜ್ಞಾನಿಕನ ದೇವನ|
ಪಿರಿದುಸಿದ್ಧಿಸುಬುದ್ಧಿಯುಕ್ತನ ಸಿಂಹವಾಹನನ || ೯ ||

ಕರದೊಳಾಯುಧ ಧರನನೆಸೆದಾ| ಗಿಬೆ, ನಾನೆಕೃತಾರ್ಥೆ ಧನ್ಯೆಯು|
ಕರಣಗೋಚರನಾಗ ದಿರ್ಪನ ವಿಮಲಸೀತನನು||
ಪರಮಪೂಜ್ಯನ ನಾದಿದೇವನ| ತಿರೆಯಸೃಷ್ಟಿಸ್ಥಿತಿಗೆ ನಾಶಕೆ|
ವರನಿದಾನನ ಪರಿಕಿಸಿರ್ದೆನು ಕಣ್ಗಳಿರಹರಲಿ || ೧೦ ||

ಎನುತಮಾತ್ಮಾ ಶ್ಲೇಷಹರ್ಷದೆ| ಮನವು ಮುಳುಗಿರೆ ದೇಹಭಾವದ|
ತನಗೆಮರೆದಿರೆ ಗೌರಿದೇವಿಯು, ದೇವ, ತಾಂಕಂಡು ||
ಘನವಿನಾಯಕ ನಾಗನುಡಿದನು| ಜನನಿನಿನ್ನಯ ಪೊಡೆಯೊಳಾನೇ|
ಜನಿಸಿನಿನ್ನಂ ಸೇವೆಗೆಯ್ವೆನು ಕೊಲ್ವೆದುಷ್ಟರನು || ೧೧ ||

ನೆಲದಭಾರವ ನಿಳಿಪೆಮಾತೆಯೆ| ಫಲಿಕುಮೊಳ್ಳಿಯ ತನವು ಲೋಕಕೆ|
ಸಲುವುದಾಹ್ಲಾದ ನಿನಗೆಂದವ ನಾಡಿಮರೆಯಾದ ||
ನಲವನೊಂದಿಯೆ ಬಳಿಕಮಿಾಕ್ಷಿಸಿ| ತಲೆಯನುಳಿದಾ ಪುರುಷರೂಪವ|
ಕೆಲದೆಕಂಡಳು ಗಿರಿಜೆಮರುಗಿದಳಾಗ ದೈನ್ಯದೊಳು || ೧೨ ||

ಎನ್ನ ತನುಜನ ನಾರುಕಳ್ದರೊ| ಭಿನ್ನ ಮುಸ್ತಕ ಸುತನನಿರಿಸುತ|
ಮುನ್ನವಿಭಮುಖ ನಸ್ಮದೀಯಾತ್ಮಜನುತಾನಾದ ||
ಕೆನ್ನ ಮಾಕ್ಷಿಸೆ ಕಾಣದಿರ್ಪೆನು| ತನ್ನ ತೊರೆದವನೆತ್ತ ಪೋದನ|
ದಿನ್ನು ಕನಸಿನ ಮಾಯೆಎವೆನು ಮೋಹವೈದಿದೆನೊ || ೧೩ ||

ಸ್ವಾಮಿ! ಹಾ! ದೇವೇಶಶಿವನೇ! | ನೇಮವೇನಾಯ್ತಾನುಕೆಟ್ಟೆನು|
ಸೋಮಶೇಖರ ದೈತ್ಯಬಂಧವ ನೇಕೆತಪ್ಪಿಸಿದೆ ||
ಕಾಮದಾತನೆ ನಿನ್ನನುಡಿಯೇ| ನೈಮಹಾತ್ಮನೆ! ಮಾತದೆನ್ನುಮ|
ನೀಮಹಿಯೊಳಗೆ ದುಃಖಕೀಡಾಗಿಸಿತು ಪೆರ್ಕಳದೆ || ೧೪ ||

ಎಂದು ಶೋಕಿಪಸತಿಯಸನಿಯಕೆ| ಕಂದೆ! ವಿಹ್ವಲನಾಗಿ ಪೋದೆನು|
ಸಂದಕಥೆಯನು ಕೇಳ್ದುಪುತ್ರನ ತೊಡೆಯಮೇಲಿಟ್ಟು ||
ಅಂದುಶೋಕಿನೆ ಕಂಡುಸನ್ನುತ| ನಂದಿಯೊರೆದನನಿಷ್ಟವಾಗಿಹು|
ದಿಂದುದೇವತೆಗಳ್ಗೆ ತೋರ್ಪುದು ತಕ್ಕುದೆಂದೊರೆದ || ೧೫ ||

ಅದಕೆಸಮ್ಮತಿಯಿತ್ತು ನಂದಿಯೆ| ಯದಿತಿಸುತರನು ಬೇಗಬರವೇ|
ಳ್ವುದೆನೆ ಶೀಘ್ರ ದೊಳಮರ ನಗರಕೆ ಪೋಗಿಸಭೆಯೊಳಗೆ ||
ಪದೆದು ದೇವಸುಪೂಜ್ಯನಾಗುತ| ಬುದಮಹೋತ್ಸವ ದೊಳೆರೆಶಕ್ರನು|
ಮದನು ನೋಡುತ ಮಣಿದು ಪೇಳ್ದನು ನಂದಿಯವರೊಡನೆ || ೧೬ ||

ಸುರರೆ! ಕೇಳ್ವುದು ಶಿವನಮನೆಯೊಳ್| ತರಳನೊರ್ವನು ತಲೆಯನುಳಿದೇ|
ಗಿರಿಜೆಯುದರದೆ ಚಾರುರೂಪದೊಳೀಗ ಪುಟ್ಟಿಹನು||
ಹರನುತೊಡೆಯೊಳಗಿಟ್ಟು ಶಿಶುವನು| ಮರುಗುತಿರ್ಪನು ಶಿವೆಯುಮಳುವಳ್|
ಭರದೊಳೆಯ್ತಂದವರ ಸಂತೈಸುವುದು ನೀವೆಂದ || ೧೭ ||

ಎನಲುನಂದಿಯ ಮಾತನಾಲಿಸಿ| ಘನಪುರಂದರ ನೇರಿಯಾನೆಯ|
ಮನದೆಚಿಂತೆಯನಾಂತು ನಡೆದನು ಶಿವನಮಂದಿರವ ||
ವಿನುತವಾಹನವೇರುತದಿತಿಯ| ತನುಜರಿಂದ್ರನ ಪಿಂತೆಬಂದರು|
ತನುಜಕೇಳಥ್ಯಾರ್ಯದಿಯಿಂದಲಿ ಸುರನನರ್ಚಿಸಿದೆ || ೧೮ ||

ಬಳಿಕಶಕ್ರನು ಬಿದಿಯಕರೆದನು| ಜಳಜಪುತ್ರನೆ ಗರ್ಭಗೃಹದಿಂ|
ಘಳಿಲನಾಶಿಶುವಿಲ್ಲಿ ಗೊಯ್ವುದು ನೋಳ್ಕೆನಿರ್ಜರರು ||
ಮಿಳಿತರಾಗುತೆ ತಮ್ಮ ಬುದ್ಧಿಗೆ| ತಿಳಿದಪಾಯೊಳ್ಮೂಲ ಹೇತುವ|
ತಿಳಿಪನೆಂದೆನಲಜನು, ಶಿಶುವನುಮುಂತೆ ಮಲಗಿಸಿದ || ೧೯ ||

ನಿರುಕಿಸುತ್ತಲಿಸುರರು ಮಗುವನು| ಶರಧಿಮಧ್ಯದೊಳೊಗೆಯ ಬೇಕೆನು|
ತೊರೆದರನಿಬರು, ಬೊಮ್ಮನಾಲಿಸಿ ದೇವರಿದಿರಿನೊಳು ||
ಒರೆದೆನೀಪರಿ ಎಲೆಲೆಶಿಶುವೇ!| ಧರಿಪೆಯೇಕೆವಿಮಸ್ತಕತ್ವವ|
ಪರನನಾದಿಯು ನೀನುಲೋಕಾಧಾರಬಹುರೂಪ || ೨೦ ||
ದುರಿತಹಾರಿಯನೇಕರೂಪನು| ಕರುಣಿಸೀಗಾನಂದವೆಮಗೆನೆ|
ಶಿರವನುಳಿದಾ ಶಿಶುವನೆತ್ತಂ ಬಿದಿಯೆಕಂಡಪೆಯೊ ||
ಭರದೆಪೇಳೆಂದೆನಲು ಶೌರಿಯು| ಹರಿಯಮಾತಿಗೆ ಕವಿಯನೀಯದೆ|
ತರಳನೀನೊರೆ ನಿನ್ನ ತತ್ವವನೆಲ್ಲವೆಮಗೀಗ || ೨೧ ||
ನಮಗಗೋಚರ, ನಿನಗೆತಿಳಿಯದ| ಸಮಯವಿಲ್ಲವದೇಕೆನುಡಿಯೈ
ನಮಿಸಿಬೇಡುವೆ ನೆಂಬಬೊಮ್ಮನ ನುಡಿಯನಾಲಿಸುತ ||
ಅಮರನಾಥವಿನಾಯಕಂತಾ| ನೆ ಮರುಗುತ್ತಜಗೆನುಡಿದನು ಬಿದಿ|
ಯೆ ಮೊದಲೇಸೃಷ್ಟಿಯೊಳಗೆನ್ನಂ ನೀನು ಮೆಚ್ಚಿಸಿದೆ || ೨೨ ||
ಮತ್ತೆಪುಟ್ಟಿಪೆನೀಗಳುನಿಯೊಳು| ಮಿತ್ತಗೌರಿಯ ಸೇವೆಗೆಯ್ವೆನು|
ಮತ್ತಸಿಂಧುರನನ್ನು ಕೊಲ್ವೆನು ದೇವಗೋದ್ವಿಜರ ||
ಮೊತ್ತಮೇಗಳ್ಕಾಯ್ವೆನೆಂಬಾ| ಚಿತ್ತವೃತ್ತಿಯ ನರಿದುಬೊಮ್ಮನು|
ಚಿತ್ತದೊಳ್ನಲಿದಾಗ ನುಡಿಸಿದಪರಿಯನೇನೆಂಬೆ || ೨೩ ||
ಶಿಷ್ಟರಕ್ಷಣೆಗಾಗಿ ಜನಿಸಿದೆ| ಯಿಷ್ಟದಾತನೆ ಮೊಗವತೋರ್ವುದ|
ನಿಷ್ಟವಂತೊಲಗಿವುದು ಮಾಳ್ಪುದು ನಮಗೆ ಮುದವಂನೀ||
ಶಿಷ್ಟವಿಧಿಯಿಂತೆರದೊಳರ್ಥಿಸೆ| ಸಿಷ್ಟಿಸಿವಿಮಸ್ತಕದ ಶಿಶುವುಂ|
ಶ್ರೇಷ್ಠನಿತ್ತಿಹೆಮುನ್ನ ವರವಮಹೇಶರಾಜರಿಗೆ || ೨೪ ||
ಕರಿಯಜನ್ಮದೆ ಜನಿಸಿಯವನೀ| ಶ್ವರನ ಹಸ್ತದೆ ಮುಕ್ತನಾದಾ|
ತೆರದೊಳೆಲ್ಲವು ಸತ್ಯಮಾದುಭವವನಮಸ್ತಕವು ||
ಪಿರಿದುಶುಂಡಾದಂಡದಿಂದಲಿ| ಮೆರೆದು ಹರನಿಂಪೂಜ್ಯಮಿರ್ವುದು|
ಧರಿಸಲದನಾನೊಗೆದೆ ನೆನಗದು ವದನವಾಗುವುದು || ೨೫ ||
ಎನಲುಕೇಳ್ದಾಗುರುವು ವದ್ಭುತ| ನಿನದವಾಲಿಸಿಮತ್ತೆ ಶಿಶುವೇ|
ವಿನತಿಗೆಯ್ವೆನು ನೀನುವಿಶ್ವನು ವಿಜ್ಞನೀಶ್ವರನು ||
ಇನಮಹೇಶಗೆ ನಾನುಕೊಟ್ಟಾ| ಮನದಮೆಚ್ಚುಗೆಯೆಹಗೆತಿಳಿದೆಯೋ|
ವಿನುತನಿನ್ನಯ ಪರಮರೂಪವು ನಮಗಗೋಚರವು || ೨೬ ||

ಎಂದುಪೇಳ್ದಜ ಮೌನದಿಂದಿರ| ಲಂದು ನಾರದನೊರೆದ ಬೊಮ್ಮನೆ|
ಯೊಂದು ನಿಮಿಷಂ ಸುಮ್ಮನಿರ್ದುದು ಶಿಶುವಕೇಳುವೆನು ||
ಎಂದುನಾರದ ನುಚ್ಚಸರದೊಳ್| ಕಂದನೀತಲೆ ಯುಳಿದದೆಂತುಟು|
ಕಂಧರೊಚ್ಚೈದವನು ಗೈದವರಾರು ಪೇಳೆಂದ || ೨೬ ||

ಮುನಿಯಮಾತನು ಕೇಳ್ದುಬಾಲನು| ವಿನುತನಾರದಮೊಡನೆ ಪೇಳ್ದನು|
ವಿನತನಾಗಿಯೆ ದುಷ್ಟಸಿಂಧುರನೆಂಬ ದೈತ್ಯನುತಾಂ ||
ಅನಿಲರೂಪವ ನೊಂದಿಗಿರಿಜೆಯ| ತನುವೊಳೊಕ್ಕವನೆನ್ನ ಶಿರವನು|
ತನಗೆಯಷ್ಟಮ ಮಾಸದಲ್ಲಿಯೆ ಚಿವುಟಿಹಾಯ್ಕಿದನು || ೨೭ ||

ಸುರವಿರೋಧಿಯನೀಗ ಕೊಲ್ವೆನು ಕರಿಯಮೊಗವನು ಪೊರ್ದಿನಾನೆನೆ|
ಪರಮಮೌನಿಯು ಮತ್ತಮವನೊಡನಿಂತು ಪೇಳಿದನು ||
ತರಳಮೊಗವನು ನಾವ್ಮಜೋಡಿಸ| ಲರಿದು, ನಿನ್ನಯ ಮೈಮೆಯಿಂದಳೆ|
ಧರಿಸಬೇಕೆನುತೊರೆದು ಮೆಲ್ಲರುನೋಡುತಿರಲಾಗ || ೨೮ ||

ಗಿರಿಜೆಯಣುಗನು ಪೂರ್ಣದೇಹವ| ಧರಿಸಿ ವಾರಣವದನನಾಗುತೆ|
ವರಕಿರೀಟದಿಕರ್ಣಕುಂಡಲ ಬಾಹುಯುಗ್ಮದೊಳು ||
ಮೆರೆದು ಪಕ್ಕದೆ ಸಿದ್ಧಿಬುದ್ಧಿಯ| ರಿರದೆ ನೆರೆಯಲು ಕಂಡುದಿವಿಜರು|
ಹರಿಸವಾಂತುಗಜಾಸ್ಯನೆನ್ನುತೆ ಕರೆದು ನುತಿಸಿದರು || ೩೦ ||

ಸುರನರೋರಗರೆಲ್ಲ ಮೊದಲೊಳು| ಕರಿಮೊಗನ ಪೂಜಿಸಲು ಕಾರ್ಯದ|
ನೆರವುಸಿದ್ಧಿಪುಮೆಡರು ಪೋವುದು ಫಲಿಪುದೀಪ್ಸಿತವು ||
ನಿರುತಮೆಂದರು ಕುಂಜರಾಸ್ಯನ| ನಿರುಕಿಸುತ್ತಾಂತಿವೆಯು ನಲಿದೆವು|
ತೊರೆದು ದುಃಖವ ನಾವು ಬೆನಕನ ಬೇಗ ಭಜಿಸಿದೆವು || ೩೧ ||

ಕೊಟ್ಟವಾತಗೆ ಫಾಲಚಂದ್ರನ| ಪಟ್ಟವಾಶತಿಯಂತೆ ಸೊಗಯಿಸೆ|
ಸಿಟ್ಟಿಗೊಡೆಯನು ಪೂಜಿಸಿತ್ತನು ವಿಕಟನಾಮವನು ||
ಪುಟ್ಟಮಗುವಿಗೆ ಬಳಿಕಮಾಡಿದ| ರಟ್ಟಹಾಸದೊಳಾರ್ತಿಗಳನಾ|
ಪಟ್ಟವಣೆಯೊಳು ಕೂರಿಸಿತ್ತಲು ಹಾಡಿಹರಿಸಿದರು || ೩೨ ||

ಹರಿಸವಾಂತಮರಾಳಿ ತಮತಮ| ಗಿರದೆ ಪೋದರು ತಮ್ಮಧಾಮಕೆ|
ವರಗಜಾಸ್ಯನು ಸಭೆದಜೌತಿಯದಿನದೆ ಪುಟ್ಟಿದನು ||
ತಿರೆಯಜನರಿಗೆ ವಿಘ್ನವೆಲ್ಲವ| ಹರಿಸಿ ಮಾಳ್ಪನು ಬೇಗಶುಭವೆ|
ಲ್ಲರಿದನಾಲಿಸಿ ಪಡೆಗೆ ತಮ್ಮಯ ವಾಂಛಿತಾರ್ಥವನು || ೩೩ ||

ಇಂತು ಸ್ಕಾಂದಪುರಾಣಾಂತರ್ಗತವಾದ ವಿನಾಯಕಮಹಾಮಹಿಮೆಯೊಳ್ ಗಜಾನನಾವತಾರವರ್ಣನವೆಂಬ
ಹನ್ನೊಂದನೆಯ ಪ್ರಕರಣವು ಮುಗಿದುದು.

ಹನ್ನೆರಡನೆಯ ಪ್ರಕರಣವು.

ಸೂ॥ ಈವರಕೇಳ್ಕೆ ಸಿಂಧುರಾಖ್ಯನ
ಬವರದಿಂದಲಿ ಗೆಲ್ಲೆ ಗಣಪನು।
ದಿವಿಜರಾತನಮೇಲೆ ಪೂಮಳೆಗರೆದರೆಂದೊರೆದೆ॥

ಗಜಮುಖಾಭಿದ ದೇವನೊಗೆದನ। ಗಜೆಯು ದರದೊಳಿನುತ್ತ್ಯನಾರದ।
ನಿಜದೊಳರಿದುಂ ಸಿಂಧುರಾಖ್ಯನ ಮನೆಗೆ ತಾಂಪೋಗಿ ॥
ವೃಜಿನದೈತ್ಯನ ನುತಿಸಿಮಂಡಿಸಿ। ಯಜಿನದಾಸನದಲ್ಲಿ ಬಳಿಕದಿ।
ತಿಜನೆ! ನಿನಗೆ ಸಮಾನರಿರ್ಪರೆ ಮೂರುಜಗದೊಳಗೆ ॥ ೧ ॥

ವರವನಿತ್ತನು ನಿನಗೆ ಬೊಮ್ಮನು। ಹರಿಸದಿರ್ದೊಡೆ ಜಪಸಮಾಧಿಯ।
ಪರಮಶೂರನು ನೀನು ಮೆಂದೆನಲದನು ಕೇಳುತ್ತ ॥
ಸುರಮಣಿಯೆ ಕೇಳೇಕೆಬಂದಪೆ। ಯೊರೆನಿದಾನವ ಸಾವಧಾನದೆ।
ತಿರೆಯೊಳದ್ಭುತವೃತ್ತವಿರ್ದೊಡೆ ತಿಳಿಸುನೀನೆಂದ ॥ ೨ ॥

ಎನಲು ಸಿಂಧುರನದನು ಕೇಳಿಯೆ। ಮುನಿಯು ನುಡಿದಂಸ್ನೇಚ್ಛೆಯಿಂದಲಿ।
ನಿನತುಸನಿಹಕೆ ಬಂದೆನಲ್ಲದೆ ಬಯಕೆ ಯೆನಗಿಲ್ಲ ॥
ಮನಕೆಸೋಜಿಗಮಪ್ಪ ಹದನನು। ನಿನಗೆ ಪೇಳ್ವೆನು ಕೇಳು ಗಿರಿಶನೆ ! ।
ಮನೆಯೊಳುದಿಸಿಹನಾತ್ಮಜಾತನು ವಿಗತಮಸ್ತಕನು ॥ ೩ ॥

ಕಳಿದುಪೋದುದ ಮುಂದೆ ಬರ್ಪುದ। ಫಳವನಡೆವುದನೆಲ್ಲ ಮೊರೆವುದು।
ನಿಳಯದೆನಿತುಂಕಾಲಶುಂಡಾದಂಡನಿರ್ದತ್ತೊ ॥
ಘಳಿಲನ್ನೆತಂದವನ ಮೊಗದೊಳ। ಗುಳಿದುಸೇರಿತು ಘೋರರೂಪವು।
ಮಿಳೆಯೊಳೆಂತೊಗೆದಪನೊ ಕಾಣೆನೆನುತ್ತೆ ಬೆಸಗೊಂಡ ॥ ೪ ॥

ನುಡಿಯು ಕಿವಿಯೊಳು ವಜ್ರದಂತೆವೊ। ಲಿಡಿಯೆ ದೈತ್ಯನು ಸುಜ್ಞೆವೋದನು
ವೊಡವಿಯೊಳುರುಳಿ ಯೆಳ್ಚರಂಗೊಂಡವನು ನಾರದಗೆ ॥
ಕಿಡಿಯಕಾರುತ ಕಣ್ಗಳಿಂದಲಿ। ಘುಡಿಘುಡಿಸುತಂ ತೋರಿಸವನನು।
ಮಡಿಪನಾತನು ಮೆನ್ನನಾಗಸನುಡಿಯ ತೆರದೊಳಗೆ ॥ ೫ ॥

ಶರಬೊಳಸ್ರ್ಯದೊಳಿರಿವೆನವನನು| ಭರದಿ ತೋರಿಪುದಿಲ್ಲ ದಿರ್ದೊಡೆ|
ವರಮುನೀಶ್ವರನಿನ್ನ ನೀಗಳೆ ಮುಗಿಸಿಕೊಳ್ಳುವೆನು ||
ತೆರಳು ನೀನೆನೆ ಕೇಳ್ದು ಮುನಿಪರೆ| ಯೊರೆದನಸುರಗದೇಕೆ ದ್ರುಹಿಣನ|
ವರವನೆನೆಯದೆ ಭುಜದೊಳಾಲಿಂಗಿಸಲುನೀಂಪೋದೆ || ೬ ||
ಎಂದು ಪೇಳ್ದನ ದೃಶ್ಯನಾದನು| ಚಂದ್ರಜೂಡನ ಸತಿಯನೊಂದಿಯೆ|
ನಿಂದು ನುಡಿದನು ಮಾತೆ ಸಿಂಧುರ ನಿನ್ನ ತನುಜನನು ||
ಕೊಂದುಹಾಯ್ಸುವೆನೆನುತೆ ಬರ್ಪನು| ಮಂದಮತಿಯೆಂದು ನಿಜಲೋಕ|
ಕ್ಕಂದು ನಡೆದನು ನಗುತ ನಾರದನೇಳಿಬಳಿಕಾಗ || ೭ ||
ಕೆರಳಿ ಸಿಂಧುರ ಕನಲಿ ಪಾರುತ| ಸುರನರೋರಗರೆಲ್ಲ ರಂಜುವ|
ತೆರದೆ ಮಾರುತ ವೇಗದಿಂದಲೆ ಬಂದು ಗಿರಿವರಕೆ ||
ಭರದೊಳುಜ್ಜೃಸ್ವರದೊಳೊರೆದಂ| ಪೊರಗೆ ಬಾರ್ಯೆಪಗೆಯೆ ಬೇಗನೆ|
ಹರಿಯು ಕರಿಯನುನುಂಗುವಂತೆಯೆ ನಿನ್ನ ನುಂಗುವೆನು || ೮ ||
ಧುರಕೆ ನಿಲ್ವರು ಮೂರುಲೋಕದೊ| ಳಿರುವರಾದೊಡೆ ಬಹುದುಶೂರರು|
ತೊರೆಯೆ ಹರಣವನೆಂದು ದೈತ್ಯನು ಪೇಳೆ ಗಜಮುಖನು ||
ಕರದೆ ನಾಲ್ಕರೊಳಾಂತುಕೈದುವ| ಹರಿಯ ನಾದವವಾಡಿ ದುರುಳನೆ ! |
ಬರಿದೆ ಬಗುಳುವೆ ? ಯೇಕೆ ವೀರರು ತಾವೆ ನುಡಿಯುವರೆ? || ೯ ||
ಬಲವನಾಂತಿರೆ ತೋರಿಸೀಗಳೆ| ಖಲನೆಮರ್ದಿಪೆ ನಿನ್ನ ನೀಸೊಂ|
ಡಿಲದೆ ಬಾರ್ಯೆಯೆಂದು ಮೂದಲಿಸಲ್ಕೆ ಸಿಂಧೂರ ||
ಲಲಿತಬಾಲನೆ ಪೋಗು ಗಿರಿಜೆಯ| ಮೊಲೆಯ ಪಾಲನು ಕುಡಿಯೆಪೋಗೈ|
ಗೆಲವ್ವುದಕ್ಕದು ಯುದ್ಧಗೆಯ್ಯಲು ಮಡಿವೆ ? ನೀನೆಂದ || ೧೦ ||
ಗಿರಿಜೆಯಂಗಣದಲ್ಲಿ ಬೇಲಿಸೆ| ತೆರಳು ನೀನೇಕೆ ಮೆರೆಯುವೆಯೆನೆ|
ದುರುಳ ಸಿಂಧುರನೊಡನೆ ನುಡಿದನು ಗಣಪಧಿಕ್ಕರಿಸಿ ||
ಕಿರಿದು ದೀಪವು ತಮವನೆಲ್ಲವ| ಹರಿಪುದಲ್ಲವೆ ಮತ್ತಗಜವನು|
ಭರದೊಳಂಕುಶದಿಂದ ಪೊಡೆವೊಲ್ನಿನ್ನ ತಾಡಿಸುವೆ || ೧೧ ||
ಪರಿಕಿಸುತ್ತಿರು ನನ್ನ ಕುತುಕವ| ನಿರದೆ ನೀನೆಂಪೊರೆದು ಬೆನಕನು|
ವರವಿರಾಡ್ರೂಪದೊಳು ಸಾಸಿರಪಾದನಾಗುತ್ತ ||
ಭರದೆ ತಾಳ್ದನು ವಿಶ್ವರೂಪವ| ನಿರದೆ ಬಳಿಕಿದನೆಲ್ಲ ಮಾಸ್ಯದೊ|
ಳೆರಡುಭುಜದಿಂ ದೂರುಯುಗ್ಮದೊಳಂಘ್ರಿಯುಗಳದಲಿ || ೧೨

ಧರಣಿದೇವರು ಬಾಹುಜರ್ಕಳು| ಪಿರಿದು ವೈಶ್ಯರು ಶೂದ್ರರೊಗೆದರು|
ತರದೆನೇಸರ್ಪಿರೆಗಳೊಗೆದರು ನೇತ್ರಚಿತ್ತ್ರದೊಳು ||
ಭರದೆ ಜನಿಸಿತು ಜೀವವಾಯುವು| ಪರಮ ಬೊಮ್ಮನಕೆವಿಯ ದೆಸೆಯಿಂ|
ಮರುತಮಿತ್ರನು ಮೊಗದೆ ನಭಗಳು ನಾಭಿಯೆಡೆಯಿಂದ || ೧೩ ||

ಶಿರದೆದಿವವುಂತಿರೆಯು ಪದದಿಂ| ಪರಿದು ವಾಗಳ್ದಿಕ್ಕುಕೆವಿಯಿಂ|
ಗಿರಿಗಳೇಳುಂ ಬನವು ಸಪ್ತದ್ವೀಪಸಾಗರವು ||
ತರದೊಳೇಳುಂ ಋಷಿಗಳೊಗೆದರು| ಭರದೊಳಿಪ್ಪತ್ತೊಂದು ಸೂಳಿಸೊ|
ಳಿರದೆ ಸೃಷ್ಟಿಸಿ ಯೋವಿಹರಿಸಿದುದೆಲ್ಲ ತೋರಿದುವು || ೧೪ ||

ಕ್ರೂರದೇಹವ ಕಂಡನಾಸಂ| ಧೂರಬೇಗನೆ ಪೊಡೆಯೆ ಶರದೊಳ್|
ವೀರಗಣಪನ ವರಗಜಾನನನಿತ್ತ ಸಿಂಧುರನ ||
ಸಾರವೆಲ್ಲವ ನೀಗಿ ಬಳಿಕಾ| ಕ್ರೂರನಸುವನೆ ಪೀರಿರಕುತದ|
ಧಾರೆಯೊಳ್ತುಳಿ ದೆಸೆಯೆಗಂದದೆ ಪೂಸಿದಂತಾಯ್ತು || ೧೫ ||

ಮಡಿಯೆ ಸಿಂಧುರ ದೈತ್ಯನಲ್ಲಿಗೆ| ಗಡಣದಿಂದಲಿ ಸುರರು ಬಂದರು|
ಜಡಜಜಾತನು ಹರಿಯು ಮಾನುಂಬಂದೆವಾಸ್ಥಳಕೆ ||
ಬಿಡದೆ ಪೂಜೆಯ ನಾವು ಗೆಯ್ದೆವು| ಪೊಡವಿಯೊಳ್ಳಕ್ತಿಯಲಿ ದಿವಿಜರ|
ಗಡಣದಿದಿರಿಗೆ ನುತಿಸಿದೆಂಸ್ತವರಾಜವೆಂಬುದನು || ೧೬ ||

ಅಜನು ತೀರ್ಥೋದಕದೊಳನುವಿಂ| ಗಜಮುಖಂರ್ಘವನು ಕೊಟ್ಟನು|
ಭಜಿಸಿದನು ಗಡ ವರುಣನನುವಿಂಪಾಶಧರತಾನು||
ನಿಜದ ಭಕ್ತ್ಯೆಯೊಳಿತ್ತಪಾಶವ| ಭುಜಗಭೂಷಗೆ ಶರಧಿಯಿತ್ತುದು|
ಕಂಜವಾನುಂ ಪೂಜಿಸಿತ್ತೆನು ಶೂಲವಾತನಿಗೆ || ೧೭ ||

ಸುರಕದಂಬವು ಭಜಿಸಿಗಣಪನ| ಸುರಮಹೀರುಹ ಕುಸುಮಮಾಲೆಯ|
ಕರಿಮುಖಂಗೊಲಿದೀಯೆ ನಿರ್ಜರದುಂದುಭಿಯು ಮೊಳಗೆ ||
ಸುರರಸತಿಯರು ನರ್ತಿಸುತ್ತಿರೆ| ಹರಿಸದಿಂದಲಿ ದೇವಋಷಿಗಳ್|
ಪರವಶಂಗತರಿರೆ ಗಜಾಸ್ಯನು ತಾನು ಮೈಗರೆದ || ೧೮ ||

ಪ್ರಸವಕಾಲದೊಳಿದನು ಕೇಳ್ದೊಡೆ| ಪ್ರಸವಿಪರ್ವಾರಿಯರು ಸೊಗದಿಂ|
ಬಸಿರಬಾಲನು ಸೂಕ್ಷ್ಮ ಬುದ್ಧಿಯೊಳಿಸೆವ ಯಾತ್ರೆಯೊಳು ||
ಒಸೆದು ನೆನೆಯೆಲು ವಿಜಯಮಕ್ಕುಂ| ರಸೆಯ ಜನಗಳ್ಕೀಳಿ ಕೋರಿಕೆ|
ಬಸದೊಳಿರ್ವುದು ಮೂರನೆಯ ಜನಿಮೆರೆಗೆಗಣಪತಿಯ || ೧೯ ||

ಇಂತುಸ್ಕಾಂದವುರಾಣಾಂತರ್ಗತವಾದ ವಿನಾಯಕಮಹಾಮಹಿಮೆಯೊಳ್ ಗಣಾನನಾವತಾರವರ್ಣನ
ವೆಂಬ ಹನ್ನೆರಡನೆಯ ಪ್ರಕರಣವು ಮುಗಿದುದು.